
ಗಾಂಧೀ ಗ್ರಂಥ ಮಾಲೆ



೭

ಸಮಾಜಧರ್ಮ

ಪ್ರಕಟವಾಗಿವೆ :

ಆತ್ಮಕಥೆ—ಹಿಂದ್ ಸ್ವರಾಜ್ಯ
ದಕ್ಷಿಣ ಆಫ್ರಿಕದಲ್ಲಿ
ಸತ್ಯಾಗ್ರಹ
ಗೀತಾಮಾತೆ
ಸತ್ಯ-ಅಹಿಂಸೆ
ಧರ್ಮ-ನೀತಿ

ಬರಲಿವೆ :

ಅರ್ಥವಿಚಾರ
ರಾಜ್ಯತತ್ತ್ವ
ಜೀವನಶಿಕ್ಷಣ
ಸತ್ಯಾಗ್ರಹ
ಸಂವಾದಗಳು
ಪತ್ರಗಳು
ಪ್ರಾರ್ಥನಾ ಪ್ರವಚನಗಳು
ಮುಂತಾದವು



ಹರಿಜನ ನಿಧಿಗೆ ಕಾಸಿನ ಕಾಣಿಕೆ ಕೂಡಿಸುತ್ತಿರುವ ಗಾಂಧೀಜೀ

ಕಲ್ಲಿಕೋಟೆಯಲ್ಲಿ ೧೯೩೪ ರ ಜನವರಿ ೧೬ ರಂದು

(ಸುಮತಿ ಮೊರಾರ್ಜಿ ಸಂಗ್ರಹದಿಂದ)

ಗಾಂಧೀ ಗ್ರಂಥಮಾಲೆ - ೬

ಸಮಾಜಧರ್ಮ

★

ಮೋ. ಕ. ಗಾಂಧೀ

★

ಗಾಂಧೀ ಸ್ಮಾರಕ ನಿಧಿ
೧೯೫೯

ಪ್ರಕಾಶಕರು:
ಪ್ರಧಾನ ಸಂಪಾದಕ,
ಕನ್ನಡದಲ್ಲಿ ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿ,
೧೬೨, ರಮಾವಿಲಾಸ ರಸ್ತೆ, ಮೈಸೂರು

ಬೆಲೆ:
ಸಾಧಾರಣ ಪ್ರತಿ: ೨.೨೫ ರೂ.
ಉತ್ತಮ ಪ್ರತಿ: ೩ ರೂ.

ಮುದ್ರಕರು:
ವಿದ್ಯಾ ಮುದ್ರಣ,
ನೂರಡಿ ರಸ್ತೆ, ಮೈಸೂರು

Works of Gandhiji in Kannada - 6

SAMAJADHARMA

★

M. K. GANDHI

★

GANDHI SMARAK NIDHI
1959

Published by:

The Chief Editor,
Works of Gandhiji in Kannada
162, Ramavilas Road, Mysore

[By the kind permission of Navajivan Trust,
Ahmedabad - 14]

Price:

Ordinary Edn: Rs. 2.25

Calico Edn: Rs. 3.00

Printed at:
Vidya Printery
100 Feet Road, Mysore

ಗಾಂಧೀಜಿಯ ಬರಹಗಳ ಕನ್ನಡ ಅನುವಾದ

ವಿಶ್ವದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಜಿಯ ವಿಚಾರಗಳ ಪ್ರಚಾರ ಮಾಡುವುದು ಗಾಂಧೀ ಸ್ಮಾರಕ ನಿಧಿಯ ಮುಖ್ಯ ಉದ್ದೇಶಗಳಲ್ಲಿ ಒಂದು. ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಅತೀವ ಮಹತ್ವದ ಗಾಂಧೀ ವಿಚಾರಗಳ ಪರಿಚಯ ಮಾಡಿಕೊಡುವುದು ಈಗ ಕೈಕೊಂಡ ಈ ಯೋಜನೆಯ ಗುರಿ ಆಗಿದೆ.

ಕರ್ನಾಟಕದ ಹಲವಾರು ಸಾಹಿತಿಗಳು, ಲೇಖಕರು ಗಾಂಧೀಜಿಯ ಬರಹಗಳಲ್ಲಿ ಕೆಲವನ್ನು ಆಗಲೇ ಅನುವಾದಿಸಿ ಪ್ರಕಟಿಸಿದಾರೆ. ಸಾಧ್ಯವಾದಷ್ಟು ಆಗಲೇ ಪ್ರಕಟವಾಗಿರುವ ಅನುವಾದಗಳನ್ನು, ಅವಶ್ಯಕವಿದ್ದಲ್ಲಿ ಪರಿಷ್ಕರಿಸಿ, ಅವುಗಳನ್ನು ಈ ಗಾಂಧೀ ಗ್ರಂಥಮಾಲೆಯಲ್ಲಿ ಪೋಣಿಸುವ ಪ್ರಯತ್ನ ನಡೆದಿದೆ. ಗಾಂಧೀಜಿಯ ಮುಖ್ಯ ಹಾಗೂ ವಿವಿಧ ವಿಚಾರಗಳ ಪರಿಚಯವನ್ನು ಮಾಡಿಕೊಡಲು ಸುಮಾರು ಇಪ್ಪತ್ತು ಸಂಪುಟಗಳು ಸಿದ್ಧವಾಗುತ್ತಲಿವೆ.

ಗಾಂಧೀಜಿಯ ಎಲ್ಲ ಬರಹಗಳನ್ನೂ ಸಂಪೂರ್ಣವಾಗಿ ಅನುವಾದಿಸುವುದು ನಮ್ಮ ಉದ್ದೇಶವಲ್ಲ. ಆದರೆ ಈ ನಮ್ಮ ಯೋಜನೆಯ ಉದ್ದೇಶ ಗಾಂಧೀಜಿಯ ಪ್ರಧಾನವಾದ ಅಭಿಪ್ರಾಯಗಳನ್ನು ಸಮಂಜಸವಾದ ರೀತಿಯಲ್ಲಿ ಕೂಡಿಸಿ ಮುಖ್ಯವಾದ ಶೀರ್ಷಿಕೆಗಳ ಅಡಿಯಲ್ಲಿ ಅವನ್ನು ಅಳವಡಿಸಿ ಕನ್ನಡಿಸಿ ಪ್ರಕಟಮಾಡುವುದಾಗಿದೆ. ಗಾಂಧೀಜೀ ಪುಸ್ತಕರೂಪವಾಗಿಯೇ ಬರೆದ ಗ್ರಂಥಗಳನ್ನು ಅವು ಇರುವಂತೆ ಅಥವಾ ಅವಶ್ಯಕವಾದರೆ ಸಂಗ್ರಹಿಸಿ ಅನುವಾದ ಮಾಡಲಾಗುತ್ತದೆ. ಮತ್ತೆ ಕೆಲವು ಗ್ರಂಥಗಳು ಗಾಂಧೀಜೀ ಅವರ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳಿಂದ ಆಯ್ದ ಲೇಖನಗಳ ಸಂಕಲನಗಳಾಗಿವೆ. ಸಂಕಲನ ಸ್ವಲ್ಪ ನಿಧಾನದ ಕೆಲಸ; ಕಷ್ಟವಾದ ಕೆಲಸವೂ ಹೌದು. ಎಷ್ಟು ಪ್ರಯತ್ನ ಮಾಡಿದರೂ ವಿಷಯ ಪ್ರತಿಪಾದನೆಯ ಪುನರಾವರ್ತನೆಯನ್ನು ತಪ್ಪಿಸುವುದು ಕಷ್ಟ. ನಮ್ಮ ಅನುವಾದಕರು ಕರ್ನಾಟಕದ ನುರಿತ ಸಾಹಿತಿಗಳು ಮತ್ತು ಗಾಂಧೀ ಮಾರ್ಗದಲ್ಲಿ

ಶ್ರದ್ಧೆಯುಳ್ಳವರು. ಆದಷ್ಟು ಸಮರ್ಪಕವಾಗಿ ಭಾಷಾಂತರದ ಕೆಲಸವನ್ನು ಮಾಡುತ್ತಿದಾರೆ. ಗಾಂಧೀಜಿಯವರ ಸರಳ ಮತ್ತು ರಸವತ್ತಾದ ಬರಹಗಳನ್ನು ಭಾಷಾಂತರಿಸುವುದು ಎಷ್ಟು ಕಷ್ಟ ಎಂಬುದನ್ನು ಹೇಳಬೇಕಾಗಿಲ್ಲ. ಆದರೂ ಈ ಅನುವಾದಕರು ಗಾಂಧೀಜಿಯವರ ಮನೋಗತವನ್ನು ಅರಿತವರಾದುದರಿಂದ ಈ ಅನುವಾದಗಳು ಜನಪ್ರಿಯವಾಗಬಲ್ಲವೆಂದು ಆಶಿಸಲಾಗಿದೆ.

ಈ ಸಂಪಾದಕ ಸಮಿತಿಯಿಂದ ಪ್ರಕಟಿಸಲ್ಪಡುವ ಗ್ರಂಥಗಳು ಬಹಳ ಸುಲಭ ಬೆಲೆಗೆ ಪಾಠಕರ ಕೈಸೇರಬೇಕೆಂಬ ಉದ್ದೇಶ್ಯದಿಂದ ಸಾಮಾನ್ಯ ಪ್ರತಿಯ ಬೆಲೆ ಅತಿ ಕಡಮೆ ಇಡಲಾಗಿದೆ. ಇದರೊಡನೆ ಉತ್ತಮ ಪ್ರತಿಯೂ ಸಹ ಮಾರಾಟಕ್ಕೆ ಇರುವುದಲ್ಲದೆ ಅದರ ಬೆಲೆಯೂ ಕೂಡ ಬಹಳ ಹೆಚ್ಚು ಇಡಲಾಗಿಲ್ಲ.

ಈ ಗ್ರಂಥಮಾಲೆ ಕನ್ನಡ ನಾಡಿನ ಜನಕ್ಕೆ ಗಾಂಧೀ ಸಾಹಿತ್ಯವನ್ನು ಒದಗಿಸಿಕೊಡುವ ಕೆಲಸದಲ್ಲಿ ಕೃತಕೃತ್ಯತೆಯನ್ನು ಪಡೆಯಬಲ್ಲದೆಂದು ಭಾವಿಸಲಾಗಿದೆ. ಗಾಂಧೀಜಿಯವರ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿಪ್ರಾಯಗಳು ಈ ಗ್ರಂಥಗಳ ಮೂಲಕ ಜನಸಾಮಾನ್ಯರಲ್ಲಿ ಹರಡಲಿ, ಸಕಲ ಜನರಿಗೆ ಸ್ಫೂರ್ತಿ ಕೊಟ್ಟು ನವಚೈತನ್ಯವನ್ನು ತುಂಬಲಿ ಎಂದು ಹಾರೈಸಿ ಈ ಗ್ರಂಥಗಳನ್ನು ಜನತಾಜನಾರ್ದನನಿಗೆ ಅರ್ಪಿಸುತ್ತಿರುವೆ.

ಗಾಂಧೀ ಸ್ಮಾರಕ ನಿಧಿ
ರಾಜಘಾಟ, ದಿಲ್ಲಿ
೭–೫–೫೮

ರಂಗನಾಥ ದಿವಾಕರ

ನಿವೇದನ

(ಗಾಂಧೀಜಿಯ ಮಾತುಗಳಲ್ಲಿ)

ಅನುವಾದಕರು:- **'ಕುವೆಂಪು'**

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸತ್ಯದ ಸಮ್ಯಕ್‌ದರ್ಶನವೇ ಆತ್ಮಸಾಕ್ಷಾತ್ಕಾರ; ಅದೇ ಜೀವನದ ಅಂತಿಮ ಗುರಿ — ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವಮೂಲ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ.

(ಯಂಗ್ ಇಂಡಿಯಾ: ೧೭-೧೧-೨೧)

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಬ್ಬ ಸಾಮಾನ್ಯ ಚೇತನ. ಆ ಯಾತ್ರೆಯೇನೊ ಕ್ಲೇಶಕರವೇ; ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ. ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ.

(ಯಂಗ್ ಇಂಡಿಯಾ: ೯-೪-೨೬)

ದಾರಿ ನನಗೆ ಗೊತ್ತು. ಅದು ನೇರ ಮತ್ತು ಇಕ್ಕಟ್ಟು — ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ, ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ. ಆ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯದ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ, ಇಂದಲ್ಲ ನಾಳೆ, ಸ್ವತಸ್ಸಿದ್ಧವಾಗಿ

ಕೈಗೂಡಲೇಬೇಕಾಗಿರುವ ಇಂದ್ರಿಯಜಯ ಲಭಿಸಿದಂದು, ಬೆಳಕನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ. (ಯಂಗ್ ಇಂಡಿಯಾ : ೧೬-೬-೨೬)

ಏಕೆಂದರೆ, ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ; ಆತನೇ ಪರಮಶ್ರೇಯಸ್ಸು.

(ಯಂಗ್ ಇಂಡಿಯಾ : ೧೦-೧೦-೨೮)

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅತ್ಯಂತ ಸಹಜಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ. ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದಾನೆ ಎಂಬುದು ನನ್ನ ಅನುಭವ.

(ಹರಿಜನ : ೯-೮-೪೨)

ಭಗವಂತನ ಪ್ರತ್ಯಕ್ಷ ದರ್ಶನದ ಹಂಬಲ ನನ್ನದು. ಭಗವಂತನೇ ಸತ್ಯ ಎಂಬುದನ್ನು ನಾನು ಬಲ್ಲೆ. ನನ್ನ ಪಾಲಿಗೆ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ—ಅಹಿಂಸೆ, ಪ್ರೇಮ.

(ಆತ್ಮಕಥೆ)

ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ : ' ನನ್ನ ಮೂಲಕವೇ ಅದರ ಸಿದ್ಧಿ' ಎಂದು. ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ : ' ನನ್ನ ಮೂಲಕವೇ ಅದರ ಸಿದ್ಧಿ'.

(ಯಂಗ್ ಇಂಡಿಯಾ : ೪-೬-೨೫)

ಭಾರತದ ಸ್ವಾತಂತ್ರ್ಯಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೇ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು

ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗ ಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು. (ಆತ್ಮಕಥೆ)

ವಿಶ್ವಾತ್ಮಕವೂ, ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆ ಪ್ರೀತಿ ಸುವುದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ತುಂಬಿಕೊಂಡವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದು ತಂದಿರುವುದು ಈ ಕಾರಣ ದಿಂದಲೇ. ಅಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎನ್ನು ವವರಿಗೆ ಅಧ್ಯಾತ್ಮ ಎಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ನಾನು ಹೇಳಬಲ್ಲೆ. (ಆತ್ಮಕಥೆ)

ಆತ್ಮಶ್ರೀವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯ ವಾದ ಕಲಂಕ. ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತನೆಂದರೂ ಒಂದೇ, ಸತ್ಯವೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿಯೆಂದೂ, ಹಿಂಸೆಯ ಮೂರ್ತಿಯೆಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ: ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ–ಅಹಿಂಸೆಗಳೊಂದಿಗೆ ಜಟಿಲ ವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊಂದುವುದೇ ಹೆಚ್ಚು ಲೇಸೆಂಬುದು

ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕದೃಷ್ಟಿಯಿಂದ ರಾಜಕೀಯ ಕಾರ್ಯ ಪರಿಗಣಿತವಾಗಲೇಬೇಕು.

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ. ಅವುಗಳ ನಡುವೆ ಕ್ರಿಯೆ–ಪ್ರತಿಕ್ರಿಯೆಗಳು ಇದ್ದೇ ತೀರುತ್ತವೆ. (ಯಂಗ್ ಇಂಡಿಯಾ : ೨-೩-೨೨)

ಆತ್ಮಶ್ರೇನಿಯಮಕ್ಕೆ ತನ್ನದೇ ಆದ ಒಂದು ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಬದಲು, ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ. ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನುಂಟುಮಾಡುತ್ತದೆ. (ಯಂಗ್ ಇಂಡಿಯಾ : ೩-೯-೨೪)

ಮಾನವಜೀವಿತದ ಪರಮೋದ್ದೇಶ ಭಗವತ್ಸಾಕ್ಷಾತ್ಕಾರ. ಅವನ ಕರ್ಮ ಕ್ರಿಯೆಗಳೇನೇ ಇರಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲವೂ ಈ ಈಶ್ವರಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿರಬೇಕು. ಮಾನವಸೇವೆಯೇ ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ. ಏಕೆಂದರೆ ಇಷ್ಟೆ: ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೇ ಆತನನ್ನು ಕಂಡು ಅದರಲ್ಲಿಯೆ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ. ನಾನು ಈ ಸರ್ವದ ಒಂದು ಅಂಶ. ಇತರರನ್ನುಳಿದು ನಾನೊಬ್ಬನೇ ಆತನನನ್ನು ಪಡೆಯಲಾರೆ.

(ಹರಿಜನ : ೨೯-೮-೩೬)

ಈಶಸೇವೆ ಅರ್ಥಾತ್ ಮಾನವಸೇವೆಯೇ ನನ್ನ ಧರ್ಮ; ನಿಷ್ಕಾಮ ಸೇವೆಯಿಂದ ಸೇವೆಸಲ್ಲಿಸುವುದೆಂದರೆ ಇತರರಿಗೆ ನಾವು ಉಪಕಾರಮಾಡಿದ್ದಕ್ಕಿಂತ ನಮ್ಮ ಸಾಲವನ್ನು ನಾವು ತೀರಿಸಿಕೊಂಡು ಕೃತಕೃತ್ಯರಾದಂತೆ. ನಮ್ಮ ಹೊರೆಯನ್ನು ನಾವೇ ಇಳಿಸಿಕೊಂಡು ನಮ್ಮ ಕರ್ತವ್ಯವನ್ನು ಪರಿಪಾಲಿಸುವುದರ ಮೂಲಕ ನಮಗೇ ನಾವು ಉಪಕಾರ ಮಾಡಿಕೊಳ್ಳುತ್ತೇವೆ.

ನಮ್ಮಲ್ಲಿ ಒಳ್ಳೆಯವರೆನಿಸಿಕೊಂಡವರು ಮಾತ್ರವಲ್ಲ, ನಾವೆಲ್ಲರೂ ನಮ್ಮ ಸರ್ವಸಂಪತ್ತನ್ನೂ ಸರ್ವರಿಗಾಗಿ ವಿನಿಯೋಗಿಸಲು ಬದ್ಧರು. ಮೃಗಗಳಿಗಿಂತ ಮಾನವ ಭಿನ್ನ ಎಂದು ತೋರುವುದು ತ್ಯಾಗಧರ್ಮ ಒಂದರಿಂದಲೇ.

(ಮಂಗಳ ಪ್ರಭಾತ)

ಮನುಷ್ಯ ಎಷ್ಟರಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ. (ಯಂಗ್ ಇಂಡಿಯಾ : ೪-೧೨-೨೪)

ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ, ಸಮಸ್ತ ಜೀವರಾಶಿಯೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳಿಸಬಹುದಾದ ಈ ಬಯಕೆಗೆ—ನೆಲದ ಮೇಲೆ ಹರಿದಾಡುವ ಕ್ರಿಮಿ ಕೀಟಗಳೊಂದಿಗೂ ತಾದಾತ್ಮ್ಯವನ್ನು ಸಾಧಿಸಬೇಕೆನ್ನುವ ಬಯಕೆಗೆ— ಕಾರಣ ಇಷ್ಟೆ: ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುತ್ತೇವಲ್ಲ; ಹಾಗಿರುವುದರಿಂದ ಯಾವುದೇ ರೂಪದಲ್ಲಿ ಗೋಚರಿಸಿದರೂ ಮೂಲತಃ ಎಲ್ಲ ಜೀವವೂ ಒಂದೇ. (ಹರಿಜನ : ೪-೪-೩೯)

ಭಗವಂತನ ಕೇವಲ ಅಖಂಡತೆಯನ್ನು ನಾನು ನಂಬುತ್ತೇನೆ; ಆದು ದರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆಯಿರುವುದು. ಒಬ್ಬನು ಮಾತ್ರ ಆಧ್ಯಾತ್ಮಲಾಭ ಪಡೆದು ಅವನ ಸುತ್ತಣ ಜನರು ತೊಳಲು ತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದ್ವೈತದಲ್ಲಿ ನನಗೆ ಶ್ರದ್ಧೆ ಯಿದೆ. ತತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವ ಸಮಸ್ತದ ಅಖಂಡತೆಯಲ್ಲಿ, ನನಗೆ ವಿಶ್ವಾಸವುಂಟು. ಆದುದರಿಂದಲೇ ಒಂದು ವ್ಯಕ್ತಿಗೆ ಅಧ್ಯಾತ್ಮಲಾಭವಾದರೆ ಇಡೀ ವಿಶ್ವಕ್ಕೆ ಲಾಭ ಒದಗುತ್ತದೆ. ಒಂದು ವ್ಯಕ್ತಿ ಪತನಹೊಂದಿದರೆ ಅಷ್ಟರಮಟ್ಟಿಗೆ ಇಡೀ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು.

(ಯಂಗ್ ಇಂಡಿಯಾ : ೪-೧೨-೨೪)

ಈ ಪೃಥ್ವಿಯ ನಶ್ವರ ಸಾಮ್ರಾಜ್ಯದ ಬಯಕೆ ನನಗಿಲ್ಲ. ಮೋಕ್ಷ ರೂಪವಾದ ಅಮರ ಸಾಮ್ರಾಜ್ಯಕ್ಕಾಗಿ ನಾನು ಶ್ರಮಿಸುತ್ತಿದ್ದೇನೆ. ನನ್ನ ಧ್ಯೇಯಸಾಧನೆಗಾಗಿ ನಾನು ಗುಹಾನಿವಾಸಿಯಾಗಬೇಕಾಗಿಲ್ಲ.

(ಯಂಗ್ ಇಂಡಿಯಾ : ೩-೪-೨೪)

ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡಬಿಡದೆ ದುಡಿಯು ವುದೇ ನನ್ನ ಮೋಕ್ಷಪಥ. ಜೀವನಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವುದೇ ನನ್ನ ಬಯಕೆ. (ಯಂಗ್ ಇಂಡಿಯಾ : ೨-೪-೨೫)

ಯಾವ ನೂತನ ಸಿದ್ಧಾಂತಗಳನ್ನೂ ನಾನು ಮುಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೇ ನನ್ನದು. ಅದು ಎಷ್ಟರಮಟ್ಟಿಗೆ ಸರಿಯಾಗಿ ಸಾಗಿದೆಯೋ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ.

(ಯಂಗ್ ಇಂಡಿಯಾ : ೩-೧೨-೨೬)

ಗಾಂಧೀ ಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆ ಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿ ಸಿದೇನೆ; ಅಷ್ಟೆ. ಸತ್ಯ–ಅಹಿಂಸೆ–ಈ ಭಾವಗಳು ಪರ್ವತಗಳಷ್ಟೇ ಪುರಾತನ ವಾದುವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡ ರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪುಮಾಡಿದೇನೆ; ಆ ತಪ್ಪುಗಳಿಂದ ಪಾಠ ಕಲಿತಿದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ–ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ. (ಹರಿಜನ : ೨-೩-೩೬)

ನಿಮ್ಮ ಮುಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನು ಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ–ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿ ಸುತ್ತ ಹೋದಂತೆ ನಾನು ಕೂಡ ಪ್ರತಿ ಕ್ಷಣವೂ ಬೆಳೆಯುತ್ತಲೇ ಇದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೊಸ ಅರ್ಥಗಳನ್ನೂ ಅರಿಯು ತ್ತಿದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದು ದರಿಂದ ನನ್ನನ್ನು ಮರೆತುಬಿಡಿ. ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು

ನನ್ನ ಹೆಸರಿಗಲ್ಲ, ತತ್ತ್ವಗಳಿಗೆ. ಆದರ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಅಳೆದು, ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ. (ಹರಿಜನ: ೧-೫-೩೭)

ನಿಲ್ಲುವುದು ನನ್ನ ಕೃತಿಯೇ ಹೊರತು, ನನ್ನ ಮಾತೂ ಅಲ್ಲ, ಬರಹವೂ ಅಲ್ಲ. ಇತ್ತೀಚೆಗೆ ನಾನು ಈ ಮಾತನ್ನು ಅನೇಕ ಸಲ ಹೇಳಿದೇನೆ. ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶಹೊಂದುವುದಾದರೂ ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು; ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬರೂ ಇರದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೇ ನನ್ನ ಮಾತು, ಬರಹಗಳು ಸತ್ಯ–ಅಹಿಂಸೆಯ ಮಹಾತತ್ತ್ವಗಳನ್ನು ರಕ್ತಗತಮಾಡಿಕೊಳ್ಳಲು ನಿಮಗೆ ನೆರವು ನೀಡಿರುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಈ ಒಂದೊಂದು ಮಾತನ್ನೂ ಉದ್ದೇಶಪೂರ್ವಕವಾಗಿ ಹೇಳುತ್ತಿದೇನೆ.

(ಹರಿಜನ: ೧-೫-೩೭)

ಗಾಂಧೀ ಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶಹೊಂದಲಿ. ಸತ್ಯ–ಅಹಿಂಸೆಗಳು ಅಜರಾಮರ. ಆದರೆ ಗಾಂಧೀ ಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶಯೋಗ್ಯವೇ ನಿಜ. ತಾನು ಗಾಂಧಿಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ. ನಾನು ನನ್ನನ್ನು ಅನುಸರಿಸಿದರೆ ಸಾಕು. ಅದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ; ಯಾವ ತತ್ತ್ವಗಳಿಗಾಗಿ ನಾನು ನಿಂತಿದೇನೆಯೋ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ; ಸಹವಿದ್ಯಾರ್ಥಿಗಳು, ಸಹಯಾತ್ರಿಕರು, ಸಹಅನ್ವೇಷಕರು, ಸಹ ಉದ್ಯೋಗಿಗಳು. (ಹರಿಜನ: ೨-೩-೪೦)

ಸತ್ಯ-ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು; ಸಮಾಜ–ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೇ

ಆಗಲಿ, ಅದಂತೂ ನನ್ನ ಕನಸು. ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೆ, ನನ್ನ ಸಾವೂ ಅದರಲ್ಲಿಯೆ. ನನ್ನ ಶ್ರದ್ಧೆ ನನಗೆ ಅನು ದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೇ ಅಹಿಂಸೆ; ಆದುದರಿಂದಲೇ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ.

(ಹರಿಜನ : ೧-೫-೩೭)

ನನ್ನ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಇಲ್ಲ—ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ಮಾತ್ರ ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥವಿಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ : ಸತ್ಯ ವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ, ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮ ಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ನನ್ನದು ಧರ್ಮಮಾರ್ಗ, ನಾವು ಧರ್ಮಿಗಳು, ಆದುದರಿಂದ ಉಳಿದ ವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ. ಇತರರಿಂದ ನಾನು ನಿರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯದಂತೆಯೆ ನಿಷ್ಠುರವಾಗಿರಲು ನಾನು ಪ್ರಯತ್ನಿಸು ತ್ತೇನೆ. (ಹರಿಜನ : ೧-೫-೩೭)

'ಗಾಂಧೀ ತತ್ತ್ವ' ಎಂದು ಯಾವುದನ್ನು ಕರೆಯುತ್ತಾರೊ ಅದನ್ನು, ಅದರ ಪ್ರಸಾರ ವಿಧಾನಗಳನ್ನು ವಿಚಾರಿಸೋಣ. ಸತ್ಯ - ಅಹಿಂಸೆಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತ್ಯ – ಅಹಿಂಸೆಗಳ ಪ್ರಸಾರ ಸಾಧ್ಯ, ಅವುಗಳನ್ನು ಅನುಷ್ಠಾನಕ್ಕೆ ತಂದರೆ, ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ. ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟನೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ. ಅವು ಅನಿವಾರ್ಯವೇನಲ್ಲ

ಎಂದಷ್ಟೆ ನನ್ನ ಅಭಿಪ್ರಾಯ. ನಾವು ಸತ್ಯ–ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೇ ನಮಗೆ ದಯಪಾಲಿಸುತ್ತಾನೆ. ಪ್ರತಿಪಕ್ಷದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಇಚ್ಛೆ ಅಂತಹ ಶ್ರದ್ಧೆಯ ಪೂರ್ವಾಂಗವಾಗಿಯೇ ಉಳಿದಿದೆ. ಪ್ರತಿಪಕ್ಷಿಯ ಮನಸ್ಸನ್ನು ಹೊಕ್ಕು ಆತನ ದೃಷ್ಟಿ ಏನೆಂದು ಅರಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹಿಂಸೆಯ ಬಾಯನ್ನೇ ಅಹಿಂಸೆ ನೇರವಾಗಿ ಹೊಗುತ್ತದೆ ಎಂಬುದರ ಅರ್ಥ ಇದೇ. ಅಂತಹ ಮನೋಧರ್ಮದ ಕವಚ ನಮಗಿದ್ದರೆ ಅಹಿಂಸೆಯ ತತ್ತ್ವಗಳನ್ನು ಪ್ರಸಾರ ಮಾಡುವ ವಿಶ್ವಾಸ ನಮಗೆ ಬರುತ್ತದೆ. ಅದಿಲ್ಲದೆ ಪುಸ್ತಕ–ಪತ್ರಿಕೆಗಳ ಪ್ರಚಾರ ವ್ಯರ್ಥ. (ಹರಿಜನ : ೧೩-೫-೩೯)

ನನ್ನ ಸಲಹೆಗಳಲ್ಲೆಲ್ಲ ಒಂದು ರಕ್ಷಾಸೂತ್ರ ಇದ್ದೇ ಇರುತ್ತದೆ. ತಮ್ಮ ಬುದ್ಧಿಗೂ ಹೃದಯಕ್ಕೂ ಒಪ್ಪಿಗೆಯಾಗದಿದ್ದರೆ ಯಾರೂ ಅವುಗಳನ್ನು ಅನುಸರಿಸಬೇಕಾಗಿಲ್ಲ. (ಹರಿಜನ : ೧೫-೭-೩೫)

ನನ್ನನ್ನು ಮೆಚ್ಚುವವರಿಗೂ ನನ್ನ ಮಿತ್ರರಿಗೂ ಒಂದು ಧೈರ್ಯ ಹೇಳಬಲ್ಲೆ. ಮಹಾತ್ಮಾ ಎಂಬುದನ್ನು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಹೆಚ್ಚಾಗಿ ಪಾತ್ರರಾಗುತ್ತಾರೆ. ನಾನು ಯಾವ ತತ್ತ್ವಗಳನು ಜೀವನದಲ್ಲಿ ಅನುಷ್ಠಾನ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡಿದೇನೆಯೋ ಅದನ್ನು ತಾವು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು; ಇಲ್ಲವೆ ಅದರಲ್ಲಿ ಅವರಿಗೆ ನಂಬುಗೆ ಇರದಿದ್ದ ಪಕ್ಷದಲ್ಲಿ ಅದನ್ನು ಸರ್ವರೀತಿಯಿಂದಲೂ ವಿರೋಧಿಸಬೇಕು—ಇದೇ ನನ್ನ ಮಿತ್ರರು ನನಗೆ ತೋರಿಸಬಹುದಾದ ಪರಮಗೌರವ.
(ಯಂಗ್ ಇಂಡಿಯಾ : ೧೨-೯-೨೪)

ಯಾವ ಮಹಾ ಉದ್ಯಮದಲ್ಲಿಯೇ ಆಗಲಿ ನಿರ್ಣಯಕಾರಿಯಾಗುವುದು ಹೋರಾಡುವವರ ಸಂಖ್ಯೆಯಲ್ಲ, ಅವರ ಸತ್ತ್ವ. ಜಗತ್ತಿನ ಮಹಾವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು. ಝುರತುಷ್ಟ್ರ, ಬುದ್ಧ, ಏಸು, ಮಹಮ್ಮದ್ ಈ ಎಲ್ಲ ಮಹಾಪ್ರವಾದಿಗಳನ್ನೂ ಗಮನಿಸಿ. ನಾನಿನ್ನೂ ಹೆಸರಿಸಬಹುದಾದ ಇತರ ಹಲವರಂತೆಯೇ ಅವರೆಲ್ಲರೂ ಏಕಾಂಗಿಯಾಗಿಯೇ ಕೆಲಸ ಮಾಡಿದರು. ಆದರೆ ಅವರಿಗೆ ತಮ್ಮಲ್ಲಿಯೂ ಭಗವಂತನಲ್ಲಿಯೂ

ಜೀವಂತಶ್ರದ್ಧೆಯಿತ್ತು; ಭಗವಂತ ತಮ್ಮ ಪಕ್ಕದಲ್ಲಿದಾನೆಂಬ ವಿಶ್ವಾಸ ಇದ್ದುದರಿಂದ ತಾವು ಏಕಾಕಿಗಳು ಎಂಬ ಭಾವನೆಯೇ ಅವರಿಗೆ ಬರಲಿಲ್ಲ.

(ಯಂಗ್ ಇಂಡಿಯಾ : ೧೮-೧೦-೨೯)

ನನ್ನಲ್ಲಿರುವ ಏನೋ ಒಂದು ವಾಣಿ ನನ್ನ ಸಂಕಟವನ್ನು ಕೂಗಿ ಸಾರುವಂತೆ ನನ್ನನ್ನು ಪ್ರಚೋದಿಸುತ್ತಿದೆ. ಅದು ಯಾವುದೆಂಬುದನ್ನು ನಾನು ಖಚಿತವಾಗಿ ಬಲ್ಲೆ. ನನ್ನನ್ನೆಂದೂ ವಂಚಿಸದ ನನ್ನೊಳಗಿನ ಆ ವಾಣಿ ಹೇಳುತ್ತದೆ: 'ನೀನು ಒಬ್ಬಂಟಿಗನೇ ಆಗಿ ನಿಲ್ಲಬೇಕಾಗಿ ಬಂದರೂ ಸರಿ, ಇಡಿಯ ಜಗತ್ತನ್ನೇ ಎದುರಿಸಿ ನಿಲ್ಲಬೇಕಾಗುತ್ತದೆ.

'ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರದುರನೆ ನೋಡಿದರೂ ಸರಿ. ನೀನು ಅದರ ದೃಷ್ಟಿಗೆ ದೃಷ್ಟಿ ಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣು ರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ. ಯಾವುದಕ್ಕಾಗಿ ನೀನು ಬದುಕಿದೀಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ–ಮಠ–ಮಡದಿ–ಮಕ್ಕಳು—ಸರ್ವಸ್ವವನ್ನೂ ಪರಿತ್ಯಜಿಸು; ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು.

(ಬಾಂಬೆ ಕ್ರಾನಿಕಲ್ : ೯-೮-೪೨)

ಯಥಾದರ್ಶನ

(ಲೇಖಕರು : ಶ್ರೀ ರಂಗನಾಥ ದಿವಾಕರ)

ಮಾನವ ಪ್ರಾಣಿಯು ಸಮಾಜ ಜೀವಿ ; ಸಮಾಜವನ್ನೂ, ಸಮೂಹವನ್ನೂ ಕಟ್ಟಿಕೊಂಡೇ ಇರುವ ಪ್ರಾಣಿ. ಒಬ್ಬಂಟಿಗನಾಗಿ ಇಲ್ಲವೆ ಒಂದೇ ಕುಟುಂಬದವನಾಗಿ ಅವನು ಇರಲಾರ; ಇರಲು ಯತ್ನಿಸಿದರೆ ಅವನು ವಿಕಾಸಹೊಂದಲಾರ, ಪೂರ್ಣ ಬೆಳೆಯಲಾರ, ತನ್ನ ಜೀವನವನ್ನು ಸಫಲಗೊಳಿಸಲಾರ.

ಸೃಷ್ಟಿಯಲ್ಲಿ ವ್ಯಷ್ಟಿ ಹಾಗೂ ಸಮಷ್ಟಿ ಇವುಗಳನ್ನು ಪ್ರತ್ಯೇಕವಾಗಿ ಅಭ್ಯಸಿಸುವುದು ಹೇಗೆ ಅಶಕ್ಯವೊ ಹಾಗೆ ವ್ಯಕ್ತಿ ಮತ್ತು ಸಮಾಜ ಇವುಗಳನ್ನು ಪ್ರತ್ಯೇಕವಾಗಿ ಅಭ್ಯಸಿಸುವುದು ಅಸಾಧ್ಯ. ವ್ಯಕ್ತಿಯ ವಿಚಾರವು ಬಂದೊಡನೆ ಜೊತೆಗೆ ಅವನೊಡನೆ ಅವಿಭಾಜ್ಯವಾಗಿ ಹೊಂದಿಕೊಂಡಿರುವ ಸಮಾಜದ ವಿಚಾರವೂ ಬಂದೇಬಿಡುವುದು. ವ್ಯಕ್ತಿಯೊಡನೆ, ಆ ವ್ಯಕ್ತಿಯ ತಂದೆತಾಯಿಗಳಾರು, ಗುರುಹಿರಿಯರು ಯಾರು, ಅಣ್ಣತಮ್ಮಂದಿರಾರು, ಸಹವಾಸಿಗಳಾರು ಎಂಬ ಮುಂತಾದ ಅನೇಕಾನೇಕ ಪ್ರಶ್ನೆಗಳು ನಮ್ಮೆದುರು ನಿಲ್ಲುವವು. ವ್ಯಕ್ತಿರಹಿತವಾದ ಮಾನವಸಮಾಜವನ್ನಾಗಲಿ, ಸಮಾಜರಹಿತವಾದ ಮಾನವ ವ್ಯಕ್ತಿಯನ್ನಾಗಲಿ ಕಲ್ಪಿಸುವುದು ಅಸಾಧ್ಯವು. ವ್ಯಕ್ತಿಗಳು ಒಟ್ಟಿಗೆ ಕೂಡುವದರಿಂದಲೆ ಸಮಾಜವಾಗುವದು; ಸಮಾಜದ ಮೂಲಕವೆ ವ್ಯಕ್ತಿಯು ಹುಟ್ಟಿ, ಬೆಳೆದು, ಜೀವಿಸಿ, ವಿಕಾಸಹೊಂದಿ ತನ್ನ ಜೀವನವನ್ನು ಸಫಲಗೊಳಿಸುವದು.

ವ್ಯಕ್ತಿ ಹಾಗು ಸಮಾಜ ಇವುಗಳ ಅನ್ಯೋನ್ಯ ಸಂಬಂಧವು ಈ ರೀತಿ ಘನಿಷ್ಟವೂ ಅವಿಭಾಜ್ಯವೂ ಇರುವುದು. ಆದುದರಿಂದಲೆ ಈ ಸಂಬಂಧವು ಉತ್ತಮಗೊಳ್ಳಲು, ಪರಸ್ಪರರ ವಿಕಾಸಕ್ಕೆ ಸಹಾಯಕವಾಗಲು, ವ್ಯಕ್ತಿಜೀವನ ಹಾಗೂ ಸಮಾಜ ಜೀವನ ಇವೆರಡೂ ಪರಿಪೂರ್ಣವಾಗಲು ಏನು ಮಾಡಬೇಕು, ಯಾವ 'ಧರ್ಮ' ಮಾರ್ಗವನ್ನು ಹಿಡಿಯಬೇಕು ಎಂಬ ಬಗ್ಗೆ ಎಲ್ಲ ವಿಚಾರವಂತರೂ ಯೋಚಿಸುವರು. ವ್ಯಕ್ತಿಯ ಉದ್ಧಾರ, ಸಮಾಜದ ಪ್ರಗತಿ ಇವೆರಡನ್ನು ಏಕಕಾಲಕ್ಕೆ ಸಾಧಿಸುವ ಸಮನ್ವಯಧರ್ಮವೇ ಎಲ್ಲಕ್ಕೂ

ಶ್ರೇಷ್ಠವೆನಿಸಬಲ್ಲದು. ವ್ಯಕ್ತಿಯನ್ನು ಕುಗ್ಗಿಸಿ ಮುಗ್ಗಿಸಿ ಸಮಾಜವನ್ನು ಕಟ್ಟಬಯಸುವ, ಅಥವಾ ಸಮಾಜದ ವಿಕಾಸಕ್ಕೆ ಅಡ್ಡಿಮಾಡಿ ವ್ಯಕ್ತಿಯ ವಿಕಾಸವನ್ನು ಸಾಧಿಸಲನುವಾಗುವ ಯಾವ ಮಾರ್ಗವೂ ನಿಜವಾದ ಅಥವಾ ಪೂರ್ಣಧರ್ಮವಲ್ಲ. ವ್ಯಕ್ತಿಯ ಮುಖಾಂತರ ಸಮಾಜದ ಹಿತವನ್ನೂ, ಸಮಾಜದ ಮುಖಾಂತರ ವ್ಯಕ್ತಿಯ ಹಿತವನ್ನೂ ಸಾಧಿಸುವುದೆ ಮಾನವಧರ್ಮದ ಮುಖ್ಯ ಗುರಿಯಾಗಿರಬಲ್ಲದು.

ವ್ಯಕ್ತಿ ಮತ್ತು ಸಮಾಜ ಇವರ ನಡುವಿನ ಸಂಬಂಧವನ್ನು ಕುರಿತು, ಆದೇರೀತಿ ಮಾನವಧರ್ಮ, ಸಮಾಜಧರ್ಮ ಇವುಗಳನ್ನು ಕುರಿತು ಈವರೆಗೆ ಅನೇಕ ಧರ್ಮದರ್ಶಿಗಳು, ಸಮಾಜಶಾಸ್ತ್ರಜ್ಞರು ವಿಚಾರಪೂರ್ಣವಾದ ಗ್ರಂಥಗಳನ್ನು ಬರೆದಿದ್ದಾರೆ. ಆಯಾ ದೇಶ ಕಾಲ ಪರಿಸ್ಥಿತಿಗಳಿಗನುಸರಿಸಿ ಆಯಾ ಗ್ರಂಥಗಳು ಮಾನವ ಸಮಾಜಗಳಿಗೆ ಮಾರ್ಗದರ್ಶನವನ್ನು ಮಾಡಿವೆ. ಗಾಂಧೀಜಿಯವರು ಸಮಾಜಶಾಸ್ತ್ರದ ಒಂದು ಪ್ರತ್ಯೇಕ ಗ್ರಂಥವನ್ನು ಬರೆದಿಲ್ಲವಾದರೂ ಅವರು ಕಾಲಕಾಲಕ್ಕೆ ಸಂದರ್ಭಾನುಸಾರವಾಗಿ ಸಮಾಜದ ಹಾಗೂ ವ್ಯಕ್ತಿಯ ವಿವಿಧ ಹಾಗೂ ವಿಧವಿಧದ ಸಮಸ್ಯೆಗಳನ್ನು ಕುರಿತು ಬರೆದುದು ಬೇಕಾದಷ್ಟಿದೆ. ಅದನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿದರೆ ನಮಗೆ ಅವರ ವ್ಯಕ್ತಿಧರ್ಮ-ಸಮಾಜಧರ್ಮ ಇವುಗಳ ಸ್ಪಷ್ಟ ಕಲ್ಪನೆ ಬರುವದು. ಧರ್ಮದ ಮೂಲತತ್ವಗಳನ್ನು ಆಗಾಗ್ಗೆ ಹೇಳುವದಲ್ಲದೆ ನಿತ್ಯವ್ಯವಹಾರದಲ್ಲಿ ಆ ಧರ್ಮದ ಆಚರಣೆ ಯಾವ ರೀತಿ ನಡೆಯಬೇಕೆಂಬುದನ್ನು ಅವರು ಅಧಿಕಾರವಾಣಿಯಿಂದ ಹೇಳಿರುವರು. ಬೆಳಗಿನ ಜಾವದಲ್ಲಿ ನಾವು ಕುಡಿಯುವ ಚಹಾ ಕಾಫಿ ಎಂಬ ವಿಷಯವನ್ನು ಮೊದಲು ಮಾಡಿಕೊಂಡು ಮಾನವಧರ್ಮದ, ಸಮಾಜಧರ್ಮದ ಅತ್ಯಂತ ಸೂಕ್ಷ್ಮಸ್ವರೂಪದವರೆಗೆ ಅವರು ಎಲ್ಲ ವಿಷಯಗಳ ಬಗ್ಗೆಯೂ ಅತ್ಯಂತ ಅನುಭವಪೂರ್ಣವಾದ ಹಾಗೂ ವಿಚಾರಪರಿಪ್ಲುತವಾದ ಮಾತುಗಳನ್ನು ಹೇಳಿರುವರು.

ವ್ಯಕ್ತಿ-ಸಮಾಜ ಈ ಉಭಯಕ್ಕೂ ಅನ್ವಯಿಸುವ ಸಾಮಾನ್ಯ ಹಾಗೂ ಆಧಾರಭೂತ ತತ್ವಗಳೆಂದರೆ ಸತ್ಯ ಹಾಗೂ ಅಹಿಂಸೆ. ವ್ಯಕ್ತಿಯ ಜೀವನವೆ ಆಗಲಿ, ಸಮಾಜದ ಜೀವನವೆ ಆಗಲಿ, ಅದು ಸೂರ್ಯಚಂದ್ರರಂತಿರುವ ಈ ಎರಡು ಜಗಜ್ಜ್ಯೋತಿಗಳ ಬೆಳಕಿನಲ್ಲಿ ರೂಪುಗೊಳ್ಳಬೇಕು. ಅಂದರೆ ಆ ಜೀವನವು ಪೂರ್ಣ ಸಫಲಗೊಳ್ಳುವದು. ಇದು ಗಾಂಧೀಜಿಯವರ ಮೂಲ

ಸೂತ್ರವು. ಕಾಯಾವಾಚಾಮನಸಾ ಸತ್ಯ ಅಹಿಂಸೆಗಳ ಪರಿಪಾಲನೆಯೆ ಮಹಾ ಧರ್ಮವು, ಸನಾತನಧರ್ಮವು, ಅಖಿಲ ಮಾನವಕುಲಕ್ಕೆ ಅನ್ವಯಿಸುವ ಧರ್ಮವು.

ಧರ್ಮವು ಯಾವಾಗಲೂ ಎರಡು ಬಗೆಯಾಗಿರುವದು, ಸ್ಥೂಲ–ಸೂಕ್ಷ್ಮ, ಬಾಹ್ಯ–ಅಂತರ, ಇತ್ಯಾದಿ; ಧರ್ಮದ ಸ್ಥೂಲರೂಪವು ಬದಲಾಗುತ್ತ ಇರುವದು, ಆದರೆ ಅದರ ಸೂಕ್ಷ್ಮಸ್ವರೂಪವು ಮಾತ್ರ ಯಾವಾಗಲೂ ಒಂದೇ ಇರುವದು. ಮನುಷ್ಯನು ದೇವರನ್ನು ಹಲವಾರು ತರಹದಿಂದ ಭಜಿಸುವನು, ನವವಿಧದಿಂದ ಅವನ ಉಪಾಸನೆ ಮಾಡುವನು; ಆದರೆ ಭಕ್ತಿ ಎಂಬುದು ಸತತವೂ ಒಂದೇ ಒಂದು. ಪರಮಾತ್ಮನಲ್ಲಿ ಪರಮ ಅನುರಕ್ತಿ ಎಂಬುದೇ ಭಕ್ತಿಯ ಮೂಲ ಹಾಗೂ ಸನಾತನ ಸ್ವರೂಪವು. ಧರ್ಮದ ಸೂಕ್ಷ್ಮರೂಪವನ್ನು ಸರಿಯಾಗಿ ತಿಳಿದುಕೊಂಡು, ಅದನ್ನು ಒರೆಗಲ್ಲಾಗಿಟ್ಟುಕೊಂಡು ಆದರ ಸ್ಥೂಲಸ್ವರೂಪದಲ್ಲಿ ಉಂಟಾದ ಅಥವಾ ಉಂಟಾಗಬಹುದಾದ ದೋಷಗಳನ್ನು ಪರಿಹರಿಸುತ್ತ ಹೋಗುವದು ಪ್ರತಿಯೊಬ್ಬ ಧರ್ಮನಿಷ್ಠನ ಕರ್ತವ್ಯವಿರುವದು. ಗಾಂಧೀಜಿಯವರು ಆಮರಣಾಂತವೂ ಇದೇ ಕರ್ತವ್ಯಬುದ್ಧಿಯಿಂದ ನಡೆದುಕೊಂಡು ಧರ್ಮಾತ್ಮರೆನಿಸಿದರು.

ಗಾಂಧೀಜಿಯವರು ಹಿಂದೂಧರ್ಮದ ದೊಡ್ಡ ಅಭಿಮಾನಿಗಳಿದ್ದರು ಹಾಗೂ ತಾವು 'ಸನಾತನಿ ಹಿಂದು' ಎಂದು ಹಲವಾರು ಸಾರಿ ಹೇಳಿಕೊಂಡಿರುವರು. ಹೀಗೆ ಹೇಳುವಾಗ ಸಹ ಹಿಂದೂಧರ್ಮದ ಬಾಹ್ಯ ರೂಪದಲ್ಲಿಯ ದೋಷಗಳನ್ನು ಅವರು ಚನ್ನಾಗಿ ಅರಿತಿದ್ದರು. ಆದರೆ ಆ ದೋಷಗಳು ಆಗಂತುಕವಾದವುಗಳು, ಅವುಗಳನ್ನು ಹೋಗಲಾಡಿಸುವದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವೆಂದು ಅವರು ಪ್ರತಿಪಾದಿಸುತ್ತಿದ್ದರು; ಆ ರೀತಿ ಸ್ವತಃ ಯತ್ನಿಸುತ್ತಿದ್ದರು. ಇದಲ್ಲದೆ ಹಿಂದೂಧರ್ಮವು ಸರ್ವಗ್ರಾಹಿಯೂ ಸರ್ವವ್ಯಾಪಿಯೂ ಸರ್ವಸಂಗ್ರಹಿಯೂ ಇರುವದೆಂದು ಅವರು ಹೇಳಿದ್ದಾರೆ.

ಹಿಂದೂಧರ್ಮವನ್ನು ಕುರಿತು ಅವರು ಇಷ್ಟೊಂದು ಅಭಿಮಾನಪಟ್ಟರೂ ಇತರ ಧರ್ಮಗಳ ಬಗ್ಗೆ ಅವರ ಪ್ರೇಮಾದರಗಳು ಎಳ್ಳಷ್ಟೂ ಕಡಿಮೆ ಇರಲಿಲ್ಲ. ಯಾಕಂದರೆ ಸರ್ವಧರ್ಮಸಮಭಾವವೆಂಬುದು ಅವರ ಹನ್ನೊಂದು ವ್ರತಗಳಲ್ಲಿ ಒಂದಾಗಿತ್ತು. ಧರ್ಮಧರ್ಮಗಳಲ್ಲಿ ಯಾವ ಪವಿತ್ರ ಸಂಬಂಧವಿರಬೇಕೆಂಬುದನ್ನು ಈ ಅವರ ವ್ರತವು ಸ್ಪಷ್ಟವಾಗಿ ಸಾರುವದು.

ತಾವು 'ಸನಾತನಿ ಹಿಂದು' ಎಂದು ಗಾಂಧೀಜಿಯವರು ಹೇಳಿ

ಕೊಂಡರೂ ಹಿಂದೂ ಸಮಾಜದಲ್ಲಿಯ ದೋಷಗಳನ್ನು ನಿರ್ಮೂಲಗೊಳಿಸಲು ಅವರು ಮಾಡಿದ ಪ್ರಯತ್ನವು ಅದ್ಭುತವಾದುದು. ಅವರು ಕಂಡುಹಿಡಿದ ಹಾಗೂ ತೋರಿಸಿಕೊಟ್ಟ ದೋಷಗಳಿಂದ ನಿರ್ಮುಕ್ತವಾದ ಸಮಾಜವೆ ಅತ್ಯಂತ ಶ್ರೇಷ್ಠ ಸಮಾಜವು, ಆ ಸಮಾಜದ ಧರ್ಮವೆ ಮಾನವಕುಲಕ್ಕೆ ಅನ್ವಯಿಸ ಬಲ್ಲದು, ಆ ಧರ್ಮತತ್ವಗಳೆ ಒಂದಿಲ್ಲೊಂದು ರೂಪದಿಂದ ಎಲ್ಲ ಧರ್ಮಗಳಲ್ಲಿಯೂ ಅಡಕವಾಗಿರುವವು ಎಂದು ಅವರು ಪ್ರತಿಪಾದಿಸುತ್ತಿದ್ದರು.

ಸಮಾಜಧರ್ಮದ ಮೂಲ ಹಾಗೂ ಶುದ್ಧ ತತ್ವಗಳನ್ನು ಕಣ್ಣೆದುರಿಗಿಟ್ಟು ಕೊಂಡು, ನಮ್ಮ ಸಮಾಜದಲ್ಲಿ ರೂಢವಿದ್ದ ದೋಷಗಳನ್ನು ಬೈಲಿಗೆಳೆದು, ಅವುಗಳನ್ನು ನಿರ್ನಾಮಗೊಳಿಸಲು ಶಾಂತಿಮಯ ಕ್ರಾಂತಿಯ ಮಾರ್ಗವನ್ನು ತೋರಿಸಿಕೊಟ್ಟವರಲ್ಲಿ ಗಾಂಧೀಜಿಯವರು ಅತಿಶ್ರೇಷ್ಠರು. ಅಸ್ಪೃಶ್ಯತೆ, ಬಾಲವಿವಾಹ, ವರದಕ್ಷಿಣೆಯ ರೂಢಿ, ಮದ್ಯಪಾನ, ಅತಿಸಂತತಿ, ಜಾತಿ ಗಳಲ್ಲಿಯ ಉಚ್ಚನೀಚ ಭಾವ, ಜೀವಬಲಿ, ಹೀಗೆ ಒಂದಲ್ಲ ಎರಡಲ್ಲ ನೂರಾರು ದುಷ್ಟ ರೀತಿನೀತಿಗಳನ್ನು ಕುರಿತು ಅವರು ಸಂದರ್ಭಾನುಸಾರವಾಗಿ ಲೇಖಗಳನ್ನು ಬರೆದಿದ್ದಾರೆ, ಕಾಲಕಾಲಕ್ಕೆ ಕ್ರಮಗಳನ್ನು ಕೈಕೊಂಡು ಮಾರ್ಗ ದರ್ಶನವನ್ನು ಮಾಡಿದ್ದಾರೆ.

ಹಿಂದೂ ಸಮಾಜವನ್ನು ಸುಧಾರಿಸಬೇಕೆಂದು ಪ್ರಯತ್ನಿಸಿದವರಲ್ಲಿ ಗಾಂಧೀಜಿಯವರು ಮೊದಲನೆಯವರಲ್ಲ. ಆ ಪ್ರಯತ್ನವು ೧೮೩೦ ರಿಂದ ಅಂದರೆ ರಾಜಾರಾಮಮೋಹನರಾಯರ ಕಾಲದಿಂದ ನಡೆಯುತ್ತ ಬಂದಿದೆ. ಹಲವಾರು ಪ್ರಯತ್ನ ಮಾಡುವವರು, ಬ್ರಾಹ್ಮೋ ಇತ್ಯಾದಿ ಹೊಸ ಪಂಥ ಗಳನ್ನು ಮಾಡಿಕೊಂಡು ತಾವೇ ಪ್ರತ್ಯೇಕವಾಗಿಬಿಟ್ಟರು. ಹಿಂದೂ ಸಮಾಜವು ಮೊದಲಿದ್ದಂತೆಯೆ ಉಳಿಯಿತು! ಹಲವರು ಹಿಂದೂ ಸಮಾಜದಲ್ಲಿಯ ಹಲವು ದೋಷಗಳ ಮೂಲಕ 'ತಾವು ಹಿಂದುಗಳು' ಎಂದು ಹೇಳಿಕೊಳ್ಳಲು ಸಹ ನಾಚುವರು; ಹಲವರು ಅನ್ಯಧರ್ಮಗಳನ್ನು ಸಹ ಸ್ವೀಕರಿಸುವರು. ಆದರೆ ಗಾಂಧೀಜಿಯವರು ಸಮಾಜ ಸುಧಾರಣೆಯ ಆ ಮಾರ್ಗಗಳನ್ನು ಎಂದೆಂದಿಗೂ ಅನುಸರಿಸದೆ ತಮ್ಮ ಅತ್ಯಂತ ಪುರಾತನವಾದ ಹಿಂದೂ ಪರಂಪರೆಯನ್ನು ಗಟ್ಟಿಯಾಗಿ ಹಿಡಿದುಕೊಂಡರು. ಆದರೆ ಅದೇ ಕಾಲಕ್ಕೆ ಅತ್ಯಂತ ನಿರ್ಭಯತೆಯಿಂದ ಹಾಗೂ ಬಿಚ್ಚುಮನಸಿನಿಂದ ಸಮಾಜದ ದೋಷ ಗಳನ್ನು ಜಾಹೀರಪಡಿಸಿ ಅವುಗಳ ನಿರ್ಮೂಲನದ ಉಪಾಯಗಳನ್ನು ಶೋಧಿಸಿ

ದರು. ಪರಂಪರಾಗತವಾದ ಧರ್ಮದಿಂದ ಸಿಡಿದು ಹೋಗುವುದಾಗಲಿ, ಅದರಲ್ಲಿಯ ದೋಷಗಳನ್ನು ವ್ಯರ್ಥ ಟೀಕಿಸುತ್ತಾ ಕೂಡುವುದಾಗಲಿ, ಪರಧರ್ಮವನ್ನು ಸ್ವೀಕರಿಸುವುದಾಗಲಿ ಸಮಾಜಸುಧಾರಣೆಯ ನಿಜವಾದ ಮಾರ್ಗವಲ್ಲ ಎಂಬುದೇ ಅವರ ಅಭಿಪ್ರಾಯವಾಗಿತ್ತು. ಆದುದರಿಂದಲೆ ಧರ್ಮಾಂತರಕ್ಕೆ ಅವರು ಅತ್ಯಂತ ವಿರೋಧಿಯಾಗಿದ್ದರು.

ಒಂದು ಜೀವಂತ ವ್ಯಕ್ತಿ ಹೇಗೋ ಹಾಗೆ ಒಂದು ಸಮಾಜವು ಕೂಡ ಜೀವಂತ ಹಾಗೂ ಗತಿಶೀಲ, ಸಚೇತನ ಗುಂಪು ಇರುವದು. ಅದು ಯಾವಾಗಲು ಪ್ರಗತಿಪಥದಲ್ಲಿ ನಡೆಯುವಂತೆ ಆಯಾ ಸಮಾಜದ ವ್ಯಕ್ತಿಗಳು ಪ್ರಯತ್ನಿಸುತ್ತಿರಬೇಕು. ಈ ಪ್ರಯತ್ನವು ಉಭಯತೋಪರಿ ಕುಶಲವನ್ನು ಸಾಧಿಸಬಲ್ಲದು. ಈ ಪ್ರಯತ್ನವು ಸತ್ಯ ಅಹಿಂಸೆಗಳ ಆಧಾರದ ಮೇಲೆ ನಡೆದರೆ ಆಯಾ ವ್ಯಕ್ತಿಗಳ ಉದ್ಧಾರವಾಗುವದಲ್ಲದೆ ಆ ಸಮಾಜದ ಉದ್ಧಾರವೂ ಆಗುವದು. ಸ್ವಾರ್ಥವನ್ನು ಬಿಟ್ಟು ಪರಾರ್ಥಕ್ಕಾಗಿ ದುಡಿಯುವುದರಲ್ಲಿಯೆ ವ್ಯಕ್ತಿಯ ಮುಕ್ತಿಯ ರಹಸ್ಯವು ಅಡಗಿಕೊಂಡಿರುವದು. ಇಂಥ ಹೆಚ್ಚು ವ್ಯಕ್ತಿಗಳ ನಿರ್ಮಾಣವೆ ಸಮಾಜದ ಉದ್ಧಾರದ ಮಾರ್ಗವಿರುವದು.

ಈ ಬಗೆಯ ಉಚ್ಚವಾದ ಧ್ಯೇಯಗಳನ್ನು ಆದರ್ಶವಾಗಿಟ್ಟುಕೊಂಡು ಗಾಂಧೀಜಿಯವರು ತಮ್ಮ ಸಮಾಜಶಾಸ್ತ್ರವನ್ನು ರೂಪಿಸಿರುವರು. ಅತ್ಯಾಧುನಿಕ ಸಮಾಜಶಾಸ್ತ್ರಜ್ಞರಲ್ಲಿ ಬಹಳ ಶ್ರೇಷ್ಠ ಸ್ಥಾನವನ್ನು ಪಡೆದ ಪಿತಿರಿಮ್ ಸೊರೋಕಿನ್ ಅಂಥವರು ಕೂಡ ಈ ಬಗೆಯ ತತ್ವಗಳನ್ನೆ ಪ್ರತಿಪಾದಿಸಿರುವರು. ಆ ದೃಷ್ಟಿಯಿಂದ ನೋಡಿದರೆ ಗಾಂಧೀಜಿಯವರು ವಸಿಷ್ಠವಾಮದೇವರಂತೆ, ಮನುಯಾಜ್ಞ್ಯವಲ್ಕ್ಯರಂತೆ ಪುರಾತನರಲ್ಲಿ ಪುರಾತನರು; ಅದೇ ಕಾಲಕ್ಕೆ ರಸ್ಕಿನ್, ಬರಟ್ರಾಂಡ್ ರಸೆಲ್, ಸೊರೋಕಿನ್ ಇವರಂತೆ ಆಧುನಿಕರಲ್ಲಿ ಆಧುನಿಕರು. ಹೀಗೆ ಅವರು ಇರುವುದಕ್ಕೆ ಅವರ ಸತ್ಯದ ಆಗ್ರಹವೆ ಕಾರಣ, ಯಾಕಂದರೆ ಸತ್ಯವು ತ್ರಿಕಾಲಾಬಾಧಿತವು; ಅವರ ಅಹಿಂಸಾ ವೃತ್ತಿ, ಮಾನವಕುಲದ ಬಗ್ಗೆ ಇದ್ದ ಇವರ ಅಪಾರವಾದ ಪ್ರೇಮವೆ ಕಾರಣ, ಯಾಕಂದರೆ ಪ್ರೇಮವು ಹೃದಯ ಗ್ರಾಹಿಯು, ಸರ್ವವ್ಯಾಪಿಯು. ಸತ್ಯ ಅಹಿಂಸೆಗಳ ಸುಂದರ ಸಂಗಮವೇ ಸರ್ವದೋಷ ಪರಿಹಾರಕವು, ಪೂರ್ಣ ಶುದ್ಧಿದಾಯಕವು. ಗಾಂಧೀಜಿಯವರು ಅದೇ ಮಾರ್ಗದಿಂದ ನಡೆದರು, ವಿಶ್ವಕ್ಕೆ ದಾರಿಯನ್ನು ತೋರಿದರು.

ಪ್ರಕಾಶಕೀಯ

ಗಾಂಧೀ ಗ್ರಂಥಮಾಲೆಯ ಆರನೆಯ ಸಂಪುಟ 'ಸಮಾಜಧರ್ಮ' ವನ್ನು ಓದುಗರಿಗೆ ನೀಡುತ್ತಿದೇವೆ. ಈ ಗ್ರಂಥದ ಮೊದಲ ಲೇಖನ 'ನಾಳಿನ ಜಗತ್ತು' ಎಂಬುದು ೧೯೪೬ ರ ಆಗಸ್ಟ್ ೧೬ ರಂದು ಪ್ರಕಟವಾದ 'ಕನ್ನಡ ಹರಿಜನ' ದಿಂದ ಉದ್ಧೃತವಾದುದು; ಶ್ರೀ. ಸಿದ್ದವನಹಳ್ಳಿ ಕೃಷ್ಣಶರ್ಮರ ಭಾಷಾಂತರ. ಗ್ರಂಥದ ಭಾಗ–೨, 'ಹಿಂದೂ ಸಮಾಜದ ಧಾರ್ಮಿಕ ಹಿನ್ನೆಲೆ' ಎಂಬ ಭಾಗವನ್ನು ಶ್ರೀ. ವಿ. ಬಿ. ನಾಯಕ್ ಅವರು ಭಾಷಾಂತರಿಸಿ ಕೊಟ್ಟಿದಾರೆ. ಶ್ರೀ. ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರು ಇದನ್ನು ಪರಿಷ್ಕರಿಸಿದ್ದಾರೆ. ಗ್ರಂಥದ ಉಳಿದೆಲ್ಲ ಭಾಗವನ್ನೂ ಗ್ರಂಥಮಾಲೆಯ ಸಂಪಾದಕವರ್ಗದ ಶ್ರೀ. ಜಿ. ವಿ. ನಾರಾಯಣಮೂರ್ತಿಯವರು ಭಾಷಾಂತರಿಸಿದಾರೆ.

ಈ ಗ್ರಂಥದಲ್ಲಿ ಅಚ್ಚಾಗಿರುವ ಚಿತ್ರಗಳನ್ನು ಶ್ರೀಮತಿ ಸುಮತಿ ಮೊರಾರ್ಜಿ ಅವರ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ. ಅವನ್ನೂ ಮತ್ತು ಪುಸ್ತಕದ ಮೇಲುಹೊದಿಕೆಯನ್ನೂ ಮೈಸೂರಿನ ವೆಸ್ಲಿ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್‌ನವರು ಮುದ್ರಿಸಿಕೊಟ್ಟಿದಾರೆ. ಇವರಿಗೂ ಈ ಗ್ರಂಥವನ್ನು ಸಮರ್ಪಕವಾಗಿ ಮುದ್ರಿಸಿಕೊಟ್ಟ ವಿದ್ಯಾ ಮುದ್ರಣಕ್ಕೂ ಸಂಪಾದಕ ಮಂಡಲಿ ಋಣಿ.

ಜುಲೈ, ೧೯೫೯.
ಮೈಸೂರು.

ಪ್ರಧಾನ ಸಂಪಾದಕ
ಗಾಂಧೀ ಗ್ರಂಥಮಾಲೆ

ಅನುಕ್ರಮಣಿಕೆ

ಸಮಾಜಧರ್ಮ

★

ಪ್ರವೇಶ

★

ನಾಳಿನ ಜಗತ್ತು

ನಾಳೆ ನಸುಕು ಹರಿದರೆ ಮೂಡಲಿರುವ ಜಗತ್ತು ಎಂಥದೋ, ಆದರ ರೀತಿಯೇನೋ, ರಚನೆಯೇನೋ; ಈ ವಿಷಯದ ಬಗ್ಗೆ ಈಗಿರುವಷ್ಟು ಊಹಾಪೋಹ ಮಾನವನ ಇತಿಹಾಸದಲ್ಲೇ ಹಿಂದೆಂದೂ ಇದ್ದಿರಲಿಕ್ಕಿಲ್ಲ.

ಇದನ್ನು ಕಂಡು ನಾವು ಬೆರಗಾಗಬೇಕಿಲ್ಲ. ಈ ಘೋರ ಕುರುಕ್ಷೇತ್ರ ದಲ್ಲಿ ನಿಂತಾಗಲೂ ಮುಂದೇನು ಎಂದು ಭವಿಷ್ಯದೊಳಕ್ಕೆ ಇಣಿಕಿ ನೋಡುವಂತೆ, ಭಯದಿಂದಲೋ ಆಸೆಯಿಂದಲೋ ಇಣಿಕಿ ನೋಡುವಂತೆ, ಏನೋ ಒಂದು ನಮ್ಮನ್ನು ಒತ್ತಾಯ ಮಾಡುತ್ತಿದೆ. ಆ ಆಸೆ—ಇಂದಿನೀ ಭಯಾನಕವೆಲ್ಲ ಬರೀ ಕೆಟ್ಟ ಕನಸಾಗಿ, ಹೊಸದೊಂದು ಶುದ್ಧತರ, ಉತ್ತಮ ಲೋಕ ಮೂಡೀತೆಂಬ ಆಸೆ; ಆ ಭಯ—ಇಂದಿನೀ ಬದುಕು ಎಂದಿಗೂ ಬದಲಾಗದೇನೋ, ಹಿಂದಿನಂತೆಯೇ ಮುಂದೆಯೂ ಇದ್ದೀತೇನೋ; ತಮ್ಮ ಜೊತೆಗಾರರ ಮೇಲೆ ಕೈಯೆತ್ತುವಂತೆ ಮರ್ತ್ಯಮಾನವ ಸ್ವಭಾವವೇ ಒತ್ತಾಯ ಪಡಿಸುತ್ತಿದೆಯೇನೋ; ದಿಗ್ವಿಜಯಿಗಳು, ದಿಗ್ವಿಜಯಾಕಾಂಕ್ಷಿಗಳು ಯಾವಾ ಗಲೂ ಇದ್ದಾರೇನೋ, ತಮ್ಮ ಅಧಿಕಾರದಾಹಕ್ಕಾಗಿ ಇನ್ನೂ ಹೊಸ ಹೊಸ, ಘೋರತರ ಮಹಾ ಸಂಗ್ರಾಮಗಳನ್ನು ಹರಡಿಯಾರೇನೋ ಎಂಬ ಭಯ.

ನಮ್ಮೀ ಜಗತ್ತು ಎಂದಿಗೂ ಹಿಂಸಾಮಯವಾಗಿಯೇ ಇದ್ದೀತೇ?

ನಮ್ಮ ಲೋಕ, ಸಮಾಜ, ಈಗಿದ್ದಂತೆಯೇ ಯಾವಾಗಲೂ ಇದ್ದೀತೇ?

ಈ ಬಡತನ, ಈ ಉಪವಾಸ, ಈ ಘೋರತರ ಸಂಕಟ ಯಾವಾಗಲೂ ಇದ್ದೀತೇ?

ಇವಕ್ಕೆ ಮದ್ದೇ ಇಲ್ಲವೇ, ನಾಶವಿಲ್ಲವೇ?

ಅಥವಾ, ಕಟ್ಟಕಡೆಯ ರಣಭೇರಿ ತಣ್ಣಗಾಗಿ, ಕಹಳೆಯ ಧ್ವನಿ ಲಯವಾಗಿ, ಕತ್ತಿ ಕೆಳಕ್ಕೆ ಬಿದ್ದು, ನಾಳಿನ ಜಗತ್ತು ಅಹಿಂಸಾಮಯವಾದೀತೇ? ಎಲ್ಲರಿಗೂ ಅನ್ನ ದೊರೆತು; ಎಲ್ಲರಿಗೂ ಕೆಲಸವಿದ್ದು ಎಲ್ಲರಿಗೂ ಸಮನಾಗಿ ನ್ಯಾಯ ದೊರೆತೀತೇ?

ದೈವಭಕ್ತಿ—ಇಂದಿಗಿಂತ ನಾಳೆ ಪೂರ್ಣತರವಾದ, ದೃಢವಾದ ವಿಶಾಲವಾದ ನಂಬಿಕೆಯಿದ್ದೀತೋ ಧರ್ಮದಲ್ಲಿ; ಅಥವಾ ದೇವರೇ ಇಲ್ಲದ ನಾಸ್ತಿಕ ಪ್ರಪಂಚವಾದೀತೋ?

ನಮಗೆ ತಿಳಿದಿರುವ ಈ ಲೋಕದಲ್ಲಿ ಮಹಾಪರಿವರ್ತನವೊಂದು ಆಗ ಬೇಕಾದರೆ, ಅದು ಹೇಗೆ ಬಂದೀತೋ, ಯಾವ ರೀತಿಯಲ್ಲೋ?

ಆ ವರ ನೀಡಬಲ್ಲುದು ಯಾವುದು—ಯುದ್ಧವೇ, ಕ್ರಾಂತಿಯೆ? ಅಥವಾ, ಶಾಂತವಾಗಿಯೇ ಬಂದೀತೋ ಅದು?

ಬೇರೆ ಬೇರೆ ಜನ ಇದಕ್ಕೆ ಬೇರೆ ಬೇರೆ ಉತ್ತರ ಕೊಡುತ್ತಾರೆ: ನಾಳಿನ ಜಗತ್ತು ತನತನಗೆ ಕಂಡಂತೆ, ಹೀಗಿದ್ದರೆ ಚೆನ್ನು ಎಂದು ತನಗೆ ಅನಿಸಿದಂತೆ, ಅದರ ನಕ್ಷೆ ಬರೆಯುತ್ತಾರೆ. ನಾನೂ ನನ್ನ ಉತ್ತರ ಕೊಡಬೇಕು. ನನ್ನ ನಂಬಿಕೆಯಿಂದ ಹೇಳುತ್ತಿಲ್ಲ, ನಾ ಮನಗಂಡುದನ್ನು, ನನಗೆ ಪ್ರಮಾಣವೆನಿಸಿ ದುದನ್ನು ಹೇಳುತ್ತೇನೆ; ನಾಳಿನ ಜಗತ್ತೂ ಇಂದಿನ ಜಗತ್ತೂ ಬಿಳುಪು-ಕಪ್ಪಿನಷ್ಟು ವ್ಯತ್ಯಾಸವಾಗಿದ್ದಾವೆಂಬ ನಂಬಿಕೆಯಿಂದ ಹೇಳುತ್ತೇನೆ.

ನನಗೆ ಕಾಣುವಂತೆ, ಬರಲಿರುವ ಮಾನವ ಸಮಾಜಕ್ಕೆ ಅಹಿಂಸೆಯೇ ತಳಹದಿಯಾಗಿದ್ದೀತು; ಆಗಲೇಬೇಕು. ಅದೇ ಪ್ರಥಮ ನಿಯಮ. ಆ ನಿಯಮದಿಂದಲೇ ಉಳಿದೆಲ್ಲ ಶುಭಪ್ರಸಾದ ಹರಿದು ಬಂದಾವು. ಅಂತೆಯೇ ಅದು ಪ್ರಥಮ ನಿಯಮ.

ಬಲು ದೂರದ ಗುರಿಯಾಗಿ ಕಂಡೀತು ಇದು, ಅಸಾಧ್ಯವಾದ ಹುಚ್ಚು ಕನಸಾಗಿ ಕಾಣಬಹುದು; ಹಾಗೆ ಜನ ಪದೇ ಪದೇ ಟೀಕಿಸುವುದುಂಟು. ನನಗೇನೋ ಇದು ಎಳ್ಳಷ್ಟೂ ಅಸಾಧ್ಯವೆನಿಸದು; ಈಗಲೇ, ಇಲ್ಲಿಯೇ ಸಾಧಿಸಿ ಬಿಡಬಹುದು.

ಅಹಿಂಸೆಯ ದಾರಿ—ಭವಿಷ್ಯದ ಜಗತ್ತಿನ ದಾರಿಯನ್ನು—ಹಿಡಿಯಲು ಯಾರಿಗಾಗಿಯೂ ಯಾರೂ ಕಾಯಬೇಕಾಗಿಲ್ಲ. ಪ್ರತಿಯೊಬ್ಬನೂ ತನ್ನ ಪಾಡಿಗೆ ತಾನು ಈ ದಾರಿ ತುಳಿಯಬಹುದು. ಒಬ್ಬನು ನಡೆದಂತೆ ಹತ್ತು ಜನ

ನಡೆಯಲಾರರೆ? ಒಬ್ಬ ತುಳಿದ ದಾರಿ ಉಳಿದವರಿಗೆ ತುಳಿಯಲು ಬಾರದೇನು? ಹತ್ತೂ ಜನರು ತುಳಿದ ದಾರಿ ಇಡೀ ದೇಶ ತುಳಿಯಬಾರದೆ? ದೇಶದೇಶಗಳು; ಇಡೀ ಜಗತ್ತು ತುಳಿಯಲಾರದೆ?

ಬರಲಿರುವ ಜಗತ್ತಿನ ದ್ವಿತೀಯ ಮಹಾನಿಯಮ—ಸರ್ವಸಮ ವಿಭಾಗವೆಂದು ನಾ ನಂಬಿದೇನೆ—ಅಹಿಂಸೆಯ ಫಲ, ಪರಿಣಾಮ.

ಸರ್ವಸಮವಿಭಾಗವೆಂದರೆ ಜಗತ್ತಿನ ಸಂಪತ್ಸಾಮಗ್ರಿಯನ್ನೆಲ್ಲ ಯಾರೋ ಒಬ್ಬರು ಕೂತು ತನ್ನ ಮನಸ್ಸಿಗೆ ಬಂದ ಹಾಗೆ ಹಂಚಿ ಹಾಕುವು ದಲ್ಲ. ಪ್ರತಿಯೊಬ್ಬನಿಗೂ ತನತನಗೆ ಸಹಜವಾಗಿ ಎಷ್ಟು ಬೇಕೋ ಅಷ್ಟು ಸಾಮಗ್ರಿ; ಒಂದು ಕವಡೆಯೂ ಹೆಚ್ಚಾಗಿರದು—ಎಂದರ್ಥ.

ಒಂದು ಸಾಮಾನ್ಯ ಉದಾಹರಣೆ—ಸ್ಥೂಲವಾದುದು—ತೆಗೆದು ಕೊಳ್ಳೋಣ: ಒಬ್ಬನಿಗೆ ಮಂದಾಗ್ನಿ; ಜೀರ್ಣಶಕ್ತಿ ಕಡಿಮೆ; ಒಂದು ಪಾವು ಹಿಟ್ಟಾದರೆ ಅವನಿಗೆ ಸಾಕು. ಇನ್ನೊಬ್ಬನಿಗೆ ಒಂದೂವರೆ ಸೇರು ಹಿಟ್ಟು ಬೇಕು. ಇಬ್ಬರಿಗೂ ಅವರಿಗೆ ಬೇಕಾದಷ್ಟು ಹಿಟ್ಟು ಸಿಗುವಂತಿರಬೇಕು. ಒಂದೊಂದು ಪಾವೋ, ಅಲ್ಲ, ಒಂದೂವರೆ ಸೇರೋ ಇಬ್ಬರ ಮೋರೆಗೂ ಬಿಸಾಟರೆ ಆಗದು; ಅದು ಕೂಡದು.

ಈ ಸರ್ವಸಮಭಾಗದ ಸಿದ್ಧಾಂತದ ಬುಡದಲ್ಲಿ ಶ್ರೀಮಂತರು ಧರ್ಮದ ಪಾರುಪತ್ಯಗಾರರಾಗಿರಬೇಕೆಂಬ ತತ್ತ್ವವಿದೆ; ಅನಾಸಕ್ತರಾದ ಯಜಮಾನರಾಗಿರಬೇಕೆಂಬ ಭಾವವಿದೆ. ಇದೇ ಜಟಿಲವಾದ ಪ್ರಧಾನವಾದ ಸಮಸ್ಯೆ.

ಈ ಸರ್ವಸಮವಿಭಾಗ ಹೇಗೆ ಆಗಬೇಕು ಲೋಕದಲ್ಲಿ? ಕ್ರಾಂತಿ ಯಿಂದಲೆ, ದಂಗೆಯಿಂದಲೆ, ರಕ್ತಪಾತದಿಂದಲೆ? ಹಣವಂತರ ಸಂಪತ್ತನ್ನೆಲ್ಲ ಬಲಾತ್ಕಾರವಾಗಿ ಕಿತ್ತುಕೊಂಡು ಬಿಡೋಣವೇ?

ಕೂಡದು ಎನ್ನುತ್ತದೆ ಅಹಿಂಸೆ. ಬಲಾತ್ಕಾರವಾದ ಸಂಪತ್ತಿನ ಆಕ್ರಮಣದಿಂದ ಲೋಕ ಇನ್ನೂ ಪಾತಾಳಕ್ಕಿಳಿದೀತು. ಹಣವಂತನ ಕೌಶಲ ವೆಲ್ಲ ಮಾಯವಾಗಿ, ಲೋಕಕ್ಕೆ ಆ ಪ್ರಭಾವದ ಲಾಭ ಇಲ್ಲವಾದೀತು. ಅವನಿಗೆ ಸೃಷ್ಟಿಕೌಶಲ, ನಿರ್ಮಾಣ ಶಕ್ತಿಯಿದೆ. ಆ ಸಾಮರ್ಥ್ಯವನ್ನು ಕಳೆದು ಕೊಳ್ಳುವುದು ಉಚಿತವಲ್ಲ.

ಆತನ ಧನ ಅವನಿಗಿರಲಿ, ಆತನ ಬದುಕಿಗೆ ಅಗತ್ಯವಿದ್ದಷ್ಟು ಬಳಸಲಿ.

ಉಳಿದುದಕ್ಕೆ ಬರೀ ಯಜಮಾನನಾಗಿರಲಿ; ದೇಶದ ಹಿತಕ್ಕಾಗಿ ಅದನ್ನು ಬಳಸಲಿ.

ಅಂಥ ಜನ ಹಿಂದೆ ಇದ್ದರು. ಈಗಲೂ ಇದಾರೆ. ತಾನು ಸಮಾಜದ ಸೇವಕ ಎಂದು ತಿಳಿದುಕೊಂಡು, ಅದಕ್ಕಾಗಿ ಗಳಿಸಿ, ಆ ರೀತಿ ವೆಚ್ಚ ಮಾಡಿದರೆ ಅಂಥವನ ಗಳಿಕೆ ಒಳ್ಳೆಯದು, ಅವನ ವ್ಯವಹಾರ ಚೇತನದಾಯಕ ವಾದುದು, ಉತ್ಪಾದಕವಾದುದು.

ಆದರೆ ಇದೆಲ್ಲ—ಈ ಅಹಿಂಸೆಯ ಮಾತೆಲ್ಲ—ಆಗಬೇಕಾದರೆ ಮಾನವ ಸ್ವಭಾವವೇ ಬದಲಾಗಬೇಡವೆ? ಇತಿಹಾಸದಲ್ಲಿ ಅಂಥ ಉದಾಹರಣೆ ಎಲ್ಲಾದರೂ ಇದೆಯೆ? ಯಾವಾಗಲಾದರೂ ನಡೆದಿದೆಯೇ?

ಖಂಡಿತವಾಗಿ ನಾ ಹೇಳುತ್ತೇನೆ: ನೀಚ ಸ್ವಾರ್ಥದ ಸಂಗ್ರಹ ಬುದ್ಧಿ ಯನ್ನು ತೊರೆದು, ಲೋಕವನ್ನೇ ಇಡಿಯಾಗಿ ಕಂಡು, ಲೋಕಹಿತದ ಹಾದಿ ಯನ್ನು ವ್ಯಕ್ತಿಗಳು ಹಿಡಿದಿದಾರೆ; ಅಂಥ ಪರಿವರ್ತನೆ ಆಗಿದೆ. ಒಂದು ಜೀವಿಯಲ್ಲಿ ಆ ಪರಿವರ್ತನೆ ಆಗಬಲ್ಲದಾದರೆ, ಅನೇಕ ಜನರಲ್ಲಿಯೂ ಆಗ ಬಲ್ಲದು.

ನಾಳಿನ ಜಗತ್ತಿನಲ್ಲಿ ಬಡತನವಿರದು, ಯುದ್ಧವಿರದು, ಕ್ರಾಂತಿ ಯಿರದು, ರಕ್ತಪಾತವಿರದು.

ದೈವಭಕ್ತಿ—ಹಿಂದೆಂದೂ ಇಲ್ಲದಷ್ಟು ಗಾಢವಾಗಿ ಅತಿಶಯವಾಗಿ ಇದ್ದೀತು ಆ ಜಗತ್ತಿನಲ್ಲಿ.

ಈ ಜಗತ್ತಿನ ಅಸ್ತಿತ್ವವೇ, ವಿಶಾಲದೃಷ್ಟಿಯಿಂದ ನೋಡಿದರೆ, ಧರ್ಮದ ಮೇಲೆ ಆಧಾರಗೊಂಡಿದೆ. ಅಂತೆಯೇ ಲೋಕದಿಂದ ಧರ್ಮವನ್ನು ಕಿತ್ತೊಗೆಯಲು ಬಾರದು.

ಹಾಗೆ ಮಾಡಿದ ಪ್ರಯತ್ನವೆಲ್ಲ ವಿಫಲವಾದೀತು. ಕಟ್ಟಕಡೆಗೆ ವಿನಯ ಪೂರ್ಣವಾಗಿ ಮಾನವಲೋಕ ದೇವರಿಗೆ, ದೇವರ ನಿರಂತರವಾದ ಸಚೇತನ ನಿಯಮಕ್ಕೆ, ಶರಣು ಹೋದೀತು.

(ಕನ್ನಡ ಹರಿಜನ : ಆಗಸ್ಟ್ ೧೬, ೧೯೪೨,
ಮ್ಯಾಂಚೆಸ್ಟರ್ ಗಾರ್ಡಿಯನ್‌ನಿಂದ ಉದ್ಧರಿಸಿದುದು.)

ಭಾಗ ೧

ಸಮಾಜದ ಸ್ವರೂಪ

★

ವ್ಯಕ್ತಿ ಮತ್ತು ಸಮಾಜ

ವ್ಯಕ್ತಿಯೇ ಪರಮಗಣ್ಯ. ವ್ಯಕ್ತಿಗೆ ಗಣನೆ ಇಲ್ಲದೆ ಹೋದರೆ, ಸಮಾಜದಲ್ಲಿ ಉಳಿವುದಾದರೂ ಏನು? ವ್ಯಕ್ತಿಸ್ವಾತಂತ್ರ್ಯವೊಂದೇ, ಮಾನವ ತನ್ನನ್ನು ಆತ್ಮ–ಸಂತೋಷದಿಂದ ಸಮಾಜಸೇವೆಗೆ ಪೂರ್ಣವಾಗಿ ಅರ್ಪಿಸಿಕೊಳ್ಳುವಂತೆ ಮಾಡೀತು. ಅದನ್ನು ಅವನಿಂದ ಬಲಾತ್ಕಾರವಾಗಿ ಕಸಿದುಕೊಂಡರೆ ಅವನು ಯಂತ್ರದಂತೆ ಆದಾನು; ಸಮಾಜ ನಾಶವಾದೀತು. ವ್ಯಕ್ತಿಸ್ವಾತಂತ್ರ್ಯದ ನಿರಾಕರಣೆಯ ಆಧಾರದ ಮೇಲೆ ಯಾವ ಸಮಾಜವನ್ನೂ ನಿರ್ಮಿಸುವುದು ಅಶಕ್ಯ. ಅದು ಮಾನವ ಸ್ವಭಾವಕ್ಕೇ ವಿರುದ್ಧ. ಮನುಷ್ಯನಿಗೆ ಕೋಡು ಅಥವಾ ಬಾಲ ಹೇಗೆ ಮೂಡಲಾರವೋ ಹಾಗೆಯೇ ತನ್ನಧೀನದ ಮನವಿಲ್ಲದಿದ್ದರೆ, ಆತ ಮಾನವನಾಗಿ ಬಾಳಲಾರ. ವಾಸ್ತವವಾಗಿ, ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇಲ್ಲದವರೂ ತಮ್ಮದನ್ನು ಮಾತ್ರ ನಂಬಿಯೇ ಇರುತ್ತಾರೆ. ಚೆಂಘಿಸ್‌ಖಾನನ ಆಧುನಿಕ ಸ್ವರೂಪದಂತಹವರೂ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡೇ ಇರುತ್ತಾರೆ.

ಮನುಷ್ಯ ತನಗೆ ತಾನೇ ಕಡು ವೈರಿಯೂ ಆಗಬಲ್ಲ, ಅತ್ಯಂತ ಗೆಳೆಯನೂ ಆಗಬಲ್ಲ, ಎಂದು ಎಲ್ಲ ಸಂತರೂ ಎಲ್ಲರಿಗೂ ಅರಿವಾಗುವಂತೆ ಸಾರಿದ್ದಾರೆ. ಸ್ವತಂತ್ರನಾಗಿರುವುದೂ, ಗುಲಾಮನಾಗಿರುವುದೂ, ಅವನ ಕೈಲೇ ಇವೆ. ವ್ಯಕ್ತಿಗೆ ನಿಜವಾದುದು ಸಮಾಜಕ್ಕೂ ನಿಜ.

ವ್ಯಕ್ತಿ, ತಾನೇ ತನ್ನ ಸರಕಾರದ ಶಿಲ್ಪಿಯಾಗಬಲ್ಲ. ಸರಕಾರದ ಶಕ್ತಿಯ ಸ್ವಲ್ಪ ಹೆಚ್ಚಿಕೆಯನ್ನೂ ನಾನು ಅತಿ ಭಯದಿಂದ ನೋಡುತ್ತೇನೆ; ಏಕೆಂದರೆ, ಅದು ಶೋಷಣೆಯನ್ನು ಅತ್ಯಂತ ಕಮ್ಮಿ ಮಾಡಿ, ಒಳಿತೆಸಗುವಂತೆ ಕಂಡುಬಂದರೂ, ಎಲ್ಲ ಪ್ರಗತಿಯ ಮೂಲವಾದ ವ್ಯಕ್ತಿತ್ವವನ್ನೇ ನಾಶಮಾಡಿ, ಮನುಷ್ಯ ಕುಲಕ್ಕೇ ಅತ್ಯಂತ ಹಾನಿ ಎಸಗುತ್ತದೆ.

ಮನಸ್ಸಿನ ಹಾಗೂ ನೀತಿಯ ಪೂರ್ಣ ವಿಕಾಸದಿಂದ ಕೂಡಿದ ಮಾನವ ಸೌಖ್ಯವೇ ಜೀವನದಲ್ಲಿ ಅರಸುವಂಥ ಗುರಿ. ನೀತಿ ಎಂಬುದನ್ನು ಆಧ್ಯಾತ್ಮಿಕ ಎಂಬುದರ ಸಮಾನ ಅರ್ಥದಲ್ಲಿ ಬಳಸುತ್ತಿದೇನೆ. ಈ ಗುರಿಯನ್ನು ವಿಕೇಂದ್ರೀಕರಣದಿಂದ ಸಾಧಿಸಬಹುದು. ಕೇಂದ್ರೀಕರಣ ಪದ್ಧತಿ, ಅಹಿಂಸಕ ಸ್ವರೂಪವುಳ್ಳ ಸಮಾಜ ರಚನೆಯೊಂದಿಗೆ ಹೊಂದಿಕೊಳ್ಳಲಾರದು. ಅಸಂಖ್ಯ ಹಳ್ಳಿಗಳನ್ನೊಳಗೊಂಡ ಈ ರಚನೆಯಲ್ಲಿ ಜೀವನವು ಗೋಪುರದ ಭಾರವನ್ನು ಹೊತ್ತ ಪಿರಮಿಡ್ಡಿ*ನ ತಳಪಾಯದಂತಿರುವುದಿಲ್ಲ. ಅದು ಸಮುದ್ರದ ವಲಯದಂತೆ ಇರುತ್ತದೆ. ವ್ಯಕ್ತಿಯೇ ಅದರ ಮಧ್ಯಬಿಂದು ; ಆತ, ತನ್ನ ಹಳ್ಳಿಗಾಗಿ ಪ್ರಾಣಾರ್ಪಣೆ ಮಾಡಲು ಸದಾಸಿದ್ಧ ; ಹಳ್ಳಿಯು ಹಳ್ಳಿಗಳ ಸಮುದಾಯಕ್ಕೆ ಸದಾ ಮಡಿಯಲು ಸಿದ್ಧ ; ಇದರಿಂದ ಕೊನೆಗೆ, ಅಹಂಭಾವದಿಂದ ಕೂಡಿ ಆಕ್ರಮಣಕಾರಿಗಳಾಗದ, ಸದಾ ವಿನಯ ವರ್ತನೆಯುಳ್ಳವರಾದ, ಸಮುದ್ರದ ವಲಯಗಳ ಗಾಂಭೀರ್ಯವನ್ನು ಹೊಂದಿದ ಮತ್ತು ಅದರೊಡನೆ ಸಮಗ್ರರಾದ, ವ್ಯಕ್ತಿಗಳಿಂದ ಕೂಡಿದ ಒಂದೇ ಜೀವನವಾಗಿರುತ್ತದೆ. ಅತಿ ಹೊರಗಿನ ವಲಯವು ಒಳಗಿನ ವಲಯದ ಮೇಲೆ ಭಾರ ಹೇರಿ, ಅದನ್ನು ಹಿಂಡುವುದಕ್ಕೆ ಪ್ರತಿಯಾಗಿ ಅದಕ್ಕೆ ಶಕ್ತಿ ನೀಡೀತು ; ಅದರಿಂದ ತಾನೂ ಬಲ ಪಡೆದೀತು. ಭಾರತದಲ್ಲಿ ಎಂದಾದರೂ ಪ್ರತಿಯೊಂದು ಹಳ್ಳಿಯೂ ಗಣರಾಜ್ಯವಾಗಬೇಕಿದ್ದರೆ, ಕಡೆಯದೂ ಮೊದಲನೆಯದೂ ಸಮವಾಗಿರಬೇಕು ; ಎಂದರೆ, ಯಾವುದೂ ಶ್ರೇಷ್ಠವೂ ಇಲ್ಲದೆ, ಯಾವುದೂ ಕನಿಷ್ಠವೂ ಇಲ್ಲದೆ ಇರಬೇಕು. ಇಂಥ ನನ್ನ ಚಿತ್ರ ನೈಜವಾದುದೆಂದು ನಾನು ನಂಬಿದ್ದೇನೆ.

ಕಲ್ಮಷರಹಿತ ಅಹಿಂಸಾ ರಾಜ್ಯದಲ್ಲಿ ಮಾತ್ರವೇ ವ್ಯಕ್ತಿಸ್ವಾತಂತ್ರ್ಯಕ್ಕೆ ಪರಿಪೂರ್ಣ ಅವಕಾಶ. ನಿಜವಾದ ಜನತಂತ್ರ ಅಥವಾ ಜನತೆಯ ಸ್ವರಾಜ್ಯ ಅಸತ್ಯ ಹಾಗೂ ಹಿಂಸಾತ್ಮಕ ಹಾದಿಯಿಂದ ಎಂದಿಗೂ ಲಭಿಸದು ; ಇದಕ್ಕೆ ಕಾರಣ ಸುಲಭ : ಅವುಗಳನ್ನು ಬಳಸಿದರೆ, ಎಲ್ಲ ಬಗೆಯ ವಿರೋಧ ದಮನ ಅಥವಾ ವಿರೋಧಿಗಳ ನಿರ್ನಾಮ, ಇವೇ ಸಹಜ ಪರಿಣಾಮವಾದೀತು : ವ್ಯಕ್ತಿ ಸ್ವಾತಂತ್ರ್ಯಕ್ಕೆ ಎಡೆಯಿಲ್ಲವಾದೀತು. (ಹರಿಜನ : ೨೩-೫-೧೯೩೯)

* ಪಿರಮಿಡ್—ಪುರಾತನ ಈಜಿಪ್ಟಿನಲ್ಲಿ ಬಹುಭುಜಾಕೃತಿಯ ಅಥವಾ ಚೌಕನೆಯ ತಳಹದಿಯ ಮೇಲೆ, ಗೋಪುರಾಕೃತಿಯಲ್ಲಿ ಕಟ್ಟಿದ ರಾಜರ ಸ್ಮಾರಕ ಕಟ್ಟಡ.

ಅರಿತೋ, ಅರಿಯದೆಯೋ, ನಿತ್ಯಜೀವನದಲ್ಲಿ ನಾವು ಒಬ್ಬರೊಡನೊಬ್ಬರು ಅಹಿಂಸಾರೀತಿಯಿಂದಲೇ ನಡೆದುಕೊಳ್ಳುತ್ತಿದೇವೆ. ಎಲ್ಲ ಸುವ್ಯವಸ್ಥಿತ ಸಮಾಜಗಳೂ ಅಹಿಂಸೆಯ ಆಧಾರದ ಮೇಲೆ ನಿಂತಿರುತ್ತವೆ.

ಅಣುಗಳಿಂದ ರಚಿತವಾಗಿರುವ ಈ ನಮ್ಮ ಜಗತ್ತಿನಲ್ಲಿ ಅವೆಲ್ಲವುಗಳನ್ನೂ ಒಂದಕ್ಕೊಂದು ಬಿಡದೆ ಕೂಡಿಕೊಳ್ಳುವಂತೆ ಮಾಡುವ ಶಕ್ತಿ ಇಲ್ಲವಾಗಿದ್ದರೆ, ಅದು ಚೂರು ಚೂರಾಗಿ ಒಡೆದು, ನಮ್ಮ ಅಸ್ತಿತ್ವವೇ ಅಳಿದು ಹೋಗುತ್ತಿತ್ತು. ಜಡವಸ್ತುವಿನಲ್ಲಿ ಇರುವಂತೆಯೇ ಎಲ್ಲ ಸಜೀವ ವಸ್ತುಗಳಲ್ಲಿಯೂ ಇಂತಹ ಕೂಡಿಸುವ ಒಂದು ಶಕ್ತಿ ಇದ್ದೇ ಇರಬೇಕು; ಇದಕ್ಕೆ ಪ್ರೇಮವೆಂದು ಹೆಸರು. ಇದನ್ನು ತಂದೆ–ಮಕ್ಕಳು, ಸಹೋದರ–ಸಹೋದರಿ, ಗೆಳೆಯ–ಗೆಳೆಯರು, ಇವರುಗಳಲ್ಲಿ ಕಾಣಬಹುದು. ಜೀವಸಹಿತವಾಗಿರುವ ಎಲ್ಲದಕ್ಕೂ ಈ ಶಕ್ತಿಯನ್ನು ನೀಡಲು ನಾವು ಕಲಿಯಬೇಕು. ಈ ನೀಡುವಿಕೆಯಲ್ಲಿಯೇ ನಮ್ಮ ಈಶ್ವರನ ಜ್ಞಾನ ಅಡಗಿದೆ. ಪ್ರೇಮವಿರುವೆಡೆ ಬಾಳು; ದ್ವೇಷ ವಿನಾಶದ ಹಾದಿ.

ಸಮಾಜವನ್ನು ಅಹಿಂಸಾ ರೀತಿಯಲ್ಲಿ ರಚಿಸುವುದಾಗಲೀ, ನಡೆಸುವುದಾಗಲೀ, ಸಾಧ್ಯವಿಲ್ಲವೆಂದು ಹೇಳುತ್ತಿರುವುದು ಇಂದಿನ ಒಂದು ರೂಢಿಯ ಮಾತು. ಇದರೊಡನೆ ನನ್ನ ವಾದ. ಒಂದು ಕುಟುಂಬದಲ್ಲಿ, ತಂದೆಯು ತಪ್ಪು ಮಾಡಿದ ಮಗನ ಕೆನ್ನೆಗೆ ಹೊಡೆದರೆ, ಅವನು ಪ್ರತೀಕಾರ ಮಾಡಲು ಯೋಚಿಸುವುದಿಲ್ಲ; ಏಟಿನ ಪರಿಣಾಮಕ್ಕೆ ಅಂಜಿ ತನ್ನ ತಂದೆಗೆ ವಿಧೇಯನಾಗಿರುವುದಿಲ್ಲ; ತಂದೆಯ ಪ್ರೇಮಕ್ಕೆ, ತಾನೆಸಗಿರುವ ಅಪರಾಧಕ್ಕಾಗಿ. ಸಮಾಜವಿರುವುದಾಗಲೀ, ಸಮಾಜದ ಆಡಳಿತವಾಗಲೀ, ಈ ವಿಧಾನದಲ್ಲಿರಬೇಕೆಂಬುದೇ ನನ್ನ ಅಭಿಪ್ರಾಯದ ಪಾಠ. ಕುಟುಂಬಕ್ಕೆ ಯಾವುದು ಅನ್ವಯಿಸುತ್ತದೆಯೋ, ಅದೇ ವಿಸ್ತೃತ ಕುಟುಂಬವೆನಿಸಿದ ಸಮಾಜಕ್ಕೂ ಅನ್ವಯಿಸುತ್ತದೆ. ಪ್ರಪಂಚವನ್ನು ಪರಸ್ಪರ ಕಾದಾಡುವ ಶತ್ರುಗಳೆಂದೋ, ಅಥವಾ ಗೆಳೆಯರೆಂದೋ ಪ್ರತ್ಯೇಕ ಮಾಡುವುದು ಮಾನವನ ಕಲ್ಪನೆ. ಹೋರಾಟದ ನಡುವೆಯೂ ಜಗತ್ತನ್ನು ಪೋಷಿಸುವ ಶಕ್ತಿ ಪ್ರೇಮ.

ಈ ಸಮಾಜವು ಸ್ವಭಾವಸಿದ್ಧವಾಗಿಯೇ ಸತ್ಯ ಮತ್ತು ಅಹಿಂಸೆಯ ಆಧಾರವನ್ನು ಹೊಂದಿರಬೇಕು; ಲೋಕಕ್ಕೆ ಅರಿವಾಗಿರುವ ಎಲ್ಲ ಶಕ್ತಿಗಳಲ್ಲಿಯೂ ಅಂತರ್ಗತವಾಗಿರುವ, ಬೇರೆ ಯಾವ ಶಕ್ತಿಯನ್ನೂ ಆಶ್ರಯಿಸದ,

ಇತರ ಎಲ್ಲ ಶಕ್ತಿಗಳೂ ವಿನಾಶ ಹೊಂದಬಹುದಾದರೂ, ಕ್ರಿಯಾಶೂನ್ಯವಾದರೂ, ತಾನು ಮಾತ್ರ ಇರುವ ಜೀವಂತ ಶಕ್ತಿಯೊಂದರ ನೆರವಿಲ್ಲದೆ ಇದು ಸಾಧ್ಯವಿಲ್ಲವೆಂದು ನನ್ನ ಮತ. ಈ ಸರ್ವವ್ಯಾಪಿಯಾದ ಚಿತ್-ಜ್ಯೋತಿಯಲ್ಲಿ ನಂಬಿಕೆ ಇಲ್ಲದೆ, ನನ್ನ ಬಾಳಿಗೂ ಅರ್ಥವಿಲ್ಲ.

ಹಿಂಸೆಯ ಮೂಲಕ ಉಂಟಾಗುವ ಸಹಕಾರದ ಆಧಾರದ ಮೇಲೆ ನವ ಸಮಾಜವನ್ನು ರಚಿಸಲು ಭಾರತವೂ ಪ್ರಯತ್ನ ಮಾಡಿದರೆ, ಅದೊಂದು ದುಃಖಕರ ವಿಷಯವೇ ಸರಿ. ಬಲಾತ್ಕಾರದಿಂದ ಉಂಟಾದ ಒಳಿತು ವ್ಯಕ್ತಿತ್ವವನ್ನು ನಾಶಮಾಡುತ್ತದೆ. ಅಹಿಂಸಕ ಅಸಹಕಾರ ಅಥವಾ ಪ್ರೇಮದ ಒಲಿಸುವಿಕೆಯಿಂದ ಉಂಟಾದ ಪರಿವರ್ತನೆಯಿಂದಲೇ ವ್ಯಕ್ತಿತ್ವದ ತಳಹದಿ ರಕ್ಷಿಸಲ್ಪಟ್ಟು ಶಾಶ್ವತವಾದೀತು; ಇದರಿಂದಲೇ ಲೋಕದಲ್ಲಿ ಸುಭದ್ರ ಪ್ರಗತಿ ನೆಲೆಸೀತು.

ವ್ಯಕ್ತಿಯ ಶೀಲೋತ್ಕರ್ಷವನ್ನು ರಚಿಸಲು ನಾವು ಯಶಸ್ವಿಗಳಾದರೆ, ಸಮಾಜ ತನ್ನನ್ನು ತಾನೇ ರಕ್ಷಿಸಿಕೊಂಡೀತು. ಹೀಗೆ ಪ್ರಗತಿ ಸಾಧಿಸಿದ ವ್ಯಕ್ತಿಗಳಿಗೆ ಸಮಾಜ ವ್ಯವಸ್ಥೆಯನ್ನು ಒಪ್ಪಿಸಲು ನನ್ನ ಪೂರ್ಣ ಇಚ್ಛೆ.

ವ್ಯಕ್ತಿಸ್ವಾತಂತ್ರ್ಯವನ್ನು ನಾನು ಶ್ರೇಷ್ಠವಾಗಿ ಎಣಿಸುವುದು ನಿಜವಾದರೂ, ಮಾನವ, ಪ್ರಧಾನವಾಗಿ ಸಮಾಜಜೀವಿ ಎಂಬುದನ್ನು ಮರೆಯಬಾರದು. ಸಾಮಾಜಿಕ ಪ್ರಗತಿಯ ಆವಶ್ಯಕತೆಗಳಿಗೆ ಅನುಗುಣವಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕಲಿಯುತ್ತಾ, ಅವನು ಇಂದಿನ ಹಂತಕ್ಕೆ ಏರಿದಾನೆ.

ಅಂಕೆಯಿಲ್ಲದ ವ್ಯಕ್ತಿಭಾವವು ಅರಣ್ಯದ ಪ್ರಾಣಿಯ ರೀತಿ. ವ್ಯಕ್ತಿಸ್ವಾತಂತ್ರ್ಯಕ್ಕೂ, ಸಾಮಾಜಿಕ ನಿಗ್ರಹಕ್ಕೂ ಮಧ್ಯಮ ಸ್ಥಿತಿಯನ್ನು ಕಂಡು ಹಿಡಿಯಲು ನಾವು ಅರಿತಿದೇವೆ. ಇಡೀ ಸಮಾಜ ಕಲ್ಯಾಣದ ದೃಷ್ಟಿಯಿಂದ, ವ್ಯಕ್ತಿಯು, ಇಚ್ಛಾಪೂರ್ವಕವಾಗಿ, ಸಾಮಾಜಿಕ ನಿಗ್ರಹಕ್ಕೆ ಒಳಗಾಗುವುದರಿಂದ, ಸಮಾಜದ ಸದಸ್ಯರಲ್ಲೊಬ್ಬನಾದ ಅವನಿಗೂ ಮತ್ತು ಸಮಾಜಕ್ಕೂ ಒಳಿತಾಗುವುದು.

ಮಾನವನ ಕುಟುಂಬದ ಪ್ರತಿಯೊಬ್ಬ ಪುರುಷನಿಗೂ, ಮಹಿಳೆಗೂ, ಅವರೆಷ್ಟೇ ಶಾರೀರಕವಾಗಿ ಅಶಕ್ತರಾಗಿದ್ದರೂ, ತಮ್ಮ ಆತ್ಮಗೌರವ ಮತ್ತು

ಸ್ವಾತಂತ್ರ್ಯಗಳ ರಕ್ಷಣೆಮಾಡಿಕೊಳ್ಳಬೇಕೆಂಬ ಮನೋದಾರ್ಢ್ಯವನ್ನುಂಟು ಮಾಡಲು ನಾ ಯಶಸ್ವಿಯಾದರೆ, ನನ್ನ ಕಾರ್ಯ ಮುಗಿದಂತೆಯೆ.

ಮಾನವನ ಮನಸ್ಸಾಗಲೀ ಮಾನವ ಸಮಾಜವಾಗಲೀ ಅನ್ಯೋನ್ಯ ಪ್ರಭಾವವಿಲ್ಲದಂಥ ಸಾಮಾಜಿಕ, ರಾಜಕೀಯ, ಮತ್ತು ಧಾರ್ಮಿಕ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿಲ್ಲವೆಂದು ನನ್ನ ವಾದ. ಎಲ್ಲವೂ ಪರಸ್ಪರ ಪ್ರತಿಕ್ರಿಯೆಗಳಿಗೊಳಪಟ್ಟವೆ. (ಯಂಗ್ ಇಂಡಿಯಾ : ೨-೩-೨೨)

ವ್ಯಕ್ತಿಯೊಬ್ಬನ ಮೇಲ್ಮೆಯನ್ನೇ ಗುರಿಯಾಗಿ ಉಳ್ಳ ಅಥವಾ ಅದರಿಂದಲೇ ತೃಪ್ತಿಹೊಂದುವ ಯಾವ ಒಂದು ಧರ್ಮವೂ ಇಲ್ಲ. ಹಾಗೆಯೇ, ಅಪರಾಧ ಮಾಡಿದ ವ್ಯಕ್ತಿಯೊಬ್ಬನನ್ನೇ ಅಲ್ಲದೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅನೇಕ ಮಂದಿಯ ಮೇಲೂ ಪರಿಣಾಮ ಮಾಡದೆ ಇರುವ ಯಾವ ಒಂದು ನೈತಿಕ ಅಪರಾಧವೂ ಇಲ್ಲ. ಆದುದರಿಂದ ಒಬ್ಬ ವ್ಯಕ್ತಿ ಒಳ್ಳೆಯವನೋ ಕೆಟ್ಟವನೋ ಎಂಬುದು ಅವನೊಬ್ಬನಿಗೇ ಸಂಬಂಧಿಸಿದುದಲ್ಲ; ಅದು ನಿಜವಾಗಿಯೂ ಜನ ಸಮುದಾಯಕ್ಕೆ ಸಂಬಂಧಿಸಿದುದು ; ಅಷ್ಟೇ ಅಲ್ಲ, ಪ್ರಪಂಚವೆಲ್ಲಕ್ಕೂ ಸಂಬಂಧಿಸಿದುದು. (ನೀತಿಧರ್ಮ : ಪು. ೫೫)

ಜನಾಂಗಗಳು ಹೊಂದಿಕೊಂಡಿರಲು ಕಾರಣ, ಅವುಗಳನ್ನೊಳಗೊಂಡಿರುವ ವ್ಯಕ್ತಿಗಳಲ್ಲಿರುವ ಪರಸ್ಪರ ಅಭಿಮಾನ. ಎಂದಾದರೊಂದು ದಿನ ನಾವು ರಾಷ್ಟ್ರಧರ್ಮವನ್ನು ವಿಶ್ವಧರ್ಮವನ್ನಾಗಿ ವಿಸ್ತರಿಸಲೇಬೇಕು, ಕುಟುಂಬ ಧರ್ಮವನ್ನು ರಾಷ್ಟ್ರಧರ್ಮವನ್ನಾಗಿ—ವಿಸ್ತೃತ ಕುಟುಂಬ ಧರ್ಮವನ್ನಾಗಿ—ಮಾಡಿರುವಂತೆಯೇ. (ಯಂಗ್ ಇಂಡಿಯಾ : ೨-೩-೨೨)

ಮಾನವ ಸಮಾಜಜೀವಿ. ಅವನು ಸಮಾಜದೊಡನೆ ಪರಸ್ಪರ ಸಂಬಂಧವಿಲ್ಲದೆ ವಿಶ್ವದೊಡನೆ ತನ್ನ ಐಕ್ಯತೆಯನ್ನಾಗಲೀ, ತನ್ನ ಆತ್ಮ ದುರಭಿಮಾನದ ದಮನವನ್ನಾಗಲೀ ಸಾಧಿಸಲಾರ. ಒಬ್ಬ ವ್ಯಕ್ತಿ ತನ್ನ ಸಹಜೀವಿಗಳಿಂದ ಎಲ್ಲ ವಿಧಗಳಲ್ಲಿಯೂ ಸ್ವತಂತ್ರನಾಗಿಡಲ್ಪಟ್ಟರೆ, ಅಥವಾ ಆ ರೀತಿ ಇರಲು ಪ್ರಯತ್ನಪಟ್ಟರೆ, ಆತನು ತುಂಬ ಗರ್ವಿಯೂ, ದುರಭಿಮಾನಿಯೂ ಆಗಿ ಪ್ರಪಂಚಕ್ಕೆ ನಿಜವಾದ ಹೊರೆಯೂ ಅನಿಷ್ಟಕರವಾದ ತೊಂದರೆಯೂ ಆದಾನು. ಸಾಮಾಜಿಕ ಅವಲಂಬನೆ ಅವನಿಗೆ ಮಾನವತಾ ಗುಣವನ್ನು

ಕಲಿಸೀತು. ವ್ಯಕ್ತಿ ತನ್ನ ಬಹುತೇಕ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳಲು ಶಕ್ತನಾಗಿರಬೇಕೆಂಬುದೇನೋ ನನಗೆ ನಿಸ್ಸಂಶಯವೆನಿಸಿದರೂ, ಅದೇ ಸ್ವಪರಿಪೂರ್ಣತೆ ವ್ಯಕ್ತಿಯನ್ನು ಸಮಾಜದಿಂದ ಪ್ರತ್ಯೇಕಗೊಳಿಸುವಷ್ಟು ದೂರ ಹೋಗುವುದಾದರೆ ಅದೊಂದು ಪಾಪವೆನಿಸೀತು. ಹತ್ತಿಯನ್ನು ಬೆಳೆದು ನೂಲನ್ನು ತೆಗೆಯುವವರೆಗಿನ ಎಲ್ಲ ಕ್ರಿಯೆಗಳಲ್ಲಿಯೂ ಒಬ್ಬ ವ್ಯಕ್ತಿ ಸ್ವಪರಿಪೂರ್ಣನಾಗಲು ಸಾಧ್ಯವಿಲ್ಲ. ಅವನು ಒಂದಲ್ಲ ಒಂದು ಹಂತದಲ್ಲಿ ತನ್ನ ಕುಟುಂಬದವರ ಸಹಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ, ತನ್ನ ಸ್ವಂತ ಕುಟುಂಬದಿಂದ ಸಹಾಯವನ್ನು ಪಡೆಯಬಹುದಾದರೆ, ನೆರೆಯವರಿಂದ ಏಕೆ ಪಡೆಯಬಾರದು? ಹಾಗಿಲ್ಲವಾದರೆ, 'ವಸುಧೈವ ಕುಟುಂಬಕಂ' ಎಂಬ ಮಹಾಮಾತಿನ ಅರ್ಥವಾದರೂ ಏನು?

(ಮಹಾತ್ಮರ ಮನೋರಂಗ: ಪು. ೧೩೬)

ಆತ್ಮ ಕರ್ತವ್ಯ, ಸಾಂಸಾರಿಕ ಕರ್ತವ್ಯ, ದೇಶಕ್ಕೂ ಮತ್ತು ಪ್ರಪಂಚಕ್ಕೂ ಸಲ್ಲಬೇಕಾದ ಕರ್ತವ್ಯ, ಇವುಗಳು ಒಂದರಿಂದ ಮತ್ತೊಂದು ಸ್ವತಂತ್ರವಾದುವಲ್ಲ. ತನಗೋ ತನ್ನ ಕುಟುಂಬಕ್ಕೋ ಹಾನಿ ಮಾಡಿಕೊಂಡು ದೇಶಕ್ಕೆ ಒಳ್ಳೆಯದನ್ನು ಮಾಡಲಾರ ವ್ಯಕ್ತಿ; ಹಾಗೆಯೇ, ಅವನು ವಿಶಾಲ ಪ್ರಪಂಚಕ್ಕೆ ಹಾನಿಯನ್ನುಂಟುಮಾಡಿ, ತನ್ನ ದೇಶಕ್ಕೆ ಸೇವೆ ಎಸಗಲಾರ. ಇದರ ಅಂತಿಮ ವಿಚಾರವೆಂದರೆ ಕುಟುಂಬದ ಉಳಿವಿಗಾಗಿ ನಾವು ಅಳಿಯಬೇಕು; ಜನಪದದ ಉಳಿವಿಗಾಗಿ ಕುಟುಂಬ ಅಳಿಯಬೇಕು; ಜಗತ್ತಿನ ಉಳಿವಿಗಾಗಿ ಜನಪದ ಅಳಿಯಬೇಕು.

(ಮಹಾದೇವ ದೇಸಾಯರ ದಿನಚರಿ ಪು: ೨೮೭)

ವ್ಯಕ್ತಿಗಳಿಗೆ ಅನ್ವಯಿಸುವ ಸತ್ಯವೇ ರಾಷ್ಟ್ರಗಳಿಗೂ ಅನ್ವಯಿಸುತ್ತದೆ.

(ಮಹಾತ್ಮರ ಮನೋರಂಗ: ಪು. ೭೯)

ಸಮಾಜ ಮತ್ತು ಗತಿಶೀಲ ಅಹಿಂಸೆ

ಇತಿಹಾಸದ ಲಿಖಿತ ಆಧಾರ ದೊರಕುವ ಕಾಲದಿಂದ ಹಿಡಿದು ನಮ್ಮ ಕಾಲದವರೆಗೆ ನಮ್ಮ ದೃಷ್ಟಿಯನ್ನು ಹಾಯಿಸಿದರೆ, ಮಾನವನು ಒಂದೇ ಸಮನಾಗಿ ಅಹಿಂಸಾ ಪಥದಲ್ಲಿ ಪ್ರಗತಿ ಹೊಂದುತ್ತಿರುವುದು ಗೋಚರವಾಗುತ್ತದೆ. ನಮ್ಮ ಅತ್ಯಂತ ದೂರದ ಪೂರ್ವಜರು ನರಭಕ್ಷಕರಾಗಿದ್ದರು. ಕಾಲ ಗತಿಸಿದಂತೆ ಅದು ಅವರಿಗೆ ಬೇಸರವಾಗಿ ಬೇಟೆಯಾಡಿ ಜೀವಿಸಲುಪಕ್ರಮಿಸಿದರು. ಮುಂದೆ ಹೋದಂತೆ, ಬೇಟೆಗಾರನಾಗಿ ಅಲೆದು ಜೀವಿಸುವುದು ಲಜ್ಜೆ ಎನಿಸಿತು. ಆದುದರಿಂದ ತನ್ನ ಆಹಾರಕ್ಕಾಗಿ ಪ್ರಧಾನವಾಗಿ ಭೂಮಾತೆಯನ್ನಾಶ್ರಯಿಸಿ ವ್ಯವಸಾಯವನ್ನು ಕೈಗೊಂಡನು. ಈ ರೀತಿ ಸ್ಥಳದಿಂದ ಸ್ಥಳಕ್ಕೆ ಚಲಿಸುವ ವೃತ್ತಿಯನ್ನು ಬಿಟ್ಟು, ನಾಗರಿಕ, ಸ್ಥಿರ ಜೀವನದಲ್ಲಿ ನೆಲೆಸಿದನು; ಗ್ರಾಮಗಳನ್ನೂ ಪಟ್ಟಣಗಳನ್ನೂ ಸ್ಥಾಪಿಸಿದನು; ಕೌಟುಂಬಿಕನಾಗಿದ್ದವನು, ಒಂದು ಜನ ಸಮುದಾಯದ ಮತ್ತು ರಾಷ್ಟ್ರದ ಸದಸ್ಯನಾದನು. ಇವೆಲ್ಲವೂ ಪ್ರಗತಿಪರ ಅಹಿಂಸೆಯ ಮತ್ತು ಕಡಿಮೆಯಾಗುತ್ತಿರುವ ಹಿಂಸೆಯ ಲಕ್ಷಣಗಳು. ಈ ರೀತಿಯಾಗದಿದ್ದರೆ, ಮಾನವ ವರ್ಗವೂ ಹೆಸರಿಲ್ಲದಂತಾಗಿರುವ ಇತರ ಕೆಳಗಿನ ಜೀವವರ್ಗಗಳಂತೆ ಆಗಬೇಕಾಗಿತ್ತು.

ಮಾನವಕುಲ ಅಹಿಂಸೆಯ ಪಥದಲ್ಲಿ ಸ್ಥಿರವಾಗಿ ಮುಂದುವರಿದಿದೆ ಎಂಬುದನ್ನು ನಾವು ನಂಬುವುದಾದರೆ, ಅದು ಇನ್ನೂ ಮುಂದುವರಿಯಬೇಕೆಂಬುದು ತಾನಾಗಿಯೇ ಗೋಚರವಾಗುತ್ತದೆ. ಈ ಜಗತ್ತಿನಲ್ಲಿ ಯಾವುದೂ ಇದ್ದಂತೆ ಇರುವುದಿಲ್ಲ; ಎಲ್ಲವೂ ಗತಿಶೀಲ. ಪ್ರಗತಿ ಎನ್ನುವುದು ಇಲ್ಲವಾದರೆ, ಆಗ ಇಳಿಮುಖ ಅನಿವಾರ್ಯ.

(ಹರಿಜನ : ೧೧-೮-೪೦)

ಮಾನವ ಸಮಾಜವು ಆಧ್ಯಾತ್ಮ ದೃಷ್ಟಿಯಿಂದ ಒಂದು ನಿರಂತರ ಬೆಳವಣಿಗೆ; ವಿಕಾಸ. (ಯಂಗ್ ಇಂಡಿಯಾ : ೧೬-೯-೨೬)

ಅಹಿಂಸೆಯ ಬುದ್ಧಿಪೂರ್ವಕ ಒಪ್ಪಿಗೆಯ ಆಧಾರದಮೇಲೆ ಇಂದಿನ

ಸಮಾಜ ನಿಂತಿರದಿದ್ದರೂ, ಜಗತ್ತಿನ ಎಲ್ಲೆಡೆಯಲ್ಲಿಯೂ ಇರುವ ಮಾನವರು ಬದುಕಿರುವುದಾಗಲೀ, ತಮ್ಮ ಆಸ್ತಿಗಳನ್ನು ಸುರಕ್ಷಿತವಾಗಿ ಇಟ್ಟುಕೊಂಡಿರುವುದಾಗಲೀ, ಪರಸ್ಪರ ಸೈರಣೆಯಿಂದ. ಆ ರೀತಿ ಇರದಿದ್ದರೆ, ಅತ್ಯಂತ ಕಮ್ಮಿ ಮಂದಿ, ಅದರಲ್ಲಿಯೂ ಅತ್ಯಂತ ಕ್ರೂರ ಸ್ವಭಾವದವರು ಮಾತ್ರ ಬದುಕಿರುತ್ತಿದ್ದರು. ಆದರೆ, ವಸ್ತುಸ್ಥಿತಿ ಹಾಗಿಲ್ಲ. ಕುಟುಂಬಗಳು ಪ್ರೇಮಪಾಶದಿಂದ ಬಂಧಿತವಾಗಿವೆ; ಹಾಗೆಯೇ ನಾಗರಿಕವೆಂದು ಕರೆಯಲ್ಪಡುವ ಜನಸಮುದಾಯವೂ ಮತ್ತು ರಾಷ್ಟ್ರಗಳೂ. (ಹರಿಜನ : ೨೨-೩-೪೨)

ಸಮಾಜಸೇವೆ - ಸುಧಾರಣೆ

ಮಾನವನ ಅಂತಿಮ ಗುರಿ ದೈವಸಾಕ್ಷಾತ್ಕಾರ. ಈ ಅಂತಿಮ ಗುರಿ ಭಗವದ್ದರ್ಶನದಿಂದ ಅವನ ಸಾಮಾಜಿಕ, ರಾಜಕೀಯ, ಧಾರ್ಮಿಕ—ಎಲ್ಲ ಕ್ರಿಯೆಗಳಿಗೂ ದಾರಿ ಕಾಣುವಂತಾಗಬೇಕು. ಎಲ್ಲ ಮಾನವ ಜೀವಿಗಳ ಪ್ರತ್ಯಕ್ಷ ಸೇವೆ ಈ ಪ್ರಯತ್ನದ ಒಂದು ಆವಶ್ಯಕ ಅಂಶವೆನಿಸುತ್ತದೆ. ಏಕೆಂದರೆ, ಭಗವದ್ದರ್ಶನ ಮಾಡುವ ಒಂದೇ ಮಾರ್ಗವೆಂದರೆ, ಸೃಷ್ಟಿಯಲ್ಲಿ ಅವನನ್ನು ಕಂಡು, ಅದರೊಂದಿಗೆ ಐಕ್ಯವಾಗುವುದು. ಸರ್ವರ ಸೇವೆಯ ಮೂಲಕವೇ ಇದನ್ನು ಮಾಡಲು ಸಾಧ್ಯ. ಪೂರ್ಣದ ಒಂದು ಭಾಗ ನಾನು. ಮಾನವ ಕುಲವನ್ನು ಬಿಟ್ಟು ಬೇರೆ ಎಲ್ಲಿಯೂ ಅವನನ್ನು ಕಾಣಲಾರೆ. ನನ್ನ ದೇಶಬಾಂಧವರು, ನನ್ನ ಅತ್ಯಂತ ಸಮೀಪ ಬಂಧುಗಳು, ಅವರು ನಿಸ್ಸಹಾಯಕರೂ, ನಿರಾಧಾರಿಗಳೂ, ಜಡಸ್ವರೂಪರೂ ಆಗಿದ್ದಾರೆ. ಅವರ ಸೇವೆಯಲ್ಲಿ ನಾ ತಲ್ಲೀನನಾಗಬೇಕು. ಹಿಮಾಚಲದ ಗವಿಯೊಂದರಲ್ಲಿ ಭಗವಂತನನ್ನು ಕಾಣಲು ಸಾಧ್ಯವೆಂದು ನನಗೆ ಅನಿಸಿದರೆ, ಕೂಡಲೇ ನಾನು ಅಲ್ಲಿಗೆ ಹೋದೇನು. ಆದರೆ, ಮಾನವ ಕುಲವನ್ನು ಬಿಟ್ಟು ಅವನನ್ನು ನಾ ಕಾಣಲಾರೆನೆಂದು ಅರಿತಿದೇನೆ. (ಹರಿಜನ : ೨೯-೮-೩೬)

ಭಗವಂತನ, ಆದುದರಿಂದ ಮಾನವ ಕುಲದ, ಸೇವೆಯೇ ನನ್ನ ಮತ. (ಯಂಗ್ ಇಂಡಿಯಾ : ೨೩-೧೦-೨೪)

ಅನಾಸಕ್ತಿಯಿಂದ ಸೇವೆ ಸಲ್ಲಿಸುವುದೆಂದರೆ, ಪರರಿಗೆ ಮೆಚ್ಚಿಗೆ ಸೂಚಿಸುವುದಲ್ಲ. ಅದು ಆತ್ಮ ವಿಶ್ವಾಸವೇ. ಇದು ಒಂದು ಋಣ ತೀರಿಸುವುದರಿಂದ ನಮಗೆ ನಾವೇ ಹೇಗೆ ಸೇವೆ ಸಲ್ಲಿಸಿಕೊಳ್ಳುತ್ತೇವೆಯೋ, ನಮ್ಮ ಹೊರೆಯನ್ನು ಕಮ್ಮಿ ಮಾಡಿಕೊಂಡು, ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತೇವೋ ಹಾಗೆ. ಅಲ್ಲದೆ, ಒಳ್ಳೆಯದರಜೊತೆಗೆ ನಾವೆಲ್ಲರೂ ನಮ್ಮ ಸಾಧನ ಸಂಪತ್ತನ್ನು ಮಾನವ ಕುಲದ ಉಪಯೋಗಕ್ಕಾಗಿ ಮೀಸಲಿಡಲೇಬೇಕು.

(ಯರವಡಾಮಂದಿರ: ಪು. ೮೧)

ಮಾನವನು ತನ್ನ ಸಹ ಮಾನವರ ಕಲ್ಯಾಣಕ್ಕಾಗಿ ದುಡಿದಷ್ಟೂ ಹಿರಿತನ ಗಳಿಸಿಕೊಳ್ಳುವನು. (ನೀತಿಧರ್ಮ: ಪು. ೫೬)

ಸಾಮಾಜಿಕ ಸೇವೆ ಪ್ರಭಾವಯುತವಾಗಬೇಕಾದರೆ ಅದು ಮೌನವಾಗಿ ಆಚರಿಸಲ್ಪಡಬೇಕು. ಬಲಗೈ ಮಾಡಿದುದನ್ನು ಎಡಗೈ ಅರಿಯದಂತೆ ಮಾಡಿದಾಗ ಅದು ಶ್ರೇಷ್ಠವೆನಿಸುತ್ತದೆ.

(ಮಹಾತ್ಮ ಗಾಂಧೀಯವರ ಭಾಷಣಗಳು ಮತ್ತು ಲೇಖನಗಳು: ಪು. ೩೯೭)

ನನ್ನ ಸಮಾಜಸುಧಾರಣಾ ಕಾರ್ಯವು ಯಾವ ವಿಧದಲ್ಲಿಯೂ ರಾಜಕೀಯ ಕಾರ್ಯಕ್ಕಿಂತ ಕಮ್ಮಿಯಾದುದಾಗಲೀ ಅಧೀನವಾದುದಾಗಲೀ ಇರಲಿಲ್ಲ. ಇದರ ನಿಜಾಂಶ ಹೀಗೆ. ನನ್ನ ಸಾಮಾಜಿಕ ಕಾರ್ಯವು ಸ್ವಲ್ಪ ಮಟ್ಟಿಗಾದರೂ ರಾಜಕೀಯ ಕಾರ್ಯದ ನೆರವಿಲ್ಲದೆ ಅಸಾಧ್ಯವೆಂದು ಕಂಡು ಬಂದಾಗ, ಅದು ಸಾಮಾಜಿಕ ಕಾರ್ಯಕ್ಕೆ ಸಹಾಯಕವಾಗುವಷ್ಟುಮಾತ್ರ ಅದನ್ನು ಅವಲಂಬಿಸಿದೆ. ಆದುದರಿಂದ, ಈ ರೀತಿಯ ಸಾಮಾಜಿಕ ಸುಧಾರಣೆ ಅಥವಾ ಆತ್ಮಶುದ್ಧಿಯ ಕಾರ್ಯ ಕೇವಲ ರಾಜಕೀಯ ಕಾರ್ಯಕ್ಕಿಂತ ನನಗೆ ನೂರ್ಮಡಿ ಪ್ರಿಯವಾದುದೆಂದು ನಾ ಸೂಚಿಸಬಯಸುತ್ತೇನೆ.

(ಯಂಗ್ ಇಂಡಿಯಾ: ೬-೮-೩೧)

ನಮ್ಮಲ್ಲಿರುವ ದುಷ್ಟ ಸಾಮಾಜಿಕ ಪದ್ಧತಿಗಳು ಸ್ವರಾಜ್ಯದತ್ತ ನಮ್ಮ ಮುನ್ನಡೆಗೆ ಅಡಚಣೆಯಾಗಿವೆ ಎಂಬುದು ಎಷ್ಟು ಜಾಗ್ರತೆ ನಮಗೆ ಅರಿವಾಗುತ್ತದೆಯೋ ಅಷ್ಟೂ ಜಾಗ್ರತೆ ನಮಗೆ ಪ್ರಿಯವಾದ ಗುರಿಯ ಕಡೆ ನಮ್ಮ ಪ್ರಗತಿ ಸಾಗೀತು. ಸ್ವರಾಜ್ಯ ಪ್ರಾಪ್ತಿಯಾಗುವವರೆಗೂ ಸಾಮಾಜಿಕ

ಸುಧಾರಣೆಯನ್ನು ಮುಂದುವರಿಸಬೇಕೆಂಬ ವಾದ, ಸ್ವರಾಜ್ಯದ ಅರ್ಥವೇ ಅರಿವಿಲ್ಲವೆಂಬುದನ್ನು ಸೂಚಿಸುತ್ತದೆ. (ಯಂಗ್ ಇಂಡಿಯಾ : ೨೮-೬-೨೮)

ವ್ಯಕ್ತಿಗಳು ಸಾಮಾಜಿಕ ಸುಧಾರಣೆಯನ್ನು ಆರಂಭ ಮಾಡಲಿಲ್ಲವೆಂದೂ ಆದುದರಿಂದ ಇಡೀ ಸಮಾಜ ಪರಿವರ್ತನೆಗೆ ಸಿದ್ಧವಾಗುವವರೆಗೂ ಕಾಯಬೇಕೆಂಬ ವಾದ ಸಲ್ಲದ ವಾದ. ಧೀರವ್ಯಕ್ತಿಗಳು ಅಮಾನುಷ ಪದ್ಧತಿಗಳನ್ನೂ ಅಥವಾ ಆಚಾರಗಳನ್ನೂ ಉಲ್ಲಂಘಿಸಿದ ಹೊರತು ಎಂದೂ ಯಾವ ಸುಧಾರಣೆಯೂ ಕಾರ್ಯರೂಪಕ್ಕೆ ಬಂದಿಲ್ಲ. (ಹರಿಜನ : ೨೫-೭-೩೬)

ರಾಜಕೀಯ ದಾಸ್ಯದ ಪ್ರಧಾನ ರೋಗದಿಂದ ಪೀಡಿತವಾಗಿರುವ ಭಾರತ ಅದನ್ನು ವಿಸರ್ಜಿಸುವುದಕ್ಕಾಗಿ ಭೂ ಮತ್ತು ನೌಕಾ ಸೈನ್ಯಗಳು, ಹಣ ಮತ್ತು ರಾಜಕೀಯ ಚತುರತೆ ಈ ಬಗೆಯ ರಕ್ಷಣೋಪಾಯಗಳಿಂದ ಸುಭದ್ರವಾಗಿರುವ ಕೇಂದ್ರೀಕೃತ ಆಡಳಿತದ ವರ್ಗದ ಮೇಲೆ ಪ್ರತ್ಯಕ್ಷ ಹೋರಾಟ ನಡೆಸುತ್ತಿರುವವರಿಗೆ ಮಾತ್ರ ಮನ್ನಣೆ ನೀಡುತ್ತದೆ. ಇತರ ಕ್ಷೇತ್ರಗಳಲ್ಲಿ ರಾಜಕೀಯಕ್ಕಿಂತಲೂ ಯಾವ ವಿಧದಲ್ಲಿಯೂ ಕಮ್ಮಿ ಉಪಯುಕ್ತವಿಲ್ಲದೆ ನಿಸ್ವಾರ್ಥತೆಯಿಂದಲೂ, ಆತ್ಮತ್ಯಾಗದಿಂದಲೂ ಸೇವೆ ಸಲ್ಲಿಸುತ್ತಿರುವವರನ್ನು ಅದು ಸ್ವಾಭಾವಿಕವಾಗಿಯೇ ಅರಿತಿಲ್ಲ. (ಯಂಗ್ ಇಂಡಿಯಾ : ೧೨-೧೨-೨೦)

ಸಾಮಾಜಿಕ ಸುಧಾರಣೆಯು ರಾಜಕೀಯ ಸುಧಾರಣೆಗಿಂತ ಗುರುತರವಾದ ಕಾರ್ಯವೆಂದು ಬಹಳ ಕಾಲದಿಂದ ನಾ ನಂಬಿದೇನೆ. ರಾಜಕೀಯ ಸುಧಾರಣೆಗೆ ಸನ್ನಿವೇಶ ಸಿದ್ಧವಾಗಿದೆ. ಜನತೆ ಅದರಲ್ಲಿ ಆಸಕ್ತರಾಗಿದಾರೆ. ಆತ್ಮಶುದ್ಧಿ ಇಲ್ಲದಿದ್ದರೂ ಅದು ಸಾಧ್ಯವೆಂಬ ಭಾವವೂ ಪ್ರಚಲಿತವಿದೆ. ಸಾಮಾಜಿಕ ಸುಧಾರಣೆಯಲ್ಲಿ ಜನರ ಆಸಕ್ತಿ ಬಹಳ ಕಡಿಮೆ. ಇದಕ್ಕಾಗಿ ನಡೆವ ಚಳುವಳಿಯ ಪರಿಣಾಮ ಪ್ರಭಾವಯುತವಾಗಿ ಕಂಡುಬರುವುದಿಲ್ಲ. ಶ್ಲಾಘನೆಗೂ, ಸ್ತುತಿಗೂ ಅದರಲ್ಲಿ ಅವಕಾಶ ಕಡಿಮೆ. ಆದುದರಿಂದ, ಸಮಾಜ ಸುಧಾರಕರು ಸ್ವಲ್ಪಕಾಲದವರೆಗೆ ಹೀಗೆ ತೆವಳುತ್ತ ಮುಂದುವರಿಯಬೇಕು ಶಾಂತರಾಗಿರಬೇಕು ; ಬಹಳ ಕಮ್ಮಿ ಪ್ರಮಾಣವಾಗಿ ಕಂಡುಬರುವ ಪರಿಣಾಮಗಳಿಂದಲೇ ತೃಪ್ತರಾಗಬೇಕು. (ಯಂಗ್ ಇಂಡಿಯಾ : ೬-೯-೨೮)

ಸಮಾಜದ ರಾಜಕೀಯ, ಆರ್ಥಿಕ ಮತ್ತು ನೈತಿಕ—ಈ ವಿಧವಾದ ಎಲ್ಲ ವ್ಯಾಧಿಗಳನ್ನೂ ಸತ್ಯಾಗ್ರಹ ಕಳೆಯಬಲ್ಲದು. (ಹರಿಜನ : ೨೦-೭-೪೭)

ನಾನು ಪೂರ್ಣವಾಗಿ ಸಮಾಜ ಸುಧಾರಕ. ಆದರೆ, ನನ್ನ ಉತ್ಸಾಹವು ಹಿಂದೂ ಧರ್ಮದ ಯಾವ ಪ್ರಧಾನ ಅಂಶವನ್ನೂ ಎಂದಿಗೂ ನಿರಾಕರಿಸುವಂತೆ ಮಾಡಿಲ್ಲ.

(ಮಹಾತ್ಮಾ ಗಾಂಧೀ—ಪ್ರಬಂಧಗಳು ಮತ್ತು ಚಿಂತನೆಗಳು : ಪು. ೨೧)

ಪಾಶ್ಚಾತ್ಯ ಸಾಮಾಜಿಕ ವ್ಯವಸ್ಥೆ ಮತ್ತು ಪ್ರಾಚ್ಯ ಸಂಸ್ಥೆಗಳು

ಪಾಶ್ಚಾತ್ಯ ದೇಶಗಳಿಂದ ನಮಗೆ ಬಂದಿರುವ ಆಕರ್ಷಕ ನುಡಿಗಳಿಗೂ ದುಷ್ಪ್ರೇರಕ ಸೂತ್ರಗಳಿಗೂ ನಾವು ಭ್ರಾಂತರಾಗದಿರೋಣ. ನಮ್ಮದೇ ನಿಶ್ಚಿತವಾದ, ಸ್ಪಷ್ಟವಾದ, ಪ್ರಾಚ್ಯಪರಂಪರೆಯ ಅಭಿಪ್ರಾಯಗಳಿಲ್ಲವೆ? ಬಂಡವಾಳ—ದುಡಿಮೆ, ಈ ಸಮಸ್ಯೆಗೆ ನಮ್ಮದೇ ಆದ ಉತ್ತರವನ್ನು ಕಂಡು ಹಿಡಿಯಲು ನಮಗೆ ಸಾಧ್ಯವಿಲ್ಲವೆ? ವರ್ಣಾಶ್ರಮಧರ್ಮಪದ್ಧತಿಯು ಉಚ್ಚ ಮತ್ತು ನೀಚ ಎಂಬುದಕ್ಕೂ, ಬಂಡವಾಳ ಮತ್ತು ದುಡಿಮೆ ಎಂಬುದಕ್ಕೂ, ಇರುವ ವ್ಯತ್ಯಾಸವನ್ನು ಸಮರಸಗೊಳಿಸುವ ಸಾಧನವಲ್ಲದೆ ಮತ್ತೇನು? ಈ ವಿಷಯದಮೇಲೆ ಪಶ್ಚಿಮದಿಂದ ಬಂದಿರುವುವೆಲ್ಲವೂ ಹಿಂಸೆಯ ಕುಂಚದಿಂದ ದೋಷಯುಕ್ತವಾಗಿ ಬಣ್ಣಿಸಲ್ಪಟ್ಟಿವೆ. ಇದರ ಪರಿಣಾಮವಾಗಿ ಉಂಟಾಗಿರುವ ವಿನಾಶ ನನ್ನ ದೃಷ್ಟಿಗೆ ಗೋಚರವಾಗಿರುವುದರಿಂದ, ಇದನ್ನು ನಾನು ಆಕ್ಷೇಪಿಸುತ್ತೇನೆ. ಪಾಶ್ಚಾತ್ಯ ದೇಶಗಳಲ್ಲಿಯೂ ಹೆಚ್ಚು ವಿಚಾರಪರರಾದವರು ತಮ್ಮ ಸಾಮಾಜಿಕ ವ್ಯವಸ್ಥೆ ತಮ್ಮನ್ನು ಯಾವ ಕಮರಿಯ ಕಡೆಗೆ ಒಯ್ಯುತ್ತದೆಯೋ ಎಂದು ದಿಗ್ಭ್ರಮೆಗೊಂಡಿದಾರೆ. ಹಿಂಸೆ ಮತ್ತು ಶೋಷಣೆ ಇವುಗಳ ವಿಷಚಕ್ರದಿಂದ ಪಾರಾಗುವ ಮಾರ್ಗವನ್ನು ಕಂಡುಹಿಡಿಯಲೆತ್ನಿಸುತ್ತಿರುವ ನನ್ನ ಅವಿಶ್ರಾಂತ ಪ್ರಯತ್ನಕ್ಕೆ ಪುಟಕೊಟ್ಟಿರುವ ಪಾಶ್ಚಾತ್ಯ ಪ್ರಭಾವಗಳಿಗೆ ನಾನು ಕೃತಜ್ಞನಾಗಿದ್ದೇನೆ. ನಾನು ಪಾಶ್ಚಾತ್ಯ ಸಾಮಾಜಿಕ

ವ್ಯವಸ್ಥೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿದೇನೆ. ಅಲ್ಲಿ ಕಂಡು ಬರುವ ಆತ್ಮಬೇಗೆಯ ಹಿಂಬದಿಯಲ್ಲಿ ಸತ್ಯಾನ್ವೇಷಣೆಯ ತಳಮಳವೊಂದಿದೆ. ಅದನ್ನು ನಾ ಮೆಚ್ಚುತ್ತೇನೆ. ವೈಜ್ಞಾನಿಕ ವಿಮರ್ಶಾಕ್ರಮದಿಂದ ನಮ್ಮ ಪ್ರಾಚ್ಯ ಸಂಸ್ಥೆಗಳನ್ನೂ ಪರಿಶೀಲಿಸೋಣ. ಇದರ ಫಲವಾಗಿ, ಲೋಕವು ಕನಸಿನಲ್ಲೂ ಕಾಣದಿದ್ದಂಥ ಹೆಚ್ಚು ನಿಜವಾದ ಸಮಾಜವಾದವನ್ನೂ, ಹೆಚ್ಚು ನಿಜವಾದ ಸಾಮ್ಯವಾದವನ್ನೂ ನಾವು ಕಂಡೇವು. ಜನತೆಯ ಬಡತನದ ಸಮಸ್ಯೆಗೆ ಪಾಶ್ಚಾತ್ಯ ಸಮಾಜವಾದ, ಸಾಮ್ಯವಾದಗಳೇ ಅಂತಿಮ ಪರಿಹಾರವೆಂದು ಭಾವಿಸುವುದು ನಿಜವಾಗಿಯೂ ತಪ್ಪು.

(ಅಮೃತ ಬಜಾರ್ ಪತ್ರಿಕಾ: ೩-೮-೩೪)

ನಾವು ಪ್ರಾಚ್ಯರು. ಪಾಶ್ಚಾತ್ಯ ವಿಧಾನವನ್ನು ತ್ಯಜಿಸಿ, ಪ್ರಾಚ್ಯ ವಿಧಾನಗಳಿಂದಲೇ ನಮ್ಮ ಗುರಿ ಎಡೆಗೆ ನಡೆಯೋಣ. ಭಾರತದ ಸುಂದರವಾದ ರೀತಿ–ನೀತಿಗಳಿಂದಲೇ ಬೆಳೆದು, ಭಾರತಿಯ ಸತ್ವಕ್ಕನುಗುಣವಾಗಿ ಬೇರೆ ಬೇರೆ ಆದರ್ಶಗಳನ್ನುಳ್ಳ ಜನಾಂಗಗಳೊಡನೆ ಸ್ನೇಹ ಬೆಳೆಸೋಣ. ನಿಜವಾಗಿಯೂ ಭಾರತವು, ತನ್ನ ಪ್ರಾಚ್ಯ ಸಂಸ್ಕೃತಿಯ ಮೂಲಕವೇ ಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳೊಡನೆ ಸ್ನೇಹಮಯ ಸಂಬಂಧವನ್ನು ಸ್ಥಾಪಿಸಬಲ್ಲದು.

ಬಹು ದೀರ್ಘ ಕಾಲದಿಂದ, ಬೇರೂರಿ ಬಂದ ಸಾಮಾಜಿಕ ಪದ್ಧತಿಯೊಂದನ್ನು ಒಂದೇ ಪೆಟ್ಟಿಗೆ ನಾಶಮಾಡಲು ಸಾಧ್ಯವಿಲ್ಲ; ಅದಕ್ಕೆ ಸಹಿಷ್ಣುತೆಯೂ ತಾಳ್ಮೆಯೂ ಆವಶ್ಯಕ.

ನಮ್ಮ ಸಮಾಜದ ಹಿರಿಯರು ಕಾಲದ ಸೂಚನೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸುವರೆ? ಒಂದು ಪದ್ಧತಿಯನ್ನು ಸಮಾಜ, ದೇಶ, ಇವುಗಳ ಶುದ್ಧೀಕರಣಮಾಡುವ ಸಾಧನವನ್ನಾಗಿ ಉಪಯೋಗಿಸದೆ, ಇನ್ನೆಷ್ಟು ಕಾಲ ಆದಕ್ಕೇ ಗುಲಾಮರಾಗಿದ್ದಾರು? ತಮ್ಮ ಮಕ್ಕಳು ಕಲಿಯುತ್ತಿರುವ ಜ್ಞಾನವನ್ನು ವ್ಯವಹಾರದಲ್ಲಿ ಪ್ರಯೋಗ ಮಾಡದಂತೆ ತಡೆದಿಟ್ಟಾರು? ಒಳಿತು ಕೆಡುಕಿನ ವಿಷಯದಲ್ಲಿ ತಮ್ಮ ಭಾವನೆಯನ್ನು ಇಂದಿನ ಚೇತನರಹಿತ ಸ್ಥಿತಿಯಿಂದ ಎಂದು ಪಾರು ಮಾಡಿಕೊಂಡಾರು? ಅವರು ಎಂದು ನಿಜವಾದ ‘ಮಹಾಜನರೇ ಆದಾರು?’

(ಯಂಗ್ ಇಂಡಿಯಾ: ೩-೧-೨೮)

ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ಬಲಪ್ರಯೋಗ ಮಾಡಿ ಸ್ಥಾಪಿಸಲು ಸಾಧ್ಯವಿಲ್ಲ; ಅದು ರೋಗಕ್ಕಿಂತ ಹೆಚ್ಚು ಕೆಟ್ಟದಾದ ಚಿಕಿತ್ಸೆಯಾಗಿ ಪರಿಣಮಿಸೀತು. ನಾನು ಸುಧಾರಣೆಗಾಗಿ ತವಕಪಡುತ್ತೇನೆ. ಪೂರ್ಣವೂ, ಮೂಲಭೂತವೂ ಆದ ಸಮಾಜದ ಪುನರ್ರಚನೆಯೇ ನನ್ನ ಆಸೆ; ಆದರೆ, ಅದು ವಿಕಾಸಾತ್ಮಕವಾಗಿರಬೇಕು; ಹಿಂಸಾತ್ಮಕವಾಗಿ ಮೇಲೆ ಹೇರಿದುದಾಗಬಾರದು. (ಅಮೃತ ಬಜಾರ್ ಪತ್ರಿಕ : ೩-೮-೩೪)

ಪಾಶ್ಚಾತ್ಯರಿಂದ ನಾವು ಅರಿಯಬಹುದಾದ ಅನೇಕ ವಿಷಯಗಳಿವೆ ಎಂಬುದನ್ನು ನಾನು ನಮ್ರತೆಯಿಂದ ಒಪ್ಪಿಕೊಳ್ಳುತ್ತೇನೆ. ಜ್ಞಾನವು ನಮ್ಮ ಖಂಡದ ಅಥವಾ ಜನಾಂಗದ ಏಕ–ಸ್ವಾಮ್ಯ ವಸ್ತುವಲ್ಲ. ಏಷ್ಯಾ ಖಂಡದವರು, ಪಾಶ್ಚಾತ್ಯರಿಂದ ಬರುವುದೆಲ್ಲವನ್ನೂ ತಾರತಮ್ಯ ಜ್ಞಾನವಿಲ್ಲದೆ, ವಿಚಾರ ಶೂನ್ಯತೆಯಿಂದ ಅನುಕರಿಸಲು ಮಾತ್ರ ಯೋಗ್ಯರೆಂಬ ಪ್ರತಿಷ್ಠಾಯುತ ವಾದದಮೇಲೆ ನಾ ತೋರಿಸುವ ಪ್ರತಿಭಟನೆಯೇ, ಪಾಶ್ಚಾತ್ಯ ನಾಗರಿಕತೆಯ ಬಗೆಗೆ ನನ್ನ ನಿಜವಾದ ಪ್ರತಿಭಟನೆ. ಭಾರತವು, ತನ್ನ ನಾಗರಿಕತೆಯ ಮೇಲೆ, ಅದು ಎಷ್ಟೇ ಅಪರಿಪೂರ್ಣವಾಗಿದ್ದರೂ—ಅನ್ಯಾಯವಾಗಿ ಮಾಡಲ್ಪಟ್ಟ ದಾಳಿಯ ಅಗ್ನಿಪರೀಕ್ಷೆಯನ್ನು ತಾಳ್ಮೆಯಿಂದ ಸಹಿಸಿಕೊಂಡರೆ, ಅದು ವಿಶ್ವದ ಶಾಂತಿಗೂ, ಸುಭದ್ರ ಪ್ರಗತಿಗೂ, ಸಹಾಯಕವಾದೀತೆಂದು ನಾನು ನೆರೆನಂಬಿದೇನೆ. (ಯಂಗ್ ಇಂಡಿಯಾ : ೧೧-೮-೨೭)

'ಪ್ರಾಚೀನ' ಎಂಬುದಾಗಿ ಕರೆಯಲ್ಪಡುವ ಎಲ್ಲದರ ತಾರತಮ್ಯ ಜ್ಞಾನರಹಿತ, ಅಂಧ ಶ್ರದ್ಧೆಯ, ಆರಾಧಕನಲ್ಲ ನಾನು. ಎಷ್ಟೇ ಪ್ರಾಚೀನವೆನಿಸಿದುದಾದರೂ, ಅದು ಕೆಟ್ಟದು ಅಥವಾ ಅನೀತಿಯುತವೆನಿಸಿದುದಾದರೆ ಅದನ್ನು ತೊಡೆದುಹಾಕಲು ನಾ ಎಂದಿಗೂ ಹಿಂದೆಗೆಯುವುದಿಲ್ಲ. ಆದರೆ, ಆದಕ್ಕೆ ಇದೊಂದು ಪರಿಮಿತಿ ಮಾತ್ರ ಉಂಟು. ನಾನು ಪ್ರಾಚೀನ ಪದ್ಧತಿಗಳ ಪ್ರೇಮಿ ಎಂಬುದನ್ನು ಮುಚ್ಚು–ಮರೆ ಇಲ್ಲದೆ ಒಪ್ಪಿಕೊಳ್ಳುತ್ತೇನೆ. ಜನರು, ಎಲ್ಲ ಪ್ರಾಚೀನ ಪದ್ಧತಿಗಳನ್ನೂ ತಮ್ಮ ಬಾಳಿನಲ್ಲಿ ನಿರಾಕರಿಸಿ, ಆಧುನಿಕವೆಂಬುದೆಲ್ಲವನ್ನೂ ಹುಚ್ಚುತನದಿಂದ ಅರಸುತ್ತಿರುವುದನ್ನು ಯೋಚಿಸಿದರೆ, ನನಗೆ ತುಂಬ ವ್ಯಥೆಯಾಗುತ್ತದೆ.

(ಮಹಾತ್ಮರ ಮನೋರಂಗ : ಪು. ೧೭೩.)

ಭಾಗ ೨

ಹಿಂದೂ ಸಮಾಜದ ಧಾರ್ಮಿಕ ಹಿನ್ನೆಲೆ

★

ನಾವಿಂದು ಕಾಣುತ್ತಿರುವದು ಶುದ್ಧ ಹಿಂದೂ ಧರ್ಮವಲ್ಲ; ಆದರೆ, ಬಹು ವೇಳೆ ಅದರ ವಿಡಂಬನೆ. ಹಾಗಿಲ್ಲದಿದ್ದರೆ, ಅದರ ಪರವಾಗಿ ನಾನು ವಾದಿಸಬೇಕಾಗಿರಲಿಲ್ಲ. ಅದು ತಾನೇ ವ್ಯಕ್ತವಾಗಬಲ್ಲದು. ಹೇಗೆ ಸ್ವತಃ ನಾನು ಸಂಪೂರ್ಣ ಶುದ್ಧನಾಗಿದ್ದರೆ ಅದನ್ನು ನಿಮಗೆ ಒಡನುಡಿಯುವ ಅವಶ್ಯಕತೆಯಿರಲಿಲ್ಲವೋ ಹಾಗೆ ದೇವನು ಬಾಯ್ಬಿಟ್ಟು ಮಾತನಾಡುವದಿಲ್ಲ. ಮಾನವನು ದೇವನ ಸಮೀಪವರ್ತಿಯಾದಷ್ಟೂ ಅವನಂತಾಗುವನು. ಒಳಗಿರುವ ಆತ್ಮನಿಗೆ ನನ್ನ ದೇಹ ಒಂದು ಉಪಾಧಿ ಅಥವಾ ಪರಿಸೀಮನ ವೆಂದು ಹಿಂದೂ ಧರ್ಮವು ನನಗೆ ಬೋಧಿಸಿದೆ.

ಭೌತಿಕ ವಿಷಯಗಳಲ್ಲಿ ಪಶ್ಚಿಮ ದೇಶಗಳ ಜನರು ಆಶ್ಚರ್ಯಕರವಾದ ಶೋಧನೆಗಳನ್ನು ಮಾಡಿರುವಂತೆ ಧಾರ್ಮಿಕ ಆಧ್ಯಾತ್ಮಿಕ ವಿಷಯಗಳಲ್ಲಿ ಹಿಂದೂ ಧರ್ಮವು ಇನ್ನೂ ಹೆಚ್ಚಿನ ವಿಸ್ಮಯಕರವಾದ ಶೋಧನೆಗಳನ್ನು ಮಾಡಿದೆ. ಆದರೆ ಮಹತ್ತಮವೂ ಸುಂದರವೂ ಆದ ಈ ಶೋಧನೆಗಳನ್ನು ಕಾಣುವ ಕಣ್ಣುಗಳು ನಮಗಿಲ್ಲ. ಪಾಶ್ಚಾತ್ಯ ವಿಜ್ಞಾನವು (ಸಾಮಾನ್ಯ) ಸಾಧಿಸಿರುವ ಭೌತಿಕ ಪ್ರಗತಿಯಿಂದ ನಾವು ದಿಗ್ಭ್ರಾಂತರಾಗಿದ್ದೇವೆ. ಆ ಪ್ರಗತಿಯ ಮೋಹವು ನನಗಿಲ್ಲ. ವಸ್ತುತಃ ಭೌತವಾದದ ದಾಳಿಯನ್ನು ಎದುರಿಸುವ ತನ್ನ ಗುರಿಯನ್ನು ಕೈಗೂಡಿಸಿಕೊಳ್ಳಲು ಭಾರತಕ್ಕೆ ಅನುಕೂಲ ವಾಗಲೆಂಬ ಸದುದ್ದೇಶದಿಂದ ಭೌತಿಕ ಪ್ರಗತಿಯ ಮಾರ್ಗದಲ್ಲಿ ಅದು ಮುಂದುವರಿಯದಂತೆ ದೇವನೇ ಜಾಣತನದಿಂದ ಮಾಡಿರುವನೆಂದು ಅನಿಸು ತ್ತದೆ ನನಗೆ. ಇಂದಿನವರೆಗೆ ಹಿಂದೂಧರ್ಮವು ಜೀವಂತವಾಗಿರಲು ಆವುದೋ ಒಂದು ಸತ್ತ್ವವು ಅದರಲ್ಲಿರುವುದೇ ಕಾರಣ. ಬೇಬಿಲೋನಿಯದ, ಸಿರಿಯದ, ಪರ್ಷಿಯದ, ಐಗುಪ್ತರ ನಾಗರಿಕತೆಗಳು ಅಧೋಗತಿಯನ್ನು ಹೊಂದಿದವು. ಅದನ್ನು ಹಿಂದೂ ಧರ್ಮವು ನೋಡಿದೆ. ನಿಮ್ಮ ಸುತ್ತ ನೋಡಿರಿ. ರೋಮ್

ಮತ್ತು ಗ್ರೀಸ್‌ಗಳು ಎಲ್ಲಿವೆ ? ಗಿಬ್ಬನ್ನನ ಇಟಲಿಯನ್ನು ನೀವು ಎಲ್ಲಿಯಾದರೂ ಕಾಣಬಹುದೆ? ಅಥವಾ ಪ್ರಾಚೀನ ರೋಮ್ ನಗರವನ್ನು—ಏಕೆಂದರೆ ರೋಮ್ ಇಟಲಿಯಾಗಿತ್ತು—ನೀವು ಎಲ್ಲಿಯಾದರೂ ಕಾಣುವಿರಾ? ಗ್ರೀಸಿಗೆ ಹೋಗಿರಿ. ವಿಶ್ವವಿಖ್ಯಾತ ಅಥೆನ್ಸಿನ ನಾಗರಿಕತೆಯು ಎಲ್ಲಿದೆ ? ಬಳಿಕ ಭಾರತಕ್ಕೆ ಬನ್ನಿರಿ. ಪ್ರಾಚೀನತಮ ಶಿಲಾಲೇಖ ತಾಮ್ರಪಟ ಮುಂತಾದವುಗಳನ್ನು ನೋಡಿರಿ. ಅನಂತರ ನಿಮ್ಮ ಸುತ್ತಮುತ್ತ ನೀವು ನೋಡಿಕೊಳ್ಳಿರಿ. ಆಗ ನೀವು, "ಅಹುದು, ಪ್ರಾಚೀನ ಭಾರತವಿನ್ನೂ ಜೀವಿಸಿದೆ" ಎಂದುಕೊಳ್ಳುವಿರಿ. ನಿಜ, ಅಲ್ಲಲ್ಲಿ ತಿಪ್ಪೆಗಳಿವೆ. ಆದರೆ ಅವುಗಳ ಬುಡದಲ್ಲಿ ಅಮೂಲ್ಯವಾದ ಸಂಪತ್ತು ಅಡಗಿದೆ. ಭೌತಿಕ ಪ್ರಗತಿಯನ್ನು ಧ್ಯೇಯವಾಗಿಟ್ಟುಕೊಳ್ಳದೆ ಆಧ್ಯಾತ್ಮಿಕ ಉನ್ನತಿಯನ್ನೇ ಹಿಂದೂಧರ್ಮವು ತನ್ನ ಗುರಿಯಾಗಿಟ್ಟುಕೊಂಡುದರಿಂದಲೇ ಅದು ಇಂದಿನವರೆಗೆ ಬದುಕಿ ಉಳಿದಿದೆ.

ಮನುಷ್ಯರೂ ಮೂಕ ಪ್ರಾಣಿಗಳೂ ಎಲ್ಲವೂ ಒಂದೇ—'ಸರ್ವಂ ಖಲ್ವಿದಂ ಬ್ರಹ್ಮ'—ಎಂಬ ವಿಚಾರವು ಹಿಂದೂ ಧರ್ಮವು ಕೊಟ್ಟ ಅನೇಕ ಕಾಣಿಕೆಗಳಲ್ಲಿ ಅಸಾಮಾನ್ಯವಾದುದು. ಗೋಪೂಜೆಯ ವಿಚಾರವು ವಿಕಾಸಯೋಗ್ಯವಾಗಿದೆಯೆಂದು ನನ್ನ ಮತ. ಆಧುನಿಕ ಮತಾಂತರದ ವಿಚಾರದಿಂದ ಹಿಂದೂಧರ್ಮವು ಮುಕ್ತವಾಗಿರುವದು ಇನ್ನೊಂದು ಅಮೂಲ್ಯವಾದ ಅಂಶ. ಆದಕ್ಕೆ ಉಪದೇಶದ ಅಗತ್ಯವಿಲ್ಲ. 'ಧರ್ಮಂಚರ' 'ಧರ್ಮದ ಬಾಳನ್ನು ಬಾಳು' ಎಂದು ಅದು ಹೇಳುತ್ತದೆ. ಧರ್ಮಜೀವನವನ್ನು ನಡೆಸುವದು ನನ್ನ ಕರ್ತವ್ಯವೂ ಅಹುದು, ನಿನ್ನ ಕರ್ತವ್ಯವೂ ಅಹುದು ; ಎಲ್ಲರ ಕರ್ತವ್ಯವೂ ಅಹುದು. ಬಳಿಕ ಅದರ ಪ್ರಭಾವವು ಯುಗಯುಗಾಂತರಗಳವರೆಗೂ ಆಗುವದು. ಹಿಂದೂ ಧರ್ಮವು ಕೊಟ್ಟ ಮಹಾಪುರುಷರ ಕಾಣಿಕೆಯನ್ನು ನೋಡಿರಿ.—ರಾಮಾನುಜ, ಚೈತನ್ಯ, ರಾಮಕೃಷ್ಣ ಇವರು ಇಂದಿನ ಪ್ರಸಿದ್ಧ ಪುರುಷರ ಹೆಸರುಗಳನ್ನು ಬಿಟ್ಟರೂ—ಹಿಂದು ಧರ್ಮದ ಮೇಲೆ ತಮ್ಮ ಶಾಶ್ವತ ಪ್ರಭಾವವನ್ನು ಬೀರಿರುವರು. (ಹಿಂದೂ ಧರ್ಮವು), ಯಾವ ದೃಷ್ಟಿಯಿಂದಲೂ, ದುರ್ಬಲ ಧರ್ಮವಲ್ಲ ಅಥವಾ ನಿರ್ಜೀವ ಧರ್ಮವೂ ಅಲ್ಲ.

ಮತ್ತೆ ನಾಲ್ಕು ಆಶ್ರಮಗಳ ವ್ಯವಸ್ಥೆಯೂ ಒಂದು ವಿಶೇಷವೇ ಸರಿ. ಪ್ರಪಂಚದಲ್ಲೆಲ್ಲಿಯೂ ಆದರಂತಹ ವ್ಯವಸ್ಥೆಯಿಲ್ಲ. ಬ್ರಹ್ಮಚಾರಿಗಳನ್ನು

ಹೋಲುವ ಅವಿವಾಹಿತ ಪಂಥವು ಕ್ಯಾಥೋಲಿಕರಲ್ಲಿದೆ. ಆದರೆ ಅದು ಒಂದು ಸಂಸ್ಥೆ ಅಥವಾ ಆಶ್ರಮವಾಗಿಲ್ಲ. ಭಾರತದಲ್ಲಾದರೋ ಪ್ರತಿಯೊಬ್ಬನೂ ಬ್ರಹ್ಮಚರ್ಯದ ಪ್ರಥಮ ಆಶ್ರಮವನ್ನು ಪಾಲಿಸಲೇಬೇಕು. ಎಂತಹ ಮಹತ್ವವಾದ ವಿಚಾರವದು. ಇಂದು ಹಿಂದೂತ್ವವನ್ನು ನಾವು ಹೀನ ಗಳೆಯುತ್ತಿರುವುದರಿಂದ ನಮ್ಮ ನೋಟವು ಕೆಟ್ಟದೆ. ವಿಚಾರಗಳು ಇನ್ನೂ ಹೊಲಸಾಗಿವೆ. ವೈಗಳಂತೂ ಮಿತಿಮೀರಿ ಕೊಳಕಾಗಿವೆ.

ನಾನು ಹೇಳದಿದ್ದ ವಿಷಯವು ಇನ್ನೊಂದಿದೆ. ಜನ್ಮಾಂತರವು ಬರೀ ತಾತ್ವಿಕ ತರ್ಕವಾಗಿರದೆ ನೈಜ ಸಂಗತಿಯೆಂದು ಯುರೋಪಿನ ಜನರಿಗೆ ತಿಳಿಯತೊಡಗಿದೆ, ಎಂದು ಮೇಕ್ಸಮುಲ್ಲರ್ ನಲವತ್ತು ವರ್ಷಗಳ ಹಿಂದೆ ಹೇಳಿದರು. ಸರಿ. ಹಿಂದೂ ಧರ್ಮವೇ ಜಗತ್ತಿಗೆ (ವಿಶ್ವಕ್ಕೆ) ಕೊಟ್ಟ ಕಾಣಿಕೆ ಇದು.

ಇಂದು ವರ್ಣಾಶ್ರಮ ಧರ್ಮವನ್ನೂ ಹಿಂದೂ ಧರ್ಮವನ್ನೂ ಅದರ ಅನುಯಾಯಿಗಳೇ ವಿಪರೀತಗೊಳಿಸಿ ಅಲ್ಲಗಳೆಯುತ್ತಿರುವರು. ಅವುಗಳನ್ನು ಅಳಿಸಿಬಿಡುವದು ಅದಕ್ಕೆ ಮದ್ದಲ್ಲ; ಅದನ್ನು ಸರಿಪಡಿಸುವದೇ ಯೋಗ್ಯ ಉಪಾಯ. ನಿಜವಾದ ಹಿಂದೂ ಭಾವನೆಯನ್ನು ನಮ್ಮಲ್ಲಿ ಉಂಟುಮಾಡಿ ಕೊಳ್ಳೋಣ. ಬಳಿಕ ಅದರಿಂದ ನಮ್ಮ ಆತ್ಮಕ್ಕೆ ತೃಪ್ತಿಯುಂಟೇ ಇಲ್ಲವೇ? ಎಂದು ಕೇಳಿಕೊಳ್ಳೋಣ. (ಯಂಗ್ ಇಂಡಿಯಾ : ೨೪-೧೧-೨೭)

ಹಿಂದುತ್ವವು ಸಚೇತನವಾದ (ಜೀವಂತವಾದ) ಒಂದು ಪ್ರಾಣಿ ಯಂತೆ. ಅದು ವೃದ್ಧಿವಿನಾಶಗಳಿಗೆ ಅಧೀನವಾಗಿದೆ; ಅಲ್ಲದೆ ನಿಸರ್ಗ ನಿಯಮಗಳಿಗೆ ಒಳಪಟ್ಟದೆ. ಮೂಲದಲ್ಲಿ ಏಕವೂ ಅವಿಭಾಜ್ಯವೂ ಆಗಿದ್ದುದು ಈಗ ಅಸಂಖ್ಯ ಶಾಖೆಗಳುಳ್ಳ ಹೆಮ್ಮರವಾಗಿದೆ. ಋತುಮಾನಗಳ ಪರಿ ಣಾಮವು ಅದರ ಮೇಲಾಗುತ್ತದೆ. ಅದಕ್ಕೂ ಬೇಸಗೆ ಮಳೆಗಾಲ ಚಳಿಗಾಲ ಗಳುಂಟು. ಹಿಂದೂಧರ್ಮವು ಗಂಗಾ ನದಿಯಂತೆ. ಉಗಮ ಸ್ಥಾನದಲ್ಲಿ ಶುದ್ಧವೂ ನಿರ್ಮಲವೂ ಆಗಿದೆ. ಗಂಗಾನದಿಯು ಹರಿದುಬರುವಾಗ ಕೊಳೆಯನ್ನು ತೆಗೆದುಕೊಂಡು ಬರುವಂತೆ, ಹಿಂದೂ ಧರ್ಮವೂ ಬೆಳೆಯುತ್ತ ನಡೆದಂತೆ ಕೊಳೆಯು ಕೂಡಿದೆ, ಗಂಗಾನದಿಯಂತೆ. ಒಟ್ಟನಲ್ಲಿ ಪರೋಪ ಕಾರಿಯಾಗಿದೆ. (ಯಂಗ್ ಇಂಡಿಯಾ : ೮-೪-೨೬)

ಹಿಂದೂಧರ್ಮವೆಂದರೇನು ?

ಹಿಂದೂಧರ್ಮಕ್ಕೆ ಅಧಿಕೃತ ಮತವಿಲ್ಲದುದು ಒಂದು ಸುದೈವ ಅಥವಾ ದುರ್ದೈವ. ನನ್ನನ್ನು ಜನ ತಪ್ಪಾಗಿ ತಿಳಿಯದಿರಲೆಂದು ಸತ್ಯ ಮತ್ತು ಅಹಿಂಸೆ ನನ್ನ ಮತಗಳೆಂದು ಹೇಳಿದ್ದೇನೆ. ಹಿಂದೂ ಮತದ ಲಕ್ಷಣವನ್ನು ಹೇಳೆಂದು ನನ್ನನ್ನು ಕೇಳಿದರೆ ಅಹಿಂಸಾ ಸಾಧನಗಳ ಮೂಲಕ ಸತ್ಯವನ್ನ ಹುಡುಕುವದೇ ಆ ಮತವೆಂದು ಸರಳವಾಗಿ ಹೇಳಬಹುದು. ದೇವರಲ್ಲಿ ಒಬ್ಬನಿಗೆ ನಂಬಿಕೆಯಿರದಿದ್ದರೂ, ಅವನು ಹಿಂದೂ ಎನಿಸಿಕೊಳ್ಳ ಬಹುದು. ಸತ್ಯದ ಕಠೋರ ಶೋಧನವೇ ಹಿಂದುತ್ವ. ಮತ್ತು ಇಂದು ಅದು ಮೃತಪ್ರಾಯವಾಗಿದ್ದರೆ, ನಿಷ್ಕ್ರಿಯವಾಗಿದ್ದರೆ, ಅದರ ಅಭಿವೃದ್ಧಿಯು ಕುಂಠಿತವಾಗಿದ್ದರೆ ಅದಕ್ಕೆ ನಾವು ದಣಿದಿರುವದೇ ಕಾರಣ. ನಮ್ಮ ದಣಿವು ಆರಿದರೆ ಹಿಂದುತ್ವವು ಅಪೂರ್ವವಾದ ತೇಜಸ್ಸಿನಿಂದ ಪುನಃ ವಿಶ್ವದಲ್ಲಿ ಬೆಳಗುವದು. ಆದುದರಿಂದ ನಿಜವಾಗಿಯೂ ಹಿಂದೂಧರ್ಮವು ಎಲ್ಲ ಧರ್ಮಗಳಲ್ಲಿ ಅತ್ಯಂತ ಸಹಿಷ್ಣುತೆಯುಳ್ಳ ಧರ್ಮವಾಗಿದೆ. ಅದರ ಮತವು ಸರ್ವಗ್ರಾಹಿಯಾಗಿದೆ.

ಹಿಂದೂಧರ್ಮವು ಸರ್ವಗ್ರಾಹಿ

ಹಿಂದೂಧರ್ಮವು ಸರ್ವಗ್ರಾಹಿಯಾಗಿರುವದೇ ಅದರ ವಿಶಿಷ್ಟ ಸೌಂದರ್ಯವೆಂದು ನನ್ನ ಅಭಿಪ್ರಾಯ. ಮಹಾಭಾರತದ ದಿವ್ಯಕವಿ ತನ್ನ ಅದ್ವಿತೀಯ ಕೃತಿಯ ವಿಷಯವಾಗಿ ಹೇಳಿದುದು ಹಿಂದೂಧರ್ಮದ ವಿಷಯ ವಾಗಿಯೂ ಅಷ್ಟೇ ಸತ್ಯವಾಗಿದೆ. ಬೇರೆ ಧರ್ಮಗಳಲ್ಲಿ ಇರುವುದೆಲ್ಲವನ್ನೂ ಹಿಂದೂಧರ್ಮದಲ್ಲಿ ಕಾಣಬಹುದು. ಆದರಲ್ಲಿಲ್ಲದುದು ಅಮುಖ್ಯವೂ ಅನವಶ್ಯಕವೂ ಆಗಿದೆ. (ಯಂಗ್ ಇಂಡಿಯಾ : ೧೭-೯-೨೫)

(ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್)

ನಾನು ಹಿಂದೂ ಏಕೆ?

ಭಾರತದ ಆಜೀವ ಮಿತ್ರನೆಂದು ಹೇಳಿಕೊಳ್ಳುವ ಓರ್ವ ಅಮೇರಿಕನ್ ಸ್ನೇಹಿತನು ಹೀಗೆ ಬರೆಯುತ್ತಾನೆ:

"ಪಾಶ್ಚಾತ್ಯ ದೇಶಗಳ ಮುಖ್ಯ ಧರ್ಮಗಳಲ್ಲಿ ಹಿಂದೂಧರ್ಮವು ಒಂದಾಗಿರುವುದರಿಂದ ಹಾಗು ನೀವು ಹಿಂದೂಧರ್ಮ ಮತ್ತು ಕ್ರೈಸ್ತ ಧರ್ಮ ಇವುಗಳ ಅಭ್ಯಾಸವನ್ನು ಮಾಡಿರುವುದರಿಂದ ಮತ್ತು ಆ ಅಭ್ಯಾಸದ ಆಧಾರದಿಂದ ನೀವು ಹಿಂದೂ ಆಗಿರುವುದಾಗಿ ಹೇಳಿರುವುದರಿಂದ, ನೀವು ಹಿಂದೂ ಆಗಿಯೆ ಇರಲು ನಿಮ್ಮ ಕಾರಣಗಳೇನೆಂಬುದನ್ನು ತಿಳಿಸುವ ಕೃಪೆ ಮಾಡುವಿರಾ? ಎಂದು ಕೇಳಿರುವನು.

ಮಾನವನ ಪರಮಾವಶ್ಯಕತೆಯು ಪರಮಾತ್ಮನನ್ನು ತಿಳಿದುಕೊಳ್ಳುವುದು ಮತ್ತು ಆತನನ್ನು ಸತ್ಯದಲ್ಲಿ ಆತ್ಮದಲ್ಲಿ ಆರಾಧಿಸುವದೆಂದು ಹಿಂದೂಗಳೂ ಕ್ರಿಶ್ಚಿಯನ್ನರೂ ಅರಿತಿದ್ದಾರೆ. ಅಮೇರಿಕದ ಕ್ರೈಸ್ತರು ಕ್ರಿಸ್ತನನ್ನು ಭಗವಂತನ ವ್ಯಕ್ತಸ್ವರೂಪವೆಂದು ನಂಬಿ ತಮ್ಮ ಮಕ್ಕಳಾದ ತರುಣ ತರುಣಿಯರನ್ನು ಸಾವಿರಾರು ಭಾರತೀಯರಿಗೆ ಅವನಾರೆಂಬುದನ್ನು ತಿಳಿಸಲು ಭಾರತಕ್ಕೆ ಕಳಿಸಿಕೊಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ಹಿಂದೂಧರ್ಮದ ನಿಮ್ಮ ಅರ್ಥವನ್ನು ತಿಳಿಸಿ ಅದರ ಹಾಗೂ ಕ್ರೈಸ್ತಮತದ ತುಲನೆಯನ್ನು ಮಾಡುವಿರಾ? ಹಾಗೆಮಾಡಿದರೆ ನಾನು ನಿಜವಾಗಿ ನಿಮಗೆ ಅತ್ಯಂತ ಋಣಿಯಾಗಿರುವೆನು."

"ಅಮೇರಿಕದ ಹಾಗೂ ಇಂಗ್ಲಂಡಿನ ಪಾದರಿಗಳು ಕ್ರೈಸ್ತನ ಬಗೆಗೆ ಭಾರತೀಯರಿಗೆ ಬೋಧಿಸುವುದನ್ನು ಬಿಟ್ಟು ಪರ್ವತದ ಮೇಲಿನ ಉಪದೇಶದಲ್ಲಿ ವಿಧಿಸಿದ ಜೀವನಕ್ರಮದಂತೆ ತಮ್ಮ ಜೀವನವನ್ನು ನಡೆಸಿದ್ದರೆ, ಅಂತಹರನ್ನು ಭಾರತವು ಸಂಶಯದೃಷ್ಟಿಯಿಂದ ನೋಡುವದನ್ನು ಬಿಟ್ಟು ತನ್ನ ಜನತೆಯ ಜತೆ ಇರುವ ಅವರನ್ನು ಕೊಂಡಾಡಿ ನೇರವಾಗಿ ಅವರ ಅಸ್ತಿತ್ವದ ಲಾಭವನ್ನು ಪಡೆಯುತ್ತಿದ್ದಿತು. ಈ ಅಭಿಪ್ರಾಯವುಳ್ಳ ನಾನು ಅಮೇರಿಕದ ಮಿತ್ರರಿಗೆ ಹಿಂದೂತ್ವದ ವಿಷಯವಾಗಿ 'ಪ್ರತಿಯಾಗಿ' ಏನನ್ನೂ ಹೇಳಲಾರೆನು. ವಿಶೇಷವಾಗಿ ಮತಾಂತರಗೊಳಿಸುವ ದೃಷ್ಟಿಯಿಂದ ತಮ್ಮ ಮತ

ವಿಚಾರವನ್ನು ಬೇರೆಯವರಿಗೆ ಹೇಳುವುದರಲ್ಲಿ ನನ್ನ ನಂಬಿಕೆಯಿಲ್ಲ. ಧರ್ಮಕ್ಕೆ ಪ್ರಚಾರವು ಬೇಕಿಲ್ಲ. ಧರ್ಮವನ್ನು ಆಚರಿಸಬೇಕು; ಆಗ ಅದು ತಾನಾಗಿಯೆ ಬೆಳೆಯುತ್ತದೆ.

ಅಲ್ಲದೆ ನನ್ನ ಜೀವನದ ಮುಖಾಂತರವಾಗಿಯಲ್ಲದೆ ಬೇರೆ ರೀತಿಯಿಂದ ಹಿಂದೂತ್ವದ ಅರ್ಥವನ್ನು ಹೇಳಲು ನಾನು ಯೋಗ್ಯನೆಂದು ಬಗೆಯುವದಿಲ್ಲ. ನನ್ನ ಬರೆಹದ ನುಡಿಯಲ್ಲಿ ಹಿಂದೂಧರ್ಮದ ಅರ್ಥವನ್ನು ಹೇಳಲಾಗದಿದ್ದರೆ ಕ್ರೈಸ್ತಧರ್ಮದೊಡನೆ ಅದನ್ನು ಹೋಲಿಸಲಾಗುವದಿಲ್ಲ. ಆದುದರಿಂದ ನಾನು ಹಿಂದೂ ಏಕೆ ಎಂಬ ವಿಚಾರವನ್ನು ಮಾತ್ರ ಸಂಕ್ಷೇಪವಾಗಿ ಹೇಳಬಲ್ಲೆನು.

ಆನುವಂಶಿಕತೆಯ ಪ್ರಭಾವದಲ್ಲಿ ನನಗೆ ನಂಬಿಕೆಯಿದೆ. ಹಿಂದೂ ಕುಟುಂಬದಲ್ಲಿ ನಾನು ಹುಟ್ಟಿರುವೆನಾದ ಪ್ರಯುಕ್ತ ನಾನು ಹಿಂದೂ ಆಗಿಯೆ ಉಳಿದಿರುವೆನು. ನನ್ನ ನೀತಿ ಬುದ್ಧಿಗೆ ಇಲ್ಲವೆ ಆಧ್ಯಾತ್ಮಿಕ ಅಭ್ಯುದಯಕ್ಕೆ ಅದು ಅಸಂಗತವಾಗಿದೆಯೆಂದು ನನಗೆ ಅನಿಸಿದರೆ ನಾನು ಅದನ್ನು ತ್ಯಜಿಸಬೇಕು. ಕೂಲಂಕಷವಾಗಿ ಪರೀಕ್ಷಿಸಿದ ಬಳಿಕ ನನಗೆ ಗೊತ್ತಿದ್ದ ಧರ್ಮಗಳಲ್ಲೆಲ್ಲ ಅದು ಬಹಳ ಸಹಿಷ್ಣುತೆಯ ಧರ್ಮವಾಗಿದೆಯೆಂದು ಕಂಡಿದ್ದೇನೆ. ಮತಾಂಧತೆಯಿಂದ ಅದು ಮುಕ್ತವಾಗಿರುವದು ನನ್ನ ಮನಸ್ಸಿಗೆ ಬಹಳ ಮೆಚ್ಚುಗೆ. ಅದರಿಂದ ಆ ಮತ ಸಂಕುಚಿತವಲ್ಲ. ಆದ ಪ್ರಯುಕ್ತ ಇತರ ಧರ್ಮಗಳಿಗೆ ಗೌರವವನ್ನು ಕೊಡಲು ಅದರ ಅನುಯಾಯಿಗಳಿಗೆ ಶಕ್ಯವಾಗಿದೆಯಲ್ಲದೆ ಬೇರೆ ಧರ್ಮಗಳಲ್ಲಿರುವ ಒಳಿತಾದ ಅಂಶಗಳನ್ನು ಮೆಚ್ಚಿ ಮೈಗೂಡಿಸಿಕೊಳ್ಳಲು ಸಾಧ್ಯವಾಗಿದೆ. ಅಹಿಂಸೆಯು ಎಲ್ಲ ಧರ್ಮಗಳಿಗೆ ಸಾಮಾನ್ಯವಾದುದು. ಆದರೆ ಹಿಂದೂಧರ್ಮದಲ್ಲಿ ಅದಕ್ಕೆ ಉನ್ನತವಾದ ಅವಕಾಶ ಅನುಷ್ಠಾನಗಳು ದೊರೆತಿವೆ. (ಬೌದ್ಧ ಧರ್ಮ ಮತ್ತು ಜೈನ ಧರ್ಮ ಇವು ಹಿಂದೂಧರ್ಮದಿಂದ ಪ್ರತ್ಯೇಕವೆಂದು ನಾನು ಭಾವಿಸುವದಿಲ್ಲ.) ಮಾನವಜೀವನವಷ್ಟೇಅಲ್ಲದೆ ಸಮಸ್ತ ಪ್ರಾಣಿ ಜೀವನವೂ ಒಂದೇ ಎಂದು ಹಿಂದೂ ಧರ್ಮವು ನಂಬಿದೆ. ಮಾನವಾನುಕಂಪದ ವಿಕಾಸಕ್ಕೆ ಹಿಂದೂಧರ್ಮದಲ್ಲಿಯ ಗೋಪೂಜೆಯಿಂದ ದೊಡ್ಡ ಕಾಣಿಕೆಯು ಸಂದಿದೆಯೆಂದು ನನ್ನ ಅಭಿಪ್ರಾಯ. ಎಲ್ಲ ಜೀವನದ ಏಕತೆ ಹಾಗು ಪಾವಿತ್ರ್ಯಗಳ ವ್ಯಾವಹಾರಿಕ ಅನುಷ್ಠಾನವೇ ಅದು. ಜನ್ಮಾಂತರ

ದಲ್ಲಿ ನಂಬಿಕೆ ಈ ಶ್ರದ್ಧೆಯ ನೇರವಾದ ಫಲ. ಕೊನೆಯದಾಗಿ ವರ್ಣಾಶ್ರಮ ನಿಯಮದ ತತ್ವದರ್ಶನವು ಸತ್ಯದ ನಿರಂತರಾನ್ವೇಷಣದ ಭವ್ಯಫಲವೇ ಆಗಿದೆ. ಇಲ್ಲಿ ನಿರೂಪಿಸಿದ ಮುಖ್ಯಾಂಶಗಳ ಲಕ್ಷಣಗಳನ್ನು ವಿವರಿಸಿ ಈ ಲೇಖವನ್ನು ಬೆಳೆಸುವ ಆವಶ್ಯಕತೆಯಿಲ್ಲ. ಆದರೆ ಗೋಪೂಜೆ ಮತ್ತು ವರ್ಣಾಶ್ರಮಗಳ ಸದ್ಯದ ಕಲ್ಪನೆಯು ಮೂಲದಲ್ಲಿದ್ದ ಕಲ್ಪನೆಗಳ ವಿಡಂಬನೆಗಳೆಂದು ನನ್ನ ಅಭಿಪ್ರಾಯ. ಅತಿ ಸಂಕ್ಷಿಪ್ತವಾದ ಈ ನಿರೂಪಣೆಯಲ್ಲಿ, ನನ್ನನ್ನು ಹಿಂದೂ ಆಗಿ ಉಳಿಸಿರುವ ಮತ್ತು ನನಗೆ ಪ್ರಧಾನವೆಂದು ತೋರುವ ಅಂಶಗಳನ್ನು ಮಾತ್ರ ಉಲ್ಲೇಖಿಸಿದ್ದೇನೆ.

(ಯಂಗ್ ಇಂಡಿಯಾ : ೨೦-೧೦-೨೭)

ನನ್ನ ಕಲ್ಪನೆಯ ಹಿಂದೂಧರ್ಮ

ನಾನು ತಿಳಿದುಕೊಂಡಿರುವ ಹಿಂದೂಧರ್ಮವು ಒಂದು ಸಂಕುಚಿತ ಮತವಲ್ಲ. ಕಾಲದಷ್ಟು ಪುರಾತನವಾದ ವಿಕಾಸಾತ್ಮಕ ಭವ್ಯಕ್ರಮವೇ ಅದಾಗಿದೆ. ಝುರತುಷ್ಟ, ಮೋಸೆಸ್, ಕ್ರಿಸ್ತ, ಮುಹಮ್ಮದ್, ನಾನಕ, ಮತ್ತು ಇತರ ಪ್ರವಾದಿಗಳ ಉಪದೇಶಗಳನ್ನೆಲ್ಲ ಅದು ಒಳಗೊಂಡಿದೆ. ಅದು ಹೀಗೆ ವಿವರಿಸಲ್ಪಟ್ಟಿದೆ.

ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ।
ಹೃದಯೇ ನಾಭ್ಯನುಜ್ಞಾತೋ ಯೋ ಧರ್ಮಸ್ತಂ ನಿಬೋಧತ॥

("ರಾಗದ್ವೇಷಾದಿಗಳಿಲ್ಲದ ಸಜ್ಜನರಿಂದಲೂ ವಿದ್ವಾಂಸರಿಂದಲೂ ಆಚರಿಸಲ್ಪಡುತ್ತಿರುವ ಹೃದಯಾಭ್ಯನುಜ್ಞಾತವಾದ ಧರ್ಮವೇ ನಿಜವಾದ ಧರ್ಮವೆಂದು ತಿಳಿ.") (ಹರಿಜನ : ೮-೩-೪೨)

ಇತಿಹಾಸ ಪೂರ್ವಕಾಲದಿಂದಲೂ ಇದ್ದ ವೇದ ಹಾಗು ತದನಂತರದ ಗ್ರಂಥಗಳನ್ನು ಆಧರಿಸಿ ಪರಂಪರೆಯಾಗಿ ಬಂದ ಜೀವಂತವಾದ ಧರ್ಮವೇ ನನ್ನ ಮಟ್ಟಿಗೆ ಸನಾತನಧರ್ಮ. ದೇವರು ಹಾಗು ಹಿಂದೂತ್ವವು ಅನಿರ್ವಚನೀಯಗಳಾಗಿದ್ದಂತೆಯೆ ವೇದಗಳು ನನ್ನ ಮಟ್ಟಿಗೆ ಅನಿರ್ವಚನೀಯ

ಗಳಾಗಿವೆ. ಮುದ್ರಿತವಾದ ನಾಲ್ಕು ಪುಸ್ತಕಗಳೇ ವೇದಗಳೆಂದು ಹೇಳುವದು ಅಂಶತಃ ಸತ್ಯವಲ್ಲದೆ ಪೂರ್ಣ ಸತ್ಯವಲ್ಲ. ಅಜ್ಞಾತ ದ್ರಷ್ಟಾರರು ಬಿಟ್ಟು ಹೋಗಿರುವ ಬೋಧೆಗಳ ಅವಶೇಷಗಳೇ ಇವು. ಮುಂದೆ ಬಂದ ಪೀಳಿಗೆಯವರು ತಮಗೆ ಅರಿವಾದಂತೆ ಈ ಮೂಲನಿಧಿಗೆ ತಮ್ಮ ವಿಚಾರಗಳನ್ನು ಸೇರಿಸಿದರು. ಕಾಲಾಂತರದಲ್ಲಿ ವಿಶಾಲಬುದ್ಧಿಯ ಒಬ್ಬ ಮಹಾವ್ಯಕ್ತಿಯು ಉದಯಿಸಿದನು. ಅವನೇ ಗೀತಾಕಾರನು. ಹಿಂದೂ ಧರ್ಮದ ಸಾರವನ್ನು ಹಿಂದೂ ಪ್ರಪಂಚಕ್ಕೆ ಅವನು ಕೊಟ್ಟನು. ಅದು ಅತ್ಯಂತ ಆಧ್ಯಾತ್ಮಿಕವಾಗಿದ್ದರೂ ಸರಲಾಂತಃಕರಣಿಗಳು ಅದನ್ನು ಸುಲಭವಾಗಿ ತಿಳಿಯಬಲ್ಲರು. ಅಭ್ಯಾಸ ಮಾಡಬೇಕೆಂಬ ಇಚ್ಛೆಯುಳ್ಳವರಿಗೆ ಅದು ತೆರೆದಿಟ್ಟ ಪುಸ್ತಕವಾಗಿದೆ. ವೇದಾಗಮಗಳೆಲ್ಲ ಸುಟ್ಟು ಬೂದಿಯಾದರೂ ಹಿಂದೂಧರ್ಮವೆಂದರೇನೆಂಬುದನ್ನು ಹಾಗು ಅದನ್ನು ಹೇಗೆ ಆಚರಿಸಬೇಕೆಂಬುದನ್ನು ತಿಳಿದುಕೊಳ್ಳಲು ಅವಿನಾಶಿಯಾದ ಈ ಚಿಕ್ಕ ಪುಸ್ತಕದ ಏಳುನೂರು ಶ್ಲೋಕಗಳು ಸಾಕು. ಈ ಪುಸ್ತಕದ ಉಪದೇಶದಂತೆ ಅಕ್ಷರಶಃ ಬಾಳಲು ನಾನು ನಾಲ್ವತ್ತು ವರ್ಷಗಳಿಂದ ಪ್ರಯತ್ನಿಸುತ್ತಿದ್ದೇನೆ; ಅಂತೆಯೆ ನಾನು ಸನಾತನಿಯೆಂದು ತಿಳಿದುಕೊಂಡಿದ್ದೇನೆ. ಅದರ ಮುಖ್ಯಾಂಶಕ್ಕೆ ವಿರುದ್ಧವಾದುದೆಲ್ಲವನ್ನೂ ಹಿಂದೂತ್ವಕ್ಕೆ ವಿರುದ್ಧವೆಂದು ನಾನು ನಿರಾಕರಿಸಿದ್ದೇನೆ. ಯಾವ ಮತವನ್ನೂ ಯಾವ ಗುರುವನ್ನೂ ಅದು ಬಿಟ್ಟಿಲ್ಲ. ಬೈಬಲ್, ಕೊರಾನ್, ಝೆಂಡ್-ಅವೆಸ್ತಗಳನ್ನು ನಾನು ಓದಿದ್ದೇನೆಂದು ಹೇಳಲು ನನಗೆ ಆನಂದವಾಗುತ್ತದೆ. ಇವುಗಳನ್ನಲ್ಲದೆ ವಿಶ್ವದ ಇತರ ಧರ್ಮಗ್ರಂಥಗಳನ್ನು ನಾನು ಗೀತೆಯನ್ನು ಓದಿದಷ್ಟೇ ಆದರದಿಂದ ಅಭ್ಯಸಿಸಿದ್ದೇನೆ. ನನ್ನ ಈ ಆದರ್ರದ ಅಭ್ಯಾಸದಿಂದ ಗೀತೆಯಲ್ಲಿಯ ನನ್ನ ಶ್ರದ್ಧೆಗೆ ಹೆಚ್ಚು ಒಲವು ಬಂದಿದೆ. ನನ್ನ ದೃಷ್ಟಿಕೋನವನ್ನು ಅವು ವಿಶಾಲಗೊಳಿಸಿವೆ; ಆದಪ್ರಯುಕ್ತ ನನ್ನ ಹಿಂದೂತ್ವವನ್ನೂ ವಿಸ್ತರಿಸಿವೆ. ನಾನು ಅರಿತಂತೆ, ಝುರತುಸ್ಟ, ಜೀಸಸ್ ಮತ್ತು ಮಹಮ್ಮದ್‌ರ ಜೀವನ ಗೀತೆಯ ಅನೇಕ ವಾಕ್ಯಗಳ ಮೇಲೆ ಬೆಳಕು ಚೆಲ್ಲಿದೆ.

ಭೂಮಂಡಲದ ಚತುರ್ದಿಶೆಗಳಿಂದಲೂ ಧರ್ಮೋಪದೇಶಕರ ಉಪದೇಶಾಮೃತವನ್ನು ಸಹಿಸುವಷ್ಟು ಮಾತ್ರವಲ್ಲದೆ ಮೈಗೂಡಿಸಿಕೊಳ್ಳುವಷ್ಟು ಹಿಂದೂಧರ್ಮವು ವಿಶಾಲವಾಗಿರುವದರಿಂದ ಹಿಂದೂಎಂದು ಕರೆದು

ಕೊಳ್ಳಲು ನಾನು ಹೆಮ್ಮೆ ಪಡುತ್ತೇನೆ. ಈ ಜೀವನದ ಗ್ರಂಥದಲ್ಲಿ (ಗೀತೆಯಲ್ಲಿ) ಅಸ್ಪೃಶ್ಯತೆಗೆ ಆಧಾರವನ್ನು ನಾನು ಕಂಡಿಲ್ಲ. ಇದಕ್ಕೆ ವಿರುದ್ಧವಾಗಿ ಎಲ್ಲ ಜೀವನವು ಒಂದು ಮತ್ತು ದೇವರ ಮೂಲಕವೇ ನಮ್ಮ ಅಸ್ತಿತ್ವ ಮತ್ತು ಕೊನೆಗೆ ಅವನೆಡೆಗೇ ನಾವು ಹೋಗಬೇಕು ಎಂಬ ಮಾತಿನಲ್ಲಿ ಶ್ರದ್ಧೆಯನ್ನಿಡಲು ಅದು ತನ್ನದೇ ಆದ ಹೃದಯಂಗಮವೂ ಚಿತ್ತಾಕರ್ಷಕವೂ ಆದ ಭಾಷೆಯಲ್ಲಿ ಒತ್ತಿ ಹೇಳುತ್ತಿದೆ. ಆ ಪೂಜ್ಯ ಮಾತೆಯು ಕಲಿಸಿದ ಸನಾತನ ಧರ್ಮದ ಪ್ರಕಾರ, ಬಾಹ್ಯಕರ್ಮಾಚರಣೆ ಮತಪ್ರಕ್ರಿಯೆ ಉತ್ಸವಾದಿಗಳು ಮಾತ್ರವೇ ಜೀವನವಲ್ಲ; ಆದರೆ ಆತ್ಯಂತಿಕವಾದ ಅಂತಃಶುದ್ಧಿ ಹಾಗೂ ದೈವೀಜ್ಯೋತಿಯಲ್ಲಿ ಮೈ, ಮನ, ಮಾತು ಆತ್ಮಗಳನ್ನು ಏಕೀಕರಿಸುವದೇ ಜೀವನದ ಧ್ಯೇಯವಾಗಿದೆ. ಗೀತೆಯ ಈ ಸಂದೇಶವನ್ನೇ ನನ್ನ ಜೀವನದಲ್ಲಿ ಸೇರಿಸಿಕೊಂಡು ಕೋಟ್ಯಂತರ ಜನಸಮೂಹಗಳೆಡೆಗೆ ನಾನು ಹೋಗಿದ್ದೇನೆ. ಆಗ ಅವರು ನನ್ನ ಮಾತುಗಳನ್ನು ಯಾವದೊಂದು ರಾಜಕೀಯ ಬುದ್ಧಿವಂತಿಕೆಗಾಗಿಯಾಗಲಿ ಇಲ್ಲವೆ ವಾಗ್ಮಿತೆಗಾಗಲಿ ಕೇಳಲಿಲ್ಲ. ಆದರೆ ನಾನೂ ಅವರೊಳಗಿನವನೇ ಒಬ್ಬನೆಂದೂ ಅವರ ಮತ ಶ್ರದ್ಧೆಯವನೇ ಎಂದೂ ಸ್ವಪ್ರೇರಣೆಯಿಂದಲೇ ಗುರುತಿಸಿರುವರು. ದಿವಸಗಳು ಕಳೆದಂತೆ ಸನಾತನ ಧರ್ಮಕ್ಕೆ ಸೇರಿದವನೆಂದು ಹೇಳಿಕೊಳ್ಳುವಲ್ಲಿ ನಾನೇನೂ ತಪ್ಪು ಮಾಡಿಲ್ಲೆಂದು ನನ್ನ ನಂಬಿಕೆ ದೃಢತರವಾಗಿಬಿಟ್ಟಿದೆ. ದೇವರ ಇಚ್ಛೆಯಿದ್ದರೆ ನನ್ನ ಈ ಶ್ರದ್ಧೆಗೆ ನನ್ನ ಮರಣದ ಮುದ್ರೆಯನ್ನು ಆತನು ಒತ್ತುಗೊಡುವನು.

(ನನ್ನ ಆತ್ಮದ ಕಳವಳ, ಪು. ೬ ಮತ್ತು ೭; ೪-೧೧-೩೨)

ಸನಾತನ ಹಿಂದೂಧರ್ಮ

ನಾನು ಸನಾತನೀ ಹಿಂದೂ ಎಂಬುದನ್ನು ಒತ್ತಿ ಹೇಳಿದ್ದೇನೆ. ಆದರೂ ಹಿಂದೂತ್ವದ ಹೆಸರಿನಲ್ಲಿ ನಡೆದಿರುವ ಕೆಲ ಸಂಗತಿಗಳನ್ನು ನಾನು ಒಪ್ಪುವದಿಲ್ಲ. ನಾನು ಸನಾತನಿಯಾಗದಿದ್ದರೆ ಆ ಹೆಸರಿನಿಂದ ಕರೆಸಿಕೊಳ್ಳುವ ಇಚ್ಛೆಯು ನನಗಿಲ್ಲ. ಆದುದರಿಂದ ಸನಾತನ ಹಿಂದೂ ಧರ್ಮದ ನನ್ನ ಅರ್ಥವನ್ನು ಸ್ಪಷ್ಟವಾಗಿ ಒಮ್ಮೆ ಹೇಳಿಬಿಡುವದು ಅವಶ್ಯವಾಗಿದೆ.

'ಸನಾತನ' ಎಂಬ ಶಬ್ದವನ್ನು ಆದರ ಸ್ವಾಭಾವಿಕ ಅರ್ಥದಲ್ಲಿ ನಾನು ಉಪಯೋಗಿಸುತ್ತೇನೆ.

ನಾನು ಸನಾತನೀ ಹಿಂದೂ ಎಂದು ಕರೆದುಕೊಳ್ಳುವ ಕಾರಣಗಳು ಹೀಗಿವೆ.

(೧) ವೇದಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಹಿಂದೂ ಪವಿತ್ರ ಗ್ರಂಥಗಳೆಂದು ಕರೆಸಿಕೊಳ್ಳುವುವುಗಳಲ್ಲಿ ಅಲ್ಲದೆ ಅವತಾರಗಳಲ್ಲಿ ಪುನರ್ಜನ್ಮದಲ್ಲಿ ನನಗೆ ನಂಬಿಕೆಯಿದೆ.

(೨) ವೇದಪ್ರತಿಪಾದಿತವಾದ ವರ್ಣಾಶ್ರಮದಲ್ಲಿ ನನಗೆ ನಂಬಿಕೆ ಯಿದೆ. ಆದರೆ ಈಗಿನ ಸಾಮಾನ್ಯ ತಿಳಿವಳಿಕೆಯ ಹಾಗೂ ಅಪಾರ್ಥ ದಲ್ಲಿಲ್ಲ.

(೩) ಸಾಮಾನ್ಯ ಜನರು ತಿಳಿದುಕೊಂಡಿರುವದಕ್ಕಿಂತಲೂ ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಗೋರಕ್ಷಣೆಯನ್ನು ನಾನು ನಂಬುತ್ತೇನೆ.

(೪) ಮೂರ್ತಿಪೂಜೆಯಲ್ಲಿ ನನಗೆ ನಂಬಿಕೆ ಇಲ್ಲದಿಲ್ಲ.

ವೇದಗಳ ಅಥವಾ ಇತರ ಆಗಮಗಳ ವಿಷಯವನ್ನು ಹೇಳುವಾಗ ನಾನು ಅವುಗಳು ದೈವಮೂಲಗಳೆಂದು ಹೇಳುವದನ್ನು ಬುದ್ಧಿಪೂರ್ವಕ ವಾಗಿಯೆ ಬಿಟ್ಟದ್ದೇನೆ. ಯಾಕೆಂದರೆ ವೇದಗಳುಮಾತ್ರವೇ ದೈವಮೂಲ ವಾದವುಗಳೆಂದು ನಾನು ನಂಬುವದಿಲ್ಲ. ಬೈಬಲ್ ಕೊರಾನ್ ಝೆಂದ್ ಅವೆಸ್ತಾ ಇವುಗಳಾದರೂ ವೇದಗಳಂತೆಯೇ ದೈವೀಸ್ಫೂರ್ತಿಯುಳ್ಳವುಗಳೆಂದು ನಾನು ನಂಬುತ್ತೇನೆ. ಹಿಂದೂ ಗ್ರಂಥಗಳಲ್ಲಿ ನನಗೆ ಶ್ರದ್ಧೆಯಿದೆಯೆಂದ ಮಾತ್ರಕ್ಕೆ ಅಲ್ಲಿ ಇರುವ ಪ್ರತಿಯೊಂದು ಶ್ಲೋಕವೂ ಪ್ರತಿಯೊಂದು ಶಬ್ದವೂ ದೈವೀಸ್ಫೂರ್ತಿಯುಳ್ಳವೆಂದು ನಾನು ನಂಬಬೇಕಾಗಿಲ್ಲ. ಅಲ್ಲದೆ ನನಗೆ ಈ ಅದ್ಭುತವಾದ ಗ್ರಂಥಗಳ ನೇರವಾದ ಪರಿಚಯವಿದೆ ಎಂದು ನಾನು ಹೇಳು ವುದಿಲ್ಲ. ಆದರೆ ಪವಿತ್ರ ಗ್ರಂಥಗಳ ಸಾರಭೂತವಾದ ಸತ್ವಗಳನ್ನು ನಾನು ಬಲ್ಲೆನೆಂದೂ ನನಗೆ ಅನುಭವವೇದ್ಯವೆಂದೂ ಹೇಳಬಲ್ಲೆ. ಬುದ್ಧಿಗಾಗಲಿ ನೀತಿಗಾಗಲಿ ವಿರೋಧವಾಗಿ ಕಂಡುಬರುವ ಅವುಗಳ ಅರ್ಥವು – ಆ ಅರ್ಥವು ಎಷ್ಟು ಪಾಂಡಿತ್ಯ ಪೂರ್ಣವಾಗಿದ್ದರೂ — ನನ್ನನ್ನು ಬಂಧಿಸಲಾರದು. ಅರ್ಥಾತ್ ಅದನ್ನು ನಾನು ಮನ್ನಿಸುವದಿಲ್ಲ. ಈಗಿನ ಶಂಕರಾಚಾರ್ಯರು ಗಳಾಗಲಿ, ಶಾಸ್ತ್ರಿಗಳಾಗಲೀ ಹಿಂದೂ ವೇದಾಗಮಗಳ ಸರಿಯಾದ ಅರ್ಥ

ವನ್ನು ಹೇಳಬಲ್ಲೆನೆಂದು ಅವರೇ ಹೇಳಿಕೊಂಡರೆ ಅವರ ಅಧಿಕಾರವನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ; ನಿರಾಕರಿಸುತ್ತೇನೆ. ತದ್ವಿರುದ್ಧ ಈ ಗ್ರಂಥಗಳ ಬಗೆಗೆ ನಮ್ಮಲ್ಲಿ ಈಗಿರುವ ಜ್ಞಾನವು ಬಹಳ ಅಸ್ತವ್ಯಸ್ತ ವಾಗಿದೆಯೆಂದು ನಾನು ತಿಳಿದಿದ್ದೇನೆ. ಅಹಿಂಸೆ, ಸತ್ಯ, ಬ್ರಹ್ಮಚರ್ಯೆಗಳಲ್ಲಿ ಪರಿಪೂರ್ಣನಾಗದವನಿಗೆ ಮತ್ತು ಸಂಗ್ರಹ ಬುದ್ಧಿಯನ್ನು ಸಂಪೂರ್ಣ ತ್ಯಜಿಸ ದವನಿಗೆ ಶಾಸ್ತ್ರಗಳ ನಿಜವಾದ ಅರ್ಥವು ತಿಳಿಯುವದಿಲ್ಲೆಂಬ ಹಿಂದು ಸೂತ್ರ ದಲ್ಲಿ ನನ್ನ ನೈಸರ್ಗಿಕ ವಿಶ್ವಾಸವಿದೆ. ಈ ಯುಗದಲ್ಲಿ ಕೋಟ್ಯಾಂತರ ಜನರಿಗೆ ಗುರುಗಳೇ ದೊರೆಯುವದಿಲ್ಲ. ಯಾಕೆಂದರೆ, ಪರಿಪೂರ್ಣ ಪಾವಿತ್ರ್ಯ ಮತ್ತು ಪರಿಪೂರ್ಣ ಪಾಂಡಿತ್ಯ ಒಂದೆಡೆಯಲ್ಲಿ ದೊರೆಯುವದೇ ದುರ್ಲಭ. ಆದರೆ ತನ್ನ ಧರ್ಮದ ಸತ್ಯವನ್ನು ತಿಳಿದುಕೊಳ್ಳುವುದರಲ್ಲಿ ಯಾವನೂ ನಿರಾಶನಾಗಬಾರದು. ಯಾಕೆಂದರೆ ಪ್ರತಿಯೊಂದು ಧರ್ಮದ ಮೂಲತತ್ವ ಗಳು ಬದಲಾವಣೆ ಹೊಂದದಿರುವಂತೆ ಹಿಂದೂಧರ್ಮದ ಮೂಲತತ್ವಗಳೂ ಬದಲಾವಣೆ ಹೊಂದದವಾಗಿವೆ. ಸುಲಭವಾಗಿ ತಿಳಿಯುವಂಥವು; ಆದರೆ ಅವು ಪ್ರತಿಯೊಬ್ಬ ಹಿಂದುವೂ ದೇವರಲ್ಲಿ, ಅವನ ಏಕತ್ವದಲ್ಲಿ, ಪುನರ್ಜನ್ಮ ದಲ್ಲಿ ಮತ್ತು ಮೋಕ್ಷದಲ್ಲಿ ನಂಬಿಕೆಯುಳ್ಳವನು.

ಹಿಂದೂಧರ್ಮದ ವಿಷಯವಾಗಿ ನನ್ನ ಭಾವನೆಯನ್ನು ನನ್ನ ಸತಿಯ ಬಗೆಗೆ ಇರುವ ಭಾವನೆಯನ್ನು ಹೇಗೆ ಬಣ್ಣಿಸಲಾರೆನೋ ಹಾಗೆಯೇ ಬಣ್ಣಿಸ ಲಾರೆನು. ಆಕೆಯು ನನ್ನ ಅಂತಃಕರಣದ ಮೇಲೆ ಪರಿಣಾಮ ಮಾಡುವಷ್ಟು ಜಗತ್ತಿನಲ್ಲಿ ಬೇರಾವ ಮಹಿಳೆಯೂ ಪರಿಣಾಮ ಮಾಡಲಾರಳು. ಆಕೆಯಲ್ಲಿ ದೋಷಗಳಿಲ್ಲವೆಂದಲ್ಲ. ಅವಳಲ್ಲಿ ನನಗೆ ಗೊತ್ತಿರುವುದಕ್ಕಿಂತ ಹೆಚ್ಚು ದೋಷ ಗಳಿವೆಯೆಂದು ನಾನು ನಿರ್ಭಯವಾಗಿ ಹೇಳಬಲ್ಲೆನು. ಆದರ ಅದರಲ್ಲಿ ಅಭೇದ್ಯವಾದ ಅನುಬಂಧವಿದೆ. ಹಾಗೆಯೇ ಹಿಂದೂ ಧರ್ಮದಲ್ಲಿ ದೋಷ ಗಳಿದ್ದರೂ ಅದರ ವಿಷಯವಾಗಿ ನನ್ನಲ್ಲಿ ಪ್ರೀತಿಗೌರವಗಳಿವೆ. ಗೀತೆಯ ಅಥವಾ ತುಲಸೀದಾಸ ರಾಮಾಯಣದ ಕಾವ್ಯಮಾಧುರ್ಯದಿಂದ ಮುಗ್ಧ ನಾಗುವಷ್ಟು ಬೇರಾವುದರಿಂದಲೂ ನಾನು ಮುಗ್ಧನಾಗುವದಿಲ್ಲ. ಹಿಂದೂ ಧರ್ಮದಲ್ಲಿ ಈ ಎರಡು ಪುಸ್ತಕಗಳು ಮಾತ್ರ ನನಗೆ ಗೊತ್ತಿವೆಯೆಂದರೂ ಚಿಂತೆಯಿಲ್ಲ. ಇದೇ ನನ್ನ ಜೀವನದ ಕಡೆಯ ಉಸಿರೆಂದು ಭಾವಿಸಿದ ಸಂದರ್ಭಗಳಲ್ಲಿ ಗೀತೆಯೇ ನನಗೆ ನೆಮ್ಮದಿ ಕೊಟ್ಟಿದೆ. ದೊಡ್ಡ ಹಿಂದೂ

ಮಂದಿರಗಳಲ್ಲಿ ಇಂದು ನಡೆಯುತ್ತಿರುವ ಅನಾಚಾರಗಳನ್ನು ನಾನು ಬಲ್ಲೆನು. ಆದರೆ ಆಡಬಾರದಂತಹ ದೋಷಗಳಿದ್ದರೂ ಅವುಗಳ ಬಗೆಗೆ ನನ್ನ ಪ್ರೀತ್ಯಾದರಗಳಿವೆ. ಅವುಗಳಲ್ಲಿ ನನಗಿರುವಷ್ಟು ಆಸ್ಥೆಯು ಇನ್ನಾವುದರಲ್ಲಿಯೂ ಇಲ್ಲ. ನಾನು ನೂರಕ್ಕೆ ನೂರರಷ್ಟು ಸುಧಾರಕನೇನೋ ನಿಜ. ಆದರೆ ಹಿಂದೂತತ್ವದ ಸಾರವನ್ನು ತ್ಯಜಿಸುವಷ್ಟು ಉತ್ಸಾಹದ ಅತಿರೇಕವು ನನ್ನಲ್ಲಿಲ್ಲ. ಮೂರ್ತಿಪೂಜೆಯಲ್ಲಿ ನನಗೆ ನಂಬಿಕೆ ಇಲ್ಲದಿಲ್ಲವೆಂದು ನಾನು ಹೇಳಿದ್ದೇನೆ. ಮೂರ್ತಿಯು, ಪ್ರತಿಮೆಯು, ನನ್ನಲ್ಲಿ ಪೂಜ್ಯತೆಯ ಭಾವನೆಯನ್ನು ಹುಟ್ಟಿಸುವದಿಲ್ಲ. ಆದರೆ ವಿಗ್ರಹಾರಾಧನೆಯು ಮಾನವಸ್ವಭಾವದ ಒಂದಂಗವೇ ಎಂದು ನನಗನ್ನಿಸುತ್ತದೆ. ಪ್ರತೀಕಗಳಿಗಾಗಿ ನಾವು ಹಾತೊರೆಯುತ್ತೇವೆ. ಇತರ ಸ್ಥಳಗಳಿಗಿಂತಲೂ ದೇವಮಂದಿರಗಳಲ್ಲಿ ನಾವು ಹೆಚ್ಚು ಸಮಾಧಾನದಿಂದ ಇರಬಲ್ಲೆವೇಕೆ? ವಿಗ್ರಹಗಳು ಆರಾಧನೆಯ ಅಂಗ. ಯಾವ ಹಿಂದೂವೂ ವಿಗ್ರಹವೇ ದೇವರೆಂದು ಭಾವಿಸುವುದಿಲ್ಲ. ವಿಗ್ರಹಾರಾಧನೆಯು ಮಹತ್ಪಾಪವೆಂದು ನಾನು ಭಾವಿಸುವದಿಲ್ಲ. ಈ ಕಾರಣಗಳಿಂದ ಹಿಂದೂಧರ್ಮವು ಸಂಕುಚಿತ ಭಾವನೆಯ ಧರ್ಮವಲ್ಲವೆಂಬುದು ಸ್ಪಷ್ಟ. ಇದರಲ್ಲಿ ಜಗತ್ತಿನ ಎಲ್ಲ ಸಾಧುಸಂತರ ಉಪಾಸನೆಗೆ ಅವಕಾಶವಿದೆ. ಸಾಮಾನ್ಯವಾಗಿರುವ ಅರ್ಥದಲ್ಲಿ ಇದು ಮತಾಂತರಗೊಳಿಸುವ ಧರ್ಮವಲ್ಲ. ಇದು ಅನೇಕ ಬಣ್ಣಗಳನ್ನು ತನ್ನಲ್ಲಿ ಲೀನಗೊಳಿಸಿಕೊಂಡಿದೆ ಎಂಬುದು ನಿಸ್ಸಂದೇಹ. ಆದರೆ ಈ ವಿಲೀನತೆಯು ಅಗೋಚರವಾಗಿ ನಡೆದ ಪರಿಣಾಮ ಸ್ವರೂಪವಾಗಿದೆ. ದೇವರನ್ನು ಅರ್ಚಿಸುವಂತೆ ಪ್ರತಿಯೊಬ್ಬನನ್ನೂ ಅವನ ಶ್ರದ್ಧೆಗೆ ಅನುಗುಣವಾಗಿ ಹಿಂದೂಧರ್ಮವು ಪ್ರೇರೇಪಿಸುತ್ತದೆ. ಆದುದರಿಂದ ಇದು ಎಲ್ಲ ಧರ್ಮಗಳೊಡನೆ ಶಾಂತಿಯಿಂದ ಇರಬಯಸುತ್ತದೆ.

ಹಿಂದೂಧರ್ಮದ ವಿಷಯದಲ್ಲಿ ನನ್ನ ಕಲ್ಪನೆಯು ಹೀಗಿರುವದರಿಂದ ಅಸ್ಪೃಶ್ಯತೆಯನ್ನು ಒಪ್ಪಲು ನನಗೆ ಸಾಧ್ಯವಾಗಿಲ್ಲ. ಇದು ಒಂದು ಗಂಡವೆಂದು ನನ್ನ ಭಾವನೆ.

ಸನಾತನ ಹಿಂದೂ

ಗಾಂಧೀಜಿಯು ತಮ್ಮ ಹಿಂದೂಧರ್ಮದ ಅರ್ಥವಿವರಣೆಯನ್ನು ಟೀಕಿಸಿದ ಓರ್ವ ಪತ್ರಲೇಖನಿಗೆ ಹೀಗೆ ಬರೆದರು :

ನಾನು ಕೇವಲ ಶಬ್ದನಿಷ್ಠನಲ್ಲ. ಆದುದರಿಂದ ವಿಶ್ವದ ವಿವಿಧ ಧರ್ಮ ಗ್ರಂಥಗಳ ತಿರುಳನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸುತ್ತೇನೆ. ಅರ್ಥ ಮಾಡಿಕೊಳ್ಳಲು ಆ ಧರ್ಮಗ್ರಂಥಗಳೇ ವಿಧಿಸಿದ ಸತ್ಯ ಅಹಿಂಸೆಗಳ ಒರೆ ಗಲ್ಲನ್ನೇ ಉಪಯೋಗಿಸುತ್ತೇನೆ. ಆ ಒರೆಗಲ್ಲಿಗೆ ಒಗ್ಗದುದನ್ನೆಲ್ಲ ನಾನು ಬಿಡುತ್ತೇನೆ. ಅದಕ್ಕೆ ಹೊಂದುವದನ್ನು ನಾನು ಸ್ವೀಕರಿಸುತ್ತೇನೆ. ವೇದ ಗಳನ್ನು ಓದುವ ಧಾರ್ಷ್ಟ್ಯವನ್ನು ತೋರಿದ ಶೂದ್ರನನ್ನು ರಾಮಚಂದ್ರನು ದಂಡಿಸಿದನೆಂಬ ಕಥೆಯನ್ನು ಪ್ರಕ್ಷಿಪ್ತವೆಂದು ನಾನು ತಿರಸ್ಕರಿಸುತ್ತೇನೆ. ಹೇಗಿದ್ದರೂ ನನ್ನ ಕಲ್ಪನೆಯಲ್ಲಿ ಪರಿಪೂರ್ಣನೆಂದು ಭಾವಿಸಲ್ಪಟ್ಟಿರುವ ರಾಮನನ್ನು ನಾನು ಪೂಜಿಸುತ್ತೇನೆ. ಹೊಸಹೊಸ ಐತಿಹಾಸಿಕ ಸಂಶೋ ಧನಗಳ ಪರಿಣಾಮವಾಗಿ ಆತನ ಜೀವನ ಚರಿತ್ರೆಗೆ ಸಂಬಂಧಿಸಿದ ಸಂಗತಿ ಗಳಲ್ಲಿ ವ್ಯತ್ಯಾಸಗಳಾದರೂ ಆಗಬಹುದು. ತುಳಸೀದಾಸರ ರಾಮ ಈ ಐತಿಹಾಸಿಕ ರಾಮನಲ್ಲ. ಈ ಇತಿಹಾಸದ ದೃಷ್ಟಿಯಿಂದಲೇ ನಿರ್ಣಯ ಮಾಡುವುದಾದರೆ ತುಳಸೀದಾಸನ ರಾಮಾಯಣವು ಕಸಕ್ಕೆ ಸಮವೆನಿಸೀತು. ಆದರೆ ಆಧ್ಯಾತ್ಮಿಕ ಅನುಭವದ ದೃಷ್ಟಿಯಲ್ಲಿ ಆ ಪುಸ್ತಕವು ನನಗಂತೂ ಅಸದೃಶವಾಗಿದೆ. ಅದರಲ್ಲಿಯೂ ಇತ್ತೀಚೆಗೆ ಪ್ರಕಟವಾಗಿರುವ ತುಳಸೀ ದಾಸ ರಾಮಾಯಣದ ಅನೇಕ ಪ್ರತಿಗಳಲ್ಲಿ ಕಂಡುಬರುವ ಪ್ರತಿಯೊಂದು ಶಬ್ದವೂ ಪ್ರಮಾಣಭೂತವೆಂದು ನಾ ಹೇಳಲಾರೆ. ಆ ಗ್ರಂಥದಲ್ಲಿ ಭರಿತ ವಾಗಿರುವ ಚೈತನ್ಯವು ನನ್ನನ್ನು ಮುಗ್ಧಗೊಳಿಸಿದೆ. ವೇದಾಧ್ಯಯನದ ಅಧಿಕಾರವು ಶೂದ್ರರಿಗಿಲ್ಲವೆಂಬುದನ್ನು ನಾನು ಒಪ್ಪುವುದಿಲ್ಲ. ನಿಜವಾಗಿ ಇಂದು ನಾವೆಲ್ಲರೂ (ಪರದಾಸ್ಯದಲ್ಲಿರುವವರೆಗೆ) ಪ್ರಾಮುಖ್ಯವಾಗಿ ಶೂದ್ರರೇ ಆಗಿದ್ದೇವೆ. ಜ್ಞಾನವು ಯಾವದೊಂದು ವರ್ಗದ ಅಥವಾ ಗುಂಪಿನ ಹಕ್ಕಾಗ ಲಾರದು. ಆದರೆ ಪೂರ್ವಭಾವೀ ಶಿಕ್ಷಣವಿಲ್ಲದೆ ಉದಾತ್ತವೂ ಸೂಕ್ಷ್ಮವೂ ಆದ ತತ್ವಗಳನ್ನು ತಿಳಿದುಕೊಳ್ಳಲಾರರೆಂಬುದನ್ನು ನಾನು ಅರಿಯಬಲ್ಲೆನು.

ಅತ್ಯುನ್ನತ ಪ್ರದೇಶಗಳಲ್ಲಿರುವ ವಿರಳ ವಾತಾವರಣದಲ್ಲಿ ಪೂರ್ವಸಿದ್ಧತೆ ಇಲ್ಲದೆ ಉಸಿರಾಡುವುದು ಎಷ್ಟು ಕಷ್ಟವೋ ಮತ್ತು ಸರಳಗಣಿತ ಪರಿಚಯವಿಲ್ಲದವರಿಗೆ ಪ್ರೌಢಗಣಿತ ಹೇಗೆ ತಿಳಿಯಲಾರದೋ ಹಾಗೆ ಕೊನೆಯದಾಗಿ ಕೆಲ ಹಿತಕರವಾದ ಸಂಪ್ರದಾಯಗಳಲ್ಲಿ ನನಗೆ ಶ್ರದ್ಧೆಯಿದೆ. ಗಾಯತ್ರೀ ಪುನಶ್ಚರಣೆಗೆ ಒಂದು ಸಂಬಂಧಪಟ್ಟ ಸಂಪ್ರದಾಯವಿದೆ. ನಿರ್ದಿಷ್ಟ ಸಮಯಕ್ಕೆ ವಿಧ್ಯುಕ್ತ ರೀತಿಯಲ್ಲಿ ಸ್ನಾನ ಸಂಧ್ಯಾದಿಗಳನ್ನು ಮಾಡಿಕೊಂಡು ಅದನ್ನು ಪಠಿಸಬೇಕೆಂಬುದೇ ಆ ಸಂಪ್ರದಾಯ. ಆ ಸಂಪ್ರದಾಯಗಳಲ್ಲಿ ನನ್ನ ವಿಶ್ವಾಸವಿರುವದರಿಂದ ಹಾಗೂ ಯಾವಾಗಲೂ ಅವುಗಳಂತೆ ನಡೆಯುವದು ನನ್ನಿಂದಾಗದಿದ್ದುದರಿಂದ ಕಳೆದ ಕೆಲ ವರ್ಷಗಳಲ್ಲಿ ನಾನು ಈಚಿನ ಸಂತರ ಮಾರ್ಗವನ್ನು ಅನುಸರಿಸುತ್ತಿದ್ದೇನೆ. ಆದಪ್ರಯುಕ್ತ ಭಾಗವತದ ದ್ವಾದಶಾಕ್ಷರ ಮಂತ್ರದಿಂದಲೇ ನಾನು ತೃಪ್ತನಾಗಿರುವೆನು. ಅಥವಾ ಇನ್ನೂ ಸುಲಭವಾದ ತುಳಸೀದಾಸರ ವಾಕ್ಯಗಳಿಂದಲೂ ಗೀತೆಯ ಕೆಲ ಶ್ಲೋಕಪಠನದಿಂದಲೂ ಮತ್ತು ಪ್ರಾಕೃತದಲ್ಲಿಯ ಕೆಲ ಭಜನೆಗಳಿಂದಲೂ ನಾನು ತೃಪ್ತಿಗೊಂಡಿದೇನೆ. ಇವೇ ನನ್ನ ದೈನಂದಿನದ ಆಧ್ಯಾತ್ಮಿಕ ಆಹಾರ—ನನ್ನ ಗಾಯತ್ರಿ. ದಿನದಿನಕ್ಕೂ ನನಗೆ ಬೇಕಾಗುವ ಶಾಂತಿ ಸಮಾಧಾನಗಳನ್ನು ಇವು ನೀಡುತ್ತಿವೆ.

(ಯಂಗ್ ಇಂಡಿಯಾ : ೨೭-೮-೨೫)

ಹಿಂದೂತ್ವವು ಬರೀ ಬಾಹ್ಯ ಸಂಪ್ರದಾಯವಲ್ಲ

ಧರ್ಮದ ಹೆಸರಿನಲ್ಲಿ ಹಿಂದುಗಳಾದ ನಾವು ಬಾಹ್ಯ ಸಂಪ್ರದಾಯಗಳಿಗೆ ಅವಾಸ್ತವ ಮಹತ್ವವನ್ನು ಕೊಟ್ಟಿರುವೆವು. ಕೇವಲ ತಿಂಡಿ ತೀರ್ಥಗಳ ವಿಷಯವನ್ನಾಗಿ ಮಾಡಿ ಧರ್ಮವನ್ನು ಅಧೋಗತಿಗಿಳಿಸಿದ್ದೇವೆ. ಜ್ಞಾನೋದ್ದೀಪಿತವಾದ ಸ್ವಾರ್ಥತ್ಯಾಗ, ಅಂತಃಶುದ್ಧಿ ಮತ್ತು ಉಗ್ರ ಆತ್ಮನಿಗ್ರಹ ಇವುಗಳಿಂದ ಬ್ರಾಹ್ಮಣ್ಯಕ್ಕೆ ಅದ್ವಿತೀಯ ಸ್ಥಾನವು ಪ್ರಾಪ್ತವಾಗಿದೆ. ಆಹಾರ ಮತ್ತು ಮಾನವ ಸಂಪರ್ಕ ಇವುಗಳ ಆಧ್ಯಾತ್ಮಿಕ ಪರಿಣಾಮಗಳಿಗೆ ಅವಾಸ್ತವ ಮಹತ್ವವನ್ನು ಕೊಟ್ಟರೆ ಹಿಂದೂ ಜನರು ಹಾಳಾಗುವದು ಖಂಡಿತ. ಆಂತರಿಕವಾಗಿ ಅನೇಕ ಆಮಿಷ ಪ್ರಲೋಭನಗಳ ಮಧ್ಯದಲ್ಲಿ ಸಿಕ್ಕವರಾದ

ಮತ್ತು ಅತ್ಯಂತ ನೀಚವೂ ಅಗ್ರಾಹ್ಯವೂ ಆದ ವಿಚಾರ ತರಂಗಗಳ ಸಂಪರ್ಕ ದಿಂದ ಕಲಂಕಿತರಾದ ನಾವು ಅಜ್ಞಾನದಿಂದಲೂ ಅಹಂಕಾರಾತಿರೇಕದಿಂದಲೂ ನಮಗಿಂತಲೂ ಕೆಳತರಗತಿಯವರೆಂದು ತಿಳಿದುಕೊಂಡ ಕೆಲಜನರ ಸ್ಪರ್ಶದ ಸಂಪರ್ಕಕ್ಕೆ ಅತಿರೇಕವಾದ ಮಹತ್ವವನ್ನು ಕೊಡದಿರೋಣ. ಸರ್ವಶಕ್ತನ ಸಿಂಹಾಸನದ ಮುಂದೆ ನಮ್ಮ ಪರೀಕ್ಷೆಯಾಗುವಾಗ ನಾವು ಏನನ್ನು ತಿಂದೆವು ಅಥವಾ ಏನನ್ನು ತಿನ್ನಲಿಲ್ಲವೆಂಬುದನ್ನಾಗಲಿ ಇಲ್ಲವೆ ಯಾರನ್ನು ಮುಟ್ಟಿ ದೆವು ಅಥವಾ ಮುಟ್ಟಲಿಲ್ಲೆಂಬುದು ಪರಿಗಣಿಸಲ್ಪಡುವದಿಲ್ಲ. ಆದರೆ ಯಾರ ಸೇವೆಯನ್ನು ಹೇಗೆ ಮಾಡಿದೆವೆಂಬುದನ್ನು ನೋಡಲಾಗುವದು. ಒಬ್ಬನೇ ಒಬ್ಬ ಮಾನವಪ್ರಾಣಿಯ ಸೇವೆಯನ್ನು ಸಂಕಟಸಮಯದಲ್ಲಿ ಮಾಡಿದರೆ ದೇವರ ದೃಷ್ಟಿಯಲ್ಲಿ ಆತನ ಅನುಗ್ರಹಕ್ಕೆ ನಾವು ಪಾತ್ರರಾಗುವೆವು. ದುಷ್ಟ ಸಂಪರ್ಕವನ್ನು ತ್ಯಜಿಸುವಂತೆ ಕೆಟ್ಟ ಮತ್ತು ಉತ್ತೇಜಕ ಆಹಾರವನ್ನು ನಾವು ವರ್ಜಿಸಬೇಕು. ಆದರೆ ಇವುಗಳಿಗೆ ಅಂದರೆ ಈ ಆಚರಣೆಗಳಿಗೆ ಆಳತೆಗೆಟ್ಟ ಮಹತ್ವವನ್ನು ಕೊಡುವದು ಬೇಡ. ನಮ್ಮ ವಂಚನೆ, ಡಂಭಾ ಚಾರ ಹಾಗು ಇತರ ದುರ್ಗಣಗಳನ್ನು ಕೆಲ ಆಹಾರ ಬಹಿಷ್ಕಾರ ನಿಯಮ ಗಳಿಂದ ಮುಚ್ಚಿಕೊಳ್ಳುವುದು ಬೇಡ. ಆತನ ಸಂಪರ್ಕವು ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಗೆ ಅಪಾಯವನ್ನು ಮಾಡೀತೆಂಬ ಅಂಜಿಕೆಯಿಂದ ಪತಿತನಾದ ಇಲ್ಲವೆ ಮಲಿನನಾದ ಬಂಧುವೊಬ್ಬನ ಸೇವೆಯನ್ನು ಮಾಡದಿರ ಕೂಡದು.

ವಿಧ್ಯುಕ್ತ ಧರ್ಮವಲ್ಲ

ಹಿಂದೂಧರ್ಮವು ವಿಧ್ಯುಕ್ತ ಧರ್ಮವಲ್ಲ. ಹಿಂದೂಧರ್ಮದಲ್ಲಿ ನಾವು ಅರಿಯದಂತಹ ನೂರಾರು ಸಾವಿರಾರು ಗ್ರಂಥಗಳಿವೆ. ಅವುಗಳನ್ನೆಲ್ಲ ಶಾಸ್ತ್ರಗಳೆಂದು ಕರೆಯುವರು. ಯಾವುವೊಂದು ವಿಷಯವು ಒಳಿತೋ ಕೆಡುಕೋ ಎಂದು ತಿಳಿಯಬಯಸುವಾಗ ನಾನು ಒಂದು ಗ್ರಂಥಕ್ಕೆ ಶರಣಾಗು ವುದಿಲ್ಲ. ಆದರೆ ಹಿಂದೂಧರ್ಮದ ಮೇಲಾಗುವ ಒಟ್ಟು ಪರಿಣಾಮವನ್ನು ನೋಡುತ್ತೇನೆ. ಹಿಂದೂಧರ್ಮದಲ್ಲಿ ಪ್ರತಿಯೊಂದು ಶಾಸ್ತ್ರವನ್ನೂ ಆಚಾರ

ನಿಯಮವನ್ನೂ ಅಳೆಯುವ ಒಂದು ಶ್ರೇಷ್ಠವಾದ ಮಾನದಂಡವಿದೆ. ಸತ್ಯವೇ ಆ ಮಾನದಂಡ. ಸತ್ಯದಿಂದ ಯಾವುದು ಚ್ಯುತವಾಗುವದೋ ಅದನ್ನು ಅದು ಎಲ್ಲಿಂದಲೇ ಬಂದಿದ್ದರೂ—ಬಿಡತಕ್ಕದ್ದು. ಆದುದರಿಂದ ಸತ್ಯಕ್ಕೆ ವಿಸಂಗತವಾದ ರೂಢಿಯನ್ನು ಅನುಮೋದಿಸುವವನೇ ಅದು ಸರಿಯೆಂದು ತೋರಿಸಿಕೊಡುವ ಹೊಣೆಯನ್ನು ಹೊರಬೇಕು. ಉದಾಹರಣಾರ್ಥವಾಗಿ ಅಸ್ಪೃಶ್ಯತೆಯ ರೂಢಿಯನ್ನು ಎತ್ತಿ ಹಿಡಿಯುವವನೇ ಸತ್ಯಕ್ಕೆ ಅದು ಸುಸಂಗತವಾಗಿದೆಯೆಂದು ಸಿದ್ಧಮಾಡಿಕೊಡತಕ್ಕದ್ದು. ಅದನ್ನು ಅವನು ತೋರಿಸಿಕೊಡದಿದ್ದರೆ ಅದಕ್ಕೆ ಆಧಾರಗಳಾಗಿ ಯಾವ ಪ್ರಮಾಣಗಳನ್ನು ತೋರಿಸಿದರೂ ನನಗೆ ಅವು ಅಸಂಗತವಾಗಿವೆ.

(ಯಂಗ್ ಇಂಡಿಯಾ : ೨೯-೯-೨೭)

ಹಿಂದೂತ್ವದ ಮುಖ್ಯ ಮಹತ್ವ

ತುಲನಾತ್ಮಕ ದೇವತಾ ಶಾಸ್ತ್ರದ ಅಧ್ಯಾಪಕಿಯಾದ ಅಮೇರಿಕದ ಮಹಿಳೆಯೊಬ್ಬಳು ಭಾರತೀಯ ಧರ್ಮಗಳ ಅಧ್ಯಯನಕ್ಕಾಗಿ ಭಾರತಕ್ಕೆ ಬಂದಾಗ "ಗಾಂಧೀಜಿಯು ಹಿಂದೂಧರ್ಮದ ಜೀವಜೀವಾಳ"ವೆಂದು ತನಗೆ ಅನೇಕರು ಹೇಳಿದ್ದುದನ್ನು ಕೇಳಿ ಹಿಂದೂಧರ್ಮದ ಮುಖ್ಯ ಮಹತ್ವವು ಯಾವುದೆಂಬುದನ್ನು ಒಪ್ಪಿಡಿಯಲ್ಲಿ ಹೇಳಬೇಕೆಂದು ಗಾಂಧೀಜಿಯವರನ್ನು ಕೇಳಿದಳು. "ಪುಸ್ತಕಗಳಿಂದ ಏನಾದರೊಂದನ್ನು ಕಲಿಸುವದು ಜಾಣತನವಲ್ಲ. ಈ ಜೀವಂತ ಧರ್ಮಗಳ ನಿಜ ಪ್ರತಿನಿಧಿಗಳನ್ನು ಕಣ್ಣಾರೆ ಕಾಣಬೇಕು," ಎಂದಳು ಆಕೆ. ಆಕೆಗೆ ಉತ್ತರವಾಗಿ ಗಾಂಧೀಜಿಯು ಹೇಳಿದುದು ಹೀಗಿದೆ :—

ಜೀವವೆಲ್ಲ (ಬರೀ ಮಾನವರಲ್ಲ ಎಲ್ಲ ಪ್ರಾಣಿಗಳೂ,) ಒಂದೇ ಆಗಿದೆಯೆಂಬ ನಂಬಿಕೆಯಲ್ಲಿಯೇ ಹಿಂದೂತ್ವದ ಮುಖ್ಯ ಮಹತ್ವವಿದೆ. ಅಂದರೆ ಎಲ್ಲ ಜೀವವು ಒಂದೇ ಅಂದರೆ ವಿಶ್ವಮಾನ್ಯ ಉಗಮದಿಂದಲೇ ಎಲ್ಲ ಜೀವವೂ ಉದ್ಭವಿಸುವವು. ಅದಕ್ಕೆ ಬೇಕಾದರೆ ದೇವರೆನ್ನಿ, ಪರಮಾತ್ಮನೆನ್ನಿ, ಇಲ್ಲವೆ 'ಅಲ್ಲಾ' ಎನ್ನಿ. ಹಿಂದೂಧರ್ಮದಲ್ಲಿ ವಿಷ್ಣು ಸಹಸ್ರನಾಮ

ಎಂಬ ಗ್ರಂಥವಿದೆ. ಒಂದು ಸಾವಿರ ದೇವರ ಹೆಸರುಗಳೆಂದು ಅದರ ಸರಳ ಅರ್ಥ. ಈ ಒಂದು ಸಾವಿರ ಹೆಸರುಗಳು ಮಾತ್ರ ಅವನಿಗುಂಟೆಂದು ಇದರ ಅರ್ಥವಲ್ಲ. ಅವನಿಗೆ ನೀವು ಎಷ್ಟು ಹೆಸರುಗಳನ್ನು ಕೊಡುವಿರೋ ಅಷ್ಟು ಹೆಸರುಗಳುಂಟು. ಏಕಮೇವಾದ್ವಿತೀಯನಾದ ದೇವನ ಹೆಸರನ್ನೇ ನೀವು ತೆಗೆದುಕೊಳ್ಳುತ್ತಿದ್ದರೆ ಮಾತ್ರ ನೀವು ಅವನಿಗೆ ಬೇಕಾದಷ್ಟು ಹೆಸರುಗಳನ್ನು ಕೊಡಬಹುದು. ಅವನು ನಾಮರಹಿತನಾಗಿರುವನೆಂದೂ ಇದರ ಅರ್ಥ.

ಸಮಸ್ತ ಜೀವರಾಶಿಯ ಐಕ್ಯವು ಹಿಂದೂಧರ್ಮದ ಒಂದು ವೈಶಿಷ್ಟ್ಯವಾಗಿದೆ. ಅದರಲ್ಲಿ ಬರೀ ಮನುಷ್ಯವರ್ಗದವರಿಗೆ ಮಾತ್ರ ಮುಕ್ತಿ ಮೀಸಲಾಗಿಲ್ಲ; ದೇವನು ಹುಟ್ಟಿಸಿದ ಸಮಸ್ತ ಪ್ರಾಣಿಗಳಿಗೂ ಮೋಕ್ಷಾಧಿಕಾರವುಂಟೆಂಬುದೇ ಹಿಂದೂಧರ್ಮದ ವೈಶಿಷ್ಟ್ಯ. ಮನುಷ್ಯರೂಪದಲ್ಲಿಯ ಹೊರತು ಮುಕ್ತಿಯು ಅಶಕ್ಯವೆಂದಿರಬಹುದು. ಆದರೆ ಅದರಿಂದ ಮನುಷ್ಯನು ಸೃಷ್ಟಿಕರ್ತನಾಗಲಾರ. ಅದು ಅವನನ್ನು ದೇವಸೃಷ್ಟಿಯ ಸೇವಕನನ್ನಾಗಿ ಮಾಡುತ್ತದೆ. ಮಾನವ ಬಂಧುತ್ವದ ಬಗೆಗೆ ನಾವು ಮಾತನಾಡುವಾಗ ನಾವು ಅಲ್ಲಿಗೇ ನಿಂತು ಉಳಿದೆಲ್ಲ ಪ್ರಾಣಿಗಳು ಮಾನವನ ಉಪಯೋಗಕ್ಕಾಗಿರುವವೆಂದು ತಿಳಿಯುತ್ತೇವೆ. ಆದರೆ ಹಿಂದೂಧರ್ಮಕ್ಕೆ ಶೋಷಣವು ಮಾನ್ಯವಿಲ್ಲ. ಸಮಸ್ತ ಜೀವರಾಶಿಯ ಕೂಡ ಏಕತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಕಾರ್ಯದಲ್ಲಿ ಮಾನವನು ಮಾಡಬೇಕಾದ ತ್ಯಾಗಕ್ಕೆ ಮಿತಿಯಿಲ್ಲ. ಆದರೆ ಆದರ್ಶದ ವೈಶಾಲ್ಯ ನಿಮ್ಮ ಆಸೆಗಳಿಗೆ ಎಲ್ಲೆಯನ್ನು ನಿರ್ಮಿಸುತ್ತದೆಂಬುದು ಮಾತ್ರ ನಿಜ. 'ನಿಮ್ಮ ಆವಶ್ಯಕತೆಗಳನ್ನು ಬೆಳೆಸಿಕೊಳ್ಳಿರಿ' ಎಂದು ಹೇಳುವ ಆಧುನಿಕ ನಾಗರಿಕತೆಗೆ ವಿರುದ್ಧವಾದುದೇ ಈ ನಿಲುವುಯೆಂದು ನಿಮಗೆ ತಿಳಿದಿರಲು ಸಾಕು. ಆ ಶ್ರದ್ಧೆಯುಳ್ಳವರಿಗೆ ಆವಶ್ಯಕತೆಗಳ ಹೆಚ್ಚಳವೆಂದರೆ, ಅಪ್ರಮೇಯನನ್ನು ಚೆನ್ನಾಗಿ ತಿಳಿದುಕೊಳ್ಳಲು ಅಗತ್ಯವಾದ ಜ್ಞಾನದ ಅಭಿವೃದ್ಧಿಯೆಂದು ಅರ್ಥವಾಗುತ್ತದೆ. ಇದಕ್ಕೆ ವಿರುದ್ಧವಾಗಿ, ವಿಶ್ವಾತ್ಮನೊಡನೆ ಅಂತಿಮವಾಗಿ ಐಕ್ಯವಾಗಲು ಮಾನವನ ಬೆಳವಣಿಗೆಗೆ ಆವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುವ ಸುಖಲೋಲುಪತೆ ಆತಂಕಪ್ರಾಯವೆಂದು ಹಿಂದೂಧರ್ಮವು ಭಾವಿಸುತ್ತದಲ್ಲದೆ ಅವುಗಳನ್ನು ವರ್ಜಿಸಬೇಕೆಂದು ಹೇಳುತ್ತದೆ. (ಹರಿಜನ: ೨೬-೧೨-೩೬)

ಹಿಂದೂತ್ವದ ಮೂಲಕ ರಾಷ್ಟ್ರೀಯತ್ವ

"ಹಿಂದೆ ನಾವು ಒಂದು ರಾಷ್ಟ್ರವಾಗಿರಲಿಲ್ಲ; ಒಂದು ರಾಷ್ಟ್ರವಾಗಲು ನಮಗೆ ಅನೇಕ ಶತಮಾನಗಳು ಬೇಕೆಂದು" ಆಂಗ್ಲರು ನಮಗೆ ಕಲಿಸಿರುವರು. ಇದಕ್ಕೆ ಯಾವ ಆಧಾರವೂ ಇಲ್ಲ. ಅವರು ಭಾರತಕ್ಕೆ ಬರುವ ಮುನ್ನವೇ ನಾವು ಒಂದು ರಾಷ್ಟ್ರವಾಗಿದ್ದೆವು. ಒಂದೇ ವಿಚಾರ ನಮ್ಮನ್ನು ಪ್ರೇರಿಸುತ್ತಿತ್ತು. ನಮ್ಮ ಜೀವನಕ್ರಮವೂ ಒಂದೇ ಆಗಿದ್ದಿತು. ನಾವು ಒಂದು ರಾಷ್ಟ್ರ (ಜನಾಂಗ) ವಾಗಿದ್ದುದರಿಂದಲೇ ಅವರಿಗೆ ಒಂದು ರಾಜ್ಯವನ್ನು ಸ್ಥಾಪಿಸಲು ಶಕ್ಯವಾಯಿತು. ಬಳಿಕ ನಮ್ಮನ್ನು ಅವರು ಒಡೆದರು.

ನಾವು ಒಂದು ರಾಷ್ಟ್ರವಾಗಿದ್ದುದರಿಂದ ನಮ್ಮಲ್ಲಿ ಭೇದಗಳಿಲ್ಲವೆಂದು ನಾನು ಸೂಚಿಸಲೆಳಸುವದಿಲ್ಲ. ಆದರೆ ನಮ್ಮ ಮುಂದಾಳುಗಳು ಭಾರತದಲ್ಲೆಲ್ಲ ಎತ್ತಿನ ಬಂಡಿಗಳಲ್ಲಾಗಲಿ ಕಾಲ್ನಡಗೆಯಿಂದಾಗಲಿ ಸಂಚಾರ ಮಾಡುತ್ತಿದ್ದರು. ಒಬ್ಬರೊಬ್ಬರ ಭಾಷೆಯನ್ನು ಅವರು ಕಲಿತರು. ಅವರಲ್ಲಿ ಪ್ರತ್ಯೇಕತೆಯ ಮನೋಭಾವವಿರಲಿಲ್ಲ. ದಕ್ಷಿಣದಲ್ಲಿ ರಾಮೇಶ್ವರ, ಪೂರ್ವದಲ್ಲಿ ಜಗನ್ನಾಥ, ಉತ್ತರದಲ್ಲಿ ಹರಿದ್ವಾರ ಇವು ಕ್ಷೇತ್ರತೀರ್ಥಗಳೆಂದೂ ಯಾತ್ರಾಸ್ಥಳಗಳೆಂದೂ ಸ್ಥಾಪಿಸಿರುವಲ್ಲಿ ದೂರದೃಷ್ಟಿಯುಳ್ಳ ನಮ್ಮ ಪೂರ್ವಜರ ಉದ್ದೇಶವೇನಿತ್ತೆಂದು ತಿಳಿದಿರುವಿರಿ? ಅವರೇನೂ ಮೂರ್ಖರಿರಲಿಲ್ಲವೆಂದು ನೀವು ಒಪ್ಪುವಿರಿ. ದೇವರ ಪೂಜೆಯನ್ನು ಮನೆಗಳಲ್ಲಿಯೆ ಮಾಡಬಹುದೆಂಬ ಮಾತು ಅವರಿಗೆ ಗೊತ್ತಿತ್ತು. ಅಂತಃಕರಣಶುದ್ಧಿಯುಳ್ಳವರ ಮನೆಯಲ್ಲಿ ಗಂಗೆಯಿರುವಳೆಂದು ಅವರು ನಮಗೆ ಕಲಿಸಿದರು. ಆದರೆ ಭಾರತವು ನಿಸರ್ಗಸೃಷ್ಟವಾದ ಅವಿಭಕ್ತ ಭೂಮಿಯೆಂದು ಅವರು ಕಂಡರು. ಆದುದರಿಂದ ಅದು ಒಂದೇ ರಾಷ್ಟ್ರವಾಗಿರಬೇಕೆಂದು ಪ್ರತಿಪಾದಿಸಿದರು. ಹೀಗೆ ಪ್ರತಿಪಾದಿಸುತ್ತ ವಿವಿಧ ಭಾಗಗಳಲ್ಲಿ ಪವಿತ್ರ ಕ್ಷೇತ್ರಗಳನ್ನು ನಿರ್ಮಿಸಿದರು. ಮತ್ತು ಬೇರೆ ದೇಶಗಳಲ್ಲಿ ಅರಿಯದಂತಹ ರೀತಿಯಲ್ಲಿ ರಾಷ್ಟ್ರೀಯತ್ವದ ಕಲ್ಪನೆಯಿಂದ ಜನರ ಮನಸ್ಸನ್ನು ಉಜ್ವಲಗೊಳಿಸಿದರು.

(ಹಿಂದ್ ಸ್ವರಾಜ್ಯ)

ನನ್ನ ಪ್ರಾಮಾಣ್ಯಗಳು

ಸಂಪ್ರದಾಯವಾದಿಗಳಾದ ಹಿಂದುಗಳೆಂದು ಕರೆದುಕೊಳ್ಳುವವರಿಗೆ ನಾನು ಸಂಪ್ರದಾಯವಾದಿ ಹಿಂದೂ ಎಂಬ ಮಾತು ಮಾನ್ಯವಿಲ್ಲದಿದ್ದರೂ ನಾನೊಬ್ಬ ಸಂಪ್ರದಾಯವಾದಿ ಹಿಂದೂ ಎಂದೇ ಒತ್ತಿ ಹೇಳಿಕೊಳ್ಳುತ್ತೇನೆ. ಆದರೆ ಹಾಗೆ ಹೇಳಿಕೊಂಡು, ಸತ್ಯಭಕ್ತನಾದ ನಾನು ಸಿಕ್ಕಸಿಕ್ಕಂತೆ ನಿಮ್ಮನ್ನು ಅಡ್ಡದಾರಿಗೆ ಒಯ್ಯಕೂಡದು. ಸಂಪ್ರದಾಯವಾದಿ ಹಿಂದುತ್ವವೆಂದರೆ ಇಂತಹನ ಕೂಡ ಉಣಬೇಕು, ಇಂತಹನ ಕೂಡ ಉಣಬಾರದು, ಇಂತಹನನ್ನು ಮುಟ್ಟಬಹುದು, ಅಂತಹನನ್ನು ಮುಟ್ಟಬಾರದು, ಅಥವಾ ಮುಸಲ್ಮಾನರೊಡನೆಯೂ ಕ್ರಿಶ್ಚನ್ನರೊಡನೆಯೂ ವಾದವಿವಾದ ಮಾಡುವದು ಎಂದು ಅರ್ಥವಿದ್ದರೆ ನಾನು ಆಗ ನಿಜವಾಗಿ ಸಂಪ್ರದಾಯವಾದಿ ಹಿಂದೂ ಅಲ್ಲ. ಹಿಂದೂಧರ್ಮದ ಗುರಿ ಏನಿರಬೇಕೆಂಬುದರ ಸಂತತ ಅನ್ವೇಷಣೆ ಹಿಂದೂತ್ವವಾದರೆ ಮತ್ತು ಆದರ ಬೆಳಕಿನಲ್ಲಿ ಬಾಳಲು ಅದು ಸಂತತ ಪ್ರಯತ್ನ ಆಗಿರುವುದಾದರೆ ನಾನು ಶ್ರದ್ಧಾನ್ವಿತ ಹಿಂದೂ ಎಂದು ಕರೆದುಕೊಳ್ಳಬಲ್ಲೆ. ಮಹಾಭಾರತಕಾರರಾದ ಮಹಾಮುನಿ ವ್ಯಾಸರು ಹೇಳಿದ ಅರ್ಥದಲ್ಲಿಯೂ ನಾನು ಶ್ರದ್ಧಾನ್ವಿತ ಹಿಂದೂ ಆಗಿರುವೆನು. ಮಹಾಭಾರತದಲ್ಲೊಂದೆಡೆ ಇದನ್ನು ಕುರಿತು ಅವರು ಹೀಗೆ ಹೇಳಿರುವರು. ತಕ್ಕಡಿಯ ಒಂದು ತಟ್ಟೆಯಲ್ಲಿ ಸತ್ಯವನ್ನು ಹಾಕಿರಿ, ಮತ್ತೊಂದು ತಟ್ಟೆಯಲ್ಲಿ ಯಜ್ಞಯಾಗಾದಿಗಳನ್ನು ಹಾಕಿರಿ; ತೂಗಿರಿ; ಆಗ, ಸತ್ಯವೇ ರಾಜಸೂಯ ಮತ್ತು ಅಶ್ವಮೇಧಗಳನ್ನು ಒಳಗೊಂಡ ಯಜ್ಞಯಾಗಾದಿಗಳಿಗಿಂತಲೂ ಸತ್ಯವೇ ಹೆಚ್ಚಾಗಿ ತೂಗುತ್ತದೆ. ಮಹಾಭಾರತ ಪಂಚಮ ವೇದವೆಂಬ ಮಾತು ಒಪ್ಪಿಗೆಯಾದರೆ ನನ್ನ ಜೀವನದ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಪ್ರತಿಕ್ಷಣವೂ ಯಾವ ಬೆಲೆಯೂ ಹೆಚ್ಚಿನದೆಂದು ಗಣಿಸದೆ ಸತ್ಯವನ್ನೇ ಅನುಸರಿಸಲು ಪ್ರಯತ್ನಿಸುತ್ತಿರುವದರಿಂದ ನಾನು ಶ್ರದ್ಧಾನ್ವಿತ ಹಿಂದೂ ಎಂದು ಹೇಳಿಕೊಳ್ಳಬಲ್ಲೆನು.

ವಿಶಾಲ ಹಿಂದೂಧರ್ಮವನ್ನು ಅನುಸರಿಸಿರಿ

ಬೌದ್ಧಮತವು ಹಿಂದೂಧರ್ಮದ ಅಂಗವೆಂಬುದನ್ನು ಅನೇಕ ಹಿಂದೂ ಜನರು ಒಪ್ಪುವದಿಲ್ಲ. ತದ್ವಿರುದ್ಧವಾಗಿ ಬೌದ್ಧಮತವನ್ನು ಭಾರತದಿಂದ ಯಶಸ್ವಿಯಾಗಿ ಓಡಿಸಿಬಿಡಲಾಯಿತೆಂದು ಬಹಳ ಆನಂದದಿಂದ ಹೇಳುವರು. ಆದರೆ ಹಾಗೇನೂ ಮಾಡಲಿಲ್ಲೆಂದು ನಾನು ನಿಮಗೆ ಹೇಳುತ್ತೇನೆ. ಬುದ್ಧನು ಸ್ವತಃ ಹಿಂದೂ ಆಗಿದ್ದನು. ಹಿಂದೂಧರ್ಮವನ್ನು ಸುಧಾರಿಸಲು ಅವನು ಪ್ರಯತ್ನಿಸಿದನು. ಬಹುಮಟ್ಟಿಗೆ ಆ ಪ್ರಯತ್ನದಲ್ಲಿ ಅವನು ಯಶಸ್ವಿಯಾದನು. ಬುದ್ಧನ ಉಪದೇಶಗಳಲ್ಲಿದ್ದ ಒಳಿತಾದ ಅಂಶಗಳನ್ನು ಅರಗಿಸಿಕೊಳ್ಳಲು ಹಿಂದೂಧರ್ಮವು ಯತ್ನಿಸಿತು. ಅದರಿಂದಲೇ ಹಿಂದೂಧರ್ಮವು ವಿಶಾಲವಾಯಿತು. ಮತ್ತು ಬೌದ್ಧಮತದಲ್ಲಿಯ ಉತ್ತಮ ಅಂಶಗಳನ್ನು ಅರಗಿಸಿಕೊಂಡುದರಿಂದ ಗೌತಮನ ಉಪದೇಶಗಳ ಸುತ್ತಮುತ್ತ ಹಬ್ಬಿಕೊಂಡಿದ್ದ ಅಸಾರವಾದ ಅಂಶಗಳನ್ನು ಹಿಂದೂಧರ್ಮವು ಈ ದೇಶದಿಂದ ಹೊರಗೆ ಹಾಕಿತು. ನಿರುಪದ್ರವಿಯಾದ ನಿರಪರಾಧಿಯಾದ ಪ್ರಾಣಿಗಳನ್ನು ಬಲಿಗೊಂಡು ಪ್ರೀತನಾಗುವ ದೇವನು ದೇವನಲ್ಲೆಂದು ಬುದ್ಧನು ಭಾರತಕ್ಕೆ ತೋರಿಸಿಕೊಟ್ಟನು. ಇದಕ್ಕೆ ವಿರುದ್ಧವಾಗಿ ದೇವರನ್ನು ಸಂತುಷ್ಟಪಡಿಸುವ ದಕ್ಕೋಸುಗ ಪಶುಯಜ್ಞವನ್ನು ಮಾಡುವವರು ಇಮ್ಮಡಿ ಪಾಪಿಗಳೆಂದು ಆತನು ತಿಳಿದಿದ್ದನು. ಆದುದರಿಂದ ನೀವು ಹಿಂದೂಧರ್ಮಕ್ಕೆ ನಿಜನಿಷ್ಠೆಯುಳ್ಳವರಾಗುವದಾದರೆ ನಿಮ್ಮ ಯಾವ ಗುಡಿಯಲ್ಲಿಯೂ ಪಶುಯಜ್ಞವನ್ನು ನಡೆಸಿ ಅದನ್ನು ಅಪವಿತ್ರಗೊಳಿಸದಂತೆ ನೋಡಿಕೊಳ್ಳಿರಿ. ಸಮಸ್ತ ಹಿಂದೂ ಭಾರತವು ನನ್ನನ್ನು ವಿರೋಧಿಸಿದರೂ ಯಾವದೊಂದು ಉದ್ದೇಶವನ್ನು ಸಿದ್ಧಿಸಿಕೊಳ್ಳುವದಕ್ಕಾಗಲಿ ಅಥವಾ ಪರಮಾತ್ಮನನ್ನು ಆರಾಧಿಸುವದಕ್ಕಾಗಿಯೇ ಆಗಲಿ ಪಶುಯಜ್ಞವನ್ನು ನಡೆಸುವದು ತಪ್ಪೆಂದು ಹೇಳಲು ನಾನು ಸಿದ್ಧನಿದ್ದೇನೆ.

ವರ್ಣವು ಜೀವದಾನ ಮಾಡುತ್ತದೆ; ಜಾತಿಯು ಅದನ್ನು ಕೊಲ್ಲುವದು

ಇಂದು ಜಾತಿ ಎಂಬ ಶಬ್ದಕ್ಕೆ ಇರುವ ಅರ್ಥವು ಆತನ ಕಾಲದಲ್ಲಿಯೂ ಇದ್ದ ಆ ಅರ್ಥವು—ಸಂಪೂರ್ಣವಾಗಿ ತಪ್ಪು ಎಂಬುದು ಗೌತಮ ಹೇಳಿ ಕೊಟ್ಟ ಎರಡನೆಯ ಮಾತು. ಅರ್ಥಾತ್ ಆತನ ಕಾಲದಲ್ಲಿಯೂ ಹಿಂದುತ್ವದ ಜೀವಾಳವನ್ನೇ ತಿಂದು ಹಾಳುಮಾಡುತ್ತಿದ್ದ ಉಚ್ಚನೀಚ ಎಂಬ ಭೇದಭಾವವನ್ನು ಅವನು ತೊಡೆದುಹಾಕಿದನು. ಆದರೆ ಅವನು ವರ್ಣಾಶ್ರಮ ಧರ್ಮವನ್ನು ಅಳಿಸಲಿಲ್ಲ. ವರ್ಣಧರ್ಮವೆಂದರೆ ಜಾತಿಯಲ್ಲ. ವರ್ಣಕ್ಕೂ ಜಾತಿಗೂ ಸಂಬಂಧವಿಲ್ಲವೆಂದು ನನ್ನ ಅಭಿಪ್ರಾಯ. ವರ್ಣವು ಜೀವದಾನ ಮಾಡುತ್ತಿದ್ದರೆ ಜಾತಿಯು ಕೊಲ್ಲುತ್ತದೆ. ಅಸ್ಪೃಶ್ಯತೆಯು ಜಾತಿಯ ಅತ್ಯಂತ ತಿರಸ್ಕರಣೀಯ ಸ್ವರೂಪ. ಇಂದು ರೂಢಿಯಲ್ಲಿರು ವಂತಹ ಅಸ್ಪೃಶ್ಯತೆಗೆ ಹಿಂದೂಧರ್ಮದಲ್ಲಿ ಯಾವ ಪ್ರಮಾಣವೂ ಇಲ್ಲೆಂದು ನಾನು ಧೈರ್ಯದಿಂದ ಹೇಳುತ್ತೇನೆ. ಕೆಲವರು ಶ್ರೇಷ್ಠರು; ಕೆಲವರು ಕನಿಷ್ಠರೆಂಬುದನ್ನು ದಯಮಾಡಿ ಮರೆತುಬಿಡಿ. ನೀವೆಲ್ಲರೂ ಹಿಂದುಗಳು-ಬಂಧುಗಳೆಂದು ಸಮಾನಸ್ಕಂದ ಸಹೋದರರೆಂಬುದನ್ನು ನೆನಪಿನಲ್ಲಿಡಿ.

ದೇವಸ್ಥಾನಗಳನ್ನು ಶುದ್ಧಗೊಳಿಸಿರಿ

ದೇವಸ್ಥಾನವು ಪೂಜಾರ್ಹಸ್ಥಳವಾಗಬೇಕಾದರೆ, ದೇವನ ಸ್ಥಾನ ವಾಗಬೇಕಾದರೆ, ಕೆಲ ನಿರ್ದಿಷ್ಟ ನಿರ್ಬಂಧಗಳಿಗೆ ಒಳಪಟ್ಟಿರಬೇಕಾಗುವದು. ಪೂಜಾಗೃಹವನ್ನು ಪ್ರವೇಶಿಸಲು ಸಾಧುವಿಗಿದ್ದ ಅಧಿಕಾರವೇ ಸೂಳೆಗೂ ಇದೆ. ಆದರೆ ತನ್ನನ್ನು ಶುದ್ಧಗೊಳಿಸಿಕೊಳ್ಳಲು ಪ್ರವೇಶಿಸುವ ಕಾಲಕ್ಕೆ ಮಾತ್ರ ಆ ಅಧಿಕಾರವು ಆಕೆಗೆ ದೊರೆಯುತ್ತದೆ. ಆದರೆ ಧರ್ಮದ ವೇಷದಲ್ಲಿ ಇಲ್ಲವೆ ದೇವಪೂಜೆಗೆ ಒಂದು ಅಲಂಕಾರವೆಂದಾಗಲಿ ದೇವಸ್ಥಾನದ ವಿಶ್ವಸ್ತರು ಆಕೆಗೆ ಪ್ರವೇಶಾವಕಾಶವನ್ನು ಕೊಟ್ಟರೆ ಆಗ ದೇವಗೃಹವನ್ನು ವೇಶ್ಯಾಗೃಹ

ವನ್ನಾಗಿ ಅವರು ಪರಿವರ್ತಿಸುವರು. ಎಷ್ಟೇ ದೊಡ್ಡವರಿದ್ದರೂ ಯಾರಾದರೂ ನಿಮ್ಮೆಡೆಗೆ ಬಂದು ನರ್ತನಕ್ಕಾಗಲಿ ಬೇರೆ ಕಾರ್ಯಕ್ಕಾಗಲಿ ಇಂತಹ ದುಷ್ಟ ಚಾರಿತ್ರ್ಯದ ಸ್ತ್ರೀಯರಿಗೆ ಅವಕಾಶವನ್ನು ಕೊಡುವದು ತಪ್ಪಲ್ಲೆಂದು ಸಾಧಿಸಲು ಯತ್ನಿಸಿದರೆ ಅವರ ಮಾತನ್ನು ಕೇಳಬೇಡಿ. ಮತ್ತು ನಾನು ಮಾಡಿದ ಸೂಚನೆಯನ್ನು ಒಪ್ಪಿಕೊಳ್ಳಿ. ನೀವು ಒಳ್ಳೆಯ ಹಿಂದುಗಳಾಗ ಬಯಸಿದರೆ, ದೇವರನ್ನು ಪೂಜಿಸಲಿಚ್ಛಿಸಿದರೆ, ನೀವು ಜಾಣರಾಗಿದ್ದರೆ, ಅಸ್ಪೃಶ್ಯರಿಗೆಲ್ಲ ನಿಮ್ಮ ದೇವಸ್ಥಾನಗಳ ದ್ವಾರಗಳನ್ನು ತೆರೆದುಬಿಡಿ. ತನ್ನ ಭಕ್ತರಲ್ಲಿ ದೇವರು ಭೇದವನ್ನೆಣಿಸುವದಿಲ್ಲ. ಈ ಅಸ್ಪೃಶ್ಯರ ಪೂಜೆಯನ್ನು ಕೂಡ ಆತನು ಸ್ವೀಕರಿಸುವನು. ಆದರೆ ಅದು ಹೃದಯಾಂತರಾಳದಿಂದ ಬರಬೇಕು.

ಇತರ ಮತಗಳೊಡನೆ ಸ್ನೇಹ ಬೆಳೆಸಿರಿ

ನಿಮ್ಮ ಗಮನವನ್ನು ಅಪೇಕ್ಷಿಸುವ ಇನ್ನೂ ಕೆಲವು ವಿಷಯಗಳು ಇವೆ. ಮಹಾಮತಗಳಾಗಿರುವ ಮಹಾ ಸಮಾಜಗಳಾದ ಕ್ರೈಸ್ತಮತೀಯರೂ ಮುಸಲ್ಮಾನರೂ ಇರುವ ಜಗತ್ತಿನಲ್ಲಿ ನೀವು ಇರಬೇಕಾಗಿದೆ. ಅವರು ನೂರಕ್ಕೆ ಎರಡರಷ್ಟಿರಲಿ ಇಪ್ಪತ್ತರಷ್ಟಿರಲಿ ಅವರೊಡನೆ ನೀವು ಬಾಳಬೇಕಾಗಿದೆ. ಹಿಂದೂಧರ್ಮವನ್ನು ಸರಿಯಾಗಿ ನಾನು ತಿಳಿದುಕೊಂಡಿದ್ದರೆ ಬೇರೆ ಮತಧರ್ಮಗಳ ಬಗೆಗೆ ಸಹಿಷ್ಣು ಇಲ್ಲವೆ ಉದಾರವಾಗಿರದಿದ್ದರೆ ಅದು ಹಿಂದೂ ಧರ್ಮವೇ ಅಲ್ಲ. ನೀವು ಬಹುಸಂಖ್ಯಾತರಾಗಿರುವದರಿಂದ ನಿಮ್ಮ ವಾದವಿವಾದಗಳನ್ನು ನೀವೇ ಮುಂದಾಗಿ ಬಗೆಹರಿಸಿಕೊಳ್ಳಬೇಕು. ಹಿಂದೂಧರ್ಮದಲ್ಲಿ ಸೇರಿದ ದುಷ್ಟವಾದ ಜಾತಿಭಾವನೆಯನ್ನು ನೀವು ತ್ಯಜಿಸಿದರೆ ಎಲ್ಲ ಕಷ್ಟಗಳೂ ಬಿಡುವುವೆಂದು ನೀವೆ ಅರಿತುಕೊಳ್ಳುವಿರಿ.

ಸಂಸ್ಕೃತ ಅಧ್ಯಯನಕ್ಕೆ ಉತ್ತೇಜನ ಕೊಡಿರಿ

ಸ್ವಲ್ಪವಾದರೂ ಸಂಸ್ಕೃತ ಜ್ಞಾನವಿಲ್ಲದ ಹುಡುಗನ ಅಧ್ಯಯನವು ಅಪೂರ್ಣವೆಂದೇ ನಾನು ತಿಳಿಯುತ್ತೇನೆ. ನನಗೆ ತಿಳಿದಮಟ್ಟಿಗೆ ಹಿಂದೂ ಧರ್ಮದಲ್ಲಿ ಭಗವದ್ಗೀತೆಯಂತಹ ಸರ್ವಗ್ರಾಹ್ಯವಾದ ಸರ್ವಮಾನ್ಯವಾದ ಪುಸ್ತಕ ಬೇರೊಂದಿಲ್ಲ. ಹಿಂದೂತ್ವದ ಭಾವನೆಯನ್ನು ನಿಮ್ಮಲ್ಲಿಯೂ ನಿಮ್ಮ ಮಕ್ಕಳಲ್ಲಿಯೂ ನೀವು ತುಂಬಲಿಚ್ಛಿಸಿದರೆ ಗೀತೆಯ ಉಪದೇಶಗಳ ಗುಟ್ಟನ್ನು ತಿಳಿದುಕೊಳ್ಳಲು ನೀವು ಯತ್ನಿಸಬೇಕು. ಹಾಗೆಯೆ ಮಹಾ ಭಾರತ ರಾಮಾಯಣಗಳನ್ನಾದರೂ ಸಾಮಾನ್ಯತಃ ನೀವು ತಿಳಿದುಕೊಳ್ಳ ಬೇಕು.

ಕೊನೆಯದಾಗಿ ಹೋದಲ್ಲೆಲ್ಲ ನಾನು ಹೇಳುತ್ತಿರುವ ಎರಡು ವಿಷಯ ಗಳ ಹೊರತು ಸಮಗ್ರ ಮಾನವ ಕುಲವೇ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಬೇರೆ ಉಪಾಯವೇ ನನಗೆ ಗೊತ್ತಿಲ್ಲ. ಸತ್ಯವನ್ನು ನುಡಿಯಿರಿ, ಎಂತಹ ಪ್ರಸಂಗದಲ್ಲಿಯೂ ಅಹಿಂಸೆಯಿಂದ ಇರಿ, ಈ ಎರಡು ಮಾತುಗಳ ಮರ್ಮವನ್ನು ತಿಳಿದುಕೊಳ್ಳುವಂತೆ ನಾನು ನಿಮ್ಮ ಮನವೊಲಿಸಿದರೆ ಹಾಗು ನೀವು ಅದರಂತೆ ನಡೆದುಕೊಂಡರೆ ನಮ್ಮ ಪ್ರತಿಯೊಂದು ಸಮಸ್ಯೆಯೂ ಗಾಳಿಯಮುಂದೆ ಹಾರಿಹೋಗುವ ಹುಲ್ಲುಕಡ್ಡಿಯಂತೆ ಹಾರಿಹೋಗುವ ದೆಂಬುದನ್ನು ನಾನು ಬಲ್ಲೆನು. ಆಗ ದೇವರು ತನ್ನ ಮಹಾಶ್ವೇತ ಸಿಂಹಾ ಸನದಿಂದ ಕೆಳಗಿಳಿಯುವನು ಮತ್ತು ನಿಮ್ಮ ಮಧ್ಯದಲ್ಲಿದ್ದುಕೊಂಡು “ ನೀವು ಹಿಂದುಗಳು ಧನ್ಯರು ” ಎಂದು ಹರಸುವನು.

(ಯಂಗ್ ಇಂಡಿಯಾ : ೧೫-೧೨-೨೭)

ಚಿನ್ನದ ಬೀಗದಕ್ಕೈ

ಹಿಂದುತ್ವವೆಂದರೇನು ? ಇತಿಹಾಸದಲ್ಲಿ ಪ್ರಸಿದ್ಧರಾಗಿರುವ ಅನೇಕ ಸಾಧುಸಂತರಿಗೆ ಸ್ಫೂರ್ತಿಯನ್ನು ಕೊಟ್ಟುದಾವುದು ? ಎಂಬುದನ್ನು ತಿಳಿದು ಕೊಳ್ಳಲು ಕೆಲಕಾಲ ವಿನಿಯೋಗಿಸುವಾ. ಪ್ರಪಂಚಕ್ಕೆ ಇಷ್ಟುಜನ ತತ್ವ

ಜ್ಞಾನಿಗಳನ್ನು ಇದು ಏಕೆ ಕೊಟ್ಟದೆ? ಶತಾನುಶತಕಗಳವರೆಗೆ ತನ್ನ ಅನುಯಾಯಿಗಳಲ್ಲಿ ಉತ್ಸಾಹವನ್ನು ಕೆರಳಿಸುತ್ತಿರುವ ಅಂತಹ ವಿಷಯವಾದರೂ ಹಿಂದೂಧರ್ಮದಲ್ಲಿ ಏನಿದೆ? ಅಸ್ಪೃಶ್ಯತೆಯನ್ನು ಅವರು ಕಂಡೂಕಂಡು ಉತ್ಸಾಹಭರಿತರಾಗಿದ್ದರೆ? ಅಸ್ಪೃಶ್ಯತೆಯ ವಿರುದ್ಧ ನಡೆಸಿದ ನನ್ನ ಹೋರಾಟದಲ್ಲಿ ಅನೇಕರು ನನಗೆ ಹಿಂದುತ್ವದ ಸಾರವೇನೆಂದು ಕೇಳುತ್ತಿರುವರು. ಇಸ್ಲಾಮದಲ್ಲಿರುವಂತೆ ಸರಲವಾದ "ಕಲ್ಮ" ಹಿಂದೂಧರ್ಮದಲ್ಲಿ ಇಲ್ಲೆಂದು ಅವರು ಅನ್ನುವರು. ಅಥವಾ ಬೈಬಲ್ಲಿನ ಜಾನ್ ೩ : ೧೬ ಇಲ್ಲೆಂದು ಹೇಳುವರು. ಹಿಂದೂಗಳಲ್ಲಿಯ ಶ್ರೇಷ್ಠ ತತ್ವಜ್ಞಾನಿಗಳ ಅಥವಾ ಅತ್ಯಂತ ವಸ್ತುನಿಷ್ಠ ವ್ಯವಹಾರಿಗಳ ಆಕಾಂಕ್ಷೆಗಳನ್ನು ತಣಿಸುವದೇನಾದರೂ ಹಿಂದೂಧರ್ಮದಲ್ಲಿ ಇದೆಯೋ ಇಲ್ಲವೊ? ಕೆಲವರು ಸಕಾರಣವಾಗಿ ಗಾಯತ್ರಿಯಿಂದ ಈ ಉದ್ದೇಶವು ಈಡೇರುವದೆಂದು ಹೇಳುವರು. ಗಾಯತ್ರೀ ಮಂತ್ರವನ್ನು ನಾನು ಸಾವಿರಸಲ ಅದರ ಅರ್ಥವನ್ನು ತಿಳಿದುಕೊಂಡು ಉಚ್ಚರಿಸಿದ್ದೇನೆ. ಆದರೂ ಅದು ನನ್ನ ಆಕಾಂಕ್ಷೆಗಳನ್ನೆಲ್ಲ ಪೂರೈಸಲಿಲ್ಲೆಂದು ನನಗೆ ತೋರುತ್ತದೆ. ನಿಮಗೆ ಗೊತ್ತಿದ್ದಂತೆ ಕಳೆದ ಕೆಲ ವರ್ಷಗಳಲ್ಲಿ ನಾನು ಭಗವದ್ಗೀತೆಯನ್ನು ಪ್ರಮಾಣಗ್ರಂಥವನ್ನಾಗಿಟ್ಟು ಕೊಂಡಿದ್ದೇನೆ. ಅದು ನನ್ನ ಎಲ್ಲ ಸಮಸ್ಯೆಗಳನ್ನು ಬಿಡಿಸಿದೆ. ಅದು ನನ್ನ ಕಾಮಧೇನು, ನನ್ನ ಮಾರ್ಗದರ್ಶಕ. ನನ್ನ ಕಷ್ಟಕಾಲದಲ್ಲಿ, ನೂರಾರು ಸಂದರ್ಭಗಳಲ್ಲಿ ನನ್ನ ತೋರುಬೆರಳಾಗಿದೆ. ಕಷ್ಟಕಾಲದಲ್ಲಿ ಅದು ಎಂದಾದರೂ ನನ್ನ ಕೈಬಿಟ್ಟುದು ನೆನಪಿಲ್ಲ. ಆದರೆ ನನ್ನ ಮುಂದಿರುವ ಈ ಎಲ್ಲ ಶ್ರೋತೃಗಳ ಮುಂದೆ ನಾನು ಅದನ್ನು ಇಡಲಾರೆ. ತನ್ನ ಸ್ತನಗಳಲ್ಲಿ ತುಂಬಿಕೊಂಡಿರುವ ಬೆಲೆಯುಳ್ಳ ಹಾಲನ್ನು ಕಾಮಧೇನು ಕೊಡಬೇಕಾದರೆ ಮುಂಚಿತವಾಗಿ ಧ್ಯಾನಪೂರ್ಣವಾದ ಪ್ರಾರ್ಥನಾಪುರಸ್ಸರವಾದ ಅಧ್ಯಯನಾಭ್ಯಾಸಗಳು ಅವಶ್ಯ.

"ಆದರೆ ಸಮಗ್ರ ಹಿಂದೂಧರ್ಮದ ಸಾರವನ್ನೇ ಒಳಗೊಂಡಿರುವ ಒಂದು ಮಂತ್ರವನ್ನು ನಾನು ಕಂಡುಹಿಡಿದಿದ್ದೇನೆ. ಅದನ್ನು ನಾನು ಈಗ ಹೇಳಲಿದ್ದೇನೆ. ನಿಮ್ಮಲ್ಲನೇಕರಿಗೆ ಈಶೋಪನಿಷತ್ತು ಗೊತ್ತಿರಬಹುದು. ಬಹಳ ವರ್ಷಗಳ ಹಿಂದೆ ನಾನು ಅದರ ಅನುವಾದವನ್ನೂ ಭಾಷ್ಯವನ್ನೂ ಓದಿದೆನು. ಯರವಡಾ ಜೇಲಿನಲ್ಲಿ ಅದನ್ನು ಪಾಠಮಾಡಿದೆ. ಆದರೆ ಕೆಲ

ತಿಂಗಳುಗಳನಂತರ ಅದು ನನ್ನ ಮನಸ್ಸನ್ನು ಆಕರ್ಷಿಸಿದಷ್ಟು ಆಗ ಅದು ನನಗೆ ಹಿಡಿಸಲಿಲ್ಲ. ಎಲ್ಲ ಉಪನಿಷತ್ತುಗಳೂ ಎಲ್ಲ ವೇದಶಾಸ್ತ್ರ ಪುರಾಣಗಳೂ ಒಮ್ಮೆಲೆ ಸುಟ್ಟು ಬೂದಿಯಾಗಿ ಈಶೋಪನಿಷತ್ತಿನ ಪ್ರಥಮಮಂತ್ರವು ಹಿಂದೂಗಳ ಸ್ಮರಣೆಯಲ್ಲಿ ಗಟ್ಟಿಯಾಗಿ ಉಳಿದರೆ ಹಿಂದೂಧರ್ಮವು ಶಾಶ್ವತವಾಗಿ ಉಳಿಯುವದೆಂಬ ಅಂತಿಮ ನಿರ್ಣಯಕ್ಕೆ ನಾನೀಗ ಬಂದಿದ್ದೇನೆ.

ಈ ಮಂತ್ರದಲ್ಲಿ ನಾಲ್ಕು ಭಾಗಗಳಿವೆ. 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್' ಅಂದರೆ ಈ ವಿಶ್ವದಲ್ಲಿ ನಾವು ನೋಡುತ್ತಿರುವದೆಲ್ಲದರಲ್ಲಿಯೂ ದೇವರು ವ್ಯಾಪಿಸಿದ್ದಾನೆಂದು ನಾನು ಮಾಡಿಕೊಂಡಿರುವ ಅರ್ಥ. ಆಮೇಲೆ ಎರಡನೆಯ ಹಾಗು ಮೂರನೆಯ ಭಾಗಗಳು ಹೀಗಿವೆ: 'ತೇನ ತ್ಯಕ್ತೇನ ಭುಂಜೀಥಾಃ.' ಇವುಗಳನ್ನು ನಾನು ಎರಡು ಭಾಗಗಳನ್ನಾಗಿ ಮಾಡಿ ಹೀಗೆ ಅನುವಾದಿಸುತ್ತೇನೆ. 'ಅದನ್ನು ತ್ಯಾಗಮಾಡು ಹಾಗು ಭೋಗಿಸು,' ಎಂದು. ಅದಕ್ಕೆ ಇನ್ನೊಂದು ಭಾಷಾಂತರವೂ ಇದೆ. 'ಅವನು ಕೊಡುವದನ್ನೇ ಭೋಗಿಸು' ಎಂದು. ಹಾಗಿದ್ದರೂ ಅದನ್ನು ಎರಡು ಭಾಗಗಳನ್ನಾಗಿ ಮಾಡಬಹುದು. ಅನಂತರ ಕೊನೆಯ ಮತ್ತು ಅತಿ ಮಹತ್ವದ ಭಾಗವಾದ "ಮಾಗೃಧಃ ಕಸ್ಯಸ್ವಿದ್ ಧನಂ" ಅಂದರೆ ಹೆರವರ ಧನವನ್ನು ಆಶಿಸಬೇಡ ಎಂದು ಅದರ ಅರ್ಥ. ಈ ಮೊದಲನೆಯ ಮಂತ್ರದ ಪೂರ್ಣ ಅರ್ಥವನ್ನು ತಿಳಿಸುವ ಯತ್ನ ಇಲ್ಲವೆ ಭಾಷ್ಯವೇ ಆ ಉಪನಿಷತ್ತಿನ ಉಳಿದ ಮಂತ್ರಗಳು. ಗೀತೆಯ ಬೆಳಕಿನಲ್ಲಿ ಈ ಮಂತ್ರವನ್ನು ನಾನು ಓದಿದಾಗ ಅಥವಾ ಈ ಮಂತ್ರದ ಬೆಳಕಿನಲ್ಲಿ ಗೀತೆಯನ್ನು ಓದಿದರೆ ಗೀತೆಯು ಈ ಮಂತ್ರದ ಭಾಷ್ಯವೆಂದು ನನಗೆ ಕಂಡುಬರುತ್ತದೆ. ಈ ಮಂತ್ರವು ಸಮಾಜವಾದಿಯ ಹಾಗು ಸಾಮ್ಯವಾದಿಯ ಆಶೋತ್ತರಗಳನ್ನು, ಮತ್ತು ದಾರ್ಶನಿಕನ ಹಾಗು ಅರ್ಥಶಾಸ್ತ್ರಜ್ಞನ ಆಕಾಂಕ್ಷೆಗಳನ್ನು ತಣಿಸುವಂತೆ ನನಗೆ ತೋರುತ್ತದೆ. ಹಿಂದೂಮತಸ್ಥರಲ್ಲದವರಿಗೆ ಈ ಮಂತ್ರವು ಅವರ ಆಕಾಂಕ್ಷೆಗಳನ್ನು ತೃಪ್ತಪಡಿಸುತ್ತದೆಯೆಂದು ಸೂಚಿಸುವ ಸಾಹಸವನ್ನು ನಾನು ಮಾಡುತ್ತೇನೆ. ಅದು ಸತ್ಯವಾಗಿದ್ದರೆ — ಸತ್ಯವೆಂದು ನಾನು ತಿಳಿದಿದ್ದೇನೆ — ಹಿಂದೂಧರ್ಮದಲ್ಲಿ ಈ ಮಂತ್ರದ ಅರ್ಥಕ್ಕೆ ವಿಸಂಗತವಾದುದು ಅಥವಾ ವಿರುದ್ಧವಾದುದಾವುದನ್ನೂ ನೀವು ಗಣನೆಗೆ ತಂದುಕೊಳ್ಳಬೇಕಾಗಿಲ್ಲ. ಸಮಸ್ತ ಜೀವಿಗಳಲ್ಲಿಯೂ ಒಬ್ಬನೇ ಸೃಷ್ಟಿಕರ್ತನಾದ

ಪರಮಾತ್ಮನಿರುವನು; ಅವನು ವಿಶ್ವವನ್ನೆಲ್ಲ ವ್ಯಾಪಿಸಿರುವನೆಂಬುದಕ್ಕಿಂತ ಸಾಮಾನ್ಯ ಮನುಷ್ಯನಿಗೆ ಹೆಚ್ಚೇನು ಬೇಕು? ಮಂತ್ರದ ಇನ್ನುಳಿದ ಮೂರು ಭಾಗಗಳು ಮೊದಲನೇ ಮಂತ್ರದಿಂದಲೇ ನೇರವಾಗಿ ಹೊರಹೊಮ್ಮುತ್ತವೆ. ತಾನು ಹುಟ್ಟಿಸಿದ ಪ್ರತಿಯೊಂದರಲ್ಲಿಯೂ ದೇವನಿದ್ದಾನೆಂದು ನೀವು ನಂಬುವದಾದರೆ ಅವನು ಕೊಡಲಾರದುದನ್ನು ನೀವು ಭೋಗಿಸಲಾರಿರೆಂಬುದನ್ನು ನೀವು ನಂಬಲೇಬೇಕು. ಅಸಂಖ್ಯ ಮಕ್ಕಳ ಜನಕ ಆತನೆಂಬುದನ್ನು ನೀವು ಕಂಡ ಬಳಿಕ ಬೇರೊಬ್ಬನ ಆಸ್ತಿಯನ್ನು ನೀವು ಆಶಿಸಲಾರಿರಿ ಎಂಬುದು ಸ್ಪಷ್ಟವಾಗುತ್ತದೆ. ಆತನ ಅಸಂಖ್ಯ ಪ್ರಾಣಿಗಳಲ್ಲಿ ನೀವೊಬ್ಬರೆಂದು ತಿಳಿದರೆ ಎಲ್ಲವನ್ನೂ ತ್ಯಜಿಸಿ ಅದನ್ನು ಆತನ ಅಡಿದಾವರೆಗಳಲ್ಲಿ ಅರ್ಪಿಸುವದು ನಿಮ್ಮ ಧರ್ಮವಾಗುತ್ತದೆ. ಅಂದರೆ ಪ್ರತಿಯೊಂದರ ತ್ಯಾಗವೆಂದರೆ ಕೇವಲ ಬಾಹ್ಯತ್ಯಾಗವಲ್ಲ; ಆದರೆ ಅದು ದ್ವಿಜತ್ವ ಅಥವಾ ನವಜನ್ಮವೇ ಸರಿ. ತಿಳಿದು ಮಾಡಿದ ಕಾರ್ಯವೇ ಅದಲ್ಲದೆ ಅಜ್ಞಾನದಿಂದ ಮಾಡಿದ ತ್ಯಾಗವಲ್ಲ. ಅಂತೆಯೇ ಇದು ಪುನರ್ಜನನ. ದೇಹಧಾರಿಗೆ ಭೋಜನ ಪಾನಾದಿಗಳು ಅವಶ್ಯವಾದುದರಿಂದ ಅವುಗಳನ್ನು ಆತನಿಂದಲೇ ಸ್ವಾಭಾವಿಕವಾಗಿ ಪಡೆಯಬೇಕು. ಮತ್ತು ಆ ತ್ಯಾಗದ ಸ್ವಾಭಾವಿಕ ಪ್ರತಿಫಲವಾಗಿಯೆ ಅವನು ಅದನ್ನು ಪಡೆಯುವನು. ಇಷ್ಟೇ ಸಾಲದೆಂಬಂತೆ ಮಂತ್ರದ ಕೊನೆಯಲ್ಲಿ 'ಮಾಗೃಧಃ ಕಸ್ಯಸ್ವಿದ್ಧನಂ' ಅಂದರೆ ಇನ್ನೊಬ್ಬರ ಆಸ್ತಿಯನ್ನು ಆಶಿಸಬೇಡೆಂದು ಹೇಳಿದೆ. ಈ ಉಪದೇಶಗಳನ್ನು ಆಚರಣೆಯಲ್ಲಿ ತಂದಾಕ್ಷಣವೇ ನೀವು ಸಮಸ್ತ ಪ್ರಾಣಿವರ್ಗದೊಡನೆ ಸೌಹಾರ್ದದಿಂದ ಬಾಳುವ ಜಾಣ ವಿಶ್ವನಾಗರಿಕರಾಗಿರುವಿರಿ. ಮಾನವನ ಉಚ್ಚತಮ ಐಹಿಕ ಆಮುಷ್ಮಿಕ ಆಕಾಂಕ್ಷೆಗಳನ್ನು ಅದು ತೃಪ್ತಪಡಿಸುತ್ತದೆ."

ಕೋಟಾಯಮ್ ಭಾಷಣದಿಂದ

(ಕೋಟಾಯಮ್‌ನಲ್ಲಿ ಕ್ರೈಸ್ತಮತೀಯ ಶ್ರೋತೃವರ್ಗದ ಮುಂದೆ ಈಶೋಪನಿಷತ್ತಿನ ಮಂತ್ರವನ್ನು ಕುರಿತು ಪುನಃ ಮಾತಾಡುವಾಗ ಗಾಂಧೀಜೀ ಹೀಗೆಂದರು:)

ಈ ಮಂತ್ರವು ದೇವರನ್ನು ಸೃಷ್ಟಿಕರ್ತನೆಂದೂ, ಪ್ರಭುವೆಂದೂ ಈಶನೆಂದೂ ಬಣ್ಣಿಸುತ್ತದೆ. ಈ ಮಂತ್ರವನ್ನು ಕಂಡುಹಿಡಿದ ದ್ರಷ್ಟಾರನಿಗೆ ಎಲ್ಲೆಡೆಯಲ್ಲಿ ದೇವನಿರುವನೆಂಬ ಒಂದು ಮಾತಿನಿಂದ ಸಮಾಧಾನವಾಗಲಿಲ್ಲ. ಮುಂದುವರಿದು ಹೀಗೆ ಹೇಳಿದನು: "ಎಲ್ಲದರಲ್ಲಿಯೂ ದೇವನಿರುವದರಿಂದ ನಿನ್ನದೆನ್ನುವದಾವುದೂ ಇಲ್ಲ; ನಿನ್ನ ದೇಹವೂ ನಿನ್ನದಲ್ಲ". ನೀವು ಪಡೆದುದೆಲ್ಲದಕ್ಕೂ ದೇವನೇ ಅವಿವಾದ್ಯ ಸ್ವಾಮಿ, ಅಪ್ರತಿಭಟನೀಯ ಪ್ರಭು. ಆದುದರಿಂದ ಹಿಂದೂ ಎನಿಸಿಕೊಳ್ಳುವವನು — ಕ್ರಿಸ್ತರು ಹೇಳುವಂತೆ — ನವಜನ್ಮ ಅಥವಾ ದ್ವಿಜತ್ವದ ವಿಧಿಯನ್ನು ಆಚರಿಸುವಾಗ ತನ್ನದೆಂದು ಅಜ್ಞಾನದಿಂದ ತಿಳಿದುಕೊಂಡುದನ್ನೆಲ್ಲ ಪರಮಾತ್ಮನಿಗೆ ಸಮರ್ಪಿಸಬೇಕಾಗುವದು. ಪ್ರತಿಫಲವಾಗಿ ಈ ಸಮರ್ಪಣವನ್ನು ಮಾಡಿದವನ ಅನ್ನವಸ್ತ್ರವಸತಿಗಳ ಯೋಗಕ್ಷೇಮವನ್ನು ದೇವರೇ ನೋಡಿಕೊಳ್ಳುವನೆಂದು ಹೇಳಲಾಗುತ್ತದೆ. ಆದುದರಿಂದ ಜೀವನದ ಆವಶ್ಯಕತೆಗಳನ್ನು ಭೋಗಿಸುವ ನಿಯಮ, ಅವುಗಳ ತ್ಯಾಗ ಮತ್ತು ಸಮರ್ಪಣ. ದಿನದಿನವೂ ಆ ಸಮರ್ಪಣ ಮತ್ತು ತ್ಯಾಗಗಳನ್ನು ನಾವು ಮಾಡಬೇಕು. ಯಾಕೆಂದರೆ ಈ ವ್ಯಾಪೃತ ಪ್ರಪಂಚದಲ್ಲಿ ನಾವು ಜೀವನದ ರಹಸ್ಯವನ್ನು ಮರೆಯುವ ಭೀತಿಯಿದೆ. ಎಲ್ಲಕ್ಕೂ ಕಳಸವಿಟ್ಟಂತೆ ಮಂತ್ರದ್ರಷ್ಟನಾದ ಋಷಿಯು "ಹೆರವರ ವಿತ್ತವನ್ನು ಆಶಿಸಬೇಡ" ಎಂದು ಹೇಳಿರುವನು. ಈ ಚಿಕ್ಕ ಮಂತ್ರದಲ್ಲಿ ಹುದುಗಿದ ಸತ್ಯವು ಪ್ರತಿಯೊಬ್ಬ ಮಾನವನ ಐಹಿಕ ಆಮುಷ್ಮಿಕ ಉಚ್ಚತಮ ಆಶೋತ್ತರಗಳನ್ನು ತೃಪ್ತಪಡಿಸಲು ಸಮರ್ಥವಾಗಿದೆಯೆಂದು ನಾನು ಧೈರ್ಯದಿಂದ ಸೂಚಿಸಬಯಸುತ್ತೇನೆ. ವಿಶ್ವಮಾನ್ಯ ತತ್ವಗ್ರಂಥಗಳ ನನ್ನ ಅನ್ವೇಷಣೆಯಲ್ಲಿ ಈ ಮಂತ್ರಕ್ಕೆ ಪೂರಕವಾಗಿ ಹೇಳುವ ಹೆಚ್ಚಿನದಾವುದನ್ನೂ ನಾನು ಕಂಡಿಲ್ಲ. ಧರ್ಮಗ್ರಂಥಗಳ ಬಗೆಗೆ ನಾನು ಓದಿದುದೆಲ್ಲವನ್ನು ಯೋಚಿಸಿ ನೋಡಿದಾಗ ನಾನು ಓದಿದ್ದು ಅತ್ಯಲ್ಪವೆಂದು ಒಪ್ಪಿಕೊಳ್ಳುತ್ತೇನೆ—ಎಲ್ಲ ವೇದಾಗಮಗಳಲ್ಲಿರುವ ಒಳಿತಾದುದೆಲ್ಲವೂ ಈ ಮಂತ್ರದಿಂದಲೇ ಹೊರಹೊಮ್ಮಿದೆಯೆಂದು ನನಗೆ ಅನಿಸುತ್ತದೆ. ವಿಶ್ವಬಂಧುತ್ವದ ವಿಷಯವಿದ್ದರೆ—ಬರೀ ಮಾನವ ಬಂಧುತ್ವವಲ್ಲ, ಸಮಸ್ತ ಪ್ರಾಣಿಬಂಧುತ್ವ—ಅದನ್ನು ನಾನು ಈ ಮಂತ್ರದಲ್ಲಿ ಕಾಣುತ್ತೇನೆ. ಈಶನಲ್ಲಿ ಪ್ರಭುವಿನಲ್ಲಿ ಸ್ವಾಮಿಯಲ್ಲಿ ಅವಿಚಲ ಶ್ರದ್ಧೆಯ ವಿಷಯವಿದ್ದರೆ—ಈ ಮಂತ್ರದಲ್ಲಿ ಅದು ನನಗೆ ಗೋಚರವಾಗು

ತ್ತದೆ. ಪರಮಾತ್ಮನಿಗೆ ಸರ್ವಸಮರ್ಪಣದ ವಿಷಯವಿದ್ದರೆ ಹಾಗೂ ನನಗೆ ಬೇಕಾದುದನ್ನೆಲ್ಲ ಆತನೇ ಬದಲಿಸುವನೆಂಬ ಶ್ರದ್ಧೆಯ ವಿಚಾರವಿದ್ದರೆ ಆಗಲೂ ಈ ಮಂತ್ರದಲ್ಲಿ ಅವು ನನಗೆ ಕಾಣುತ್ತವೆ. ನನ್ನ ಹಾಗೂ ನಿಮ್ಮ ನಾಡಿನಾಡಿಗಳಲ್ಲಿ ನರನರಗಳಲ್ಲಿ ಆತನು ತುಂಬಿರುವದರಿಂದ ಭೂತಾಲದ ಮೇಲಿನ ಎಲ್ಲ ಪ್ರಾಣಿಗಳ ಸಮಾನತೆಯ ತತ್ವವನ್ನು ನಾನು ಇದರಿಂದ ನಿಶ್ಚಯ ಮಾಡುತ್ತೇನೆ. ಎಲ್ಲ ದಾರ್ಶನಿಕ ಸಾಮ್ಯವಾದಿಗಳ ಆಕಾಂಕ್ಷೆಯನ್ನು ಇದು ಪೂರೈಸಬಲ್ಲದು. ದೇವರಿಗೆ ಸೇರಿದ ಯಾವ ವಸ್ತುವನ್ನು ನನ್ನದೆಂದು ನಾನು ತಿಳಿದುಕೊಳ್ಳಲಾರೆನೆಂದು ಈ ಮಂತ್ರವು ನನಗೆ ಬೋಧಿಸುತ್ತದೆ. ಈ ಮಂತ್ರದಲ್ಲಿ ನಂಬಿಕೆಯುಳ್ಳ ನನ್ನ ಹಾಗೂ ಇತರರ ಜೀವನವು ಸಂಪೂರ್ಣ ಸಮರ್ಪಣದ ಜೀವನವಾಗಬೇಕಾದರೆ ನಮ್ಮ ಸಹಚರ ಜೀವಿ ಸೇವೆಗೆ ಅದು ಮುಡುಪಾಗಬೇಕು.

ಇದು ನನ್ನ ಶ್ರದ್ಧೆ. ಹಿಂದೂಗಳೆನ್ನುವವರೆಲ್ಲರ ಶ್ರದ್ಧೆಯೂ ಇದಾಗ ಬೇಕು. ಕ್ರೈಸ್ತ ಮಿತ್ರರೂ ಮುಸಲ್ಮಾನ ಬಂಧುಗಳೂ ತಮ್ಮ ಧರ್ಮಗಳನ್ನು ಶೋಧಿಸಿದರೂ ಅವುಗಳಲ್ಲಿ ಇದಕ್ಕಿಂತ ಹೆಚ್ಚಿನದಾವುದನ್ನೂ ಕಾಣುವ ದಿಲ್ಲೆಂದು ನಾ ಧೈರ್ಯದಿಂದ ಸೂಚಿಸಬಲ್ಲೆನು.

ಹಿಂದೂತ್ವದ ಹೆಸರಿನಲ್ಲಿ ಎಸಗಿರುವ ಅನೇಕ ಅಂಧಶ್ರದ್ಧೆಗಳ ಅರಿವು ನನಗಿದೆ ಎಂಬುದನ್ನು ಬಚ್ಚಿಡುವ ಇಚ್ಛೆಯು ನನಗಿಲ್ಲ. ಹಿಂದುತ್ವದ ವೇಷವನ್ನು ಹಾಕಿಕೊಂಡಿರುವ ಅನೇಕ ಮೂಢ ನಂಬುಗೆಗಳ ಪರಿಚಯ ನನಗುಂಟು. ಮತ್ತು ಇದ್ದುದನ್ನು ಇದ್ದಂತೆ ಹೇಳುವದಕ್ಕೆ ನನಗಾವ ಸಂಕೋಚವೂ ಇಲ್ಲ. ಅಸ್ಪೃಶ್ಯತೆ ಇಂತಹ ಅಂಧಶ್ರದ್ಧೆಗಳಲ್ಲಿ ಹೆಚ್ಚಿನ ಅಂಧಶ್ರದ್ಧೆಯೆಂದು ಹೇಳಲು ನಾನೆಂದೂ ಹಿಂಜರಿದಿಲ್ಲ. ಆದರೂ ನಾನು ಹಿಂದೂ ಆಗಿಯೆ ಉಳಿದಿದ್ದೇನೆ. ಯಾಕಂದರೆ ಈ ಅಂಧಶ್ರದ್ಧೆಗಳು ಹಿಂದೂಧರ್ಮದ ಅಂಗಗಳೆಂದು ನಾನು ನಂಬುವದಿಲ್ಲ. ನಾನು ವಿವರಿಸಿದ ಹಾಗು ನಾನು ಹೇಳಿದ ಮಂತ್ರದಲ್ಲಿ ಹುದುಗಿದ ಸತ್ಯಕ್ಕೆ ವಿಸಂಗತವಾದು ದನ್ನು ಹಿಂದೂಧರ್ಮಕ್ಕೆ ಸೇರಿದ್ದುದಲ್ಲವೆಂದು ನಿರಾಕರಿಸಿಬಿಡಬೇಕೆಂದು ಹಿಂದೂಧರ್ಮದಲ್ಲಿ ಹೇಳಿದ ಶಾಸ್ತ್ರಾರ್ಥನಿಯಮಗಳೇ ನಮಗೆ ತಿಳಿಸುತ್ತವೆ.

(ಹರಿಜನ : ೩೦-೧-೩೭)

೧೨೫ ರ ವರೆಗೆ ಬಾಳಬೇಕು

ವಿಚಾರವನ್ನು ಮಾಡದೆ, ನಾನು ೧೨೫ ವರ್ಷಗಳ ವರೆಗೆ ಬದುಕಬೇಕೆಂಬ ನನ್ನ ಇಚ್ಛೆಯನ್ನು ಕುರಿತು ನಾನು ಮಾತನಾಡಿಲ್ಲ. ಅದಕ್ಕೆ ಆಳವಾದ ಅರ್ಥವಿದೆ. ಈಶೋಪನಿಷತ್ತಿನ ಮೂರನೆಯ ಮಂತ್ರವೇ ನನ್ನ ಈ ಮನೋಗತದ ಆಧಾರ. ಅನಾಸಕ್ತಿಯಿಂದ ಸೇವೆಗೈಯುತ್ತಾ ನೂರು ವರ್ಷ ಮನುಷ್ಯನು ಬಾಳಬೇಕೆಂದು ಆ ಮಂತ್ರವು ಹೇಳುತ್ತದೆ. ನೂರೆಂದರೆ ನೂರಿಪ್ಪತ್ತೈದೆಂದು ಒಂದು ಭಾಷ್ಯವು ಹೇಳುತ್ತದೆ.

ಅದೇನೇ ಇರಲಿ, ನೂರರ ಅರ್ಥವು ನನಗೆ ಈಗ ಪ್ರಕೃತವಲ್ಲ. ಇಚ್ಛಾಸಿದ್ಧಿಗೆ ಅಗತ್ಯವಾದ ನಿಯಮವಾವುದೆಂಬುದನ್ನು ತೋರಿಸುವದೇ ನನ್ನ ಉದ್ದೇಶ. ಅನಾಸಕ್ತಿಯಿಂದ ಸೇವೆಮಾಡುವದೇ ಆ ನಿಯಮ. ಅಂದರೆ, ಫಲಾಪೇಕ್ಷೆಯನ್ನು ಬಿಟ್ಟು ಸೇವೆಯನ್ನು ಮಾಡುವದು. ಅದಿಲ್ಲದೆ ೧೨೫ ವರ್ಷಗಳವರೆಗೆ ಬದುಕಬಯಸಕೂಡದು. ಹಾಗೆ ನಾನು ಆ ಮಂತ್ರದ ಅರ್ಥವನ್ನು ಮಾಡುತ್ತೇನೆ. ಅನಾಸಕ್ತಿಯ ಆ ಹಂತವನ್ನು ಮುಟ್ಟದೆ ೧೨೫ ವರ್ಷಗಳವರೆಗೆ ಜೀವಿಸುವುದಶಕ್ಯ. ಅಲ್ಲಿಯವರೆಗೆ ಜೀವಿಸಿರುವದೆಂದರೆ ಹೇಗೋ ಸಾವಿನ ವರೆಗೆ ಜೀವಿಸುವುದೆಂದೆನಿಸಬಾರದು. ಉಸಿರೆಳೆವ ಹೆಣದಂತೆ ಬಂಧುಬಳಗದವರಿಗೆ ಭಾರವಾಗಿ ಸಮಾಜಕ್ಕೆ ಹೊರೆಯಾಗಿ ಬಾಳುವದು ಬಾಳಲ್ಲ; ಅಂತಹ ಸಂದರ್ಭಗಳಲ್ಲಿ ಬೇಗ ಬಿಡುಗಡೆಗಾಗಿ ಕೇಳಿಕೊಳ್ಳುವದೇ ಪರಮ ಕರ್ತವ್ಯವಾಗುವದಲ್ಲದೆ ಹೇಗಾದರೂ ದೀರ್ಘಾಯುಷ್ಯವನ್ನು ಪಡೆಯುವದಲ್ಲ.

ಮಾನವ ದೇಹವು ಸೇವೆಗಾಗಿದೆಯಲ್ಲದೆ ಭೋಗಕ್ಕಾಗಿಯಲ್ಲ. ಸುಖಜೀವನದ ಗುಟ್ಟು ತ್ಯಾಗದಲ್ಲಿದೆ. ತ್ಯಾಗವೇ ಜೀವನ. ವೈರಾಗ್ಯದ ಬಾಳೇ ಬಾಳು. ಭೋಗವೇ ಮರಣ. ಆದುದರಿಂದ ಫಲದ ಮೇಲೆ ಕಣ್ಣಿಡದೆ ಸೇವೆಯನ್ನು ಮಾಡುತ್ತ ೧೨೫ ವರ್ಷಗಳ ವರೆಗೆ ಜೀವಿಸಲು ಇಚ್ಛಿಸುವ ಹಕ್ಕು ಪ್ರತಿಯೊಬ್ಬನಿಗೂ ಇವೆ. ಇಂತಹ ಜೀವನವೂ ಸಮಗ್ರವಾಗಿಯೂ ಸಂಪೂರ್ಣವಾಗಿಯೂ ಸೇವೆಗೆ ಮುಡುಪಾಗಿರಬೇಕು. ಇಂತಹ ಸೇವೆಗಾಗಿ ಮಾಡಿದ ತ್ಯಾಗದಲ್ಲಿ ಅವಿನಾಶಿಯಾದ ಆನಂದವಿದೆ. ಇದನ್ನು

ಯಾರೂ ಕಸಿದುಕೊಳ್ಳಲಾರರು. ಯಾಕೆಂದರೆ ಆ ಅಮೃತವು ಒಳಗಿನಿಂದ ಪುಟಿಯುತ್ತದೆಯಲ್ಲದೆ ಜೀವನಕ್ಕೆ ಸಂಜೀವನವನ್ನು ಒದಗಿಸುತ್ತದೆ. ಇದರಲ್ಲಿ ದುಗುಡ ದುಮ್ಮಾನಗಳಿಗಾಗಲಿ ತಾಳ್ಮೆಗೇಡಿತನಕ್ಕಾಗಲಿ ಎಡೆಯಿರಲಾರದು. ಈ ಆನಂದವಿಲ್ಲದೆ ದೀರ್ಘಾಯುಷ್ಯವು ಅಶಕ್ಯ ಮತ್ತು ಒಂದು ವೇಳೆ ಶಕ್ಯವಾದರೂ ಅದು ಪ್ರಯೋಜನಕಾರಿಯಾಗದು.

ಬಾಹ್ಯ ಸಾಧನಗಳಿಂದ ೧೨೫ ವರ್ಷಗಳ ವರೆಗೆ ಆಯುಷ್ಯಾಭಿವೃದ್ಧಿಯನ್ನು ಮಾಡಿಕೊಳ್ಳುವ ಶಕ್ಯತೆಯ ಪರೀಕ್ಷಣವು ಈ ವಾದಕ್ಕೆ ಹೊರತಾದುದು. (ಹರಿಜನ : ೨೪-೨-೪೬)

ತುಂಡುಧೋತ್ರ

ತುಂಡುಧೋತ್ರದ ಅಂಗೀಕಾರವು ನನಗೆ ಕೇವಲ ಒಂದು ಆವಶ್ಯಕತೆಯಾಗಿತ್ತು. ಆದರೆ ತುಂಡುಧೋತ್ರವು ಸರಲತೆಯ ಒಂದು ಪ್ರತೀಕವಾದುದರಿಂದ ಭಾರತೀಯ ನಾಗರಿಕತೆಯ ಪ್ರತಿನಿಧಿಯೂ ಅದಾಗಿರಲಿ. ವಿವಿಧ ಮತಗಳನ್ನು ಪ್ರತಿನಿಧಿಸುವ ಸಂಸ್ಕೃತಿಗಳ ಮತ್ತು ಬೇರೆಬೇರೆ ಸಂಸ್ಕೃತಿಗಳು ಕೂಡಿದ ಭೌಗೋಲಿಕ ಹಾಗು ಇತರ ಆವರಣಗಳ ವರ್ಚಸ್ಸುಳ್ಳ ಸಂಗಮಸಮ್ಮಿಲನವೇ ಅದು. ಹೀಗೆಯೇ ಇಸ್ಲಾಮೀ ಸಂಸ್ಕೃತಿಯು ಅರೇಬಿಯಾದಲ್ಲಿ, ಟರ್ಕಿಯಲ್ಲಿ, ಐಗುಪ್ತಿನಲ್ಲಿ ಮತ್ತು ಭಾರತದಲ್ಲಿ ಒಂದೇ ತೆರನಾಗಿಲ್ಲ. ಆಯಾಯ ದೇಶಗಳ ಪರಿಸ್ಥಿತಿಯ ಪ್ರಭಾವಕ್ಕೆ ಅದು ಒಳಗಾಗಿದೆ. ಆದುದರಿಂದ ಭಾರತೀಯ ಸಂಸ್ಕೃತಿಯು ಭಾರತೀಯವಾಗಿದೆ. ಅದು ಹಿಂದೂ ಸಂಸ್ಕೃತಿಯೂ ಅಲ್ಲ ; ಇಸ್ಲಾಮ್ ಸಂಸ್ಕೃತಿಯೂ ಅಲ್ಲ. ಅಥವಾ ಬೇರಾವುದೂ ಅಲ್ಲ. ಅದು ಇವೆಲ್ಲವುಗಳ ಐಕ್ಯತೆ ಮತ್ತು ಸಾರತಃ ಪೌರ್ವಾತ್ಯ. ನನ್ನ ಮನಸಿನಲ್ಲಿದ್ದುದು ಆ ಸಂಸ್ಕೃತಿ. ಭಾರತೀಯನೆಂದು ಕರೆದುಕೊಳ್ಳುವ ಸ್ತ್ರೀಪುರುಷರು ಆ ಸಂಸ್ಕೃತಿಯ ರಕ್ಷಕರಾಗಬೇಕು, ಅದರ ಧರ್ಮದರ್ಶಿಗಳಾಗಬೇಕು. ಮತ್ತು ಅದರ ಮೇಲಾಗುವ ದಾಳಿಯನ್ನು ಎದುರಿಸಬೇಕು.

ಐರೋಪ್ಯ ನಾಗರಿಕತೆಯು ಐರೋಪ್ಯರಿಗೆ ಯೋಗ್ಯವಾಗಿದೆ. ಆದರೆ

ಅದನ್ನು ಅನುಕರಿಸಲು ನೀವು ಯತ್ನಿಸಿದರೆ ಭಾರತಕ್ಕೆ ಅದರಿಂದ ಅಹಿತವಾಗುವದು ನಿಶ್ಚಿತ. ಅದನ್ನು ಅಂಗೀಕರಿಸಬಾರದೆಂದಾಗಲಿ ಇಲ್ಲವೆ ಅದರಲ್ಲಿ ಅರಗಿಸಿಕೊಳ್ಳತಕ್ಕ ಒಳಿತಾದುದನ್ನು ಅರಗಿಸಿಕೊಳ್ಳಬಾರದೆಂದಾಗಲಿ ಇದರರ್ಥವಲ್ಲ. ಹಾಗೆಯೇ ಐರೋಪ್ಯರಾದರೂ ಅದರಲ್ಲಿರುವ ಅನಿಷ್ಟ ಅಂಶಗಳನ್ನು ಬಿಡಲೇ ಕೂಡದೆಂದೂ ಅರ್ಥವಲ್ಲ. ಭೌತಿಕ ಸುಖದ ನಿರಂತರ ಅನ್ವೇಷಣವು ಅಂತಹ ಒಂದು ಅನಿಷ್ಟ ಅಂಶ. ಭೌತಿಕ ಸುಖಕ್ಕೆ ಯೂರೋಪಿನವರು ಗುಲಾಮರಾಗಿದ್ದಾರೆ. ಅದರ ಭಾರದಿಂದ ನಾಶವಾಗಬಾರದೆಂಬ ಇಚ್ಛೆಯು ಐರೋಪ್ಯರಿಗಿದ್ದರೆ ಅವರಾದರೂ ತಮ್ಮ ಜೀವನದರ್ಶನವನ್ನು ಮಾರ್ಪಡಿಸಿಕೊಳ್ಳುವದವಶ್ಯ. ನನ್ನ ಈ ಅವಲೋಕನವು ತಪ್ಪಿರಬಹುದು. ಆದರೆ ಭಾರತಕ್ಕೆ ಮಾತ್ರ ಈ ಮೃಗಜಲವನ್ನು ಬೆಂಬತ್ತಿ ಹೋಗುವದು ನಿಶ್ಚಿತವಾದ ಮೃತ್ಯುವನ್ನು ಆಲಿಂಗಿಸಿದಂತೆಯೆ. ನಮ್ಮ ಅಂತರಂಗದ ಮೇಲೆ 'ಸರಲ ಜೀವನ, ಉದಾತ್ತ ವಿಚಾರ' ಎಂಬ ಪಾಶ್ಚಿಮಾತ್ಯ ದಾರ್ಶನಿಕನ ಸೂತ್ರವನ್ನು ಕೊರೆದುಕೊಳ್ಳೋಣ. ಇಂದು ಕೋಟ್ಯಂತರ ಜನರಿಗೆ ಉಚ್ಚ ಸುಖಜೀವನವು ಶಕ್ಯವಿಲ್ಲ. ಪ್ರಯುಕ್ತ ಜನಸಾಮಾನ್ಯರಿಗಾಗಿ ವಿಚಾರಮಾಡುತ್ತೇವೆಂದು ಕೊಚ್ಚಿಕೊಳ್ಳುವ ಕೆಲವರಾದ ನಾವು ಉಚ್ಚ ಸುಖಜೀವನದ ನಿರರ್ಥಕ ಅನ್ವೇಷಣದ ಭರದಲ್ಲಿ ಉದಾತ್ತ ವಿಚಾರವನ್ನು ಕಳೆದುಕೊಳ್ಳುವ ಗಂಡಾಂತರವಿದೆ.

(ಯಂಗ್ ಇಂಡಿಯಾ: ೩೦-೪-೩೧)

ದೇವಸ್ಥಾನಪೂಜೆ

★

ಶ್ರದ್ಧೆಯಿಂದ ದೇವಸ್ಥಾನಗಳಿಗೆ ಹೋಗಿರಿ

(ತಿರುವಾಂಕೂರು ದೇವಸ್ಥಾನ ಪ್ರವೇಶ ಪ್ರಕಟನಾಸಮಾರಂಭ ಸಮಯದಲ್ಲಿ ತಿರುವನಂತಪುರದಲ್ಲಿ ಗಾಂಧೀಜಿಯು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು:)

ನನ್ನ ಬಾಲ್ಯದಲ್ಲಿ ನನ್ನ ತಾಯಿತಂದೆಗಳು ನನ್ನಲ್ಲಿ ತುಂಬಿದ ಭಕ್ತಿ ಶ್ರದ್ಧೆಗಳಿಂದ ನಾನು ಅನೇಕ ದೇವಾಲಯಗಳಿಗೆ ಹೋಗುತ್ತಿದ್ದೆನು. ಆದರೆ ಇತ್ತೀಚೆಗೆ ನಾನು ದೇವಾಲಯಗಳಿಗೆ ಹೋಗುತ್ತಿಲ್ಲ. ಅಸ್ಪೃಶ್ಯರೆಂದೆನಿಸಿ ಕೊಳ್ಳುವ ಪ್ರತಿಯೊಬ್ಬನಿಗೆ ಮುಕ್ತದ್ವಾರವಿದ್ದ ಹೊರತು ಗುಡಿಗಳಿಗೆ ನಾನು ಹೋಗುವದನ್ನು ಬಿಟ್ಟಿದ್ದೇನೆ. ಆದುದರಿಂದ ಇಂದು ಬೆಳಿಗ್ಗೆ ಗುಡಿಯಲ್ಲಿ ನಾನು ನೋಡಿದ್ದುದರಿಂದ ಹೊಳೆದ ಭಾವನೆಯು ಈ ಪ್ರಕಟನೆಯ ಬಳಿಕ ದೇವಾಲಯಕ್ಕೆ ಹೋಗಿದ್ದ ಅವರ್ಣ ಹಿಂದುಗಳ ಮನಸ್ಸಿನಲ್ಲಿಯೂ ಅಷ್ಟೇ ನೂತನವಾಗಿ ಹೊಳೆದಿರಲಿಕ್ಕೆ ಸಾಕು. ನನ್ನ ಮನಸ್ಸು ಕಲ್ಪನಾರಂಗದಲ್ಲಿ ಅಲೆದಾಡುತ್ತ ಇತಿಹಾಸಪೂರ್ವ ಶತಮಾನಗಳಲ್ಲಿ ದೇವಾಲಯಗಳು ದೇವನ ಸಂದೇಶವನ್ನು ಶಿಲೆಗಳಲ್ಲಿಯೂ ಲೋಹಗಳಲ್ಲಿಯೂ ಹರಡಲು ಆರಂಭ ಮಾಡಿದ ಕಾಲದವರೆಗೆ ಹೋಯಿತು. ತನ್ನದೇ ಆದ ಉತ್ತಮ ಹಿಂದಿಯಲ್ಲಿ ಪ್ರತಿಯೊಂದು ಪ್ರತಿಮೆಯ ಅರ್ಥವನ್ನು ಹೇಳುತ್ತಿದ್ದ ಅರ್ಚಕನು ಅಲ್ಲಿಯ ಪ್ರತಿಯೊಂದು ಪ್ರತಿಮೆಯೂ ದೇವನೆಂದು ನನಗೆ ಹೇಳಲಿಲ್ಲ. ಆದರೆ ಆ ವಿಶಿಷ್ಟ ಅರ್ಥವನ್ನು ನನಗೆ ವಿವರಿಸದೆ ಈ ಗುಡಿಗಳು ಅಪಾರವಾದ ಸಾಗರ ದಲ್ಲಿಯ ಅಸಂಖ್ಯ ಕಣಗಳಂತಿರುವ ನಮ್ಮ ಹಾಗು ಅದೃಷ್ಟ, ಅದೃಶ್ಯ ಮತ್ತು ಅಪ್ರಮೇಯನಾದ ದೇವನ ನಡುವೆ ಏರ್ಪಡಿಸಿದ ಅನೇಕ ಸೇತುವೆಗಳೆಂದು ಗುರುತಿಸುವಂತೆ ಮಾಡಿದನು. ಮಾನವಕುಟುಂಬದವರಾದ ನಾವೆಲ್ಲರೂ ತತ್ವಜ್ಞಾನಿಗಳಲ್ಲ. ನಾವೆಲ್ಲರೂ ಮಣ್ಣಿಗಿಂತಲೂ ಮಣ್ಣು. ಅದೃಶ್ಯನಾದ ದೇವನನ್ನು ಧ್ಯಾನಿಸಿ ತೃಪ್ತರಾಗುವವರಲ್ಲ. ಹೇಗೆಯೆ ಆಗಲಿ ನಮ್ಮ ಸ್ಪರ್ಶಕ್ಕೆ ನಿಲುಕತಕ್ಕಂತಹದೇನಾದರೂ ನಮಗೆ ಬೇಕು, ಕಣ್ಣಿಗೆ ಕಾಣು ವಂತಹದೇನಾದರೂ ಬೇಕು, ಮಂಡಿಯೂರಿ ಮಣಿದು ಮೆಚ್ಚಿಸಿಕೊಳ್ಳುವಂ ತಹದೇನಾದರೂ ನಮಗೆ ಬೇಕು. ಅದು ಒಂದು ಗ್ರಂಥವಾಗಿರಬಹುದು. ಅಥವಾ ಬರಿದಾದ ಕಲ್ಲಿನ ಕಟ್ಟಡವಾಗಿರಬಹುದು ಇಲ್ಲವೆ ಅಸಂಖ್ಯ ಪ್ರತಿಮೆ ಗಳುಳ್ಳ ಕಲ್ಲಿನ ಇಮಾರತಿಯಾಗಿರಬಹುದು. ಕೆಲವರಿಗೆ ಗ್ರಂಥದಿಂದ ತೃಪ್ತಿ ದೊರೆಯಬಹುದು. ಬೇರೆ ಕೆಲವರಿಗೆ ಬರಿದಾದ ಇಮಾರತಿಯಿಂದ ಸಮಾ ಧಾನವಾಗಬಹುದು. ಮತ್ತು ಅನೇಕರಿಗೆ ಈ ಕಟ್ಟಡಗಳಲ್ಲಿ ವಾಸಿಸುವ ಪ್ರತಿಮೆಗಳಿದ್ದ ಹೊರತು ತೃಪ್ತಿಯೆನಿಸುವದಿಲ್ಲ. ನಾನು ಈ ಬರಿದಾದ ಕಟ್ಟಡಗಳಿಗೆ ಹೋಗಿರೆಂದು ಹೇಳುತ್ತೇನೆ. ಆದರೆ ಅವು ಕೆಲ ಅಂಧಶ್ರದ್ಧೆ

ಗಳ ಪ್ರತೀಕಗಳೆಂದು ಭಾವಿಸಿ ಅಲ್ಲ, ಆವುಗಳಲ್ಲಿ ನಂಬಿಕೆಯಿಟ್ಟು ಈ ಗುಡಿಗಳಿಗೆ ನೀವು ಹೋದರೆ ಮರಳಿ ಬರುವಾಗಲೆಲ್ಲ ಪರಿಶುದ್ಧರಾಗಿ ಮರಳುವಿರಿ; ಅಲ್ಲದೆ ಜೀವಂತ ದೇವನಲ್ಲಿ ನಿಮ್ಮ ಶ್ರದ್ಧೆಯು ಹೆಚ್ಚಾಗುವದು.

ಗಾಂಧೀಗೆ ಒಂದು ಗುಡಿ

ನನ್ನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವ ಗುಡಿಯೊಂದು ಕಟ್ಟಲ್ಪಟ್ಟಿರುವ ಸುದ್ದಿಯುಳ್ಳ ಪತ್ರಿಕೆಯ ತುಣುಕೊಂದನ್ನು ಸುದ್ದಿಗಾರನೊಬ್ಬನು ನನಗೆ ಕಳಿಸಿರುವನು. ಅದನ್ನು ನಾನು ಓದಿದ್ದೇನೆ. ಇದು ಮೂರ್ತಿಪೂಜೆಯ ಒಂದು ಜಡ, ವಿಕಟ ಮಾದರಿಯೆಂದು ನಾನು ಬಗೆದಿದ್ದೇನೆ. ಆ ಗುಡಿಯನ್ನು ಕಟ್ಟಿಸಿದ ಗೃಹಸ್ಥನು ತನ್ನ ಸಂಪತ್ತು ಸಾಧನಗಳನ್ನೆಲ್ಲ ಹಾಳು ಮಾಡಿಕೊಂಡಿದ್ದಾನೆ. ಅಲ್ಲಿಗೆ ಹೋಗುವ ಹಳ್ಳಿಗರು ತಪ್ಪು ದಾರಿಯನ್ನು ಹಿಡಿದಿರುವರು. ಅಲ್ಲದೆ ನನ್ನ ಸಮಗ್ರ ಜೀವನದ ಒಂದು ವಿಡಂಬನೆಯೇ ಆ ಗುಡಿಯಲ್ಲಿ ನಡೆದಿರುವದರಿಂದ ನನಗೆ ಅವಮಾನವಾದಂತಾಗಿದೆ. ಪೂಜೆಗೆ ನಾನು ಇತ್ತ ಅರ್ಥ ತಿರುಗುಮುರುಗಾಗಿದೆ. ರಾಟೆಯ ಪೂಜೆಯೆಂದರೆ ಉಪಜೀವನಕ್ಕಾಗಿ ಆದನ್ನು ತಿರುಗಿಸುವದೇ ಆಗಿದೆ, ಅಥವಾ ಸ್ವರಾಜ್ಯಪ್ರಾಪ್ತಿಗಾಗಿ ಸ್ವಾರ್ಥತ್ಯಾಗ ಸಂಕೇತವೇ ಅದಾಗಿದೆ. ಗಿಳಿಯಂತೆ ಪಾಠ ಮಾಡಿದರೆ ಗೀತೆಯ ಪೂಜೆಯಾಗಲಿಲ್ಲ. ಆದರೆ ಅದರ ತತ್ವಗಳನ್ನು ಅನುಸರಿಸಬೇಕು. ಪಾರಾಯಣವು ಯೋಗ್ಯವೇನೋ ಸರಿ; ಆದರೆ ಅದರ ಉಪದೇಶದಂತೆ ನಡೆಯಲು ಅದು ಸಹಾಯಕವಾಗಬೇಕು. ಮನುಷ್ಯನ ಸದ್ಗುಣಸಾಮರ್ಥ್ಯವನ್ನು—ಆತನ ದೌರ್ಬಲ್ಯವನ್ನಲ್ಲ—ಅನುಸರಿಸುವದರಿಂದ ಆತನ ಪೂಜೆಯಾಗುತ್ತದೆ. ಜೀವಂತ ವ್ಯಕ್ತಿಯ ಪ್ರತಿಮೆಯನ್ನು ಮಾಡಿ ಪೂಜಿಸುವಮಟ್ಟಿಗೆ ಕೆಳಗಿಳಿದರೆ ಹಿಂದೂತ್ವದ ಅಧೋಗತಿಯೇ ಆಯಿತು. ಸಾಯುವ ತನಕ ಯಾವನೊಬ್ಬನೂ ಒಳ್ಳೆಯವನೆಂದು ಹೇಳಲಾಗದು. ಸತ್ತಮೇಲೂ ಅವನ ಬಳಿಯಲ್ಲಿ ಸದ್ಗುಣವಿದ್ದವೆಂದು ನಂಬಿದವರಿಗೆ ಮಾತ್ರ ಅವನು ಒಳ್ಳೆಯವನಾಗಬಹುದು. ವಸ್ತುತಃ ಮನುಷ್ಯನ ಅಂತರಂಗವನ್ನು ದೇವನೊಬ್ಬನೇ ಬಲ್ಲನು: ಆದುದರಿಂದ

ಜೀವಿಸಿದ್ದ ಅಥವಾ ಮೃತನಾದ ಯಾವ ವ್ಯಕ್ತಿಯನ್ನೂ ಪೂಜಿಸದಿರುವದೇ ಮೇಲು. ಸತ್ಯವೆಂದು ಹೆಸರುಳ್ಳ ದೇವನಲ್ಲಿರುವ ಪರಿಪೂರ್ಣತೆಯನ್ನು ಪೂಜಿಸುವದೇ ವಿಹಿತ. ಭಾವಚಿತ್ರಗಳನ್ನು ಸಂಗ್ರಹಿಸುವದೂ ಅಯೋಗ್ಯ ವಾದ ಪೂಜೆಯಲ್ಲವೇ ಎಂಬ ಪ್ರಶ್ನೆಯು ಏಳಬಹುದು. ಮುಂಚೆಯೆ ಇದನ್ನು ಕುರಿತು ನನ್ನ ಬರಹಗಳಲ್ಲಿ ಸಾಕಷ್ಟು ಹೇಳಿದ್ದೇನೆ. ಆದರೂ ನಾನು ಅದನ್ನು ತಾಳಿಕೊಂಡಿದ್ದೇನೆ. ಏಕೆಂದರೆ, ಅದು ದುಂದುಗಾರಿಕೆಯು ನಡೆಯೆನಿಸಿದರೂ ಕೆಡಕುಮಾಡುವಂಥದಲ್ಲ. ಆದರೆ ಮೇಲೆ ಹೇಳಿದ ಗುಡಿ ಯನ್ನು ಕಟ್ಟುವ ರೂಢಿಗೆ ನಾನು ಉತ್ತೇಜನವನ್ನು ಕೊಟ್ಟರೆ ನನ್ನ ತಾಳ್ಮೆಯು ಅಪಾಯಕಾರಿಯೂ ಅಸಹ್ಯವೂ ಆಗುವದು. ಆ ಗುಡಿಯ ಒಡೆಯನು ನನ್ನ ಪ್ರತಿಮೆಯನ್ನು ಅಲ್ಲಿಂದ ತೆಗೆದು ಆ ಕಟ್ಟಡವನ್ನು ಬಡಬಗ್ಗರು ಕೂಲಿಗಾಗಿಯೂ ಇತರರು ಯಜ್ಞವೆಂದೂ ನೂಲಲು ಮತ್ತು ಎಲ್ಲರೂ ಖಾದಿ ಧರಿಸಲು ಅನುಕೂಲವಾಗುವಂತೆ ನೂಲುವ ಕೇಂದ್ರವನ್ನಾಗಿ ಮಾಡಿದರೆ ನನಗೆ ಬಹಳ ಉಪಕಾರವಾಗುವದು. ಇದು ಗೀತೆಯ ಪ್ರತ್ಯಕ್ಷ ಉಪದೇಶವಾಗುವದಲ್ಲದೆ ಆದರ ಹಾಗು ನನ್ನ ಪೂಜೆಯಾಗುವದು.

(ಹರಿಜನ : ೨೪-೩-೪೬)

ವಿಗ್ರಹಾರಾಧನೆ

ವಿಗ್ರಹಾರಾಧನೆಯನ್ನು ಖಂಡಿಸುವ ಒಬ್ಬ ಶಾಲೋಪಾಧ್ಯಾಯರು ಈ ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ:

೧. ಶ್ರೀರಾಮಚಂದ್ರನ ಜೀವನವನ್ನು ಅನುಸರಿಸುತ್ತಿರುವ ಹಿಂದೂವಿಗೆ ಗುಡಿಯಲ್ಲಿ ಹೋಗಿ ಆತನ ವಿಗ್ರಹವನ್ನು ನೋಡುವದವಶ್ಯವೆ ? ಕೃತಿಗಿಂತ ದರ್ಶನವು ಶ್ರೇಷ್ಠವೆ?

೨. ಜೀವಂತ ವ್ಯಕ್ತಿಯ ಮುಂದೆ ಕೈಜೋಡಿಸಿದರೆ ಇಲ್ಲವೆ ತಲೆ ಬಗ್ಗಿಸಿದರೆ ಆತನು ಮರಳಿ ಕೈ ಜೋಡಿಸುತ್ತಾನೆ ಅಥವಾ ತಲೆ ಬಗ್ಗಿಸು ತ್ತಾನೆ. ಆದರೆ ವಿಗ್ರಹವು ಹಾಗೆ ಮಾಡುವದಿಲ್ಲ. ಅಂದ ಬಳಿಕ ಹಾಗೆ

ಮಾಡುವದರಿಂದಾವ ಪ್ರಯೋಜನ? ಉತ್ತರವನ್ನೇ ಕೊಡದಿರುವವರಿಗೆ ಪತ್ರಗಳನ್ನು ಬರೆಯುವದೇಕೆ?

೩. ಯಾರ ವಿಗ್ರಹವನ್ನು ಆರಾಧಿಸುವದೋ ಆ ವ್ಯಕ್ತಿಯು ತನ್ನ ಜೀವಮಾನದಲ್ಲಿ ಕೆಲ ತಪ್ಪುಗಳನ್ನು ಮಾಡಿರಬಹುದು. ಪೂಜಕನು ಅವನ ತಪ್ಪುಗಳನ್ನೇ ಅನುಕರಿಸಿ ಅಪಾಯಕ್ಕೊಳಗಾಗಬಹುದಲ್ಲವೆ?

ಇಂತಹ ಪ್ರಶ್ನೆಗಳನ್ನು ಇದಕ್ಕಿಂತ ಮುಂಚೆಯೆ ಕೇಳಿದ್ದಾರೆ; ನಾನು ಅವುಗಳಿಗೆ ಅನೇಕ ಸಲ ಉತ್ತರಗಳನ್ನು ಕೊಟ್ಟಿದ್ದೇನೆ. ಆದರೆ ದೇವಾಲಯ ಪ್ರವೇಶದ ಪ್ರಶ್ನೆಯಿಂದ ಅವು ಮತ್ತೆ ಎದ್ದಿವೆ. ಈ ಸುದ್ದಿಗಾರನಂತಹ ಪ್ರಾಮಾಣಿಕ ಸಂದೇಹವಾದಿಗಳನ್ನು ಈ ಪ್ರಶ್ನೆಗಳು ಬಹಳ ಕಾಡುತ್ತವೆ. ಈ ಸುದ್ದಿಗಾರನಂತಹ ಸಂಶಯಗ್ರಸ್ತರನ್ನು ಸಮಾಧಾನಪಡಿಸುವದು ಕಠಿನವೆನಿಸಿದರೂ ಶಕ್ಯವಿದ್ದಷ್ಟು ಉತ್ತಮ ರೀತಿಯಲ್ಲಿ ನಾನು ಉತ್ತರಕೊಡಬೇಕು.

ಮೊದಲನೆಯ ಪ್ರಶ್ನೆಯಲ್ಲಿಯ ಉಪಪ್ರಶ್ನೆಯನ್ನು ಯೋಗ್ಯರೀತಿ ಕೇಳಿಲ್ಲ, ದರ್ಶನ ಮತ್ತು ಕೃತಿ ಇವುಗಳ ತುಲನೆಯ ಪ್ರಶ್ನೆಯೇ ಇಲ್ಲ. ಹಾಗೇನಾದರೂ ಇದ್ದಿದ್ದರೆ ಕೃತಿಯು ಯಾವಾಗಲೂ ಶ್ರೇಷ್ಠವೆಂದು ನಿಸ್ಸಂಕೋಚವಾಗಿ ಹೇಳುತ್ತೇನೆ. ಆದರೆ ಕೃತಿಯನ್ನು ಮಾಡಲು ಶಕ್ತಿಯನ್ನು ಕೊಡಲು ಆತ್ಮವನ್ನು (ಮನಸ್ಸನ್ನು) ಸ್ಥಿರಪಡಿಸಿ ಪವಿತ್ರಗೊಳಿಸುವದೇ ದರ್ಶನದ ಕಾರ್ಯ. ಆದುದರಿಂದ ದರ್ಶನವು ಸತ್ಕೃತಿಯ ಬದಲು ಅಲ್ಲ. ಅದರ ಉತ್ತೇಜನಕ್ಕಾಗಿದೆ.

ಎರಡನೆಯ ಪ್ರಶ್ನೆಯನ್ನು ಕೇಳುವಲ್ಲಿ, ದೇವಾಲಯದಲ್ಲಿ, ಪೂಜೆಯ ಸಮಗ್ರ ಉದ್ದೇಶವನ್ನೇ ಶಾಲಾ ಶಿಕ್ಷಕರು ಅರಿತುಕೊಂಡಿಲ್ಲ. ಜೀವದ್ವ್ಯಕ್ತಿಯನ್ನು ನಾನು ನಮಸ್ಕರಿಸಿದಾಗ ಮತ್ತು ಆತನು ಅದಕ್ಕೆ ಪ್ರತಿಯಾಗಿ ನನಗೆ ನಮಸ್ಕಾರ ಮಾಡಿದಾಗ ಅದು ಕೇವಲ ಉಪಚಾರದ ವಿನಿಮಯ; ಅದರಲ್ಲಿ ವಿಶಿಷ್ಟವಾದ ಯಾವ ಗುಣವೂ ಇಲ್ಲ. ಅದು ಸುಸಂಸ್ಕೃತಿಯ ಒಂದು ಲಕ್ಷಣವಾಗಿರಬಹುದು. ದೇವಸ್ಥಾನಕ್ಕೆ ಹೋಗುವದು ಆತ್ಮಶುದ್ಧಿಗಾಗಿ. ಪೂಜಕನು ತನ್ನಲ್ಲಿರುವ ಶ್ರೇಷ್ಠವಾದ ಅಂಶಗಳನ್ನೆಲ್ಲ ಆಗ ಹೊರಹೊಮ್ಮಿಸುತ್ತಾನೆ. ಜೀವದ್ವ್ಯಕ್ತಿಯನ್ನು ನಮಸ್ಕರಿಸುವಾಗ, ಆ ನಮಸ್ಕಾರವು ಸ್ವಾರ್ಥರಹಿತವಾಗಿದ್ದರೆ ನಮಸ್ಕೃತ ವ್ಯಕ್ತಿಯಲ್ಲಿರುವ ಶ್ರೇಷ್ಠ

ಗುಣಗಳನ್ನು ನಮಸ್ಕಾರ ಮಾಡಿದವನು ಹೊರಹೊಮ್ಮಿಸಬಹುದು. ಜೀವದ್ವ್ಯಕ್ತಿಯು ನಮ್ಮಂತೆಯೇ ಹೆಚ್ಚು ಕಡಿಮೆ ತಪ್ಪುಮಾಡುವ ಸ್ವಭಾವದವನಾಗಿರುವನು. ಆದರೆ ದೇವಾಲಯದಲ್ಲಿ ನಮ್ಮ ಕಲ್ಪನಾತೀತವಾದ ಪರಿಪೂರ್ಣತೆಯುಳ್ಳ ಜೀವಂತ ದೇವನನ್ನು ಪೂಜಿಸಲಾಗುತ್ತದೆ. ಜೀವದ್ವ್ಯಕ್ತಿಗಳಿಗೆ ಬರೆದ ಪತ್ರಗಳಿಂದ--ಅವು ಉತ್ತರಿಸಲ್ಪಟ್ಟರೂ—ಅನೇಕ ವೇಳೆ ಎದೆಯೊಡೆದಿದೆ. ಅಲ್ಲದೆ ಅವುಗಳಿಗೆ ಉತ್ತರವು ಸಿಕ್ಕೇಸಿಕ್ಕುವದೆಂಬ ಭರವಸೆಯಿಲ್ಲ. ಭಕ್ತರ ಕಲ್ಪನೆಯಂತೆ ಗುಡಿಗಳಲ್ಲಿರುವ ದೇವರಿಗೆ ಬರೆಯುವ ಪತ್ರಗಳಿಗೆ ಲೆಕ್ಕಣಿಕೆ ಬೇಕಿಲ್ಲ. ಮಸಿಯು ಬೇಡ. ಕಾಗದವೂ ಬೇಕಿಲ್ಲ. ಕೊನೆಯದಾಗಿ ಮಾತು ಸಹ ಬೇಡ. ಕೇವಲ ಮೂಕ ಭಜನೆಯೇ ತಪ್ಪದೆ ಉತ್ತರಗಳನ್ನು ತರುವ ಪತ್ರಗಳು. ಈ ಸಮಗ್ರ ಕಾರ್ಯವೆಲ್ಲ ಶ್ರದ್ಧೆಯ ಒಂದು ಸುಂದರ ಕ್ರಿಯೆಯೇ ಸರಿ. ಇಲ್ಲಿ ಪ್ರಯತ್ನವು ಹಾಳಾಗುವ ಅಂಜಿಕೆಯಿಲ್ಲ ; ಎದೆಯೊಡೆವ ಭೀತಿಯಿಲ್ಲ ; ತಪ್ಪು ತಿಳಿದುಕೊಳ್ಳುವದಕ್ಕೂ ಎಡೆಯಿಲ್ಲ. ಈ ಪತ್ರವನ್ನು ಬರೆದಿರುವವನು ದೇವಾಲಯಗಳಲ್ಲಿ, ಮಸೀದಿಗಳಲ್ಲಿ ಮತ್ತು ಚರ್ಚುಗಳಲ್ಲಿ ನಡೆಯುವ ಪೂಜಾದಿಗಳ ಹಿನ್ನೆಲೆಯಲ್ಲಿರುವ ಸಕಲ ತತ್ವದ ತಿಳಿವಳಿಕೆಯನ್ನು ಮಾಡಿಕೊಳ್ಳತಕ್ಕದ್ದು. ನಾನು ಈ ದೇವಾಲಯಗಳಲ್ಲಿ ಯಾವ ಬೇದಭಾವವನ್ನೂ ಮಾಡುವದಿಲ್ಲೆಂದು ಮನವರಿಕೆಯಾದ ಅವನು ನನ್ನ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳುವನು. ಶ್ರದ್ದೆಯಿಂದ ಅವುಗಳನ್ನು ಹೇಗೆ ಮಾಡಿದೆಯೋ ಹಾಗೆಯೇ ಅವು ಉಳಿದಿವೆ. ಅಗೋಚರ ಶಕ್ತಿಯನ್ನು ಕಾಣಲು ಆತುರವಾಗಿರುವ ಮಾನವನ ಆಕಾಂಕ್ಷೆಗಳಿಗೆ ಅವು ಉತ್ತರಗಳಾಗಿವೆ.

ಹಿಂದೂ ಜನರಲ್ಲಿ ಅವತಾರಗಳನ್ನು ಕುರಿತು ಇರುವ ಕಲ್ಪನೆಯನ್ನು ಈ ಸುದ್ದಿಗಾರನು ತಿಳಿದುಕೊಳ್ಳಲು ಕಷ್ಟಪಟ್ಟಿಲ್ಲವೆಂದು ಮೂರನೆಯ ಪ್ರಶ್ನೆಯಿಂದ ಕಂಡುಬರುತ್ತದೆ. ಭಕ್ತಿಯುತನಾದ ಹಿಂದೂವಿಗೆ ದೇವನ ಅವತಾರವೆಂದರೆ ದೋಷರಹಿತವೆಂದು ಗೊತ್ತಿದೆ. ಹಿಂದೂಭಕ್ತನು ಕೃಷ್ಣನನ್ನು ಪರಿಪೂರ್ಣನೆಂದೇ ತಿಳಿದಿರುವನು. ಟೀಕಾಕಾರರ ಕಟು ಅಭಿಪ್ರಾಯಗಳ ಸಂಬಂಧವು ಅವನಿಗೆ ಎಳ್ಳಷ್ಟೂ ಆಗುವದಿಲ್ಲ. ಕೃಷ್ಣ ರಾಮರ ಅಸಂಖ್ಯ ಭಕ್ತರು ಆ ಹೆಸರಿನ ದೇವರ ಧ್ಯಾನದಿಂದ ತಮ್ಮ ಜೀವನವನ್ನೇ ಮಾರ್ಪಡಿಸಿಕೊಂಡಿರುವರು. ಈ ಮಾರ್ಪಾಟು ಹೇಗಾಗುವದೋ ನಾನರಿಯೆ.

ಅದೊಂದು ಗೂಢವೇ ಸರಿ. ಅದನ್ನು ಸಿದ್ಧಮಾಡುವ ಪ್ರಯತ್ನವನ್ನು ನಾನು ಮಾಡುವದಿಲ್ಲ. ನನ್ನ ಬುದ್ಧಿ ಹಾಗು ಅಂತಃಕರಣಗಳು ದೇವರ ಹೆಸರನ್ನು ಹಾಗು ಶ್ರೇಷ್ಠಗುಣವನ್ನು ಸತ್ಯವೆಂದು ಬಹುಕಾಲ ಹಿಂದೆಯೇ ಗುರುತಿಸಿದ್ದರೂ, ಸತ್ಯವನ್ನು ನಾನು ರಾಮನಾಮದಿಂದಲೇ ಗುರುತಿಸುತ್ತೇನೆ. ನನ್ನ ಸತ್ವಪರೀಕ್ಷೆಯ ಅತ್ಯಂತ ಕಗ್ಗತ್ತಲೆಯ ಕಾಲದಲ್ಲಿ ಆ ಒಂದು ನಾಮವು (ರಾಮನಾಮವು) ನನ್ನನ್ನು ರಕ್ಷಿಸಿದೆ; ಈಗಲೂ ರಕ್ಷಿಸುತ್ತಿದೆ. ಅದು ನನ್ನ ಶೈಶವದ ಸಹವಾಸಫಲವಾಗಿರಬಹುದು. ಅಥವಾ ತುಲಸೀದಾಸರು ನನ್ನ ಮೇಲೆ ಬೀರಿದ ವ್ಯಾಮೋಹದ ಪ್ರಭಾವವಾಗಿದ್ದರೂ ಇರಬಹುದು. ಆದರೆ ಸತ್ವಶಾಲಿ ಸತ್ಯಸಂಗತಿಯು ಹಾಗಿದೆ. ನಾನು ಈ ಸಾಲುಗಳನ್ನು ಬರೆಯುತ್ತಿರುವ ಹಾಗೆಯೇ ನನ್ನ ಬಾಲ್ಯದಲ್ಲಿ ನನ್ನ ಹಿರಿಯರ ಮನೆಯ ಹತ್ತಿರವಿದ್ದ ರಾಮಮಂದಿರಕ್ಕೆ ದಿನವೂ ಹೋಗುತ್ತಿದ್ದ ದೃಶ್ಯಗಳ ಸ್ಮರಣೆಯು ನನಗಾಗುತ್ತಿದೆ. ನನ್ನ ರಾಮನು ಆಗ ಅಲ್ಲಿದ್ದನು. ಅವನು ನನ್ನನ್ನು ಅನೇಕ ಭೀತಿಗಳಿಂದಲೂ ಪಾಪಗಳಿಂದಲೂ ಸಂರಕ್ಷಿಸಿದನು. ಅದು ನನ್ನಮಟ್ಟಿಗೆ ಅಂಧಶ್ರದ್ಧೆಯಾಗಿರಲಿಲ್ಲ. ಆ ಮೂರ್ತಿಯ ಅರ್ಚಕನು ದುರಾಚಾರಿಯಾಗಿದ್ದಿರಬಹುದು. ಅವನ ವಿರುದ್ಧವಾಗಿ ನಾನೇನನ್ನೂ ಅರಿಯೆನು. ಅಕಾರ್ಯಗಳು ಆ ದೇವಾಲಯದಲ್ಲಿ ನಿರಾತಂಕವಾಗಿ ಸಾಗಿರಬಹುದು. ಅವುಗಳನ್ನಾದರೂ ನಾನು ಅರಿಯೆ. ಆದುದರಿಂದ ಅವುಗಳ ಪರಿಣಾಮ ನನ್ನ ಮೇಲಾಗಲಿಲ್ಲ. ನನ್ನ ವಿಷಯದಲ್ಲಿ ಸತ್ಯವಾಗಿದ್ದುದಾವುದೋ ಅದು ಅಸಂಖ್ಯ ಹಿಂದುಗಳ ಬಗೆಗೂ ಸತ್ಯವಾಗಿದೆ. ಸವರ್ಣಿಗಳೆಂದು ಕರೆಯಲಾಗುತ್ತಿರುವ ನನ್ನ ಅಸಂಖ್ಯ ಸಹಧರ್ಮೀಯರೊಂದಿಗೆ ನನ್ನ ಹರಿಜನ ಬಂಧುವಿಗೂ — ಆತನು ಇಷ್ಟಪಟ್ಟರೆ — ಈ ದೇವಸ್ಥಾನಪೂಜೆಯಲ್ಲಿ ಭಾಗವು ದೊರೆಯಬೇಕೆಂದು ನಾನು ಬಯಸುತ್ತೇನೆ. ಹರಿಜನ ಬಂಧುಗಳಿಗೆ ತಮ್ಮ ದೇವಾಲಯಗಳನ್ನು ಮುಕ್ತದ್ವಾರ ಮಾಡುವದು ಸವರ್ಣೀಯರ ಕರ್ತವ್ಯವಾಗಿದೆ. ದೇವಸ್ಥಾನಪೂಜೆಯು ಮಾನವಕುಲಕ್ಕೆ ಬೇಕಾಗಿದ್ದ ಆಧ್ಯಾತ್ಮಿಕ ಆವಶ್ಯಕತೆಯನ್ನು ಪೂರೈಸುತ್ತಿದೆ. ಅದರಲ್ಲಿ ಸುಧಾರಣೆಗೆ ಅವಕಾಶವುಂಟು. ಆದರೆ ಮಾನವನು ಜೀವಿಸಿರುವವರೆಗೆ ಆದು ಇದ್ದೇ ಇರುವದು.

(ಹರಿಜನ : ೧೮-೩-೩೩)

ದೇವಾಲಯುಗಳು ಅವಶ್ಯವೆ ?

ಅನೇಕ ಮಿತ್ರರ ಕೂಡ ಅವರಿಗೆ ತೋರಿದ ಬೆಳಕಿನಲ್ಲಿಯೇ ದೇವಾಲಯಗಳ ಆವಶ್ಯಕತೆಯ ಪ್ರಶ್ನೆಯನ್ನು ಚರ್ಚಿಸುವ ಸುಸಂಧಿಯೂ ಅಧಿಕಾರವೂ ನನಗೆ ದೊರೆತಿರುವವು. ಅವರ ಪ್ರತಿಪಾದನೆಯ ಬಹುಭಾಗವನ್ನು ನಾನು ಪ್ರಶಂಸಿಸಬಲ್ಲೆ. ಆದರೆ ಕೆಲವು ಮಹತ್ವದ ಸಂಗತಿಗಳನ್ನು ಅದು ಮರೆತಿರುವದರಿಂದ ಅಪೂರ್ಣವಾಗಿದೆ. ಕೆಲವು ಅರ್ಚಕರು ಕೆಟ್ಟವರಿರುವರು. ದೇವಾಲಯಗಳು, ಚರ್ಚುಗಳು ಮತ್ತು ಮಸೀದಿಗಳು ಬಹ್ವಂಶದಿಂದ ಭ್ರಷ್ಟವಾಗಿವೆ. ಅಲ್ಲದೆ ನೀತಿಚ್ಯುತವಾಗಿವೆ. ಆದರೂ ಎಲ್ಲ ಆಚಾರ್ಯರೂ ಭಟ್ಟರೂ ಕೆಟ್ಟವರಿರುವರೆಂದು ಮತ್ತು ಎಲ್ಲ ಗುಡಿಗಳೂ ಮಸೀದಿಗಳೂ ಚರ್ಚುಗಳೂ ನೀತಿಭ್ರಷ್ಟತೆಯ ನೆಲೆವೀಡುಗಳಾಗಿವೆಯೆಂದೂ ಹೇಳುವದು ಅಶಕ್ಯ. ಯಾವದೇ ಧರ್ಮಕ್ಕೂ ಒಂದು ವಾಸಸ್ಥಾನವಿಲ್ಲದೆ ಇರಲು ಶಕ್ಯವಿಲ್ಲೆಂಬ ಮೂಲಭೂತ ಮಾತನ್ನು ಈ ವಿಮರ್ಶಕರು ಲಕ್ಷಿಸಿಲ್ಲ. ಅಲ್ಲದೆ ನಾನು ಇನ್ನೂ ಮುಂದೆ ಹೋಗಿ ಹೇಳುವದಾದರೆ ಮನುಷ್ಯನು ಈಗಿದ್ದಂತೆ ಇರುವವರೆಗೆ ಯಾವದೇ ಧರ್ಮಕ್ಕೂ ಶ್ರದ್ಧೆಗೂ ಒಂದು ನೆಲೆಯಿಲ್ಲದೆ ಇರಲು ಶಕ್ಯವಿಲ್ಲೆಂದು ಹೇಳಬಲ್ಲೆನು. ಮನುಷ್ಯನ ದೇಹವೇ ದೇಗುಲವೆಂದು ಹೇಳಿದೆ. ಇಂತಹ ಅಸಂಖ್ಯ ದೇಗುಲಗಳು ಇಂದು ನೀತಿಗೆಟ್ಟು ಭ್ರಷ್ಟವಾಗಿರುವವೆಂಬ ಮಾತು ಬೇರೆಯಿರಲಿ. ಪವಿತ್ರಾತ್ಮಯೋಗ್ಯ ದೇಹದೇಗುಲಗಳು ಕೆಲವಾದರೂ ಇರುವುದರಿಂದ, ಅನೇಕರ ಭ್ರಷ್ಟಾಚಾರಕ್ಕಾಗಿ ಎಲ್ಲ ಮಾನವದೇಹಗಳನ್ನು ನಾಶಮಾಡಿಬಿಡಬೇಕೆಂಬ ಸೂಚನೆ ಅವ್ಯವಹಾರ್ಯವೆಂದು ನಾನು ಭಾವಿಸಿದ್ದೇನೆ. ಅನೇಕ ದೇಹಗಳ ಭ್ರಷ್ಟತೆಯ ಕಾರಣವನ್ನು ಬೇರೆಡೆಯಲ್ಲಿ ಹುಡುಕಬೇಕಾಗುವದು. ಈ ಮಾನವ ದೇಗುಲಗಳ ಸ್ವಾಭಾವಿಕ ವಿಸ್ತರಣವೇ ಈ ಕಲ್ಲುಮಣ್ಣಿನ ದೇವಾಲಯಗಳು. ಮಾನವದೇಗುಲಗಳಂತೆ ಅವುಗಳಾದರೂ ದೇವರ ನಿಲಯಗಳೆಂಬ ಕಲ್ಪನೆಯಿದ್ದರೂ ಮಾನವದೇಹ ದೇಗುಲಗಳು ವಿನಾಶಾಧೀನವಾಗಿರುವಂತೆ ಇವುಗಳಾದರೂ ಆಗಿವೆ.

(ಹರಿಜನ : ೧೧-೩-೩೩)

ಆದರ್ಶ ದೇವಾಲಯ

ದೇವಾಲಯ ಸುಧಾರಣೆಯನ್ನು ಒತ್ತಿ ಹೇಳದೆ ಹರಿಜನರಿಗೆ ದೇವಾಲಯ ಪ್ರವೇಶವು ದೊರೆಯಬೇಕೆಂಬ ವಿಷಯವನ್ನು ಪ್ರತಿಪಾದಿಸುತ್ತಿರುವದಕ್ಕಾಗಿ ಅನೇಕ ಪತ್ರಲೇಖಕರು ನನ್ನನ್ನು ಆಕ್ಷೇಪಿಸುತ್ತಿರುವರು. ದೇವಾಲಯ ಸುಧಾರಣೆಯು ಅಗತ್ಯವೆಂಬಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇಲ್ಲಿಯೂ ಎಚ್ಚರಿಕೆಯ ಆವಶ್ಯಕತೆಯಿದೆ. ಈಗ ಇರುವ ಎಲ್ಲ ದೇವಾಲಯಗಳನ್ನೂ ನಾಶಮಾಡಿ ಹೊಸ ದೇವಾಲಯಗಳನ್ನು ಕಟ್ಟಿಸುವದು ಶಕ್ಯವೆಂದು ಕೆಲವರು ತಿಳಿದಿರುವರು. ಆ ವಿಚಾರವನ್ನು ನಾನು ಒಪ್ಪುವದಿಲ್ಲ. ಎಲ್ಲ ದೇವಾಲಯಗಳೂ ಎಂದೂ ಒಂದೇ ಬಗೆಯಾಗಲಾರವು. ವಿವಿಧ ಮಾನವ ಆವಶ್ಯಕತೆಗಳೊಂದಿಗೆ ಹಿಂದಕ್ಕೆ ಅವು ಬೇರೆಬೇರೆಯಾದಂತೆ ಎಂದಾದರೂ ಬೇರೆಬೇರೆ ಆಗುವವು. ಬಾಹ್ಯರೂಪಕ್ಕಿಂತಲೂ ಅಂತರ್ಭಾವನೆಯಲ್ಲಿ ಮೂಲಭೂತ ಪಲ್ಲಟವಾಗುವ ಕುರಿತು ಸುಧಾರಕನು ಚಿಂತಿಸಬೇಕು. ಅಂತರ್ಭಾವನೆಯು ಬದಲಾಗದೆ ಬಾಹ್ಯರೂಪದಲ್ಲಿ ಪಲ್ಲಟವಾದರೆ ಅದು ಸುಣ್ಣ ಬಳಿದ ಗೋರಿಯಂತಾಗುವದು. ಎಷ್ಟೇ ಸುಂದರವಾಗಿದ್ದರೂ ಗೋರಿಯು ಮಸೀದಿಯಲ್ಲ. ಈಶ್ವರಾರ್ಪಿತ ಬರೀ ಬಯಲು ದೇವರ ನಿಜವಾದ ಆಲಯವಾಗಬಹುದು.

ಆದುದರಿಂದ ಮೊದಲು ಅರ್ಚಕ ಮುಖ್ಯ. ನನ್ನ ಆದರ್ಶ ಅರ್ಚಕ ದೈವಭಕ್ತನಾಗಿರಬೇಕು. ಅವನು ಜನರ ನಿಜವಾದ ಸೇವಕನಾಗಿರಬೇಕು. ಯಾರೊಡನೆ ಆತನು ವ್ಯವಹರಿಸಬೇಕಾಗಿದೆಯೋ ಆ ಜನರಿಗೆ ಅವನು ಮಾರ್ಗದರ್ಶಿ, ಮಿತ್ರ ಮತ್ತು ಜ್ಞಾನಿಯಾಗಿರಬೇಕು. ಅವನ ಆವಶ್ಯಕತೆಗಳು ಬಹಳ ಕಡಿಮೆಯಿರಬೇಕು; ಆತನಿಗೆ ಸ್ವಂತದ ಬಂಧನಗಳು ವಿಶೇಷವಿರಬಾರದು. ಅವನು ತನ್ನ ಪೂರ್ಣ ಸಮಯವನ್ನು ಆ ಕೆಲಸದಲ್ಲಿ ವಿನಿಯೋಗಿಸಬೇಕು. ಆತನು ಶಾಸ್ತ್ರಪಾರಂಗತನಾಗಿರಬೇಕು. ಜನರ ಕಲ್ಯಾಣವನ್ನು ಬಯಸುವದೇ ಆತನ ಮುಖ್ಯ ಕಾರ್ಯವಾಗಿರಬೇಕು. ನಾನೇನೂ ಕಲ್ಪನೆಯ ಚಿತ್ರವನ್ನು ಇಟ್ಟಿಲ್ಲ. ಅದು ಜೀವನಕ್ಕೆ ಅತ್ಯಂತ ನಿಕಟವರ್ತಿಯೂ ನಿಜವೂ ಆದ ಚಿತ್ರವಾಗಿದೆ. ಇದಕ್ಕೆ ನನ್ನ ಬಾಲ್ಯಸ್ಮೃತಿಗಳು ಆಧಾರ. ನನ್ನ ನೆನಪಿನಲ್ಲಿರುವ ಆ ಅರ್ಚಕನ ಕಡೆಗೆ ರಾಜರೂ,

ಮತ್ತು ಆ ಪ್ರಜೆಗಳೂ ಆದರ್ಶಕ್ಕಾಗಿ ನೋಡುತ್ತಿದ್ದರು. ತಮಗೆ ಅಗತ್ಯವೆನಿಸಿ ದಾಗ ಆತನೆಡೆಗೆ ಅವರು ಮಾರ್ಗದರ್ಶನೆಕ್ಕಾಗಿ ಧಾವಿಸುತ್ತಿದ್ದರು.

ಇಂತಹ ಅರ್ಚಕನು ಈಗ ದೊರೆಯುವುದಿಲ್ಲೆಂದು ಶ್ರದ್ಧಾರಹಿತ ರಾದವರು ಹೇಳಿದರೆ ಅದು ಸ್ವಲ್ಪಮಟ್ಟಿಗೆ ನಿಜವಾಗಿದೆ. ಆದರೆ ತನ್ನ ಆದರ್ಶ ಆಚಾರ್ಯನು ಸಿಕ್ಕುವವರೆಗೆ ದೇವಾಲಯವನ್ನು ನಿರ್ಮಿಸುವ ಕೆಲಸ ವನ್ನು ತಡೆ ಹಿಡಿಯಲು ಸುಧಾಕರನಿಗೆ ನಾನು ಹೇಳುವೆನು.

ಆ ಅವಧಿಯಲ್ಲಿ ಸುಧಾರಕನು ತನ್ನ ಕಲ್ಪನೆಯ ಆಚಾರ್ಯನಲ್ಲಿರ ಬೇಕೆಂದು ಇಚ್ಛಿಸುವ ಗುಣಗಳನ್ನೆಲ್ಲ ತನ್ನಲ್ಲಿ ಬೆಳೆಸಿಕೊಳ್ಳಲಿ. ಈಗಿರುವ ದೇವಾಲಯಗಳ ಅರ್ಚಕರಿಂದಲೂ ಅವುಗಳನ್ನು ನಿರೀಕ್ಷಿಸಲಿ. ಬೇರೆ ಮಾತುಗಳಲ್ಲಿ ಹೇಳುವದಾದರೆ ತನ್ನ ನಮ್ರ ಹಾಗೂ ಸುವಿಹಿತ ಆಚಾರದಿಂದ ಒಳಗೊಂಡ ತನ್ನ ಸುತ್ತಮುತ್ತಿನ ಪರಿಸರವನ್ನೆಲ್ಲ ಇಂದಿನ ಆವಶ್ಯಕತೆಗಳಿಂದ ತುಂಬಿಬಿಡಲಿ ತನ್ನ ಸದಾಚಾರದಿಂದ ಪ್ರದೀಪ್ತವಾದ ವಿಚಾರವು ಬಲಿಷ್ಠ ವಾದ ವಿದ್ಯುಜ್ಜನಕಯಂತ್ರಕ್ಕಿಂತಲೂ ಹೆಚ್ಚು ಪ್ರಭಾವಿಯಾಗಿ ಕಾರ್ಯವನ್ನು ಮಾಡಬಲ್ಲದೆಂಬ ಶ್ರದ್ಧೆಯನ್ನಿಟ್ಟುಕೊಳ್ಳಲಿ. ಒಂದೇ ದಿನದಲ್ಲಿ ಫಲವನ್ನು ಕಾಣಲು ಆತುರನಾಗುವದು ಬೇಡ. ಆವಶ್ಯಕ ಶಕ್ತಿಯ ಪ್ರಾದುರ್ಭಾವವಾಗ ಬೇಕಾದರೆ ಒಂದು ವಿಚಾರದ ಅನೇಕ ವರ್ಷಗಳ ಆಚಾರವು ಅಗತ್ಯ. ಒಂದು ಮಹತ್ತಾದ ಸಮಾಜ ಸುಧಾರಣೆಯಾಗಬೇಕಾದರೆ ಹಲವಾರು ವರ್ಷಗಳೂ ಅಥವಾ ತಲೆಮಾರುಗಳೂ ಯಾವ ಲೆಕ್ಕ ?

ಈಗ ವಾಚಕನು ಆದರ್ಶ ದೇವಾಲಯದ ನನ್ನ ಕಲ್ಪನೆಯನ್ನು ತಿಳಿದು ಕೊಳ್ಳಬಹುದು. ದೇವಾಲಯದ ಶಿಲ್ಪಿಯ ಯೋಜನೆ ಅಥವಾ ವಿವರ ಗಳನ್ನು ನಾನು ಕೊಡಲಾರೆ. ಕಾಲವಿನ್ನೂ ಅದಕ್ಕೆ ಪಕ್ವವಾಗಿಲ್ಲ. ಆದರೆ ಅದು ನನ್ನನ್ನಾಗಲಿ ಸುಧಾರಕನನ್ನಾಗಲಿ ದಿಗ್ಭ್ರಾಂತಗೊಳಿಸುವದಿಲ್ಲ. ಅವನು ತನ್ನ ಮುಂದಿನ ದೇವಾಲಯಕ್ಕೆ ಸ್ಥಳವನ್ನು ಆರಿಸಿಕೊಳ್ಳಬಹುದು. ತನಗೆ ಶಕ್ಯವಿದ್ದಷ್ಟು ದೊಡ್ಡದು ಅದಾಗಿರಬಹುದು. ಅದು ಹಳ್ಳಿಯ ಅಥವಾ ಪಟ್ಟಣದ ಮಧ್ಯದಲ್ಲಿ ಇರಬೇಕಾಗಿಲ್ಲ. ಹರಿಜನರಿಗೆ ಹಾಗು ಬೇರೆ ಬಡವರಿಗೆ ಬರಲು ಅನುಕೂಲವಾಗುವಂತೆ ಇರತಕ್ಕದ್ದು. ಆದರೂ ಅದು ಅನಾರೋಗ್ಯಕರವಾದ ಸ್ಥಳದಲ್ಲಿ ಮಾತ್ರ ಇರಕೂಡದು. ಸಾಧ್ಯವಿದ್ದರೆ ಅದು ಸುತ್ತಮುತ್ತಿನ ಸ್ಥಳಕ್ಕಿಂತ ಎತ್ತರವಾಗಿರಬೇಕು. ದೇವಾಲಯದ

ತಳಹದಿಯು ಆದಷ್ಟು ಎತ್ತರವಿರಬೇಕೆಂದು ನನ್ನ ಅಭಿಪ್ರಾಯ. ಇಂತಹ ಸ್ಥಳದಲ್ಲಿ ದೈನಂದಿನದ ಪೂಜೆಗಾಗಿ ನನ್ನ ಸ್ಥಳವನ್ನು ನಾನು ಆರಿಸಿಕೊಳ್ಳುವೆನು. ಇದರ ಸುತ್ತ ಒಂದು ಶಾಲೆ, ಒಂದು ಆಸ್ಪತ್ರೆ, ಧಾರ್ಮಿಕ ಮತ್ತು ಲೌಕಿಕ ವಾಚನಾಲಯವೊಂದು ನಿರ್ಮಿತವಾಗಬೇಕು. ಶಾಲೆಯು ಸಭಾಸ್ಥಳವೆಂದೂ ಆಗಬೇಕು. ದೇವಾಲಯಕ್ಕೆ ಹೊಂದಿ ಒಂದು ಧರ್ಮಶಾಲೆ ಅಥವಾ ಅತಿಥಿಗೃಹವಿರಬೇಕು. ಈ ಸಂಸ್ಥೆಗಳಲ್ಲಿ ಪ್ರತಿಯೊಂದೂ ಬೇರೆ ಬೇರೆ ಸಂಸ್ಥೆಯಾಗಿರಬೇಕು. ಆದರೂ ದೇವಾಲಯಕ್ಕೆ ಅಧೀನವಾಗಿರಬೇಕು. ಇವುಗಳನ್ನು ಹಣದ ಅನುಕೂಲತೆಯಿದ್ದಂತೆ ದೇವಾಲಯದೊಡನೆಯೇ ಆಗಲಿ ಅಥವಾ ಹಿಂದಿನಿಂದ ಒಂದೊಂದನ್ನಾಗಲಿ ಕಟ್ಟಿಸಬೇಕು. ಕಟ್ಟಡಗಳು ಬಹಳ ದೊಡ್ಡವಾಗಿರಬಹುದು ಇಲ್ಲವೇ ಇರದಿರಬಹುದು ದುಡಿಮೆಯು ಸ್ವಯಂಪ್ರೇರಿತವಾಗಿ ದೊರೆಯಬಹುದಾದರೆ ಆಗ ಹುಲ್ಲು ಮಣ್ಣುಗಳಿಂದ ಕೂಡಲೆ ಆರಂಭ ಮಾಡಬಹುದು. ಆದರೆ ಗುಡಿ ಇನ್ನೂ ಪೂರ್ತಿಯಾಗಿಲ್ಲ. ಸ್ಥಳವು ದೊರೆತೊಡನೆಯೇ ಮತ್ತು ಪ್ರಥಮ ಪ್ರಾರ್ಥನೆ ಮಾಡಿದೊಡನೆಯೇ ಅಸ್ತಿಭಾರ ಹಾಕಿದಂತೆ. "ಮದ್ಭಕ್ತಾಃ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ" ಎಂದರೆ "ದೇವನ ನಾಮವನ್ನು ಉಚ್ಚರಿಸುವ ಜನರು ಇರುವೆಡೆಗಳಲ್ಲೆಲ್ಲ ದೇವನಿದ್ದಾನೆ. ಅಲ್ಲಿ ಅವನ ದೇವಾಲಯವಿದೆ." ಕಟ್ಟಡ, ಪ್ರತಿಮೆ, ಪ್ರತಿಷ್ಠಾಪನೆ, ಇವುಗಳೆಲ್ಲ ಪೂಜಾರಿಯ ಕಾರ್ಯಗಳು. ಅವನು ದೊರೆತೊಡನೆಯೆ ಆತನು ತನ್ನ ಕಾರ್ಯದಲ್ಲಿ ತೊಡಗುವನು. ದೇವಾಲಯದ ನಿರ್ಮಾಣ ಪ್ರಥಮ ಪ್ರಾರ್ಥನೆಯಿಂದಲೇ ಆದಂತೆ. ಅದು ಸತ್ಯನಿಷ್ಠರಾದ ಸ್ತ್ರೀಪುರುಷರ ಪ್ರಾರ್ಥನೆಯಾಗಿದ್ದರೆ ಅದರ ಭವಿಷ್ಯತ್ಪ್ರಗತಿಯು ಸುನಿಶ್ಚಿತವೇ ಸರಿ.

ಭವಿಷ್ಯದ್ದೇವಾಲಯವನ್ನು ಕುರಿತು ಇಷ್ಟು ಮಾತು. ನನ್ನ ಆದರ್ಶ ದೇವಾಲಯದ ಬಾಹ್ಯರೂಪ ನನ್ನ ಯೋಜನೆಗೆ ಅನುಸಾರವಾಗಿದೆ. ನಾನು ಹೇಳುವುದರಲ್ಲಿ ಹೊಸದು ಯಾವುದೂ ಇಲ್ಲ. ನನ್ನಿಂದ ಸೂಚಿಸಲ್ಪಟ್ಟ ಬಾಹ್ಯಲಕ್ಷಣಗಳು ಪ್ರಾಚೀನಕಾಲದ ಗ್ರಾಮದೇವಾಲಯಗಳಲ್ಲಿ ಇದ್ದಂಥವುಗಳೇ.

ಆದರೆ ಈಗಿರುವ ದೇವಾಲಯಗಳ ವಿಚಾರವನ್ನೂ ನಾವು ಪ್ರಸ್ತಾಪ ಮಾಡೋಣ. ನಾನು ಸೂಚಿಸಿದ ಆದರ್ಶಗಳನ್ನು ಅರ್ಚಕರು ಅನುಷ್ಠಾನಕ್ಕೆ

ತರಬೇಕೆಂದು ಆರಾಧಕರೆಲ್ಲರೂ ಆಗ್ರಹಪಟ್ಟರೆ ಈಗಿನ ದೇವಾಲಯಗಳಾದರೂ ದೇವರ ನಿಜವಾದ ನಿಲಯಗಳಾಗಬಲ್ಲವು. (ಹರಿಜನ : ೨೯-೪-೩೩)

ಆಚಾರ್ಯರು ಮತ್ತು ಉಪನಯನ

ಓರ್ವ ಹರಿಜನಸೇವಕನು ಬರೆಯುತ್ತಾನೆ :

" ಹರಿಜನದ ೪ನೇ ಸಂಚಿಕೆಯಲ್ಲಿ ಸುಧಾರಕರು ಬಾಹ್ಯ ವಿಧಾನಗಳಿಗೆ ಮಹತ್ವವನ್ನು ಕೊಡದಿರಲು ಕಲಿಯಬೇಕೆಂದು ನೀವು ಹೇಳಿರುವಿರಿ. ಪುರೋಹಿತನನ್ನು ಪೂರ್ಣವಾಗಿ ನೀವು ಬಿಟ್ಟುಬಿಡುವದಿಲ್ಲವೆ ? ಪುರೋಹಿತನು ಕೇವಲ ಹಣಕ್ಕಾಗಿ ಕೆಲಸಮಾಡುತ್ತಿರುವನು. ನನಗೆ ಗೊತ್ತಿರುವಂತೆ ಅನೇಕ ಪುರೋಹಿತರು ಮಂತ್ರಗಳನ್ನು ಕೂಡ ಸರಿಯಾಗಿ ಉಚ್ಚರಿಸುವದಿಲ್ಲ; ಅರ್ಥವನ್ನು ಅರಿತವರಂತೂ ಇನ್ನೂ ಕಡಿಮೆ. ಅವರು ಜನತೆಯ ಮುಗ್ಧತನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇಂತಹ ಯಾಜ್ಞಿಕರಿಂದ ಏನು ಪ್ರಯೋಜನ ? ಕ್ಷೇತ್ರಸ್ಥಳಗಳಲ್ಲಂತೂ ಇದು ಒಡೆದು ಕಾಣುತ್ತದೆ. ಸ್ವತಃ ನಾನು ಬ್ರಾಹ್ಮಣ. ಹದಿಮೂರು ವರ್ಷದವನಿದ್ದಾಗ ನನ್ನ ಉಪನಯನವಾಯಿತು. ಉಪನಯನದ ಕೊನೆಯಲ್ಲಿ ಪುರೋಹಿತನು ನನಗೆ ನಾನು ಅಲ್ಲಿಯವರೆಗೆ ಶೂದ್ರನಿದ್ದೆನೆಂದೂ ಯಜ್ಞೋಪವೀತವನ್ನು ಧರಿಸಿದ ಬಳಿಕ ನಾನು ಬ್ರಾಹ್ಮಣನಾದೆನೆಂದೂ ಹೇಳಿದನು. ನನ್ನ ಮಾತಾಪಿತೃಗಳಿಗೆ ನಮಸ್ಕಾರ ಮಾಡಲು ಹೋದಾಗ ಇದನ್ನು ನಾನು ಮತ್ತೆ ಮತ್ತೆ ಹೇಳಬೇಕಾಯಿತು. ಇಲ್ಲಿ ಯಜ್ಞೋಪವೀತ ಧಾರಣದಿಂದ ನನಗೆ ಹೆಚ್ಚಿನ ಸ್ಥಾನವು ದೊರೆಯಿತೆಂಬ ಭಾವನೆಯನ್ನು ಮಾಡಿಕೊಡಲಾಯಿತು. ಹಿಂದೂ ಧರ್ಮದಲ್ಲಿ ಉಚ್ಚನೀಚವೆಂಬುದಿಲ್ಲವೆಂಬ ನಿಮ್ಮ ಅಭಿಪ್ರಾಯಕ್ಕೆ ಇದನ್ನು ಹೇಗೆ ಹೊಂದಿಸುವಿರಿ ? "

ಈ ಪತ್ರಲೇಖಕನು ಬರೆದ ಉದ್ದವಾದ ಪತ್ರವನ್ನು ಬಹುವಾಗಿ ನಾನು ಸಂಕ್ಷೇಪಿಸಿದ್ದೇನೆ. ಅನೇಕ ಪುರೋಹಿತರ ತಿಳಿಗೇಡಿತನದ ಬಗೆಗೂ ಅವರು ಮಾಡುವ ಪಾಂಡಿತ್ಯ ನಟನೆಯ ವಿಷಯವಾಗಿಯೂ ಆತನು ಬರೆದುದು ಅಕ್ಷರಶಃ ದುರ್ದೈವದಿಂದ ಅತ್ಯಂತ ಸತ್ಯವಾಗಿದೆ. ಜನರ ಶೀಲದ

ಮಟ್ಟವನ್ನು ಸಾಮಾನ್ಯವಾಗಿ ಉನ್ನತಗೊಳಿಸುವದು ಮತ್ತು ಸಂಸ್ಕೃತದಲ್ಲಿ ವ್ಯವಹರಿಸುವಷ್ಟು ಜ್ಞಾನವನ್ನು ಒಳಗೊಂಡ ಸೂಕ್ತ ಶಿಕ್ಷಣ ಪ್ರಸಾರವನ್ನು ಕೈಕೊಳ್ಳುವದು ಇದಕ್ಕೆ ಸರಿಯಾದ ಉಪಾಯ. ವಿವೇಕಾನಂದರು ಸಂಸ್ಕೃತಕ್ಕಿರುವ ಶಕ್ತಿಯನ್ನು ಕುರಿತು ಹೇಳಿದ ಮಾತಿನಲ್ಲಿ ನನ್ನ ನಂಬಿಕೆಯಿದೆ. ಸಂಸ್ಕೃತವನ್ನು ಕಲಿಯುವದು ಕಠಿನವೆಂದು ಅನಾವಶ್ಯಕವಾಗಿ ಗಾಬರಿಗೊಂಡಿದ್ದೇವೆ. ಶ್ರಮನಿರತನಾದ ವಿದ್ಯಾರ್ಥಿಗೆ ಉಳಿದ ಭಾಷಾಭ್ಯಾಸಕ್ಕಿಂತಲೂ ಇದೇನೂ ಕಠಿನವೆನಿಸಲಾರದು. ಪುರಾತನ ಗ್ರಂಥಗಳ ರಹಸ್ಯಗಳನ್ನೆಲ್ಲ ತಿಳಿದುಕೊಳ್ಳುವಷ್ಟು ಸಂಸ್ಕೃತ ಜ್ಞಾನ ನಮಗೆ ಸುಲಭವಾಗಿ ದೊರೆಯುವದೆಂದು ನಾನು ಹೇಳುವದಿಲ್ಲ. ಆದರೆ ವ್ಯವಹಾರಕ್ಕೆ ಬೇಕಾಗುವಷ್ಟು ಸಂಸ್ಕೃತ ಜ್ಞಾನಸಂಪಾದನೆ, ಸರಿಯಾದ ಉಚ್ಚಾರವನ್ನು ತಿಳಿದುಕೊಳ್ಳುವದು, ಪುರೋಹಿತನು ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿರುವನೋ ಇಲ್ಲವೋ ಅಥವಾ ಪಂಡಿತನು ತಪ್ಪುದಾರಿಯನ್ನು ಹಿಡಿಸುತ್ತಿರುವನೋ ಹೇಗೆ ಎಂಬುದನ್ನು ಕಂಡು ಹಿಡಿಯುವದು ಬಹಳ ಕಠಿಣವಾದ ಕೆಲಸವಲ್ಲ; ಇದು ಆಂಗ್ಲ ಭಾಷೆಯ ಜ್ಞಾನವನ್ನು ಪಡೆಯುವದು ಎಷ್ಟು ಕಷ್ಟವೋ ಅದರಲ್ಲಿ ಹತ್ತನೆಯ ಒಂದಂಶದಷ್ಟಾದರೂ ಕಠಿನವಲ್ಲವೆಂದು ನನ್ನ ಅಭಿಪ್ರಾಯ. ಇಷ್ಟುಮಟ್ಟಿನ ಸಂಸ್ಕೃತ ದಕ್ಷಿಣ ಭಾರತದ ಭಾಷೆಗಳನ್ನು ಒಳಗೊಂಡ ಅನೇಕ ಭಾರತೀಯ ಭಾಷೆಗಳಲ್ಲಿ ಅಡಗಿರುವ ಜ್ಞಾನಭಂಡಾರವನ್ನು ಪಡೆಯುವ ಪ್ರಧಾನ ಬೀಗದ ಕೈ ಆಗಿರುವದೆಂಬುದನ್ನು ಮರೆಯಕೂಡದು.

ಆದರೆ ನಾನು ನನ್ನ ಪ್ರಕೃತ ವಿಷಯದಿಂದ ದೂರಹೋಗಬಾರದು. ಈ ಸುದಿನವು ಬರುವತನಕ ನಮ್ಮಲ್ಲಿರುವ ಉಪಕರಣಗಳನ್ನೇ ಉತ್ಕೃಷ್ಟ ರೀತಿಯಲ್ಲಿ ನಾವು ಉಪಯೋಗ ಮಾಡಿಕೊಳ್ಳಬೇಕು. ಪೌರೋಹಿತ್ಯವನ್ನು ಮಾಡಿಸಲು ನಂಬಿಕೆಗರ್ಹನಾದ ಬ್ರಾಹ್ಮಣ ಪುರೋಹಿತ ಸಿಕ್ಕದಿರುವ ಸಂದರ್ಭದಲ್ಲಿ ಭಾಗವತ ಮತ್ತು ಈಚಿನ ಸಾಧುಸಂತರೂ ಅತ್ಯಂತ ಸುಲಭ ಉಪಾಯವನ್ನು ಹೇಳಿಕೊಟ್ಟಿದ್ದಾರೆ. ವಿವಾಹ, ಉಪನಯನ, ಜಾತಕರ್ಮ, ಉತ್ತರಕ್ರಿಯೆ ಮೊದಲಾದ ಯಾವದೇ ಸಂದರ್ಭದಲ್ಲಿಯೂ ಅಂತಃಕರಣಪೂರ್ವಕ ಪರಮಾತ್ಮನ ನಾಮೋಚ್ಚಾರವನ್ನು ಮಾಡಿದರೆ ಆ ಪ್ರಸಂಗದಲ್ಲಿ ದೇವನು ಅಲ್ಲಿ ಆಗಮಿಸಿ ಅನುಗ್ರಹಿಸುವನೆಂದು ಹೇಳಿದೆ. ದೇವನು ಯಾವಾಗಲೂ ಎಲ್ಲೆಡೆಗಳಲ್ಲಿಯೂ ಇರುವನು; ಆದರೆ ನಾವು

ಅದನ್ನು ಅರಿತಿಲ್ಲ, ಗುರುತಿಸಿಲ್ಲ. ಸಾಧುಸಂತರ ಅನೂಚಾನ ಪರಂಪರೆಯಿಂದ ಪುನೀತವಾದ ಪರಮಾತ್ಮನ ನಾಮೋಚ್ಚಾರವು ನಮ್ಮನ್ನು ಅಜ್ಞಾನದಿಂದ ಜಾಗ್ರತಗೊಳಿಸುತ್ತದೆಯಲ್ಲದೆ ವಿದ್ಯುತ್ಕರಣದಂತೆ ತತ್‌ಕ್ಷಣ ಕಾರ್ಯವನ್ನು ಮಾಡುತ್ತದೆ. ಅದು ನಮ್ಮಲ್ಲಿ ಒಡನೆಯೆ ದೇವನ ಸಾನ್ನಿಧ್ಯದ ಅನುಭವವನ್ನು ಮಾಡಿಕೊಡುತ್ತದೆ. ಶ್ರದ್ಧೆಯಿದ್ದವರಿಗೆ ಮಾತ್ರ ನಾನು ಈ ಮಾತನ್ನು ಹೇಳುತ್ತೇನೆ. ನಂಬಿಗೆಯಿಲ್ಲದವರು ಇದನ್ನು ತಮ್ಮ ಮನಸ್ಸಿನಿಂದ ಹೊರಗೆ ಹಾಕಿಬಿಡಬಹುದು. ಅಂತಹವರಿಗೆ ಸಾಂಪ್ರದಾಯಿಕ ಪುರೋಹಿತ ಇರುವುದೂ ಕೂಡ ಒಂದು ಬಗೆಯ ಜಡಕರ್ಮ ಮತ್ತು ಅಜ್ಞಾನ ಪೂರ್ವಕವಾದ ರೂಢಿ ಶರಣತೆ ಎನಿಸುತ್ತದೆ. ಅದರಿಂದ ಅವರಿಗೆ ಯಾವ ಲಾಭವೂ ಇಲ್ಲ; ಪುಣ್ಯವೂ ಇಲ್ಲ. ಪ್ರಾಮಾಣಿಕನಾದ ಸಂಪ್ರದಾಯಬದ್ಧ ಪುರೋಹಿತನಿಗೆ ಹಿಂದೂ ಕುಟುಂಬದಲ್ಲಿ ಒಂದು ಸ್ಥಾನವಿದೆ. ತನ್ನ ದಡ್ಡತನದಿಂದಲೇ ಅವನು ಅದನ್ನು ವೇಗದಿಂದ ಕಳೆದುಕೊಳ್ಳುತ್ತಿರುವನು. ತನ್ನ ಆಲಸ್ಯ ಜಾಡ್ಯಗಳನ್ನು ತನ್ನ ಅಜ್ಞಾನವನ್ನು, ಎಲ್ಲಕ್ಕಿಂತ ಮಿಗಿಲಾಗಿ ತನ್ನ ಅಪ್ರಾಮಾಣಿಕತೆಯನ್ನು ತ್ಯಜಿಸಿದರೆ ಅವನು ಸುರಕ್ಷಿತ ಉಳಿಯಬಲ್ಲನು. ಅಪ್ರತ್ಯಕ್ಷವಾಗಿ ಆ ಸುಧಾರಣೆಯನ್ನು ಮಾಡುವದೇ ಈ ಅಂದೋಲನದ ಉದ್ದೇಶವಾಗಿದೆ. ಆಂತರಿಕ ಪರಿಶುದ್ಧತೆಯ ಅಂದೋಲನವೇ ಇದೆಂದು ಕಂಡಬಳಿಕ ದುರ್ಗುಣವೆಂಬುದನ್ನೆಲ್ಲ ಗುಡಿಸಿದ ಹೊರತು ಆ ಸುಧಾರಣೆಯನ್ನು ನಾವು ಸಾಧಿಸಲಾರೆವು. ಬ್ರಾಹ್ಮಣನೆಂದು ಕರೆದುಕೊಳ್ಳುವವನಲ್ಲದೆ ಇದನ್ನು ಇನ್ನಾರು ಮಾಡಬಲ್ಲರು?

ಉಪನಯನ ಸಂಸ್ಕಾರವನ್ನು ಕುರಿತು, ನಾನೇ ಅದನ್ನು ತಿರಸ್ಕರಿಸಿದ್ದರೂ, ಅದರಲ್ಲಿ ಒಂದು ಆಳವಾದ ಅರ್ಥವಿದೆಯೆಂಬ ಮಾತಿನಲ್ಲಿ ಯಾವ ಸಂದೇಹವೂ ಇಲ್ಲ. ಯಜ್ಞೋಪವೀತ ನವಜನ್ಮದ ಸಂಕೇತ; ಪುನರ್ಜನ್ಮವದು. ಜನಿವಾರವನ್ನು ಹಾಕಿಕೊಳ್ಳುವ ಮುನ್ನ ಇರುವದೊಂದು ಜನ್ಮ. ಅರ್ಥಾತ್ ದೈಹಿಕ ಜನ್ಮ. ಯಜ್ಞೋಪವೀತ ಗ್ರಹಣವು ದ್ವಿತೀಯಜನ್ಮದ ಅಂದರೆ ಆಧ್ಯಾತ್ಮಿಕ ಜನ್ಮದ ಲಕ್ಷಣ. ಪರಮಾತ್ಮನಿಗೆ ತನ್ನನ್ನು ಅರ್ಪಿಸಿಕೊಂಡ ಹೊಸಜನ್ಮದ ದೀಕ್ಷೆಯ ಸಂಕೇತವೇ ಅದು. ಆದುದರಿಂದ ತನಗೆ ಸಂಬಂಧಪಟ್ಟಂತೆ ಹೆಚ್ಚಿನ ಹೊಣೆಗಾರಿಕೆಯೆಂಬ ಅರ್ಥದಲ್ಲಿ ಅದು ಒಂದು ಉತ್ಕೃಷ್ಟ ಜೀವನ; ಆದರೆ ತನ್ನ ನೆರೆಹೊರೆಯವರಿಗಿಂತ ತನಗೆ ಅದು ಯಾವ

ಹೆಚ್ಚಿನ ಸ್ಥಾನವನ್ನೂ ಕೊಡುವದಿಲ್ಲ. ನಿಜವಾಗಿ ದೀಕ್ಷಾಸಮಯದಲ್ಲಿ ಅಂದಿನಿಂದ ತಾನು ದೀನದರಿದ್ರರ ಸೇವಕನೆಂಬ ನಿಶ್ಚಿತ ಅನುಭವ ಅವನಿಗೆ ಆಗಬೇಕು. ಉಪನಯನ ಸಂಸ್ಕಾರ ದೀಕ್ಷೆಗಳಾಗುವವರೆಗೆ ಎಲ್ಲರೂ ಶೂದ್ರರೆಂಬ ಮಾತು ನನ್ನ ಅಭಿಪ್ರಾಯದಲ್ಲಿ ಅತ್ಯಂತ ಸುಂದರವಾದ ಹಾಗು ಉದಾರವಾದ ವಿಚಾರ. ದುರದೃಷ್ಟದಿಂದ ಕರ್ತವ್ಯಗಳನ್ನು ಬೋಧಿಸಲು ಹೊರಟ ಈ ಧಾರ್ಮಿಕ ವಿಧಿ ವಿಧಾನಗಳನ್ನು ಶೋಷಣಕ್ಕಾಗಿಯೂ ಮತ್ತು ನ್ಯಾಯವಲ್ಲದ ಆಕ್ರಮಣಕ್ಕಾಗಿಯೂ ದುರುಪಯೋಗಪಡಿಸಲಾಗುತ್ತಿದೆ.

(ಹರಿಜನ : ೨೨-೪-೩೩)

ಪಶುಯಜ್ಞಗಳು

ಧಾರವಾಡದ ಯುವಕಸಂಘದ ಕಾರ್ಯದರ್ಶಿಯ ಪತ್ರವೊಂದಕ್ಕೆ ಗಾಂಧೀಜೀ ಬರೆದ ಉತ್ತರವಿದು :

ಪಶುಬಲಿಯಿಂದ ಪ್ರೀತರಾಗುವ ದೇವತೆಗಳಿರುವರೆಂಬ ವಿಷಯದಲ್ಲಿ ಶ್ರದ್ಧೆಯನ್ನಿಟ್ಟುಕೊಂಡ ಸುಶಿಕ್ಷಿತರು ಸಾಕಷ್ಟು ದೇಶದಲ್ಲಿರುವದು ಅತ್ಯಂತ ವಿಷಾದದ ಹಾಗೂ ಅವಮಾನದ ಸಂಗತಿ. ಧಾರವಾಡದ ಯುವಕಸಂಘದ ಕಾರ್ಯದರ್ಶಿಯು ಬಣ್ಣಿಸಿದಂತೆ ನಿರಪರಾಧಿಗಳಾದ ಆಡುಗಳನ್ನು ಕೊಲ್ಲುವ ಬಗೆಯು ನಿಜವಾಗಿದ್ದರೆ ಧರ್ಮದ ಹೆಸರಿನಲ್ಲಿ ನಡೆದ ಅಮಾನುಷ ಕೃತಿಯೇ ಅದು. ಕಾರ್ಯದರ್ಶಿಯು ಹೇಳಿದ್ದುದರಲ್ಲಿ ಅತಿಶಯೋಕ್ತಿಯಿದೆಯೆಂದು ನನಗೆ ತೋರುತ್ತದೆ. ಬಂಗಾಲದಿಂದಲೂ ಅಂತಹ ಪತ್ರ ಬಂದಿದೆ. ಅದರಲ್ಲಿ ಆ ದೊಡ್ಡ ಪ್ರಾಂತದಲ್ಲಿ ದಿನವೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಈ ಪಶುಬಲಿಗಳನ್ನು ನಿಷೇಧಿಸಲು ನನ್ನನ್ನು ಕೇಳಿಕೊಳ್ಳಲಾಗಿದೆ. ಈ ಪಶುಬಲಿಗಳನ್ನು ನಾನು ನಿಷೇಧಿಸುವದರಿಂದ ಒಂದು ಪ್ರಾಣಿಯ ಜೀವವಾದರೂ ಉಳಿಯುವಂತಿದ್ದರೆ ನನ್ನ ಆಗ್ರಹಪೂರ್ವಕವಾದ ಅಭಿಪ್ರಾಯ ಅದಕ್ಕೆ ಮೀಸಲು. ಆದರೆ ಇಂತಹ ಪ್ರಾಣಿವಧೆಯನ್ನು ಪ್ರೋತ್ಸಾಹಿಸುವ ಹಾಗು ಸಮರ್ಥಿಸುವ ನೂತನ ಕ್ರಮವು ಆರಂಭವಾದಂತೆ ತೋರುತ್ತದೆ. ಮದ್ರಾಸ ಪ್ರಾಂತದಲ್ಲಿ ಬ್ರಾಹ್ಮಣಪಂಡಿತರು ಮಾಡಿದ ಇಂತಹ ಪಶುಯಾಗದ ವರ್ಣನೆ

ಯುಳ್ಳ ಕಾಗದ ಪತ್ರಗಳನ್ನು ಮದ್ರಾಸಿನಿಂದ ಓರ್ವ ಪತ್ರಲೇಖಕ ನನಗೆ ಕಳುಹಿಸಿರುವನು. ದೇಶದ ತುಂಬೆಲ್ಲ ಯುವಕ ಸಂಘಗಳು, ಎಚ್ಚತ್ತು ಇಂತಹ ಯಾಗಗಳ ವಿರುದ್ಧ ಕ್ರಾಂತಿಯನ್ನು ಎಬ್ಬಿಸಿ ಅವು ಅಶಕ್ಯವಾಗುವಂತೆ ಮಾಡಬೇಕೆಂದು ನಾನು ಬಯಸುತ್ತೇನೆ. ಪಶುಯಜ್ಞಗಳನ್ನು ನಿಲ್ಲಿಸಿದಂದಿನಿಂದ ಜನರು ಕ್ಷಾತ್ರತೇಜಸ್ಸನ್ನು ಕಳೆದುಕೊಂಡಿರುವ ವಾದವನ್ನು ನಾನು ಕೇಳಿದೇನೆ. ಕ್ರೈಸ್ತಧರ್ಮದ ಪೂರ್ವದಲ್ಲಿ ಯೂರೋಪಿನಲ್ಲಿ ಸಾಕಷ್ಟು ಪಶು ಯಜ್ಞಗಳು ನಡೆಯುತ್ತಿದ್ದವು. ಅಧಮಾಧಮ ಪಶುಯಾಗಗಳನ್ನು ನಿಲ್ಲಿಸಿದ್ದರಿಂದ ಯುರೋಪು ಕ್ಷಾತ್ರ ತೇಜಸ್ಸನ್ನು ಅಂದರೆ ವೀರವೃತ್ತಿಯನ್ನು ಕಳೆದುಕೊಂಡಂತೆ ಕಾಣಿಸುವದಿಲ್ಲ. ಕ್ಷತ್ರಿಯ ಬಲದ ಉಪಾಸಕನು ನಾನಲ್ಲ. ಆದರೆ ನಿಸ್ಸಹಾಯಕವೂ ನಿರಪರಾಧಿಯೂ ಪ್ರತಿಭಟನೆಯ ಸಾಮರ್ಥ್ಯವಿಲ್ಲದವೂ ಆದ ನಮ್ಮೊಡನಿರುವ ಬಹು ಮೂಕ ಪ್ರಾಣಿಗಳ ಕ್ರೂರ ಹಾಗು ನಿರ್ದಯ ವಧೆಯಿಂದ ಕ್ಷತ್ರಿಯ ಬಲ ವೃದ್ಧಿಯಾಗುವುದಿಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. (ಯಂಗ್ ಇಂಡಿಯಾ : ೨೧-೧೧-೨೯)

ಹೆರವರು ನಮ್ಮನ್ನು ಕಂಡಂತೆ

ಹೆರವರು ನಮ್ಮನ್ನು ಕಾಣುವಂತೆ ನಮ್ಮನ್ನು ನಾವು ಕಂಡುಕೊಳ್ಳುವದೊಳಿತು. ಎಷ್ಟು ಪ್ರಯತ್ನಮಾಡಿದರೂ ನಮ್ಮನ್ನು ನಾವು ಪೂರ್ಣವಾಗಿ ಅರಿತುಕೊಳ್ಳಲಾರೆವು; ವಿಶೇಷತಃ ನಮ್ಮ ದುರ್ಗುಣಗಳನ್ನು ನಾವು ಅರಿಯಲಾರೆವು. ನಮ್ಮ ವಿಮರ್ಶಕರ್ತರ ವಿಷಯದಲ್ಲಿ ನಾವು ಕೋಪಿಸಿಕೊಳ್ಳದೆ ಮತ್ತು ಅವರು ಹೇಳುವದನ್ನು ಸರಿಯಾಗಿ ತಿಳಿದುಕೊಂಡರೆ ಇದು ಸಾಧ್ಯ. ಹೇಗಾದರೂ ಮುಂದೆ ಹೇಳಿದ ಟೀಕೆಯನ್ನು ಸಾಧ್ಯವಿದ್ದಷ್ಟು ನಿರ್ವಿಕಾರ ಮನಸ್ಸಿನಿಂದ ಪರೀಕ್ಷಿಸಬಯಸಿದ್ದೇನೆ. ಇಂದು ಪ್ರತ್ಯಕ್ಷ ಅನುಷ್ಠಾನದಲ್ಲಿ ಹಿಂದೂಧರ್ಮದಲ್ಲಿ ಇರುವ ಪ್ರಮಾದಕರ ನ್ಯೂನತೆಗಳನ್ನು ಒಪ್ಪಲೇಬೇಕು. ಅನೇಕ ಮಠಗಳೂ ಅವುಗಳ ಆಡಳಿತವೂ ಹಿಂದೂಧರ್ಮಕ್ಕೆ ಕಲಂಕಪ್ರಾಯವಾಗಿವೆ. ಅವುಗಳಿಗೆ ಸುರಿಯುತ್ತಿರುವ ಹಣವು ಸೇವಾರೂಪದಲ್ಲಿ

ಉಪಾಸಕರಿಗೆ ಮರಳಿ ಬರುತ್ತಿಲ್ಲ. ಈ ಪರಿಸ್ಥಿತಿಯು ಸುಧಾರಿಸಲೇಬೇಕು; ಇಲ್ಲವೇ ಕೊನೆಗಾಣಬೇಕು.

ಕ್ರೈಸ್ತ ಪಾದರಿಗಳಿಂದ ಮಾಡಲ್ಪಟ್ಟ ಜೀವದಯಾ ಕಾರ್ಯವನ್ನು ಒಪ್ಪಲೇಬೇಕು.

ಹರಿಜನರಂತೆಯೇ ಇತರ ಅನೇಕ ಬಡ ಭಾರತೀಯರಿಗೂ ಆರ್ಥಿಕ ಮತ್ತು ಶೈಕ್ಷಣಿಕ ಪರಿಹಾರವು ಅವಶ್ಯವಾಗಿದೆ. ಆದರೆ ಹರಿಜನರಿಗೆ ಕೆಲವು ವಿಶಿಷ್ಟ ಅನಾನುಕೂಲಗಳಿವೆ. ಯಾವ ಅನಾನುಕೂಲಗಳನ್ನು ಅವರು ಪ್ರತಿಷೇಧಿಸುವರೆಂಬುದು ಮುಖ್ಯ ಪ್ರಶ್ನೆಯಲ್ಲ. ಹರಿಜನರು ಅಪ್ಪಿಕೊಳ್ಳುತ್ತಿದ್ದರೂ ಅವರ ಸಂಕೋಲೆಗಳನ್ನು ಕತ್ತರಿಸುವದು ಉಚ್ಚವರ್ಣದವರೆಂದು ಕರೆದುಕೊಳ್ಳುವ ಹಿಂದೂಗಳ ಕರ್ತವ್ಯವಾಗಿದೆ. ವಿವೇಕಾನಂದ ರಾಧಾಕೃಷ್ಣನ್‌ರವರೂ ಪ್ರತಿಪಾದಿಸಿದ ಹಿಂದೂಧರ್ಮದ ಭವ್ಯತೆ ಜನಸಾಮಾನ್ಯರಲ್ಲಿ ವ್ಯಾಪಿಸಿರುವ ಅಂಶ ಸ್ಪಷ್ಟವಾಗಿದೆ. ಹಳ್ಳಿಗರಲ್ಲಿ ಒರಟುತನವು ಕಂಡುಬರುತ್ತಿದ್ದರೂ ಮಾನವ ಸ್ವಭಾವದಲ್ಲಿರುವ ಒಳ್ಳೆಯತನದ ದೃಷ್ಟಿಯಿಂದ ವಿಚಾರಮಾಡಿದರೆ ಜಗತ್ತಿನಲ್ಲಿಯ ಯಾವ ಹಳ್ಳಿಗರಿಗೂ ಅವರು ಕಡಿಮೆಯಾಗುವದಿಲ್ಲ. ಹುಯಾನತ್ಸಾಂಗನಿಂದ ಮೊದಲು ಮಾಡಿಕೊಂಡು ಇಂದಿನವರೆಗೆ ಈ ದೇಶಕ್ಕೆ ಬಂದುಹೋದ ಬಹುಸಂಖ್ಯಪ್ರವಾಸಿಗರು ಬರೆದಿಟ್ಟ ತಮ್ಮ ಅಭಿಪ್ರಾಯದಿಂದ ಈ ಮಾತು ಸಿದ್ಧವಾಗುತ್ತದೆ. ಭಾರತದ ಹಳ್ಳಿಗರು ತೋರುವ ಸಹಜ ಸಂಸ್ಕೃತಿ, ಬಡವರ ಮನೆಗಳಲ್ಲಿ ಕಂಡುಬರುವ ಕಲೆ, ಹಳ್ಳಿಗರ ನಡತೆಯಲ್ಲಿ ಕಂಡುಬರುವ ಸಂಯಮ, ಇವುಗಳೆಲ್ಲ ಅನಾದಿ ಕಾಲದಿಂದಲೂ ಅವರನ್ನು ಬಂಧಿಸಿದ ಧರ್ಮದ ಪರಿಣಾಮಗಳೇ ಆಗಿವೆ.

ಹಿಂದೂಧರ್ಮವು ಅನೇಕ ದುರಾಗ್ರಹಗಳು, ಮೂಢ ನಂಬಿಕೆಗಳು ಮತ್ತು ಅನಾಚಾರಗಳು, ಇವುಗಳನ್ನು ಪರಿಣಾಮಕಾರಕವಾದ ರೀತಿಯಲ್ಲಿ ಪ್ರತಿಭಟಿಸಿದ ಸುಧಾರಕ ಸಂತತಿಗೆ ಜನ್ಮಕೊಟ್ಟಿದೆ. ಯಾವ ಡಂಗುರವನ್ನೂ ಸಾರದೆ ಅದು ದೀನದರಿದ್ರರ ಪರಿಹಾರ ಪದ್ಧತಿಯೊಂದನ್ನು ರೂಪಿಸಿಕೊಂಡಿದೆ. ಅದು ಅನೇಕ ವಿದೇಶೀಯರ ಪ್ರಶಂಸೆಗೂ ಪಾತ್ರವಾಗಿದೆ. ನನ್ನ ಮಟ್ಟಿಗೆ ಅದರಲ್ಲಿ ಇನ್ನೂ ಸುಧಾರಣೆಯಾಗಬೇಕಾಗಿದೆ. ಅದಕ್ಕೆ ಅನಿಷ್ಟ ರೂಪವೂ ಬಂದಿದೆ. ಆದರೆ ಉದಾರತೆಯ ದೃಷ್ಟಿಯಿಂದ ಅದು ತನ್ನ

ಅಸ್ತಿತ್ವವನ್ನು ಸಮರ್ಥಿಸಿಕೊಂಡಿದೆ. ಮುದ್ರಿತ ವರದಿಗಳೇ ಮೊದಲಾದವುಗಳ ಮುಖಾಂತರ ದಾನಧರ್ಮಗಳ ಡಂಗುರವನ್ನು ಸಾರುವದು ಭಾರತೀಯರ ಸಂಪ್ರದಾಯವಲ್ಲ. ಆದರೆ ಉಚಿತ ಅನ್ನದಾನ ನಿಲಯ ಹಾಗು ಪುಕ್ಕಟೆ ವೈದ್ಯಕೀಯ ಪರಿಹಾರಗಳನ್ನು ಬಡಬಗ್ಗರಿಗೆ ಒದಗಿಸುತ್ತಿರುವದನ್ನು ಯಾರು ಬೇಕಾದರೂ ಕಾಣಬಹುದು. (ಹರಿಜನ : ೬-೩-೩೭)

ಉಪವಾಸ ಮತ್ತು ಪ್ರಾರ್ಥನೆ

★

(ರಾಷ್ಟ್ರೀಯ ಸಪ್ತಾಹದಲ್ಲಿ ಉಪವಾಸ ಮಾಡಬೇಕೆಂದೂ ಪ್ರಾರ್ಥನೆಯನ್ನು ಸಲ್ಲಿಸಬೇಕೆಂದೂ ಜನರಿಗೆ ಗಾಂಧೀಜಿಯು ಬಿನ್ನವಿಸಿಕೊಳ್ಳುತ್ತಾ ಹೀಗೆ ಬರೆದರು :)

ಇದು ಬಹಳ ಪುರಾತನ ಸಂಸ್ಥೆ. ನಿಜವಾದ ಉಪವಾಸ ದೇಹವನ್ನೂ ಮನಸ್ಸನ್ನೂ ಆತ್ಮವನ್ನೂ ಶುದ್ಧೀಕರಿಸುತ್ತದೆ. ದೇಹವನ್ನು ದಂಡಿಸಿ ಅಷ್ಟರಮಟ್ಟಿಗೆ ಆತ್ಮವನ್ನು ವಿಮೋಚನಗೊಳಿಸುತ್ತದೆ. ಅಂತಃಕರಣ ಪೂರ್ವಕವಾದ ಪ್ರಾರ್ಥನೆ ಅದ್ಭುತ ಪರಿಣಾಮ ಮಾಡಬಲ್ಲದು. ಉಚ್ಚತರವಾದ ಪಾವಿತ್ರ್ಯಕ್ಕಾಗಿ ಆತ್ಮನ ಉತ್ಕಟ ಆಕಾಂಕ್ಷೆಯೆ ಅದು. ಹೀಗೆ ಪಡೆದ ಪರಿಶುದ್ಧತೆಯನ್ನು ಉದಾರ ಉದ್ದೇಶಕ್ಕಾಗಿ ವಿನಿಯೋಗಿಸಿದರೆ ಪ್ರಾರ್ಥನೆಯಾಗುವದು. ರೋಗಿಗಳನ್ನು ಗುಣಪಡಿಸಲು ಗಾಯತ್ರಿ ಮಂತ್ರ ಪುರಶ್ಚರಣೆಯನ್ನು ಪ್ರಯೋಗಿಸುವದು ಪ್ರಾರ್ಥನೆಗೆ ನಾನಿತ್ತ ಅರ್ಥವನ್ನು ಸಮರ್ಥಿಸುತ್ತದೆ. ಆ ಗಾಯತ್ರಿಯನ್ನೇ ನಮ್ರಭಾವನೆಯಿಂದ ಉದಾತ್ತ ಉದ್ದೇಶಕ್ಕಾಗಿ ಏಕಾಗ್ರ ಚಿತ್ತದಿಂದ ಜ್ಞಾನಪೂರ್ವಕವಾಗಿ ರಾಷ್ಟ್ರೀಯ ಕಷ್ಟ ನಿಷ್ಠುರಗಳಲ್ಲಿ ಜಪಿಸಿದರೆ ಆಪತ್ತನ್ನು ಪರಿಹರಿಸಲು ಅತ್ಯಂತ ಪ್ರಭಾವಿಯಾದ ಸಾಧನವಾಗುತ್ತದೆ. ಗಾಯತ್ರಿ ಜಪ, ನಮಾಜ ಅಥವಾ ಕ್ರೈಸ್ತ ಪ್ರಾರ್ಥನೆಗಳು ಅಜ್ಞರಿಂದ ಆಚರಿಸಲ್ಪಡುವ ಅಂಧ ಶ್ರದ್ಧೆಗಳೆಂದು ತಿಳಿಯುವದಕ್ಕಿಂತ ಹೆಚ್ಚಿನ ಪ್ರಮಾದವು ಬೇರಾವುದೂ ಇರಲಾರದು. ಆದುದರಿಂದ ಉಪವಾಸ ಪ್ರಾರ್ಥನೆಗಳು ಆತ್ಮಶುದ್ಧಿಯ ಅತ್ಯಂತ ಪ್ರಬಲ ಸಾಧನಗಳು. ಶುದ್ಧೀಕರಿಸುವ ವಸ್ತುವು ಅವಶ್ಯಕವಾಗಿ ನಮ್ಮ ಕರ್ತವ್ಯವನ್ನು ಚೆನ್ನಾಗಿ ಮಾಡಲು ಮತ್ತು ನಮ್ಮ ಧ್ಯೇಯವನ್ನು ಮುಟ್ಟಲು ಶಕ್ತಿಯನ್ನು ಕೊಡುತ್ತದೆ. ಆದುದರಿಂದ ಉಪವಾಸ ಪ್ರಾರ್ಥನೆಗಳಿಂದ ಒಮ್ಮೊಮ್ಮೆ ಇಷ್ಟಫಲವು ಸಿದ್ಧಿಸದಿದ್ದರೆ ಅವುಗಳಲ್ಲಿ ಏನೂ ಹುರುಳಿಲ್ಲವೆಂದಲ್ಲ; ಆದರೆ ಅವುಗಳನ್ನು ಸರಿಯಾದ ಬುದ್ಧಿಯಿಂದ ಕೈಕೊಂಡಿರಲಿಕ್ಕಿಲ್ಲ.

ಉಪವಾಸವನ್ನು ಮಾಡಿದ ಮನುಷ್ಯನು ದಿನವೆಲ್ಲ ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿವಸ ಅನೇಕರು ಮಾಡುವಂತೆ ಜೂಜಾಡಿದರೆ ಹೆಚ್ಚಿನ ಪಾವಿತ್ರ್ಯದ ರೂಪದಲ್ಲಿ ಉಪವಾಸದ ಫಲವನ್ನು ಪಡೆಯುವದಿಲ್ಲವಿಷ್ಟೇ ಅಲ್ಲದೆ ಅಂತಹ ನಿಷ್ಪ್ರಯೋಜಕ ಉಪವಾಸದಿಂದ ಇನ್ನಷ್ಟು ಅವನು ಅಧೋಗತಿಗಿಳಿಯುವನು. (ಯಂಗ್ ಇಂಡಿಯಾ : ೨೪-೩-೨೦)

ಸಿದ್ಧಿಯೆಡೆಗೆ

ಅಂತರಂಗದಲ್ಲಿ ಶ್ರೀ ರಾಮನನ್ನು ಪ್ರತಿಷ್ಠಿಸಿಕೊಂಡಿರುವವನ ಲಕ್ಷಣವೇನು? ಇದನ್ನು ಅರಿತುಕೊಳ್ಳದಿದ್ದರೆ ರಾಮನಾಮವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವ ಅಂಜಿಕೆಯಿದೆ. ಈಗಾಗಲೇ ಕೆಲವೊಂದು ತಪ್ಪು ತಿಳಿವಳಿಕೆಯು ಇದೆ. ಅನೇಕರು ಜಪಮಣಿಗಳನ್ನು ತಿರುಗಿಸುತ್ತಾರೆ. ಹಣೆಯ ಮೇಲೆ ಗಂಧವನ್ನು ಹಚ್ಚಿಕೊಳ್ಳುವರು ಮತ್ತು ನಿರರ್ಥಕವಾಗಿ ಆತನ ನಾಮೋಚ್ಚಾರವನ್ನು ಮಾಡುವರು. ಸಂತತವಾಗಿ ರಾಮನಾಮದ ಮಹಿಮೆಯನ್ನು ನಾನು ಒತ್ತಿ ಹೇಳಿ ಈಗಾಗಲೇ ಪ್ರಚಲಿತವಿದ್ದ ಡಾಂಭಿಕತನಕ್ಕೆ ಬೆಂಬಲವನ್ನು ಕೊಡುತ್ತಿರುವದಿಲ್ಲವೆಯೆಂದು ನನ್ನನ್ನು ಕೇಳಬಹುದು. ಈ ಭಯ ನನ್ನನ್ನು ತಡೆಯಕೂಡದು. ಹೀಗೆ ಮಾಡಿಕೊಂಡ ಮೌನವು ಅಪಾಯಕರ. ಮೌನದ ಜೀವಂತ ಧ್ವನಿಗೆ ಸುದೀರ್ಘವಾದ ಅಂತಃಕರಣ ಚೋದಿತ ಆಚಾರದ ಉತ್ತೇಜನವು ಅವಶ್ಯ. ಇಂತಹ ಸ್ವಾಭಾವಿಕ ಮೌನದ ಅಭಾವದಲ್ಲಿ ತನ್ನ ಅಂತರಂಗದಲ್ಲಿ ರಾಮನನ್ನುಳ್ಳ ಮನುಷ್ಯನ ಗುರುತುಗಳನ್ನು ಅರಿತುಕೊಳ್ಳಲು ನಾವು ಪ್ರಯತ್ನಿಸಬೇಕು.

ಗೀತೆಯ ಸ್ಥಿತಪ್ರಜ್ಞನೇ ರಾಮಭಕ್ತನೆಂದು ಹೇಳಬಹುದು. ಇನ್ನಷ್ಟು ಆಳವಾಗಿ ನೋಡಿದರೆ ಪರಮಾತ್ಮನ ನಿಜವಾದ ಭಕ್ತನು ಪ್ರಕೃತಿಯ ಪಂಚ ಮೂಲ ತತ್ವಗಳಿಗೆ ಅತ್ಯಂತ ವಿಧೇಯನಾಗಿರುವನೆಂದು ಕಾಣಬಹುದು. ಅವನು ಹಾಗೆ ವಿಧೇಯನಾಗಿದ್ದರೆ ಅವನೆಂದೂ ಬೇನೆಬೀಳುವದಿಲ್ಲ. ಆಕಸ್ಮಾತ್ತಾಗಿ ಬೇನೆಬಿದ್ದರೆ ನಿಸರ್ಗದ ನೆರವಿನಿಂದಲೇ ಅವನು ತನ್ನನ್ನು ತಾನೆ ಗುಣಪಡಿಸಿಕೊಳ್ಳುವನು. ದೇಹವನ್ನು ಹೇಗಾದರೂ ಗುಣಪಡಿಸಿ

ಕೊಳ್ಳುವದು ದೇಹದೊಳಗಿದ್ದವನ ಕೆಲಸವಲ್ಲ. ದೇಹವೇ ತಾನೆಂದು ತಿಳಿಯುವವನು ತನ್ನ ದೇಹದ ರೋಗರುಜಿನಗಳನ್ನು ಗುಣಪಡಿಸಿಕೊಳ್ಳಲು ಪ್ರಪಂಚದ ಅಂಚಿನವರೆಗೂ ಸ್ವಾಭಾವಿಕವಾಗಿ ಹೋಗುವನು. ಆದರೆ ಆತ್ಮವು ದೇಹದೊಳಗಿದ್ದರೂ ದೇಹದಿಂದ ಭಿನ್ನವೆಂದು ತಿಳಿದವನು ಹಾಗು ವಿನಾಶಿಯಾದ ದೇಹಕ್ಕೆ ವ್ಯತಿರಿಕ್ತವಾಗಿ ಅದು ಅವಿನಾಶಿಯೆಂದು ಅರಿತವನು ತಳಮಳಿಸುವದಿಲ್ಲ. ಅಥವಾ ಪ್ರಕೃತಿ ತತ್ವಗಳು ಕೈಬಿಟ್ಟರೆ ದುಃಖಿಸುವದಿಲ್ಲ. ತದ್ವಿರುದ್ಧವಾಗಿ ಮೃತ್ಯುವನ್ನು ಮಿತ್ರನಂತೆ ಸ್ವಾಗತಿಸುವನು. ವೈದ್ಯರನ್ನು ಹುಡುಕುವ ಬದಲು ಅವನು ತನ್ನನ್ನು ತಾನೇ ಗುಣಪಡಿಸಿಕೊಳ್ಳುವನು. ಒಳಗಿರುವ ಆತ್ಮಪ್ರಜ್ಞೆಯಲ್ಲಿಯೆ ಅವನು ಇರುವನು ಮತ್ತು ಅಂತಸ್ಥನಾಗಿರುವವನ ಯೋಗಕ್ಷೇಮವನ್ನೇ ಆದ್ಯಂತವಾಗಿ ಅವನು ನೋಡುವನು.

ಪ್ರತಿ ಉಸಿರಿನ ಜೊತೆಯಲ್ಲಿಯೂ ಪರಮಾತ್ಮನ ನಾಮವನ್ನೇ ಅವನು ಉಚ್ಚರಿಸುವನು. ದೇಹವು ಮಲಗಿದ್ದರೂ ಆತನ ರಾಮನು ಸದಾ ಜಾಗ್ರತನಾಗಿರುವನು. ಅವನು ಮಾಡುತ್ತಿರುವದರೊಡನೆಲ್ಲ ರಾಮನು ಯಾವಾಗಲೂ ಇರುವನು. ಇಂತಹ ಪವಿತ್ರ ಮೈತ್ರಿಯ ಹಾನಿಯೆ ಆ ಭಕ್ತನ ನಿಜವಾದ ಮರಣ.

ತನ್ನ ರಾಮನನ್ನು ತನ್ನ ಜೊತೆಯಲ್ಲಿ ಇರಿಸಿಕೊಳ್ಳಲು ಸಹಾಯವೆಂದು ಪಂಚಭೂತಗಳು ಕೊಡುವದನ್ನೇ ಅವನು ಸ್ವೀಕರಿಸುವನು. ಅಂದರೆ ಪ್ರಿಥಿವಿ, ಅಪ್, ತೇಜಸ್ಸು, ವಾಯು, ಆಕಾಶ ಇವುಗಳಿಂದ ದೊರೆಯುವ ಲಾಭವನ್ನು ಮಾತ್ರ ಪಡೆಯಲು ಅತಿ ಸುಲಭವಾದ ಹಾಗು ಸರಲವಾದ ಸಾಧನಗಳನ್ನು ಉಪಯೋಗಿಸುವನು. ಈ ಸಹಾಯವು ರಾಮನಾಮಕ್ಕೆ ಪೂರಕವಲ್ಲ. ಅದರ ಸಿದ್ಧಿಗೆ ಇದು ಕೇವಲ ಒಂದು ಸಾಧನ. ನಿಜವಾಗಿ ವಸ್ತುತಃ ರಾಮನಾಮಕ್ಕೆ ಯಾವ ಸಹಾಯವೂ ಬೇಕಿಲ್ಲ. ರಾಮನಾಮದಲ್ಲಿ ಶ್ರದ್ಧೆಯುಂಟೆಂದು ಹೇಳುವದೂ, ಹಾಗೆಯೆ ಆ ಕಾಲಕ್ಕೆಯೆ ಡಾಕ್ಟರರ ಕಡೆಗೆ ಓಡುವದೂ, ವಿಸಂಗತವಾಗಿವೆ.

ಧಾರ್ಮಿಕ ವಿದ್ಯೆಯಲ್ಲಿ ಪರಿಣತನಾದ ಮಿತ್ರನೊಬ್ಬನು ರಾಮನಾಮದ ವಿಷಯವಾಗಿ ಬರೆದ ನನ್ನ ವಿಚಾರಗಳನ್ನು ಕೆಲಕಾಲದ ಹಿಂದೆ ಓದಿ ದೇಹವನ್ನು ಕೂಡ ಪರಿವರ್ತನೆಗೊಳಿಸುವ ಒಂದು ರಸಾಯನವೇ

ರಾಮನಾಮವೆಂದು ಬರೆದನು. ವೀರ್ಯಸಂಗ್ರಹವನ್ನು ನಿಧಿಸಂಗ್ರಹಕ್ಕೆ ಹೋಲಿಸಿರುವದುಂಟು. ಆದರೆ ಅಧಃಪತನವನ್ನು ಅಶಕ್ಯಗೊಳಿಸುವಂತೆ ಸದಾ ವರ್ಧಿಸುವ ಆಧ್ಯಾತ್ಮಿಕ ಬಲದ ಪ್ರವಾಹವು ಅವ್ಯಾಹತವಾಗಿ ಹರಿಯು ವಂತೆ ಮಾಡುವ ಸಾಮರ್ಥ್ಯವು ರಾಮನಾಮದಲ್ಲಿ ಮಾತ್ರವಿದೆ.

ರಕ್ತವಿಲ್ಲದೆ ದೇಹವು ಬಾಳಲಾರದೆಂಬಂತೆ, ಆತ್ಮಕ್ಕೆ ಅಪ್ರತಿಮವಾದ ಶುದ್ಧ ಶ್ರದ್ಧೆಯ ಶಕ್ತಿಯು ಅವಶ್ಯ. ಈ ಬಲವು ಮಾನವನ ಎಲ್ಲ ದೇಹೇಂ ದ್ರಿಯಗಳ ದೌರ್ಬಲ್ಯವನ್ನು ನಿವಾರಿಸಿ ಅವುಗಳನ್ನು ಪುನರುಜ್ಜೀವಿಸಬಲ್ಲದು. ಆದುದರಿಂದಲೇ ರಾಮನಾಮವು ಹೃದಯಾಂತರಾಳದಲ್ಲಿ ನೆಲೆಗೊಂಡರೆ ಮಾನವನ ಪುನರ್ಜನ್ಮವೇ ಆದಂತೆಂದು ಹೇಳುವರು. ಈ ನಿಯಮವು ಸ್ತ್ರೀಪುರುಷರು, ಆಬಾಲವೃದ್ಧರು, ಎಲ್ಲರಿಗೂ ಅನ್ವಯಿಸುತ್ತದೆ. ಈ ಶ್ರದ್ಧೆ ಯನ್ನು ಪಶ್ಚಿಮದೇಶಗಳಲ್ಲಿಯೂ ಕಾಣಬಹುದು.

ಅನಾದಿಕಾಲದಿಂದ ಭಾರತೀಯರಿಗೆ ಪರಂಪರೆಯಾಗಿ ಬಂದ ಈ ಶ್ರದ್ಧೆಗೆ ಹೊರನಾಡಿನ ಬೆಂಬಲವೇನೂ ಭಾರತಕ್ಕೆ ಬೇಕಾಗಿಲ್ಲ.

ಬ್ರಹ್ಮಚರ್ಯ ಅಥವಾ ಆತ್ಮಸಂಯಮ

(೧೯೨೪ನೇ ಇಸವಿಯ ಮೇ ತಿಂಗಳ ೨೫ನೇ ದಿನಾಂಕದ ನವಜೀವನ ದಲ್ಲಿ ಈ ಸೂಕ್ಷ್ಮ ವಿಷಯವನ್ನು ಕುರಿತು ಬರೆದ ನನ್ನ ಲೇಖನವನ್ನು ಶ್ರೀ ಮಹದೇವ ದೇಸಾಯಿಯವರು ಅನುವಾದಿಸಿರುವರು. ಅದನ್ನು ನಾನು ಯಂಗ್ ಇಂಡಿಯಾದಲ್ಲಿ ಸಂತೋಷದಿಂದ ಪ್ರಕಟಿಸುತ್ತಿರುವೆನು. ಈ ವಿಷಯವನ್ನೇ ಕುರಿತು ಭಾರತದ ಬೇರೆಬೇರೆ ಭಾಗಗಳಿಂದ ಅನೇಕರು ಬರೆದ ಪತ್ರಗಳು ನನ್ನ ಮುಂದಿವೆ. ಕಳಕಳಿಯಿಂದ ಶುದ್ಧ ಜೀವನಕ್ಕಾಗಿ ಹಂಬಲಿ ಸುತ್ತಿರುವವರಿಗೆ ಈ ಲೇಖದಲ್ಲಿ ಸಂಗ್ರಹಿಸಿದ ಬಿಡಿ ವಿಚಾರಗಳಿಂದ ಸಹಾಯವಾಗಬಹುದು. ನನ್ನನ್ನು ಕೇಳಿದವರೆಲ್ಲ ಹಿಂದೂಗಳೇ ಆಗಿರುವರು. ಆದುದರಿಂದ ಸ್ವಾಭಾವಿಕವಾಗಿ ನಾನು ಅವರಿಗೇ ಈ ವಿಚಾರಗಳನ್ನು ಹೇಳಿ ದ್ದೇನೆ. ಕೊನೆಯ ಪರಿಚ್ಛೇದವು ಅತ್ಯಂತ ಮಹತ್ವದ್ದೂ ಕಾರ್ಯಕಾರಿಯೂ ಆದ ಭಾಗವಾಗಿದೆ. ಅಲ್ಲಾ ಅಥವಾ ದೇವರು ಎಂಬ ಶಬ್ದಗಳಿಗೆ ಅಷ್ಟೇ

ಶಕ್ತಿಯಿದೆ. ನಮ್ಮ ಅಂತರ್ಯಾಮಿಯಾಗಿರುವ ದೇವನ ಅಸ್ತಿತ್ವವನ್ನು ಗುರುತಿಸುವದೇ ಇದರ ಉದ್ದೇಶ. ಪಾಪಗಳನ್ನೆಲ್ಲ ಗುಪ್ತವಾಗಿ ಮಾಡುವದುಂಟು. ಪರಮಾತ್ಮನು ನಮ್ಮ ಆಲೋಚನೆಗಳನ್ನು ಕೂಡ ಸಾಕ್ಷಿಯಾಗಿ ನೋಡುತ್ತಿರುವನೆಂಬ ಮಾತು ಗೊತ್ತಾದರೆ ನಾವು ಮುಕ್ತರಾಗುತ್ತೇವೆ.

— ಎಂ. ಕೆ. ಜಿ.)

ಈ ವಿಷಯವನ್ನು ಕುರಿತು ಬರೆಯುವದು ಹಗುರಲ್ಲ. ಆದರೆ ನನ್ನ ಹಿಂದಿನ ಅನುಭವ ಸಂಗ್ರಹದಲ್ಲಿದ್ದ ಕೆಲ ಕಾಳುಗಳನ್ನು ಓದುಗರಿಗೆ ಕೊಟ್ಟು ಊಟಮಾಡಬೇಕೆಂಬ ಇಚ್ಛೆಯು ನನ್ನ ಮನಸ್ಸಿನಲ್ಲಿ ಅತ್ಯುತ್ಕಟವಾಗಿದೆ. ನನಗೆ ಬಂದ ಕೆಲ ಪತ್ರಗಳು ನನ್ನ ಈ ಇಚ್ಛೆಯನ್ನು ಇನ್ನಷ್ಟು ಮಸೆದಿವೆ.

ಮಿತ್ರನೋರ್ವನು ಕೇಳಿದ್ದಾನೆ: "ಬ್ರಹ್ಮಚರ್ಯೆಯೆಂದರೇನು? ಪೂರ್ಣವಾಗಿ ಅದನ್ನು ಪಾಲಿಸುವದು ಸಾಧ್ಯವೆ? ಶಕ್ಯವಿದ್ದರೆ ನೀವು ಹಾಗೆ ಪಾಲಿಸುತ್ತಿರುವಿರಾ?"

ಬ್ರಹ್ಮಚರ್ಯದ ಪೂರ್ಣ ಹಾಗು ಸರಿಯಾದ ಅರ್ಥವು ಬ್ರಹ್ಮಜ್ಞಾನವೆಂದಾಗುತ್ತದೆ. ಪ್ರತಿಯೊಂದು ವಸ್ತುವಿನಲ್ಲಿಯೂ ಬ್ರಹ್ಮನಿದ್ದಾನೆ. ಆದುದರಿಂದ ಅಂತರಾತ್ಮನ ಆಳದಲ್ಲಿ ಮುಳುಗಿ ಆತ್ಮಜ್ಞಾನವನ್ನು ಮಾಡಿಕೊಳ್ಳುವದರಿಂದ ಅವನನ್ನು ಕಾಣಬಹುದು. ಇಂದ್ರಿಯ ನಿಗ್ರಹವಿಲ್ಲದೆ ಈ ಸಾಕ್ಷಾತ್ಕಾರ ಅಶಕ್ಯ. ಸರ್ವಸ್ಥಳಗಳಲ್ಲಿ, ಸರ್ವಕಾಲದಲ್ಲಿ ತ್ರಿಕರಣಪೂರ್ವಕ ಸರ್ವೇಂದ್ರಿಯಗಳ ಸಂಯಮವೇ ಬ್ರಹ್ಮಚರ್ಯೆ.

ಬ್ರಹ್ಮಚರ್ಯವನ್ನು ಸಂಪೂರ್ಣವಾಗಿ ಪಾಲಿಸುವ ಸ್ತ್ರೀಪುರುಷರು ಇಂದ್ರಿಯವಿಕಾರದಿಂದ ಮುಕ್ತರಾಗಿರುವರು. ಇಂತಹವರು ದೇವರ ಸನಿಯದಲ್ಲಿರುವರು; ದೇವರಂತಿರುವರು.

ಸಂಪೂರ್ಣವಾಗಿ ಮನೋವಾಕ್ಕಾಯಗಳಿಂದ ಇಂತಹ ಬ್ರಹ್ಮಚರ್ಯವನ್ನು ಪಾಲಿಸುವದು ಶಕ್ಯವಿದೆಯೆಂಬಲ್ಲಿ ನನಗಾವ ಸಂಶಯವೂ ಇಲ್ಲ. ಬ್ರಹ್ಮಚರ್ಯೆಯ ಪರಿಪೂರ್ಣಾವಸ್ಥೆಗೆ ನಾನಿನ್ನೂ ಮುಟ್ಟಿಲ್ಲವೆಂದು ಹೇಳಲು ವಿಷಾದವಾಗುತ್ತದೆ. ಆದರೆ ನನ್ನ ಜೀವನದ ಪ್ರತಿಕ್ಷಣವೂ ಅದನ್ನು ಮುಟ್ಟಲು ನಾನು ಯತ್ನಿಸುತ್ತಿದ್ದೇನೆ. ಈ ದೇಹದಲ್ಲಿಯೆ ಆ ಸ್ಥಿತಿಯನ್ನು ಮುಟ್ಟಬೇಕೆಂಬ ನನ್ನ ಆಶೆಯನ್ನು ನಾನು ಬಿಟ್ಟಿಲ್ಲ. ನನ್ನ ದೇಹದ ಮೇಲೆ ನನಗೆ ನಿಗ್ರಹವು ಸಿಕ್ಕಿದೆ. ನನ್ನ ಜಾಗ್ರದವಸ್ಥೆಯಲ್ಲಿ ನನ್ನಮೇಲೆ ನನ್ನ

ಹಿಡಿತವನ್ನು ಇಟ್ಟುಕೊಳ್ಳಬಲ್ಲೆನು. ನನ್ನ ನಾಲಿಗೆಯನ್ನು ನಿಗ್ರಹಿಸುವಲ್ಲಿ ಸಾಕಷ್ಟು ನಾನು ಯಶಸ್ವಿಯಾಗಿದ್ದೇನೆ. ಆದರೆ ನನ್ನ ಆಲೋಚನೆಗಳ ನಿಯಮನದಲ್ಲಿ ನಾನಿನ್ನೂ ಅನೇಕ ಅವಸ್ಥೆಗಳನ್ನು ದಾಟಬೇಕಾಗಿದೆ. ಅವು ನನ್ನ ಅಪ್ಪಣೆಯ ಪ್ರಕಾರ ಬರುವದಿಲ್ಲ; ಹೋಗುವದಿಲ್ಲ. ಹೀಗೆ ನನ್ನ ಮನಸ್ಸು ಯಾವಾಗಲೂ ತನ್ನ ವಿರುದ್ಧವಾಗಿಯೆ ಒಂದು ಬಗೆಯ ಕ್ರಾಂತಿಯ ಅವಸ್ಥೆಯಲ್ಲಿದೆ.

ಆದರೆ ನನ್ನ ಜಾಗ್ರದವಸ್ಥೆಯಲ್ಲಿ ನನ್ನ ವಿಚಾರಗಳು ಒಂದನ್ನೊಂದು ತಾಕಲಾಡದಂತೆ ಮಾಡಬಲ್ಲೆ. ದುಷ್ಟ ವಿಚಾರಗಳ ಸಂಪರ್ಕದಿಂದ ನನ್ನ ಮನಸ್ಸು ಜಾಗ್ರದವಸ್ಥೆಯಲ್ಲಿ ಅಲಿಪ್ತವೂ ಭದ್ರವೂ ಆಗಿದೆಯೆಂದು ಹೇಳ ಬಹುದು. ಸುಪ್ತಾವಸ್ಥೆಯಲ್ಲಿ ವಿಚಾರನಿಗ್ರಹವು ಬಹಳ ಕಡಿಮೆಯಿದೆ. ಮಲಗಿದಾಗ ಅನೇಕ ಪ್ರಕಾರದ ವಿಚಾರಗಳಿಂದ ಅನಪೇಕ್ಷಿತ ಸ್ವಪ್ನಗಳಿಂದ ಹಾಗು ಹಿಂದೆ ಭೋಗಿಸಿದ ವಸ್ತುಗಳ ಹಾಗು ಕೃತಿಗಳ ಬಯಕೆಯಿಂದ ಮನಸ್ಸು ಹೊಯ್ದಾಡುತ್ತದೆ. ಇಂತಹ ವಿಚಾರಗಳೂ ಸ್ವಪ್ನಗಳೂ ಅನಿರ್ಮಲವಾಗಿದ್ದರೆ ವಾಡಿಕೆಯ ಪರಿಣಾಮಗಳನ್ನು ಅವು ಮಾಡಿಯೆ ಬಿಡುವವು. ಇಂತಹ ಅನುಭವಗಳು ಆಗುತ್ತಿರುವಾಗ ಯಾವನೊಬ್ಬನೂ ವಿಕಾರಮುಕ್ತನಾಗಿರುವನೆಂದನ್ನಲಾಗದು. ಈ ವಿಮಾರ್ಗಚಲನೆಯು ಕಡಿಮೆ ಯೇನೋ ಆಗುತ್ತಿದೆ; ಆದರೆ ಪೂರ್ಣವಾಗಿ ನಿಂತಿಲ್ಲ. ನನ್ನ ಆಲೋಚನೆ ಗಳ ಮೇಲೆ ಸಂಪೂರ್ಣ ನಿಯಂತ್ರಣವಿದ್ದಿದ್ದರೆ ಕಳೆದ ೧೦ ವರ್ಷಗಳಲ್ಲಿ ಪ್ಲೂರೆಸಿ ಆಮಶಂಕೆ ಮತ್ತು ಅಪೆಂಡಿಸಾಯಿಟಿಸಿನ ಬಾಧೆಯು ನನಗಾಗುತ್ತಿರ ಲಿಲ್ಲ. ನಿರೋಗಿಯಾದ ಆತ್ಮವು ನಿರೋಗಿಯಾದ ದೇಹದಲ್ಲಿ ವಾಸಿಸ ಬೇಕೆಂದು ನನಗನಿಸುತ್ತದೆ. ಆದುದರಿಂದ ಆತ್ಮವು ಆರೋಗ್ಯಯುಕ್ತ ವಾಗುತ್ತಲೂ ವಿಕಾರರಹಿತವೂ ಆಗುತ್ತ ನಡೆದಂತೆ ದೇಹವೂ ನಿರೋಗಿಯೂ ವಿಕಾರವರ್ಜಿತವೂ ಆಗುವದು. ನಿರೋಗಿಯಾದ ದೇಹವು ಮಜ್ಜಮಾಂಸ ಗಳಿಂದ ಪುಷ್ಟವಾಗಿರಬೇಕೆಂದು ಇದರರ್ಥವಲ್ಲ. ವೀರ ಆತ್ಮನು ಪ್ರಾಯಶಃ ಸೊರಗಿದ ಶರೀರದಲ್ಲಿಯೆ ಇರುವನು. ಒಂದು ವಿಶಿಷ್ಟ ಅವಸ್ಥೆಯನಂತರ ಆತ್ಮನ ಅಭಿವೃದ್ಧಿಗೆ ವ್ಯಸ್ತಪ್ರಮಾಣದಲ್ಲಿ ದೇಹವು ಸೊರಗುತ್ತದೆ. ಅನೇಕ ರೋಗಗಳಿಗೆ ದೇಹವು ತುತ್ತಾಗಿದೆ. ಅದು ಹೊರಗಣ್ಣಿಗೆ ರೋಗಮುಕ್ತ ವಾಗಿದ್ದರೂ ಅದು ಸೋಂಕುರೋಗಗಳೇ ಮುಂತಾದವುಗಳಿಂದ ಮುಕ್ತವಾ

ಗಿರುವದಿಲ್ಲ. ಸಂಪೂರ್ಣ ನಿರೋಗಿ ದೇಹಕ್ಕೆ ಇವುಗಳಿಂದಾವ ಬಾಧೆಯೂ ಆಗಲಾರದು. ಕೆಡಲಾರದ ರಕ್ತದಲ್ಲಿ ಅಂತಹ ಸೋಂಕುಬೇನೆಗಳನು ಎದುರಿಸುವ ಕಸುವು ಸ್ವಭಾವತಃ ಇರುತ್ತದೆ.

ಇಂತಹ ಸಮತೂಕವನ್ನು ಸಾಧಿಸುವದು ಕಠಿಣ. ಇಲ್ಲದಿದ್ದರೆ ಈ ಪರಿಪೂರ್ಣ ಅವಸ್ಥೆಯನ್ನು ಹೊಂದಲು ನಾನು ಯಾವ ಪರಿಶ್ರಮವನ್ನೂ ಬಿಡುವದಿಲ್ಲೆಂಬುದಕ್ಕೆ ನನ್ನ ಅಂತರಾತ್ಮವೇ ಸಾಕ್ಷಿ. ಆದುದರಿಂದ ಇಷ್ಟರಲ್ಲಿ ನಾನು ಅದನ್ನು ಮುಟ್ಟಬೇಕಾಗಿತ್ತು. ಹೊರಗಿನ ಯಾವ ಅಡಚಣೆಯೂ ನನ್ನ ಹಾಗು ಆ ಸಿದ್ಧಿಯ ನಡುವೆ ನಿಲ್ಲಲಾರದು. ಪೂರ್ವ ಸಂಸ್ಕಾರಗಳನ್ನು ಅಳಿಸಿಬಿಡುವದು ಎಲ್ಲರಿಗೂ — ನನಗಂತೂ ಸುಲಭವಲ್ಲ. ಆದರೆ ವಿಲಂಬ ದಿಂದ ನನಗೇನೂ ವಿಸ್ಮಯವಾಗಿಲ್ಲ. ಆ ಪೂರ್ಣಾವಸ್ಥೆಯ ಮನಶ್ಚಿತ್ರವು ನನ್ನಮುಂದೆ ನಿಚ್ಚಳವಾಗಿದೆ. ಅದರ ಮಸಮುಸುಕಾದ ನೋಟಗಳನ್ನು ನಾನು ಕಂಡಿದ್ದೇನೆ. ಸಾಧಿಸಿದ ಪ್ರಗತಿಯಿಂದ ನಿರಾಶೆಗಿಂತಲೂ ಆಶೆಯು ನನ್ನಲ್ಲಿ ತುಂಬಿದೆ. ಆದರೆ ಈ ಆಶೆಯು ಕೈಗೂಡುವ ಮುನ್ನವೇ ನಾನು ಹೊರಟುಹೋದರೂ ನಾನು ಸೋತೆನೆಂದು ನಾನು ತಿಳಿಯುವುದಿಲ್ಲ. ಏಕಂದರೆ ಈಗಿನ ದೇಹದಲ್ಲಿ ನಂಬಿಗೆಯಿರುವಂತೆ ಪುನರ್ಜನ್ಮದಲ್ಲಿಯೂ ನನ್ನ ಶ್ರದ್ಧೆಯಿದೆ. ಪ್ರಯುಕ್ತ ಅತ್ಯಲ್ಪ ಪ್ರಯತ್ನವೂ ವ್ಯರ್ಥವಲ್ಲೆಂದು ನನ್ನ ಭಾವನೆ.

ನನ್ನ ಪತ್ರಲೇಖಕರೂ ಅವರಂತೆ ಇತರರೂ ತಾಳ್ಮೆ ಮತ್ತು ಆತ್ಮ ವಿಶ್ವಾಸವನ್ನು ಪಡೆಯಬೇಕೆಂಬ ಸರಲ ಉದ್ದೇಶದಿಂದ ನನ್ನ ಬಗೆಗೇ ಇಷ್ಟು ನಾನು ಹೇಳಿಕೊಂಡಿದ್ದೇನೆ. ಎಲ್ಲರಲ್ಲಿಯೂ ಇರುವ ಆತ್ಮ ಒಂದೇ. ಪ್ರತಿಯೊಬ್ಬನಿಗೂ ಅದರ ಸಾಧ್ಯತೆಗಳು ಏಕಪ್ರಕಾರವಾಗಿರುವವು. ಕೆಲವರ ವಿಷಯದಲ್ಲಿ ಅದು ಆವಿಷ್ಕಾರವನ್ನು ಹೊಂದಿದೆ. ಬೇರೆ ಕೆಲವರ ವಿಷಯ ದಲ್ಲಿ ಇನ್ನು ಹೊಂದಬೇಕಾಗಿದೆ. ತಾಳ್ಮೆಗೂಡಿದ ಪ್ರಯತ್ನದಿಂದ ಪ್ರತಿ ಯೊಬ್ಬನೂ ಇದರಿಂದ ಪಾರಾಗಬಹುದು.

ಅಂತೆಯೆ ನಾನು ಬ್ರಹ್ಮಚರ್ಯವನ್ನು ವ್ಯಾಪಕಾರ್ಥದಲ್ಲಿ ವಿವೇಚಿಸಿರು ವೆನು. ಮನೋವಾಕ್ಕಾಯಗಳಿಂದ ಪಶುವಿಕಾರಗಳನ್ನು ನಿಗ್ರಹಿಸುವದೇ ಬ್ರಹ್ಮಚರ್ಯವೆಂದು ಸಾಮಾನ್ಯವಾಗಿ ಅಂಗೀಕೃತವಾದ ಅರ್ಥ. ಹೀಗೆ ಅದರ ಅರ್ಥ ವ್ಯಾಪ್ತಿಯನ್ನು ಸಂಕೋಚಿಸುವದು ವಿಹಿತವೇ ಆಗಿದೆ. ಈ

ಬ್ರಹ್ಮಚರ್ಯವನ್ನು ಪಾಲಿಸುವದು ಬಹಳ ಕಠಿನವೆಂದು ತಿಳಿಯಲಾಗುತ್ತದೆ. ಇಂದ್ರಿಯ ಲಾಲಸೆಯ ಈ ನಿಗ್ರಹವು ಬಹಳ ಕಠಿಣ, ಅದು ಅಶಕ್ಯ, ಎಂದು ಹೇಳಲು, ನಮ್ಮ ಜಿಹ್ವೆಯ ಸಂಯಮಕ್ಕೆ ಸಾಕಷ್ಟು ಮಹತ್ವವನ್ನು ಕೊಡದಿರುವದೇ ಕಾರಣ. ರೋಗಗ್ರಸ್ತವಾಗಿ ಕೃಶವಾದ ದೇಹದಲ್ಲಿ ಇಂದ್ರಿಯ ಭೋಗದ ಇಚ್ಛೆಯು ಹೆಚ್ಚಾಗಿರುತ್ತದೆಂಬುದು ನಮ್ಮ ವೈದ್ಯರ ಅನುಭವವಾಗಿದೆ. ಆದುದರಿಂದ ದುರ್ಬಲವಾದ ಜನಾಂಗದಿಂದ ಬ್ರಹ್ಮ ಚರ್ಯಪಾಲನೆಯು ಸ್ವಾಭಾವಿಕವಾಗಿಯೆ ಕಠಿನ.

ಕೃಶವಾಗಿದ್ದರೂ ನಿರೋಗಿಯಾದ ದೇಹವನ್ನು ಕುರಿತು ಮೇಲೆ ನಾನು ಹೇಳಿದ್ದೇನೆ. ಶಾರೀರಿಕ ಸಂಸ್ಕೃತಿಯನ್ನು ನಾನು ಕಡೆಗಾಣಿಸಿದ್ದೇನೆಂದು ಯಾರೂ ತಿಳಿಯಬೇಕಿಲ್ಲ. ನನ್ನ ಒರಟು ನುಡಿಯಲ್ಲಿ ಬ್ರಹ್ಮಚರ್ಯದ ಪರಿಪೂರ್ಣಾವಸ್ಥೆಯನ್ನು ಕುರಿತು ನಾನು ಹೇಳಿದ್ದೇನೆ. ಆದುದರಿಂದ ಅದನ್ನು ತಪ್ಪು ತಿಳಿದುಕೊಳ್ಳುವ ಸಂಭವವಿದೆ. ಸರ್ವೇಂದ್ರಿಯ ದಮನವನ್ನು ಆಚರಿಸಬಯಸುವವನು ದೇಹಕೃಶತೆಯನ್ನು ಸ್ವಾಗತಿಸುವನು. ದೇಹಾಸಕ್ತಿಯು ತೊಲಗಿದರೆ ಸ್ನಾಯುಬಲದ ಅಪೇಕ್ಷೆಯು ಅಳಿದು ಬಿಡುವದು.

ಆದರೆ ನಿಜವಾದ ಬ್ರಹ್ಮಚಾರಿಯ ದೇಹವು ನಿರಪವಾದವಾಗಿ ಹೊಚ್ಚ ಹೊಸತಾಗಿಯೂ ಕಂಚಿನಂತೆ ಶಕ್ತವಾಗಿಯೂ ಇರುವದು. ಈ ಬ್ರಹ್ಮ ಚರ್ಯವು ಅಪಾರ್ಥಿವ ಬ್ರಹ್ಮಚರ್ಯ. ಸುಪ್ತಿಯಲ್ಲಿಯೂ ಇಂದ್ರಿಯ ಭೋಗದ ಇಚ್ಛೆಯಿಲ್ಲದೆ ಇರುವವನು ಪ್ರಶಂಸಾರ್ಹನೇ ಸರಿ. ಉಳಿದೆಲ್ಲ ಇಂದ್ರಿಯಗಳ ನಿಗ್ರಹವು ಆತನಿಗೆ ತಾವೇತಾವಾಗಿ ಬಂದು ಕೂಡುತ್ತದೆ. ಈ ನಿಯಮಿತ ಬ್ರಹ್ಮಚರ್ಯವನ್ನು ಕುರಿತು ಇನ್ನೊಬ್ಬ ಮಿತ್ರನು ಬರೆಯುತ್ತಾನೆ. " ನಾನು ಅತ್ಯಂತ ದುಃಖಿಯಾಗಿದ್ದೇನೆ. ನನ್ನ ಕಾರ್ಯಾಲಯ ದಲ್ಲಿದ್ದಾಗಲೂ, ಬೀದಿಯಲ್ಲಿ ಹೋಗುತ್ತಿರುವಾಗಲೂ, ಹಗಲೂ ಇರುಳೂ, ಓದುವಾಗ, ದುಡಿಯುವಾಗ, ಪ್ರಾರ್ಥನೆಯನ್ನು ಮಾಡುತ್ತಿರುವಾಗಲೂ ಇಂದ್ರಿಯ ಭೋಗದ ಪಿಶಾಚಿಯು ನನ್ನನ್ನು ಪೀಡಿಸುತ್ತಿದೆ. ಚಂಚಲ ವಾದ ಈ ಮನಸ್ಸನ್ನು ಹೇಗೆ ನಿಗ್ರಹಿಸಬೇಕು? ಪ್ರತಿಯೊಬ್ಬ ಮಹಿಳೆಯನ್ನೂ ತನ್ನ ತಾಯಿಯಂತೆ ಕಾಣುವದನ್ನು ಹೇಗೆ ಕಲಿಯಬೇಕು? ಕಣ್ಣು ಶುದ್ಧ ಪ್ರೇಮವನ್ನು ಹೊಮ್ಮಿಸುವದೆಂತು? ದುರ್ವಿಚಾರಗಳನ್ನು ನಿರ್ಮೂಲ

ಗೊಳಿಸುವದು ಹೇಗೆ? ಅನೇಕ ವರ್ಷಗಳ ಹಿಂದೆ ನೀವು ಬರೆದ ಬ್ರಹ್ಮಚರ್ಯದ ವಿಷಯಕವಾದ ನಿಮ್ಮ ಲೇಖವು ನನ್ನ ಬಳಿಯಲ್ಲಿದೆ. ಆದರೆ ಆದರಿಂದ ನನಗಾವ ಸಹಾಯವೂ ಆಗಿಲ್ಲ."

ಈ ಸ್ಥಿತಿಯು ಹೃದಯವಿದಾರಕವಾಗಿದೆ. ಅನೇಕರು ಇಂತಹ ಪೀಡೆಯಿಂದ ಬಳಲುತ್ತಿರುವರು. ಆದರೆ ದುರ್ವಿಚಾರಗಳ ವಿರುದ್ಧ ಮನಸ್ಸು ಶಾಶ್ವತವಾಗಿ ಹೋರಾಡುತ್ತಿರುವಾಗ ನಿರಾಶೆಗೆ ಎಡೆಯಿಲ್ಲ. ಕಣ್ಣು ಅಪರಾಧ ಮಾಡಿದರೆ ಅದನ್ನು ಮುಚ್ಚಿಬಿಡಬೇಕು. ಕಿವಿಗಳು ತಪ್ಪು ಮಾಡಿದರೆ ಅವುಗಳನ್ನು ಮುಚ್ಚಿಕೊಳ್ಳಬೇಕು. ಕೆಳಗೆ ಕಣ್ಣುಗಳನ್ನು ಮಾಡಿಕೊಂಡು ಹೋಗುವದೇ ಯಾವಾಗಲೂ ಮೇಲು. ಆಗ ಅಡ್ಡದಾರಿಗೆ ಹೋಗಲು ಅವುಗಳಿಗೆ ಅವಕಾಶವುಳಿಯುವುದಿಲ್ಲ. ಹೊಲಸು ಮಾತಿನ ಹಾಗು ಅಶುದ್ಧ ಸಂಗೀತದ ನಿಲಯಗಳನ್ನು ವರ್ಜಿಸಬೇಕು. ನಾಲಗೆಯ ಮೇಲೆ ಪೂರ್ಣ ನಿಯಂತ್ರಣವಿಡಬೇಕು. ಜಿಹ್ವೆಯ ಮೇಲೆ ಅಂಕೆಯಿಲ್ಲದವನಿಂದ ಇಂದ್ರಿಯ ನಿಗ್ರಹವು ಆಗದು. ನಾಲಗೆಯನ್ನು ಬಿಗಿ ಹಿಡಿಯುವದು ಕಠಿನವೆಂಬುದನ್ನು ನಾನು ಬಲ್ಲೆ. ಆದರೆ ಜಿಹ್ವಾಪ್ರಭುತ್ವವೆಂದರೆ ತಾನಾಗಿಯೇ ಇತರ ಇಂದ್ರಿಯಗಳ ಪ್ರಭುತ್ವ. ಮಸಾಲೆಗಳನ್ನು ಪೂರ್ಣವಾಗಿ ಇಲ್ಲವೆ ಶಕ್ಯವಿದ್ದಷ್ಟು ಬಿಟ್ಟುಬಿಡುವದೇ ಜಿಹ್ವಾನಿಗ್ರಹದ ನಿಯಮಗಳಲ್ಲಿ ಒಂದಾಗಿದೆ. ನಾವು ಉಣ್ಣುವ ಅನ್ನವು ದೇಹಪೋಷಣೆಗಾಗಿದೆಯಲ್ಲದೆ ಜಿಹ್ವಾತೃಪ್ತಿಗಾಗಿಯಲ್ಲೆಂಬ ಭಾವನೆಯನ್ನು ಬೆಳೆಸಿಕೊಳ್ಳುವದು ಇನ್ನೊಂದು ಕಠಿನವಾದ ನಿಯಮ. ವಾಯುವನ್ನು ನಾವು ಸೇವಿಸುವದು ಭೋಗಕ್ಕಾಗಿಯಲ್ಲ, ಉಸಿರಾಡಿಸುವದಕ್ಕಾಗಿ, ನೀರಡಿಕೆಯನ್ನು ಆರಿಸಿಕೊಳ್ಳುವದಕ್ಕಾಗಿ ನೀರು ಕುಡಿಯುವೆವು; ಹಾಗೆಯೆ ನಾವು ನಮ್ಮ ಹಸಿವನ್ನು ಹಿಂಗಿಸುವದಕ್ಕಾಗಿ ಉಣ್ಣಬೇಕು. ಆದರೆ ಶೈಶವದಿಂದ ಆರಂಭಿಸಿ ಮುಂದೆ ಮುಂದೆ ನಮ್ಮನ್ನು ಬೇರೆ ವ್ಯಸನಕ್ಕೆ ಎಳೆದೊಯ್ಯಲಾಗುತ್ತದೆ. ನಮ್ಮ ಪೋಷಣೆಗೋಸುಗವಲ್ಲ, ಆದರೆ ನಮ್ಮ ಮೇಲೆ ಪ್ರೀತಿಯ ಮಳೆಯನ್ನು ಸುರಿಯುವದಕ್ಕಾಗಿ ಎಲ್ಲ ಬಗೆಯ ರುಚಿಗಳನ್ನೂ ನೋಡಲು ನಮ್ಮ ತಾಯ್ತಂದೆಗಳು ಕಲಿಸುತ್ತಾರೆ. ಹೀಗೆ ನಾವು ಹಾಳಾಗುತ್ತೇವೆ. ಆದುದರಿಂದ ನಮ್ಮ ಪಾಲನೆ ಪೋಷಣೆಯ ನಿಯಮಗಳ ವಿರುದ್ಧವೇ ನಾವು ಹೋರಾಡಬೇಕಾಗುತ್ತದೆ.

ಆದರೆ ಇಂದ್ರಿಯಭೋಗೇಚ್ಛೆಯನ್ನು ನಿಯಂತ್ರಿಸಲು ಒಂದು ಸುವರ್ಣ ನಿಯಮವಿದೆ. ರಾಮನಾಮ ಅಥವಾ ಅಂತಹ ಮಂತ್ರದ ಪುರಶ್ಚರಣ ಪಾರಾಯಣವೇ ಅದು. 'ಓಂ ನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಾಕ್ಷರ ಮಂತ್ರದಿಂದ ಈ ಕಾರ್ಯವಾಗುತ್ತದೆ. ಪ್ರತಿಯೊಬ್ಬನೂ ತನ್ನ ಇಷ್ಟದಂತೆ ಮಂತ್ರವನ್ನು ಆರಿಸಿಕೊಳ್ಳಬೇಕು. ನನ್ನ ಬಾಲ್ಯದಲ್ಲಿ ನನಗೆ ರಾಮನಾಮವನ್ನು ಹೇಳಿಕೊಟ್ಟದ್ದರಿಂದ ನಾನು ಅದನ್ನು ಇಲ್ಲಿ ಹೇಳಿದ್ದೇನೆ. ಆದರಿಂದ ನನಗೆ ಯಾವಾಗಲೂ ಬಲವು ದೊರೆತಿದೆ. ಯಾವದೇ ಮಂತ್ರವನ್ನು ಪಡೆದರೂ ಅದನ್ನು ಪಠಿಸುವಾಗ ತಾದಾತ್ಮ್ಯವನ್ನು ಹೊಂದಬೇಕು. ಆ ಮಂತ್ರವು ಆತನ ಜೀವನದ ದೀಪವಾಗುವದಲ್ಲದೆ ದುಃಖದಿಂದ ಅವನನ್ನು ಮುಕ್ತಮಾಡುವದು. ಇಂತಹ ಪವಿತ್ರ ಮಂತ್ರಗಳನ್ನು ಎಂದೂ ಭೌತಿಕ ಉದ್ದೇಶಗಳಿಗಾಗಿ ಉಪಯೋಗಿಸಕೂಡದೆಂಬುದು ಸ್ಪಷ್ಟ. ನೀತಿಯನ್ನು ಬೆಳೆಸಿಕೊಳ್ಳಲು ಮಾತ್ರ ಇವುಗಳ ಉಪಯೋಗವನ್ನು ಮಾಡುತ್ತ ಹೋದರೆ ಅದರ ಫಲವು ಅದ್ಭುತವಾಗುವದು. ಗಿಳಿಪಾಠದಂತೆ ಇಂತಹ ಮಂತ್ರದ ಕೇವಲ ಉಚ್ಚಾರವು ನಿಷ್ಪ್ರಯೋಜಕ. ಆದರಲ್ಲಿ ತನ್ನ ಆತ್ಮವನ್ನೇ ತುಂಬಿಬಿಡಬೇಕು. ಗಿಳಿಯು ಯಂತ್ರದಂತೆ ಪಠಿಸುತ್ತದೆ: ಅನಿಷ್ಟ ವಿಚಾರಗಳನ್ನು ಬರಗೊಡದಿರಲು ಆ ಮಂತ್ರಗಳ ಶಕ್ತಿಯಲ್ಲಿ ಪೂರ್ಣ ಶ್ರದ್ಧೆಯನ್ನಿಟ್ಟುಕೊಂಡು ನಾವು ಅವುಗಳನ್ನು ಜಪಿಸಬೇಕು.

(ಯಂಗ್ ಇಂಡಿಯಾ : ೫-೬-೨೪)

ಸಂತತಿ ನಿಯಂತ್ರಣ

ಸಂತತಿ ನಿಯಂತ್ರಣದ ಅವಶ್ಯಕತೆಯ ವಿಷಯದಲ್ಲಿ ಮತಭೇದಕ್ಕೆ ಅವಕಾಶವೇ ಇಲ್ಲ. ಆದರೆ ಪ್ರಾಚೀನ ಕಾಲದಿಂದಲೂ ಪರಂಪರೆಯಾಗಿ ಬಂದ ಒಂದೇ ಒಂದು ರೀತಿಯೆಂದರೆ ಬ್ರಹ್ಮಚರ್ಯೆ ಅಥವಾ ಆತ್ಮಸಂಯಮ. ಅದನ್ನು ಪಾಲಿಸುವವರಿಗೆ ಒಳಿತನ್ನು ಮಾಡುವ ದೋಷರಹಿತವಾದ ಅತ್ಯುತ್ತಮ ಉಪಾಯವೇ ಅದಾಗಿದೆ. ಸಂತತಿ ನಿಯಮನದ ಕೃತಕ ಉಪಾಯಗಳನ್ನು ಹುಡುಕುವ ಬದಲು ಆತ್ಮನಿಗ್ರಹದ ಸಾಧನಗಳನ್ನು ಶೋಧಿಸಿದರೆ

ವೈದ್ಯಶಾಸ್ತ್ರಜ್ಞರಿಗೆ ಮಾನವಕುಲವೇ ಋಣಿಯಾಗಿರುವದು. ಸ್ತ್ರೀಪುರುಷ ಸಂಯೋಗವು ಬರೀ ಭೋಗಕ್ಕಾಗಿರದೆ ಸಂತತಿಜನನಕ್ಕಾಗಿದೆ. ಸಂತತಿ ಜನನದ ಇಚ್ಛೆಯಿಲ್ಲದಿರುವಾಗ ಮಾಡಿದ ಸ್ತ್ರೀ ಸಂಭೋಗವು ಮಹಾಪರಾಧ.

ದುರಾಚಾರಕ್ಕೆ ಉತ್ತೇಜನವು ಕೃತಕ ಉಪಾಯಗಳಿಂದ ದೊರೆಯುತ್ತದೆ. ಸ್ತ್ರೀಯನ್ನು ಪುರುಷನನ್ನು ನೀವು ಸ್ವೇಚ್ಛಾಚಾರಿಯನ್ನಾಗಿ ಮಾಡುವಿರಿ. ಲೋಕಾಭಿಪ್ರಾಯವು ಸಂಯಮಗಳಿಗೆ ಕೊಡುತ್ತಿರುವ ಗೌರವವು ಕೃತಕ ಉಪಾಯಗಳಿಗೆ ನೀಡಲಾಗುತ್ತಿರುವ ಆದರದಿಂದ ಹಾಳಾಗಿ ಹೋಗುವದು. ಕೃತಕ ಉಪಾಯಗಳ ಅಂಗೀಕಾರದಿಂದ ನಪುಂಸಕತ್ವವೂ ಸ್ನಾಯು ದೌರ್ಬಲ್ಯವೂ ಉಂಟಾಗುವದು ನಿಶ್ಚಿತ. ಬೇನೆಗಿಂತ ಮದ್ದೇ ಕೆಟ್ಟದೆಂದು ಕಂಡುಬರುವದು. ತನ್ನ ಕೃತಿಗಳ ಹೊಣೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುವದು ತಪ್ಪು ಹಾಗು ಅನೈತಿಕ. ಬಹಳ ಉಣ್ಣುವವನು ಹೊಟ್ಟೆಕಡಿತದಿಂದ ನರಳುವದು ಹಾಗು ಬಳಿಕ ಉಪವಾಸ ಮಾಡುವದು ಯೋಗ್ಯ. ಹೊಟ್ಟೆಬಾಕತನಕ್ಕೆ ಅನಿರ್ಬಂಧ ಅವಕಾಶವನ್ನು ಕೊಟ್ಟು ಅದರ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಪೌಷ್ಟಿಕ ಔಷಧಗಳನ್ನಾಗಲಿ ಪಟಿಕಚೂರ್ಣಾದಿಗಳನ್ನಾಗಲಿ ಸೇವಿಸುವದು ಲೇಸಲ್ಲ. ತನ್ನ ಪಶುವಿಕಾರಗಳಿಗೆ ಯಥೇಷ್ಟ ಅವಕಾಶವನ್ನು ಕೊಟ್ಟು ಅದರ ಪರಿಣಾಮಗಳನ್ನು ತಪ್ಪಿಸಿಕೊಳ್ಳುವದು ಅದಕ್ಕಿಂತಲೂ ನಿಂದ್ಯವಾದುದು. ತನ್ನ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಪ್ರಕೃತಿಯು ನಿರ್ದಯವಾಗಿರುವದರಿಂದ ತನ್ನ ಪೂರ್ಣ ಸೇಡನ್ನು ತೀರಿಸಿಕೊಳ್ಳುವಳು. ನೈತಿಕ ಪರಿಣಾಮಗಳು ನೈತಿಕ ಸಂಯಮಗಳಿಂದಲೇ ಉಂಟಾಗುವವು. ಉಳಿದ ಸಂಯಮಗಳು ಅವುಗಳ ಮುಖ್ಯೋದ್ದೇಶವನ್ನೇ ಹಾಳುಮಾಡಿಬಿಡುವವು. ಕೃತಕ ಉಪಾಯಗಳನ್ನು ಯೋಜಿಸುವಲ್ಲಿ ಕಂಡುಬರುವ ಬುದ್ಧಿವಾದದ ಬುಡದಲ್ಲಿ ಇಂದ್ರಿಯಭೋಗವು ಅವಶ್ಯವೆಂಬ ಕಲ್ಪನೆಯಿದೆ. ಇದಕ್ಕಿಂತ ಹೆಚ್ಚಿನ ಸದೋಷ ವಿಚಾರವಿನ್ನೊಂದಿಲ್ಲ. ಸಂತತಿಯನ್ನು ನಿಯಮನಗೊಳಿಸಲು ಆತುರರಾಗಿರುವವರು ಪುರಾತನರಿಂದ ಯೋಜಿಸಲ್ಪಟ್ಟದ್ದ ನೀತಿಪೂರ್ಣವಾದ ನಿಯಮಗಳನ್ನು ಪೂರ್ಣವಾಗಿ ಸಂಶೋಧಿಸಿ ಅವುಗಳನ್ನು ಹೇಗೆ ಪುನರುಜ್ಜೀವಿಸಬಹುದೆಂಬುದನ್ನು ಕಂಡುಹಿಡಿಯಲಿ. ಅವರ ಮುಂದೆ ಬೆಟ್ಟದಷ್ಟು ಕೆಲಸ ಬಿದ್ದಿದೆ. ಬಾಲ್ಯವಿವಾಹಗಳು ಜನಸಂಖ್ಯೆಯ ಬೆಳವಣಿಗೆಗೆ ಕಾರಣಗಳಾಗಿವೆ. ಅನಿಯಂತ್ರಿತ

ಪ್ರಜಾಸಂಖ್ಯೆಯ ಅನರ್ಥಕ್ಕೆ ಇಂದಿನ ಜೀವನದ ರೀತಿಯೂ ಕಾರಣವಾಗಿದೆ. ಈ ಕಾರಣಗಳನ್ನು ಪರಾಮರ್ಶಿಸಿ ಯೋಗ್ಯ ಉಪಾಯಗಳನ್ನು ಕಂಡುಹಿಡಿದರೆ ಸಮಾಜವು ನೈತಿಕದೃಷ್ಟಿಯಿಂದ ಉನ್ನತವಾಗುವದು. ಆತುರರಾದ ಉತ್ಸಾಹಿಗಳು ಇದನ್ನು ಕಡೆಗಣಿಸಿ ಕೃತಕ ಉಪಾಯಗಳಿಗೆ ಉತ್ತೇಜನವನ್ನಿತ್ತು ಅವು ದಿನಬಳಕೆಯ ಕಾರ್ಯಗಳಾಗುವಂತೆ ಮಾಡಿದರೆ ನೈತಿಕ ಅಧೋಗತಿಯ ಹೊರತು ಬೇರಿನ್ನಾವ ಫಲವೂ ದೊರೆಯದು. ವಿವಿಧ ಕಾರಣಗಳ ಮೂಲಕ ಈಗಾಗಲೇ ನರಗುಂದಿದ ಸಮಾಜವು ಕೃತಕ ಉಪಾಯಗಳ ಅಂಗೀಕಾರದಿಂದ ಮತ್ತಷ್ಟು ಬಲಹೀನವಾಗುವದು. ಕೃತಕ ಉಪಾಯಗಳನ್ನು ಹಗುರಾಗಿ ಪುರಸ್ಕರಿಸುವ ಮಹಾಶಯರು ಮತ್ತೊಮ್ಮೆ ಈ ವಿಷಯವನ್ನು ಅಭ್ಯಸಿಸುವದೊಳಿತು. ಮತ್ತು ತಮ್ಮ ಅಪಾಯಕರ ಚಟುವಟಿಕೆಯನ್ನು ತಡೆಹಿಡಿದು ವಿವಾಹಿತರಿಗೂ ಅವಿವಾಹಿತರಿಗೂ ಬ್ರಹ್ಮಚರ್ಯೆಯಿಂದಾಗುವ ಹಿತವನ್ನು ಬಿಂಬಿಸಬೇಕು. ಸಂತತಿ ನಿಯಮನಕ್ಕೆ ಇದೊಂದೇ ನೇರವಾದ ಹಾಗು ಉದಾತ್ತವಾದ ಉಪಾಯ.

(ಯಂಗ್ ಇಂಡಿಯಾ : ೧೧-೩-೨೫)

ಬ್ರಹ್ಮಚರ್ಯೆಯ ಮೆಟ್ಟಲುಗಳು

ಆದರ ಅವಶ್ಯಕತೆಯ ಅರಿವೇ ಮೊದಲ ಮೆಟ್ಟಲು. ಕ್ರಮೇಣ ಇಂದ್ರಿಯ ನಿಗ್ರಹ ಸಾಧನೆಯು ಎರಡನೆಯ ಹೆಜ್ಜೆ. ಬ್ರಹ್ಮಚಾರಿಯು ನಾಲಗೆಯನ್ನು ಬಿಗಿಹಿಡಿಯಲೇ ಬೇಕು. ಬದುಕಲಿಕ್ಕೆ ಉಣಬೇಕಲ್ಲದೆ ಭೋಗಕ್ಕಾಗಿಯಲ್ಲ. ನಿರ್ಮಲವಾದ ವಸ್ತುಗಳನ್ನು ಮಾತ್ರ ಆತನು ನೋಡಬೇಕಲ್ಲದೆ ಹೊಲಸು ವಿಷಯಗಳನ್ನು ಕಂಡರೆ ಕಣ್ಣು ಮುಚ್ಚಬೇಕು. ನೆಲವನ್ನು ನೋಡುತ್ತ ಕೆಳಗೆ ಮುಖಮಾಡಿಕೊಂಡು ನಡೆಯುವದು ನಮ್ರತೆಯ ಲಕ್ಷಣ; ಕಂಡಕಂಡ ವಸ್ತುವನ್ನು ನೋಡುತ್ತ ನಡೆಯುವದು ಯೋಗ್ಯ ಲಕ್ಷಣವಲ್ಲ. ಹಾಗೆಯೆ ಬ್ರಹ್ಮಚಾರಿಯು ಅಶ್ಲೀಲ ಮಾತುಗಳನ್ನು ಕೇಳಕೂಡದು, ಮತ್ತು ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳಬಾರದು ಹಾಗು ಅವುಗಳ ವಾಸನೆಯನ್ನು ತೆಗೆದುಕೊಳ್ಳಬಾರದು. ಹಸನಾದ ನೆಲದ

ವಾಸನೆಯು ಕೃತಕ ಗಂಧೆಣ್ಣೆ ಅತ್ತರಗಳಿಗಿಂತ ಶ್ರೇಷ್ಠವಾಗಿರುತ್ತದೆ. ಬ್ರಹ್ಮಚಾರಿಯಾಗಬಯಸುವವನು ತನ್ನ ಕೈಕಾಲುಗಳನ್ನು ಒಳ್ಳೆಯ ಕಾರ್ಯಗಳಲ್ಲಿ ತೊಡಗಿಸಲಿ. ಆಗಾಗ್ಗೆ ಅವನು ಉಪವಾಸವನ್ನು ಮಾಡಲಿ.

ಸದ್ಗುಣಿಗಳಾದ ಮಿತ್ರರನ್ನು—ಒಳಿತಾದ ಪುಸ್ತಕಗಳನ್ನು ಸನ್ಮಿತ್ರರನ್ನು—ಪಡೆಯುವದು ಮೂರನೆಯ ಮೆಟ್ಟಲು.

ಕೊನೆಯದು, ಆದರೆ ಕನಿಷ್ಠವಲ್ಲದ ಮೆಟ್ಟಲೆಂದರೆ ಪ್ರಾರ್ಥನೆ. ಪ್ರತಿದಿನವೂ ಮನಃಪೂರ್ವಕವಾಗಿ ರಾಮನಾಮವನ್ನು ಜಪಿಸಲಿ ಮತ್ತು ದೈವಾನುಗ್ರಹವನ್ನು ಕೇಳಿಕೊಳ್ಳಲಿ.

ಸಾಮಾನ್ಯ ಸ್ತ್ರೀಪುರುಷರಿಗೆ ಇವುಗಳಲ್ಲಿ ಯಾವುದೂ ಕಠಿನವಿಲ್ಲ. ಅವು ಬಹಳ ಸರಲವಾಗಿವೆ. ಅವುಗಳ ಸರಲತೆಯೇ ತೊಂದರೆಯನ್ನು ಕೊಡುತ್ತದೆ. ಮನಸ್ಸಿದ್ದಲ್ಲಿ ಮಾರ್ಗವು ಸುಲಭವಿದೆ. ಮನುಷ್ಯರಿಗೆ ಅದರ ಇಚ್ಛೆಯಿಲ್ಲ. ಅದಕ್ಕಾಗಿ ಅವರು ಕತ್ತಲಲ್ಲಿ ತಡವರಿಸುತ್ತಿರುವರು ನಿರರ್ಥಕವಾಗಿ. ಬ್ರಹ್ಮಚರ್ಯದ ಪಾಲನೆಯ ಮೇಲೆಯೇ ಹೆಚ್ಚು ಕಡಿಮೆ ಜಗತ್ತು ಅವಲಂಬಿಸಿದೆಯೆಂಬ ಸಂಗತಿಯಿಂದ ಅದು ಅವಶ್ಯ ಹಾಗು ವ್ಯವಹಾರ್ಯವೆಂಬ ಮಾತು ಸ್ಪಷ್ಟವಾಗುತ್ತದೆ.

ಬ್ರಹ್ಮಚರ್ಯೆ

ಬ್ರಹ್ಮಚರ್ಯೆಯೆಂದರೇನು? ಬ್ರಹ್ಮನೆಡೆಗೆ ಅಂದರೆ ದೇವರೆಡೆಗೆ ನಮ್ಮನ್ನು ಕರೆದೊಯ್ಯುವ ಬಾಳ ದಾರಿಯದು. ಪ್ರಜೋತ್ಪಾದನ ಕ್ರಮದ ಮೇಲೆ ಪೂರ್ಣ ನಿಯಂತ್ರಣವೂ ಅದರಲ್ಲಿ ಸೇರಿದೆ. ನಿಯಂತ್ರಣವು ಮನೋವಾಕ್ಕಾಯಗಳಲ್ಲಿ ಬೇಕು. ಆಲೋಚನೆಯ ಮೇಲೆ ನಿಯಂತ್ರಣ ವಿಲ್ಲದಿದ್ದರೆ ಉಳಿದೆರಡು ನಿಯಂತ್ರಣಗಳು ವ್ಯರ್ಥ. ಹಿಂದುಸ್ತಾನಿಯಲ್ಲಿ ಒಂದು ನಾಣ್ಣುಡಿಯಿದೆ. "ಅಂತಃಕರಣವು ಶುದ್ಧವಿರುವವನ ಮನೆಯಲ್ಲಿ ಗಂಗಾದಿ ತೀರ್ಥಗಳೆಲ್ಲ ಇರುವವು" ಎಂಬುದೇ ಆ ಗಾದೆ. ವಿಚಾರಗಳು ಅಂಕೆಯಲ್ಲಿರುವವನಿಗೆ ಉಳಿದುವೆಲ್ಲ ಕೇವಲ ಆಟ. ನನ್ನ ಕಲ್ಪನೆಯ ಬ್ರಹ್ಮಚಾರಿಯು ನಿರೋಗಿಯೂ ದೀರ್ಘಾಯುವೂ ಆಗಿರುವನು.

ಅವನಿಗೆ ತಲೆಸೋವಿನ ಬಾಧೆಯೂ ಆಗದು. ಮಾನಸಿಕ ಹಾಗು ದೈಹಿಕ ಕಾರ್ಯದಿಂದ ಅವನಿಗೆ ದಣಿವಾಗದು. ಅವನು ಯಾವಾಗಲೂ ತೇಜಸ್ವಿಯಾಗಿರುವನು. ಎಂದೂ ಸೋಮಾರಿಯಾಗಿರುವದಿಲ್ಲ. ಬಾಹ್ಯ ಅಚ್ಚುಕಟ್ಟುತನವು ಒಳಗಿನ ಒಳುಪಿನ ಪ್ರತಿಬಿಂಬವೇ ಆಗಿರುವದು. ಗೀತೆಯಲ್ಲಿ ಬಣ್ಣಿಸಿದ ಸ್ಥಿತಪ್ರಜ್ಞನ ಲಕ್ಷಣಗಳನ್ನೆಲ್ಲ ಅವನು ತೋರುವನು. ಈ ವರ್ಣನೆಯಂತಿರುವ ಒಬ್ಬನೂ ಸಿಕ್ಕದಿದ್ದರೆ ಬೇಸರಪಡಬೇಕಾಗಿಲ್ಲ.

ಮಾನವಪ್ರಾಣಿಗಳ ಉತ್ಪತ್ತಿಯ ಶಕ್ತಿಯನ್ನು ಪಡೆದ ವೀರ್ಯವನ್ನು ಸಂಗ್ರಹಿಸಿ ಅದನ್ನು ಊರ್ಧ್ವಮುಖ ಮಾಡುವದರಿಂದ ಮೇಲೆ ಹೇಳಿದ ಲಕ್ಷಣಗಳನ್ನೆಲ್ಲ ಒಬ್ಬನಲ್ಲಿ ಕಾಣುವಲ್ಲಿ ಆಶ್ಚರ್ಯವೇನು ? ಇಂತಹ ಊರ್ಧ್ವಮುಖತೆಯ ಶಕ್ತಿಯನ್ನು ಯಾವನು ಅಳೆದು ಹೇಳಬಲ್ಲನು ? ಪತಂಜಲಿಯು ಐದು ವಿಧಿಗಳನ್ನು ಹೇಳಿದ್ದಾನೆ. ಒಂದನ್ನು ಬೇರ್ಪಡಿಸಿ ಇನ್ನೊಂದನ್ನು ಪಾಲಿಸುವದು ಸಾಧ್ಯವಿಲ್ಲ. ಸತ್ಯವೊಂದರ ವಿಷಯದಲ್ಲಿ ಹಾಗೆ ಹೇಳಬಹುದು; ಏಕೆಂದರೆ ಅದರಲ್ಲಿ ಉಳಿದ ನಾಲ್ಕು ವಿಧಿಗಳೂ ಸೇರಿವೆ. ಈಗಿನ ಯುಗಕ್ಕೆ ಆ ಐದನ್ನು ಬೆಳೆಸಿ ಹನ್ನೊಂದನ್ನಾಗಿ ಮಾಡಿ ಹೇಳಲಾಗಿದೆ. ಆಚಾರ್ಯ ವಿನೋಬಾ ಅವರು, ಅವುಗಳನ್ನು ಮರಾಠಿ ಪದ್ಯರೂಪದಲ್ಲಿ ಹೇಳಿದ್ದಾರೆ. ಅವು ಹೀಗಿವೆ: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಶಾರೀರಿಕ ಶ್ರಮ, ಜಿಹ್ವಾನಿಗ್ರಹ, ಅಭಯ, ಸರ್ವಧರ್ಮ ಸಮನ್ವಯ, ಸ್ವದೇಶಿ ಮತ್ತು ಅಸ್ಪೃಶ್ಯತಾ ನಿವಾರಣೆ.

ಇವುಗಳನ್ನೆಲ್ಲ ಸತ್ಯದಿಂದ ಪಡೆಯಬಹುದು. ಆದರೆ ಜೀವನವು ಬಹಳ ಜಟಿಲವಾಗಿದೆ. ಒಂದು ಮಹಾತತ್ವವನ್ನು ಹೇಳಿ ಅದರಿಂದ ಉಳಿದುವುಗಳೆಲ್ಲ ಹೊರಸೂಸುವವೆಂದು ಬಿಡುವದು ಶಕ್ಯವಿಲ್ಲ. ನಮಗೊಂದು ಮಾತು ಗೊತ್ತಿದ್ದರೂ ಅದರ ಉಪಾಂಗಗಳನ್ನು ಚೆನ್ನಾಗಿ ಲೆಕ್ಕಕ್ಕೆ ಹಿಡಿಯಬೇಕಾಗುವದು.

ಎಲ್ಲ ಸಂಯಮಗಳೂ ಅಷ್ಟೇ ಮಹತ್ವದ್ದೆಂದು ತಿಳಿಯುವದೊಳಿತು. ಒಂದನ್ನು ಮುರಿದರೆ ಎಲ್ಲವೂ ಮುರಿಯುವವು. ಸತ್ಯ ಅಥವಾ ಅಹಿಂಸೆಯ ಉಲ್ಲಂಘನೆಯು ಕ್ಷಮ್ಯವೆಂದು ನಮ್ಮಲ್ಲಿ ಸಾಮಾನ್ಯ ತಿಳಿವಳಿಕೆಯಿದ್ದಂತೆ ತೋರುತ್ತದೆ. ಅಸ್ತೇಯ ಅಪರಿಗ್ರಹಗಳನ್ನಂತೂ ಕ್ವಚಿತ್ತಾಗಿ ಉಲ್ಲೇಖಿಸಲಾಗುತ್ತಿದೆ. ಅವುಗಳ ಪಾಲನೆಯ ಆವಶ್ಯಕತೆಯನ್ನು ಗುರುತಿಸಿದವರೇ

ವಿರಲ. ಆದರೆ ಬ್ರಹ್ಮಚರ್ಯದ ಉಲ್ಲಂಘನೆಯಿಂದ ಕೋಪೋದ್ರೇಕವಾಗುತ್ತದೆಯಲ್ಲದೆ ಅನಾಹುತಗಳೂ ಸಂಭವಿಸುತ್ತವೆ. ಯಾವುದೊಂದು ವಿಷಯದ ಮಹತ್ವದ ಬಗ್ಗೆ ಅತಿಶಯೋಕ್ತಿಯಿದ್ದ ಅಥವಾ ಅನಾದರವಿದ್ದ ಸಮಾಜದಲ್ಲಿ ಏನೋ ತಪ್ಪಿರುತ್ತದೆ. ಅಲ್ಲದೆ ಬ್ರಹ್ಮಚರ್ಯವೆಂಬ ಶಬ್ದವನ್ನು ಸಂಕುಚಿತ ಅರ್ಥದಲ್ಲಿ ಪ್ರಯೋಗಿಸುವದು ಅದರ ಮಹತ್ವವನ್ನು ಕಡಿಮೆ ಮಾಡಿದಂತೆಯೇ ಸರಿ. ಇಂತಹ ವಿಪರೀತತೆಯಿಂದ ಅದರ ಪಾಲನೆಯು ಇನ್ನಷ್ಟು ಕಠಿನವಾಗುತ್ತದೆ. ಅದನ್ನು ಪ್ರತ್ಯೇಕಿಸಿದರೆ ಅದರ ಅತ್ಯಂತ ಸಾಮಾನ್ಯ ಪಾಲನೆಯೂ ಅಶಕ್ಯವಾಗದಿದ್ದರೂ ಕಠಿನವಾಗುತ್ತದೆ. ಆದುದರಿಂದ ಎಲ್ಲ ನಿಗ್ರಹಗಳನ್ನೂ ಒಂದೇ ಎಂದು ತಿಳಿಯುವದು ಅವಶ್ಯ. ಇದರಿಂದ ಬ್ರಹ್ಮಚರ್ಯದ ಪೂರ್ಣ ಮಹತ್ವ ಹಾಗೂ ಘನತೆಯನ್ನು ಗುರುತಿಸಲು ಅನುಕೂಲವಾಗುವದು. (ಹರಿಜನ : ೮-೬-೪೭)

ಕಾವಲುಗೋಡೆಗಳು

ಪೂರ್ಣ ಬ್ರಹ್ಮಚಾರಿಯಾದವನಿಗೆ ಯಾವ ಕಾವಲು ಗೋಡೆಗಳೂ ಬೇಕಾಗುವದಿಲ್ಲ. ಆದರೆ ಬ್ರಹ್ಮಚಾರಿಯಾಗಬಯಸುವವನಿಗೆ ಮಾತ್ರ ಎಳೆಯ ಮಾವಿನ ಸಸಿಗೆ ಬೇಲಿಯು ಬೇಕಾಗುವಂತೆ ಅಂತಹ ಕಾವಲು ಗೋಡೆಗಳು ಬೇಕಾಗುವವು. ಕೂಸು ತಾಯಿಯ ಮಡಿಲಿನಿಂದ ತೊಟ್ಟಲಿಗೆ ಹೋಗುತ್ತದೆ. ಅಲ್ಲಿಂದ ಅದು ತನಗೆ ಪೂರ್ಣವಾಗಿ ಕೈಗಾಡಿಯ ನೆರವಿಲ್ಲದೆ ನಡೆಯಲು ಬರುವತನಕ ಗಾಡಿಯನ್ನು ಹಿಡಿದುಕೊಂಡು ನಡೆದಾಡುತ್ತದೆ. ಅಗತ್ಯವಿಲ್ಲದಿದ್ದರೂ ಆಸರವನ್ನು ಹಿಡಿದುಕೊಂಡಿರುವದು ಅಪಾಯಕರ.

ಬ್ರಹ್ಮಚರ್ಯವು ಮಾನಸಿಕ ಸ್ಥಿತಿ. ವ್ಯಕ್ತಿಯ ಬಾಹ್ಯ ನಡತೆಯು ಆತನ ಅಂತಃಸ್ಥಿತಿಯ ಸ್ಪಷ್ಟದ್ಯೋತಕ. ಲೈಂಗಿಕ ಪ್ರೇರಣೆಯನ್ನು ಪೂರ್ಣವಾಗಿ ನಾಶಮಾಡಿಕೊಂಡಿರುವವನು ಯಾವವೇ ರೂಪದಲ್ಲಿಯೂ ಅದರ ಅಪರಾಧಕ್ಕೆ ಗುರಿಯಾಗುವದಿಲ್ಲ. ಒಬ್ಬ ಹೆಂಗಸು ಎಷ್ಟೇ ಸುಂದರಿಯಾಗಿದ್ದರೂ ಲೈಂಗಿಕ ಪ್ರೇರಣೆಯಿಲ್ಲದವನಲ್ಲಿ ಆಕೆಯ ಸೌಂದರ್ಯಾಕರ್ಷಣೆಯ ಆಟವು ನಡೆಯುವದಿಲ್ಲ. ಆ ನಿಯಮವೇ ಹೆಂಗಸಿಗೂ ಅನ್ವಯಿಸುತ್ತದೆ.

ಆದರೆ ಕಾಮುವನ್ನು ಜಯಿಸದಿದ್ದ ಸ್ತ್ರೀಯಾಗಲೀ ಪುರುಷನಾಗಲೀ ತನ್ನ ಅಕ್ಕ-ತಂಗಿ ಅಣ್ಣ-ತಮ್ಮ ಮಗ-ಮಗಳು ಇವರೇ ಮೊದಲಾದ ಯಾರ ಕಡೆಗೂ ನೋಡಬಾರದು. ಈ ಉಪದೇಶವನ್ನು ನಾನು ನನ್ನ ಮಿತ್ರರಿಗೆ ಕೊಟ್ಟಿದ್ದೇನೆ. ಆದರಿಂದ ಅವರಿಗೆ ಹಿತವಾಗಿದೆ.

ಬ್ರಹ್ಮಚಾರಿಯಾಗಬಯಸುವವನಿಗೆ ಕೆಲವು ನಿಯಮಗಳನ್ನು ಭಾರತದಲ್ಲಿ ಹಾಕಿಕೊಡಲಾಗಿದೆ. ಅವು ಹೀಗಿವೆ: ಸ್ತ್ರೀಯರ ಮಧ್ಯದಲ್ಲಿ, ಪಶುಗಳ ಸಂಗಡ, ಹಾಗು ನಪುಂಸಕರೊಡನೆ ಇರಬಾರದು. ಒಬ್ಬಳೇ ಹೆಂಗಸಿಗಾಗಲಿ ಇಲ್ಲವೆ ಹೆಂಗಸರ ಗುಂಪಿಗಾಗಲಿ ಪಾಠಗಳನ್ನು ಕಲಿಸಬಾರದು. ಹೆಂಗಸರೊಡನೆ ಒಂದೇ ಹಾಸಿಗೆಯಮೇಲೆ ಕೂಡಬಾರದು. ಸ್ತ್ರೀಯ ಯಾವದೇ ಅಂಗವನ್ನು ದಿಟ್ಟಿಸಿ ನೋಡಕೂಡದು. ಹಾಲು, ಮೊಸರು, ತುಪ್ಪ, ಬೆಣ್ಣೆ ಮೊದಲಾದ ಸ್ನಿಗ್ಧ ಪದಾರ್ಥಗಳನ್ನು ತಿನ್ನಬಾರದು. ಎಣ್ಣೆ ಮಜ್ಜನ ಮಾಡಬಾರದು ಮತ್ತು ಎಣ್ಣೆಯಿಂದ ಮೈ ತಿಕ್ಕಿಸಿಕೊಳ್ಳಬಾರದು. ದಕ್ಷಿಣ ಆಫ್ರಿಕದಲ್ಲಿದ್ದಾಗ ನಾನಿವುಗಳನ್ನು ಓದಿದೆನು. ಅಲ್ಲಿ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದ ಕೆಲ ಸ್ತ್ರೀಪುರುಷರನ್ನು ನಾನು ಕಂಡೆನು. ಅವರಿಗೆ ಮೇಲೆ ಹೇಳಿದ ಈ ನಿಯಮಗಳು ಅವಶ್ಯವೆಂದು ಗೊತ್ತಿರಲಿಲ್ಲ. ನಾನಾದರೂ ಆ ನಿಯಮಗಳನ್ನು ಪಾಲಿಸಲಿಲ್ಲ. ಆದರೆ ಅದರಿಂದ ನನಗೇನೂ ಅಪಾಯವಾಗಿಲ್ಲ. ನಾನು ಹಾಲು ತುಪ್ಪ ಮೊದಲಾದ ಸ್ನಿಗ್ಧ ಪದಾರ್ಥಗಳನ್ನು ಬಿಟ್ಟೆನೇನೋ ನಿಜ; ಆದರೆ ಬೇರೆ ಕಾರಣಗಳಿಗಾಗಿ. ಭಾರತಕ್ಕೆ ನಾನು ಮರಳಿಬಂದಬಳಿಕ ಎರಡು ಮೂರು ವರ್ಷಗಳ ಅವಧಿಯಲ್ಲಿ ನನ್ನ ಈ ಪ್ರಯತ್ನದಲ್ಲಿ ಅಯಶಸ್ವಿಯಾದೆನು. ಆದರೆ ಹಾಲು ತುಪ್ಪಗಳಿಗೆ ಬದಲಾಗಿ ಏನಾದರೊಂದು ಪರಿಣಾಮಕಾರಿಯಾದ ತರಕಾರಿ ನನಗೆ ದೊರತರೆ ನಾನು ಹಾಲು ತುಪ್ಪ ಮೊದಲಾದ ಪ್ರಾಣಿಜನ್ಯ ಪದಾರ್ಥಗಳನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ. ಆದರೆ ಆ ಕಥೆಯು ಬೇರೆ.

ಪೂರ್ಣ ಬ್ರಹ್ಮಚಾರಿಯು ವೀರ್ಯವನ್ನು ಎಂದೂ ಹಾಳುಮಾಡಿಕೊಳ್ಳುವದಿಲ್ಲ. ತದ್ವಿರುದ್ಧ ದಿನದಿನಕ್ಕೆ ಅದನ್ನು ಬೆಳಸುತ್ತಾನಲ್ಲದೆ ಅದನ್ನು ಸಂಚಯಿಸುತ್ತಾನೆ. ಹೀಗಾಗಿ ಅವನು ಎಂದೂ ಮುದುಕನಾಗುವದಿಲ್ಲ ಮತ್ತು ಆತನ ಬುದ್ಧಿಯು ಎಂದೂ ಮುಂದವಾಗುವದಿಲ್ಲ.

ನಿಜವಾದ ಸಾಧಕನಿಗೆ ಮೇಲಿನ ನಿರ್ಬಂಧಗಳು ಬೇಕೆಂದು ನನಗನಿ

ಸುವದಿಲ್ಲ. ಬಾಹ್ಯ ನಿರ್ಬಂಧಗಳಿಂದ ಸಾಧಿಸುವಂತಹ ಸದಾಚಾರವೂ ಬ್ರಹ್ಮಚರ್ಯವಲ್ಲ. ಮಹಿಳೆಯ ಆವಶ್ಯಕ ಸಂಪರ್ಕದಿಂದ ಓಡಿ ಹೋಗುವವನಿಗೆ ಬ್ರಹ್ಮಚರ್ಯದ ಪೂರ್ಣ ಅರ್ಥವು ತಿಳಿಯಲಾರದು.

ನಿಜವಾದ ನಿಗ್ರಹದ ನಿಯಮವಿಲ್ಲದಂತಹ ಜೀವನಕ್ಕೆ ನನ್ನ ಈ ಬರಹವು ಉತ್ತೇಜನವನ್ನೀಯುತ್ತಿದೆಯೆಂದು ಓದುಗನಾವನೂ ತಿಳಿಯದಿರಲಿ. ಪ್ರಾಮಾಣಿಕ ಪ್ರಯತ್ನದಲ್ಲಿ ಡಾಂಭಿಕತನಕ್ಕೆ ಯಾವ ಅವಕಾಶವೂ ಇಲ್ಲ.

ಡಾಂಭಿಕತನ ಮತ್ತು ಸ್ವರತಿಗಳನ್ನು ಬಿಟ್ಟುಬಿಡಬೇಕು. ನಿಜವಾದ ಬ್ರಹ್ಮಚಾರಿಯು ಸುಳ್ಳು ಸಂಯಮಗಳನ್ನು ತಿರಸ್ಕರಿಸುವನು. ತನ್ನ ಯೋಗ್ಯತಾನುಸಾರ ತನಗೆ ಅವಶ್ಯವಿದ್ದ ರಕ್ಷಣೆಯ ನಿಯಮಗಳನ್ನು ಆತನು ತಾನೇ ಮಾಡಿಕೊಳ್ಳಬೇಕು ಮತ್ತು ಅವು ಅನವಶ್ಯವಾದಂತೆ ಅವುಗಳನ್ನು ಬಿಟ್ಟುಕೊಡುತ್ತ ಹೋಗಬೇಕು. ಬ್ರಹ್ಮಚರ್ಯವೆಂದರೇನೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಬಳಿಕ ಅದರ ಮಹತ್ವವನ್ನು ಅರಿತು ಅದು ಅಮೂಲ್ಯ ಸದ್ಗುಣವೆಂದು ಆಚರಿಸಲು ಯತ್ನಿಸಬೇಕು. ದೇಶದ ನಿಜವಾದ ಸೇವೆಗೆ ಇದು ಅಗತ್ಯವೆಂದು ನನ್ನ ಅಭಿಪ್ರಾಯ.

(ಹರಿಜನ : ೧೫-೬-೪೭)

ಪರಮಾತ್ಮನ ಸಂಬಂಧದಲ್ಲಿ ಬ್ರಹ್ಮಚರ್ಯ

ಬ್ರಹ್ಮನೆಡೆಗೆ ಕರೆದೊಯ್ಯುವ ಸರಿಯಾದ ಜೀವನಕ್ರಮವೇ ಬ್ರಹ್ಮಚರ್ಯವೆಂದು ನಾನು ಅದರ ಲಕ್ಷಣವನ್ನು ಹೇಳಿದ್ದೇನೆ. ಅದರಿಂದ ನೇರವಾಗಿ ಒಂದು ಪ್ರಶ್ನೆ ಹುಟ್ಟುತ್ತದೆ. "ದೇವನೆಂದರೆ ಏನು ಅಥವಾ ಯಾರು ?" ಇದಕ್ಕೆ ಮನುಷ್ಯನು ಉತ್ತರವನ್ನು ತಿಳಿದಿದ್ದರೆ ಆತನೆಡೆಗೆ ಹೋಗುವ ದಾರಿಯನ್ನು ಕಂಡುಹಿಡಿಯಲು ಅವನಿಗೆ ಅನುಕೂಲವಾಗುವದು.

ದೇವನು ಓರ್ವ ವ್ಯಕ್ತಿಯಲ್ಲ. ಮನುಷ್ಯರೂಪದಲ್ಲಿ ಆಗಾಗ್ಗೆ ಅವನು ಈ ಲೋಕದಲ್ಲಿ ಅವತರಿಸಿ ಬರುವನೆಂದು ಹೇಳುವದು ಅಂಶತಃ ಸತ್ಯ.

ಇದರ ಅರ್ಥವಿಷ್ಟೇ. ಏನೆಂದರೆ ಅಂತಹ ಅವತಾರಿಯು ದೇವನ ನಿಕಟ ವರ್ತಿಯಾಗಿರುವನೆಂದು. ಪರಮಾತ್ಮನು ಸರ್ವಾಂತರ್ಯಾಮಿಯೂ ಸರ್ವ ವ್ಯಾಪಿಯೂ ಆಗಿರುವದರಿಂದ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಅವನು ಇರುವನು. ಆದುದರಿಂದ ಎಲ್ಲರೂ ಒಂದು ಬಗೆಯಿಂದ ಆತನ ಅವತಾರ ಗಳೇ ಎನ್ನಬಹುದು. ಆದರೆ ಇದರಿಂದೇನೂ ಪ್ರಯೋಜನವಾಗುವದಿಲ್ಲ. ರಾಮ, ಕೃಷ್ಣ ಇವರಿಗೆ ನಾವು ದೈವೀಗುಣಗಳನ್ನು ಆರೋಪಿಸುವದರಿಂದ ಅವರು ದೇವರ ಅವತಾರವೆಂದು ಹೇಳುತ್ತೇವೆ. ನಿಜವಾಗಿ ಅವರು ಮಾನವನ ಕಲ್ಪನಾ ಸೃಷ್ಟಿ. ಅವರು ಪ್ರತ್ಯಕ್ಷವಾಗಿ ಇದ್ದರೋ ಇಲ್ಲವೋ ಎಂಬ ಮಾತಿನ ಪರಿಣಾಮ, ಜನರ ಮನಸ್ಸಿನಲ್ಲಿ ಇರುವ ಅವರ ಚಿತ್ರದ ಮೇಲೆ ಏನೂ ಆಗದು. ಇತಿಹಾಸದ ರಾಮ ಮತ್ತು ಕೃಷ್ಣ ಇವರ ವಿಚಾರವು ಅನೇಕಸಲ ಕೆಲ ಅಡಚಣೆಗಳನ್ನು ಒಡ್ಡುತ್ತದೆ. ಅವುಗಳನ್ನು, ಅನೇಕ ಪ್ರತಿಪಾದನೆಗಳನ್ನುಮಾಡಿ ನಿವಾರಿಸಿಕೊಳ್ಳಬೇಕಾಗುತ್ತದೆ.

ದೇವನು ಶಕ್ತಿಯೆಂಬ ಮಾತು ಸತ್ಯ. ಆತನು ಜೀವನದ ಸತ್ವ. ಅವನು ಶುದ್ಧ ಹಾಗೂ ದೋಷರಹಿತ ಪ್ರಜ್ಞೆ. ಅವನು ಶಾಶ್ವತ, ನಿತ್ಯ. ಆದರೂ ಎಲ್ಲರಿಗೂ ಆತನ ಸರ್ವವ್ಯಾಪಿಯಾದ ಆಶ್ರಯದಲ್ಲಿ ಎಡೆಯು ದೊರೆಯುವದಿಲ್ಲ ಹಾಗೂ ಕೆಲವರಿಗೆ ಲಾಭವಾಗುವುದಿಲ್ಲೆಂಬುದು ವಿಚಿತ್ರ ಸಂಗತಿಗಳೇ ಸರಿ.

ವಿದ್ಯುತ್ತು ಬಲಿಷ್ಠವಾದ ಶಕ್ತಿ. ಎಲ್ಲರಿಗೂ ಅದರ ಲಾಭವು ದೊರೆಯಲಾರದು. ಕೆಲ ನಿಯಮಗಳನ್ನು ಪಾಲಿಸಿದರೆಯೇ ಅದು ಉತ್ಪನ್ನ ವಾಗುತ್ತದೆ. ಅದು ನಿರ್ಜೀವಶಕ್ತಿ. ಅದರ ನಿಯಮಗಳ ಜ್ಞಾನವನ್ನು ಮಾಡಿಕೊಳ್ಳಲು ಅವಿಶ್ರಾಂತ ದುಡಿದರೆ ಮನುಷ್ಯನು ಅದನ್ನು ಉಪಯೋಗಿಸಿ ಕೊಳ್ಳಬಲ್ಲನು.

ನಮ್ಮ ಅಂತರ್ಯಾಮಿಯಾಗಿರುವ ದೇವನನ್ನು ಕಾಣುವದಕ್ಕೆ ಅವಶ್ಯ ವಾದ ಆತನ ನಿಯಮವನ್ನು ತಿಳಿದು ಅನುಸರಿಸಿದರೆ ಪರಮಾತ್ಮನೆಂಬ ಜೀವಂತ ಶಕ್ತಿಯನ್ನು ನಾವು ಕಾಣಬಹುದು. ಆದರೆ ನಮ್ಮ ದೇವನ ನಿಯಮ ವನ್ನು ತಿಳಿದುಕೊಳ್ಳಲು ಬಹಳ ದುಡಿಯಬೇಕಾಗುವದೆಂಬುದು ಸ್ಪಷ್ಟವಿದೆ. ಒಂದೇ ಮಾತಿನಲ್ಲಿ ಬ್ರಹ್ಮಚರ್ಯವೇ ಆ ನಿಯಮವೆಂದು ಹೇಳಬಹುದು. ಬ್ರಹ್ಮಚರ್ಯ ಪಾಲನೆಗೆ ನೇರವಾದ ದಾರಿಯೆಂದರೆ ರಾಮನಾಮ. ನನ್ನ

ಅನುಭವದಿಂದ ನಾನಿದನ್ನು ಹೇಳಬಲ್ಲೆ. ತುಳಸೀದಾಸನಂತಹ ಸಂತರೂ ಭಕ್ತರೂ ಈ ರಾಜಮಾರ್ಗವನ್ನು ತೋರಿಸಿಕೊಟ್ಟಿರುವರು. ನನ್ನ ಅನುಭವಕ್ಕೆ ಯಾರೂ ಬಹಳ ಮಹತ್ವವನ್ನು ಕೊಡಬೇಕಾಗಿಲ್ಲ. ಬಹುಶಃ ಉರುಳಿಕಾಂಚನದಲ್ಲಿ ರಾಮನಾಮದ ಶಕ್ತಿಯ ಸ್ಪಷ್ಟ ಅನುಭವವು ನನಗಾಯ್ತು. ನಮ್ಮ ಎಲ್ಲ ವಿಪತ್ತುಗಳ ಪರಿಹಾರಕ್ಕೆ ರಾಮನಾಮವೇ ತರಣೋಪಾಯವೆಂದು ನಾನು ಅಲ್ಲಿ ಒತ್ತಿ ಹೇಳಿದೆನು. ಇದರ ಉಪಯೋಗವನ್ನು ಮಾಡಿಕೊಳ್ಳುವವನು ಅತ್ಯಲ್ಪ ಹೊರಗಿನ ಸಹಾಯದಿಂದ ಅದ್ಭುತ ಶಕ್ತಿಯುತ ಫಲಿತಾಂಶಗಳನ್ನು ತೋರಿಸಬಲ್ಲನು.

ಈ ವಿಚಾರಧಾರೆಯನ್ನು ಅನುಸರಿಸಿ ರಾಮನಾಮವು ಅಂತರಂಗದಲ್ಲಿ ಭದ್ರವಾಗಿ ನೆಲೆಗೊಂಡರೆ ಬ್ರಹ್ಮಚರ್ಯ ಪಾಲನೆಗೆ ಸಾಂಪ್ರದಾಯಿಕರು ಹೇಳಿದ ಸಾಧನಗಳೆಲ್ಲ ಆ ನಾಮದ ಮುಂದೆ ನಿಸ್ತೇಜವಾಗುವವೆಂದು ಎದೆ ತಟ್ಟಿ ಹೇಳಬಲ್ಲೆನು. ಆಗ ಮತ್ತು ಆಗ ಮಾತ್ರ ನಾವು ಅದರ ಅಲೌಕಿಕ ಶಕ್ತಿಸೌಂದರ್ಯಗಳನ್ನು ಗುರುತಿಸಬಲ್ಲೆವು. ಈ ಅನುಪಮವಾದ ಶಸ್ತ್ರ ಕ್ಕೋಸುಗ ನಡೆಸಿದ ಆಲಸ್ಯರಹಿತ ಸಂಶೋಧನದಲ್ಲಿ ಸಾಧನ ಸಾಧ್ಯಗಳನ್ನು ವಿಂಗಡಿಸಿ ಹೇಳುವದು ದುಸ್ತರ. ಆದುದರಿಂದ ಆಚಾರದ ಆ ಏಕಾದಶ ನಿಯಮಗಳು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧನಗಳು. ಆ ಹನ್ನೊಂದು ನಿಯಮಗಳಲ್ಲಿ ಸತ್ಯವು ಸಾಧನ; ರಾಮನೆಂದು ಹೆಸರುಳ್ಳ ದೇವನು ಸಾಧ್ಯ. ರಾಮನಾಮವು ಸಾಧನ ಮತ್ತು ಸತ್ಯವು ಸಾಧ್ಯ ಎಂಬುದಾದರೂ ಸರಿಯಲ್ಲವೆ ?

ಆದರೆ ನನ್ನ ಮೊದಲಿನ ಮಾತಿನ ಕಡೆಗೆ ಹೊರಳುವಾ. ಜನನೇಂದ್ರಿಯ ನಿಗ್ರಹವೇ ಬ್ರಹ್ಮಚರ್ಯವೆಂದು ಸಾಮಾನ್ಯವಾದ ತಿಳಿವಳಿಕೆ. ಈ ಗುರಿಯನ್ನು ಸಾಧಿಸಲು ರಾಮನಾಮವು ಸುವರ್ಣಸಾಧನ.

(ಹರಿಜನ : ೨೨-೬-೪೭)

ಧಾರ್ಮಿಕ ಶಿಕ್ಷಣ

ಓದುಗ—ಧಾರ್ಮಿಕ ಶಿಕ್ಷಣದ ಪ್ರಶ್ನೆಯು ಬಲು ಕಠಿನವಾಗಿದೆ.

ಗಾಂಧೀಜಿ—ಆದರೂ ಅದನ್ನು ಬಿಡಲಾಗದು. ಭಾರತವು ಎಂದೂ

ನಿರೀಶ್ವರವಾಗದು. (ದೇವಲಂಡವಾಗದು). ಈ ದೇಶದಲ್ಲಿ ಜಡ ನಿರೀಶ್ವರ ವಾದವು ಎಂದೂ ಊರ್ಜಿತವಾಗಲಾರದು. ಕೆಲಸವೇನೋ ನಿಜವಾಗಿ ಕಠಿನವಿದೆ. ಧಾರ್ಮಿಕ ಶಿಕ್ಷಣದ ವಿಚಾರವನ್ನು ಮಾಡತೊಡಗಿದಂತೆ ನನ್ನ ತಲೆಯು ತಿರುಗುತ್ತದೆ. ನಮ್ಮ ಧರ್ಮಗುರುಗಳು ಡಾಂಭಿಕರೂ ಸ್ವಾರ್ಥಿಗಳೂ ಆಗಿರುವರು. ಅವರ ಕಡೆಗೆಯೇ ಹೋಗಬೇಕಾಗುವದು. ಮುಲ್ಲಾಗಳು ದಸ್ತೂರರು ಮತ್ತು ಬ್ರಾಹ್ಮಣನು ಬೀಗದ ಕೈಯನ್ನು ತಮ್ಮ ಬಳಿಯಲ್ಲಿಟ್ಟುಕೊಂಡಿರುವರು. ಆದರೆ ಅವರಿಗೆ ಸದ್ಬುದ್ಧಿಯುಂಟಾಗ ದಿದ್ದರೆ ಆಂಗ್ಲಶಿಕ್ಷಣದಿಂದ ಪಡೆದ ನಮ್ಮ ಉತ್ಸಾಹ ಶಕ್ತಿಯನ್ನು ಧಾರ್ಮಿಕ ಶಿಕ್ಷಣಕ್ಕೆ ಮೀಸಲಾಗಿಡಬೇಕು. ಸಮುದ್ರದ ದಂಡೆಯು ಮಾತ್ರ ಕಲಕಿದೆ. ಈ ದಂಡೆಯಲ್ಲಿದ್ದವರು ಮಾತ್ರ ಹಸನಾಗಬೇಕಾಗಿದೆ. ಈ ಗುಂಪಿಗೆ ಸೇರಿದ ನಾವು ನಮ್ಮನ್ನು ಹಸನುಗೊಳಿಸಿಕೊಳ್ಳುವಾ. ಏಕೆಂದರೆ ನನ್ನ ಮಾತುಗಳು ಜನಸಾಮಾನ್ಯರಿಗೆ ಅನ್ವಯಿಸುವದಿಲ್ಲ. ಭಾರತಕ್ಕೆ ಆದರ ಮುಂಚಿನ ಪವಿತ್ರಸ್ಥಿತಿಯನ್ನು ತಂದುಕೊಡಲೋಸುಗ ನಾವು ಧಾರ್ಮಿಕ ಶಿಕ್ಷಣಕ್ಕೇ ತಿರುಗಿ ಹೋಗಬೇಕು. ಉಳಿದುದೆಲ್ಲ ತಾನೇ ತಾನಾಗಿ ಬರುವದು. (ಹಿಂದ್ ಸ್ವರಾಜ್ಯ ಅಧ್ಯಾಯ ೧೮)

ಶೂದ್ರರ ಹಕ್ಕು

ಪ್ರತಿಯೊಬ್ಬ ಹಿಂದೂ ಬಾಲಕಬಾಲಿಕೆಯೂ ಸಂಸ್ಕೃತದ ಜ್ಞಾನವನ್ನು ಪಡೆಯಬೇಕೆಂದು ನನ್ನ ಮತ. ಮತ್ತು ಪ್ರಸಂಗ ಬಂದರೆ ಆ ಭಾಷೆಯಲ್ಲಿ ವಿಚಾರಗಳನ್ನು ವ್ಯಕ್ತಪಡಿಸುವ ಯೋಗ್ಯತೆಯನ್ನೂ ಪ್ರತಿಯೊಬ್ಬ ಹಿಂದುವೂ ಪಡೆದಿರಬೇಕು. ಶೂದ್ರರಿಗೂ ಪಂಚಮರಿಗೂ ಸಂಸ್ಕೃತವನ್ನು ಕಲಿಸಲು ಮೈಸೂರಲ್ಲಿ ಪಂಡಿತರು ಹಿಂಜರಿಯುವರೆಂದು ಕೇಳಿದ್ದೇನೆ. ಶೂದ್ರರಿಗೆ ಸಂಸ್ಕೃತವನ್ನು ಕಲಿಯುವ ಹಾಗು ವೇದಪಠನ ಮಾಡುವ ಅಧಿಕಾರವಿಲ್ಲೆಂಬ ಮಾತಿಗೆ ವೇದದಲ್ಲಿ ಎಷ್ಟರ ಮಟ್ಟಿಗೆ ಪ್ರಮಾಣಗಳಿರುವವೋ ನಾನರಿಯೆ. ಆದರೆ ಸನಾತನೀ ಹಿಂದೂ ಎಂಬ ರೀತಿಯಿಂದ ಹೇಳುವದಾದರೆ ಒಂದು ಸಮಯ ಏನಾದರೂ ಪ್ರಮಾಣವಿದ್ದರೂ ಅದನ್ನು ಅಕ್ಷರಶಃ ನೋಡಿ ನಮ್ಮ

ಧರ್ಮದ ಜೀವವನ್ನೇ ಕೊಂದುಬಿಡಬಾರದು. ಮನುಷ್ಯನಂತೆ ಶಬ್ದಗಳೂ ವಿಕಾಸ ಹೊಂದುತ್ತವೆ. ಬುದ್ಧಿಗೆ ಅಸಹ್ಯ ಹಾಗೂ ಅನುಭವಕ್ಕೆ ಅಸಂಗತ ವೆಂದು ಕಾಣುವ ವೇದ ಮಂತ್ರಗಳ ಪ್ರಮಾಣವನ್ನು ನಿರಾಕರಿಸಬೇಕು. ನಾವೀಗ ತಿಳಿದಿರುವಂತೆ ಅಸ್ಪೃಶ್ಯತೆಗೆ ವೇದದಲ್ಲಿ ಯಾವ ಆಧಾರವೂ ಇಲ್ಲೆಂದು ಶಾಸ್ತ್ರಗಳನ್ನು ನಾನರಿತಮಟ್ಟಿಗೆ ನನಗೆ ತೋರುತ್ತದೆ. ಭಾರತದ ಬೇರೆಬೇರೆ ಭಾಗಗಳಲ್ಲಿಯ ಅಸ್ಪೃಶ್ಯರ ಬಗೆಗೆ ನನಗೆ ಬಂದ ಅನುಭವದಿಂದ ಮನುಷ್ಯ ಮನುಷ್ಯರಿಗೆ ತೂಗಿ ನೋಡಿದರೆ 'ಅಸ್ಪೃಶ್ಯ'ನು ಬೌದ್ಧಿಕವಾಗಿ ಯಾಗಲಿ ನೈತಿಕವಾಗಿಯಾಗಲಿ 'ಸ್ಪೃಶ್ಯ' ಬಂಧುವಿಗಿಂತ ಯಾವ ಬಗೆ ಯಲ್ಲಿಯೂ ಕಡಿಮೆಯಿಲ್ಲೆಂದು ಹೇಳಬಲ್ಲೆನು. ನಮ್ಮಂತೆಯೇ ನಿರ್ಮಲ ವಾದ ನೈತಿಕ ಜೀವನವನ್ನು ನಡೆಸಿರುವ ದಲಿತ ವರ್ಗಗಳ ಜನರಿರುವುದನ್ನು ನಾನರಿತಿದ್ದೇನೆ. ಬ್ರಾಹ್ಮಣ ಹುಡುಗ ಹುಡುಗಿಯರಂತೆಯೇ ಸಂಸ್ಕೃತ ಪದ್ಯ ಗಳನ್ನು ಅನ್ನುವ ಆದಿಕರ್ನಾಟಕ ಹುಡುಗರನ್ನು ನಾನು ನೋಡಿದ್ದೇನೆ. ಆದುದರಿಂದ ಇಂತಹ ಮೂಲ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವವನನ್ನು ಬರಮಾಡಿಕೊಂಡು ಆವನಿಗೆ ಬಿನ್ನವತ್ತಳೆಯನ್ನು ಕೊಟ್ಟು ಆತನ ಮತವನ್ನು ಒಪ್ಪಿಕೊಳ್ಳುತ್ತಿರುವ ನಿಮಗೆ ನಾನು ನಿಜವಾಗಿ ಋಣಿಯಾಗಿದ್ದೇನೆ. ಅನೇಕ ಬ್ರಾಹ್ಮಣರು ತಕಲಿಗಳನ್ನು ತಿರುಗಿಸುತ್ತಿರುವದನ್ನು ನೋಡಿ ನನಗೆ ಆನಂದವಾಗಿದೆ. ಆದರೆ ಬರೀ ನಿಮ್ಮ ಯಜ್ಞೋಪವೀತಗಳನ್ನು ಮಾಡಿ ಕೊಳ್ಳುವದಕ್ಕೆ ಮಾತ್ರ ಅದನ್ನು ಮರ್ಯಾದಿತಗೊಳಿಸಬೇಡಿರಿ. ತಕಲಿ ನೂಲಿನಿಂದಲೇ ಯಜ್ಞೋಪವಿತಗಳನ್ನು ಮಾಡಿಕೊಳ್ಳುವದು ನಡೆಯಲಿ. ಆದರೆ ಆ ನೂಲಿನಿಂದಾಗಲೀ ರಾಟಿಯ ನೂಲಿನಿಂದಾಗಲೀ ನೀವು ನಿಮ್ಮ ನಿಮ್ಮ ಬಟ್ಟೆಗಳನ್ನು ಮಾಡಿಕೊಳ್ಳಿರಿ. ವಿದೇಶೀ ವಸ್ತ್ರವನ್ನು ಉಟ್ಟು ವೇದ ಮಂತ್ರಗಳನ್ನು ಪಠಿಸುವ ಬಾಲಕಬಾಲಿಕೆಯರನ್ನು ನೋಡಿ ನನಗೆ ವೇದನೆ ಯಾಯ್ತು. ಅದು ವಿಸಂಗತವೆಂದು ನನಗೆ ಅನಿಸಿತು. ಬಾಹ್ಯ ವಸ್ತುವು ಧರ್ಮಸಾರವೇನೂ ಅಲ್ಲ. ಆದರೂ ಬಹಿರಂಗವು ಅನೇಕಸಲ ಅಂತರಂಗ ವನ್ನು ಹೊರಗೆಡಹುತ್ತದೆ. ಆದುದರಿಂದ ಸಂಸ್ಕೃತ ವಿದ್ಯಾಲಯಕ್ಕಾಗಲಿ ಅಥವಾ ಆರ್ಯ ಸಂಸ್ಕೃತಿಯನ್ನು ಕಲಿಸುವ ಯಾವದೊಂದು ಸಂಸ್ಥೆಗಾಗಲಿ ನಾನು ಹೋದರೆ ಅಲ್ಲಿ ನಮ್ಮ ಪ್ರಾಚೀನ ಋಷಿಗಳ ನಿರಾಡಂಬರ ಸರಲ ಜೀವನದ ಸ್ಮೃತಿಗಳನ್ನು ಕಾಣಲು ಹಾತೊರೆಯುತ್ತೇನೆ. ನನ್ನ ಈ

ಅಪೇಕ್ಷೆಯನ್ನು ನೀವು ತೃಪ್ತಿಗೊಳಿಸಲಿಲ್ಲೆಂದು ನನಗೆ ವಿಷಾದವಾಗಿದೆ. ನಮ್ಮ ಪ್ರಾಚೀನ ಸಂಸ್ಕೃತಿಯ ನಿಜ ಪ್ರತಿನಿಧಿಗಳನ್ನಾಗಿ ಈ ಬಾಲಕಬಾಲಿಕೆಯರನ್ನು ಮಾಡಿರೆಂದು ಶಿಕ್ಷಕರನ್ನೂ ತಾಯ್ತಂದೆಗಳನ್ನೂ ಪಾಲಕರನ್ನೂ ನಾನು ಕೇಳಿಕೊಳ್ಳುತ್ತೇನೆ. (ಯಂಗ್ ಇಂಡಿಯಾ : ೧೨-೮-೨೭)

ಮೊನ್ನೆ ಮಾತನಾಡುತಿದ್ದಾಗ ಒಬ್ಬ ಪಾದ್ರಿ ಮಿತ್ರನು ಭಾರತವು ನಿಜವಾಗಿಯೂ ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಿದ ದೇಶವಾಗಿದ್ದಿತೇ? ಎಂದು ಕೇಳಿದನು. ಮತ್ತು ತಮ್ಮ ಧರ್ಮದ ಜ್ಞಾನವಿರುವ ಜನರ ಸಂಖ್ಯೆ ಇಷ್ಟು ಕಡಿಮೆ ಏಕಿದೆ? ಹಾಗು ಭಗವದ್ಗೀತೆಯನ್ನರಿತವರಾದರೂ ಕಡಿಮೆ ಏಕೆ? ಎಂದು ಪ್ರಶ್ನೆಮಾಡಿದನು. ಈ ಮಾತಿಗೆ ಬೆಂಬಲವಾಗಿ ಸ್ವತಃ ಶಿಕ್ಷಣಜ್ಞನಾದ ಆ ಮಿತ್ರನು ತಮ್ಮ ಧರ್ಮದ ಜ್ಞಾನವು ತಮಗೂ ಇಲ್ಲೆಂದೂ ಭಗವದ್ಗೀತೆಯನ್ನು ತಾನೂ ಓದಿಲ್ಲೆಂದೂ ನನಗೆ ಹೇಳಿದನು. ಬಹುಜನರಿಗೆ ಈ ಜ್ಞಾನವಿಲ್ಲ.

ಕೆಲವು ವಿದ್ಯಾರ್ಥಿಗಳಿಗೆ ತಮ್ಮ ಧರ್ಮದ ಜ್ಞಾನವಿಲ್ಲವಾದುದರಿಂದ ಭಾರತವು ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಿರಲಿಲ್ಲವೆಂಬ ಅನುಮಾನದ ಪ್ರಶ್ನೆಯನ್ನು ನಾನೀಗ ಎತ್ತಿಕೊಳ್ಳಬಯಸುವದಿಲ್ಲ. ಆದರೆ ಕೆಲವು ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಗ್ರಂಥಗಳ ಅಜ್ಞಾನವಿದ್ದರೆ ಎಲ್ಲ ಧಾರ್ಮಿಕ ಜೀವನದ ಅಭಾವಕ್ಕೆ ಅದು ಸಾಕ್ಷಿಯೆಂದಾಗಲಿ ಅಥವಾ ಆಧ್ಯಾತ್ಮಿಕತೆಯಿಲ್ಲವೆಂದಾಗಲಿ ಹೇಳಲಿಕ್ಕಾಗದೆಂದು ಮಾತ್ರ ಇಲ್ಲಿ ಹೇಳದಿರೆನು. ಆದರೆ ಸರಕಾರೀ ಶಿಕ್ಷಣ ಸಂಸ್ಥೆಗಳಿಂದ ಪಾಸಾಗಿ ಹೊರಬೀಳುವ ವಿದ್ಯಾರ್ಥಿಗಳಲ್ಲಿ ಬಹುಜನರಿಗೆ ಧಾರ್ಮಿಕ ಶಿಕ್ಷಣವಿರುವದಿಲ್ಲೆಂಬ ಮಾತಿನಲ್ಲಿ ಯಾವ ಸಂದೇಹವೂ ಇಲ್ಲ. ಮೈಸೂರ ವಿದ್ಯಾರ್ಥಿಗಳ ಸಂಬಂಧದಲ್ಲಿ ಪಾದ್ರಿಯು ಮಾತಾಡಿದ್ದನು. ಮೈಸೂರಿನ ವಿದ್ಯಾರ್ಥಿಗಳಿಗೂ ಸರಕಾರೀ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವು ದೊರೆಯುವದಿಲ್ಲೆಂಬುದನ್ನು ನೋಡಿ ನಿಜವಾಗಿ ನನಗೆ ಬಹಳ ವ್ಯಥೆಯಾಯಿತು. ಸಾರ್ವಜನಿಕ ಶಾಲೆಗಳಲ್ಲಿ ಬರೀ ಲೌಕಿಕ ಶಿಕ್ಷಣವನ್ನೇ ಕೊಡಬೇಕೆಂಬ ವಿಚಾರಪಂಥವೊಂದಿರುವದನ್ನು ನಾನು ಬಲ್ಲೆನು. ಭಾರತದಂತಹ ದೇಶದಲ್ಲಿ ವಿಶ್ವದ ಎಲ್ಲ ಧರ್ಮಗಳನ್ನು ಪ್ರತಿನಿಧಿಸುವ ಧರ್ಮಗಳಿರುವ ಈ ದೇಶದಲ್ಲಿ ಮತ್ತು ಒಂದೇ ಧರ್ಮದಲ್ಲಿಯೆ ಅನೇಕ ಪಂಗಡಗಳಿರುವಲ್ಲಿ ಧಾರ್ಮಿಕ ಶಿಕ್ಷಣದ

ವ್ಯವಸ್ಥೆಯನ್ನು ಮಾಡುವದು ಕಠಿನವೆಂಬ ವಿಷಯವೂ ನನಗೆ ಗೊತ್ತಿದೆ. ಆದರೆ ಭಾರತವು ಆಧ್ಯಾತ್ಮಿಕ ದಾರಿದ್ರ್ಯದ ಡಂಗುರವನ್ನು ಸಾರಬಾರದೆಂದಿದ್ದರೆ ಯುವಕರಿಗೆ ಲೌಕಿಕ ಶಿಕ್ಷಣದಷ್ಟೇ ಧಾರ್ಮಿಕ ಶಿಕ್ಷಣವೂ ಅವಶ್ಯವೆಂದು ಒಪ್ಪಲೇಬೇಕು. ಧಾರ್ಮಿಕ ಗ್ರಂಥಗಳ ಜ್ಞಾನವು ಧರ್ಮದ ಜ್ಞಾನಕ್ಕೆ ಸಮಾನವಾದುದಲ್ಲವೆಂಬುದು ನಿಜ. ಆದರೆ ನಮಗೆ ಧರ್ಮವು ದೊರೆಯದಿದ್ದರೆ ನಮ್ಮ ಮಕ್ಕಳು ಮರಿಗಳಿಗೆ ಕನಿಷ್ಠ ಉತ್ತಮವಾದುದಾವುದೋ ಅದನ್ನಾದರೂ ಕೊಡೋಣ. ಶಾಲೆಗಳಲ್ಲಿ ಶಿಕ್ಷಣವು ದೊರೆಯಲಿ ಬಿಡಲಿ ದೊಡ್ಡವರಾದ ಹುಡಗರಾದರೂ ಉಳಿದ ವಿಷಯಗಳಲ್ಲಿಯಂತೆ ಧಾರ್ಮಿಕ ವಿಷಯಗಳಲ್ಲಾದರೂ ಸ್ವಾವಲಂಬನೆ ಸ್ವಸಹಾಯದ ವೃತ್ತಿಯನ್ನು ಬೆಳೆಸಿಕೊಳ್ಳಲಿ. ತಮ್ಮ ವಾದವಿವಾದ ಸಂಘಗಳನ್ನು, ಈಗ ನೂಲುವವರ ಕ್ಲಬ್ಬುಗಳನ್ನು ಸ್ಥಾಪಿಸಿಕೊಂಡಂತೆ ತಮ್ಮ ಧಾರ್ಮಿಕ ಶಿಕ್ಷಣವರ್ಗಗಳನ್ನು ಅವರು ಏರ್ಪಡಿಸಿಕೊಳ್ಳಲಿ.

ಶಿವಮೊಗ್ಗೆಯಲ್ಲಿ ಕೊಲೇಜಿಯೇಟ ಹೈಸ್ಕೂಲಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವಾಗ ಆ ಸಭೆಯಲ್ಲಿದ್ದ ಒಂದುನೂರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಭಗವದ್ಗೀತೆಯನ್ನು ಓದಿದವರು ಎಂಟುಜನರು ಮಾತ್ರ ಇದ್ದರೆಂದು ತಿಳಿದುಬಂತು. ಓದಿದ ಕೆಲವರಲ್ಲಿಯೆ ಎಷ್ಟು ಜನರಿಗೆ ಅದರ ಅರ್ಥವು ತಿಳಿದಿದೆಯೆಂದು ಕೇಳಿದರೆ ಯಾವನೂ ಕೈಯೆತ್ತಲಿಲ್ಲ. ಐದು ಅಥವಾ ಆರು ಜನ ಮುಸಲ್ಮಾನ ಹುಡುಗರಲ್ಲಿ ಎಲ್ಲರೂ ಕುರಾನವನ್ನು ಓದಿದ್ದಾಗಿ ಕೈಯೆತ್ತಿದರು. ಆದರೆ ಅವರಲ್ಲಿ ಒಬ್ಬನು ಮಾತ್ರ ಅದರ ಅರ್ಥವನ್ನು ಅರಿತಿರುವುದಾಗಿ ಹೇಳಿದನು. ನನ್ನ ಅಭಿಪ್ರಾಯದ ಪ್ರಕಾರ ಗೀತೆಯು ಸುಲಭವಾಗಿ ತಿಳಿಯತಕ್ಕ ಗ್ರಂಥ. ಬಿಡಿಸಲಿಕ್ಕೆ ಕಠಿನವಾದ ಕೆಲವು ಮೂಲಭೂತ ಸಮಸ್ಯೆಗಳನ್ನು ಅದು ಎತ್ತುತ್ತದೆಯೆಂಬುದೇನೋ ನಿಸ್ಸಂದೇಹ. ಆದರೆ ಗೀತೆಯ ಸಾಮಾನ್ಯ ಧೋರಣ ಸ್ಪಷ್ಟವಾಗಿದೆ. ಹಿಂದೂಗಳಲ್ಲಿ ಎಲ್ಲ ಮತದವರೂ ಅದನ್ನು ಪ್ರಮಾಣಗ್ರಂಥವೆಂದು ಒಪ್ಪುತ್ತಾರೆ. ಅದು ಯಾವದೇ ಬಗೆಯ ಮತಾಗ್ರಹದಿಂದ ಮುಕ್ತವಾಗಿದೆ. ಕಿರಿದರಲ್ಲಿ ಅದು ಪೂರ್ಣವಾದ ಬುದ್ಧಿನಿಷ್ಠವಾದ ನೀತಿತತ್ವವನ್ನು ನಮಗೆ ಒದಗಿಸುತ್ತದೆ. ಅದು ಬುದ್ಧಿಯನ್ನೂ ಅಂತಃಕರಣವನ್ನೂ ತಣಿಸುತ್ತದೆ. ಹೀಗೆ ಅದು ಆಧ್ಯಾತ್ಮಿಕವೂ ಭಕ್ತಿಪ್ರಧಾನವೂ ದರ್ಶನಾತ್ಮಕವೂ ಆಗಿದೆ. ಆದರ

ತತ್ವಪ್ರತಿಪಾದನೆಯು ವಿಶ್ವವಿಸ್ತಾರವಾಗಿದೆ. ಭಾಷೆಯು ನಂಬಲಾರದಷ್ಟು ಸರಲವಾಗಿದೆ. ಆದರೂ ಪ್ರತಿಯೊಂದು ಪ್ರಾಂತಿಕ ಭಾಷೆಯಲ್ಲಿಯೂ ಅದರ ಅಧಿಕೃತ ಅನುವಾದವಿರಬೇಕೆಂದು ನನಗನಿಸುತ್ತದೆ. ತಾಂತ್ರಿಕ ವಿವರಗಳನ್ನು ಬಹುವಾಗಿ ಒಳಗೊಳ್ಳದಂತಹ ಅನುವಾದಗಳಿರುವದು ಒಳಿತು. ಅಲ್ಲದೆ ಸಾಮಾನ್ಯ ಮನುಷ್ಯನಿಗೂ ಗೀತೆಯ ಸಂದೇಶವು ಸುಲಭವಾಗಿ ಅರ್ಥವಾಗುವಂತೆ ಇರಬೇಕು. ಮೂಲಕ್ಕೆ ಕೈಗಂಟುಹಾಕಿ ಅನುವಾದ ಮಾಡಬೇಕೆಂದು ನಾನು ಸೂಚಿಸುವದಿಲ್ಲ. ಯಾಕಂದರೆ ಪ್ರತಿಯೊಬ್ಬ ಹಿಂದೂ ಬಾಲಕಬಾಲಿಕೆಯೂ ಸಂಸ್ಕೃತವನ್ನು ಕಲಿಯಲೇಬೇಕೆಂಬ ನನ್ನ ಅಭಿಪ್ರಾಯವನ್ನು ಮತ್ತೊಮ್ಮೆ ಒತ್ತಿಹೇಳುತ್ತೇನೆ. ಆದರೆ ಇನ್ನೂ ಬಹುದಿವಸಗಳವರೆಗೆ ಸಂಸ್ಕೃತ ಜ್ಞಾನವಿಲ್ಲದ ಅಸಂಖ್ಯ ಜನರು ಉಳಿಯುವರು. ಅವರಿಗೆ ಸಂಸ್ಕೃತವು ಗೊತ್ತಿಲ್ಲೆಂದು ಅವರಿಗೆ ಭಗವದ್ಗೀತೆಯ ಸಂದೇಶದ ಜ್ಞಾನವನ್ನು ಮಾಡಿಕೊಡದಿರುವದು ಆತ್ಮಘಾತವೇ ಸರಿ.

ಹಿಂದೂ ವಿದ್ಯಾರ್ಥಿಗಳು ಮತ್ತು ಗೀತೆ

(ಮನ್ನಾರಗುಡಿಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಉಪನ್ಯಾಸದಿಂದ ಕೆಳಗಿನ ಅಂಶಗಳನ್ನು ಆಯ್ದುಕೊಂಡಿದೆ.)

ನಾನು ಓದುತ್ತಿರುವಂತೆ ನೀವಾದರೂ ಗಾಸ್ಪೆಲ್ಸಗಳನ್ನು ಓದುತ್ತಿರುವದಾಗಿ ನಿಮ್ಮ ಬಿನ್ನವತ್ತಳೆಯಲ್ಲಿ ಬರೆದಿರುವಿರಿ. ದಿನಾಲು ನಾನು ಗಾಸ್ಪೆಲ್ಸಗಳನ್ನು ಓದುತ್ತಿರುವೆನೆಂದು ಹೇಳಲಾರೆನು. ಆದರೆ ನಾನು ನಮ್ರ ಹಾಗು ಪ್ರಾರ್ಥನಾಪೂರ್ಣ ಭಾವನೆಯಿಂದ ಗಾಸ್ಪೆಲ್ಸಗಳನ್ನು ಓದಿರುವೆನೆಂದು ಹೇಳಬಲ್ಲೆ. ನೀವಾದರೂ ಆ ಭಾವನೆಯಿಂದಲೇ ಓದುತ್ತಿದ್ದರೆ ಒಳಿತು. ಆದರೆ ನಿಮ್ಮಲ್ಲಿ ಬಹುಜನರು ಹಿಂದುಗಳಿರುವಿರೆಂದು ನನ್ನ ಭಾವನೆ. ದಿನವೂ ಸ್ಫೂರ್ತಿಯನ್ನು ಪಡೆಯಲು ನಮ್ಮ ಹಿಂದೂ ಹುಡುಗರಾದರೂ ಭಗವದ್ಗೀತೆಯನ್ನು ಓದುತ್ತಿರುವರೆಂದು ಹೇಳಿದ್ದರೆ ಬಹಳ ಚೆನ್ನಾಗುತ್ತಿತ್ತು. ಯಾಕಂದರೆ ಜಗತ್ತಿನ ಎಲ್ಲ ಮಹಾಧರ್ಮಗಳೂ ಹೆಚ್ಚುಕಡಿಮೆ ಸತ್ಯವಾಗಿವೆಯೆಂದು ನನ್ನ ನಂಬಿಕೆ. ಮಾನವ ಹಸ್ತಸ್ಪರ್ಶವಾದುದೆಲ್ಲ ಮಾನವರೇ

ಅಪೂರ್ಣರಾಗಿರುವದರಿಂದ ಅಪೂರ್ಣವಾಗಿರುವದೆಂದು 'ಹೆಚ್ಚುಕಡಿಮೆ' ಎಂದು ನಾನು ಅಂದಿದ್ದೇನೆ. ಪೂರ್ಣತೆಯು ದೇವರಿಗೆ ಮಾತ್ರ ವಿಾಸಲಾದ ಗುಣ. ಅದು ಅವರ್ಣನೀಯ ಹಾಗು ಅಪರಿವರ್ತನೀಯ. ದೇವನು ಪೂರ್ಣನಿದ್ದಂತೆ ಮಾನವನಿಗೂ ಆಗಲು ಬರುತ್ತದೆಂದು ನಾನು ನಂಬಿದ್ದೇನೆ. ಪರಿಪೂರ್ಣತೆಗಾಗಿ ನಾವೆಲ್ಲ ಪ್ರಯತ್ನಿಸುವದು ಅವಶ್ಯ. ಆದರೆ ಆ ಅವಸ್ಥೆಯನ್ನು ಮುಟ್ಟಿದೊಡನೆ ಅದು ಅವರ್ಣನೀಯ, ಅವ್ಯಾಖ್ಯೇಯವಾಗುತ್ತದೆ. ಆದುದರಿಂದ ವೇದಗಳು, ಕುರಾನ, ಬೈಬಲ್ ಇವುಗಳೆಲ್ಲ ಪರಮಾತ್ಮನ ಅಪರಿಪೂರ್ಣ ಶಬ್ದಗಳೆಂದು ನಮ್ರವಾಗಿ ನಾನು ಒಪ್ಪುತ್ತೇನೆ. ನಾವು ಅಪರಿಪೂರ್ಣರಿದ್ದ ಪ್ರಯುಕ್ತ, ಅನೇಕ ವಿಕಾರಗಳಿಂದ ಅತ್ತಿತ್ತ ಎಳೆದಾಡಲ್ಪಡುತ್ತಿರುವಾಗ ದೇವರ ಈ ಶಬ್ದವನ್ನಾದರೂ ಪೂರ್ಣವಾಗಿ ತಿಳಿದುಕೊಳ್ಳುವದು ಅಶಕ್ಯವಿದೆ. ಅಂತೆಯೇ ನಾನು ಹಿಂದೂ ಹುಡುಗನಿಗೆ ಅವನು ಬೆಳೆದು ಬಂದ ಸಂಪ್ರದಾಯಗಳನ್ನು ನಿರ್ಮೂಲಗೊಳಿಸಬೇಡೆಂದು ಹೇಳುತ್ತೇನೆ. ಹಾಗೆಯೇ ಮುಸಲ್ಮಾನ ಮತ್ತು ಕ್ರೈಸ್ತ ವಿದ್ಯಾರ್ಥಿಗಳಿಗೂ ಹೇಳುತ್ತೇನೆ. ನೀವು ಗಾಸ್ಪೆಲ್ಲನ್ನಾಗಲಿ, ಕುರಾನನ್ನಾಗಲಿ ಕಲಿತುದನ್ನು ನಾನು ಸ್ವಾಗತಿಸುತ್ತೇನೆ. ಹಿಂದೂ ಹುಡುಗರಾದ ನೀವೆಲ್ಲರೂ ಗೀತೆಯನ್ನು ಓದಲೇಬೇಕೆಂದು ನನಗೆ ಅಧಿಕಾರವಿದ್ದಿದ್ದರೆ ಒತ್ತಾಯಪಡಿಸುತ್ತಿದ್ದೆ. ಶಾಲೆಯಲ್ಲಿ ಹುಡುಗರಲ್ಲಿ ನಾವು ಕಾಣುವ ಅಶುದ್ಧತೆ ಅಥವಾ ಜೀವನದ ಮುಖ್ಯ ವಿಷಯಗಳ ವಿಷಯವಾಗಿರುವ ಅನಾದರ, ಮತ್ತು ಜೀವನದ ಮಹತ್ವದ ವಿಷಯಗಳನ್ನು ಬಹಳ ಹಗುರಾಗಿ ನೋಡುವ ಅವರ ಶಿಥಿಲತೆ ಇವುಗಳಿಗೆ, ಇದುವರೆಗೆ ಬಾಲಕರು ಪ್ರೇರಣೆಯನ್ನು ಪಡೆದ ಪ್ರಾಚೀನ ಪರಂಪರೆಗಳ ನಿರ್ಮೂಲನವೇ ಕಾರಣವೆಂದು ನನ್ನ ಅಭಿಪ್ರಾಯ.

ಆದರೆ ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ಹಳೆಯದೆಲ್ಲ, ಹಳೆಯದೆಂಬ ಕಾರಣದಿಂದ — ಒಳಿತಾಗಿದ್ದಿತೆಂದು ನಾನನ್ನುವದಿಲ್ಲ. ಪ್ರಾಚೀನ ಸಂಪ್ರದಾಯದಮುಂದೆ ದೇವದತ್ತವಾದ ಸ್ವತಂತ್ರ ವಿಚಾರಶಕ್ತಿಯನ್ನು ಒಪ್ಪಿಸಿಬಿಡಲಾರೆನು. ಎಷ್ಟೇ ಹಳೆಯದಿದ್ದರೂ ನೀತಿಗೆ ವಿರುದ್ಧವಾದ ಸಂಪ್ರದಾಯವೇನಾದರೂ ಇದ್ದರೆ ಅದನ್ನು ಈ ದೇಶದಿಂದಲೇ ಹೊರಗೆ ಓಡಿಸಬೇಕು. ಅಸ್ಪೃಶ್ಯತೆಯು ಪ್ರಾಚೀನ ಸಂಪ್ರದಾಯವೆಂದು ಹೇಳಬಹುದು. ಬಾಲವಿಧವಾ ಪದ್ಧತಿ, ಬಾಲ್ಯವಿವಾಹಗಳು ಹಳೆಯ ಸಂಪ್ರದಾಯ

ಗಳಿಂದು ತಿಳಿಯಬಹುದು. ಹಾಗೆಯೇ ಅನೇಕ ಹಳೆಯ ಭಯಂಕರ ಶ್ರದ್ಧೆಗಳೂ ಅಂಧಶ್ರದ್ಧೆಗಳೂ ಹಳೆಯವಾಗಿರಬಹುದು. ನನ್ನ ಕೈಯಲ್ಲಿ ಅಧಿಕಾರವಿದ್ದರೆ ಅವುಗಳನ್ನು ನಾನು ಹೊಡೆದೋಡಿಸುತ್ತಿದ್ದೆನು. ಆದುದರಿಂದ ಪ್ರಾಚೀನ ಸಂಪ್ರದಾಯವನ್ನು ಗೌರವಿಸುವದೆಂದರೇನೆಂಬುದರ ಅರ್ಥವು ನಿಮಗೆ ಈಗಾಗಿರಬಹುದು. ಭಗವದ್ಗೀತೆಯಲ್ಲಿರುವ ದೇವನನ್ನೇ ಬೈಬಲಿನಲ್ಲಿ ಕೊರಾನಿನಲ್ಲಿ ನಾನು ಕಂಡಿರುವದರಿಂದ ಹಿಂದೂ ಹುಡುಗರಿಗೆ ಭಗವದ್ಗೀತಾ ಪಠನದಿಂದ ಹೆಚ್ಚಿನ ಲಾಭವಾಗುವದೆಂದು ಹೇಳುತ್ತೇನೆ. ಏಕೆಂದರೆ ಬೇರೆ ಯಾವುದೇ ಗ್ರಂಥಕ್ಕಿಂತಲೂ ಗೀತೆಯೊಡನೆ ಅವರು ಒಮ್ಮೆಲೇ ಸಮರಸವಾಗುವರು. (ಯಂಗ್ ಇಂಡಿಯಾ: ೨೨-೯-೨೭)

ವಿದ್ಯಾರ್ಥಿಗಳೂ ಗೀತೆಯೂ

(ಒಂದು ಹೈಸ್ಕೂಲಿನ ಮುಖ್ಯಾಧ್ಯಾಪಕರ ಸಹಾಯದಿಂದ ಆ ಶಾಲೆಯ ವಿದ್ಯಾರ್ಥಿಗಳಿಗೆ ಗೀತೆಯನ್ನು ಕಲಿಸಲು ಓರ್ವ ಪತ್ರಲೇಖಕನು ಪ್ರಯತ್ನಿಸುತ್ತಿರುವನು. ಆದರೆ ಗೀತಾಪಾಠಗಳನ್ನು ಏರ್ಪಡಿಸಿದ ಇತ್ತೀಚಿನ ಒಂದು ಸಭೆಯಲ್ಲಿ ಒಬ್ಬ ಬ್ಯಾಂಕಿನ ಮೇಲ್ವಿಚಾರಕ ಗೀತೆಯನ್ನು ಅಭ್ಯಸಿಸುವ ಅಧಿಕಾರವು ವಿದ್ಯಾರ್ಥಿಗಳಿಗೆ ಇಲ್ಲೆಂದು ಹೇಳಿ ಸಭೆಯಲ್ಲಿ ಗೊಂದಲವನ್ನೆಬ್ಬಿಸಿಬಿಟ್ಟನು; ವಿದ್ಯಾರ್ಥಿಗಳ ಮುಂದಿಡಲು ಅದೇನು ಆಟಿಗೆಯಲ್ಲೆಂದು ನುಡಿದನು. ಈ ಆಕ್ಷೇಪದ ಬಗೆಗೆ ಗಾಂಧೀಜೀ ಹೀಗೆ ಬರೆದರು:)

ವೇದಗಳ ವಿಷಯದಲ್ಲಿ ಮಾತ್ರ ನಾನು ಅಧಿಕಾರದ ಮಾತನ್ನು ಕೇಳಿದ್ದೆ. ಆದರೆ ಬ್ಯಾಂಕ್ ಮೇಲ್ವಿಚಾರಕ ಮನಸ್ಸಿನಲ್ಲಿ ಮಾಡಿಕೊಂಡಂತಹ ಅಧಿಕಾರಗಳೂ ಗೀತೆಗೂ ಬೇಕೆಂದೂ ನನಗೆ ಗೊತ್ತಿದ್ದಿಲ್ಲ. ಗೀತಾಭ್ಯಾಸಕ್ಕೆ ಆವಶ್ಯಕವಾದ ಅಧಿಕಾರಗಳ ಸ್ವರೂಪವನ್ನು ಆತನು ಸ್ಪಷ್ಟಪಡಿಸಿದ್ದರೆ ಚೆನ್ನಾಗುತ್ತಿತ್ತು. ಶ್ರದ್ಧೆಯಿಲ್ಲದವರನ್ನು ಬಿಟ್ಟು ಗೀತೆಯು ಎಲ್ಲರಿಗಾಗಿ ಇರುವದೆಂದು ಗೀತೆಯೇ ನಿಚ್ಚಳವಾಗಿ ಹೇಳುತ್ತದೆ. ಹಿಂದೂ ವಿದ್ಯಾರ್ಥಿಗಳು ಗೀತಾಪಠನವನ್ನು ಮಾಡಬಾರದೆಂದಾದರೆ ಅವರು ಯಾವದೇ ಧಾರ್ಮಿಕ ಗ್ರಂಥವನ್ನೂ ಓದಬಾರದು. ವಿದ್ಯಾರ್ಥಿ ಜೀವನವು ಬ್ರಹ್ಮ

ಚಾರಿ ಜೀವನವೆಂದು ಹಿಂದೂಧರ್ಮದ ಮೂಲ ಕಲ್ಪನೆಯಾಗಿದೆ. ಧರ್ಮ ಜ್ಞಾನವನ್ನು ಮಾಡಿಕೊಂಡು ಅದರಂತೆ ಅವನು ನಡೆಯಲು ಕಲಿಯಬೇಕು. ಅಂದರೆ ಅದನ್ನು ಅರಗಿಸಿಕೊಂಡು ತನ್ನ ಬಾಳಿನಲ್ಲಿ ಧಾರ್ಮಿಕ ಆಚಾರ ವನ್ನು ಹೆಣೆದುಕೊಳ್ಳಲು ಅವನಿಗೆ ಶಕ್ಯವಾಗುವದು. ಪ್ರಾಚೀನ ಕಾಲದ ವಿದ್ಯಾರ್ಥಿಯು ಧರ್ಮವೆಂದರೇನೆಂಬುದನ್ನು ತಿಳಿದುಕೊಳ್ಳುವ ಮುನ್ನ ಧರ್ಮದಂತೆ ನಡೆಯಲು ಆರಂಭಿಸುತ್ತಿದ್ದನು. ಮುಂದೆ ಈ ಆಚಾರಕ್ಕೆ ಜ್ಞಾನದ ಬೆಂಬಲವು ದೊರೆಯುತ್ತಿದ್ದಿತು. ಹೀಗಾಗಿ ತನಗಾಗಿ ಹೇಳಿ ಕೊಟ್ಟ ಆಚಾರನಿಯಮದ ಕಾರಣ ಅವನಿಗೆ ಗೊತ್ತಾಗುತ್ತಿತ್ತು.

ನಿಜವಾಗಿ ಅಧಿಕಾರ ಅದರಲ್ಲಿದ್ದಿತು. ಆದರೆ ಪಂಚಯಮಗಳು ಅಥವಾ ಮೂಲ ನಿಗ್ರಹಗಳು ಎಂಬ ಸಮೀಚೀನ ಆಚಾರದ ಅಧಿಕಾರವು ಆದಾಗಿದ್ದಿತು. ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮ ಚರ್ಯ ಎಂಬುವೇ ಆ ಐದು ಯಮಗಳು. ಧರ್ಮವನ್ನು ಅಭ್ಯಸಿಸ ಬೇಕೆನ್ನುವವರು ಈ ಐದು ನಿಯಮಗಳನ್ನು ಪಾಲಿಸಬೇಕಾಗುತ್ತಿದ್ದಿತು. ಧರ್ಮದ ಈ ಮೂಲತತ್ವಗಳ ಆವಶ್ಯಕತೆಯನ್ನು ಸಿದ್ಧಮಾಡಲು ಧಾರ್ಮಿಕ ಗ್ರಂಥಗಳ ಆಧಾರಗಳನ್ನು ಹುಡುಕಿ ಹೇಳಬೇಕಾಗಿಲ್ಲ.

ಆದರೆ ಇಂದು ಅನೇಕ ಇಂತಹ ಶಕ್ತಿಸಂಪನ್ನ ಶಬ್ದಗಳು ವಿಕೃತ ವಾದಂತೆ ಅಧಿಕಾರ ಶಬ್ದವಾದರೂ ವಿಕಾರವನ್ನು ಹೊಂದಿದೆ. ಕೇವಲ ಬ್ರಾಹ್ಮಣನೆಂದು ಕರೆಯಲ್ಪಡುವದರಿಂದ ಒಬ್ಬ ನೀತಿಗೆಟ್ಟ ಮನುಷ್ಯನು ನಮಗೆ ಶಾಸ್ತ್ರಗಳನ್ನು ಹೇಳುವ ಹಾಗು ಓದುವ ಅಧಿಕಾರವುಳ್ಳವನಾಗಿರು ವನು. ಆದರೆ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಹುಟ್ಟಿದ ಕಾರಣದಿಂದ ಅಸ್ಪೃಶ್ಯನೆಂದು ಕರೆಸಿಕೊಳ್ಳಲಾಗುವ ಮನುಷ್ಯನು ಎಷ್ಟೇ ಸದ್ಗುಣಿ ಯಾಗಿದ್ದರೂ ಅವುಗಳನ್ನು ಓದಕೂಡದು.

ಆದರೆ ಗೀತೆಯು ಒಂದು ಭಾಗವಾಗಿರುವ ಮಹಾಭಾರತವನ್ನು ಬರೆದ ಗ್ರಂಥಕಾರನು ಈ ತಿಳಿಗೇಡಿ ಆಕ್ಷೇಪವನ್ನು ನಿವಾರಿಸಲೋಸುಗವೇ ಆ ಮಹಾಗ್ರಂಥವನ್ನು ಬರೆದನು. ಮತ್ತು ಅದನ್ನು ಜಾತಿಭೇದವಿಲ್ಲದೆ ಎಲ್ಲರಿಗೂ ದೊರೆಯುವಂತೆ ಮಾಡಿದನು. ಆದರೆ ನಾನು ಹೇಳಿದ ಐದು ನಿಯಮಗಳನ್ನು ಅವರು ಪಾಲಿಸಿದರೆ ಸಾಕೆಂದು ನನ್ನ ಭಾವನೆ. "ನನ್ನ ಭಾವನೆ" ಎಂಬ ಈ ಶಬ್ದಗಳನ್ನು ನಾನು ಉದ್ದೇಶಪೂರ್ವಕವಾಗಿ

ಉಪಯೋಗಿಸುತ್ತಿದ್ದೇನೆ. ಏಕೆಂದರೆ ಮಹಾಭಾರತವನ್ನು ಅಭ್ಯಸಿಸಲು ಈ ಐದು ಯಮಗಳ ಪಾಲನೆಯು ಯಾರಿಗೇ ಆಗಲಿ ಪೂರ್ವಭಾವಿಯಾದ ಆವಶ್ಯಕ ಷರತ್ತೆಂದು ಇದನ್ನು ಬರೆಯುತ್ತಿರುವಾಗ ನನ್ನ ಸ್ಮರಣೆಗೆ ಬರಲಿಲ್ಲ. ಆದರೆ ಧಾರ್ಮಿಕ ಗ್ರಂಥಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅಂತಃಕರಣಶುದ್ಧಿಯೂ ಭಕ್ತಿಯೂ ಅವಶ್ಯವೆಂದು ಅನುಭವಸಿದ್ಧವಾಗಿದೆ.

ಮುದ್ರಣ ಯುಗವು ಎಲ್ಲ ನಿರ್ಬಂಧಗಳನ್ನೂ ಕಡಿದೊಗೆದಿದೆ. ಆ ಶ್ರದ್ಧಾಳುಗಳು ಕೂಡ ಶ್ರದ್ಧಾವಂತರಷ್ಟೇ ಸ್ವತಂತ್ರವಾಗಿ ಧಾರ್ಮಿಕ ಗ್ರಂಥಗಳನ್ನು ಈಗ ಓದಬಹುದು. ಆದರೆ ಧಾರ್ಮಿಕ ಶಿಕ್ಷಣ ಮತ್ತು ಭಕ್ತಿಯ ಆಚರಣೆಗಳ ಅಂಗವಾಗಿ ವಿದ್ಯಾರ್ಥಿಗಳು ಗೀತೆಯನ್ನು ಓದುವುದರ ಔಚಿತ್ಯವನ್ನು ನಾವಿಲ್ಲಿ ವಿವೇಚಿಸುತ್ತಿದ್ದೇವೆ. ಈ ಸಂಯಮಗಳಿಗೆ ಒಳಗಾಗ ಬಲ್ಲ ಹಾಗು ಧಾರ್ಮಿಕ ಶಿಕ್ಷಣಕ್ಕೆ ಯೋಗ್ಯರಾದ ವಿದ್ಯಾರ್ಥಿಗಳಿಗಿಂತ ಹೆಚ್ಚು ಅರ್ಹರಾದವರು ಬೇರೊಬ್ಬರಿರುವರೆಂದು ನಾನು ಭಾವಿಸಲಾರೆನು. ದುರ್ದೈವದಿಂದ ವಿದ್ಯಾರ್ಥಿಗಳೇ ಆಗಲಿ ಅಥವಾ ಕಲಿಸುವವರೇ ಆಗಲಿ ಈ ಐದು ಸಂಯಮಗಳ ನಿಜವಾದ ಅಧಿಕಾರವನ್ನು ಕುರಿತು ಅರೆಗಳಿಗೆಯಾದರೂ ವಿಚಾರ ಮಾಡುತ್ತಿಲ್ಲೆಂಬುದನ್ನು ಒಪ್ಪಲೇಬೇಕಾಗುವದು.

(ಯಂಗ್ ಇಂಡಿಯಾ : ೮-೧೨-೨೭)

ಗೋರಕ್ಷಣೆ

ಗೋರಕ್ಷಣೆಯು ಹಿಂದೂಧರ್ಮದ ಮುಖ್ಯಾಂಗವಾಗಿದೆ. ಮಾನವ ವಿಕಾಸದಲ್ಲಿ ಗೋರಕ್ಷಣೆಯು ಒಂದು ವಿಸ್ಮಯಕರ ಘಟನೆಯೆಂದು ನನ್ನ ತಿಳಿವಳಿಕೆ. ಮಾನವನನ್ನು ತನ್ನ ವರ್ಗದ ಆಚೆಗೆ ಅದು ಕರೆದೊಯ್ಯುತ್ತದೆ. ಆಕಳು ಎಂದೊಡನೆ ನನಗೆ ಪಶುವರ್ಗವೆಲ್ಲ ಎಂದು ಅರ್ಥವಾಗುತ್ತದೆ. ಗೋವಿನಮೂಲಕ ಸಮಸ್ತ ಪ್ರಾಣಿವರ್ಗದೊಡನೆ ತನಗಿರುವ ಐಕ್ಯವನ್ನು ಗುರುತಿಸಬೇಕೆಂದು ಮಾನವನಿಗೆ ವಿಧಿಸಲಾಗಿದೆ. ಭಾರತದಲ್ಲಿ ಆಕಳನ್ನು ದೇವತ್ವಕ್ಕೇರಿಸಿದ್ದುದೇಕೆಂಬುದು ನನಗೆ ಸ್ಪಷ್ಟವಾಗಿದೆ. ಹಸು ಉತ್ತಮ ಸಂಗಾತಿಯಾಗಿದ್ದಿತು. ಗೋಮಾತೆಯು ಸಮೃದ್ಧಿಯನ್ನು

ಕೊಡುತ್ತಿದ್ದಳು. ಆಕೆಯು ಹಾಲನ್ನಷ್ಟೇ ಕೊಡುವುದಲ್ಲದೆ ಕೃಷಿಗೆ ಸಹಾಯ ಕಾರಿಯಾಗಿದ್ದಳು. ಆಕಳು ಕರುಣೆಯ ಕಾವ್ಯ. ಆ ಸಾಧುವಾದ ಪ್ರಾಣಿಯಲ್ಲಿ ದಯೆಯನ್ನು ಮೂರ್ತಿಮತ್ತಾಗಿ ಕಾಣುತ್ತೇವೆ. ಅಸಂಖ್ಯ ಭಾರತೀಯರಿಗೆ ಅವಳು ತಾಯಿಯಾಗಿರುವಳು. ಗೋರಕ್ಷಣೆಯೆಂದರೆ ಪರಮಾತ್ಮನ ಮೂಕಸೃಷ್ಟಿಯ ಸಂರಕ್ಷಣೆ ಪ್ರಾಚೀನ ಋಷಿಯ ಬದುಕು ಗೋಪಾಲನೆಯಿಂದಲೇ ಪ್ರಾರಂಭವಾಗುತ್ತಿತ್ತು. ಮನುಷ್ಯೇತರ ಸೃಷ್ಟಿಯ ಬಿನ್ನಹವು ಮೂಕವಾಗಿರುವದರಿಂದಲೇ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಗೋರಕ್ಷಣೆಯು ಹಿಂದೂಧರ್ಮವು ಪ್ರಪಂಚಕ್ಕೆ ಕೊಟ್ಟ ದೊಡ್ಡ ಕಾಣಿಕೆ. ಗೋವುಗಳನ್ನು ರಕ್ಷಿಸುವ ಹಿಂದೂಗಳು ಇರುವವರೆಗೆ ಹಿಂದೂಧರ್ಮವು ಬಾಳಿಬದುಕುವದು.

ಗೋವಿಗಾಗಿ ಸಾಯುವದೇ ಗೋರಕ್ಷಣೆಯ ರೀತಿ. ಆಕಳನ್ನು ರಕ್ಷಿಸಲು ಓರ್ವ ಮಾನವನನ್ನು ಕೊಲ್ಲುವದು ಹಿಂದೂಧರ್ಮವನ್ನೂ ಅಹಿಂಸೆಯನ್ನೂ ಅಲ್ಲಗಳೆದಂತೆಯೇ ಸರಿ. ಆತ್ಮಶುದ್ಧಿ ಸ್ವಾರ್ಥತ್ಯಾಗಗಳಿಂದ ಹಾಗು ತಮ್ಮ ತಪಸ್ಯದಿಂದ ಗೋರಕ್ಷಣೆಯನ್ನು ಮಾಡತಕ್ಕದ್ದೆಂದು ಹಿಂದೂಗಳಿಗೆ ವಿಧಿಸಲಾಗಿದೆ. ಇಂದಿನ ಗೋರಕ್ಷಣೆಯು ಮುಸಲ್ಮಾನರ ಕೂಡ ನಿರಂತರ ಕಲಹದ ಸ್ವರೂಪವನ್ನು ತಾಳಿ ಕೆಳಮಟ್ಟಕ್ಕೆ ಇಳಿದಿದೆ. ಆದರೆ ನಮ್ಮ ಪ್ರೇಮದಿಂದ ಮುಸಲ್ಮಾನರನ್ನು ಗೆದ್ದುಕೊಳ್ಳುವದೇ ಗೋರಕ್ಷಣೆ. ಆಕಳನ್ನು ಹಾಗು ಅದರ ಪೀಳಿಗೆಯನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುವ ನಮ್ಮ ಅಮಾನುಷತೆಗಳ ವಿವರಗಳನ್ನು ಕೊಟ್ಟು ಒಂದು ಸಣ್ಣ ಪುಸ್ತಕವನ್ನು ಓರ್ವ ಮುಸಲ್ಮಾನ ಮಿತ್ರನು ಕೆಲವು ದಿನಗಳ ಹಿಂದೆ ನನಗೆ ತಿಳಿಸಿದನು. ಹೇಗೆ ನಾವು ಆಕಳನ್ನು ಕೊನೆಯ ಹನಿಹಾಲು ಬರುವವರೆಗೂ ಹಿಂಡಿಕೊಳ್ಳುತ್ತೇವೆ, ಅದನ್ನು ಉಪವಾಸದಿಂದ ಬಳಲಿಸುತ್ತೇವೆ, ಕರುಗಳನ್ನು ಎಷ್ಟು ಕೆಟ್ಟರೀತಿಯಿಂದ ಪೀಡಿಸುತ್ತೇವೆ, ಅವುಗಳಿಗೆ ತಾಯಿಯ ಹಾಲನ್ನು ಕೊಡದೆ ಬಳಲಿಸುತ್ತೇವೆ, ಎತ್ತುಗಳನ್ನು ಹೇಗೆ ಕ್ರೂರರೀತಿಯಿಂದ ನಡೆಸಿಕೊಳ್ಳುತ್ತೇವೆ, ಅವುಗಳ ವೃಷಣಗಳನ್ನು ಬಡಿಯುತ್ತೇವೆ, ಅವುಗಳನ್ನು ಬಾರುಕೋಲುಗಳಿಂದ ಹೊಡೆಯುತ್ತೇವೆ, ಭಾರವಾದ ವಸ್ತುಗಳನ್ನು ಹೇರಿ ದಣಿಸುತ್ತೇವೆ. ಅವುಗಳಿಗೆ ಮಾತಾಡಲು ಬರುತ್ತಿದ್ದರೆ ಜಗತ್ತನ್ನೇ ನಡುಗಿಸಿಬಿಡುವಂತಹ ನಮ್ಮ ಕ್ರೂರಕೃತಿಗಳಿಗೆ ಅವು ಸಾಕ್ಷ್ಯವನ್ನು ನುಡಿಯುತ್ತಿದ್ದವು. ನಮ್ಮ

ಜಾನುವಾರುಗಳಿಗೆ ನಾವು ತೋರುತ್ತಿರುವ ನಮ್ಮ ಕ್ರೌರ್ಯದ ಒಂದೊಂದು ಕೃತಿಯಿಂದಲೂ ನಾವು ದೇವರನ್ನೂ ಹಿಂದೂಧರ್ಮವನ್ನೂ ನಿರಾಕರಿಸು ತ್ತಿದ್ದೇವೆ. ದುಃಖಮಯವಾದ ಈ ಭಾರತದಲ್ಲಿ ಜಾನುವಾರಗಳ ಸ್ಥಿತಿ ಗತಿಯು ಹೀನತಮವಾಗಿದ್ದಷ್ಟು ಬೇರಾವ ದೇಶದಲ್ಲಿಯಾದರೂ ಇದೆ ಯೆಂದು ನನಗೆ ಗೊತ್ತಿಲ್ಲ. ಇದಕ್ಕೆ ಆಂಗ್ಲರನ್ನು ನಾವು ಹಳಿಯಲಾರೆವು. ಬಡತನದ ನೆಪವನ್ನು ನಾವು ಹೇಳಲಾರೆವು. ನಮ್ಮ ದನಕರುಗಳ ಪರಿಸ್ಥಿತಿಯು ಹೀನತರವಾಗಿರುವದಕ್ಕೆ ನಮ್ಮ ಉಪೇಕ್ಷೆಯೆ ಕಾರಣ. ನಮ್ಮ ಧರ್ಮಬುದ್ಧಿಯ ದ್ಯೋತಕಗಳಾಗಿದ್ದರೂ ನಮ್ಮ ಪಿಂಜರಾಪೋಲು ಗಳು ಅದರ ಪ್ರತ್ಯಕ್ಷಾಚರಣೆಯ ಹೀನ ಉದಾಹರಣೆಗಳೇ ಆಗಿವೆ. ಆದರ್ಶ ಹೈನದ ಮನೆಗಳೂ ಶ್ರೇಷ್ಠ ರಾಷ್ಟ್ರೀಯ ಲಾಭದಾಯಕ ಸಂಸ್ಥೆ ಗಳೂ ಆಗುವ ಬದಲು ಅವು ಬಡಕಲ್ಲಾದ ಮುದಿಗೊಡ್ಡು ದನಗಳ ಹಟ್ಟಿ ಗಳಾಗಿವೆ.

ಹಿಂದೂಜನರ ಯೋಗ್ಯತೆಯು ಅವರ ತಿಲಕಗಳನ್ನು, ಅಥವಾ ಸರಿ ಯಾದ ರೀತಿಯಲ್ಲಿ ಮಂತ್ರಪಠನ ಮಾಡುವದನ್ನು, ಇಲ್ಲವೆ ಅವರು ಮಾಡುವ ಯಾತ್ರೆ ತೀರ್ಥಗಳನ್ನು, ಮತ್ತು ಜಾತಿ ಧರ್ಮದ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುವದನ್ನು ಅವಲಂಬಿಸಿಲ್ಲ. ಆದರೆ ಗೋರಕ್ಷಣೆಯನ್ನು ಮಾಡುವ ಅವರ ಶಕ್ತಿಯನ್ನು ಅದು ಅವಲಂಬಿಸಿದೆ. ಗೋರಕ್ಷಣೆಯ ಧರ್ಮವನ್ನು ಬಾಯ್ತುಂಬ ಕೊಚ್ಚುತ್ತಲೇ ಹಸುವನ್ನೂ ಅದರ ಸಂತತಿಯನ್ನೂ ನಾವು ಬಂಧನದಲ್ಲಿಟ್ಟದ್ದೇವೆ. ಆದರಿಂದ ನಾವೂ ಬಂಧನದಲ್ಲಿ ಬಿದ್ದಿರುವೆವು.

ನಾನು ಸನಾತನಿ ಹಿಂದೂ ಎಂದು ಏಕೆ ತಿಳಿದುಕೊಂಡಿದ್ದೇನೆಂಬುದು ಈಗ ತಿಳಿಯಬಹುದು. ಆಕಳ ಬಗೆಗೆ ನನಗಿರುವ ಆದರವು ಯಾರಿ ಗಿಂತಲೂ ಕಡಿಮೆಯಿಲ್ಲ. ಖಿಲಾಫತ ಪ್ರಕರಣವನ್ನು ನನ್ನದನ್ನಾಗಿಯೆ ನಾನು ಮಾಡಿಕೊಂಡಿದ್ದೇನೆ. ಏಕೆಂದರೆ ಅದನ್ನು ಉಳಿಸಿದರೆ ಪೂರ್ಣ ರಕ್ಷಣೆಯು ಗೋವಿಗೆ ದೊರೆಯುವದೆಂದು ನನಗೆ ತೋರಿರುತ್ತದೆ. ನನ್ನ ಸೇವೆಗೆ ಪ್ರತಿಫಲವೆಂದಾಗಿ ಆಕಳನ್ನು ರಕ್ಷಿಸಬೇಕೆಂದು ಮುಸಲ್ಮಾನ ಮಿತ್ರರನ್ನು ನಾನು ಕೇಳಿಕೊಳ್ಳುತ್ತಿಲ್ಲ. ನ್ಯಾಯಸಾಧುವೆಂದು ತಿಳಿದ ವಿಷಯ ವನ್ನು ಕುರಿತು ನಾನು ಮಾಡಿದ ಸೇವೆಯು ದೇವರಿಗೆ ಪ್ರೀತಿಕರವಾಗಿ ಆತನು ಮುಸಲ್ಮಾನರ ಹೃದಯ ಪರಿವರ್ತನೆಯನ್ನು ಮಾಡಿ ನೆರೆಹೊರೆಯ

ಹಿಂದೂ ಜನರ ಬಗೆಗೆ ಅವರಲ್ಲಿ ದಯೆಯನ್ನು ಹುಟ್ಟಿಸಿ ಹಿಂದೂ ಜನರಿಗೆ ಜೀವಕ್ಕಿಂತಲೂ ಪ್ರಿಯಕರವಾದ ಪ್ರಾಣಿಯ ಜೀವವನ್ನು ಉಳಿಸುವಂತೆ ಮಾಡಲೆಂದು ದಿನಾಲು ನಾನು ದೇವರಲ್ಲಿ ಮೊರೆಯಿಡುತ್ತಿದ್ದೇನೆ.

(ಯಂಗ್ ಇಂಡಿಯಾ : ೬-೧೦-೨೧)

ಆಕಳನ್ನು ರಕ್ಷಿಸಿರಿ

ಗೋರಕ್ಷಣೆಯು ಹಿಂದೂಜನರ ಅಂತಃಕರಣಕ್ಕೆ ಅತ್ಯಂತ ಪ್ರೀತಿಕರವಾದುದು. ಗೋರಕ್ಷಣೆಯಲ್ಲಿ ನಂಬಿಗೆಯಿಲ್ಲದವನು ಹಿಂದೂ ಆಗಲಾರನು. ಅದು ಅತಿ ಉದಾತ್ತ ಶ್ರದ್ಧೆ. ಗೋಪೂಜೆಯೆಂದರೆ ನಿರಪರಾಧಿತ್ವದ ಪೂಜೆಯೆ ಎಂದು ನನಗೆ ಅನಿಸುತ್ತದೆ. ನನ್ನ ಮಟ್ಟಿಗೆ, ಆಕಳು ನಿರಪರಾಧಿತ್ವದ ಒಂದು ಮೂರ್ತಿ. ಗೋರಕ್ಷಣೆಯೆಂದರೆ ದುರ್ಬಲರ ಹಾಗು ಅಸಹಾಯಕರ ಸಂರಕ್ಷಣೆ. ಗೋರಕ್ಷಣೆಯೆಂದರೆ ಮಾನವ ಹಾಗು ಪಶುಗಳ ಬಾಂಧವ್ಯವೆಂದು ಪ್ರೊ. ವಾಸ್ವಾನಿಯವರು ಹೇಳಿರುವದು ಯೋಗ್ಯವಾಗಿದೆ. ನಿರಲಸ ದುಡಿಮೆಯಿಂದಲೂ ತಪಸ್ಯೆಯಿಂದಲೂ ಬೆಳೆಯತಕ್ಕ ಉದಾತ್ತ ಭಾವನೆಯಿದು. (ಯಂಗ್ ಇಂಡಿಯಾ : ೮-೬-೨೧)

ಗೋರಕ್ಷಣೆ

ಸತ್ಯ ಅಹಿಂಸೆಗಳ ಪಾಲನೆಯಲ್ಲಿ ಮುನ್ನಡೆದಂತೆ ಪವಿತ್ರ ಧರ್ಮಗ್ರಂಥಗಳ ಹಾಗು ಸ್ವಯಂಸ್ಫೂರ್ತಿ ಕೃತಿಗಳ ಅಂತಃಸತ್ಯವು ಗೊತ್ತಾಗುತ್ತ ಹೋಗುವವೆಂದು ನಮ್ಮ ಋಷಿಗಳು ಅದ್ಭುತವಾದ ಸತ್ಯವನ್ನು ಕಂಡು ಹಿಡಿದರು. ಸತ್ಯ ಅಹಿಂಸೆಗಳ ಸಿದ್ಧಿಯು ಹೆಚ್ಚಾದಷ್ಟು ಅಂತಃಪ್ರಕಾಶವು ಹೆಚ್ಚಾಗುವದು. ಗೋರಕ್ಷಣೆಯು ಹಿಂದೂವಿನ ಪರಮ ಧರ್ಮವೆಂದು ಈ ಋಷಿಗಳೇ ಹೇಳಿದರು. ಅದರಿಂದ ಮೋಕ್ಷವೂ ದೊರೆಯುತ್ತದೆಂದು ಹೇಳಿದರು. ಹಸುವೆಂಬ ಪ್ರಾಣಿಯನ್ನು ರಕ್ಷಿಸುವದರಿಂದ ಮೋಕ್ಷವು

ದೊರೆಯುವದೆಂದು ನಂಬಲು ನಾನು ಸಿದ್ಧನಿಲ್ಲ. ಮೋಕ್ಷ ಪ್ರಾಪ್ತಿಗಾಗಿ ಆಸಕ್ತಿ, ದ್ವೇಷ, ಕೋಪ, ಅಸೂಯೆ, ಮುಂತಾದ ದುರ್ಗುಣಗಳನ್ನು ನಿವಾರಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಮೋಕ್ಷಕ್ಕಾಗಿ ಗೋರಕ್ಷಣೆ ಯೆಂದೆನ್ನಬೇಕಾದರೆ ಅದರ ಅರ್ಥವು ಸಾಮಾನ್ಯವಾಗಿ ತಿಳಿದುಕೊಂಡುದ ಕ್ಕಿಂತಲೂ ಹೆಚ್ಚು ವ್ಯಾಪಕವೂ ಪರಿಪೂರ್ಣವೂ ಆಗಿರಬೇಕೆಂಬುದು ಸ್ಪಷ್ಟ. ಮೋಕ್ಷವನ್ನು ದೊರಕಿಸಿಕೊಡಬೇಕಾದಂತಹ ಗೋರಕ್ಷಣೆಯಲ್ಲಿ ಸ್ವರೂಪತಃ ವೇದನೆಯುಳ್ಳ ಎಲ್ಲದರ ರಕ್ಷಣೆಯೂ ಸೇರಬೇಕಾಗುತ್ತದೆ. ಆದುದರಿಂದ ಅಹಿಂಸೆಯ ಪ್ರತಿಯೊಂದು ಅಲ್ಪ ಉಲ್ಲಂಘನೆ, ಉದಾಹರಣಾರ್ಥ ಬಿರುನುಡಿಗಳಿಂದ ಗಂಡು ಹೆಣ್ಣು ಮಗು ಇವುಗಳ ಮನನೋಯಿಸುವುದಾಗಲಿ ಅಥವಾ ಸೃಷ್ಟಿಯಲ್ಲಿ ಅತ್ಯಂತ ದುರ್ಬಲ ಪ್ರಾಣಿಗೆ ನೋವನ್ನುಂಟುಮಾಡು ವುದು ಗೋರಕ್ಷಣೆಯ ತತ್ವದ ಉಲ್ಲಂಘನೆಯಾಗುವದು. ಮತ್ತು ಅದು ಗೋಮಾಂಸ ಭಕ್ಷಣದ ಪಾಪಕ್ಕೆ ಸರಿಯಾಗುವದು. ಆದರೆ ಅದರ ಬೇಧ ತಾರತಮ್ಯದಲ್ಲೇ ಹೊರತು ಸ್ವರೂಪದಲ್ಲೇನಲ್ಲ. ಹೀಗಿದ್ದಬಳಿಕ ನಮ್ಮ ರಾಗದ್ವೇಷಗಳ ಸ್ವೈರ ವೃತ್ತಿಯ ದೆಶೆಯಿಂದ ಗೋರಕ್ಷಣೆಯ ತತ್ವವನ್ನು ಪರಿಪಾಲಿಸುತ್ತಿರುವೆವೆಂದು ಹೇಳಲಾರೆವು.

(ಯಂಗ್ ಇಂಡಿಯಾ : ೨೯-೧-೨೫)

ಜಾತಿ ಮತ್ತು ವರ್ಗ

ಮಾನವನು ಸಮಾಜಜೀವಿಯಾದುದರಿಂದ ಸಾಮಾಜಿಕ ಸಂಘಟ ನೆಯ ಕೆಲವೊಂದು ಕ್ರಮವನ್ನು ಅನುಸರಿಸಬೇಕಾಗುತ್ತದೆ. ಭಾರತದಲ್ಲಿ ನಾವು ಜಾತಿಯನ್ನು ಏರ್ಪಡಿಸಿಕೊಂಡಿದ್ದೇವೆ. ಯುರೋಪಿನಲ್ಲಿ ಅವರು ವರ್ಗವ್ಯವಸ್ಥೆಯನ್ನು ಮಾಡಿಕೊಂಡಿರುವರು. ಬಹುಶಃ ದೇವನಿರ್ಮಿತವಾದ ಕುಟುಂಬ ವ್ಯವಸ್ಥೆಯಂತೆ ಇವುಗಳಲ್ಲಿ ಯಾವುದರಲ್ಲಿಯೂ ಕುಟುಂಬದ ಸ್ವಾಭಾವಿಕತೆಯಾಗಲಿ ಸುಸಂಬದ್ಧತೆಯಾಗಲಿ ಇಲ್ಲ. ಜಾತಿಯಿಂದ ಕೆಲವು ಅನರ್ಥಗಳು ಉಂಟಾಗಿದ್ದರೆ ವರ್ಗದಿಂದ ಹುಟ್ಟಿದ ಅನರ್ಥಗಳಿ ಗೇನೂ ಕಡಿಮೆಯಿಲ್ಲ.

ವರ್ಗವು ಕೆಲವು ಸಾಮಾಜಿಕ ಸದ್ಗುಣಗಳನ್ನು ಕಾಯ್ದುಕೊಳ್ಳಲು ಸಹಾಯವನ್ನು ಮಾಡುತ್ತಿದ್ದರೆ ಜಾತಿಯೂ ಹೆಚ್ಚಿನ ಪ್ರಮಾಣದಲ್ಲಿಲ್ಲದಿದ್ದರೂ ಅಷ್ಟೇ ಪ್ರಮಾಣದಲ್ಲಾದರೂ ಆ ಕಾರ್ಯವನ್ನೇ ಮಾಡುತ್ತಿದೆ. ಆಸ್ತಿ ವಿತ್ತಗಳ ತಾರತಮ್ಯದಮೇಲೆ ಅವಲಂಬಿಸದಿರುವದೇ ಜಾತಿ ಪದ್ಧತಿಯ ಸುಂದರವಾದ ಅಂಶ. ಇತಿಹಾಸವು ಸಿದ್ಧಪಡಿಸಿದಂತೆ ಹಣವು ಜನರನ್ನು ಅಗಲಿಸುವ ಅತ್ಯಂತ ದುಷ್ಟವಾದ ವಿಭೇದಕ ಸಾಮುಗ್ರಿಯಾಗಿದೆ. ಧನದ ಕಲ್ಮಷದಿಂದ ಕುಟುಂಬ ಬಂಧನದ ಪಾವಿತ್ರ್ಯವೂ ಸುರಕ್ಷಿತವಾಗುಳಿಯುವದಿಲ್ಲ; ಎಂದು ಶ್ರೀ ಶಂಕರಾಚಾರ್ಯರು ಹೇಳಿರುವರು. ಕುಟುಂಬ ತತ್ವದ ವಿಸ್ತರಣವೇ ಜಾತಿ. ಎರಡರಲ್ಲಿಯೂ ರಕ್ತಸಂಬಂಧ ಮತ್ತು ಆನುವಂಶಿಕತೆಗಳಿಗೆ ಪ್ರಾಧಾನ್ಯವಿದೆ. ಆನುವಂಶಿಕತೆಯು ಬರೀ ಮಾಯೆ ಎಂದೂ ಸಾಮಾಜಿಕ ಸನ್ನಿವೇಶವೇ ಸರ್ವಸ್ವವೆಂದೂ ಸಿದ್ಧಪಡಿಸಲು ಪಾಶ್ಚಿಮಾತ್ಯ ವಿಜ್ಞಾನಿಗಳು ಪ್ರಯತ್ನಿಸುತ್ತಿರುವರು. ಆದರೆ ಈ ವಿಜ್ಞಾನಿಗಳ ಸಿದ್ಧಾಂತವು ಅನೇಕ ದೇಶಗಳಲ್ಲಿಯ ಜನರ ಅನುಭವಕ್ಕೆ ವಿರುದ್ಧವಾಗಿದೆ. ಆದರೆ ಸಾಮಾಜಿಕ ಸನ್ನಿವೇಶದ ತತ್ವವನ್ನು ಅಂಗೀಕರಿಸಿದರೂ ಅದನ್ನು ವರ್ಗಪದ್ಧತಿಗಿಂತಲೂ ಜಾತಿಪದ್ಧತಿಯ ಮೂಲಕ ಹೆಚ್ಚು ಚೆನ್ನಾಗಿ ಉಳಿಸಿ ಬೆಳೆಸಿಕೊಳ್ಳಬಹುದೆಂದು ಸಿದ್ಧಮಾಡಬಹುದು. ತನ್ನ ದೃಷ್ಟಿಕೋನವನ್ನು ಬಿಟ್ಟು ಬೇರೆ ಅಭಿಪ್ರಾಯವನ್ನು ತಿಳಿದುಕೊಳ್ಳುವ ಯೋಗ್ಯತೆಯು ಅಂಗ್ಲೋಸ್ಯಾಕ್ಸನ್ನನಲ್ಲಿ ಇಲ್ಲ. ತನಗೆ ಸಮ್ಮತವಿಲ್ಲದುದರ ವಿರುದ್ಧ ಅವನು ಅತ್ಯಂತ ಉಗ್ರವಾಗಿ ಸಿಡಿದೇಳುವನೆಂಬುದನ್ನು ಸಹಜವಾಗಿ ತಿಳಿಯಬಹುದು. ಆದರೆ ಹಿಂದುಗಳೇ ಆಗಲಿ ಕ್ರೈಸ್ತರೇ ಆಗಲಿ ಆದ ಭಾರತೀಯರು, ಜಾತಿಯ ಹಿನ್ನೆಲೆಯಲ್ಲಿರುವ ಭಾವನೆಯು ಉಚ್ಚನೀಚವೆಂಬ ಮದಾಂಧತೆಯ ಮನೋಭಾವವಲ್ಲೆಂಬುದನ್ನು ತಿಳಿದುಕೊಳ್ಳಬಲ್ಲರು. ಆತ್ಮ ಸಂಸ್ಕಾರದ ವಿವಿಧ ಪದ್ಧತಿಗಳ ವರ್ಗೀಕರಣವೇ ಅದು. ಸಾಮಾಜಿಕ ಸ್ಥಿರತೆ ಮತ್ತು ಪ್ರಗತಿ ಇವುಗಳ ಉತ್ತಮ ಸಮನ್ವಯವೇ ಅದು. ರಕ್ತಬಾಂಧವ್ಯಗಳಿಂದ ಬಂಧಿತರಾದವರನ್ನು ಪರಸ್ಪರ ಪ್ರೀತಿಸುವವರನ್ನು ಕುಟುಂಬ ಭಾವನೆಯು ಒಳಗೊಂಡಿರುವಂತೆ ಜೀವನದ ಪಾವಿತ್ರ್ಯದ ವಿಶಿಷ್ಟ ರೀತಿಯನ್ನುಳ್ಳ ಕುಟುಂಬಗಳನ್ನು ಜಾತಿಯು ಒಳಗೊಳ್ಳಲು ಯತ್ನಿಸುತ್ತಿದೆಯಲ್ಲದೆ ಜೀವನ ಮಟ್ಟದ ಅಂದರೆ ಆರ್ಥಿಕ ಜೀವನ ಮಟ್ಟದ ವಿಶಿಷ್ಟ

ರೀತಿಯನ್ನಲ್ಲ. ಆದರೆ, ಯಾವುದೇ ಒಂದು ಕುಟುಂಬವು ಯಾವುದೇ ಒಂದು ಪ್ರತ್ಯೇಕ ಮಾದರಿಯದು ಎನ್ನುವ ತೀರ್ಮಾನವನ್ನು ಕೆಲವು ವ್ಯಕ್ತಿಗಳ ವೈಯಕ್ತಿಕ ವೈಲಕ್ಷಣ್ಯಗಳಿಗೂ, ಸ್ವಾರ್ಥಪೂರಿತ ತೀರ್ಮಾನಕ್ಕೂ ಬಿಡುವುದಿಲ್ಲ. ಆನುವಂಶಿಕತೆಯ ತತ್ವದಲ್ಲಿ ಅದಕ್ಕೆ ನಂಬಿಕೆ ಇದೆ. ಹೀಗೆ ಅದು ಒಂದು ಸಂಸ್ಕಾರದ ಪದ್ಧತಿಯಾದ ಪ್ರಯುಕ್ತ ತಮ್ಮ ಜೀವನದ ಕ್ರಮವನ್ನು ಬದಲಿಸಲು ನಿರ್ಧರಿಸಿದರೂ ಒಬ್ಬ ವ್ಯಕ್ತಿಯಾಗಲಿ ಒಂದು ಕುಟುಂಬವಾಗಲಿ ವಿಶಿಷ್ಟ ಗುಂಪಿನಲ್ಲಿ ಇರಬೇಕಾದರೆ ಅದರಿಂದ ಅನ್ಯಾಯವಾಯ್ತೆಂದು ಅದು ತಿಳಿಯುವದಿಲ್ಲ. ನಮಗೆಲ್ಲರಿಗೂ ತಿಳಿದಂತೆ ಸಮಾಜಜೀವನದಲ್ಲಿ ಬದಲಾವಣೆಯು ಬಹು ನಿಧಾನವಾಗಿ ಸಂಭವಿಸುತ್ತದೆ, ಮತ್ತು ವಸ್ತುತಃ ಜೀವನದ ಪಲ್ಲಟಗಳಿಗೆ ಅನುಗುಣವಾಗಿ ಹೊಸ ಬಣಗಳ ನಿರ್ಮಾಣಕ್ಕೆ ಅವಕಾಶವನ್ನು ಮಾಡಿಕೊಟ್ಟದೆ. ಆದರೆ ಈ ಬದಲಾವಣೆಗಳು ಮೋಡಗಳ ಆಕಾರ ಬದಲಾವಣೆಯಂತೆ ಬಹಳ ಪ್ರಶಾಂತವಾಗಿಯೂ ಸಹಜವಾಗಿಯೂ ಆಗುತ್ತವೆ. ಇದಕ್ಕಿಂತಲೂ ಹೆಚ್ಚು ಅಂದವಾದ ಮಾನವೀಯ ಸಮನ್ವಯವನ್ನು ಕಲ್ಪಿಸುವದು ದುಸ್ತರವಾಗಿದೆ.

ಜಾತಿಯು ಉಚ್ಚನೀಚ ಅರ್ಥವನ್ನು ಸೂಚಿಸುವುದಿಲ್ಲ. ಅದು ಕೇವಲ ವಿವಿಧ ದೃಷ್ಟಿಕೋನಗಳನ್ನು ಮತ್ತು ತದನುಸಾರವಾದ ಜೀವನ ಕ್ರಮಗಳನ್ನು ಗುರುತಿಸುತ್ತದೆ. ಜಾತಿ ಪದ್ಧತಿಯಲ್ಲಿ ಒಂದು ಬಗೆಯ ತಾರತಮ್ಯವು ಬೆಳೆದುಬಂದಿದೆಯೆಂಬುದನ್ನು ಅಲ್ಲಗಳೆಯುವದರಲ್ಲಿ ಹುರುಳಿಲ್ಲ. ಆದರೆ ಬ್ರಾಹ್ಮಣರೇ ಇದನ್ನು ಸೃಷ್ಟಿಸಿದರೆಂದು ಹೇಳಲಾಗುವುದಿಲ್ಲ. ಎಲ್ಲ ಜಾತಿಗಳೂ ಒಂದು ಸಾಮಾನ್ಯ ಜೀವನ ಧ್ಯೇಯವನ್ನು ಅಂಗೀಕರಿಸಿದ ಬಳಿಕ ತಾರತಮ್ಯವು ಅನಿವಾರ್ಯವಾಗುತ್ತದೆ. ಏಕೆಂದರೆ, ಎಲ್ಲ ಜಾತಿಗಳೂ ಸಮಾನ ಪ್ರಮಾಣದಲ್ಲಿ ಆ ಧ್ಯೇಯವನ್ನು ಸಿದ್ಧಿಸಿಕೊಳ್ಳಲಾರವು. ಮಾಂಸಾಹಾರಕ್ಕಿಂತಲೂ ಶಾಕಾಹಾರವು ಶ್ರೇಷ್ಠವೆಂದು ಎಲ್ಲ ಜಾತಿಗಳೂ ತಿಳಿದುಕೊಂಡರೆ, ಶಾಕಾಹಾರಿ ಜಾತಿಯು ಸ್ವಾಭಾವಿಕವಾಗಿ ಶ್ರೇಷ್ಠವೆಂದು ಪರಿಗಣಿಸಲ್ಪಡುವುದು. ಭಾರತದಲ್ಲಿ ಕೆಲವು ಉಪಜಾತಿಗಳಿವೆ. ಅವು ಪರಸ್ಪರ ಸಮಾನಸ್ಕಂಧವಾಗಿ ಇರುವವೇನೋ ನಿಜ. ಆದರೆ ಅವುಗಳಲ್ಲಿ ಅಂತರ್ವಿವಾಹವಾಗಲಿ ಅಂತರ್ಭೋಜನವಾಗಲಿ ನಡೆದಿಲ್ಲ. ತಮ್ಮ ಮತಗಳು ಬೇರೆ ಬೇರೆಯಾಗಿರುವದರಿಂದ ಹಿಂದುವಾಗಲಿ ಮುಸಲ್ಮಾನ

ನಾಗಲಿ ಒಬ್ಬನಿಗೆ ಇನ್ನೊಬ್ಬನು ಉಚ್ಚನೀಚನೆಂದು ತಿಳಿದುಕೊಳ್ಳದಿರುವಂತೆ ಮತ್ತು ದಕ್ಷಿಣ ಭಾರತದಲ್ಲಿ ಲಿಂಗಾಯತ ಬ್ರಾಹ್ಮಣರು ಪರಸ್ಪರ ಊಟದ ವ್ಯವಹಾರವನ್ನು ಮಾಡಲು ನಿರಾಕರಿಸುವಂತೆ ಎಲ್ಲ ಜಾತಿಗಳು ತಮ್ಮ ತಿಂಡಿ ತೀರ್ಥಗಳನ್ನು ತಮ್ಮ ಜಾತಿಗಳ ಮಟ್ಟಿಗೆ ಮಾರ್ಯಾದಿತಗೊಳಿಸಿಕೊಳ್ಳಬಹುದು. ಬ್ರಾಹ್ಮಣರ ಅಥವಾ ವೈಷ್ಣವರ ಜೀವನ ಮಟ್ಟವು ಶ್ರೇಷ್ಠವೆಂದು ಅಂಗೀಕರಿಸಿದ್ದುದರಿಂದ ಮಾತ್ರ ಉಳಿದ ಜಾತಿಗಳು 'ಶುದ್ಧತರ' ಜಾತಿಗಳ ಕೈಯಿಂದ ಊಟಮಾಡಲು ಒಪ್ಪಿಕೊಂಡಿವೆ.

(ಯಂಗ್ ಇಂಡಿಯಾ: ೨೯-೧೨-೨೦)

ಗುರುವಯೂರ ಭಾಷಣ

ಅಸ್ಪೃಶ್ಯತೆಯ ಕಲಂಕದ ಬಗೆಗೆ ನನ್ನ ಭಾವನೆಯು ಆಳವೂ ತೀಕ್ಷ್ಣವೂ ಆಗಿದ್ದರೂ ಮತ್ತು ಈ ಅಸ್ಪೃಶ್ಯತೆಯು ಸಮೂಲ ನಾಶವಾಗದಿದ್ದರೆ ಹಿಂದೂಧರ್ಮವು ಹಾಳಾಗುವದೇ ನಿಶ್ಚಿತವೆಂದು ನನಗನಿಸುತ್ತಿದ್ದರೂ, ಯಾವದೇ ವಿಧದ ಒತ್ತಾಯದಿಂದ ಅಥವಾ ಶಕ್ತಿಯ ಪ್ರದರ್ಶನದಿಂದ ಇಲ್ಲವೆ ಬಲದಿಂದ ಅದನ್ನು ನಿರ್ಮೂಲಗೊಳಿಸುವ ಇಚ್ಛೆಯು ನನಗಿಲ್ಲ. ಅಸ್ಪೃಶ್ಯತಾನಿವಾರಣೆಯು ಕಾಯದೆಯ ಅಥವಾ ಒತ್ತಾಯದ ವಿಷಯವಲ್ಲ. ಅದು ಹೃದಯಪರಿವರ್ತನೆಯ ಮತ್ತು ಅಸಂಖ್ಯ ಹಿಂದುಗಳ ಸಂಪೂರ್ಣ ಶುದ್ಧೀಕರಣದ ವಿಷಯ. ಸಾವಿರಾರು ಕೆಲಸಗಾರರ ಸ್ವಾರ್ಥತ್ಯಾಗದಿಂದಲೇ ಅದು ಸಾಧ್ಯ; ಬೇರೆಯವರಿಗೆ ಅಪಾಯವನ್ನು ಮಾಡುವದರಿಂದಲ್ಲ. ಆದುದರಿಂದ ನಾನು ಓದಿದ ಪ್ರತಿಯೊಂದು ಶಾಸ್ತ್ರಗ್ರಂಥವೂ ತಪಶ್ಚರ್ಯೆಯಿಂದಲೇ ಧರ್ಮರಕ್ಷಣೆಯು ಸಾಧ್ಯವೆಂದು ಸಾರಿ ಹೇಳುತ್ತಿದೆ. ಆದುದರಿಂದ ನಾನು ಹೋದಲ್ಲೆಲ್ಲ ನನ್ನ ಸುತ್ತುಗಟ್ಟಿ ಬರುವ ನೀವೆಲ್ಲರೂ ಈ ಆಂದೋಲನವು ವೈಯಕ್ತಿಕ ಆತ್ಮಶುದ್ಧೀಕರಣದ ಮತ್ತು ಆತ್ಮಪ್ರತೀತಿಯ ಆಂದೋಲನವೆಂದು ಚೆನ್ನಾಗಿ ತಿಳಿದುಕೊಳ್ಳಬೇಕು. ಈ ದೃಷ್ಟಿಯಿಂದ ಈ ವಿಷಯವನ್ನು ನೀವು ನೋಡದಿದ್ದರೆ ನೀವು ನನ್ನನ್ನು ಬಿಟ್ಟು ಹೋದರೂ ಚಿಂತೆಯಿಲ್ಲ; ಸಭೆಗಳು ಬರಿದಾದರೂ ಅಡ್ಡಿಯಿಲ್ಲ. ಯಾವನಾದರೊಬ್ಬ ಪುರುಷನಾಗಲಿ ಸ್ತ್ರೀಯಾಗಲಿ ನನ್ನ ಮಾತುಗಳನ್ನು ಕೇಳಲು ಆತುರವಾಗಿದ್ದರೆ

ಅಥವಾ ನನಗೆ ಒಂದು ತೊಟ್ಟು ಹಾಲನ್ನು ಕೊಡಲು ಬಯಸುತ್ತಿದ್ದರೆ ಅವನಾಗಲಿ ಅವಳಾಗಲಿ ಆತ್ಮಶುದ್ಧೀಕರಣದ ಸಂಪೂರ್ಣ ಭಾವನೆಯನ್ನಿಟ್ಟುಕೊಂಡಿದ್ದರೆ ಹಾಗು ಈ ವಿಷಯದೊಡನೆ ತಾದಾತ್ಮ್ಯ ಹೊಂದಿದ್ದರೆ ಹಾಗೆ ಮಾಡಬಹುದು.

ಗುರುವಾಯೂರಿನ ದೊಡ್ಡ ದೇವಾಲಯದ ನೆರಳಿನಲ್ಲಿ ನನ್ನ ಈ ಶ್ರದ್ಧೆಯನ್ನು ಹೀಗೆ ಪ್ರಕಟಿಸಿದ ಬಳಿಕ ವರ್ಣಾಶ್ರಮ ಸ್ವರಾಜ್ಯಸಂಘದ ಹಾಗು ತತ್ಸಮ ಸಂಸ್ಥೆಗಳ ಚಟುವಟಿಕೆಗಳನ್ನು ಸಂಘಟಿಸುವವರಿಗೆ ಅಂತಃಕರಣಪೂರ್ವಕವಾಗಿ ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳಬಯಸಿದ್ದೇನೆ. ತಾವು ಏರ್ಪಡಿಸುತ್ತಿರುವ ಮತಪ್ರದರ್ಶನಗಳಿಂದ ಸನಾತನ ಧರ್ಮದ ರಕ್ಷಣೆಯಾಗುವದಿಲ್ಲೆಂಬುದನ್ನು ಅವರು ತಿಳಿದುಕೊಳ್ಳಬೇಕು. ಮಧ್ಯಪ್ರಾಂತದ ನನ್ನ ಸಂಚಾರದಲ್ಲೆಲ್ಲ ಅವರು ತಮ್ಮ ಜನರನ್ನು ಕಳಿಸಿಕೊಟ್ಟರು. ಅವರು ನನ್ನ ಕಾರಿನ ಮುಂದೆ ಅಡ್ಡಬಿದ್ದು ಪ್ರತಿಯೊಂದು ಹಂತದಲ್ಲಿಯೂ ನನ್ನ ಮುನ್ನಡೆಯನ್ನು ತಡೆಯಲು ಪ್ರಯತ್ನಿಸಿದರು. ಐದಾರು ಜನರ ಈ ಗುಂಪಿಗೂ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದ ಸ್ವಯಂಸೇವಕರ ಗುಂಪಿಗೂ ಅನೇಕಸಲ ತಿಕ್ಕಾಟಗಳಾದವು. ಸುದೈವದಿಂದ ಅನಾಹುತವಾವುದೂ ಸಂಭವಿಸಲಿಲ್ಲ. ಮಧ್ಯಪ್ರಾಂತದ ಸಂಚಾರದಲ್ಲಿಯೂ ಒಬ್ಬರೊಬ್ಬರಿಗೆ ಕಿರಕುಳ ಗಾಯಗಳಾದವೇನೋ ನಿಜ. ಆ ನಿಷೇಧಾತ್ಮಕ ಚಟುವಟಿಕೆಗಳನ್ನು ನಡೆಸಿದ ಜನರಕೂಡ ನಾನು ಬೇಗನೆ ಗೆಳೆತನವನ್ನು ಮಾಡಿಕೊಂಡೆನು ಮತ್ತು ಶಕ್ಯವಿದ್ದಷ್ಟು ಕಳಕಳಿಯಿಂದ ಹಿಂದೂಧರ್ಮದ ರಕ್ಷಣೆಯ ದಾರಿಯು ಅದಲ್ಲವೆಂದು ಹೇಳಿದೆನು. ತಾವೇನನ್ನು ಮಾಡುತ್ತಿರುವೆವೆಂಬುದನ್ನು ಅರಿಯದಂತಹ ಕೆಲ ತರುಣರು ಆ ಗುಂಪಿನಲ್ಲಿದ್ದರು. ಹಿಂದೂತ್ವದ ಮೂಲ ತತ್ವಗಳ ಕಲ್ಪನೆಯು ಅವರಲ್ಲಿ ಒಬ್ಬನನ್ನು ಬಿಟ್ಟು ಉಳಿದವರಿಗೆ ಇದ್ದಿತೋ ಇಲ್ಲವೋ ಎಂದು ನನಗೆ ಸಂಶಯವಿದೆ. ಇಲ್ಲಿಯಾದರೂ ಅಂತಹ ಪ್ರದರ್ಶಕರಾರಾದರೂ ಇದ್ದರೆ ಅವರನ್ನು ಕಂಡು ಅವರ ಕೂಡ ವಿಚಾರವಿನಿಮಯ ಮಾಡಬೇಕು, ಅವರನ್ನು ತಿಳಿದುಕೊಳ್ಳಬೇಕು, ಅವರು ಯಾರೆಂಬುದನ್ನು ಗೊತ್ತುಮಾಡಿಕೊಳ್ಳಬೇಕೆಂದು ನನ್ನ ಆಶೆಯಾಗಿತ್ತು. ಆದರೆ ಮಲಬಾರಿನಲ್ಲಿ ನಾನು ಕಾಲಿಡುವಷ್ಟರಲ್ಲಿಯೆ ಈಗ ನೋಡಿದಂತಹ ದೃಶ್ಯವು ನನ್ನ ಕಣ್ಣಿಗೆ ಬಿತ್ತು. ಮುಂಚೆಯೇ ನನಗೆ ಅವರ ಪರಿಚಯವಾಗಿದ್ದರೆ ಮತ್ತು

ಅವರು ಏನು ಮಾಡಬೇಕೆಂದಿರುವರೆಂಬುದರ ಪರಿಚಯವು ನನಗಾಗಿದ್ದರೆ ಒಳಿತಾಗುತ್ತಿತ್ತು. ಆದರೆ ಅವರು ಬೇರೆ ದಾರಿಯನ್ನು ಹಿಡಿಯಬಯಸಿದರು. ನನ್ನನ್ನು ಕಾಣಬೇಕೆಂದು, ಮತ್ತು ನಾನು ಅವರಿಗಾಗಿ ಏನು ಮಾಡಬೇಕೆಂಬ ಅಪೇಕ್ಷೆಯು ಅವರಿಗಿದೆಯೆಂಬುದನ್ನು ಹೇಳಲು ಅವರನ್ನು ನಾನು ಆಮಂತ್ರಿಸುತ್ತೇನೆ. ಈ ಸ್ಪರ್ಶನದ ವಿಷಯ ಒಂದನ್ನು ಮಾತ್ರ ಬಿಟ್ಟುಗೊಡದೆ ಅವರಿಗಾಗಿ ಎಲ್ಲ ಅನುಕೂಲತೆಗಳನ್ನು ಅವರ ಶಾಂತಿಯುತ ಮತಪ್ರದರ್ಶನಕ್ಕಾಗಿ ನಾನು ಮಾಡಿಕೊಡುತ್ತೇನೆ. ಯಾವದೇ ಬಗೆಯ ಪುಂಡಾಟಿಕೆಯನ್ನು ಯಾರೂ ಮಾಡದಂತೆ ನೋಡಿಕೊಳ್ಳಲು ನಾನು ಆತುರನಾಗಿದ್ದೇನೆ. ಉದ್ದೇಶ ಪ್ರಾಮಾಣಿಕತೆಯ ಬಗೆಗೆ ನಾನು ಪಡೆದುಕೊಂಡಿರುವ ಶ್ರೇಯಸ್ಸನ್ನೇ ಸನಾತನಿಗಳೆಂದು ಕರೆದುಕೊಳ್ಳುವ ಅವರಿಗಾದರೂ ಕೊಡಲು ಸಿದ್ಧನಿದ್ದೇನೆ. ಆದರೆ ಉಭಯರಿಗೂ ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಲೋಕಾಭಿಪ್ರಾಯವನ್ನು ರೂಪಿಸಲು ಸಮಾನ ಹಕ್ಕು ಇರಬೇಕು. ಸನಾತನ ಧರ್ಮವೇನೂ ಒಬ್ಬರ ಅಥವಾ ಒಂದು ಗುಂಪಿನ ಹಕ್ಕಲ್ಲ. ಅವರು ಹೇಳಿಕೊಳ್ಳುತ್ತಿರುವಂತೆ, ನಾನಾದರೂ ಪ್ರತಿಯೊಂದು ರೀತಿಯಲ್ಲಿಯೂ ಸನಾತನಧರ್ಮದ ಪ್ರತಿನಿಧಿಯಿದ್ದೇನೆಂದು ಹೇಳುತ್ತೇನೆ. ಅವರು ಪ್ರತಿಜ್ಞೆಮಾಡುವ ಶಾಸ್ತ್ರಗಳ ಪ್ರಮಾಣದ ಮೇಲೆಯೆ ಅಸ್ಪೃಶ್ಯತೆಗೆ ನನ್ನ ವಿರೋಧವಿದೆ. ಲಕ್ಷಾಂತರ ಹಿಂದುಗಳಲ್ಲಿ ನಾನೊಬ್ಬನೇ ಉಳಿದರೂ ಶಾಸ್ತ್ರಗಳ ನನ್ನ ಅರ್ಥಕ್ಕೆ ನಾನು ಅಂಟಿಕೊಳ್ಳಲೇಬೇಕು. ಏಕೆಂದರೆ ನನ್ನ ಮೂಲ ಅಸ್ತಿತ್ವದ ಅಂತರ್ವಾಣಿಯನ್ನು ನಿಷೇಧಿಸಕೂಡದೆಂದು ಆ ಶಾಸ್ತ್ರಗಳೇ ಹೇಳುತ್ತಿವೆ. ನಿಮ್ಮ ಮುಂದೆ ನಾನಿಡುತ್ತಿರುವ ಅರ್ಥವು ನನ್ನದೊಬ್ಬನದೇ ಅಲ್ಲವೆಂಬುದು ನನ್ನ ಸುದೈವ. ತದ್ವಿರುದ್ಧ ಸನಾತನ ಧರ್ಮದ ಭಾಷ್ಯಕಾರರೆಂದು ಹೇಳಿಕೊಳ್ಳುವವರಿಗೆ ಇರುವಷ್ಟೇ ಶಾಸ್ತ್ರಗಳ ಅರ್ಥವನ್ನು ಮಾಡುವ ಅಧಿಕಾರವುಳ್ಳ ಪಂಡಿತರಾದ ಶಾಸ್ತ್ರಿಗಳು ನನ್ನ ಬಳಿಯಲ್ಲಿಯೂ ಇರುವರು. ಸಾವಿರಾರು ಸ್ತ್ರೀಪುರುಷರಮುಂದೆ ನಾನಿಟ್ಟ ಅರ್ಥವನ್ನೇ ಅವರಾದರೂ ಅನುಮೋದಿಸುತ್ತಿರುವರು. ಐವತ್ತು ವರ್ಷಗಳ ಅವ್ಯಾಹತವಾದ ಅನುಭವದ ಆಧಾರದಮೇಲೆ ನಾವು ಇಂದು ಆಚರಿಸುತ್ತಿರುವ ಅಸ್ಪೃಶ್ಯತೆಗೆ ಹಿಂದೂ ಶಾಸ್ತ್ರಗಳಲ್ಲಿ ಯಾವ ಬೆಂಬಲವೂ ದೊರೆಯುವದಿಲ್ಲವೆಂದು ನನಗೆ ಮನವರಿಕೆಯಾಗಿದೆ. (ಹರಿಜನ : ೨೬-೧-೩೪)

ಡಾ. ಅಂಬೇಡಕರ ಮತ್ತು ಜಾತಿ

ಡಾ. ಅಂಬೇಡಕರರಿಂದ ಈಗತಾನೆ ಬಂದ ಒಂದು ಪತ್ರವು ಹೀಗಿದೆ :

"ಕಳೆದ ಶನಿವಾರ ನನ್ನೊಡನೆ ನಡೆಸಿದ ಮಾತುಕತೆಗಳ ಕೊನೆಗೆ ನೀವು ನಿಮ್ಮ ಹೊಸ ಸಾಪ್ತಾಹಿಕ ಹರಿಜನ ಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲಿ ಸೇರಿಸಲು ಒಂದು ಸಂದೇಶವನ್ನು ಕಳಿಸಲು ನನಗೆ ಹೇಳಿದ್ದಿರಿ. ಸಂದೇಶವನ್ನು ಕೊಡಲಾರೆನೆಂದು ನನಗನಿಸುತ್ತದೆ. ಏಕಂದರೆ ನನ್ನಿಂದ ಬಂದ ಸಂದೇಶವನ್ನು ಗೌರವದಿಂದ ಕಾಣುವಂತೆ ಹಿಂದುಗಳ ದೃಷ್ಟಿಯಲ್ಲಿ ನನಗೆ ಸಾಕಷ್ಟು ಯೋಗ್ಯತೆಯುಂಟೆಂದು ನಾನು ತಿಳಿಯುವದು ಆಧಾರವಿಲ್ಲದ ಧಾರ್ಷ್ಟ್ಯವಾಗುವದೆಂದು ನಾನು ನಂಬಿದ್ದೇನೆ. ನಾನೊಬ್ಬ ಮಾನವನಾಗಿ ಮಾನವ ರೀತಿಯಲ್ಲಿ ಮಾತ್ರ ಹೇಳಬಲ್ಲೆ. ಅಂತು ನೀವು ಕೈಕೊಂಡಿರುವ ಹಿಂದೂ ಸಂಘಟನೆಯ ಒಂದು ಮಹತ್ವದ ವಿಷಯವನ್ನು ಕುರಿತು ಹಿಂದೂ ಜನರಿಗೆ ನನ್ನ ಅಭಿಪ್ರಾಯಗಳು ಗೊತ್ತಾಗುವದು ಇಷ್ಟವಾಗಿದೆ. ಆದುದರಿಂದ ನಿಮ್ಮ 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಲೋಸುಗ ಜೊತೆಯಲ್ಲಿಯ ಹೇಳಿಕೆಯೊಂದನ್ನು ನಿಮ್ಮ ಕಡೆಗೆ ಕಳಿಸುತ್ತಿದ್ದೇನೆ.

ಹೇಳಿಕೆ

"ಜಾತಿ ಬಹಿಷ್ಕೃತರು ಜಾತಿಪದ್ಧತಿಯ ಒಂದು ಉಪಫಲವೇ ಸರಿ. ಜಾತಿಗಳಿರುವವರೆಗೆ ಜಾತಿ ಬಹಿಷ್ಕೃತರು ಇರುವುದು ಸಹಜ. ಜಾತಿ ಪದ್ಧತಿಯು ನಾಶವಾಗದೆ ಜಾತಿಬಹಿಷ್ಕೃತರ ಉದ್ಧಾರವಾಗಲಾರದು. ಈ ದುಷ್ಟವಾದ ಹಾಗು ಅನಿಷ್ಟವಾದ ಪದ್ಧತಿಯು ಹಿಂದೂಧರ್ಮದಿಂದ ಸಂಪೂರ್ಣವಾಗಿ ಅಳಿದುಹೋದಹೊರತು ಭಾವೀ ಹೋರಾಟದಲ್ಲಿ ಹಿಂದೂಗಳನ್ನು ಬೇರಾವುದೂ ಉಳಿಸಲಾರದು ಮತ್ತು ಅವರ ಅಸ್ತಿತ್ವದ ಆಶ್ವಾಸನವನ್ನು ನೀಡಲಾರದು."

ದಾಮೋದರ ಹಾಲ್
ಪರೇಲ, ಮುಂಬಯಿ ೧೨
೭ ನೇ ಫೆಬ್ರುವರಿ ೧೯೩೩ — ಬಿ. ಆರ್. ಅಂಬೇಡಕರ

ಡಾ. ಅಂಬೇಡಕರರು ಬಹಳ ರೇಗಿದ್ದಾರೆ. ಹಾಗೆ ಅನಿಸಲು ಅವರಿಗೆ ಸಾಕಷ್ಟು ಕಾರಣಗಳಿವೆ. ಅವರಿಗೆ ಉದಾರ ಶಿಕ್ಷಣವು ದೊರೆತಿದೆ. ಸಾಮಾನ್ಯ ಸುಶಿಕ್ಷಿತ ಭಾರತೀಯನಿಗಿಂತ ಅವರು ಹೆಚ್ಚು ಬುದ್ಧಿವಂತ ರಾಗಿದ್ದಾರೆ. ಭಾರತದ ಹೊರಗಿನ ದೇಶಗಳಲ್ಲಿ ಅವರನ್ನು ಅತ್ಯಂತ ಪ್ರೀತ್ಯಾ ದರಗಳಿಂದ ಕಾಣುವವರಿದ್ದಾರೆ. ಆದರೆ ಭಾರತದಲ್ಲಿ ಹಿಂದೂ ಜನರಲ್ಲಿ ಅಡಿಗಡಿಗೆ ಅವರು ಹಿಂದೂ ಸಮಾಜದ ಬಹಿಷ್ಕೃತರಲ್ಲೊಬ್ಬರೆಂದು ಹೇಳ ಲಾಗುತ್ತಿದೆ. ಅದರಿಂದ ಅವರಿಗೇನೂ ಅವಮಾನವಿಲ್ಲ. ಏಕೆಂದರೆ ಹಿಂದೂ ಸಮಾಜಕ್ಕೆ ಅವರು ಯಾವ ಅಹಿತವನ್ನೂ ಮಾಡಿಲ್ಲ. ನಿರ್ಮಲ ನಾದ ಮತ್ತು ಸ್ವಾಭಿಮಾನಿಯಾದ ಬ್ರಾಹ್ಮಣನ ಬಾಹ್ಯಾಂಗವು ಹಸನಾಗಿ ದ್ದಷ್ಟೇ ಅವರ ಬಹಿರಂಗವಾದರೂ ಸ್ವಚ್ಛವಾಗಿದೆ. ಅವರ ಅಂತರಂಗದ ಬಗ್ಗೆ ಜಗತ್ತಿಗೆ ನಮ್ಮ ಅಂತರಂಗದ ಜ್ಞಾನವೆಷ್ಟಿದೆಯೋ ಅಷ್ಟೇ ಗೊತ್ತಿದೆ. ಹೀಗಿದ್ದರೂ "ತನ್ನಿಂದ ಬಂದ ಸಂದೇಶವನ್ನು ಗೌರವದಿಂದ ಕಾಣುವಂತೆ ಹಿಂದೂಗಳ ದೃಷ್ಟಿಯಲ್ಲಿ ತನಗೆ ಸಾಕಷ್ಟು ಯೋಗ್ಯತೆಯುಂಟೆಂದು ತಿಳಿಯು ವದು ಅನಾಧಾರಿಯಾದ ಧಾರ್ಷ್ಟ್ಯವಾಗುವದು" ಎಂದು ಅವರು ನಂಬಿ ದ್ದಾರೆ. ಇದು ಸವರ್ಣರಿಗೆ ಲಜ್ಜಾಸ್ಪದವಲ್ಲದೆ ಅವರಿಗಲ್ಲ. ಸಾವಿರಾರು ಸವರ್ಣೀಯರು ಇಂದು ಅವರ ಸಂದೇಶವನ್ನು ಬೇರೆ ಧುರೀಣರ ಸಂದೇಶಕ್ಕೆ ಕೊಡುತ್ತಿರುವ ಗೌರವಾದರಗಳಂತೆಯೇ ಕಿವಿಗೊಡುತ್ತಿರುವರೆಂದು ನಾನು ಅವರಿಗೆ ತಿಳಿಸಬಯಸುತ್ತೇನೆ. ಮತ್ತು ಅವರ ಲೆಕ್ಕದಲ್ಲಿ ಉಚ್ಚನೀಚ ಎಂಬ ಭೇದ ಭಾವವೇ ಇಲ್ಲ. 'ಹರಿಜನ'ವು ನನ್ನ ಸಾಪ್ತಾಹಿಕವಲ್ಲೆಂಬು ದನ್ನು ಅವರು ತಿಳಿದಿರಲಿ. ಅದರ ಒಡೆತನದ ಹಕ್ಕುಗಳ ಸಂಬಂಧದಲ್ಲಿ ಹೇಳುವದಾದರೆ ಅವು ಅಸ್ಪೃಶ್ಯ ಸೇವಕ ಸಂಘಕ್ಕೆ ಸೇರಿರುವವು. ಆದುದ ರಿಂದ ಅದು ಇತರ ಹಿಂದುಗಳಿಗೆ ಸಂಬಂಧಿಸಿದಷ್ಟೇ ಅವರಿಗೂ ಸಂಬಂಧಿಸಿದೆ ಯೆಂದು ಅವರು ತಿಳಿದುಕೊಳ್ಳಬೇಕು.

ಅವರ ಸಂದೇಶದ ಸಾರವನ್ನು ಕುರಿತು, ಜಾತಿ ಪದ್ಧತಿಯ ಬಗ್ಗೆ ಅವರು ತಳೆದಿರುವ ಅಭಿಪ್ರಾಯವನ್ನು ಅನೇಕ ಸುಶಿಕ್ಷಿತ ಭಾರತೀಯರೂ ತಳೆದಿರುವರು. ಆದರೆ ಈ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆಯು ಮಾತ್ರ ಇಲ್ಲ. ವರ್ಣಾಶ್ರಮ ಪದ್ಧತಿಯಿಂದ ಭಿನ್ನವಾದ ಜಾತಿಪದ್ಧತಿಯು ದುಷ್ಟ ಹಾಗೂ ಅನಿಷ್ಟ ಮತಾಂಧತೆಯೆಂದು ನಾನು ನಂಬುವದಿಲ್ಲ. ಅದರಲ್ಲಿ ಕೆಲವು ದೋಷ

ಗಳೂ ನ್ಯೂನತೆಗಳೂ ಇರುತ್ತವೆ. ಆದರೆ ಅಸ್ಪೃಶ್ಯತೆಯ ಬಗೆಗೆ ಇದ್ದಂತೆ ಅದರಲ್ಲಾವ ಪಾಪವೂ ಇಲ್ಲ. ಅದು ಜಾತಿಪದ್ಧತಿಯ ಒಂದು ಉಪ ಸೃಷ್ಟಿಯಾಗಿದ್ದರೆ ಬೆಳೆಗಳಲ್ಲಿ ಕಸಕಡ್ಡಿಗಳಿದ್ದಂತೆ ಅಥವಾ ದೇಹದ ಮೇಲೆ ವ್ರಣಗಳಿದ್ದಂತೆ ಎಂಬಂರ್ಥದಲ್ಲಿರಬಹುದು. ಅಂದಬಳಿಕ ಕಸಕಡ್ಡಿಗಳಿರುವವೆಂದು ಬೆಳೆಯನ್ನು ನಾಶಮಾಡುವದು ತಪ್ಪು; ದೇಹದಮೇಲೆ ಒಂದು ಹುಣ್ಣಿರುವದೆಂದು ದೇಹವನ್ನೇ ನಾಶಮಾಡುವುದೊಳಿತಲ್ಲೆಂಬಂತೆ, ಜಾತಿ ಬಾಹಿರತೆಯ ಅಂಶವು ಇರುವದೆಂದು ಜಾತಿಪದ್ಧತಿಯನ್ನೇ ನಾಶಮಾಡುವದೊಳಿತಲ್ಲ. ನಾವು ತಿಳಿದುಕೊಂಡಿರುವಂತಹ ಹೊಲೆತನವು ನಾಶವಾಗಲೇಬೇಕು. ಸಮಗ್ರ ಜಾತಿ ಪದ್ಧತಿಯು ನಾಶವಾಗಬಾರದೆಂದಿದ್ದರೆ ಆ ಅನಿಷ್ಟ ಅಸ್ಪೃಶ್ಯತೆಯು ಅಳಿಯಲೇಬೇಕು. ಆದುದರಿಂದ ಅಸ್ಪೃಶ್ಯತೆಯು ಅಳಿಯಲೇಬೇಕು. ಆದುದರಿಂದ ಅಸ್ಪೃಶ್ಯತೆಯು ಜಾತಿಪದ್ಧತಿಯ ಉಪಸೃಷ್ಟಿಯಲ್ಲ. ಆದರೆ ಹಿಂದೂಧರ್ಮದಲ್ಲಿ ಹಿಂದಿನಿಂದ ಸೇರಿದ ಉಚ್ಚನೀಚ ತಾರತಮ್ಯದ ಪರಿಣಾಮವದು. ಹಿಂದೂಸಮಾಜವನ್ನೇ ಅದು ಕೊರೆಯುತ್ತಿದೆ. ಅಸ್ಪೃಶ್ಯತೆಯ ಮೇಲಿನ ದಾಳಿಯು ಹೀಗೆ ಈ ಉಚ್ಚನೀಚ ಭೇದಭಾವದ ಮೇಲಿನ ದಾಳಿಯೆ ಆಗಿದೆ. ಅಸ್ಪೃಶ್ಯತೆಯು ಅಳಿದೊಡನೆಯೆ ಜಾತಿಪದ್ಧತಿಯು ಶುದ್ಧವಾಗುವದು. ಅರ್ಥಾತ್ ನನ್ನ ಕನಸಿನ ಪ್ರಕಾರ ಅದು ನಿಜವಾದ ವರ್ಣಧರ್ಮವಾಗಿಬಿಡುವದು. ಬಳಿಕ ಪರಸ್ಪರ ಪೂರಕವಾದ ಸಮಾಜದ ನಾಲ್ಕು ವಿಭಾಗಗಳು ಏರ್ಪಡುವವಲ್ಲದೆ ಉಚ್ಚನೀಚವೆಂಬ ತಾರತಮ್ಯ ಉಳಿಯುವದಿಲ್ಲ. ಈ ನಾಲ್ಕು ವಿಭಾಗಗಳೂ ಹಿಂದೂಧರ್ಮದ ಏಳಿಗೆಗೆ ಆವಶ್ಯಕವಾಗಿವೆ. ಅದು ಹೇಗಾಗಬಲ್ಲದು ಮತ್ತು ಆ ವರ್ಣಾಶ್ರಮವೆಂದರೇನು ಎಂಬುದನ್ನು ಈಗ ಇಲ್ಲಿ ಪರೀಕ್ಷಿಸುವ ಅಗತ್ಯವಿಲ್ಲ. ಆದರೆ ನನ್ನ ವಿಶ್ವಾಸವು ಹೀಗಿರುವಾಗ ಡಾ. ಅಂಬೇಡಕರರಂತಹ ಜನರ ವಿಚಾರವಾದ ಅಸ್ಪೃಶ್ಯತೆಯ ನಿವಾರಣೆಗೆ ಜಾತಿಪದ್ಧತಿಯ ನಾಶವು ಅವಶ್ಯವೆಂಬ ಅಭಿಪ್ರಾಯವನ್ನು ನಾನು ಒಪ್ಪುವದಿಲ್ಲ. ಜಾತಿ ಮತ್ತು ವರ್ಣ ಇವುಗಳ ಭೇದವನ್ನು ಅವರು ತಿಳಿದುಕೊಂಡಿಲ್ಲ. ಆದರೆ ಆ ಮಾತು ಬೇರೆ. ಸದ್ಯಕ್ಕೆ ವರ್ಣಾಶ್ರಮದಲ್ಲಿ ನಂಬಿಕೆಯುಳ್ಳವರಾಗಲಿ ಇಲ್ಲದಿದ್ದವರಾಗಲಿ ಎಲ್ಲ ಹಿಂದೂ ಸುಧಾರಕರೂ ಅಸ್ಪೃಶ್ಯರ, ಜಾತಿ ಬಾಹಿರರ ಪ್ರಶ್ನೆಯನ್ನು ಕುರಿತು ವಿಚಾರಮಾಡಲು ಒಪ್ಪಿದಾರೆ. ಅಸ್ಪೃಶ್ಯತೆಗೆ ಇರುವ ವಿರೋಧವು ಉಭಯ

ರಿಗೂ ಸಾಮಾನ್ಯವಾಗಿದೆ. ಆದುದರಿಂದ ಅಸ್ಪೃಶ್ಯತಾ ನಿವಾರಣೆಯ ಮಟ್ಟಿಗೆ ಅವರಿಬ್ಬರ ಸಂಯುಕ್ತ ವಿರೋಧವು ಮರ್ಯಾದಿತವಾಗಿದೆ. ಆದುದರಿಂದ ಅಸ್ಪೃಶ್ಯತಾ ರಾಕ್ಷಸನ ವಿರುದ್ಧ ಹೂಡಿದ ಈ ಆಂಧೋಲನ ದಲ್ಲಿ ಮನಃಪೂರ್ವಕವಾಗಿ ಧುಮುಕಲು ಡಾ. ಅಂಬೇಡಕರರ ಮತ್ತು ಅವರಂತೆ ವಿಚಾರಮಾಡುವ ಇತರರನ್ನು ನಾನು ಆಹ್ವಾನಿಸುತ್ತೇನೆ. ಈ ಆಂದೋಲನದ ಕೊನೆಗೆ ವರ್ಣಾಶ್ರಮದಲ್ಲಿ ನಾವು ಹೋರಾಡಬೇಕಾದ ಅಂಶವೇನೂ ಉಳಿದಿಲ್ಲೆಂದು ಕೂಡ ನಮಗನಿಸಬಹುದು. ಒಂದು ಸಮಯ ಅಂತಹ ವಿಕೃತವಾದುದೇನಾದರೂ ವರ್ಣಾಶ್ರಮದಲ್ಲಿ ಆಗ ಕಂಡುಬಂದರೆ ಸಮಗ್ರ ಹಿಂದೂ ಸಮಾಜವೇ ಅದನ್ನು ನಿವಾರಿಸಲು ಹೋರಾಡುವದು. ಏಕಂದರೆ ಅಸ್ಪೃಶ್ಯತೆಯ ವಿರುದ್ಧವಾಗಿರುವ ಈ ಆಂದೋಲನವು ಬಲುಮೆಯ ಆಂದೋಲನವಲ್ಲ; ಆದರೆ ಒಲುಮೆಯ ಆಂದೋಲನವು. ಈ ಆಂದೋಲನದ ಕೊನೆಯ ಘಟ್ಟದಲ್ಲಿ ನಾವೆಲ್ಲರೂ ಒಂದೇ ಶಿಬಿರದಲ್ಲಿ ಸೇರಬಹುದು. ಇದಕ್ಕೆ ವಿರುದ್ಧವಾಗಿ ಏನಾದರೂ ಸಂಭವಿಸಿದರೆ ವರ್ಣಾ ಶ್ರಮದ ವಿರುದ್ಧ ಹೇಗೆ ಮತ್ತು ಯಾರು ಹೋರಾಡಬೇಕೆಂಬುದನ್ನು ವಿಚಾರಿಸಲು ಸಾಕಷ್ಟು ಸಮಯಾವಕಾಶವು ಆಗ ದೊರೆಯುವದು.

(ಹರಿಜನ : ೧೧-೨-೩೩)

ವರ್ಣಾಶ್ರಮ

(ತಂಜಾವೂರಿನಲ್ಲಿ ೧೬-೨-೩೭ ನೇ ದಿನ ಗಾಂಧೀಜಿಯು ಮಾಡಿದ ಉಪನ್ಯಾಸದಿಂದ ಆಯ್ದ ಭಾಗವು ಹೀಗಿದೆ)

ನನ್ನ ಅಭಿಪ್ರಾಯದ ಮೇರೆಗೆ ಆನುವಂಶಿಕವಾಗಿ ಅಥವಾ ಸಂಪ್ರಾಪ್ತ ವಾದ ಶ್ರೇಷ್ಠತೆಯೆಂಬುದಿಲ್ಲ. ಮೂಲಭೂತವಾದ ಅದ್ವೈತ ಸಿದ್ಧಾಂತದಲ್ಲಿ ನನ್ನ ಶ್ರದ್ಧೆಯಿದೆ. ಮತ್ತು ಯಾವದೇ ಹಂತದಲ್ಲಿ ಉಚ್ಚನೀಚತೆಯ ಕಲ್ಪನೆಗೆ ಅದ್ವೈತದಲ್ಲಿ ಆಸ್ಪದವಿಲ್ಲೆಂದು ನಾನು ಅದ್ವೈತದ ಅರ್ಥವನ್ನು ಮಾಡಿಕೊಂಡಿದ್ದೇನೆ. ಎಲ್ಲ ಮನುಷ್ಯರೂ ಜನ್ಮತಃ ಸಮಾನರಾಗಿರುವರೆಂದು ನನ್ನ ನಂಬಿಕೆಯಿದೆ. ಎಲ್ಲರೂ ಇಂಗ್ಲಂಡಿನಲ್ಲಿ, ಅಮೇರಿಕಾದಲ್ಲಿ, ಅಥವಾ

ಭಾರತದಲ್ಲಿ ಎಲ್ಲಿಯೇ ಹುಟ್ಟಿರಲಿ ಅವರೆಲ್ಲರೂ ಒಂದೇ ಆತ್ಮವಸ್ತುವನ್ನು ಹೊಂದಿದವರು ಎಂದು ನನ್ನ ಮತ. ಎಲ್ಲ ಮನುಷ್ಯರ ಸಮಾನತೆಯಲ್ಲಿ ನನಗೆ ನಂಬಿಕೆಯಿರುವದರಿಂದಲೇ ನಾನು ನಮ್ಮ ಆಡಳಿತಗಾರರು ತಾವು ಶ್ರೇಷ್ಠರೆಂದು ತಿಳಿದುಕೊಂಡಿರುವ ಮತದ ವಿರುದ್ಧ ಹೋರಾಡುತ್ತಿದ್ದೇನೆ. ಹೆಜ್ಜೆ ಹೆಜ್ಜೆಗೂ ನಾನು ಈ ಮತದ ವಿರುದ್ಧ ದಕ್ಷಿಣ ಆಫ್ರಿಕದಲ್ಲಿ ಹೋರಾಡಿದ್ದೇನೆ. ನನ್ನ ಈ ಅಂತಃಸ್ಫೂರ್ತವಾದ ಶ್ರದ್ಧೆಯಮೂಲಕವೇ ನಾನು ಭಂಗಿ, ನೇಕಾರ, ನೂಲುವವ, ಒಕ್ಕಲಿಗ ಮತ್ತು ಕೂಲಿಕಾರನೆಂದು ನನ್ನನ್ನು ಕರೆದುಕೊಳ್ಳುವಲ್ಲಿ ಆನಂದವನ್ನು ಪಡೆಯುತ್ತಿದ್ದೇನೆ. ಜನ್ಮದ ನಿಮಿತ್ತದಿಂದಾಗಲಿ ಇಲ್ಲವೆ ಹಿಂದಿನಿಂದ ಗಳಿಸಿದ ಜ್ಞಾನದ ಮೂಲಕವಾಗಲಿ ತಾವು ಶ್ರೇಷ್ಠರೆಂದು ತಿಳಿದುಕೊಂಡಿರುವ ಸಂದರ್ಭಗಳಲ್ಲೆಲ್ಲ ಬ್ರಾಹ್ಮಣರ ವಿರುದ್ಧ ನಾನು ಹೋರಾಡಿದ್ದೇನೆ. ಸ್ವಬಾಂಧವರಿಗಿಂತ ತಾನು ಉಚ್ಚನೆಂದು ಯಾವನಾದರೂ ಭಾವಿಸಿದರೆ ಅದು ಅಮಾನುಷವೆಂದು ನಾನು ತಿಳಿಯುತ್ತೇನೆ. ನಾನು ಹೇಳುತ್ತಿರುವ ಈ ವಿಚಾರಕ್ಕೆ ಭಗವದ್ಗೀತೆಯಲ್ಲಿ ಸರಲ ಆಧಾರವಿದೆ. ಆದುದರಿಂದಲೇ ಬ್ರಾಹ್ಮಣರೇ ಆಗಲಿ ಇತರರೇ ಆಗಲಿ ತಮಗೆ ಶ್ರೇಷ್ಠತೆಯುಂಟೆಂದು ಹೇಳಿಕೊಂಡರೆ ಅಂತಹ ಶ್ರೇಷ್ಠತಾ ರಾಕ್ಷಸನ ವಿರುದ್ಧ ಹೋರಾಡುವ ಬ್ರಾಹ್ಮಣೇತರರಿಗೆ ನನ್ನ ಸಂಪೂರ್ಣ ಬೆಂಬಲವಿದೆ. ತಾನು ಶ್ರೇಷ್ಠನೆಂದು ಹೇಳಿಕೊಳ್ಳುವವನು ಮಾನವನೆಂಬ ಅಧಿಕಾರಕ್ಕೆ ಎರವಾಗುತ್ತಾನೆ. ಅರ್ಥಾತ್ ಅವನು ಮನುಷ್ಯನೇ ಅಲ್ಲ. ಅದು ನನ್ನ ಅಭಿಪ್ರಾಯ.

ನಿಮಗೆ ಇದುವರೆಗೆ ವಿವರಿಸಿದ ನನ್ನ ಅಭಿಪ್ರಾಯಗಳು ಹೀಗಿದ್ದರೂ ವರ್ಣಾಶ್ರಮಧರ್ಮದಲ್ಲಿ ನನಗೆ ಇನ್ನೂ ಶ್ರದ್ಧೆಯಿದೆ. ನಾನಾಗಲಿ ನೀವಾಗಲಿ ಅದನ್ನು ಎಷ್ಟೇ ಅಲ್ಲಗಳೆದರೂ ವರ್ಣಾಶ್ರಮಧರ್ಮವು ಅವಿನಾಶಿಯಾದ ಒಂದು ಶಾಸನವೆಂದು ನನಗನಿಸುತ್ತದೆ. ಈ ಧರ್ಮವನ್ನು ಒಪ್ಪಿಕೊಳ್ಳುವದೆಂದರೆ ನಾವೆಲ್ಲರೂ ಜೀವನದಲ್ಲಿ ಅನುಸರಿಸಬೇಕಾದ ಒಂದೇ ಒಂದು ತತ್ವಕ್ಕಾಗಿ ನಮ್ಮನ್ನು ಮುಕ್ತಗೊಳಿಸಿಕೊಳ್ಳುವದೆಂದು ನನಗನಿಸುತ್ತದೆ. ವರ್ಣಾಶ್ರಮಧರ್ಮವೆಂದರೆ ವಿನಮ್ರತೆ; ವಿನಯ. ಎಲ್ಲ ಸ್ತ್ರೀಪುರುಷರು ಸಮಾನರಾಗಿ ಹುಟ್ಟಿರುವರೆಂದು ನಾನು ಹೇಳಿದಾಗ ಅವರ ಗುಣಾವಗುಣಗಳು ಆನುವಂಶಿಕವಾಗಿರುವದಿಲ್ಲೆಂದು ಸೂಚಿಸಬಯಸುವದಿಲ್ಲ. ಆದರೆ

ತದ್ವಿರುದ್ಧವಾಗಿ ಪ್ರತಿಯೊಬ್ಬನಿಗೂ ಆತನ ಆಕಾರ ರೂಪಗಳಿರುವಂತೆ ಆತನ ಗುಣಧರ್ಮಗಳು ಆತನ ಜನಕರಿಂದ ಬಂದಿರುತ್ತವೆಯೆಂದು ನಾನು ನಂಬುತ್ತೇನೆ. ಇದನ್ನು ಒಪ್ಪಿಕೊಳ್ಳುವದೆಂದರೆ ತನ್ನ ಉತ್ಸಾಹವನ್ನು ಉಳಿಸಿಕೊಂಡಂತೆಯೆ ಸರಿ. ಹೀಗೆ ನಿಚ್ಚಳವಾಗಿ ಒಪ್ಪಿಕೊಳ್ಳುವದರಿಂದ ನಮ್ಮ ಭೌತಿಕ ಮಹತ್ವಾಕಾಂಕ್ಷೆಗಳನ್ನು ಅಂಕೆಯಲ್ಲಿಟ್ಟುಕೊಳ್ಳಲು ಅನುವು ದೊರೆತು ಆಧ್ಯಾತ್ಮಿಕ ಸಂಶೋಧನೆ ಮತ್ತು ಆಧ್ಯಾತ್ಮಿಕ ವಿಕಾಸಗಳ ಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ನಮ್ಮ ಉತ್ಸಾಹಕ್ಕೆ ಅವಕಾಶವು ದೊರೆಯುವದು. ವರ್ಣಾಶ್ರಮಧರ್ಮದ ಈ ಸಿದ್ಧಾಂತವನ್ನು ನಾನು ಯಾವಾಗಲೂ ಅಂಗೀಕರಿಸಿದ್ದೇನೆ. ಸದ್ಯಕ್ಕೆ ತಿಳಿದುಕೊಂಡಿರುವಂತಹ ಹಾಗು ರೂಢಿಯಲ್ಲಿರುವ ವರ್ಣಾಶ್ರಮವು ಮೂಲದ ವಿಡಂಬನೆಯಾಗಿದೆಯೆಂದು ಅಸಂಖ್ಯ ಸಲ ನಾನು ಹೇಳಿದ್ದುದನ್ನೇ ನೀವಾದರೂ ಹೇಳಬಹುದು. ಆದರೆ ಈ ವಿಡಂಬನೆಯನ್ನು—ವಿಕೃತಿಯನ್ನು ನಾಶಪಡಿಸಲೋಸುಗ ಮೂಲವನ್ನೇ ನಾಶಮಾಡುವದು ಬೇಡ. ನಿಮ್ಮ ಮುಂದೆ ನಾನು ಈಗ ಇಟ್ಟ ಆದರ್ಶ ವರ್ಣಾಶ್ರಮ ಧರ್ಮವು ಸರಿಯಿದೆಯೆಂದು ನೀವು ಒಪ್ಪಿದರೆ ನೀವು ಒಪ್ಪಬೇಕೆಂದು ನಾನು ಬಯಸಿದ್ದುದನ್ನೆಲ್ಲ ನೀವು ಒಪ್ಪಿದಂತಾಯ್ತು. ಯೋಗ್ಯ ಆದರ್ಶಗಳಿಲ್ಲದೆ ವ್ಯಕ್ತಿಯಾಗಲಿ ರಾಷ್ಟ್ರವಾಗಲಿ ಬಾಳಿ ಬದುಕಲಾರದೆಂದು ನಂಬಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಆದರ್ಶವಾದ ವರ್ಣಾಶ್ರಮಧರ್ಮದಲ್ಲಿ ನಿಮಗೆ ನಂಬಿಕೆಯಿದ್ದರೆ ಶಕ್ಯವಿದ್ದಷ್ಟು ಆ ಆದರ್ಶವನ್ನು ಮುಟ್ಟಲು ನನ್ನೊಡನೆ ನೀವೂ ಯತ್ನಿಸಿರಿ. ವಸ್ತುತಃ ಈ ನಿಯಮವನ್ನು ವಿರೋಧಿಸಲು ಜಗತ್ತಿನಲ್ಲಿ ಎಲ್ಲಿಯೂ ಶಕ್ಯವಾಗಿಲ್ಲ. ಈ ನಿಯಮವನ್ನು ವಿರೋಧಿಸುವಲ್ಲಿ ಈಗಾದುದು ಮತ್ತು ಮುಂದೆ ಆಗುವದೇನೆಂದರೆ ಗಾಳಿಯನ್ನು ಗುದ್ದಿ ಮೈನೋಯಿಸಿಕೊಳ್ಳುವದು ಮತ್ತು ನಿರರ್ಥಕ ಪ್ರಯತ್ನದಲ್ಲಿ ತೊಡಗುವದು. ನಮ್ಮ ಪೂರ್ವಜರು ನಮಗೆ ಬಿಟ್ಟುಹೋದ ಆಸ್ತಿಯ ಮಹತ್ವವನ್ನು ತಿಳಿದುಕೊಂಡು ಆ ಪರಂಪರೆಯ ಸುತ್ತಲೂ ಕಸದಂತೆ ಬೆಳೆದಿರುವ ದುಷ್ಟ ರೂಢಿಗಳನ್ನು ವಿರೋಧಿಸಲು ನೀವು ಪ್ರಯತ್ನಿಸಿದರೆ ನಿಮ್ಮ ಹೋರಾಟವು ಹೆಚ್ಚು ಯಶಸ್ವಿಯಾಗುವದೆಂದು ನಾನು ಸೂಚಿಸಲಿಚ್ಛಿಸುತ್ತೇನೆ. (ಯಂಗ್ ಇಂಡಿಯಾ : ೨೯-೯-೨೭)

ವರ್ಣ ಮತ್ತು ಆಶ್ರಮ

(ತ್ರಿವೇಂದ್ರಮಿನಲ್ಲಿ ೯-೧೦-೨೭ನೇ ದಿನ ಮಾಡಿದ ಭಾಷಣದಿಂದ ಆಯ್ದ ಭಾಗವು ಹೀಗಿದೆ :)

ಹಿಂದೂಧರ್ಮದ ವಿಷಯವಾಗಿ ನನಗೆ ಗೊತ್ತಿದ್ದ ಮಟ್ಟಿಗೆ ವರ್ಣದ ಅರ್ಥವು ನಂಬಲಾರದಷ್ಟು ಸುಲಭವಾಗಿದೆ. ಮೂಲಭೂತ ನೀತಿಗೆ ಅವಿರೋಧಿಯಾಗಿ ಜೀವಿತವನ್ನು ಸಾಗಿಸಲು ಪರಂಪರೆಯಾಗಿ ಬಂದ ಉದ್ಯೋಗ ವ್ಯವಸಾಯಗಳನ್ನು ಅನುಸರಿಸುವದೆಂದೇ ಅದರ ಸರಲ ಅರ್ಥ. ಎಲ್ಲ ಧರ್ಮಗಳಲ್ಲಿ ಹೇಳಿದ ಮನುಷ್ಯನ ಲಕ್ಷಣವನ್ನು ನಾವು ಅಂಗೀಕರಿಸಿದರೆ ಇದು ನಮ್ಮ ಜೀವನದ ನಿಯಮವೇ ಎಂದು ನಾನು ತಿಳಿಯುತ್ತೇನೆ. ಪರಮಾತ್ಮನ ಪ್ರಾಣಿಸೃಷ್ಟಿಯಲ್ಲೆಲ್ಲ ತನ್ನ ಸೃಷ್ಟಿಕರ್ತನನ್ನು ಅರಿತುಕೊಳ್ಳಲೆಂಬ ಉದ್ದೇಶದಿಂದ ಸೃಜಿಸಲ್ಪಟ್ಟ ಒಂದೇ ಒಂದು ಪ್ರಾಣಿಯೆಂದರೆ, ಮನುಷ್ಯ. ಆದುದರಿಂದ ತನ್ನ ಭೌತಿಕ ಭವಿತವ್ಯವನ್ನು ಮಾತ್ರ ಬೆಳೆಸಿಕೊಳ್ಳುವದು ಮನುಷ್ಯನ ಜೀವನಧ್ಯೇಯವಲ್ಲ. ಆದರೆ ತನ್ನನ್ನು ಹುಟ್ಟಿಸಿದ ದೇವನ ಸಮೀಪಕ್ಕೆ ದಿನದಿನವೂ ಹೋಗುವದೇ ಆತನ ಪರಮ ಕರ್ತವ್ಯವಾಗಿದೆ. ಈ ಲಕ್ಷಣದಿಂದ ನಮ್ಮ ಪ್ರಾಚೀನ ಋಷಿಗಳು ನಮ್ಮ ಈ ಜೀವನ ನಿಯಮವನ್ನು ಕಂಡುಹಿಡಿದರು. ವರ್ಣದ ಆ ನಿಯಮವನ್ನು ನಾವೆಲ್ಲರೂ ಪಾಲಿಸಿದರೆ ನಮ್ಮ ಭೌತಿಕ ಆಕಾಂಕ್ಷೆಗಳನ್ನು ನಾವು ಮಿತಿಗೊಳಿಸಿಕೊಳ್ಳುವೆವು ಮತ್ತು ಪರಮಾತ್ಮನನ್ನು ಕಾಣಲು ನೆರವಾಗುವ ಆ ವಿಶಾಲ ಕ್ಷೇತ್ರಗಳನ್ನು ಶೋಧಿಸಿ ತೆಗೆಯಲು ನಮ್ಮ ಉತ್ಸಾಹವನ್ನು ನಾವು ಮುಕ್ತಪಡಿಸಿಕೊಳ್ಳುವೆವು. ಆಗ ನೀವು ಕೂಡಲೆ ಜಗತ್ತಿನಲ್ಲೆಲ್ಲ ನಡೆದ ಚಟುವಟಿಕೆಗಳಲ್ಲಿಯ ಹತ್ತರಲ್ಲೊಂಬತ್ತು ಪಾಲು ನಿರುಪಯೋಗಿಯಾಗುವದೆಂಬುದನ್ನು ಕಾಣುವಿರಿ. ನಾನು ಬಣ್ಣಿಸಿದ ವರ್ಣದ ವಿಡಂಬನೆಯೇ ಈಗಿನ ವರ್ಣವೆಂಬ ಮಾತನ್ನು ಹೇಳಲು ಆಗ ನಿಮಗೆ ಅಧಿಕಾರವು ಬರುವದು. ನಿಸ್ಸಂದೇಹವಾಗಿ ಅದು ವಿಡಂಬನೆಯಾಗಿದೆ. ಆದರೆ ಅಸತ್ಯವು ಸತ್ಯದ ಸೋಗನ್ನು ಹಾಕಿಕೊಂಡಿದ್ದರೂ ಸತ್ಯವನ್ನು ನಾವು ತಿರಸ್ಕರಿಸುವದಿಲ್ಲ. ಆದರೆ ಅಸತ್ಯದಿಂದ ಸತ್ಯವನ್ನು ವಿಂಗಡಿಸುತ್ತೇವಲ್ಲದೆ ಸತ್ಯಕ್ಕೆ ಅಂಟಿಕೊಳ್ಳುವೆವು. ಹಾಗೆಯೆ ವರ್ಣ

ವೆಂದು ಮೆರೆಯುವ ಆ ವಿಡಂಬನೆಯನ್ನು ನಾಶಗೊಳಿಸಬಹುದು. ಮತ್ತು ಹಿಂದೂ ಸಮಾಜವನ್ನು ಇಂದಿನ ಅಧೋಗತಿಯಿಂದ ರಕ್ಷಿಸಿ ಶುದ್ಧ ಪಡಿಸಬಹುದು.

ನಿಮಗೆ ಹೇಳಿದ್ದುದಕ್ಕೆ ಆಶ್ರಮವು ಒಂದು ಉಪಸಿದ್ಧಾಂತವಾಗಿದೆ. ವರ್ಣವು ಇಂದು ವಿಕೃತವಾಗಿದ್ದರೆ ಆಶ್ರಮವು ಅಳಿದೇ ಹೋಗಿದೆ. ಆಶ್ರಮ ವೆಂದರೆ ಜೀವನದಲ್ಲಿಯ ನಾಲ್ಕು ಅವಸ್ಥೆಗಳು. ನನಗೆ ಹಣದ ಚೀಲವನ್ನು ಉಡುಗೆರೆಯಾಗಿ ಕೊಟ್ಟ ಆರ್ಟ್ಸ್, ಸಯಿನ್ಸ ಮತ್ತು ಲಾ ಕಾಲೇಜುಗಳ ವಿದ್ಯಾರ್ಥಿಗಳು ತಾವು ಪ್ರಥಮಾಶ್ರಮದವೇರೆಗೆ ಮನೋವಾಕ್ಕಾಯಗಳಿಂದ ಬ್ರಹ್ಮಚರ್ಯವನ್ನು ಪಾಲಿಸುತ್ತಿರುವದಾಗಿ ಆಶ್ವಾಸನವನ್ನು ಕೊಡುವರೆಂದು ಆಶಿಸುತ್ತೇನೆ. ೨೫ ವರ್ಷಗಳ ವರೆಗಾದರೂ ಬ್ರಹ್ಮಚಾರಿಯ ಜೀವನವನ್ನು ನಡೆಸಿದವರೇ ಗೃಹಸ್ಥಾಶ್ರಮಿಗಳಾಗಲು ಅಧಿಕಾರಿಗಳೆಂದು ಬ್ರಹ್ಮಚರ್ಯಾ ಶ್ರಮವು ವಿಧಿಸುತ್ತದೆ. ಮನುಷ್ಯನನ್ನು ಉತ್ತಮಗೊಳಿಸಿ ಆತನನ್ನು ಪರ ಮಾತ್ಮನ ಸಾನ್ನಿಧ್ಯಕ್ಕೆ ಕರೆದೊಯ್ಯುವದೇ ಹಿಂದೂಧರ್ಮದ ಸಮಗ್ರ ಕಲ್ಪನೆಯಾಗಿರುವದರಿಂದ ನಮ್ಮ ಋಷಿಗಳು ಗೃಹಸ್ಥಾಶ್ರಮಕ್ಕೂ ಒಂದು ಎಲ್ಲೆಯನ್ನು ಹಾಕಿದರು. ಮತ್ತು ವಾನಪ್ರಸ್ಥ ಸನ್ಯಾಸಗಳ ನಿಯಮವನ್ನು ವಿಧಿಸಿದರು. ಆದರೆ ಭಾರತದಲ್ಲೆಲ್ಲ ನೀವು ಇಂದು ಹುಡುಕಿದರೂ ನಿಜವಾದ ಬ್ರಹ್ಮಚಾರಿಯೊಬ್ಬನನ್ನು, ನಿಜವಾದ ಗೃಹಸ್ಥ ನನ್ನೊಬ್ಬನನ್ನು ಕಾಣಲಾರಿರಿ. ವಾನಪ್ರಸ್ಥ ಸನ್ಯಾಸಗಳ ಮಾತಂತೂ ದೂರವೇ ಉಳಿಯಿತು. ನಮ್ಮ ಬುದ್ಧಿವಂತಿಕೆಯ ಪ್ರತಿಷ್ಠೆಯಿಂದ ಈ ಜೀವನ ಯೋಜನೆಯನ್ನು ನೋಡಿ ನಗಬಹುದು. ಆದರೆ ಹಿಂದೂಧರ್ಮದ ವಿಜಯದ ರಹಸ್ಯವು ಇದರಲ್ಲಿದೆಯೆಂಬ ಬಗೆಗೆ ನನಗಾವ ಸಂದೇಹವೂ ಇಲ್ಲ. ಹಿಂದೂ ನಾಗರಿಕತೆಯು ಇಜಿಪ್ಷಿಯನ್, ಬೆಬಿಲೋನಿಯನ್ ಅಸಿಲೇನಿಯನ್ ನಾಗರಿಕತೆಗಳನ್ನು ಮೀರಿ ಉಳಿದಿದೆ. ಕ್ರೈಸ್ತ ನಾಗರಿ ಕತೆಯು ಕೇವಲ ಎರಡು ಸಾವಿರ ವರ್ಷಗಳದ್ದಾಗಿದೆ. ಇಸ್ಲಾಮೀ ನಾಗರಿಕತೆಯು ನಿನ್ನೆ ಮೊನ್ನೆಯದು. ಇವೆರಡೂ ದೊಡ್ಡವಾಗಿದ್ದರೂ ನನ್ನ ಅಭಿಪ್ರಾಯದಲ್ಲಿ ಅವು ಇನ್ನೂ ರೂಪುಗೊಳ್ಳುತ್ತಲಿವೆ. ಕ್ರೈಸ್ತ ಯುರೋಪು ಸಂಪೂರ್ಣವಾಗಿ ಕ್ರೈಸ್ತ ಆಗಿಲ್ಲ. ಆದರೆ ಅದರ ಅನ್ವೇಷಣೆಯಲ್ಲಿದೆ. ಹಾಗೆಯೆ ನನ್ನ ಅಭಿಪ್ರಾಯದ ಪ್ರಕಾರ ಇಸ್ಲಾಮ ಆದರೂ ತನ್ನ ಮಹಾ

ರಹಸ್ಯದ ವಿಷಯವಾಗಿ ಇನ್ನೂ ಅನ್ವೇಷಣೆಯಲ್ಲಿದೆ. ಇಂದು ಈ ಮೂರು ಮಹಾಧರ್ಮಗಳಲ್ಲಿ ಒಂದು ಬಗೆಯ ಹಿತಕರವೂ ಅಹಿತಕರವೂ ಅನಿಷ್ಟವೂ ಆದ ಸ್ಪರ್ಧೆಯು ಸಾಗಿದೆ.

ವರ್ಷಗಳು ಕಳೆದಂತೆ ವರ್ಣವು ಮಾನವ ಜೀವನದ ನಿಯಮವೆಂಬ ಮನವರಿಕೆಯು ನನಗಾಗತೊಡಗಿದೆ. ಆದುದರಿಂದ ಅದು ಕ್ರೈಸ್ತ ಧರ್ಮಕ್ಕೂ ಇಸ್ಲಾಮಿಗೂ ಹಿಂದೂಧರ್ಮಕ್ಕೆ ಅವಶ್ಯವಿದ್ದಷ್ಟೇ ಅವಶ್ಯ ವಾಗಿದೆ. ಆದುದರಿಂದ ದಕ್ಷಿಣದಲ್ಲಿ ಕೆಲವು ಹಿಂದುಗಳು ಹೇಳುವಂತೆ ವರ್ಣಾಶ್ರಮವು ಹಿಂದೂಜನರಿಗೆ ಶಾಪವಾಗಿದೆಯೆಂಬ ಅಭಿಪ್ರಾಯವನ್ನು ನಾನು ಒಪ್ಪುವದಿಲ್ಲ. ಆದರೆ ನಮ್ಮ ಸುತ್ತಮುತ್ತ ನೋಡುವ ವರ್ಣಾಶ್ರಮದ ಅನಿಷ್ಟ ವಿಕೃತಿಯನ್ನು ನಾನೂ ನೀವೂ ಒಂದು ಗಳಿಗೆ ಯಾದರೂ ಸಹಿಸಬೇಕೆಂದು ಆದರ ಅರ್ಥವಲ್ಲ. ವರ್ಣಾಶ್ರಮ ಮತ್ತು ಜಾತಿ ಇವುಗಳಲ್ಲಿ ಯಾವ ಸಾಮ್ಯವೂ ಇಲ್ಲ. ಹಿಂದೂಧರ್ಮದ ಪ್ರಗತಿಗೆ ಜಾತಿಯು ಪ್ರತಿಬಂಧಕವಾಗಿದೆಯೆಂದು ನೀವು ಬೇಕಾದರೆ ಅನ್ನಬಹುದು. ಅಸ್ಪೃಶ್ಯತೆಯಂತೂ ಮುನ್ನಡೆಗೆ ಕಂಟಕಪ್ರಾಯವಾಗಿದೆ. ಅದು ವರ್ಣಾ ಶ್ರಮದ ಮೇಲಿನ ಒಂದು ಹುಣ್ಣು ಎಂದು ನಾನು ಮೊದಲೇ ಹೇಳಿದ್ದೇನೆ. “ಉಳಿದ ಮೂರು ವರ್ಣಗಳಿಗಿಂತ ನಾನು ಶ್ರೇಷ್ಠ” ಎಂದು ಬ್ರಾಹ್ಮಣನು ಹೇಳಿದರೆ ಅದು ಆತನ ಅಹಂಕಾರ ಭಾವನೆ. ಪ್ರಾಚೀನ ಬ್ರಾಹ್ಮಣರು ಹಾಗೆ ಹೇಳಲಿಲ್ಲ. ಪ್ರತಿಫಲಾಪೇಕ್ಷೆಯಿಲ್ಲದೆ ನಿಷ್ಕಾಮ ಸೇವೆಯ ಹಕ್ಕನ್ನೇ ಅವರು ಯಾವಾಗಲೂ ಕೇಳಿಕೊಳ್ಳುತ್ತಿದ್ದುದರಿಂದ ಉಳಿದವರ ಗೌರವಾದರ ಗಳಿಗೆ ಅವರು ಪಾತ್ರರಾದರಲ್ಲದೆ ಶ್ರೇಷ್ಠರೆಂದು ಹೇಳಿಕೊಳ್ಳುವದರಿಂದಲ್ಲ. ಬ್ರಾಹ್ಮಣನ ಕರ್ತವ್ಯವನ್ನು ತಮ್ಮ ಕಡೆಗೆ ಇಟ್ಟುಕೊಂಡು ಧರ್ಮದ ವಿಡಂಬನೆಯನ್ನು ಮಾಡುತ್ತಿರುವ ಇಂದಿನ ಭಟ್ಟರು ಹಿಂದೂಧರ್ಮದ ಅಥವಾ ಬ್ರಾಹ್ಮಣ ಧರ್ಮದ ನಿಜವಾದ ಪಾಲಕರಲ್ಲ. ತಿಳಿದಾಗಲಿ ತಿಳಿಯದೆ ಆಗಲಿ ತಾವು ಕುಳಿತಿರುವ ಮರದ ಬುಡಕ್ಕೇ ಕೊಡಲಿ ಏಟನ್ನು ಹಾಕು ತ್ತಿರುವರು. ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಯನ್ನು ವಿಧಿಸುತ್ತದೆಯೆಂದು ಹೇಳಿ ದಾಗ ಮತ್ತು ಮಡಿಮೈಲಿಗೆಯ ಅಂತರವನ್ನು ಕುರಿತು ಪ್ರಸ್ತಾಪಿಸುವಾಗ, ಅವರು ತಮ್ಮ ಮತ ಧರ್ಮವನ್ನೇ ಅಲ್ಲಗಳೆದು ಹಿಂದೂಧರ್ಮದ ಸಾರವನ್ನೇ ಅಪಾರ್ಥಗೊಳಿಸುತ್ತಿರುವರೆಂದು ಹೇಳಲು ನಾನು ಹಿಂಜರಿಯುವದಿಲ್ಲ. ಈ

ಶಾಪದಿಂದ ಮುಕ್ತರಾಗಲೋಸುಗ ನೀವೇಕೆ ಉತ್ಸಾಹಶಾಲಿಗಳು ಆಗ ಬೇಕೆಂಬುದನ್ನು ಇಲ್ಲಿರುವ ಹಿಂದೂಗಳಾದ ನೀವೆಲ್ಲರೂ ಈಗ ಸರಿಯಾಗಿ ತಿಳಿಯಬಲ್ಲಿರಿ. ಪ್ರಾಚೀನವಾದ ಹಿಂದೂ ಸಂಸ್ಥಾನಕ್ಕೆ ಸೇರಿದವರಾದ ನೀವು ಸುಧಾರಣೆಯ ಮಾರ್ಗದಲ್ಲಿ ಮುಂದಾಳುಗಳಾಗಲು ಹೆಮ್ಮೆಪಡಬೇಕು. ನಿಮ್ಮ ಸುತ್ತಲಿರುವ ಸನ್ನಿವೇಶವನ್ನು ನೋಡಿದರೆ ನಿಮಗೆ ಈಗ ಕಾಲವು ಅನುಕೂಲವಾಗಿದೆಯೆಂದು ತೋರುತ್ತದೆ. ಆದರೆ ನೀವು ಈ ಸುಧಾರಣೆ ಯನ್ನು ಮನಃಪೂರ್ವಕವಾಗಿ ಮತ್ತು ಉತ್ಸಾಹದಿಂದ ಕೈಗೊಳ್ಳಬೇಕು.

(ಯಂಗ್ ಇಂಡಿಯಾ : ೨೦-೧೦-೨೭)

ವರ್ಣನಿಯಮ

ಪ್ರಶ್ನೆ : ವರ್ಣಧರ್ಮವನ್ನು ನೀವು ಒತ್ತಿ ಹೇಳುವದು ನಮಗೆ ಅರ್ಥ ವಾಗುವದಿಲ್ಲ. ಸದ್ಯದ ಜಾತಿಪದ್ಧತಿಯು ಸರಿಯೆಂದು ನೀವು ಹೇಳುವಿರಾ? ವರ್ಣದ ನಿಮ್ಮ ಲಕ್ಷಣವೇನು ?

ಉತ್ತರ : ವ್ಯಕ್ತಿಯ ಉದ್ಯೋಗದ ಪೂರ್ವ ನಿರ್ಣಯವೇ ವರ್ಣವು. ತನ್ನ ಜೀವನವನ್ನು ಸಾಗಿಸಲು ತನ್ನ ಪೂರ್ವಜರ ಉದ್ಯೋಗವನ್ನು ಅನುಸರಿಸಬೇಕೆಂಬುದೇ ವರ್ಣದ ನಿಯಮ. ಪ್ರತಿಯೊಂದು ಕೂಸು ತನ್ನ ತಂದೆಯ 'ವರ್ಣ'ವನ್ನೇ ಅನುಸರಿಸುತ್ತದೆ ಅಥವಾ ಸ್ವಾಭಾವಿಕವಾಗಿ ತನ್ನ ತಂದೆಯ ಉದ್ಯೋಗವನ್ನೇ ಆರಿಸಿಕೊಳ್ಳುತ್ತದೆ. ಆದುದರಿಂದ ಒಂದು ಬಗೆಯಲ್ಲಿ ವರ್ಣವೆಂದರೆ ಆನುವಂಶಿಕತೆಯ ನಿಯಮ. ಹಿಂದೂಗಳ ಮೇಲೆ ಹೊರಗಿನಿಂದ ಹೇರಲಾದ ವಿಷಯವು ವರ್ಣವಲ್ಲ. ಆದರೆ ಅವರ ಕಲ್ಯಾಣದ ಧರ್ಮದರ್ಶಿಗಳಾಗಿದ್ದ ಜನರು ಅವರಿಗಾಗಿ ಈ ನಿಯಮವನ್ನು ಕಂಡುಹಿಡಿದರು. ಅದು ಮಾನವ ನಿರ್ಮಿತವಲ್ಲ. ಆದರೆ ನಿಸರ್ಗದ ಅಪರಿವರ್ತನೀಯ ನಿಯಮವದು. ನ್ಯೂಟನ್ನನ ಗುರುತ್ವಾಕರ್ಷಣ ನಿಯಮದಂತೆ ಸದಾಸರ್ವದಾ ಕಾರ್ಯಮಾಡುತ್ತಿರುವ ಪ್ರವೃತ್ತಿಯ ವಿಧಾನ ವದು. ಗುರುತ್ವಾಕರ್ಷಣ ನಿಯಮವು ಅದರ ಸಂಶೋಧನೆಯಾಗುವದ ಕ್ಕಿಂತ ಪೂರ್ವದಲ್ಲಿಯೂ ಇದ್ದಂತೆ ವರ್ಣನಿಯಮವೂ ಅಸ್ತಿತ್ವದಲ್ಲಿತ್ತು.

ಅದನ್ನು ಕಂಡುಹಿಡಿಯುವ ಶ್ರೇಯಸ್ಸು ಹಿಂದೂಗಳಿಗೆ ಸಿಕ್ಕಿತು. ನಿಸರ್ಗದ ವಿಶಿಷ್ಟ ನಿಯಮ ಸಂಶೋಧನೆಯಿಂದಲೂ ಪರಿಪಾಲನೆಯಿಂದಲೂ ಪಶ್ಚಿಮದ ಜನರು ಸುಲಭವಾಗಿ ಭೌತ ಸಂಪತ್ತನ್ನು ಹೆಚ್ಚಿಸಿಕೊಂಡಿರುವರು. ಹಾಗೆಯೇ ಹಿಂದೂಗಳು ಈ ಅಪ್ರತಿಹತವಾದ ಸಾಮಾಜಿಕ ಪ್ರವೃತ್ತಿಯ ಶೋಧನೆಯಿಂದ ಜಗತ್ತಿನ ಇತರ ರಾಷ್ಟ್ರಗಳಾವುವೂ ಸಾಧಿಸಲಾರದಷ್ಟು ಆಧ್ಯಾತ್ಮಿಕ ಸಾಧನೆಯನ್ನು ಮಾಡಿಕೊಂಡಿರುವರು.

ಜಾತಿಗೂ ವರ್ಣಕ್ಕೂ ಯಾವ ಸಂಬಂಧವೂ ಇಲ್ಲ. ವರ್ಣದ ವೇಷವನ್ನು ಧರಿಸಿಕೊಂಡಿರುವ ಜಾತಿಯೆಂಬ ರಾಕ್ಷಸನಿಗೆ ಧಿಕ್ಕಾರವಿರಲಿ! ವರ್ಣದ ಈ ವಿಕಾರವು ಹಿಂದೂಧರ್ಮವನ್ನೂ ಭಾರತವನ್ನು ಅದೋಗತಿಗಿಳಿಸಿದೆ. ವರ್ಣನಿಯಮುವನ್ನು ಪಾಲಿಸದಿದ್ದುದೇ ನಮ್ಮ ಆರ್ಥಿಕ ಹಾಗು ರಾಜಕೀಯ ಅವನತಿಗೆ ಬಹುಮಟ್ಟಿಗೆ ಕಾರಣವಾಗಿದೆ. ಬಡತನ ಹಾಗು ನಿರುದ್ಯೋಗಗಳಿಗೆ ಅದೊಂದು ಕಾರಣ. ಅಸ್ಪೃಶ್ಯತೆಗೂ ನಮ್ಮ ಶ್ರದ್ಧಾಚ್ಯುತಿಗೂ ಅದು ಹೊಣೆಯಾಗಿದೆ.

ಆದರೆ ಸದ್ಯದ ಆ ರಾಕ್ಷಸೀರೂಪದೊಡನೆಯೂ ಹಾಗು ಮೂಲ ನಿಯಮವು ವಿಕೃತವಾಗುವದಕ್ಕೆ ಕಾರಣಗಳಾದ ಈ ದುಷ್ಟ ರೂಢಿಗಳೊಡನೆಯೂ ಹೋರಾಡುವಾಗ ಮೂಲ ನಿಯಮದ ಮೇಲೆಯೆ ದಾಳಿಯನ್ನು ಮಾಡಬೇಡಿರಿ.

ಪ್ರಶ್ನೆ : ಎಷ್ಟು ವರ್ಣಗಳಿರುವವು ?

ಉತ್ತರ : ನಾಲ್ಕು ವರ್ಣಗಳು. ಆದರೆ ನಾಲ್ಕು ವರ್ಣಗಳೇ ಇರಬೇಕೆಂದೇನೂ ವಿಧಿಯಿಲ್ಲ. ಸತತವಾದ ಪ್ರಯೋಗದಿಂದ ಮತ್ತು ಸಂಶೋಧನೆಯಿಂದ ಋಷಿಗಳು ಈ ಚತುರ್ವಿಭಾಗವನ್ನು ಅಂದರೆ ಉಪಜೀವಿಕೆಯನ್ನು ಸಾಗಿಸುವ ನಾಲ್ಕು ಮಾರ್ಗಗಳನ್ನು ಕಂಡುಹಿಡಿದರು.

ಪ್ರಶ್ನೆ : ತಾರ್ಕಿಕವಾಗಿ, ಆದುದರಿಂದ, ಉದ್ಯೋಗಗಳಿದ್ದಷ್ಟು ವರ್ಣಗಳಿರುವವೆ ?

ಉತ್ತರ : ಇದು ಆವಶ್ಯಕವಲ್ಲ. ಬೇರೆಬೇರೆ ಉದ್ಯೋಗಗಳನ್ನು ಸುಲಭವಾಗಿ ಈ ನಾಲ್ಕು ಮುಖ್ಯ ವಿಭಾಗಗಳಲ್ಲಿ ಅಧ್ಯಾಪನ, ಸಂರಕ್ಷಣ,

ಧನೋತ್ಪಾದನ ಮತ್ತು ಸೇವೆಯೆಂಬವುಗಳಲ್ಲಿ ತರಬಹುದು. ಪ್ರಪಂಚದ ಮಟ್ಟಿಗೆ ನೋಡಿದರೆ ಧನೋತ್ಪಾದನೆಯೆ ಮುಖ್ಯ ಉದ್ಯೋಗವಾಗಿದೆ. ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಮುಖ್ಯವಾಗಿರುವಂತೆ ಅದುವೇ ಮುಖ್ಯ ವಾಗಿದೆ. ವರ್ಣಗಳಲ್ಲಿ ವೈಶ್ಯವರ್ಣವೇ ಪ್ರಮುಖವಾಗಿದೆ. ಆಸ್ತಿ ಪಾಸ್ತಿ ಇರದಿದ್ದರೆ ಅವುಗಳ ರಕ್ಷಣೆ ಬೇಕಿಲ್ಲ. ಮೂರನೆಯದಿದ್ದುದರಿಂದಲೇ ಮೊದಲಿನವೆರಡು ಹಾಗು ನಾಲ್ಕನೆಯ ವರ್ಣವು ಬೇಕಾಗಿವೆ. ಮೊದಲನೇ ವರ್ಣದ ಸಂಖ್ಯೆಯು ಯಾವಾಗಲೂ ಕಡಿಮೆಯಾಗಿರುವದು; ಯಾಕಂದರೆ ಉಗ್ರವಾದ ಓರಣವೂ ನಿಗ್ರಹವೂ ಅದಕ್ಕೆ ಬೇಕು. ಸುವ್ಯವಸ್ಥಿತವಾದ ಸಮಾಜದಲ್ಲಿ ಎರಡನೆಯದರ ಸಂಖ್ಯೆಯೂ ಕಡಿಮೆಯಿರಬೇಕು. ಹಾಗೆಯೆ ನಾಲ್ಕನೆಯದು.

ಪ್ರಶ್ನೆ: ಜನ್ಮತಃ ಆತನ ಉದ್ಯೋಗವು ಅದಾಗಿರದಿದ್ದರೆ ಅಂತಹ ಉದ್ಯೋಗವನ್ನು ಕೈಕೊಂಡವನು ಯಾವ ವರ್ಣಕ್ಕೆ ಸೇರುವನು?

ಉತ್ತರ: ಹಿಂದೂಧರ್ಮದ ಪ್ರಕಾರ ಅವನು ಯಾವ ವರ್ಣದಲ್ಲಿ ಹುಟ್ಟಿರುವನೋ ಅದೇ ಆತನ ವರ್ಣ. ಆದರೆ ಅದರಂತೆ ನಡೆಯದಿರುವದರಿಂದ ಅವನು ತನಗೆಯೆ ಅಪಚಾರವನ್ನು ಮಾಡಿಕೊಂಡು ಪತಿತನಾಗುವನು.

ಪ್ರಶ್ನೆ: ಒಬ್ಬ ಶೂದ್ರನು ಜನ್ಮತಃ ಬ್ರಾಹ್ಮಣನು ಮಾಡಬೇಕಾದ ಕರ್ಮವನ್ನು ಮಾಡುತ್ತಾನೆ. ಅವನು ಪತಿತನಾಗುವನೋ?

ಉತ್ತರ: ಬ್ರಾಹ್ಮಣನಿಗಿದ್ದಷ್ಟೇ ಜ್ಞಾನಾಧಿಕಾರವು ಶೂದ್ರನಿಗೂ ಇದೆ. ಆದರೆ ವಿದ್ಯಾದಾನ ಮಾಡಿ ಉಪಜೀವನವನ್ನು ಸಾಗಿಸಲು ಅವನು ಯತ್ನಿಸಿದರೆ ಅವನು ಪತಿತನಾಗುವನು. ಪ್ರಾಚೀನ ಕಾಲದಲ್ಲಿ ಸ್ವಯಂಪ್ರೇರಿತ ವೃತ್ತಿ ಸಂಘಗಳಿದ್ದವು. ಆ ವೃತ್ತಿಯಲ್ಲಿರುವವರನ್ನೆಲ್ಲ ರಕ್ಷಿಸುವದಕ್ಕೆ ಅಲಿಖಿತ ನಿಯಮವೊಂದಿತ್ತು. ನೂರು ವರ್ಷಗಳ ಹಿಂದೆ ಬಡಗಿಯ ಮಗನಿಗೆ ವಕೀಲನಾಗಬೇಕೆಂಬ ಇಚ್ಛೆಯಿದ್ದಿಲ್ಲ. ಆದರೆ ಇಂದು ಆಗಲಿಚ್ಛಿಸುವನು. ಯಾಕಂದರೆ ಈ ಹಣವನ್ನು ಗಳಿಸಲು ಅದು ಸುಲಭಸಾಧನವೆಂದು ಅವನಿಗೇ ಕಂಡುಬಂದಿದೆ. ತನ್ನ ಮಿದುಳಿನ ಉಪಯೋಗಕ್ಕಾಗಿ ತಾನು

೧೫ ಸಾವಿರ ರೂಪಾಯಿಗಳ ಶುಲ್ಕವನ್ನು ಪಡೆಯಬೇಕೆಂದು ವಕೀಲನಿಗೆ ಅನಿಸುತ್ತದೆ. ಮತ್ತು ಹಕೀಮ ಸಾಹೇಬರಂತಹ ವೈದ್ಯನಿಗೆ ತನ್ನ ವೈದ್ಯಕೀಯ ಸಲಹೆಗಾಗಿ ದಿನವೊಂದಕ್ಕೆ ಒಂದುಸಾವಿರ ರೂಪಾಯಿಗಳ ಶುಲ್ಕವನ್ನು ತೆಗೆದುಕೊಳ್ಳಲೇಬೇಕೆಂದು ಅನಿಸುತ್ತದೆ.

ಪ್ರಶ್ನೆ: ತನ್ನ ಮನಸ್ಸಿಗೆ ಬಂದ ಉದ್ಯೋಗವನ್ನು ಕೈಕೊಳ್ಳಬಾರದೇನು?

ಉತ್ತರ: ಆದರೆ ತನ್ನ ಮನಸ್ಸಿಗೆ ಬಂದ ಉದ್ಯೋಗವು ತನ್ನ ಪೂರ್ವಜರ ಉದ್ಯೋಗವೇ ಆಗಿರಬೇಕು. ಆ ಉದ್ಯೋಗವನ್ನೇ ಆರಿಸಿಕೊಳ್ಳುವಲ್ಲಿ ಯಾವ ತಪ್ಪೂ ಇಲ್ಲ. ತದ್ವಿರುದ್ಧ ಅದು ಉದಾತ್ತ ವಿಚಾರ. ಇಂದು ನಾವು ನೋಡುತ್ತಿರುವದು ಕೇವಲ ಅಪವಾದಾತ್ಮಕ ಅದ್ಭುತಗಳನ್ನು, ಅಂತೆಯೆ ಸಮಾಜದಲ್ಲಿ ಇಂದು ಹಿಂಸೆ ಮತ್ತು ವಿಸ್ಪಲನಗಳು ಕಾಣುತ್ತಿವೆ. ಆಪಾತತಃ ಕಾಣುವ ದೃಷ್ಟಾಂತಗಳನ್ನು ನೋಡಿ ದಿಗ್ಭ್ರಾಂತರಾಗದಿರೋಣ. ತಮ್ಮ ತಂದೆಯ ಉದ್ಯೋಗವನ್ನೇ ಮುಂದುವರಿಸಿಕೊಂಡು ಬಂದಿರುವ ಸಾವಿರಾರು ಬಡಗಿಗಳು ಇರುವರು; ಆದರೆ ವಕೀಲರಾಗಿರುವಂತಹ ಬಡಗಿಗಳ ಮಕ್ಕಳು ಒಂದು ನೂರು ಜನರಾದರೂ ಇರುವದಿಲ್ಲ. ಹಿಂದಿನ ಕಾಲದಲ್ಲಿ ಇನ್ನೊಬ್ಬರ ಉದ್ಯೋಗದ ಮೇಲೆ ಅತಿಕ್ರಮಣ ಮಾಡಿ ಧನ ಸಂಚಯವನ್ನು ಮಾಡಬೇಕೆಂಬ ಆಕಾಂಕ್ಷೆಯು ಇರಲಿಲ್ಲ. ಸಿಸಿರೋನ ಕಾಲದಲ್ಲಿ ಉದಾಹರಣಾರ್ಥ, ವಕೀಲ ವೃತ್ತಿಯು ಹಣಸಂಪಾದನೆಯಿಲ್ಲದ ಗೌರವವೃತ್ತಿಯಾಗಿತ್ತು. ಬುದ್ಧಿವಂತನಾದ ಯಾವನೇ ಬಡಗಿಗೆ ಸಮಾಜ ಸೇವೆಗಾಗಿ ಹಣಕ್ಕಾಗಿಯಲ್ಲ—ವಕೀಲನಾಗುವದು ಸರಿಯಾಗಿತ್ತು. ಆದರೆ ಬರಬರುತ್ತ ಮುಂದೆ ಧನಾಕಾಂಕ್ಷೆಯೂ ಕೀರ್ತಿಯ ಆಶೆಯೂ ಇದರಲ್ಲಿ ಸೇರಿದವು. ವೈದ್ಯರು ಸಮಾಜದ ಸೇವೆಯನ್ನು ಮಾಡುತ್ತಿದ್ದರು ಮತ್ತು ಸಮಾಜವು ಕೊಟ್ಟುದರಿಂದ ತೃಪ್ತರಾಗಿ ಇರುತ್ತಿದ್ದರು. ಆದರೆ ಈಗ ಅವರು ವ್ಯಾಪಾರಿಗಳಾಗಿರುವರಲ್ಲದೆ ಸಮಾಜಕ್ಕೆ ಗಂಡಾಂತರರಾಗಿರುವರು. ಉದ್ದೇಶವು ಶುದ್ಧ ಪರೋಪಕಾರವಾಗಿದ್ದಾಗ ವೈದ್ಯರ ಹಾಗು ವಕೀಲ ವೃತ್ತಿಗಳಿಗೆ ಉದಾರ ವೃತ್ತಿಗಳೆಂಬ ಯೋಗ್ಯ ಹೆಸರುಗಳಿದ್ದವು.

ಪ್ರಶ್ನೆ: ಅದೆಲ್ಲ ಆದರ್ಶ ಸನ್ನಿವೇಶದಲ್ಲಿಯ ಮಾತು. ಆದರೆ

ಧನಾರ್ಜನಕಾರಿ ಉದ್ಯೋಗಗಳಿಗಾಗಿ ಎಲ್ಲರೂ ಧಾವಿಸುತ್ತಿರುವಾಗ ನೀವು ಏನು ಮಾಡಬೇಕೆಂದಿರುವಿರಿ?

ಉತ್ತರ: ಅದು ಬಹಳ ಸಾಮಾನ್ಯವಾಗಿ ಆಡುವ ಮಾತು. ಶಾಲೆ ಕಾಲೇಜುಗಳಲ್ಲಿ ಕಲಿಯುವ ಹುಡುಗರನ್ನೆಲ್ಲ ಸೇರಿಸಿರಿ ಮತ್ತು ಬುದ್ಧಿ ಮತ್ತೆಯ ವೃತ್ತಿಗಳಿಗಾಗಿ ಹೋಗುವ ಹುಡುಗರ ಸಂಖ್ಯೆಯ ಪ್ರಮಾಣ ವನ್ನು ಪರೀಕ್ಷಿಸಿರಿ. ದಾರಿಗರನ್ನು ದೋಚುವದು ಪ್ರತಿಯೊಬ್ಬನಿಗೂ ಯುಕ್ತವಾದ ಉದ್ಯೋಗವಲ್ಲ. ಸದ್ಯದ ಆಂದೋಲನವು ಅಂತಹ ರಸ್ತೆಯ ಲೂಟಿಗೆ ಇದ್ದಂತೆ ಕಾಣುತ್ತವೆ. ಎಷ್ಟು ಜನರು ವಕೀಲರೂ ಸರಕಾರೀ ಸೇವಕರೂ ಆಗಬಲ್ಲರು? ಧನಸಂಚಯದಲ್ಲಿ ನ್ಯಾಯವಾಗಿ ನಿರತರಾಗ ಬಲ್ಲವರು ವೈಶ್ಯರೇ. ಅಲ್ಲಿಯೂ ಅವರ ವೃತ್ತಿಯೂ ಹಿರಿಬೀದಿಯ ದೋಚು ಗಾರಿಕೆಯೆ ಆದರೆ ಅದು ತಿರಸ್ಕರಣೀಯ. ಲಕ್ಷಾಧೀಶರು ಲಕ್ಷಗಟ್ಟಲೆ ಇರಲಾರರು.

ಪ್ರಶ್ನೆ : ತಮಿಳುನಾಡಿನ ಮಟ್ಟಿಗೆ ಹೇಳುವದಾದರೆ ಎಲ್ಲ ಬ್ರಾಹ್ಮಣೇತ ರರೂ ತಮ್ಮ ವರ್ಣದ ಉದ್ಯೋಗಗಳನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಕೈಕೊಳ್ಳಬೇಕೆನ್ನುವರು.

ಉತ್ತರ: ೨೨ ದಶಲಕ್ಷ ತಮಿಳರ ಪರವಾಗಿ ಮಾತನಾಡುವ ಅಧಿಕಾರವು ನಿಮಗಿದೆಯೆಂದು ನಾನು ಒಪ್ಪುವದಿಲ್ಲ. ನಾನು ಒಂದು ಸೂತ್ರ ವನ್ನು ನಿಮಗೆ ಹೇಳುತ್ತೇನೆ. ಬೇರೆ ಪ್ರತಿಯೊಬ್ಬನೂ ಆಗಲಾರದುದನ್ನು ನಾವು ಆಗೋಣ ಬೇಡ. ನೀವು ಈ ಮಾತನ್ನು ನಾನು ಲಕ್ಷಣಿಸಿದಂತಹ ವರ್ಣದ ತಳಹದಿಯ ಮೇಲೆ ನೀವು ಬಿಡಿಸಿ ನೋಡಬಹುದು.

ಪ್ರಶ್ನೆ : ವರ್ಣನಿಯಮವು ನಮ್ಮ ಪ್ರಾಪಂಚಿಕ ಆಕಾಂಕ್ಷೆಯನ್ನು ನಿಗ್ರಹಿಸುವದೆಂದು ನೀವು ಹೇಳಿರುವಿರಿ. ಅದು ಹೇಗೆ?

ಉತ್ತರ : ನನ್ನ ತಂದೆಯ ಉದ್ಯೋಗವನ್ನೇ ನಾನು ಕೈಗೊಂಡರೆ ಅದನ್ನು ಕಲಿಯಲು ನಾನು ಶಾಲೆಗೆ ಸಹ ಹೋಗಬೇಕಾಗಿಲ್ಲ. ಅದರಿಂದ ನನ್ನ ಮಾನಸಿಕ ಉತ್ಸಾಹ ಶಕ್ತಿಯು ಆಧ್ಯಾತ್ಮಿಕ ಅನುಷ್ಠಾನಕ್ಕೆ ಮೀಸಲಾಗಿ ಉಳಿಯುವದು. ಏಕೆಂದರೆ ನನ್ನ ಉಪಜೀವನದ ಆಶ್ವಾಸನವು ನನಗೆ

ದೊರೆತಿರುತ್ತದೆ. ನಿಜವಾದ ಧರ್ಮಾನುಷ್ಠಾನಕ್ಕೂ ಸುಖಕ್ಕೂ ವರ್ಣವು ಒಂದು ಭದ್ರವಿಮೆಯಿದ್ದಂತೆ. ಬೇರೆ ಉದ್ಯೋಗಗಳಿಗಾಗಿ ನಾನು ನನ್ನ ಶಕ್ತಿಯನ್ನು ವ್ಯಯಿಸಿದರೆ ಆತ್ಮ ಸಾಕ್ಷಾತ್ಕಾರದ ನನ್ನ ಶಕ್ತಿಯನ್ನು ಮಾರಿಕೊಂಡಂತಾಗುವದು. ಅರ್ಥಾತ್ ಒಂದು ಹಿಡಿ ಕೂಳಿಗಾಗಿ ಆತ್ಮವನ್ನು ವಿಕ್ರಯಿಸಿದಂತೆ ಆಗುವದು.

ಪ್ರಶ್ನೆ : ಆಧ್ಯಾತ್ಮಿಕ ಅನುಷ್ಠಾನಕ್ಕೆ ಶಕ್ತಿಯು ಮೀಸಲಾಗುವದೆಂದು ನೀವು ಹೇಳುತ್ತಿರುವಿರಿ. ಆದರೆ ಇಂದು ತಮ್ಮ ತಂದೆಗಳ ವೃತ್ತಿಯನ್ನು ಕೈಕೊಂಡಿರುವವರಲ್ಲಿ ಆಧ್ಯಾತ್ಮಿಕ ಸಂಸ್ಕೃತಿಯು ಎಳ್ಳಷ್ಟು ಕಾಣುವದಿಲ್ಲ. ಅವರ ವರ್ಣವೇ ಅವರನ್ನು ಅದಕ್ಕೆ ಅನರ್ಹರನ್ನಾಗಿ ಮಾಡಿದೆ.

ಉತ್ತರ : ವರ್ಣದ ಬಗೆಗಿರುವ ವಿಕೃತ ಕಲ್ಪನೆಗಳಿಂದ ನಾವು ಮಾತಾಡುತ್ತಿದ್ದೇವೆ. ನಿಜವಾಗಿ ವರ್ಣಪಾಲನೆಯು ನಡೆದಿದ್ದಾಗ ಆಧ್ಯಾತ್ಮಿಕ ತರಬೇತಿಗೆ ನಮಗೆ ಸಾಕಷ್ಟು ವ್ಯವಧಾನವಿತ್ತು. ಈಗಲೂ ದೂರದ ಹಳ್ಳಿಗಳಿಗೆ ನೀವು ಹೋಗಿರಿ. ನಗರವಾಸಿಗಳನ್ನು ಹೋಲಿಸಿ ನೋಡಿದರೆ ಹಳ್ಳಿಗರಲ್ಲಿ ಎಂತಹ ಆಧ್ಯಾತ್ಮಿಕ ಸಂಸ್ಕೃತಿಯುಂಟೆಂಬುದನ್ನು ನೋಡಬಲ್ಲಿರಿ. ನಗರವಾಸಿಗಳಿಗೆ ಸಂಯಮವೇ ಗೊತ್ತಿಲ್ಲ.

ಆದರೆ ನೀವು ಯುಗದ ಅನಿಷ್ಟ ಪರಿಸ್ಥಿತಿಯನ್ನು ಕಂಡುಹಿಡಿದಿರುವಿರಿ. ಇತರರಿಗೆ ಶಕ್ಯವಲ್ಲದ್ದನ್ನು ನಾವು ಮಾಡದಿರೋಣ. ಇಚ್ಛೆಯಿದ್ದ ಪ್ರತಿಯೊಬ್ಬನಿಗೂ ಗೀತಾಪಠನವು ಅಸಾಧ್ಯವಾದರೆ ಗೀತೆಯನ್ನು ನಾನು ಅಭ್ಯಸಿಸುವದಿಲ್ಲ. ಹಣವನ್ನು ಗಳಿಸುವದಕ್ಕಾಗಿ ಆಂಗ್ಲ ಭಾಷೆಯನ್ನು ಕಲಿಯುವದರ ವಿರುದ್ಧ ನನ್ನ ಸಮಗ್ರ ಆತ್ಮವೇ ಉರಿದೇಳುತ್ತದೆ. ನಮ್ಮಲ್ಲಿ ಕೆಲವರಿಗಿರುವ ವಿಶ್ರಾಂತಿಯನ್ನು ಇತರ ಅನೇಕರಿಗೆ ದೊರೆವಂತೆ ನಮ್ಮ ಜೀವನಕ್ರಮವನ್ನು ಪುನರ್ವ್ಯವಸ್ಥಿತಪಡಿಸುವದವಶ್ಯ. ವರ್ಣನಿಯಮವನ್ನು ನಾವು ಪಾಲಿಸದಿದ್ದರೆ ಇದು ಅಸಾಧ್ಯ.

ಪ್ರಶ್ನೆ : ಪುನಃಪುನಃ ಆ ಪ್ರಶ್ನೆಯನ್ನೇ ನಾನು ಕೇಳಿದರೆ ನನ್ನನ್ನು ದಯವಿಟ್ಟು ಕ್ಷಮಿಸಿರಿ. ಅದನ್ನು ಸರಿಯಾಗಿ ತಿಳಿದುಕೊಳ್ಳುವದೇ ನಮಗೆ ಬೇಕಾಗಿದೆ. ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ಉದ್ಯೋಗಗಳನ್ನು ಕೈಕೊಳ್ಳುವವನ ವರ್ಣವಾವುದು ?

ಉತ್ತರ: ತನ್ನ ತಂದೆಯ ಉದ್ಯೋಗವನ್ನೇ ಕೈಕೊಂಡು ತನ್ನ ಉಪಜೀವನವನ್ನು ಸಾಗಿಸುತ್ತಿರುವ ವರೆಗೆ ಆತನ ವರ್ಣದಲ್ಲಿ ಯಾವ ವ್ಯತ್ಯಾಸವೂ ಆಗಲಾರದು. ಸೇವಾಪ್ರೇಮದಿಂದ ಅವನು ಬೇರೆ ಕೆಲಸವನ್ನು ಮಾಡುತ್ತಿದ್ದರೆ ತನ್ನ ಮನಸ್ಸಿಗೆ ಬಂದುದನ್ನು ತಾನು ಮಾಡಬಹುದು. ಆದರೆ ಹಣವನ್ನು ಸಂಪಾದಿಸುವ ಉದ್ದೇಶದಿಂದ ಕಾಲಕಾಲಕ್ಕೆ ಉದ್ಯೋಗ ವನ್ನು ಅವನು ಬದಲಾಯಿಸಿದರೆ ಅಧೋಗತಿಗಿಳಿಯುವನಲ್ಲದೆ ವರ್ಣದಿಂದ ಪತಿತನಾಗುವನು.

ಪ್ರಶ್ನೆ: ಶೂದ್ರನಿಗೆ ಬ್ರಾಹ್ಮಣನಲ್ಲಿರುವ ಎಲ್ಲ ಸದ್ಗುಣಗಳೂ ಇರಬಹುದು. ಆದರೂ ಅವನನ್ನು ಬ್ರಾಹ್ಮಣನೆಂದು ಯಾರೂ ತಿಳಿಯುವದಿಲ್ಲ.

ಉತ್ತರ: ಈ ಜನ್ಮದಲ್ಲಿ ಅವನನ್ನು ಬ್ರಾಹ್ಮಣನೆಂದು ಕರೆಯದಿರಬಹುದು. ಯಾವ ವರ್ಣದಲ್ಲಿ ತಾನು ಹುಟ್ಟಲಿಲ್ಲವೋ ಆ ವರ್ಣವನ್ನು ತನಗೆ ಹೇಳಿಕೊಳ್ಳದಿರುವದೇ ಒಳಿತು. ಅದು ನಿಜವಾದ ನಮ್ರತೆಯ ಗುರುತು.

ಪ್ರಶ್ನೆ: ವರ್ಣಕ್ಕಿರುವ ಗುಣಗಳು ಸಂಪ್ರಾಪ್ತವಾದವುಗಳಲ್ಲ; ಆನುವಂಶಿಕವಾಗಿರುವವೆಂದು ನೀವು ನಂಬುವಿರೋ?

ಉತ್ತರ: ಅವುಗಳನ್ನು ಪಡೆಯಬಹುದು. ಆನುವಂಶಿಕವಾದ ಗುಣಗಳನ್ನು ಯಾವಾಗಲೂ ಬೆಳೆಸಿಕೊಳ್ಳಬಹುದು. ಮತ್ತು ಹೊಸ ಗುಣಗಳನ್ನು ಅಳವಡಿಸಿಕೊಳ್ಳಬಹುದು. ಆದರೆ ಹಣವನ್ನು ಸಂಪಾದಿಸಲು ಹೊಸ ಅವಕಾಶಗಳನ್ನು ಹುಡುಕಕೂಡದು. ನಮ್ಮ ಹಿರಿಯರಿಂದ ಆನುವಂಶಿಕವಾಗಿ ಬಂದುದರಿಂದ ನಾವು ತೃಪ್ತರಾಗಿರಬೇಕು.

ಪ್ರಶ್ನೆ: ತನ್ನ ಮನೆತನದ ಶೀಲಕ್ಕೆ ವಿರುದ್ಧವಾದ ಗುಣಗಳನ್ನು ವ್ಯಕ್ತಪಡಿಸುವವನನ್ನು ನೀವು ನೋಡಿರುವದಿಲ್ಲವೆ?

ಉತ್ತರ: ಇದು ಕಠಿನ ಪ್ರಶ್ನೆ. ನಮ್ಮ ಪೂರ್ವಾಪರಗಳನ್ನೆಲ್ಲ ನಾವು ತಿಳಿದಿಲ್ಲ. ಆದರೆ ನಾನು ನಿಮಗೆ ವಿವರಿಸಿ ಹೇಳಿದಂತಹ ವರ್ಣದ ನಿಯಮವನ್ನು ತಿಳಿದುಕೊಳ್ಳಲು ಈ ಪ್ರಶ್ನೆಯಲ್ಲಿ ನಾವು ಬಹಳ ಆಳವಾಗಿ ಹೋಗಬೇಕಾಗಿಲ್ಲ. ನನ್ನ ತಂದೆಯು ವ್ಯಾಪಾರಿಯಾಗಿದ್ದರೆ ಮತ್ತು ನಾನು ಸೈನಿಕನ ಗುಣಧರ್ಮಗಳನ್ನು ಪ್ರದರ್ಶಿಸುತ್ತಿದ್ದರೆ ಪ್ರತಿಫಲಾಪೇಕ್ಷೆಯಿಲ್ಲದೆ

ಸೈನಿಕನಾಗಿ ನನ್ನ ದೇಶಸೇವೆಯನ್ನು ನಾನು ಮಾಡಬಹುದು. ಆದರೆ ನನ್ನ ಉಪಜೀವನವನ್ನು ವ್ಯಾಪಾರದಿಂದಲೇ ಸಾಗಿಸತಕ್ಕದ್ದು.

ಪ್ರಶ್ನೆ : ನಾವೀಗ ನೋಡುತ್ತಿರುವಂತೆ ಅಂತರಭೋಜನ ಅಂತರ ವಿವಾಹ ಇವುಗಳ ಬಗೆಗಿರುವ ನಿರ್ಬಂಧಗಳಲ್ಲಿಯೆ ಜಾತಿಯು ಕಂಡಬರುತ್ತಿದೆ. ವರ್ಣರಕ್ಷಣೆಯೆಂದರೆ ಈ ನಿರ್ಭಂಧಗಳನ್ನು ಉಳಿಸಿಕೊಳ್ಳುವದೆಂರ್ಥವೊ?

ಉತ್ತರ: ಅಲ್ಲ; ಎಳ್ಳನಿತೂ ಅಲ್ಲ. ಅದರ ಶುದ್ಧ ಪರಿಸ್ಥಿತಿಯಲ್ಲಿ ಯಾವ ನಿರ್ಬಂಧಗಳೂ ಇರಲಾರವು.

ಪ್ರಶ್ನೆ : ಅವುಗಳನ್ನು ಬಿಟ್ಟುಬಿಡಬಹುದೋ?

ಉತ್ತರ: ಬಿಡಬಹುದು. ಬೇರೆ ವರ್ಣದವರನ್ನು ಮದುವೆಯಾದರೂ ವರ್ಣವನ್ನು ಉಳಿಸಿಕೊಳ್ಳಬಹುದು.

ಪ್ರಶ್ನೆ : ಆಗ ತಾಯಿಯ ವರ್ಣವು ಕಲಂಕಿತವಾಗುವದು.

ಉತ್ತರ : ಹೆಂಡತಿಯು ಗಂಡನ ವರ್ಣವನ್ನೇ ಅನುಸರಿಸುವಳು.

ಪ್ರಶ್ನೆ : ನೀವು ಹೇಳಿದಂತಹ ವರ್ಣಧರ್ಮದ ಸಿದ್ಧಾಂತವು ಶಾಸ್ತ್ರಗಳಲ್ಲಿ ಇರುವದೋ? ಅಥವಾ ಅದು ನಿಮ್ಮದೆಯೋ?

ಉತ್ತರ : ನನ್ನದಲ್ಲ. ಭಗವದ್ಗೀತೆಯಿಂದ ನಾನು ಅದನ್ನು ಪಡೆದಿದ್ದೇನೆ.

ಪ್ರಶ್ನೆ: ಮನುಸ್ಮೃತಿಯಲ್ಲಿ ಹೇಳಿದಂತೆ ಆ ಸಿದ್ಧಾಂತವನ್ನು ನೀವು ಒಪ್ಪುತ್ತೀರಾ?

ಉತ್ತರ : ತತ್ವವೇನೋ ಅಲ್ಲಿದೆ. ಆದರೆ ಆದರ ಅನುಷ್ಠಾನಗಳು ಮಾತ್ರ ನನ್ನ ಮನಸ್ಸಿಗೆ ಹಿಡಿಸಿಲ್ಲ. ಗಂಭೀರ ಆಕ್ಷೇಪಗಳಿಗೆ ಅವಕಾಶವನ್ನು ನೀಡುವಂತಹ ಕೆಲವು ಭಾಗಗಳು ಅದರಲ್ಲಿವೆ. ಅವು ಪ್ರಕ್ಷಿಪ್ತ ಭಾಗಗಳೆಂದು ನಾನು ಬಗೆಯುತ್ತೇನೆ.

ಪ್ರಶ್ನೆ : ಮನುಸ್ಮೃತಿಯಲ್ಲಿ ಅನ್ಯಾಯಗಳೆಷ್ಟೋ ಇರುವದಿಲ್ಲವೆ?

ಉತ್ತರ: ಅಹುದು. ಹೆಂಗಸರಿಗೂ ನಿಮ್ನಜಾತಿಯ ಜನರಿಗೂ ಬಹಳ ಅನ್ಯಾಯವು ಅದರಲ್ಲಿದೆ. ಆ ಹೆಸರಿದ್ದ ಮಾತ್ರಕ್ಕೆ ಎಲ್ಲವೂ

ಶಾಸ್ತ್ರವಲ್ಲ. ಆದುದರಿಂದ ಶಾಸ್ತ್ರಗಳೆನಿಸಿಕೊಳ್ಳುವುವುಗಳನ್ನು ಬಹಳ ಎಚ್ಚರಿಕೆಯಿಂದ ಓದಬೇಕು.

ಪ್ರಶ್ನೆ: ಭಗವದ್ಗೀತೆಯು ನಿಮ್ಮ ಪ್ರಮಾಣ. ವರ್ಣವು 'ಗುಣ ಕರ್ಮವಿಭಾಗಶಃ' ಎಂದು ಅದು ಹೇಳುತ್ತದೆ. ಅಂದಬಳಿಕ ಜನ್ಮದ (ಹುಟ್ಟಿನ) ಮಾತನ್ನು ನೀವು ಹೇಗೆ ತಂದಿರಿ?

ಉತ್ತರ: ಆಕ್ಷೇಪಣೀಯವಲ್ಲದಂತಹ ಪುಸ್ತಕವು ಅದೊಂದೇ ಆಗಿರುವದರಿಂದ ಭಗವದ್ಗೀತೆಯ ಪ್ರತಿಜ್ಞೆಯನ್ನು ಮಾಡಿ ಅದರ ಪ್ರಮಾಣವನ್ನು ನಾನು ಹೇಳುತ್ತೇನೆ. ಅದು ತತ್ವಗಳನ್ನು ಉಲ್ಲೇಖಿಸಿ ಅವುಗಳ ಅನುಷ್ಠಾನದ ಕ್ರಮವನ್ನು ನಿಮಗೇ ಬಿಟ್ಟುಕೊಟ್ಟಿದೆ. ಗೀತೆಯಲ್ಲಿ 'ಗುಣ ಕರ್ಮವಿಭಾಗಶಃ' ಎಂದಿರುವದು ನಿಜ. ಆದರೆ ಗುಣಕರ್ಮಗಳು ಜನ್ಮತಃ ರಕ್ತಗತವಾಗಿ ಬರುತ್ತವೆ. ಭಗವಾನ್ ಕೃಷ್ಣನು "ಚಾತುರ್ವರ್ಣ್ಯಂ ಮಯಾ ಸೃಷ್ಟಂ" ಅಂದರೆ "ನಾಲ್ಕು ವರ್ಣಗಳೂ ನನ್ನಿಂದ ಸೃಷ್ಟವಾಗಿವೆ" ಎಂದು ಹೇಳಿದ್ದಾನೆ.

ಜನ್ಮದಿಂದ ವರ್ಣವಿರದಿದ್ದರೆ ಅದಕ್ಕೆ ಏನೂ ಬೆಲೆಯಿಲ್ಲ.

ಪ್ರಶ್ನೆ: ವರ್ಣದ ವಿಷಯದಲ್ಲಿ ಉಚ್ಚನೀಚ ಭೇದವಿಲ್ಲವಲ್ಲವೆ?

ಉತ್ತರ: ಇಲ್ಲ. ಎಂದಿಗೂ ಇಲ್ಲ. ಆದರೆ ದೇಹಕ್ಕೆ ತಲೆಯು ಪ್ರಧಾನ ಅಂಗವಾಗಿರುವಂತೆ ಬ್ರಾಹ್ಮಣ್ಯವು ಇತರ ವರ್ಣಗಳಲ್ಲಿ ಅಗ್ರವೆಂದು ನಾನು ಹೇಳಿದರೂ ಉಚ್ಚನೀಚ ಎಂಬ ಭೇದವೆಂದಿಗೂ ಇಲ್ಲ. ಅರ್ಥಾತ್, ಇದು ಉತ್ಕೃಷ್ಟ ಸೇವೆಗೆ ಅರ್ಹತೆ; ಉತ್ಕೃಷ್ಟ ಅಧಿಕಾರವಲ್ಲ. ಉಚ್ಚಸ್ಥಿತಿಯ ಸ್ಥಾನವನ್ನು ಅದು ತನಗೆ ಆರೋಪಿಸಿಕೊಂಡ ಕೂಡಲೇ ಅದು ತುಳಿದು ಹಾಕಲು ಯೋಗ್ಯ.

ಪ್ರಶ್ನೆ: ಕುರಲ್ ಗ್ರಂಥವು ನಿಮಗೆ ಗೊತ್ತಿದೆ. ಆ ತಮಿಳು ಮಹಾ ಕೃತಿಕಾರನು ಹುಟ್ಟಿನಿಂದ ಜಾತಿಯಿಲ್ಲೆಂದು ಹೇಳುವದು ನಿಮಗೆ ಗೊತ್ತಿದೆಯಲ್ಲವೆ? ಹುಟ್ಟುವ ಕಾಲಕ್ಕೆ ಜೀವನವೆಲ್ಲ ಸರಿಸಮವೆಂದು ಆತನು ಹೇಳುತ್ತಾನೆ.

ಉತ್ತರ : ಇಂದಿನ ಅತಿಶಯೋಕ್ತಿಗಳಿಗೆ ಉತ್ತರವಾಗಿ ಆತನು ಹಾಗೆ ಹೇಳಿದ್ದಾನೆ. ಯಾವದೇ ವರ್ಣವು ತಾನು ಶ್ರೇಷ್ಠವೆಂದು ಹೇಳಿಕೊಳ್ಳಲು ಆರಂಭಿಸಿದೊಡನೆ ಆದರ ವಿರುದ್ಧ ಅವನು ಉಸಿರಬೇಕಾಯ್ತು. ಆದರೆ ಹುಟ್ಟಿನಿಂದ ವರ್ಣವೆಂಬ ಮಾತನ್ನು ಅದು ಅಲ್ಲಗಳೆಯುವದೆಂದು ಅರ್ಥವಾಗುವದಿಲ್ಲ. ವಿಷಮತೆಯ ಬೇರನ್ನು ಕತ್ತರಿಸುವ ಸುಧಾರಕನ ಪ್ರಯತ್ನವು ಅದು.

ಪ್ರಶ್ನೆ : ಸದ್ಯದ ರೂಢಿಯು ಅತ್ಯಂತ ವಿಪರ್ಯಸ್ತವಾಗಿದೆ. ಅಂದಬಳಿಕ ಅದನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಹೊಸ ಪ್ರಕರಣವನ್ನೇ ಆರಂಭಿಸುವದೊಳಿತಾಗಲಿಕ್ಕಿಲ್ಲವೆ ?

ಉತ್ತರ : ನಾವು ಸೃಷ್ಟಿಕರ್ತರಾಗಿದ್ದರೆ ಮಾತ್ರ ಇದು ಸಾಧ್ಯವಾಗಿದ್ದಿತು. ಹಿಂದೂ ಸ್ವಭಾವವನ್ನು ನಾವು ನಮ್ಮ ಒಂದು ಲೆಕ್ಕಣಿಕೆಯ ಗೆರೆಯಿಂದ ಪಲ್ಲಟಿಸಲಾರೆವು. ಆ ನಿಯಮವನ್ನು ನಾಶಪಡಿಸದೆ ಆದರ ಉಪಯೋಗದ ರೀತಿಯನ್ನು ನಾವು ಹುಡುಕಿ ತೆಗೆಯಬಹುದು.

ಪ್ರಶ್ನೆ: ಶಾಸ್ತ್ರಕಾರರು ಹೊಸ ಸ್ಮೃತಿಗಳನ್ನು ರಚಿಸಿರುವಾಗ ನೀವೇಕೆ ಮಾಡಕೂಡದು ?

ಉತ್ತರ : ನವಸೃಷ್ಟಿಯನ್ನೇ ನಾನು ನಿರ್ಮಿಸಿದರೆ ನನ್ನ ಗತಿಯು ವಿಶ್ವಾಮಿತ್ರನ ಅವಸ್ಥೆಗಿಂತಲೂ ಹೀನತರವಾಗುವದು. ಏಕೆಂದರೆ ಅವನು ನನಗಿಂತಲೂ ಎಷ್ಟೋಪಟ್ಟು ದೊಡ್ಡವನಾಗಿದ್ದನು.

ಪ್ರಶ್ನೆ : ನೀವು ವರ್ಣವನ್ನು ನಾಶಪಡಿಸದಿದ್ದರೆ ಅಸ್ಪೃಶ್ಯತೆಯನ್ನು ನಾಶಮಾಡಲಾರಿರಿ.

ಉತ್ತರ : ನನಗೆ ಹಾಗೆ ತೋರುವದಿಲ್ಲ. ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ವರ್ಣವು ಹಾಳಾಗಿಹೋದರೆ ನಾನು ಒಂದು ಹನಿ ಕಣ್ಣೀರನ್ನು ಹಾಕುವುದಿಲ್ಲ. ಆದರೆ ನಾನು ವರ್ಣಿಸಿದಂತಹ ವರ್ಣದ ಕಲ್ಪನೆಗೂ ಅಸ್ಪೃಶ್ಯತೆಗೂ ಏನು ಸಂಬಂಧವಿದೆ?

ಪ್ರಶ್ನೆ : ಸುಧಾರಣಾ ವಿರೋಧಿಗಳು ತಮ್ಮ ಬೆಂಬಲಕ್ಕಾಗಿ ನಿಮ್ಮ ಅಭಿಪ್ರಾಯಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಉತ್ತರ: ಪ್ರತಿಯೊಬ್ಬ ಸುಧಾರಕನ ಗತಿಯೇ ಅದು. ಆತನ ಮಾತುಗಳನ್ನು ವಿಶಿಷ್ಟ ಹಿತಸಂಬಂಧಗಳಿದ್ದ ಜನರು ತನಗೆ ಸರಿಕಂಡಂತೆ ತಪ್ಪುತಪ್ಪಾಗಿ ಉಪಯೋಗಿಸಿಕೊಳ್ಳುವರು. ಆದರೆ ನಾನು ಹಿಂದೂಧರ್ಮವನ್ನು ಬಿಡಬೇಕೆಂದೂ ಕೆಲವರು ಇಚ್ಛಿಸುತ್ತಿರುವ ಸಂಗತಿಯೂ ನಿಮಗೆ ಗೊತ್ತಿದೆ. ಬೇರೆ ಕೆಲವರು ಶಕ್ಯವಿದ್ದರೆ ನನ್ನನ್ನು ಹಿಂದೂಧರ್ಮದಿಂದ ಹೊರಗೆ ಹಾಕಲೂ ಬಯಸುತ್ತಿರುವರು. ವರ್ಣಧರ್ಮವನ್ನು ಉಳಿಸಲು ನಾನೆಲ್ಲಿಯೂ ಬಂದಿಲ್ಲ. ಆದರೆ ವೈಕಮಿಗೆ ನಾನು ಅಸ್ಪೃಶ್ಯತಾ ನಿವಾರಣೆಗಾಗಿ ಹೋದೆನು. ಖಾದೀಪ್ರಚಾರ, ಹಿಂದೂ ಮುಸಲ್ಮಾನರ ಒಕ್ಕಟ್ಟು ಮತ್ತು ಅಸ್ಪೃಶ್ಯತಾ ನಿವಾರಣೆಯೆಂಬ ಸ್ವರಾಜ್ಯದ ಮೂರು ಕಂಬಗಳ ಕಾಂಗ್ರೆಸ್ ಗೊತ್ತುವಳಿಯನ್ನು ಬರೆದವನು ನಾನೇ. ಆದರೆ ನಾನೆಂದೂ ವರ್ಣಾಶ್ರಮ ಧರ್ಮಕ್ಕೆ ನಾಲ್ಕನೆಯ ಕಂಬವೆಂದು ಹೇಳಿಲ್ಲ. ಆದುದರಿಂದ ವರ್ಣಾಶ್ರಮ ಧರ್ಮಕ್ಕೆ ಅನುಚಿತ ಮಹತ್ವವನ್ನು ಕೊಡುತ್ತಿದ್ದೇನೆಂಬ ಆರೋಪವನ್ನು ನೀವು ನನ್ನ ಮೇಲೆ ಹೊರಿಸಲಾರಿರಿ.

ಪ್ರಶ್ನೆ : ನಿಮ್ಮ ಅನುಯಾಯಿಗಳನೇಕರು ನಿಮ್ಮ ಉಪದೇಶವನ್ನು ವಿಪರ್ಯಸ್ತಗೊಳಿಸುವರೆಂಬುದನ್ನು ನೀವು ಬಲ್ಲಿರಾ?

ಉತ್ತರ: ನನಗೆ ಗೊತ್ತಿಲ್ಲವೆ ಅದು? ಕೇವಲ ಹಾಗೆ ನನ್ನ ಅನುಯಾಯಿಗಳೆಂದು ಕರೆದುಕೊಳ್ಳುವ ಅನೇಕರಿರುವರೆಂಬುದನ್ನು ನಾನು ಬಲ್ಲೆನು.

ಪ್ರಶ್ನೆ : ಬೌದ್ಧ ಧರ್ಮದಲ್ಲಿ ಬ್ರಾಹ್ಮಣರೇ ತುಂಬಿಕೊಂಡುದರಿಂದ ಅದನ್ನು ಭಾರತದಿಂದ ಹೊರದೂಡಲಾಯ್ತು. ಹಾಗೆಯೇ ಅವರ ಉದ್ದೇಶಕ್ಕೆ ಅನುಗುಣವಾಗದಿದ್ದರೆ ಅವರು ಹಿಂದೂಧರ್ಮವನ್ನು ಈ ದೇಶದಿಂದ ಓಡಿಸಿಬಿಡುವರು.

ಉತ್ತರ: ಅವರು ಆ ಧೈರ್ಯವನ್ನು ಮಾಡಲಿ. ಆದರೆ ಬೌದ್ಧ ಧರ್ಮವು ಭಾರತದಿಂದ ಹೊರತಳ್ಳಲ್ಪಟ್ಟಿಲ್ಲವೆಂದು ನನ್ನ ನಿಶ್ಚಯ. ಬುದ್ಧನ ತತ್ವದ ಬಹುಭಾಗವನ್ನು ಭಾರತವು ಮೈಗೂಡಿಸಿಕೊಂಡಿದೆ. ಬೌದ್ಧ ಧರ್ಮವನ್ನು ಬುದ್ಧನ ಮನೋಭಾವದಿಂದ ವಿಂಗಡಿಸತಕ್ಕದ್ದು. ಹಾಗೆಯೇ

ಕ್ರಿಸ್ತಧರ್ಮವನ್ನು ಕ್ರೈಸ್ತ ಮನೋಭಾವದಿಂದಲೂ ಬೇರ್ಪಡಿಸಬೇಕು. ಬುದ್ಧನ ತತ್ತ್ವೋಪದೇಶದ ಮುಖ್ಯ ತಿರುಳನ್ನು ಅವರು ಅರಗಿಸಿಕೊಂಡುದರಿಂದ ಬೌದ್ಧಧರ್ಮವನ್ನು ಭಾರತದಿಂದ ಹೊರಗೆ ಓಡಿಸುವಲ್ಲಿ ಅವರು ಯಶಸ್ವಿಯಾದರು.

ಪ್ರಶ್ನೆ: ಬೌದ್ಧಧರ್ಮದ ಉತ್ತಮ ಅಂಶಗಳನ್ನು ಅರಗಿಸಿಕೊಂಡ ಆ ಬ್ರಾಹ್ಮಣರೇ ಅತ್ಯಂತ ಹೀನವಾದ ಅಪರಾಧಗಳನ್ನು ಮಾಡಿರುವರು. ಹರಿಜನರಿಗೆ ದೇವಾಲಯಪ್ರವೇಶದ ಹಕ್ಕನ್ನು ಕೊಡದೆ ಅವರ ಮೇಲೆ ಕ್ರೂರವಾದ ನಿರ್ಬಂಧಗಳನ್ನು ಹಾಕಿ ಅಮೃತಸರದ ಅತ್ಯಾಚಾರಕ್ಕಿಂತಲೂ ಹೀನತರವಾದ ಅಪರಾಧಗಳನ್ನು ಅವರು ಮಾಡಿರುವರು.

ಉತ್ತರ: ಕೆಲಮಟ್ಟಿಗೆ ನೀವು ಹೇಳುವದು ಸರಿಯಿದೆ. ಆದರೆ ಆ ದೋಷವನ್ನೆಲ್ಲ ಬ್ರಾಹ್ಮಣರ ಮೇಲೆ ಹೊರಿಸುವದು ತಪ್ಪು. ಸಮಗ್ರ ಹಿಂದೂಧರ್ಮವೇ ಅದಕ್ಕೆ ಹೊಣೆಯಾಗಿದೆ. ವರ್ಣಧರ್ಮವು ವಿಪರ್ಯಸ್ತವಾಗಿ ಅಸ್ಪೃಶ್ಯತೆಗೆ ಅವಕಾಶವನ್ನು ಮಾಡಿಕೊಟ್ಟಿತು. ಬುದ್ಧಿಪೂರ್ವಕ ದುಷ್ಟತೆಯಲ್ಲ ಅದು. ಆದರೆ ಫಲ ಮಾತ್ರ ಒಂದು ಮಾನವ ದುರಂತ.

ಪ್ರಶ್ನೆ : ಆದರೆ ವರ್ಣಾಶ್ರಮ ಧರ್ಮವೆಂಬ ಶಬ್ದವನ್ನು ನೀವು ಉಪಯೋಗಿಸುವವರೆಗೆ ಇಂದಿನ ಅನರ್ಥಕರ ಅಂಶಗಳೂ ಅದರ ಜೊತೆಯಲ್ಲಿ ಬರುತ್ತವೆ.

ಉತ್ತರ : ಇದರ ನೀತಿಪಾಠವೆಂದರೆ ಅನರ್ಥಕರ ಅಂಶಗಳನ್ನು ನಾಶಮಾಡಿರಿ ಮತ್ತು ವರ್ಣಾಶ್ರಮ ಧರ್ಮದ ಮೂಲ ಪರಿಶುದ್ಧತೆಯನ್ನು ಕಾಯ್ದುಕೊಳ್ಳಿರಿ.

ನಿಮಗಾಗಿ ನನ್ನ ಕಾರ್ಯಕ್ರಮ

ಪ್ರಶ್ನೆ : ಸಂಪೂರ್ಣ ದಿಗ್ಭ್ರಮೆಯ ಪರಿಸ್ಥಿತಿಯಿದೆ. ನಾವು ಹಿಂದಕ್ಕೆ ಹೇಗೆ ಹೋಗಬಹುದು ?

ಉತ್ತರ: ತಳಹದಿಯನ್ನು ಕೆಡಿಸಬೇಡಿರೆಂದು ಹೇಳುವದೇ ನನ್ನ ಮುಖ್ಯ ಉದ್ದೇಶ. ಅದನ್ನು ಶುದ್ಧೀಕರಿಸುವ. ಅದನ್ನು ಬಿಟ್ಟು, ನೀವು ಹೊಸ ಧರ್ಮವನ್ನೇ ಸ್ಥಾಪಿಸಲು ಪ್ರಯತ್ನಿಸುತ್ತಿರುವಿರಿ. ಆದರೆ ಅದನ್ನು ಅಂಗೀಕರಿಸಲು ಯಾರೂ ಸಿದ್ಧರಿಲ್ಲ. ಹಿಂದೂತ್ವವೆಂದರೆ ಬ್ರಾಹ್ಮಣ್ಯ ಅಂದರೆ ಹಿಂದೂತ್ವದ್ಯೋತಕವಾದ ಒಂದೇ ಶಬ್ದವೆಂದರೆ ಬ್ರಾಹ್ಮಣ್ಯವಾಗಿತ್ತು. ಅರ್ಥಾತ್ ಬ್ರಹ್ಮವಿದ್ಯೆಯಾಗಿತ್ತು. ಅದನ್ನು ನೀವು ನಾಶಮಾಡಿದರೆ ಹಿಂದೂತ್ವವನ್ನೇ ನೀವು ನಾಶಪಡಿಸುವಿರಿ. ನಿಮ್ಮ ಅಧಿಕಾರಗಳ ಮೇಲೆ ಬ್ರಾಹ್ಮಣನು ಅತಿಕ್ರಮಣ ಮಾಡಿದರೆ ಹೆಜ್ಜೆಹೆಜ್ಜೆಗೂ ಆತನೊಡನೆ ಹೋರಾಡಿರಿ ಮತ್ತು ಆತನನ್ನು ಸುಧಾರಿಸಿರಿ. ಆದರೆ ಪ್ರತಿಯೊಬ್ಬ ಬ್ರಾಹ್ಮಣನನ್ನೂ ದುಷ್ಟನೆಂದು ನಿಂದಿಸುವದರಲ್ಲಿ ಯಾವ ಪ್ರಯೋಜನವೂ ಇಲ್ಲ. ಬ್ರಾಹ್ಮಣ ಬ್ರಾಹ್ಮಣರಲ್ಲಿ ಬೇಕಾದಷ್ಟು ಅಂತರವಿದೆ. ಒಬ್ಬನು ಪೂರ್ಣ ಸುಧಾರಕ, ಇನ್ನೊಬ್ಬನು ಅದರ ವಿರೋಧಿ. ಬ್ರಾಹ್ಮಣ ಸುಧಾರಕ ಶ್ರೇಷ್ಠರನ್ನು ನಿಮ್ಮೆಡೆಗೆ ಒಲಿಸಿಕೊಳ್ಳಿರಿ. ಅವರ ಸಹಾಯದಿಂದ ನಿಮ್ಮ ವಿಧಾಯಕ ಕಾರ್ಯಕ್ರಮದ ಭಾಗವನ್ನು ಪೂರೈಸಿಕೊಳ್ಳಿರಿ. ಅದರಿಂದ ಬ್ರಾಹ್ಮಣ ಬ್ರಾಹ್ಮಣೇತರಿಬ್ಬರಿಗೂ ಹಿತವಾಗುವದು.

ಸುಧಾರಕರ ವಿರೋಧಿಗಳೊಡನೆ ಹೋರಾಡಿರಿ. ಮತ್ತು ಅವರಿಗೆ "ನೀವು ಧನ ಮತ್ತು ಅಧಿಕಾರ ಇವುಗಳನ್ನು ಬೆಂಬತ್ತಿದರೆ ನಾವು ನಿಮ್ಮನ್ನು ಬ್ರಾಹ್ಮಣರೆಂದು ಕರೆಯುವುದಿಲ್ಲ. ನೀವು ವಿದ್ವಾಂಸರಾಗಿ ನಿಜವಾದ ಧರ್ಮವನ್ನು ನಮಗೆ ತಿಳಿಸದಿದ್ದರೆ ನಿಮ್ಮನ್ನು ಬ್ರಾಹ್ಮಣರೆಂದು ನಾವು ತಿಳಿಯುವದಿಲ್ಲ" ಎಂದು ಅವರಿಗೆ ಹೇಳಿರಿ. ಆಗ ಅವರಿಂದ ನಿಮಗಾಗಿ ವಿರೋಧವೂ ಬರುವದಿಲ್ಲ. ಈ ಸುಧಾರಣೆಯನ್ನು ಸಾಧಿಸಲು ನೀವು ತೀವ್ರವಾದ ಆಂದೋಲನವನ್ನು ನಡೆಸುವಿರಿ. ಯಾವನೇ ಬ್ರಾಹ್ಮಣೇತರನಿಗೆ ಭೇದಭಾವವನ್ನು ತೋರುವ ಶಾಲೆಗಳನ್ನು ದೇವಾಲಯಗಳನ್ನು ನೀವು ಬಹಿಷ್ಕರಿಸಿರಿ. ಶುದ್ಧ ಚಾರಿತ್ರ್ಯದ, ನಿಜ ಪಾಂಡಿತ್ಯದ ಹಾಗು ಐಹಿಕ ಆಕಾಂಕ್ಷೆಗಳಿಂದ ಅಲಿಪ್ತರಿದ್ದ ಆಚಾರ್ಯರನ್ನು ಪಡೆಯಲು ಆಗ್ರಹ ತೊಡಿರಿ. ಅಸ್ಪೃಶ್ಯರಿಗೆ ಹಳೆಯ ದೇವಾಲಯಗಳಲ್ಲಿ ಪ್ರವೇಶವು ದೊರೆಯದಿದ್ದರೆ ಹೊಸ ದೇವಾಲಯಗಳನ್ನು ನೀವು ಕಟ್ಟಿಸಬಹುದು.

ಅಂತರಭೋಜನದ ಪ್ರಶ್ನೆಯೊಂದಿದೆ. ಯಾವನ ಕೂಡ ಆದರೂ

ಜಗಳವನ್ನು ಮಾಡಲು ಇದನ್ನೊಂದು ಕಾರಣವನ್ನಾಗಿ ನಾನು ಮಾಡ ಬಾರದು. ಆದರೆ ವಿಂಗಡಿಸುವ ಗೆರೆಯಿದ್ದ ಸಮಾರಂಭವನ್ನು ನಾನು ಬಹಿಷ್ಕರಿಸಲೇಬೇಕು.

ಅಸ್ಪೃಶ್ಯರೊಡನೆ ಬಾಂಧವ್ಯವನ್ನು ನಾನು ಬೆಳೆಸುವೆನು. ನನ್ನ ರಕ್ತಸಂಬಂಧಿಯಾದ ಬಂಧುವಿನೊಡನೆ ನಡೆದುಕೊಂಡಂತೆ, ಅವರೊಡ ನೆಯೂ ನಾನು ನಡೆಯಬೇಕು. ಹಾಗು ಚಿಕ್ಕಪುಟ್ಟ ಜಾತಿ ಉಪಜಾತಿ ಗಳನ್ನು ತುಂಡುತುಂಡಾಗಿ ಖಂಡಿಸುವೆನು. ಆದುದರಿಂದ ನನ್ನ ಹುಡುಗನ ವಿವಾಹವನ್ನು ಮಾಡುವದಾದರೆ ಬೇರೆ ಉಪವಿಭಾಗಗಳಿಗೆ ಸೇರಿದ ಕನ್ಯೆ ಯೊಡನೆ ಆತನ ವಿವಾಹವನ್ನು ನಾನು ನೆರವೇರಿಸುವೆನು. ಗುಜರಾತದಲ್ಲಿ ನೆಲೆಸಲು ಒಂದು ಹುಡುಗಿಯನ್ನು ನನ್ನೊಡನೆ ನೀವು ಕಳುಹಿಸಲಾರದಷ್ಟು ಮತ್ತು ಗುಜರಾತದಿಂದ ಒಂದು ಹುಡುಗಿಯನ್ನು ತಂದು ನಿಮ್ಮಲ್ಲಿಯೇ ತಮಿಳು ನಾಡಿನಲ್ಲಿ ನೆಲೆಸಿಕೊಳ್ಳಲಾರದಷ್ಟು ಜಾತಿಪದ್ಧತಿಯು ನಮ್ಮನ್ನು ಕಟ್ಟಿಹಾಕಿದೆ.

ಹರಿಜನರಿಗೆ ನಾನು ಧಾರ್ಮಿಕ ಶಿಕ್ಷಣವನ್ನು ಕೊಡುವೆನು. ಹಿಂದೂ ತ್ವದ ಹಾಗು ನೀತಿಮತ್ತೆಯ ಮೂಲ ತತ್ವಗಳನ್ನು ತಿಳಿಸಿ ಹೇಳುವೆನು. ಇಂದು ಅವರು ಕೇವಲ ಪಶುಜೀವನವನ್ನೇ ನಡೆಸಿರುವರು. ನಿಷಿದ್ಧ ಆಹಾರವನ್ನು ಸೇವಿಸದಿರಲು ಅವರ ಮನವೊಲಿಸುವೆನು. ಶುದ್ಧ ಜೀವನ ವನ್ನು ನಡೆಸಲು ಉಪದೇಶಿಸುವೆನು. ಹೀಗೆಯೆ ನೀವು ಈ ಪ್ರಶ್ನೆಗಳನ್ನು ಬೆಳೆಸಿಕೊಳ್ಳಬಹುದು. ಅಂದರೆ ನಿಮಗೆ ದೊಡ್ಡ ವಿಧಾಯಕ ಕಾರ್ಯ ಕ್ರಮವನ್ನು ಜರುಗಿಸಲು ಅನುಕೂಲವಾಗುವದು.

(ಯಂಗ್ ಇಂಡಿಯಾ : ೨೪-೧೧-೨೭)

ವರ್ಣಾಶ್ರಮವೂ ಅಂತರಭೋಜನವೂ

ನನ್ನ ಅಭಿಪ್ರಾಯದ ಮೇರೆಗೆ ವರ್ಣಾಶ್ರಮವು ಮಾನವ ಸ್ವಭಾವ ದಲ್ಲಿಯೆ ಇದೆ. ಅದನ್ನು ಹಿಂದೂಧರ್ಮವು ಕೇವಲ ಒಂದು ಶಾಸ್ತ್ರ ವನ್ನಾಗಿಸಿದೆ. ಹುಟ್ಟಿಗೆ ಅದರ ಸಂಬಂಧವಿದೆ. ಮನಬಂದಂತೆ ತನ್ನ ವರ್ಣ

ವನ್ನು ಯಾವನೊಬ್ಬನು ಬದಲಿಸಲಾರನು. ವರ್ಣಧರ್ಮವನ್ನು ನಿರಾಕರಿಸಿದರೆ ಆನುವಂಶಿಕತೆಯ ನಿಯಮವನ್ನು ಅಲ್ಲಗಳೆದಂತಾಗುವದು. ಆದರೆ ಅಸಂಖ್ಯ ಜಾತಿಗಳ ರೂಪದಲ್ಲಿ ಆದ ವಿಭಾಗವು ವರ್ಣಾಶ್ರಮಧರ್ಮ ತತ್ವದ ಕೂಡ ಅನುಚಿತವಾಗಿ ಚೆಲ್ಲಾಟವಾಡಿದಂತೆಯೆ ಸರಿ. ನಾಲ್ಕು ವಿಭಾಗಗಳು ಸರ್ವಗ್ರಾಹಿಯಾಗಿವೆ. ಅಂತರಭೋಜನದಿಂದ ಅಥವಾ ಅಂತರವಿವಾಹದಿಂದ, ಜನ್ಮತಃ ದೊರೆತ ಸ್ಥಾನಮಾನಕ್ಕೆ ಯಾವದೇ ಬಗೆಯ ಚ್ಯುತಿಯುಂಟಾಗುವುದೆಂದು ನಾನು ತಿಳಿಯುವುದಿಲ್ಲ. ನಾಲ್ಕು ವಿಭಾಗಗಳು ಮನುಷ್ಯನ ಉದ್ಯೋಗ ವೃತ್ತಿಯನ್ನು ಸ್ಪಷ್ಟಪಡಿಸುತ್ತವೆಯಲ್ಲದೆ ಸಾಮಾಜಿಕ ಸಂಪರ್ಕಸಮಾಗಮಗಳನ್ನು ನಿರ್ಬಂಧಿಸುವುದಿಲ್ಲ. ತನಗೆ ಉಚ್ಚಸ್ಥಾನವನ್ನೂ ಇನ್ನೊಬ್ಬನಿಗೆ ನೀಚ ಸ್ಥಾನವನ್ನೂ ಕೊಟ್ಟುಕೊಳ್ಳುವುದು ಹಿಂದೂ ಧರ್ಮದ ಪ್ರತಿಭೆಗೆ ವಿರುದ್ಧವಾದುದೆಂದು ನನ್ನ ಮತ. ಪರಮಾತ್ಮ ಸೃಷ್ಟಿಯ ಸೇವೆಗಾಗಿ ಎಲ್ಲರೂ ಹುಟ್ಟಿರುವದು, ಜ್ಞಾನದಿಂದ ಬ್ರಾಹ್ಮಣ, ರಕ್ಷಣಾಸಾಮರ್ಥ್ಯದಿಂದ ಕ್ಷತ್ರಿಯ, ವಾಣಿಜ್ಯಬಲದಿಂದ ವೈಶ್ಯ, ಕಾಯಕಷ್ಟದಿಂದ ಶೂದ್ರ. ಹೀಗೆನ್ನುವದರಿಂದ ಬ್ರಾಹ್ಮಣನು ದೈಹಿಕ ಶ್ರಮವನ್ನು ಮಾಡಬಾರದೆಂದಲ್ಲ. ಅಥವಾ ತನ್ನನ್ನಾಗಲಿ ಇತರರನ್ನಾಗಲಿ ರಕ್ಷಿಸಕೂಡದೆಂದಲ್ಲ. ಬ್ರಾಹ್ಮಣನನ್ನು ಆತನ ಜನ್ಮವು ಪ್ರಾಮುಖ್ಯವಾಗಿ ಜ್ಞಾನ ಪುರುಷನನ್ನಾಗಿ ಮಾಡುತ್ತದೆ. ಆನುವಂಶಿಕತೆಯಿಂದಲೂ ಶಿಕ್ಷಣದಿಂದಲೂ ಆತನು ಅದಕ್ಕೆ ಅತ್ಯಂತ ಯೋಗ್ಯನು. ಹಾಗೆಯೆ ಶೂದ್ರನಿಗೆ ಎಲ್ಲ ಜ್ಞಾನವನ್ನೂ ಸಂಪಾದಿಸಲು ಪ್ರತಿಬಂಧಕವಾದುದೇನೂ ಇಲ್ಲ. ಆದರೆ ತನ್ನ ದೇಹದಿಂದ ಅವನು ಹೆಚ್ಚು ಚೆನ್ನಾಗಿ ಸೇವೆ ಮಾಡಬಲ್ಲನು. ಆದುದರಿಂದ ಅವನು ಬೇರೆಯವರನ್ನು ಅವರವರ ವಿಶಿಷ್ಟ ಗುಣಧರ್ಮಾನುಸಾರ ಸೇವೆಗಾಗಿ ಮತ್ಸರಪಡಬೇಕಾಗಿಲ್ಲ. ಆದರೆ ಜ್ಞಾನಾಧಿಕಾರದ ಮೂಲಕ ತಾನು ಶ್ರೇಷ್ಠನೆಂದು ತಿಳಿದುಕೊಳ್ಳುವ ಬ್ರಾಹ್ಮಣನು ಪತಿತನಾಗುವನು. ಅವನು ನಿಜವಾಗಿ ಅಜ್ಞಾನಿ. ಹಾಗೆಯೆ ತಮ್ಮತಮ್ಮ ವಿಶಿಷ್ಟ ಗುಣಗಳ ವಿಷಯವಾಗಿ ಹೆಮ್ಮೆ ಹೆಚ್ಚಳವನ್ನು ಹೇಳಿಕೊಳ್ಳುವವರೆಲ್ಲರ ಗತಿಯೂ ಇದೇ. ವರ್ಣಾಶ್ರಮವೆಂದರೆ ಆತ್ಮನಿಗ್ರಹ ಮತ್ತು ಉತ್ಸಾಹಶಕ್ತಿಯ ಉಳಿತಾಯ ಹಾಗು ಮಿತವ್ಯಯ.

ಅಂತರಭೋಜನ ಅಂತರವಿವಾಹಗಳಿಂದ ವರ್ಣಾಶ್ರಮ ಧರ್ಮದ

ಮೇಲೆ ಪ್ರತಿಕ್ರಿಯೆಯಾಗದಿದ್ದರೂ ಹಿಂದೂಧರ್ಮವು ಅತ್ಯಂತ ಆಗ್ರಹಪೂರ್ವಕವಾಗಿ ಅಂತರಭೋಜನ, ಅಂತರವಿವಾಹಗಳನ್ನು ನಿಷೇಧಿಸಿದೆ. ಆತ್ಮನಿಗ್ರಹದ ಪರಮಾವಧಿಯನ್ನು ಹಿಂದೂಧರ್ಮವು ಮುಟ್ಟಿದೆ. ದೇಹದ ಮೋಹವನ್ನು ತ್ಯಜಿಸುವದರಿಂದ ಆತ್ಮದ ಸ್ವಾತಂತ್ರ್ಯಕ್ಕೆ ಅವಕಾಶವಾಗುವದೆಂಬ ತ್ಯಾಗದ ಧರ್ಮವೇ ಅದಾಗಿದೆ. ತನ್ನ ಮಗನೊಡನೆ ಊಟಮಾಡಲೇಬೇಕೆಂಬುದು ಹಿಂದುವಿನ ಧರ್ಮದ ಅಂಗವಾಗಿಲ್ಲ. ಮತ್ತು ವಿಶಿಷ್ಟ ಗುಂಪಿನೊಳಗಿಂದಲೇ ಕನ್ಯೆಯನ್ನು ಆರಿಸಿಕೊಳ್ಳಬೇಕೆಂಬ ನಿರ್ಬಂಧಕ್ಕೊಳಗಾಗಿ ಆತನು ಆತ್ಮನಿಗ್ರಹವನ್ನು ಪ್ರಯೋಗಿಸುವನು. ಮೋಕ್ಷಕ್ಕೆ ಗೃಹಸ್ಥಧರ್ಮವು ಅವಶ್ಯವೆಂದು ಹಿಂದೂಧರ್ಮವು ತಿಳಿಯುವದಿಲ್ಲ. ವಿವಾಹವು ಜನನದಂತೆ ಒಂದು ಪತನವೇ ಸರಿ. ಜನನಮರಣಗಳಿಂದ ಬಿಡುಗಡೆ ಹೊಂದುವದೇ ಮುಕ್ತಿ. ತ್ವರಿತ ಆತ್ಮವಿಕಾಸಕ್ಕೆ ಅಂತರಭೋಜನ, ಅಂತರವಿವಾಹ ನಿಷೇಧವು ಅತ್ಯವಶ್ಯವಾಗಿದೆ. ಆದರೆ ಈ ಸ್ವಾರ್ಥತ್ಯಾಗವು ವರ್ಣದ ಒರೆಗಲ್ಲಲ್ಲ. ಶೂದ್ರ ಬಂಧುವಿನೊಡನೆ ಊಟ ಮಾಡಿದರೂ ಬ್ರಾಹ್ಮಣನು ಬ್ರಾಹ್ಮಣನಾಗಿಯೇ ಉಳಿಯಬಲ್ಲನು. ಆದರೆ ಜ್ಞಾನದ ಮೂಲಕ ಸೇವೆಯನ್ನು ಮಾಡುವ ತನ್ನ ಧರ್ಮವನ್ನು ಮಾತ್ರ ಅವನು ಬಿಟ್ಟಿರಬಾರದು. ನಾನು ಮೇಲೆ ಹೇಳಿದ್ದುದರಿಂದ ವಿವಾಹ ಭೋಜನಗಳ ನಿಗ್ರಹವು ಉಚ್ಚನೀಚತೆಯನ್ನವಲಂಬಿಸಿಲ್ಲೆಂದು ವ್ಯಕ್ತವಾಗುವದು. ಉಚ್ಚನೀಚ ಎಂಬ ಬುದ್ಧಿಯಿಂದ ಇನ್ನೊಬ್ಬನೊಡನೆ ಊಟಮಾಡಲು ಒಪ್ಪದ ಹಿಂದೂವು ತನ್ನ ಧರ್ಮವನ್ನು ಸರಿಯಾಗಿ ಪ್ರತಿನಿಧಿಸುವದಿಲ್ಲ.

ದುರ್ದೈವದಿಂದ ಇಂದು ಬರೀ ಊಟಮಾಡುವದು ಅಥವಾ ಊಟ ಮಾಡದಿರುವದು ಇವುಗಳಲ್ಲಿಯೆ ಹಿಂದೂಧರ್ಮವಿದ್ದಂತೆ ಕಾಣುತ್ತದೆ. ಮುಸಲ್ಮಾನನೊಬ್ಬನ ಮನೆಯಲ್ಲಿ ನಾನು ರೊಟ್ಟಿಯನ್ನು ತೆಗೆದುಕೊಂಡು ಪವಿತ್ರ ಹಿಂದೂವೊಬ್ಬನನ್ನು ಗಾಬರಿಗೊಳಿಸಿದೆನು. ಮುಸಲ್ಮಾನ ಮಿತ್ರನು ಕೊಟ್ಟ ಬಟ್ಟಲಲ್ಲಿ ಹಾಲನ್ನು ಹಾಕುತ್ತಿರುವ ನನ್ನನ್ನು ಕಂಡು ಅವನಿಗೆ ಬಹಳ ವೇದನೆಯಾಯ್ತು. ಆದರೆ ಮುಸಲ್ಮಾನ ಮಿತ್ರನ ಕೈಯಿಂದ ರೊಟ್ಟಿಯನ್ನು ತೆಗೆದುಕೊಂಡ ಬಳಿಕವಂತೂ ಅವನ ದುಃಖಕ್ಕೆ ಎಲ್ಲೆಯೇ ಉಳಿಯಲಿಲ್ಲ. ಯಾರಕೂಡ ಏನನ್ನು ಉಣ್ಣಬೇಕೆಂಬ ಸುದೀರ್ಘ ನಿಯಮ ನಿಬಂಧನೆಗಳ ಹಂತಕ್ಕೆ ಹಿಂದೂಧರ್ಮವು ಇಳಿದರೆ ಅದು ತನ್ನ

ಸಾರವನ್ನೇ ಕಳೆದುಕೊಳ್ಳುವ ಭೀತಿಯಿದೆ. ಆತ್ಮವಿಕಾಸಕ್ಕೆ ಮದ್ಯಮಾದಕ ಸೇವನೆಗಳ ನಿಷೇಧ, ಹಾಗು ಮಾಂಸಾಹಾರ ನಿಷೇಧ ಇವುಗಳು ಬಹಳ ಸಹಾಯಕಾರಿಯಾಗಿವೆಯೆಂಬುದು ನಿಸ್ಸಂದೇಹ. ಆದರೆ ಅವುಗಳೇ ಗುರಿಗಳಲ್ಲ. ಮಾಂಸವನ್ನು ಯಾರೊಡನೆ ಬೇಕಾದರೂ ತಿಂದರೂ ಯಾವಾಗಲೂ ದೇವನ ಭೀತಿಯಿಂದಿರುವವನು, ಮಾಂಸಭಕ್ಷಣಮಾಡದಿದ್ದರೂ ಯಾವಾಗಲೂ ತನ್ನ ದುಷ್ಟಕೃತಿಗಳಿಂದ ದೇವನಿಂದೆಯನ್ನೇ ಮಾಡುತ್ತಿರುವವನಿಗಿಂತ ಮುಕ್ತಿಗೆ ಹೆಚ್ಚು ಸಮೀಪಗತನಾಗಿರುವನು.

(ಯಂಗ್ ಇಂಡಿಯಾ : ೬-೧೦-೨೧)

ವರ್ಣಾಶ್ರಮ ಮತ್ತು ಸಮಾಜದ ಆವಶ್ಯಕತೆಗಳು

ನಾನು ವಿವರಿಸಿದಂತೆ ವರ್ಣಾಶ್ರಮವು ಸಮಾಜದ ಆರ್ಥಿಕ, ಸಾಮಾಜಿಕ ಹಾಗು ಧಾರ್ಮಿಕ ಆವಶ್ಯಕತೆಗಳನ್ನು ತಣಿಸುತ್ತದೆ. ಈ ನಿಯಮ ಪಾಲನೆಯನ್ನು ಅಂಗೀಕರಿಸಿದ ಸಮಗ್ರ ಸಮಾಜವು ಸಾಮಾಜಿಕ ಅನರ್ಥಗಳನ್ನು ಇಲ್ಲದಂತೆಸಗುವುದರಿಂದ ಧಾರ್ಮಿಕ ಆವಶ್ಯಕತೆಗಳನ್ನು ಅದು ಪೂರೈಸುತ್ತದೆ. ಮತ್ತು ಸಂಪೂರ್ಣವಾಗಿ, ಘಾತಕವಾದ ಆರ್ಥಿಕ ಸ್ಪರ್ಧೆಯನ್ನು ತಡೆಯುತ್ತದೆ. ಸಮಾಜದ ಹಕ್ಕುಗಳನ್ನು ವಿವರಿಸುವುದಕ್ಕಿಂತಲೂ ಅದರ ಹೊಣೆಗಳನ್ನು ಇದು ನಿರ್ದೇಶಿಸುತ್ತದೆಯೆಂದು ತಿಳಿದುಕೊಂಡರೆ ಪೂರ್ಣ ಸರಿಸಮಾನವಾದ ಧನದ ಹಂಚಿಕೆಯಾಗುವದೆಂದು ಹೇಳಲು ಬಾರದಿದ್ದರೂ ಶಕ್ಯವಿದ್ದಷ್ಟು ಉಚಿತವಾದ ರೀತಿಯಲ್ಲಿ ಹಣದ ಹಂಚಿಕೆಯ ಆಶ್ವಾಸನವನ್ನು ನೀಡಬಲ್ಲದು. ಆದುದರಿಂದ ಈ ನಿಯಮವನ್ನು ಮುರಿದು ಕರ್ತವ್ಯಗಳನ್ನು ಹಕ್ಕುಗಳೆಂದು ತಪ್ಪು ತಿಳಿದುಕೊಂಡರೆ ಮತ್ತು ಸ್ವಾರ್ಥ ಪುರಸ್ಕಾರಕ್ಕಾಗಿ ಉದ್ಯೋಗಗಳನ್ನು ಆರಿಸಿಕೊಂಡರೆ ವರ್ಣದಲ್ಲಿ ಅವ್ಯವಸ್ಥೆಯಾಗಿ ಸಮಾಜವು ಅಸ್ತವ್ಯಸ್ತವಾಗುವದು. ಈ ನಿಯಮದಲ್ಲಿ ತನ್ನ ಮನಃಪ್ರವೃತ್ತಿಯ ವಿರುದ್ಧ ಆನುವಂಶಿಕವಾಗಿ ಬಂದ ಉದ್ಯೋಗವನ್ನೇ ಕೈಕೊಳ್ಳಬೇಕೆಂಬ ಒತ್ತಾಯದ ಪ್ರಶ್ನೆಯೇ ಇಲ್ಲ. ಸಾವಿರಾರು ವರ್ಷಗಳ ವರೆಗೆ ಅಬಾಧಿತವಾಗಿ ನಡೆದು ಬಂದ ವರ್ಣಾಶ್ರಮ ನಿಯಮದಲ್ಲಿ ಹೊರಗಿನ ಒತ್ತಾ

ಯದ ಪ್ರಶ್ನೆಯೇ ಇರಲಿಲ್ಲ. ಆಂದಬಳಿಕ ಅಂತಹ ಬಾಹ್ಯ ಬಲುಮೆಯ ಪ್ರಶ್ನೆಯು ಉದ್ಭವಿಸಲಾರದು. ಜನರು ಈ ನಿಯಮದಲ್ಲಿರುವ ನ್ಯಾಯ ವನ್ನೂ ಧರ್ಮವನ್ನೂ ಆಚಾರತಃ ಒಪ್ಪಿಕೊಂಡು ಸ್ವಪ್ರೇರಣೆಯಿಂದ ಅದನ್ನು ನಡೆಸುತ್ತಿದ್ದರು. ಇಂದು ರಾಷ್ಟ್ರಗಳು ಈ ನಿಯಮವನ್ನು ಅರಿಯದೆ ಅಜ್ಞಾನದಲ್ಲಿರುವದರಿಂದಲೂ ಅದನ್ನು ಉಲ್ಲಂಘಿಸುತ್ತಿರುವದರಿಂದಲೂ ವಿವಿಧ ಕಷ್ಟಗಳನ್ನು ಅನುಭವಿಸುತ್ತಿವೆ. ನಾಗರಿಕವೆಂದು ಕರೆದುಕೊಳ್ಳುವ ರಾಷ್ಟ್ರಗಳು ಸಮಾಧಾನಪೂರ್ಣವೂ ಸಮತೋಲಯುಕ್ತವೂ ಆದ ಪರಿಸ್ಥಿತಿ ಯನ್ನು ಇನ್ನೂ ತಲುಪಿಲ್ಲ.

ಅಂತರಭೋಜನ ಹಾಗೂ ಅಂತರವಿವಾಹ ನಿರ್ಬಂಧಗಳಿಗೂ ವರ್ಣಾ ಶ್ರಮದ ಈ ಕಲ್ಪನೆಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ತಿಳಿದು ಕೊಳ್ಳುವದು ಸುಲಭವಾಗಿದೆ. ವೇದಗಳಲ್ಲಿಯೂ ಮಹಾಭಾರತದಲ್ಲಿಯೂ ಅಂತರವಿವಾಹ ಅಂತರಭೋಜನಗಳ ದೃಷ್ಟಾಂತಗಳು ತುಂಬಿವೆ. ಆದರೆ ಇವು ಅವರವರ ಇಚ್ಛೆಯ ವಿಷಯಗಳಲ್ಲದೆ ಧಾರ್ಮಿಕ ನಿಯಮಗಳ ವಿಷಯ ಗಳಲ್ಲ. ಇನ್ನೊಬ್ಬರೊಡನೆ ಊಟವನ್ನು ಮಾಡಬೇಕೆಂದಾಗಲಿ ಮದುವೆ ಯನ್ನು ಮಾಡಿಕೊಳ್ಳಬೇಕೆಂದಾಗಲಿ ಯಾರನ್ನೂ ಒತ್ತಾಯಪಡಿಸಲಾಗದು. ಸಾಮಾಜಿಕ ರೂಢಿಗಳು ಬೆಳೆಬೆಳೆದು ಈ ವಿಷಯಗಳನ್ನು ಹೆಚ್ಚುಕಡಿಮೆ ನಿಯಮನಗೊಳಿಸುವವೆಂಬ ಮಾತು ನಿಸ್ಸಂದೇಹ. ಆದರೆ ಧಾರ್ಮಿಕ ವಿಧಿ ಗಳೆಂದು ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುವದು ತಪ್ಪಾಗುವದು. ಅವು ಸಾಮಾಜಿಕ ಸುಧಾರಣೆಯ ವಿಷಯಗಳೆಂಬಮಟ್ಟಿಗೆ ವಿಚಾರಮಾಡುವ ದಾದರೆ ವರ್ಣಾಶ್ರಮಧರ್ಮಕ್ಕೂ ಅಸ್ಪೃಶ್ಯತಾನಿವಾರಣೆಗೂ ಸಂಬಂಧವಿಲ್ಲದ ಬೇರೆ ವಿಷಯಗಳು ಅವು ಎಂದು ಅವುಗಳನ್ನು ಕಾಣಬೇಕೆಂದು ನನ್ನ ಮತ.

ವರ್ಣಧರ್ಮದಿಂದ ಪ್ರತ್ಯೇಕವಾದ ಬಹುಜಾತಿಗಳ ವಿಷಯವನ್ನು ಕುರಿತು ಹೇಳುವದಾದರೆ ಅವು ಹೊರಗಿನಿಂದ ಹೇರಲಾದ ಕಟ್ಟುನಿಟ್ಟಾದ ಅಂತರಭೋಜನ ಅಂತರವಿವಾಹ ನಿರ್ಬಂಧಗಳುಳ್ಳ ಉದ್ಯೋಗ ಸಂಘಗಳು ಅಥವ ಸಮಾಜಗಳು ಎಂದೆನ್ನಬಹುದು. ಪ್ರತಿಯೊಂದು ಶಾಖೆಯೂ ಬೊಡ್ಡೆಯಾಗಿ ಮತ್ತೆ ಹೊಸ ಶಾಖೆಗಳನ್ನು ಹುಟ್ಟಿಸುವಂತಹ ಪ್ರಸಿದ್ಧ ಆಲದ ಮರದ ಅಸಂಖ್ಯ ಎಲೆಗಳಂತೆ ಜಾತಿಗಳು ಅಸಂಖ್ಯವಾಗಿವೆ. ಅವು ನಿರಂತರವಾಗಿ ಬದಲಾಗುತ್ತಲಿವೆ. ಅನೇಕ ಜಾತಿಗಳು ಕಣ್ಮರೆಯಾಗಿವೆ;

ಹೊಸವು ತಲೆಯೆತ್ತುತ್ತಿವೆ. ನಿಜವಾಗಿಯೂ ವರ್ಣಾಶ್ರಮಕ್ಕೂ ಅವುಗಳಿಗೂ ಸಂಬಂಧವಿಲ್ಲ; ಧರ್ಮಕ್ಕೂ ಅವುಗಳಿಗೂ ಸಂಬಂಧವಿಲ್ಲ. ಈ ಸಂಘಗಳ ಕಾರ್ಯಪದ್ಧತಿಯ ಅಜ್ಞಾನದ ಮೂಲಕ, ಹಿಂದೂತ್ವದ ಆಂತರಿಕ ಭಾಗಗಳು ಇವು ಎಂಬ ಅಭಿಪ್ರಾಯವು ಸನಾತನಿಗಳಲ್ಲಾಗಿದೆಯೆಂದು ನನ್ನ ಮತ. ಈ ಸಂಘಗಳಲ್ಲಿ ಅನೇಕ ಅನಿಷ್ಟ ರೂಢಿಗಳು ಸೇರಿವೆಯೆಂಬ ಸಂಗತಿಯು ನಿರ್ವಿವಾದ. ಆದರೆ ಹಿಂದೂಧರ್ಮವು ಸಜೀವವಾದ ಸಚೇತನವಾದ ಧರ್ಮವಾಗಿ ಉಳಿಯದಿದ್ದುದೇ ಇದರ ಕಾರಣ. ವೇಗವಾಗಿ ವ್ಯಯವಾಗುತ್ತಿರುವ ಬಂಡವಾಲವನ್ನೇ ತಿಂದು ಇಂದು ಉಪಜೀವಿಸಲಾರಂಭಿಸಿದ್ದೇವೆ.

(ಹರಿಜನ: ೪-೩-೩೩)

ವರ್ಣಧರ್ಮ

ವರ್ಣಧರ್ಮದ ಅರ್ಥವನ್ನು ನಾನು ಮಾಡಿಕೊಂಡಂತೆ, ಅತ್ಯುನ್ನತ ಮಾನಸಿಕ ವಿಕಾಸಕ್ಕೆ ಅದರಲ್ಲಿ ಯಾವದೇ ಬಗೆಯ ಆತಂಕವಿಲ್ಲ. ತನ್ನ ಭೌತಿಕ ಭವಿತವ್ಯವನ್ನು ಸುಧಾರಿಸಿಕೊಳ್ಳಲು ಆನುವಂಶಿಕ ಉದ್ಯೋಗವನ್ನು ಬಿಟ್ಟುಕೊಟ್ಟು ಜೀವನದ ಸೌಂದರ್ಯಾನಂದಗಳನ್ನೇ ಇಂದು ಹ್ರಾಸಗೊಳಿಸುತ್ತಿರುವ ಅನರ್ಥಕರವೂ ಅನಾರೋಗ್ಯಕರವೂ ಆದ ಸ್ಪರ್ಧೆಯ ಪದ್ಧತಿಗೆ ಆಸ್ಪದವನ್ನು ಮಾಡಿಕೊಡುವದರ ವಿರುದ್ಧ ಮಾತ್ರ ಅದರ ಆತಂಕವಿದೆ.

(ಹರಿಜನ: ೨೯-೭-೩೩)

ವರ್ಣ ಮತ್ತು ಆಶ್ರಮ ನಿಯಮ

ವರ್ಣಾಶ್ರಮಧರ್ಮದ ನಿಯಮವಿಲ್ಲದ ಹಿಂದೂಧರ್ಮದಲ್ಲಿ ಯಾವ ಹುರುಳೂ ಇಲ್ಲೆಂದು ಪ್ರತಿಯೊಬ್ಬನೂ ಒಪ್ಪುವನು. ವರ್ಣಾಶ್ರಮಧರ್ಮದ ವಿಷಯಕ್ಕೆ ಬಹುಭಾಗವನ್ನು ಮೀಸಲಿಡದ ಸ್ಮೃತಿಗ್ರಂಥವನ್ನು ಕಾಣುವದೇ

ಅಶಕ್ಯ. ವರ್ಣಾಶ್ರಮದ ಈ ನಿಯಮವು ಅತ್ಯಂತ ಪ್ರಾಚೀನವಾದ ವೇದಗಳಲ್ಲಿದೆ. ಆದುದರಿಂದ ಹಿಂದೂ ಎಂದು ಕರೆದುಕೊಳ್ಳುವವರಾರೂ ಅದನ್ನು ಕಡೆಗಣಿಸಲಾರರು. ಅದನ್ನು ಸಂಪೂರ್ಣವಾಗಿ ಅಭ್ಯಸಿಸುವದು ಆತನ ಕರ್ತವ್ಯವಾಗಿದೆ. ಅದು ಹುರುಳಿಲ್ಲದುದೆಂದು ಅದನ್ನು ನಿರಾಕರಿಸಬಹುದು. ಅದು ಸಾರ್ವತ್ರಿಕ ನಿಯಮದ ಪ್ರತೀಕವೆಂದು ಕಂಡುಬಂದರೆ ಅದನ್ನು ಪೂರ್ವದ ಪರಿಶುದ್ಧ ಸ್ವರೂಪಕ್ಕೆ ತರುವದಕ್ಕೂ ಬೆಳೆಸುವದಕ್ಕೂ ದುಡಿಯಬೇಕು.

ಆಶ್ರಮ ನಿಯಮವು ಸದ್ಯಕ್ಕೆ ನುಡಿಯಲ್ಲಿಯೂ ಇಲ್ಲ ; ನಡೆಯಲ್ಲಿಯೂ ಇಲ್ಲ. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬ ನಾಲ್ಕು ಆಶ್ರಮಗಳನ್ನು ಹಿಂದೂಧರ್ಮದಲ್ಲಿ ವಿಧಿಸಿದೆ. ಪ್ರತಿಯೊಬ್ಬ ಹಿಂದೂ ತನ್ನ ಜೀವನದ ಧ್ಯೇಯವನ್ನು ಸಿದ್ಧಿಸಿಕೊಳ್ಳಲು ಇವುಗಳನ್ನೆಲ್ಲ ಪಾಲಿಸಬೇಕು. ಆದರೆ ಮೊದಲನೆಯ ಹಾಗು ಕೊನೆಯ ಆಶ್ರಮವು ಬಹುಶಃ ಈಗ ಆಚರಣೆಯಲ್ಲಿ ಉಳಿದಿಲ್ಲ. ಹೆಸರಿಗೆ ಮಾತ್ರ ಚತುರ್ಥ ಆಶ್ರಮವನ್ನೂ ಅತ್ಯಲ್ಪ ಮಟ್ಟಿಗೆ ಪಾಲಿಸಲಾಗುತ್ತಿದೆ. ಎರಡನೆಯ ಆಶ್ರಮವನ್ನು ಎಲ್ಲರೂ ಇಂದು ಪಾಲಿಸುತ್ತಿರುವರೆಂದು ಹೇಳಲಾಗುತ್ತಿದೆ. ಆದರೆ ಆದಾದರೂ ಬರೀ ಹೆಸರಿನಲ್ಲಿ; ನಿಜವಾದ ಸ್ವರೂಪದಲ್ಲಲ್ಲ. ನಾವೂ ಇತರ ಪ್ರಾಣಿಗಳಂತೆ ತಿಂದು ಉಂಡು ನಮ್ಮ ವಂಶವನ್ನು ಬೆಳೆಸುತ್ತೇವೆನ್ನುವದರಿಂದ ಒಂದು ರೀತಿಯ ಗೃಹಸ್ಥಾಶ್ರಮಿಗಳಾಗಿರುವುದೇನೋ ನಿಜ. ಆದರೆ ಹಾಗೆ ಮಾಡುವಲ್ಲಿ ನಾವು ಕೇವಲ ದೇಹನಿಯಮವನ್ನು ಪಾಲಿಸುತ್ತಿರುವೆವಲ್ಲದೆ ಆದರ ಜೀವಾಳವನ್ನಲ್ಲ. ಈ ಆಶ್ರಮದ ಮುಖ್ಯ ಮರ್ಮವನ್ನು ಪಾಲಿಸುತ್ತಿರುವವರು ಮಾತ್ರ ಗ್ರಹಸ್ಥಾಶ್ರಮಿಗಳು. ಬರೀ ಪಶುಜೀವನವನ್ನು ನಡೆಸುತ್ತಿರುವವರು ಈ ನಿಯಮಪಾಲಕರಲ್ಲ. ಇಂದಿನ ಗೃಹಸ್ಥರ ಜೀವನವು ವಿಲಾಸಜೀವನವಾಗಿದೆ. ಈ ನಾಲ್ಕು ಆಶ್ರಮಗಳು ಬೆಳವಣಿಗೆಯ ಏಣಿಯಂತಿರುವದರಿಂದ ಬ್ರಹ್ಮಚರ್ಯ ಗೃಹಸ್ಥಾಶ್ರಮಗಳ ಯೋಗ್ಯ ಪರಿಪಾಲನೆಯಿಲ್ಲದೆ ವಾನಪ್ರಸ್ಥ ಸನ್ಯಾಸಾಶ್ರಮಗಳಿಗೆ ನೆಗೆದುಹೋಗಲು ಆಗಲಾರದು. ಆದುದರಿಂದ ಆಶ್ರಮ ನಿಯಮವು ಇಂದು ಅಳಿದುಹೋಗಿದೆ. ವರ್ಣನಿಯಮಕ್ಕೆ ಅದು ನಿಕಟವಾಗಿ ಸಂಬಂಧಿಸಿರುವದರಿಂದ ವರ್ಣಧರ್ಮವು ಪುನರುಜ್ಜೀವಿತವಾದರೆ ಆಶ್ರಮನಿಯಮವೂ ಪುನಃ ಆಚರಣೆಯಲ್ಲಿ ಬರಬಹುದು.

ಈಗ ವರ್ಣನಿಯಮದ ವಿಚಾರವನ್ನು ಮಾಡುವಾ. ವರ್ಣಕ್ಕೂ ಜನ್ಮಕ್ಕೂ ಅಚ್ಛೇದ್ಯವಾಗದಿದ್ದರೂ ಅತಿ ನಿಕಟವಾದ ಸಂಬಂಧವಿದೆ. ಕರ್ತವ್ಯಬುದ್ಧಿಯಿಂದ ನಮ್ಮ ಪೂರ್ವಜರ ಉದ್ಯೋಗ ವ್ಯವಸಾಯಗಳನ್ನನು ಸರಿಸುವದೇ ವರ್ಣಧರ್ಮಪರಿಪಾಲನೆ. ಇಂತಹ ವರ್ಣನಿಯಮಪಾಲಕರ ಸಂಖ್ಯೆಯು ಕೈಬೆರಳಿನಿಂದೆಣಿಸುವಷ್ಟಿದೆ. ಆನುವಂಶಿಕ ಉದ್ಯೋಗಾನು ಷ್ಠಾನವನ್ನು ತನ್ನ ಕರ್ತವ್ಯವೆಂದು ಅವರು ಮಾಡುತ್ತಿರುವರು. ಸ್ವಾಭಾವಿಕವಾಗಿ ಅದರಿಂದ ಅವರಿಗೆ ಜೀವನೋಪಾಯವೂ ದೊರೆಯುತ್ತಿದೆ ಯೆಂಬುದು ನಿಜ. ಈ ಪ್ರಕಾರ ಬ್ರಹ್ಮಜ್ಞಾನವನ್ನು ಸಂಪಾದಿಸಿ ಅದನ್ನು ಬೇರೆಯವರಿಗೆ ಬೋಧಿಸುವದು ಬ್ರಾಹ್ಮಣನ ಕರ್ತವ್ಯ. ಅದನ್ನು ಆತನು ಮಾಡುತ್ತಾನೆ. ಏಕೆಂದರೆ, ಅದೇ ಅವನ ಜೀವನ ನಿಯಮವಾದುದರಿಂದ ಬೇರೆ ಏನನ್ನೂ ಅವನು ಮಾಡಲಾರನು. ಅದರಿಂದ ಅವನ ಉದರ ನಿರ್ವಾಹವೂ ಸಾಗುತ್ತದೆ. ಆದರೆ ಅದನ್ನು ಅವನು ದೇವನ ಪ್ರಸಾದವೆಂದು ಸ್ವೀಕರಿಸುತ್ತಾನೆ. ಕ್ಷತ್ರಿಯನೂ ಜನರಕ್ಷಣೆಯ ಕರ್ತವ್ಯವನ್ನು ಈ ಬುದ್ಧಿಯಿಂದಲೇ ಮಾಡುವನು ಮತ್ತು ಜನರು ಕೊಡುವ ಕರತೆರಿಗೆಗಳಿಂದ ತನ್ನ ಉಪಜೀವನವನ್ನು ನಡೆಸುವನು. ವೈಶ್ಯನೂ ಸಮಾಜ ಕಲ್ಯಾಣಕ್ಕಾಗಿ ಧನೋತ್ಪಾದಕ ವೃತ್ತಿಗಳನ್ನು ಕೈಕೊಳ್ಳುವನು ಮತ್ತು ತನಗೆ ಸಾಲುವಷ್ಟನ್ನು ಇಟ್ಟುಕೊಂಡು ಉಳಿದುದನ್ನು ಒಂದಿಲ್ಲೊಂದು ಬಗೆಯಲ್ಲಿ ಮರಳಿ ಸಮಾಜಕ್ಕೆ ನೀಡುವನು. ಆ ಸೇವಾಬುದ್ಧಿಯಿಂದಲೇ ಶೂದ್ರನು ಶಾರೀರಕ ಶ್ರಮವನ್ನು ಮಾಡುವನು.

ಜನ್ಮತಃ ವರ್ಣವು ಸಿದ್ಧವಾಗಿದೆ. ಆದರೆ ಅದರ ನಿಯಮಗಳನ್ನು ಪಾಲಿಸುವದರಿಂದಲೇ ಅದನ್ನು ಉಳಿಸಿಕೊಳ್ಳಬಹುದು. ಬ್ರಾಹ್ಮಣ ತಂದೆ ತಾಯಿಗಳ ಉದರದಲ್ಲಿ ಹುಟ್ಟಿದವನು ಬ್ರಾಹ್ಮಣನೆಂದು ಕರೆಯಲ್ಪಡುವನು. ಆದರೆ ಅವನು ಪ್ರಾಯದವನಾದಾಗ ಬ್ರಾಹ್ಮಣನ ಗುಣಗಳು ಅವನಲ್ಲಿ ಕಾಣದಿದ್ದರೆ ಅವನನ್ನು ಬ್ರಾಹ್ಮಣನೆಂದು ಕರೆಯಲಾಗದು. ಅವನು ಬ್ರಾಹ್ಮಣತ್ವದಿಂದ ಪತಿತನಾಗುವನು. ತದ್ವಿರುದ್ಧವಾಗಿ ಬ್ರಾಹ್ಮಣನಾಗಿ ಹುಟ್ಟದಿದ್ದರೂ ಬ್ರಾಹ್ಮಣನ ಗುಣಗಳು ಒಬ್ಬನಲ್ಲಿ ಕಂಡುಬಂದರೆ ಅವನಿಗೆ ಬ್ರಾಹ್ಮಣನೆಂದು ಕರೆಸಿಕೊಳ್ಳುವ ಇಚ್ಛೆಯಿರದಿದ್ದರೂ ಆತನನ್ನು ಬ್ರಾಹ್ಮಣನೆಂದೇ ಭಾವಿಸಲಾಗುವದು.

ಈ ಪ್ರಕಾರ ವರ್ಣವು ಮಾನವ ನಿರ್ಮಿತ ಸಂಸ್ಥೆಯಲ್ಲ. ಆದರೆ ಸಾರ್ವತ್ರಿಕವಾಗಿ ಮಾನವ ಕುಟುಂಬವನ್ನೇ ನಿಯಂತ್ರಿಸುವ ಜೀವನದ ನಿಯಮವೇ ಅದು. ಈ ನಿಯಮ ಪಾಲನೆಯಿಂದ ಬಾಳು ಆನಂದಮಯ ವಾಗುವದಲ್ಲದೆ ಶಾಂತಿತುಷ್ಟಿ ಪುಷ್ಟಿಗಳು ನೆಲೆಗೊಳ್ಳುವವು. ಎಲ್ಲ ಕಲಹ ಘರ್ಷಣೆಗಳು ಮಾಯವಾಗುವವು. ಜನಸಂಖ್ಯೆಯ ಸಮಸ್ಯೆಯೂ ಬೇನೆ ಬೇಸರಿಕೆಗಳೂ ಅಳಿದುಹೋಗುವವು.

ಉಗ್ರವಾದ ತಪಶ್ಚರ್ಯೆಯಿಂದ ನಮ್ಮ ಪೂರ್ವಜರು ವರ್ಣನಿಯಮ ವನ್ನು ಕಂಡುಹಿಡಿದರು. ತಮ್ಮ ಯೋಗ್ಯತೆಯ ಪರಮಾವಧಿ ಆವರು ಅದನ್ನು ಆಚರಿಸಲು ಹಾಗೂ ಅದರಂತೆ ಜೀವನವನ್ನು ನಡೆಸಲು ಬಯಸಿದರು. ನಾವು ಅದನ್ನು ಇಂದು ತಿರುಗುಮುರುಗು ಮಾಡಿದ್ದೇವೆ. ಅಂತೆಯೇ ಜಗತ್ತಿನ ಅಪಹಾಸಕ್ಕೆ ಗುರಿಯಾಗಿದ್ದೇವೆ. ಈ ಸಂಸ್ಥೆಯನ್ನು ನಿರ್ಮೂಲ ಗೊಳಿಸಲು ಬದ್ಧಕಂಕಣವಾದ ಗುಂಪೊಂದು ಹಿಂದೂಸಮಾಜದಲ್ಲಿ ಇಂದು ಇರುವದೇನೂ ಆಶ್ಚರ್ಯವಲ್ಲ. ಏಕೆಂದರೆ, ಇದರಿಂದ ಹಿಂದೂಸಮಾಜವು ಹಾಳಾಗುವದೆಂದು ಆ ಗುಂಪು ತಿಳಿಯುತ್ತದೆ. ನಿಜವಾಗಿ ಈ ವಿಕೃತ ವಿಪರ್ಯಾಸದ ಬಗೆಗೆ ಯಾರಿಗೂ ಅನುಕಂಪವಿರಬೇಕಾಗಿಲ್ಲ. ಏಕೆಂದರೆ, ಅದರಿಂದ ಹಿಂದೂಧರ್ಮದ ವಿನಾಶವಾಗುವದು.

II

ತಿಂಡಿತೀರ್ಥ ಅಥವಾ ವಿವಾಹ ಸಂಬಂಧ ಇವುಗಳ ವಿಷಯದಲ್ಲಿ ಯಾವದೇ ಬಗೆಯ ನಿರ್ಬಂಧವಿರಕೂಡದೆಂದು ಕ್ಷಣಮಾತ್ರವೂ ನಾನು ಸೂಚಿಸುವದಿಲ್ಲ. ಕೊಟ್ಟದ್ದನ್ನೆಲ್ಲ ತಿನ್ನಲೇಬೇಕು, ಎಲ್ಲಿದ್ದರೂ ತಿನ್ನಬೇಕು ಎಂದು ನಾನೇ ಸ್ವತಃ ಒಪ್ಪುವದಿಲ್ಲ. ಮನಸ್ಸಿಗೆ ಬಂದಂತೆ ಮದುವೆಯಾಗು ವದು ಭೋಗವಿಲಾಸವೆಂದು ನಾನು ತಿಳಿಯುತ್ತೇನೆ. ಉಗ್ರಸಂಯಮವೇ ಜೀವನನಿಯಮ. ಆದುದರಿಂದ ಊಟ, ವಿವಾಹವೇ ಮೊದಲಾದ ಸಂಬಂಧ ಗಳಲ್ಲಿ ಈ ನಿಯಮಕ್ಕೆ ಪ್ರಾಧಾನ್ಯವಿರಬೇಕಾದುದು ಯೋಗ್ಯ. ಆಹಾರ ನಿಯಮಗಳುಂಟೆಂದು ನಾನು ತಿಳಿಯುತ್ತೇನೆ. ಮನುಷ್ಯನು ಸರ್ವಭಕ್ಷಕ ಪ್ರಾಣಿಯಲ್ಲ. ಹಾಗೆಯೆ ಕಂಡಕಂಡಲ್ಲಿ ಹೆಂಗಸನ್ನು ಕೂಡಲಾರನು.

ಆದರೆ ವರ್ಣಧರ್ಮಕ್ಕೂ ವಿವಾಹ ಹಾಗು ಸಾಮಾಜಿಕ ನಿರ್ಬಂಧಗಳಿಗೂ ಸಂಬಂಧವಿಲ್ಲ. ಬೇರೆಬೇರೆ ವರ್ಣಗಳಲ್ಲಿ ದೋಷರಹಿತವಾದ ವಿವಾಹ ಸಂಬಂಧಗಳಾಗಬಲ್ಲವೆಂದು ನನಗನಿಸುತ್ತದೆ. ಹಾಗೆಯೆ ಬೇರೆ ಬೇರೆ ವರ್ಣಗಳ ಜನರು ಒಂದೆಡೆಯಲ್ಲಿ ಕೂಡಿ ಉಣ್ಣಲೂಬಹುದು. ಪ್ರಾಚೀನ ಕಾಲದಲ್ಲಿ ಈ ವಿಷಯಗಳಲ್ಲಿ ಅಷ್ಟು ಉಗ್ರವಾದ ನಿರ್ಬಂಧಗಳಿದ್ದಿಲ್ಲೆಂಬುದಕ್ಕೆ ಬೇಕಾದಷ್ಟು ಆಧಾರಪ್ರಮಾಣಗಳಿವೆ. ವರ್ಣಕ್ಕೆ ಕೇವಲ ತಿಂಡಿತೀರ್ಥಗಳ ನಿರ್ಬಂಧಸ್ವರೂಪವನ್ನು ಕೊಟ್ಟು ಹಿಂದೂಧರ್ಮಕ್ಕೆ ಬಹಳ ಅನ್ಯಾಯವನ್ನು ನಾವು ಮಾಡಿರುವೆವೆಂಬಲ್ಲಿ ನನಗಾವ ಸಂದೇಹವೂ ಇಲ್ಲ.

ವರ್ಣನಿಯಮವು ಓರ್ವ ಹಿಂದೂ ಋಷಿಯ ವಿಶಿಷ್ಟ ಸಂಶೋಧನೆಯಿದ್ದರೂ ಅದಕ್ಕೆ ವಿಶ್ವವ್ಯಾಪಿಯಾದ ಸ್ವರೂಪವಿದೆ. ಪ್ರತಿಯೊಂದು ಧರ್ಮಕ್ಕೂ ಕೆಲ ವಿಶಿಷ್ಟಗುಣಧರ್ಮಗಳಿವೆ. ಆದರೆ ಅದು ಒಂದು ತತ್ವವನ್ನು ಅಥವಾ ನಿಯಮವನ್ನು ವ್ಯಕ್ತಪಡಿಸುತ್ತಿದ್ದರೆ ಅದು ವಿಶ್ವವ್ಯಾಪಿಯಾಗಬೇಕು. ವರ್ಣನಿಯಮವನ್ನು ನಾನು ಹಾಗೆ ಕಾಣುತ್ತೇನೆ. ಜಗತ್ತು ಅದನ್ನು ಇಂದು ಉಪೇಕ್ಷಿಸಬಹುದು. ಆದರೆ ಮುಂದೆ ಅದನ್ನು ಅದು ಒಪ್ಪಲೇಬೇಕಾಗುವದು.

ನಾಲ್ಕು ವರ್ಣಗಳನ್ನು ವೇದಗಳಲ್ಲಿ ದೇಹದ ನಾಲ್ಕು ಅಂಗಗಳಿಗೆ ಹೋಲಿಸಲಾಗಿದೆ. ಇದಕ್ಕಿಂತ ಸುಂದರವಾದ ಉಪಮೆಯಿಲ್ಲ. ಒಂದೇ ದೇಹದ ಅಂಗಗಳು ಅವು ಆಗಿದ್ದರೆ ಒಂದು ಇನ್ನೊಂದಕ್ಕಿಂತ ಉಚ್ಚ ಅಥವಾ ನೀಚ ಹೇಗಾಗಬಹುದು? ದೇಹದ ಅವಯವಗಳಿಗೆ ಮಾತಾಡಲು ಬರುತ್ತಿದ್ದರೆ ಮತ್ತು ಒಂದೊಂದು ಅಂಗವೂ ಉಳಿದವುಗಳಿಗಿಂತ ತಾನೇ ಶ್ರೇಷ್ಠವೆಂದು ಹೇಳಲಾರಂಭಿಸಿದರೆ ದೇಹವು ಚೂರುಚೂರಾಗಿ ಹೋಗುವದು. ಹಾಗೆಯೆ ಉಚ್ಚನೀಚವೆಂಬ ತಾರತಮ್ಯದ ವ್ಯಾಧಿಯನ್ನು ಶಾಶ್ವತಮಾಡಿಕೊಂಡರೆ ನಮ್ಮ ಮಾನವ ಕುಟುಂಬವೂ ನಿರ್ನಾಮವಾಗಿ ಹೋದೀತು. ನಮ್ಮ ಇಂದಿನ ವಿವಿಧ ಅನರ್ಥಗಳಿಗೆ—ವಿಶೇಷತಃ ವರ್ಗಕಲಹಗಳಿಗೂ ಯಾದವೀ ಯುದ್ಧಗಳಿಗೂ ಈ ಭೇದಭಾವದ ವ್ಯಾಧಿಯೇ ಕಾರಣ. ವರ್ಣನಿಯಮ ಪರಿಪಾಲನೆಯಿಲ್ಲದೆ ಈ ಯುದ್ಧಗಳೂ ಕಲಹಗಳೂ ಕೊನೆಗಾಣಲಾರವೆಂಬುದನ್ನು ಎಂತಹ ಮಂದಮತಿಯೂ ತಿಳಿಯಬಲ್ಲನು. ಏಕೆಂದರೆ, ತಾನು ಹುಟ್ಟಿದ ವರ್ಣದಲ್ಲಿದ್ದುಕೊಂಡು ಕರ್ತವ್ಯ ಹಾಗು ಸೇವಾಬುದ್ಧಿಯಿಂದ

ಪ್ರತಿಯೊಬ್ಬನೂ ತನ್ನ ಬಾಳಿನ ನಿಯಮವನ್ನು ಪೂರ್ತಿಗೊಳಿಸಬೇಕೆಂದು ಅದು ವಿಧಿಸುತ್ತದೆ. (ಹರಿಜನ : ೨೮-೯-೩೪)

ವರ್ಣ

ನನಗೆ ಅಧಿಕಾರವಿದ್ದರೆ ನಾವೆಲ್ಲರೂ ಒಂದೇವರ್ಣದ ಹಿಂದುಗಳೆಂದು ನಾನು ಸಾರುತ್ತಿದ್ದೆನು. ಕಾಲಕಾಲಕ್ಕೆ ನಾನು ಸ್ಪಷ್ಟಪಡಿಸಿದಂತೆ, ನಿಜವಾದ ವರ್ಣವು ಇಂದು ಇಲ್ಲ. ನಾವು ನಮ್ಮ ಪೂರ್ವಸ್ಥಿತಿಗೆ ಬಂದಬಳಿಕ, ನಾವು ಪರಿಶುದ್ಧರಾದ ಬಳಿಕ ನಮ್ಮಲ್ಲಿಯ ಶ್ರೇಷ್ಠ ಅಂಶಗಳನ್ನು ವ್ಯಕ್ತಪಡಿಸಲು ಅನುಕೂಲವಾದಂತಹ ರೀತಿಯಲ್ಲಿ ನಾಲ್ಕು ವರ್ಣಗಳನ್ನು ನಾವು ಏರ್ಪಡಿಸಿಕೊಳ್ಳಬಹುದು. ಆದರೆ ಆಗ ವರ್ಣವು ಯಾರಿಗೂ ಉಚ್ಚತೆಯನ್ನಾಗಲಿ ನೀಚತೆಯನ್ನಾಗಲಿ ಕೊಡಲಾರದು. ಉದಾತ್ತವಾದ ಕರ್ತವ್ಯ ಹೊಣೆಗಳ ಹೊರೆಯನ್ನು ಅದು ಹೊರಿಸಬಹುದು. ಸೇವಾಬುದ್ಧಿಯಿಂದ ಜ್ಞಾನದಾನವನ್ನು ಮಾಡುವವರು ಆಗ ಬ್ರಾಹ್ಮಣರಾಗುವರು. ಅವರು ಶ್ರೇಷ್ಠರೆಂದು ಹೇಳಿಕೊಳ್ಳುವದಿಲ್ಲ. ಆದರೆ ಸಮಾಜದ ನಿಜವಾದ ಸೇವಕರಾಗುವರು. ಸ್ಥಾನಮಾನದ ಅಧಿಕಾರಗಳ ವಿಷಮತೆಯು ಕೊನೆಗಂಡಬಳಿಕ, ನಮ್ಮಲ್ಲಿ ಪ್ರತಿಯೊಬ್ಬನೂ ಸರಿಸಮನಾಗುವನು. ನಿಜವಾದ ವರ್ಣಧರ್ಮವನ್ನು ನಾವು ಯಾವಾಗ ಪುನರುಜ್ಜೀವಿಸಬಲ್ಲೆವೆಂಬುದನ್ನು ನಾನರಿಯೆ. ಅದರ ನಿಜವಾದ ಪುನರುಜ್ಜೀವನವೇ ನಿಜವಾದ ಪ್ರಜಾಪ್ರಭುತ್ವ.

ಓರ್ವ ಅಮೇರಿಕನ್ ಧರ್ಮಗುರುವಿನ ಪ್ರಶ್ನೆಗಳು

ಪ್ರಶ್ನೆ : ನಿಮ್ಮ ಹಿಂದೂಧರ್ಮದಲ್ಲಿ ಮೂಲತಃ ಜಾತಿಪದ್ಧತಿಯನ್ನು ನೀವು ಸೇರಿಸುವಿರೋ ?

ಉತ್ತರ : ನಾನು ಸೇರಿಸುವದಿಲ್ಲ. ಹಿಂದೂಧರ್ಮವು ಜಾತಿಯನ್ನು

ನಂಬುವದಿಲ್ಲ. ನಾನು ಅದನ್ನು ಒಡನೆಯೆ ತೊಡೆದುಹಾಕುವೆನು. ಜೀವನದ ನಿಯಮವಾದ ವರ್ಣಧರ್ಮದಲ್ಲಿ ನನ್ನ ಶ್ರದ್ಧೆಯಿದೆ. ಕೆಲವರು ಕಲಿಸಲಿಕ್ಕೆ, ಕೆಲವರು ಜನರನ್ನು ರಕ್ಷಿಸಲು, ಕೆಲವರು ವ್ಯಾಪಾರ ವ್ಯವಸಾಯ ಮಾಡಲಿಕ್ಕೆ, ಬೇರೆ ಕೆಲವರು ಮೈಮುರಿದು ದುಡಿಯಲು ಹುಟ್ಟಿರುವರೆಂದು ನನ್ನ ನಂಬಿಗೆಯಿದೆ. ಹೀಗೆ ಈ ವೃತ್ತಿಗಳು ಆನುವಂಶಿಕವಾಗಿವೆ. ಉತ್ಸಾಹಶಕ್ತಿಯ ರಕ್ಷಣೆಯ ನಿಯಮವೇ ವರ್ಣಧರ್ಮದ ನಿಯಮ. ನಾವು ಭಂಗಿಯಾಗಿದ್ದರೆ (ಝಾಡಮಾಲಿ) ನನ್ನ ಮಗನೇಕೆ ಭಂಗಿಯಾಗ ಬಾರದು ?

ಪ್ರಶ್ನೆ : ನಿಜವಾಗಿ ನೀವು ಇಷ್ಟು ದೂರ ಹೋಗುವಿರಾ ?

ಉತ್ತರ : ಅಹುದು. ನಾನು ಹೋಗುತ್ತೇನೆ. ಏಕೆಂದರೆ ಭಂಗಿಯ ಉದ್ಯೋಗವು ಧರ್ಮಗುರುವಿನ ವೃತ್ತಿಗಿಂತ ಯಾವ ರೀತಿ ಯಲ್ಲಿಯೂ ಕಡಿಮೆಯೆಂದು ನಾನು ತಿಳಿಯುವದಿಲ್ಲ.

ಪ್ರಶ್ನೆ : ಅದನ್ನು ನಾನು ಒಪ್ಪುತ್ತೇನೆ. ಆದರೆ ಲಿಂಕನ್ನನು ಅಮೇರಿಕದ ಅಧ್ಯಕ್ಷನಾಗುವದಕ್ಕಿಂತ ಕಟ್ಟಿಗೆಯನ್ನು ಕಡಿಯುವವನೇ ಆಗಿದ್ದರೆ ?

ಉತ್ತರ : ಆದರೆ ಕಟ್ಟಿಗೆಯನ್ನು ಕಡಿಯುವವನು ಅಮೇರಿಕೆಯ ಅಧ್ಯಕ್ಷನೇಕೆ ಆಗಬಾರದು ? ಗ್ಲ್ಯಾಡ್‌ಸ್ಟನ್ನನು ಕಟ್ಟಿಗೆಯನ್ನು ಕಡಿಯುತಿದ್ದನು.

ಪ್ರಶ್ನೆ : ಆದರೆ ಅವನು ಅದನ್ನು ತನ್ನ ವೃತ್ತಿಯೆಂದು ಕೈಕೊಂಡಿರಲಿಲ್ಲ.

ಉತ್ತರ : ಅವನು ಹಾಗೆ ಕೈಕೊಂಡಿದ್ದರೆ ಯಾವ ಹಾನಿಯೂ ಆಗುತ್ತಿರಲಿಲ್ಲ. ಭಂಗಿಯಾಗಿ ಹುಟ್ಟಿದವನು ಭಂಗಿಯಾಗಿಯೆ ಉಪಜೀವನ ವನ್ನು ಸಾಗಿಸಿದನಂತರ ಬೇರೆ ಯಾವುದನ್ನಾದರೂ ಮಾಡಬಹುದೆಂದು ನನ್ನ ಅಭಿಪ್ರಾಯ; ನನ್ನ ಅರ್ಥ. ನಿಮ್ಮ ವಕೀಲನಿಗೆ ಅಥವಾ ನಿಮ್ಮ ಅಧ್ಯಕ್ಷನಿಗೆ ಬೆಲೆಯಿದ್ದಷ್ಟೇ ಭಂಗಿಗೂ ಆತನ ಬೆಲೆಯಿದೆ. ಅದೇ ನನ್ನ

ಅಭಿಪ್ರಾಯದ ಪ್ರಕಾರ, ಹಿಂದೂಧರ್ಮ. ಭೂಮಿಯ ಮೇಲೆ ಇದಕ್ಕಿಂತ ಚೆನ್ನಾದ ಸಾಮ್ಯವಾದವಿಲ್ಲ. ನಾನು ಇದನ್ನು ಉಪನಿಷತ್ತಿನಲ್ಲಿಯ ಒಂದು ಶ್ಲೋಕದಿಂದ ವಿಶದೀಕರಿಸಿದ್ದೇನೆ. "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್, ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ."

ಹೀಗೆ ಜೀವನದ ಅಧಿಕಾರವು ತ್ಯಾಗದಿಂದ ದೊರೆಯುತ್ತದೆ. "ಎಲ್ಲರೂ ತಮ್ಮತಮ್ಮ ಕರ್ತವ್ಯಗಳನ್ನು ಮಾಡಿದಬಳಿಕ ನಾನೂ ನನ್ನದನ್ನು ಮಾಡುತ್ತೇನೆ" ಎಂದು ಅದು ಹೇಳುವದಿಲ್ಲ. "ಉಳಿದವರ ಗೊಡವೆ ನಿನಗೆ ಬೇಡ. ನಿನ್ನ ಕೆಲಸವನ್ನು ನೀನು ಮಾಡು ಮತ್ತು ಉಳಿದುದನ್ನೆಲ್ಲ ಪರಮಾತ್ಮನಿಗೆ ಬಿಟ್ಟುಕೊಡು" ಎಂದು ಅದು ಹೇಳುತ್ತದೆ. ವರ್ಣಧರ್ಮವು ಗುರುತ್ವಾಕರ್ಷಣ ನಿಯಮದಂತೆ ಕಾರ್ಯವನ್ನು ಮಾಡುತ್ತದೆ. ದಿನ ದಿನವೂ ಅದನ್ನು ಮೀರುವ ಸತತ ಪ್ರಯತ್ನದಿಂದ ಅದರ ವ್ಯಾಪ್ತಿಯನ್ನು ತಪ್ಪಿಸಿಕೊಳ್ಳಲಾರೆ. ಆ ಪ್ರಯತ್ನವು ವ್ಯರ್ಥವಾಗುವದು. ಹಾಗೆಯೆ ಒಬ್ಬರ ಮೇಲೊಬ್ಬರು ನೆಗೆಯುವದೂ ನಿರರ್ಥಕವಾಗುವದು. ನಮ್ಮನ್ನು ವಿನಾಶಗೊಳಿಸುವ ಸ್ಪರ್ಧೆಗೆ ವರ್ಣನಿಯಮವು ಕಡುವಿರೋಧಿಯಾಗಿದೆ.

(ಹರಿಜನ: ೬-೫-೫೭)

ಹಿಂದೂ ಉಪವಾಸಗಳೂ ಸಮಾರಂಭಗಳೂ

★

ಹಿಂದೂ ಹಬ್ಬಗಳೂ ಹರಿದಿನಗಳೂ

ರಾಟಿಯ ಪ್ರಸಾರಕ್ಕಾಗಿ ರಂಗೂನಿನಿಂದ ಓರ್ವ ಮಿತ್ರನು ೨೫ ರೂಪಾಯಿಗಳನ್ನು ಕಳಿಸಿ ಹೀಗೆ ಬರೆಯುತ್ತಾನೆ:

"ನಾನು ರಜೆಯನ್ನು ತೆಗೆದುಕೊಂಡು ತಂಜಾವೂರಿಗೆ ಹೋಗಿದ್ದಾಗ ನನ್ನ ತಂದೆಯು ೧೯೨೭ನೇ ಇಸವಿಯ ಏಪ್ರಿಲ್ ೧೮ನೇ ದಿನಾಂಕ ದಿವಂಗತನಾದನು. 'ಹದಿನಾರನೇ ದಿನದ' ಕರ್ಮಾಂತರದ ಪ್ರಶ್ನೆಯು ನನ್ನ ಮುಂದೆ ಬಂದಾಗ ಅದು ಅರ್ಥವಿಲ್ಲದ ಶ್ರಾದ್ಧದ ಅನುಕರಣವೆಂದೂ ಅದರಲ್ಲಿ ನನ್ನ ನಂಬಿಕೆಯಿಲ್ಲದುದರಿಂದಲೂ ನನ್ನ ಬಂಧುಬಳಗದವರ ಇಚ್ಛೆಯನ್ನು ಧಿಕ್ಕರಿಸಿದೆನು. ಪಿತೃಲೋಕದಲ್ಲಾಗಲಿ ಬೇರೆ ಲೋಕದಲ್ಲಾಗಲಿ ನಮ್ಮ ಪಿತೃಗಳು ಜಲಕ್ಕಾಗಲಿ ಪಿಂಡಕ್ಕಾಗಲಿ ದಾರಿ ಕಾಯುತ್ತ ಕುಳಿತಿರುವರೆಂಬುದನ್ನು ನಾನು ನಂಬುವದಿಲ್ಲ. ಹಣದಾಸೆಗಾಗಿ ಭಟ್ಟರು ತಮಗೂ ಕರ್ಮ ಮಾಡುವವರಿಗೂ ತಿಳಿಯದ ಭಾಷೆಯಲ್ಲಿ ಮಾಡಿಸುವ ಕ್ರಿಯಾಕರ್ಮಗಳಿಗೆ ನಾನಾವ ಮಹತ್ವವನ್ನೂ ಕೊಡುವದಿಲ್ಲ. ಜನರ ಧಾರ್ಮಿಕ ಭಾವನೆಗಳ ದುರ್ಲಾಭವನ್ನು ಪಡೆಯಲೋಸುಗ ಹೂಡಿದ ಒಂದು ಕಪಟತಂತ್ರವಿದೆಂದು ನನಗನಿಸುತ್ತದೆ. ಆದರೆ ಉದಾರ ಉದ್ದೇಶದಿಂದ ಪವಿತ್ರ ಮನಸ್ಸಿನಿಂದ ನೀಡಿದ ವಸ್ತು ಶ್ರಾದ್ಧವೆಂದು ನಾನು ನಂಬಬಲ್ಲೆನು. ವ್ಯವಹಾರಜ್ಞಾನದ ದೃಷ್ಟಿಯಿಂದ ನೋಡಿದರೆ ಈ ಸಮಾರಂಭದ ಮುಖ್ಯ ತತ್ವ ಹಾಗು ಮೂಲ ಉದ್ದೇಶಗಳು ಔದಾರ್ಯವೆಂದು ಅಥವಾ ದಾನವೆಂದು ಹೇಳಬಹುದು. ನೀವು ಯಂಗ್ ಇಂಡಿಯಾದ ೨೪-೨-೨೭ರ ಸಂಚಿಕೆಯಲ್ಲಿ ಹೇಳಿದಂತೆ, "ದಾನವನ್ನು ತೆಗೆದುಕೊಳ್ಳಲಿಕ್ಕೆ ಎರಡೇ ವರ್ಗಗಳು ಪಾತ್ರವಿವೆ. ನಿಷ್ಕಿಂಚನನಾದ ಮತ್ತು ಪವಿತ್ರ ಜ್ಞಾನಪ್ರಸಾರಕನಾದ ಬ್ರಾಹ್ಮಣ ಮತ್ತು ಅಂಗಹೀನರು ಹಾಗು ಕರುಡರು." "ಎಲ್ಲ ಸಜೀವ ಪ್ರಾಣಿಗಳ ಬಗೆಗೆ ತುಂಬಿ ಸೂಸುವ ಪ್ರೇಮವುಳ್ಳ ಸನ್ಯಾಸಿಯೆ ಬ್ರಾಹ್ಮಣ"

ಎಂದು ನಮ್ಮ ಅಮರನಾದ ಮಹರ್ಷಿ ತಿರುವಳ್ಳುವಾರ್ ಹೇಳುತ್ತಾನೆ. ನಿಮಗಿಂತಲೂ ಇದಕ್ಕೆ ಅಧಿಕಾರಿಯಾದ ಬೇರೊಬ್ಬನನ್ನು ನಾನು ಕಾಣಲಾರೆ ಹಾಗು ರಾಟೆಯ ಉದ್ದೇಶಕ್ಕಿಂತಲೂ ಹೆಚ್ಚು ಪರೋಪಕಾರಿಯಾದ ಬೇರೊಂದು ಉದ್ದೇಶವನ್ನು ನಾನು ಅರಿಯೆನಾದುದರಿಂದಲೂ ಈ ಹಣವನ್ನು ನಾನು ನಿಮಗೆ ಕಳಿಸಿದ್ದೇನೆ. ತನ್ನ ತಂದೆ ತಾಯಿಗಳನ್ನು ಸ್ಮರಿಸುವ ಇನ್ನೊಂದು ಮಾರ್ಗವಿದೆ. ಆ ತಿರುವಳ್ಳುವರ್ ಮಹಾ ಮುನಿಯೇ "ಈ ಮಗನನ್ನು ಹಡೆಯಲು ತಂದೆಯು ಬಹಳ ದೊಡ್ಡ ತಪಸ್ಸನ್ನೇ ಮಾಡಿರಬೇಕೆಂಬ ಪ್ರಶಂಸೆಯನ್ನು ಜಗತ್ತಿನ ಜನರಿಂದ ಪಡೆಯು ವಷ್ಟು ಉತ್ತಮ ರೀತಿಯಲ್ಲಿ ನಡೆಯುವಲ್ಲಿಯೇ ಪಿತೃಸೇವೆಯ ಸಾರ್ಥಕ್ಯ ವಿದೆ"ಯೆಂದು ಮತ್ತೆ ಹೇಳಿದ್ದಾನೆ. ಈ ಆದರ್ಶವನ್ನು ನನ್ನ ಅಂತರಂಗ ದಲ್ಲಿ ನಾನಿಟ್ಟುಕೊಂಡಿದ್ದೇನೆಂದು ನಾನಿಲ್ಲಿ ಹೇಳಬಹುದು."

ಈ ಪತ್ರದಲ್ಲಿದ್ದ ಅನೇಕ ವೈಯಕ್ತಿಕ ವಿಷಯಗಳನ್ನು ನಾನು ಬಿಟ್ಟು ಬಿಟ್ಟಿದ್ದೇನೆ. ನನ್ನ ಯೌವನಾವಸ್ಥೆಯಲ್ಲಿ ಶ್ರಾದ್ಧಕರ್ಮವನ್ನು ನಾನು ಮಾಡಿದ್ದರೂ ಅದರ ಧಾರ್ಮಿಕ ಉಪಯುಕ್ತತೆಯನ್ನು ತಿಳಿದುಕೊಳ್ಳಲು ನನ್ನಿಂದಾಗಿಲ್ಲ. ನನಗೆ ಬಂದ ಇಂತಹ ಪಾತ್ರಗಳಲ್ಲಿ ಇದೇ ಮೊದಲನೆಯ ದಲ್ಲ. ಹಿಂದೂಧರ್ಮದಲ್ಲಿ ಬಹುಶಃ ಸಾರ್ವತ್ರಿಕವಾಗಿರುವ ಯಾವದೇ ಆಚಾರ ಸಂಪ್ರದಾಯಗಳ ರಹಸ್ಯಾರ್ಥವನ್ನು ತಿಳಿಯಲಾಗದೆ ಇಂದಿನವರೆಗೆ ಈ ಪತ್ರಿಕೆಯ ಪುಟಗಳಲ್ಲಿ ಅವುಗಳನ್ನು ಕುರಿತು ಬರೆಯಲು ಹಿಂಜರಿ ದಿದ್ದೇನೆ. ಆದರೆ ಪತ್ರಲೇಖಕನು ಆರಿಸಿಕೊಂಡ ನಿಯಮವು ಮಾತ್ರ ನನ್ನನ್ನು ಆಕರ್ಷಿಸಿದೆ. ನಮಗೆ ಅವುಗಳಲ್ಲಿ ಶ್ರದ್ಧೆಯಿರದಿದ್ದರೂ ಮತ್ತು ನಮಗೆ ಅವುಗಳಿಂದ ಯಾವ ಪ್ರಯೋಜನವಿರದಿದ್ದರೂ ಅನೇಕ ಸಾಂಪ್ರ ದಾಯಿಕ, ಆಚಾರ ವಿಚಾರಗಳಿಗೆ ನಾವು ತಲೆಬಾಗುತ್ತೇವೆ. ಇತರ ರನ್ನು ಅಥವಾ ತನ್ನನ್ನು ವಂಚಿಸುವ ಭೀತಿಯಿಲ್ಲದಂತಹ ಚಿಕ್ಕಪುಟ್ಟ ಸಂಪ್ರ ದಾಯಗಳ ವಿಷಯದಲ್ಲಿ ಅವುಗಳಿಗೆ ತಲೆಬಾಗುವದು ಅನೇಕಸಲ ಇಷ್ಟವೇ ಆಗಿರುವದಲ್ಲದೆ ಅವಶ್ಯವೂ ಆಗಿದೆ. ಆದರೆ ಧರ್ಮದ ವಿಷಯಗಳಲ್ಲಿ — ವಿಶೇಷತಃ ಒಳಗಿನಿಂದ ಅದಕ್ಕೆ ವಿರೋಧವಿದ್ದಲ್ಲಿ ಮತ್ತು ತನ್ನನ್ನಾಗಲಿ ಇತರರನ್ನಾಗಲಿ ಮೋಸಗೊಳಿಸುವ ಅಂಜಿಕೆಯಿದ್ದಲ್ಲಿ ಅಂತಹವುಗಳಿಗೆ ತಲೆಬಾಗುವುದು ಅತ್ಯಂತ ನೀಚತನವಾಗುವದು. ಹಿಂದೆ ಅವುಗಳಿಗೆ

ಬೆಲೆ ಇದ್ದಿರಬಹುದಾದರೂ ಬೆಳೆಯುತ್ತಿರುವ ಇಂದಿನ ಪೀಳಿಗೆಗೆ ಅವು ನಿರರ್ಥಕವೂ ನಿಷ್ಪ್ರಯೋಜಕವೂ ಆಗಿರುವಂತಹ ಅನೇಕ ಧಾರ್ಮಿಕ ಕರ್ಮಗಳುಂಟು. ಅನೇಕ ಹಳೆಯ ಸಂಪ್ರದಾಯಗಳಿಗೆ ಹೊಸ ಅರ್ಥವನ್ನೂ ಮಹತ್ವವನ್ನೂ ಕೊಟ್ಟು ಹೊಸ ಹಾಗು ಮೌಲಿಕವಾದ ಮಾರ್ಗವನ್ನು ಹುಡುಕುವದು ಇಂದಿನ ಪೀಳಿಗೆಗೆ ಅವಶ್ಯವಾಗಿದೆಯೆಂಬಲ್ಲಿ ಯಾವ ಸಂದೇಹವೂ ಇಲ್ಲ. ತಂದೆತಾಯಿಗಳ ಸ್ಮರಣೆಯನ್ನು ನಿರಂತರವಾಗಿಟ್ಟುಕೊಳ್ಳುವ ಭಾವನೆಯನ್ನು ಎಂದೂ ಬಿಡಕೂಡದು. ಆದರೆ ತಮ್ಮ ಯಥಾರ್ಥತೆಯನ್ನು ಕಳೆದುಕೊಂಡು ನಮ್ಮ ಮೇಲೆ ಯಾವ ಪ್ರಭಾವವನ್ನೂ ಬೀರದಿರುವ ಹಳೆಯ ಸಮಯ ಸಂಕೇತಗಳನ್ನೇ ಅದಕ್ಕೋಸುಗ ಇಟ್ಟುಕೊಳ್ಳಬೇಕಾಗಿಲ್ಲ. ಆದುದರಿಂದ ಸರಿಯಾದುದನ್ನೇ ಮಾಡಲು ಆತುರರಾಗಿರುವ ಹಾಗು ಆತ್ಮವಂಚನೆಯಿಂದ ಮುಕ್ತರಾಗಲು ಉತ್ಸುಕರಾಗಿರುವವರಿಗೆ ಈ ಪತ್ರಲೇಖಕನ ದೃಷ್ಟಾಂತವನ್ನೇ ಪ್ರಶಂಸಿಸುತ್ತೇನೆ.

(ಯಂಗ್ ಇಂಡಿಯಾ : ೧-೯-೨೭)

ದೀಪಾವಳಿ ಬಿಡುವು (ಹಬ್ಬ)

ಮುಂಬರುವ ದೀಪಾವಳಿ ಹಬ್ಬದಲ್ಲಿ ಒಳ್ಳೆಯದಾದ ಹಣವನ್ನು ಪಟಾಕಿಗಳನ್ನು ಕೊಳ್ಳಲು ಹಾಗೂ ಕೆಟ್ಟ ಸಿಹಿತಿಂಡಿಗಳನ್ನು ಕೊಂಡುಕೊಳ್ಳಲು ಮತ್ತು ಅನಾರೋಗ್ಯಕರವಾದ ದೀಪೋತ್ಸವಗಳನ್ನು ಮಾಡಲು ವೆಚ್ಚಮಾಡುವುದರ ವಿರುದ್ಧವಾಗಿ ಎಚ್ಚರಿಕೆಯನ್ನು ಕೊಡಲು ನನ್ನನ್ನು ಓರ್ವ ಪತ್ರಲೇಖಕನು ಕೇಳಿಕೊಂಡಿರುವನು. ನಾನು ಅದನ್ನು ಸಂತೋಷದಿಂದ ಅಂತಃಕರಣಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ನನ್ನ ದಾರಿಯನ್ನೇ ನಾನು ಅನುಸರಿಸುವದಾದರೆ ಆ ಕಾಲಕ್ಕೆ ಜನರು ಮನೆಗಳನ್ನೂ ಮನಗಳನ್ನೂ ಹಸನಗೊಳಿಸಿಕೊಳ್ಳಬೇಕೆಂದು ನನ್ನ ಬಯಕೆ. ಅಲ್ಲದೆ ನಿರುಪದ್ರವಿಯಾದ ಜ್ಞಾನಪೂರ್ಣವಾದ ವಿನೋದ ವಿಲಾಸಗಳನ್ನು ಮಕ್ಕಳಿಗೆ ಒದಗಿಸುತ್ತಿದ್ದೆನು, ಪಟಾಕಿಗಳಿಂದ ಮಕ್ಕಳಿಗೆ ಆನಂದವಾಗುತ್ತದೆಂಬುದನ್ನು ನಾನು ಬಲ್ಲೆನು. ಆದರೆ ನಾವು ಹಿರಿಯರು, ಅವರಿಗೆ ಆ ರೂಢಿಯನ್ನು

ಮಾಡಿಕೊಟ್ಟಿರುವದರಿಂದ ಅವು ಹಾಗೆ ಆಗಿವೆ. ಅಶಿಕ್ಷಿತರಾದ ಆಫ್ರಿಕಾದ ಮಕ್ಕಳು ಪಟಾಕಿಗಳನ್ನು ಬೇಡಿದ್ದುದನ್ನಾಗಲಿ ಆನಂದದಿಂದ ಕುಣಿದುದನ್ನಾಗಲಿ ನಾನು ಅರಿತಿಲ್ಲ. ಅದಕ್ಕೆ ಪ್ರತಿಯಾಗಿ ಅವರು ನೃತ್ಯಕಾರ್ಯಕ್ರಮಗಳನ್ನು ನಡೆಸುವರು. ಪೇಟೆಯಲ್ಲಿ ಮಾಡಿದ ಅಶುದ್ಧ ಮಿಠಾಯಿಗಳನ್ನು ಒಯ್ಯದೆ ಹೊಸದೂ ಮತ್ತು ಒಣಗಿದುದೂ ಆದ ಹಣ್ಣುಗಳನ್ನು ತೆಗೆದುಕೊಂಡು ವನಭೋಜನಗಳಿಗೂ ಆಟನೋಟಗಳಿಗೂ ಹೋಗುವದಕ್ಕಿಂತ ಹೆಚ್ಚು ಸ್ವಚ್ಛವಾದವುಗಳಿನ್ನೇನು ಮಕ್ಕಳಿಗೆ ಬೇಕು? ಬಡವರ ಹಾಗು ಸಿರಿವಂತರ ಮಕ್ಕಳಿಬ್ಬರಿಗೂ ಗೃಹಸ್ವಚ್ಛತೆಯ ಹಾಗು ಸುಣ್ಣಬಣ್ಣ ಬಳಿಯುವ ಶಿಕ್ಷಣವನ್ನು ಕೊಡಬೇಕು.

ಆದರೆ ಪಟಾಕಿಗಳಿಗೆ ಮಾಡುವ ವೆಚ್ಚದ ಇಡೀ ಹಣವನ್ನಲ್ಲದಿದ್ದರೂ ಕೆಲವು ಭಾಗವನ್ನಾದರೂ ಖಾದಿಗಾಗಲಿ ಅಥವಾ ಬಡಬಗ್ಗರ ಸೇವೆಯನ್ನು ಮಾಡುತ್ತಿರುವ ಬೇರೆ ಯಾವದೇ ವಿಷಯಕ್ಕಾಗಲಿ ಕೊಡಬೇಕೆಂದು ಒತ್ತಿ ಹೇಳುವದೇ ನನ್ನ ಮುಖ್ಯ ಉದ್ದೇಶ. ತಮ್ಮ ಹಬ್ಬಗಳಲ್ಲಿ ನಾಡಿನ ಬಡಬಗ್ಗರನ್ನು ತಮ್ಮೊಡನೆ ಸಹಕರಿಸುವಂತೆ ಮಾಡಿಕೊಂಡಿರುವದಕ್ಕಿಂತಲೂ ಹಿರಿಯರಿಗಾಗಲಿ ಕಿರಿಯರಿಗಾಗಲಿ ಹೆಂಗಸರಿಗಾಗಲಿ ಗಂಡಸರಿಗಾಗಲಿ ಹೆಚ್ಚಿನ ಆನಂದದ ವಿಷಯವಿನ್ನಾವುದೂ ಇರಲಾರದು.

(ಯಂಗ್ ಇಂಡಿಯಾ : ೨೫-೧೦-೨೮)

ಹಿಂದೂಧರ್ಮದ ಕೆಲವು ವಿಶಿಷ್ಟ ನಂಬಿಕೆಗಳು

ಗುರುವಾದ :

ನನಗೆ ಹಿಂದೂಧರ್ಮದ ಗುರುವಾದದಲ್ಲಿ ಮತ್ತು ಆಧ್ಯಾತ್ಮ ಸಾಧನೆಯಲ್ಲಿ ಅದರ ಮಹತ್ವದ ವಿಷಯವಾಗಿ ನಂಬಿಕೆ ಇದೆ. ಗುರುವಿಲ್ಲದೆ ನಿಜವಾದ ಜ್ಞಾನವು ಅಶಕ್ಯವೆಂಬ ಸಿದ್ಧಾಂತದಲ್ಲಿ ಬಹಳ ತಥ್ಯಾಂಶವಿದೆಯೆಂದು ನನಗೆ ತೋರುತ್ತದೆ. ವ್ಯವಹಾರ ವಿಷಯಗಳಲ್ಲಿ ಅಪೂರ್ಣನಾದ ಗುರುವನ್ನು ಹೇಗಾದರೂ ಸಹಿಸಬಹುದು; ಆದರೆ ಆಧ್ಯಾತ್ಮಿಕ

ವಿಷಯಗಳಲ್ಲಿ ಅದಾಗದು. ಪೂರ್ಣ ಜ್ಞಾನಿಯನ್ನೇ ದ್ರಷ್ಟಾರನನ್ನೇ ಗುರುಪೀಠದಲ್ಲಿ ಪ್ರತಿಷ್ಠಿಸಬೇಕು.

ಅಪೂರ್ಣ ಜ್ಞಾನಿಗಳನ್ನು ಗುರುಗಳನ್ನಾಗಿ ಅಂಗೀಕರಿಸುವ ವಿಷಯದಲ್ಲಿ ಎಲ್ಲರಿಗೂ ನಾನು ಎಚ್ಚರಿಕೆಯನ್ನು ಕೊಡುತ್ತೇನೆ. ತಾನು ಅಜ್ಞಾನಿಯೆಂದು ತಿಳಿಯದಂತಹ ಗುರುವಿನ ಗುಲಾಮನಾಗುವದಕ್ಕಿಂತ ಲಕ್ಷಾಂತರ ತಪ್ಪುಗಳನ್ನು ಮಾಡುತ್ತ ಸತ್ಯದೆಡೆಗೆ ಕತ್ತಲೆಯಲ್ಲಾದರೂ ತಡವರಿಸುತ್ತ ನಡೆಯುವದೇ ಲೇಸು. (ಯಂಗ್ ಇಂಡಿಯಾ : ೩-೧೨-೨೫)

ಅವತಾರ :

ಮಾನವ ಕುಲದ ಸೇವೆಯನ್ನು ಅಸಾಮಾನ್ಯವಾದ ರೀತಿಯಲ್ಲಿ ಮಾಡಿದವನಿಗೆ ಹಿಂದೂಧರ್ಮದಲ್ಲಿ ಅವತಾರತ್ವವನ್ನು ಕೊಡಲಾಗುತ್ತಿದೆ. ವಸ್ತುತಃ ದೇಹಧಾರಿಯಾದ ಪ್ರಾಣವೆಲ್ಲ ಒಂದು ಬಗೆಯಿಂದ ಈಶ್ವರನ ಅವತಾರವೇ ಆಗಿದೆ. ಆದರೆ ಪ್ರತಿಯೊಂದು ಪ್ರಾಣಿಯನ್ನೂ ಅವತಾರವೆಂದು ತಿಳಿಯುವ ವಾಡಿಕೆಯಿಲ್ಲ. ತನ್ನ ಆಚಾರದಲ್ಲಿ ಅಸಾಮಾನ್ಯ ಧಾರ್ಮಿಕತೆಯನ್ನು ತೋರಿದವನಿಗೆ ಆತನ ಮುಂದಿನ ಪೀಳಿಗೆಯವರು ಅವತಾರದ ಈ ಗೌರವವನ್ನು ಸಲ್ಲಿಸುವರು. ಈ ಕ್ರಮದಲ್ಲಿ ಯಾವ ತಪ್ಪೂ ನನಗೆ ಕಂಡು ಬರುವದಿಲ್ಲ. ಇದರಿಂದ ದೇವರ ಮಹತ್ವಕ್ಕೆ ಯಾವ ರೀತಿಯಿಂದಲೂ ಚ್ಯುತಿಯಿಲ್ಲ. ಮತ್ತು ಸತ್ಯಕ್ಕೆ ಯಾವ ದ್ರೋಹವೂ ಆಗುವದಿಲ್ಲ. "ಆದಮನು ದೇವನಲ್ಲ; ಆದರೆ ಆತನು ದೈವದ ಒಂದು ಕಿಡಿ" ಎಂದು ಉರ್ದುವಿನಲ್ಲಿ ಒಂದು ನಾಣ್ಣುಡಿಯಿದೆ. ಆದುದರಿಂದ ಹೆಚ್ಚು ಧರ್ಮನಿಷ್ಠನಾಗಿ ನಡೆಯುವವನಲ್ಲಿ ಹೆಚ್ಚು ದೈವೀಜ್ಯೋತಿ ಇರುತ್ತದೆ. ಈ ವಿಚಾರಸರಣಿಯನ್ನು ಅನುಸರಿಸಿಯೇ ಹಿಂದೂಧರ್ಮದಲ್ಲಿ ಕೃಷ್ಣನನ್ನು ಪೂರ್ಣಾವತಾರನೆಂದು ತಿಳಿಯಲಾಗಿದೆ.

(ಯಂಗ್ ಇಂಡಿಯಾ : ೬-೮-೨೧)

ಯಜ್ಞ :

ಯಜ್ಞ ಎಂಬ ಶಬ್ದವು ಸುಂದರವೂ ಶಕ್ತಿಯುತವೂ ಆಗಿದೆ. ಆದುದರಿಂದ ಜ್ಞಾನ ವೃದ್ಧಿಯಾದಂತೆ ಅನುಭವವು ಹೆಚ್ಚಿದಂತೆ ಮತ್ತು ಕಾಲವು ಬದಲಾದಂತೆ ಅದರ ಅರ್ಥವೂ ವ್ಯಾಪ್ತಿಯೂ ಬೆಳೆಯುವ ಸಂಭವವುಂಟು. ಯಜ್ಞವೆಂದರೆ ಅಕ್ಷರಶಃ ಪೂಜೆಯೆಂದರ್ಥ; ಅರ್ಥಾತ್ ಆತ್ಮದಾನ; ಆದುದರಿಂದ ಯಾವದೇ ಸೇವಾಕಾರ್ಯ ಅಥವಾ ಆತ್ಮದಾನದ ಕೃತಿ. ಈ ಅರ್ಥದಲ್ಲಿ ಪ್ರತಿಯೊಂದು ಯುಗದಲ್ಲಿಯೂ ತನ್ನದೇ ಆದ ಯಜ್ಞದ ಕಲ್ಪನೆ ಮತ್ತು ರೂಪವಿರಬಹುದು; ಇರಬೇಕು. ಪಶುಯಜ್ಞವು ವೇದಕಾಲದ ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದ್ದಿತೆಂದು ಸಿದ್ಧಮಾಡಬಹುದು. ಆದರೆ ಅಹಿಂಸೆಯ ಉಪಾಸಕನಿಗೆ ಅದು ಒಂದು ಪ್ರಮಾಣವಾಗಲಾರದು.

ಹಾಗೆಯೆ ಬಹುಜನರ ಕಲ್ಯಾಣಕ್ಕಾಗಿರುವ ಕೃತಿಯೆ ಯಜ್ಞದ ಪ್ರಾಥಮಿಕ ಲಕ್ಷಣ. ಮತ್ತು ಅದು ಹೆಚ್ಚು ವ್ಯಾಪಕವಾದ ಕ್ಷೇತ್ರದಲ್ಲಿ ಬಹುಜನ ಸ್ತ್ರೀಪುರುಷರಿಂದ ಮಾಡಲ್ಪಡಲು ಶಕ್ಯವಿರಬೇಕಲ್ಲದೆ ಕಡಿಮೆ ಶ್ರಮದಿಂದ ಸಾಧ್ಯವಾಗಿರಬೇಕು. ಮಹಾಕಲ್ಯಾಣವನ್ನು ಸಾಧಿಸುವ ಉದ್ದೇಶದಿಂದಾದರೂ ಯಾರಿಗಾದರೂ ಅಹಿತವನ್ನು ಚಿಂತಿಸುವದು ಯಜ್ಞವಾಗಲಾರದು; ಮಹಾಯಜ್ಞವಂತೂ ಆಗಲಾರದು. ಯಜ್ಞದ ಕಕ್ಷೆಯಲ್ಲಿ ಬರಲಾರದ ಕಾರ್ಯವೆಲ್ಲ ಬಂಧನಕ್ಕೆ ಕಾರಣವೆಂದು ಗೀತೆಯು ಹೇಳುತ್ತದೆ; ಅನುಭವವೂ ಅದನ್ನು ಒಪ್ಪುತ್ತದೆ.

ಈ ಅರ್ಥದ ಯಜ್ಞವಿಲ್ಲದೆ ವಿಶ್ವವು ಒಂದು ಅರೆಗಳಿಗೆಯಾದರೂ ಬಾಳದು. ಆದುದರಿಂದ ಗೀತೆಯು ಎರಡನೆಯ ಅಧ್ಯಾಯದಲ್ಲಿ ನಿಜವಾದ ಜ್ಞಾನದ ವಿಚಾರವನ್ನು ವಿವರಿಸಿ ಮೂರನೆಯ ಅಧ್ಯಾಯದಲ್ಲಿ ಅದನ್ನು ಪಡೆಯುವ ಸಾಧನಗಳನ್ನು ಹೇಳುತ್ತದೆ. ಯಜ್ಞವು ಸೃಷ್ಟಿಯೊಡನೆಯೆ ಬಂದಿತೆಂದು ಬಾಯ್ಬಿಟ್ಟು ಹೇಳುತ್ತದೆ. ಸಮಸ್ತ ಸೃಷ್ಟಿಯ ಸೇವೆಯನ್ನು ಮಾಡಲೋಸುಗವೇ ಈ ದೇಹವನ್ನು ನಮಗೆ ಕೊಡಲಾಗಿದೆ. ಆದುದರಿಂದ ಯಜ್ಞವನ್ನು ಮಾಡದೆ ಉಣ್ಣುವವನು ಕದ್ದ ಅನ್ನವನ್ನು ಉಣ್ಣುವವನೆಂದು ಗೀತೆಯು ಹೇಳುತ್ತದೆ. ಪವಿತ್ರ ಜೀವನವನ್ನು ನಡೆಸಬೇಕೆನ್ನುವವನ ಪ್ರತಿ

ಯೊಂದು ಕೃತಿಯೂ ಯಜ್ಞಸ್ವರೂಪವಾಗಬೇಕು. ನಮ್ಮ ಹುಟ್ಟಿನೊಡನೆಯೆ ಯಜ್ಞವು ಬಂದುದರಿಂದ ನಾವು ನಮ್ಮ ಆಜೀವ ಸಾಲಗಾರರಾಗಿರುವೆವು. ಅಂತು ಶಾಶ್ವತವಾಗಿ ವಿಶ್ವದ ಸೇವೆಗೆ ಬದ್ಧರಾಗಿರುವೆವು. ಗುಲಾಮನಾದ ವನು ತನ್ನ ಒಡೆಯನಿಂದ ಕೊಡಲ್ಪಟ್ಟ ಅನ್ನವಸ್ತ್ರಗಳನ್ನು ಸ್ವೀಕರಿಸಿ ಆತನ ಸೇವೆಯನ್ನು ಮಾಡುವಂತೆ ನಾವು ಸಹ ಕೃತಜ್ಞತಾಪೂರ್ವಕವಾಗಿ ವಿಶ್ವೇಶ ನಿಂದ ದಯಪಾಲಿಸಲ್ಪಟ್ಟ ವಸ್ತುಗಳನ್ನು ಸ್ವೀಕರಿಸಬೇಕು. ನಾವು ಸ್ವೀಕರಿಸಿ ದುದನ್ನು ದಾನವೆಂದೇ ಭಾವಿಸಬೇಕು. ಯಾಕಂದರೆ ಸಾಲಗಾರರಾದ ನಮಗೆ ನಮ್ಮ ಋಣವನ್ನು ತೀರಿಸಲು ಬೇರಾವ ಅಧಿಕಾರವೂ ಅನುಕೂಲ ತೆಯೂ ಇಲ್ಲ. ಆದುದರಿಂದ ನಮಗೆ ಅಂತಹ ದಾನವೇನಾದರೂ ದೊರೆಯು ದಿದ್ದರೆ ನಮ್ಮ ಸ್ವಾಮಿಯನ್ನು ನಾವು ದೂಷಿಸಬಾರದು. ನಮ್ಮ ದೇಹವು ಆತನದು ; ಅವನ ಸಂಕಲ್ಪಾನುಸಾರ ಅದನ್ನಿಟ್ಟುಕೊಳ್ಳಬಹುದು ಅಥವಾ ಬಿಸುಡಬಹುದು. ಇದು ದೂರಿನ ವಿಷಯವಲ್ಲ. ತದ್ವಿರುದ್ಧ ಪರಮಾತ್ಮನ ಯೋಜನೆಯಲ್ಲಿ ನಮ್ಮ ಸ್ಥಾನವೇನೆಂಬುದನ್ನು ತಿಳಿದರೆ ಅದು ಅತ್ಯಂತ ಸ್ವಾಭಾವಿಕವಾದ ಮತ್ತು ಆನಂದದಾಯಕವಾದ ಅವಸ್ಥೆಯಾಗುವದು. ಈ ಪರಮಾನಂದವನ್ನು ಅನುಭವಿಸಬೇಕಾದರೆ ಸುಭದ್ರವಾದ ಶ್ರದ್ಧೆಯು ಬೇಕು. ನಿಮಗಾಗಿ ಎಳ್ಳನಿತೂ ಚಿಂತಿಸಬೇಡಿ ; ಎಲ್ಲ ಚಿಂತೆಯನ್ನೂ ದೇವನಿಗೆ ಬಿಟ್ಟುಕೊಡಿರಿ ಎಂಬುದೇ ಎಲ್ಲ ಧರ್ಮಗಳ ಆಜ್ಞೆಯಿರುವಂತೆ ತೋರುತ್ತದೆ. (ಯ. ಮಂ.)

ಮಾನವಸೃಷ್ಟಿಯೊಡನೆಯೆ ಜನಿಸಿದ ತತ್ವದ ವಿಚಾರವಿಮರ್ಶೆಯನ್ನು ಇನ್ನಷ್ಟು ಮಾಡುವದೊಳಿತಾದೀತು. ದಿನದ ಇಪ್ಪತ್ತುನಾಲ್ಕು ಗಂಟೆಗಳ ಲ್ಲಿಯೂ ಮಾಡಬೇಕಾದ ಕಾರ್ಯ ಮತ್ತು ಸೇವೆಯು ಯಜ್ಞ. ಆದ ಪ್ರಯುಕ್ತ 'ಪರೋಪಕಾರಾಯ ಸತಾಂ ವಿಭೂತಯಃ' ಎಂಬ ಉಕ್ತಿಯು ಉಪಕಾರವೆಂಬ ಶಬ್ದದಲ್ಲಿ ಇತರರಿಗೆ ಅನುಗ್ರಹ ಮಾಡುವುದರ ಗಂಧವಿದ್ದರೆ ಅದು ಅನುಚಿತವೇ ಆದೀತು. ಯಜ್ಞಜೀವನವು ಕಲೆಯ ಪರಮೋಚ್ಚ ಸ್ಥಾನ. ಅದು ಆನಂದಮಯ. ಅದೊಂದು ಹೊರೆ ಹಾಗು ಕಷ್ಟದಾಯಕ ಸ್ಥಿತಿಯೆಂದು ತಿಳಿದರೆ ಯಜ್ಞವು ಯಜ್ಞವಾಗಲಾರದು. (ಯ. ಮಂ.)

ಕರ್ಮ :

ಕರ್ಮತತ್ವದಲ್ಲಿ ನನಗೆ ದೃಢ ವಿಶ್ವಾಸವಿದೆ. ಆದರೆ ಮಾನವ ಪ್ರಯತ್ನದಲ್ಲಿಯೂ ನನ್ನ ನಂಬಿಕೆಯಿದೆ. ಅನಾಸಕ್ತಿಯಿಂದ ಕರ್ಮದ ಪರಿಣಾಮಗಳನ್ನು ನಾಶಗೊಳಿಸಿ ಕರ್ಮದ ಮುಖಾಂತರವೇ ಮೋಕ್ಷವನ್ನು ಗಳಿಸುವದೇ ಜೀವನದ ಪರಮೋದ್ದೇಶವೆಂದು ನಾನು ತಿಳಿದಿದ್ದೇನೆ.

(ಯಂಗ್ ಇಂಡಿಯಾ : ೧೮-೧೦-೨೮)

ಕರ್ಮಸಿದ್ಧಾಂತದ ಅಬಾಧ್ಯತೆಯಲ್ಲಿ ನನ್ನ ಶ್ರದ್ಧೆಯಿದ್ದರೂ ನಾನು ಅನೇಕ ಕಾರ್ಯಗಳನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ. ಪ್ರಾರಬ್ಧವನ್ನು ಸವೆಸಲು ಮತ್ತು ಆಗಾಮಿಯನ್ನು ಆರ್ಜಿಸಲು ಹೆಚ್ಚುಹೆಚ್ಚು ಕರ್ಮಸಂಗ್ರಹ ವನ್ನು ಮಾಡುವಲ್ಲಿಯೆ ಪ್ರತಿಕ್ಷಣವೂ ನನ್ನ ದೀರ್ಘ ಪ್ರಯತ್ನವು ನಡೆದಿದೆ. ಆದುದರಿಂದ ನನ್ನ ಪ್ರಾಕ್ಕರ್ಮವು ಚೆನ್ನಾಗಿದ್ದುದರಿಂದಲೇ ನನಗೆ ಈಗ ಒಳ್ಳೆಯದಾಗುತ್ತಿದೆಯೆಂದು ತಿಳಿಯುವದು ತಪ್ಪು. ಏಕೆಂದರೆ ಪ್ರಾಕ್ಕರ್ಮದ ಸಂಗ್ರಹವು ಬೇಗ ನಾಶವಾಗುವದು. ನನ್ನ ಭವಿಷ್ಯತ್ತನ್ನು ನಾನು ಪ್ರಾರ್ಥನಾಪೂರ್ವಕ ಕಟ್ಟಬೇಕು. ಕೇವಲ ಕರ್ಮವು ದುರ್ಬಲವೆಂದು ನಾನು ನಿಮಗೆ ಹೇಳುತ್ತೇನೆ. (ಹರಿಜನ : ೧೯-೮-೩೯)

ಪುನರ್ಜನ್ಮ :

ಪುನರ್ಜನ್ಮದಲ್ಲಿ ನನ್ನ ನಂಬಿಕೆ ಇದೆ. ನಮ್ಮ ಹಿಂದಿನ ಜನ್ಮದಿಂದ ತೆಗೆದುಕೊಂಡು ಬಂದ ಸಂಸ್ಕಾರಗಳ ಫಲವೇ ನಮ್ಮ ಎಲ್ಲ ಋಣಾನುಬಂಧ ಗಳು. ಪರಮಾತ್ಮನ ನಿಯಮಗಳು ಅಗಾಧವಾಗಿವೆಯಲ್ಲದೆ ಅನಂತ ಸಂಶೋಧನೆಯ ವಿಷಯಗಳಾಗಿವೆ. ಯಾವನೂ ಅವುಗಳನ್ನು ತಿಳಿಯ ಲಾರನು.

ಉಪಸಂಹಾರ :

ವೇದಗಳು ನಮಗೆ ಎರಡು ಅಮರ ತತ್ವಗಳನ್ನು ನೀಡಿವೆ. "ಅಹಿಂಸಾ ಪರಮೋ ಧರ್ಮಃ" ಎಂಬುದೊಂದು, 'ಸತ್ಯಾನ್ನಾಸ್ತಿ ಪರೋ ಧರ್ಮಃ'

ಎಂಬುದಿನ್ನೊಂದು. ಅಹಿಂಸೆಯೆ ಶ್ರೇಷ್ಠಧರ್ಮವೆಂಬುದೊಂದು; ಸತ್ಯಕ್ಕಿಂತ ಹೆಚ್ಚಿನ ಧರ್ಮವಿನ್ನೊಂದಿಲ್ಲೆಂಬುದೊಂದು. ಹೀಗೆ ಈ ಎರಡು ತತ್ವಗಳು ಧರ್ಮಕ್ಕೆ ಅವಿರುದ್ಧವಾದ ಅರ್ಥಕಾಮಗಳಿಗೆ ಮಾರ್ಗವನ್ನು ಮಾಡಿಕೊಟ್ಟವೆ. ಆದುದರಿಂದ ಹಾಗೆ ನಡೆದುಕೊಳ್ಳಲು ನಾವೇಕೆ ಹಿಂಜರಿಯಬೇಕು? ಸುಲಭವಾದ ಕಾರ್ಯಗಳನ್ನೇ ಅತ್ಯಂತ ಕಠಿನ ಕಾರ್ಯಗಳೆಂದು ಅನೇಕಸಲ ಜನರು ಭಾವಿಸುವರೆಂಬ ಮಾತು ವಿಚಿತ್ರವಾಗಿ ಕಂಡರೂ ವಸ್ತುತಃ ಸತ್ಯವಾಗಿದೆ. ಈ ಸಂದರ್ಭದಲ್ಲಿ ಮಹಾಭಾರತದಲ್ಲಿಯ ಅಮರವಾದ ಶ್ಲೋಕವೊಂದನ್ನು ನೆನೆಸಿಕೊಳ್ಳುವದು ಲೇಸು. ಧರ್ಮದಲ್ಲಿ ನ್ಯಾಯಸಮ್ಮತವಾದ ಅರ್ಥಕಾಮಗಳೆರಡೂ ಸೇರುತ್ತವೆಯೆಂದು ಆ ವರಕವಿಯು ಘಂಟಾಘೋಷವಾಗಿ ಸಾರಿರುವನು ಮತ್ತು ಐಹಿಕಾಮುಷ್ಮಿಕ ಆನಂದವನ್ನು ಕೊಡುವ ಧರ್ಮದ ರಾಜಮಾರ್ಗವನ್ನು ಜನರು ಏಕೆ ಅನುಸರಿಸುತ್ತಿಲ್ಲವೆಂದು ಕೇಳಿರುವನು. ಕೇವಲ ಬಾಹ್ಯ ಆಡಂಬರಾಚಾರಗಳ ಪಾಲನೆಯು ಧರ್ಮವೆನಿಸುವದಿಲ್ಲ. ಸತ್ಯ ಅಹಿಂಸೆಗಳ ಪಥವೇ ಅದು.

ಭಾಗ ೩

ಹಿಂದೂ ಸಮಾಜದ ಸಮಸ್ಯೆಗಳು

★

ಪ್ರಗತಿಶೀಲ ಹಿಂದೂಧರ್ಮ

ಹಿಂದೂಧರ್ಮವು ಸಚೇತನವಾದ ಒಂದು ಪ್ರಾಣಿಯಂತೆ ವೃದ್ಧಿ ವಿನಾಶಗಳಿಗೆ ಅಧೀನವಾಗಿದೆ; ನಿಸರ್ಗನಿಯಮಗಳಿಗೆ ಒಳಪಟ್ಟಿದೆ. ಮೂಲತಃ ಏಕವೂ, ಅವಿಭಾಜ್ಯವೂ ಆಗಿದ್ದುದು ಈಗ ಅಸಂಖ್ಯ ಶಾಖೆಗಳುಳ್ಳ ಹೆಮ್ಮರವಾಗಿದೆ. ಋತುಮಾನಗಳ ಪರಿಣಾಮವು ಅದರ ಮೇಲಾಗುತ್ತದೆ. ಅದಕ್ಕೂ ವಸಂತ, ಗ್ರೀಷ್ಮ, ಶರತ್ ಮತ್ತು ಶಿಶಿರ ಋತುಗಳಿವೆ. ಮಳೆಯಿಂದ ಅದು ಪುಷ್ಟವಾಗಿ ಫಲವೀಯುತ್ತದೆ. ಅದು ನಿಗಮಾಗಮಗಳನ್ನು ಆಧರಿಸಿರಬಹುದು ಅಥವಾ ಇಲ್ಲದಿರಬಹುದು. ಒಂದೇ ಒಂದು ಪುಸ್ತಕವೇ ಅದರ ಪ್ರಮಾಣವಲ್ಲ. ಗೀತೆಯು ವಿಶ್ವಮಾನ್ಯವಾಗಿದೆ; ಆದರೂ ಅದು ಮಾರ್ಗವನ್ನು ತೋರಿಸಬಲ್ಲದು. ರೂಢಿ ಸಂಪ್ರದಾಯಗಳ ಮೇಲೆ ಅದರ ಪರಿಣಾಮ ಏನೂ ಆಗಿಲ್ಲ.

ಮೂಲದಲ್ಲಿ ಪರಿಶುದ್ಧವೂ, ನಿರ್ಮಲವೂ ಆಗಿದ್ದು ತನ್ನ ಪಥದಲ್ಲಿ ಮುಂದುವರಿದಂತೆ ಕಶ್ಮಲವನ್ನೂ ಸೇರಿಸಿಕೊಳ್ಳುವ ಗಂಗಾನದಿಯಂತಿದೆ ಹಿಂದೂಧರ್ಮ. ಒಟ್ಟಿನ ಪರಿಣಾಮದಲ್ಲಿ ಗಂಗೆಯಂತೆಯೇ ಅದು ಕಲ್ಯಾಣಕಾರಿಯಾಗಿದೆ. ಪ್ರತಿಯೊಂದು ಪ್ರಾಂತದಲ್ಲಿಯೂ ಅದು ಪ್ರಾಂತೀಯ ರೂಪ ತಾಳಿದರೂ ಎಲ್ಲೆಲ್ಲಿಯೂ ಅದರ ಅಂತರ್ಯಸತ್ವ ಸ್ಥಿರವಾಗಿದೆ. ಪದ್ಧತಿಯೇ ಧರ್ಮವಲ್ಲ. ಪದ್ಧತಿ ಬದಲಾಗುತ್ತ ಹೋಗುತ್ತದೆ; ಆದರೆ, ಧರ್ಮ ಮಾತ್ರ ಶಾಶ್ವತ.

ಹಿಂದೂಧರ್ಮದ ಪರಿಶುದ್ಧತೆಯು ಅದರ ಅನುಯಾಯಿಗಳಲ್ಲಿರುವ ಆತ್ಮ-ನಿಗ್ರಹ ಶಕ್ತಿಯನ್ನವಲಂಬಿಸಿದೆ. ಧರ್ಮವು ಆಪತ್ತಿಗೆ ಗುರಿಯಾದಾಗಲೆಲ್ಲ ಹಿಂದೂಗಳು ಘೋರ ತಪಸ್ಯವೆಸಗಿ, ಆಪತ್ತಿನ ಕಾರಣಗಳನ್ನು ಕಂಡುಹಿಡಿದುದಲ್ಲದೆ ಅವುಗಳನ್ನು ನಿವಾರಿಸುವ ಉಪಾಯಗಳನ್ನು ಹುಡುಕಿದಾರೆ.

ಶಾಸ್ತ್ರಗಳು ಬೆಳೆಯುತ್ತಲೇ ಹೋಗಿವೆ. ವೇದಗಳು, ಉಪನಿಷತ್ತುಗಳು, ಸ್ಮೃತಿಗಳು, ಪುರಾಣಗಳು ಮತ್ತು ಇತಿಹಾಸಗಳು ಇವೆಲ್ಲವೂ ಏಕಕಾಲದಲ್ಲಿಯೇ ಹುಟ್ಟಿ ಬರಲಿಲ್ಲ. ಒಂದೊಂದೂ ಒಂದೊಂದು ಕಾಲದ ಆಗತ್ಯತೆಗಳಿಗನುಗುಣವಾಗಿ ಹುಟ್ಟಿಬಂದವು ; ಆದುದರಿಂದ ಅವು ಒಂದಕ್ಕೊಂದು ವಿರೋಧವೋ ಎಂಬಂತೆ ಕಂಡುಬರುತ್ತವೆ. ಈ ಪುಸ್ತಕಗಳು ಸನಾತನ ತತ್ವಗಳನ್ನು ಹೊಸದಾಗಿ ಘೋಷಣೆ ಮಾಡುವುದಿಲ್ಲ; ಈ ಪುಸ್ತಕಗಳು ಬಂದ ಕಾಲದಲ್ಲಿ ತತ್ವಗಳು ಹೇಗೆ ಆಚರಣೆಯಲ್ಲಿದ್ದವೆಂದು ತೋರಿಸುತ್ತವೆ. ಒಂದುಕಾಲಕ್ಕೆ ಒಳ್ಳೆಯದೆನಿಸಿದ್ದ ಪದ್ಧತಿಯನ್ನು ಇನ್ನೊಂದು ಕಾಲದಲ್ಲಿಯೂ ಅಂಧರೀತಿಯಲ್ಲಿ ಅನುಸರಿಸುವವರು, 'ನಿರಾಶೆ ಎಂಬ ಕೆಸರಿ'ನಲ್ಲಿ ಸಿಕ್ಕಿಕೊಳ್ಳುವರು. ಒಂದಾನೊಂದು ಕಾಲದಲ್ಲಿ ಪ್ರಾಣಿವಧೆ ಆಚರಣೆಯಲ್ಲಿತ್ತೆಂಬ ಕಾರಣದಿಂದ ಅದನ್ನು ನಾವು ಇಂದು ಪುನಃ ಆರಂಭಿಸೋಣವೇ? ಒಂದಾನೊಂದು ಕಾಲದಲ್ಲಿ ನಾವು ಗೋಮಾಂಸ ಭಕ್ಷಕರಾಗಿದ್ದೆವೆಂಬ ಕಾರಣದಿಂದ ಇಂದೂ ಆ ರೀತಿ ಮಾಡೋಣವೆ? ಒಂದಾನೊಂದು ಕಾಲದಲ್ಲಿ ಕಳ್ಳರ ಕೈಕಾಲುಗಳನ್ನು ಕತ್ತರಿಸಿ ಹಾಕುತ್ತಿದ್ದೆವೆಂಬ ಕಾರಣದ ಮೇಲೆ, ಇಂದೂ ಆ ಕ್ರೂರ ಪದ್ಧತಿಯನ್ನು ಪುನಃ ಆಚರಣೆಗೆ ತರೋಣವೇ? ಶಿಶು ವಿವಾಹವನ್ನು ಆಚರಣೆಗೆ ತರೋಣವೇ? ಒಂದಾನೊಂದು ಕಾಲದಲ್ಲಿ ಜನಾಂಗದ ಒಂದು ಗುಂಪನ್ನು ತುಚ್ಛೀಕರಿಸಿ ದೂರ ಮಾಡಿದ್ದುಂಟು. ಇಂದೂ ಅವರ ವಂಶೀಕರನ್ನು ಜಾತಿಭ್ರಷ್ಟರೆಂದು ಅಂಕಿತಮಾಡೋಣವೇ?

ಹಿಂದೂಧರ್ಮವು ಜಡತ್ವವನ್ನು ಹೇಸುತ್ತದೆ. ಜ್ಞಾನವು ಅನಂತವಾದುದು ; ಹಾಗೆಯೇ ಸತ್ಯದ ವ್ಯಾಪ್ತಿಯೂ. ನಾವು ಪ್ರತಿದಿನವೂ ಆತ್ಮಶಕ್ತಿಯ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತೇವೆ; ಹಾಗೆಯೇ ಮುಂದುವರಿಯುತ್ತ ಹೋಗುತ್ತೇವೆ. ಹೊಸ ಅನುಭವ, ಹೊಸ ಕರ್ತವ್ಯವನ್ನು ಬೋಧಿಸುತ್ತದೆ. ಆದರೆ ಸತ್ಯಮಾತ್ರ ಏಕಮೇವ. ಎಂದಾದರೂ ಅದನ್ನು ಪೂರ್ಣವಾಗಿ ಅರಿತವರಾರು? ವೇದಗಳು ಸತ್ಯವನ್ನು ನಿರೂಪಿಸುತ್ತವೆ. ಅವು ಅನಂತ. ಆದರೆ, ಅವುಗಳನ್ನು ಪೂರ್ಣವಾಗಿ ಬಲ್ಲವರಾರು? ಇಂದು ವೇದಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುವವು ಸತ್ಯವೇದದ– ಜ್ಞಾನ ಭಂಡಾರದ– ಲಕ್ಷ ಪಾಲಿನಲ್ಲಿ ಒಂದು ಪಾಲಾಗಿಲ್ಲ. ನಮಗೆ ಲಬ್ಧವಾಗಿರುವ ಕೆಲವೇ ಗ್ರಂಥಗಳ ಪೂರ್ಣ ಅರ್ಥವಾದರೂ ಯಾರಿಗೆ ಗೊತ್ತು? ಈ

ಅನಂತ ತೊಡಕಿನಲ್ಲಿ ಒದ್ದಾಡುವುದಕ್ಕಿಂತ – ' ಯಥಾ ಪಿಂಡೇ ತಥಾ ಬ್ರಹ್ಮಾಂಡೇ ' – ಎಂಬ ಒಂದು ಸೂತ್ರವನ್ನು ತಿಳಿಯಬೇಕೆಂಬುದು ನಮ್ಮ ಋಷಿಗಳ ಆದೇಶ. ಬ್ರಹ್ಮಾಂಡವನ್ನು ಸೂಕ್ಷ್ಮವಾಗಿ ಅರಿಯಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಆತ್ಮನನ್ನೂ ಅರಿಯಲು ಸಾಧ್ಯವಿಲ್ಲ. ಆತ್ಮವನರಿತರೆ ಬ್ರಹ್ಮಾಂಡದ ಅರಿವೂ ಆದೀತು. ಈ ಆತ್ಮಜ್ಞಾನಕ್ಕೆ ನಿರಂತರ ಪ್ರಯತ್ನ ಬೇಕು. ಈ ನಿರಂತರ ಪ್ರಯತ್ನವು ಶುದ್ಧವಾಗಿರಬೇಕು. ಈ ಶುದ್ಧ ಪ್ರಯತ್ನಕ್ಕೆ ಶುದ್ಧ ಹೃದಯ ಬೇಕು. ಶುದ್ಧ ಹೃದಯವು ಯಮ* ನಿಯಮಗಳ ಅಭ್ಯಾಸದಿಂದ ಬರುತ್ತದೆ. ಯಮ ನಿಯಮಗಳೆಂದರೆ, ಪ್ರಧಾನವೂ, ನೈಮಿತ್ತಿಕವೂ ಆದ ಗುಣಗಳು. ಈ ಅಭ್ಯಾಸ ಭಗವಂತನ ಕೃಪೆ ಇಲ್ಲದೆ ಸಾಧ್ಯವಿಲ್ಲ. ಭಗವಂತನ ಕೃಪೆಗೆ ನಂಬಿಕೆಯೂ, ಭಕ್ತಿಯೂ ಆವಶ್ಯಕ. (ಯಂಗ್ ಇಂಡಿಯಾ : ೮-೪-೨೬)

ಸಮದರ್ಶನ

ಪರಿಶುದ್ಧ ಹಿಂದೂಧರ್ಮದಲ್ಲಿ ಬ್ರಾಹ್ಮಣ, ಇರುವೆ, ಆನೆ ಮತ್ತು ಶ್ವಪಚ ಎಲ್ಲ ಸಮಾನ. ನಮ್ಮ ತತ್ವಜ್ಞಾನ ಇಷ್ಟು ಹಿರಿದಾಗಿದ್ದೂ, ಅದರಂತೆ ನಾವು ನಡೆಯಲು ತಪ್ಪಿರುವುದರಿಂದ ಅದು ಕೊಳೆತು ದುರ್ನಾತ ಬಡಿಯುತ್ತಿದೆ. ಹಿಂದೂಧರ್ಮವು ಸಕಲ ಮಾನವರ ಭ್ರಾತೃತ್ವವನ್ನಷ್ಟೇ ಅಲ್ಲ, ಸಕಲ ಜೀವರಾಶಿಯ ಭ್ರಾತೃತ್ವವನ್ನೂ ಒತ್ತಾಯಮಾಡುತ್ತದೆ. ಅದೊಂದು ಮಹೋನ್ನತ ಕಲ್ಪನೆ, ಆದರೆ ಅದರಂತೆ ನಾವು ಆಚರಿಸಬೇಕು ಅಷ್ಟೆ. ಮಾನವ-ಮಾನವರ ನಡುವೆ ನಾವು ನಿಜವಾದ ಸಮಾನ ವರ್ತನೆಯನ್ನು


---

* (ಯಮಗಳೆಂದರೆ, ಪ್ರಧಾನ ಗುಣಗಳು. ಯೋಗಶಾಸ್ತ್ರದ ಪ್ರಕಾರ ಅವು ಈ ರೀತಿ ಇವೆ: ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ; ನಿಯಮಗಳೆಂದರೆ, ನೈಮಿತ್ತಿಕ ಗುಣಗಳು. ಯೋಗಶಾಸ್ತ್ರದ ಆಧಾರದಂತೆ, ಅವು ಈ ರೀತಿ ಇವೆ: ಶೌಚ, ಸಂತೋಷ, ತಪ, ಸ್ವಾಧ್ಯಾಯ, ಈಶ್ವರ ಪ್ರಣಿಧಾನ.)

ಪುನಃ ಸ್ಥಾಪಿಸಿದ ಗಳಿಗೆಯಲ್ಲೇ ಮಾನವನಿಗೂ ಇಡೀ ಸೃಷ್ಟಿಗೂ ನಡುವೆ ಅದನ್ನು ಸ್ಥಾಪಿಸಲು ಶಕ್ತರಾದೇವು. ಆ ದಿನ ಬಂದಾಗ, ಜಗತ್ತಿನಲ್ಲಿ ಶಾಂತಿಯೂ, ಮಾನವರೊಡನೆ ಸೌಮನಸ್ಯ ಸೌಹಾರ್ದಗಳೂ ಮೂಡಿಯಾವು.

(ಒಂದು ಸಂಭಾಷಣೆಯ ವರದಿಯಿಂದ)

(ಹರಿಜನ : ೨೮-೩-೩೬)



ಬಾಪೂ—ಠಕ್ಕರ್ ಬಾಪಾ

೧೯೩೩ರ ನವೆಂಬರ್ ತಿಂಗಳಲ್ಲಿ ಹರಿಜನ್ ಸಂಚಾರದ ಸಂದರ್ಭದಲ್ಲಿ

(ಸುಮತಿ ಮೊರಾರ್ಜಿ ಸಂಗ್ರಹದಿಂದ)

ಅಸ್ಪೃಶ್ಯತೆ

★

ಅಸ್ಪೃಶ್ಯತೆಯ ಮೂಲ

ಸಾಮಾಜಿಕ ಬಹಿಷ್ಕಾರ — ತಲೆಮಾರುಗಳಿಂದ ಬಂದ ಅಭಿಶಾಪ

ಅಸ್ಪೃಶ್ಯತೆಗೆ ನನ್ನ ಮನ ಒಪ್ಪಿಸಿಕೊಳ್ಳಲು ಎಂದಿಗೂ ಸಾಧ್ಯವಾಗಿಲ್ಲ. ನಾನು ಅದನ್ನು ಯಾವಾಗಲೂ ಅಸಹಜ ಬೆಳವಣಿಗೆಯೆಂದು ಭಾವಿಸಿದೇನೆ. ಅದು ಅನೇಕ ತಲೆಮಾರುಗಳಿಂದ ನಡೆದು ಬಂದಿರುವುದು ನಿಜವಾದರೂ, ಅದರಂತೆಯೇ ಇನ್ನೂ ಅನೇಕ ದುಷ್ಟ ಪದ್ಧತಿಗಳು ಇಂದಿಗೂ ನಡೆದು ಬಂದಿವೆ. ವ್ಯಭಿಚಾರಕ್ಕೋಸ್ಕರವಾಗಿ ಬಾಲಕಿಯರನ್ನು ಅಂಕಿತಮಾಡುವ ಪದ್ಧತಿ ಹಿಂದೂಧರ್ಮದ ಭಾಗವಾಗಿತ್ತೆಂದು ಯೋಚಿಸಿದಾಗ ನನಗೆ ನಾಚಿಕೆಯಾಗುತ್ತದೆ. ಆದರೂ ಭಾರತದ ಅನೇಕ ಭಾಗಗಳಲ್ಲಿರುವ ಹಿಂದೂಗಳಿಂದ ಇದು ಆಚರಿಸಲ್ಪಡುತ್ತಿದೆ. ಕಾಳಿಗೆ ಆಡುಗಳನ್ನು ಬಲಿಕೊಡುವುದು ಖಂಡಿತವಾಗಿಯೂ ಅಧರ್ಮವೆಂದು ನನ್ನ ಭಾವನೆ. ಅದನ್ನು ಹಿಂದೂಧರ್ಮದ ಅಂಶವೆಂದು ನಾ ಭಾವಿಸುವುದಿಲ್ಲ. ಹಿಂದೂಧರ್ಮವು ಯುಗಾಂತರಗಳಿಂದ ಬೆಳೆಯುತ್ತ ಬಂದಿದೆ. ಹಿಂದೂಧರ್ಮವೆಂಬ ಹೆಸರನ್ನು ವಿದೇಶೀಯರು ಹಿಂದೂಸ್ಥಾನದ ಜನತೆಯ ಧರ್ಮಕ್ಕೆ ಕೊಟ್ಟರು. ಒಂದು ಕಾಲಕ್ಕೆ ಧರ್ಮದ ಹೆಸರಿನಲ್ಲಿ ಪಶುಬಲಿ ಕೊಡುವ ಪದ್ಧತಿ ಇದ್ದುದು ನಿಸ್ಸಂಶಯ. ಆದರೆ, ಅದು ಧರ್ಮವಲ್ಲ — ಹಿಂದೂಧರ್ಮವಂತೂ ಅಲ್ಲವೇ ಅಲ್ಲ. ಹಾಗೆಯೇ ಗೋ ಸಂರಕ್ಷಣೆ ನಮ್ಮ ಪೂರ್ವಿಕರ ಪ್ರಧಾನ ನಿಷ್ಠೆಗಳಲ್ಲಿ ಒಂದು ಅಂಶವಾದಾಗ, ಯಾರು ಗೋಮಾಂಸ ಭಕ್ಷಣೆ ಮಾಡುವುದನ್ನು ಬಿಡದೆ ಇದ್ದರೋ, ಅವರು ಬಹಿಸ್ಕರಿಸಲ್ಪಟ್ಟರೆಂದು ನನಗೆ ತೋರುತ್ತದೆ. ಇದರ ಪರಿಣಾಮವಾದ ಸಾಮಾಜಿಕ ಹೋರಾಟ ಘೋರವಾಗಿ ನಡೆದಿರಬೇಕು. ಸಾಮಾಜಿಕ ಬಹಿಷ್ಕಾರವು ತಪ್ಪುಮಾಡಿದವರಿಗಷ್ಟೇ ಅಲ್ಲ; ಅದು ತಲೆಮಾರುಗಳಿಗೂ ಅಭಿಶಾಪವಾಗಿ ಬಂದಿತು. ಬಹುಶಃ ಆರಂಭದಲ್ಲಿ ಒಳ್ಳೆಯ ಉದ್ದೇಶದಿಂದ ಕೂಡಿದ್ದ ಈ ಪದ್ಧತಿ ವ್ಯವಹಾರದಲ್ಲಿ ಗಡುಸಾಯಿತು.

ಇದರ ಜೊತೆಗೆ, ಈ ಪದ್ಧತಿ ಪೂರ್ಣವಾಗಿ ಅಯುಕ್ತವಾಗಿದ್ದರೂ, ಅನ್ಯಾಯವಾಗಿದ್ದರೂ ಅದಕ್ಕೊಂದು ಶಾಶ್ವತ ಆಧಾರವನ್ನು ಕೊಡುವಂಥ ಶ್ಲೋಕಗಳು ಪವಿತ್ರ ಶಾಸ್ತ್ರಗ್ರಂಥಗಳೊಳಕ್ಕೆ ನುಸುಳಿ ಬಂದವು. ನನ್ನ ಈ ಸಿದ್ಧಾಂತ ನಿಜವಿರಲಿ, ತಪ್ಪಿರಲಿ, ಅಸ್ಪೃಶ್ಯತೆಯು ವಿಚಾರ, ದಯಾಭಾವ, ಮರುಕ ಅಥವಾ ಪ್ರೇಮಕ್ಕೆ ವಿರೋಧವಾದುದು. ಗೋಪೂಜೆಯನ್ನು ವಿಧಿಸಿರುವ ಧರ್ಮವು ಅತಿ ಕ್ರೂರವಾದ ಮಾನವ ಬಹಿಷ್ಕಾರ ಪದ್ಧತಿಗೆ ಬಹುತೇಕ ಸಹನೆಯನ್ನಾಗಲೀ, ಸಮರ್ಥನೆಯನ್ನಾಗಲೀ ನೀಡಲಾರದು. ದಳಿತ ವರ್ಗದವರನ್ನು ತ್ಯಜಿಸುವದಕ್ಕಿಂತಲೂ ನಾನೇ ಛಿದ್ರ ಛಿದ್ರ ಮಾಡಲ್ಪಟ್ಟರೆ ತೃಪ್ತನಾದೇನು. ಹಿಂದೂಗಳು ಅಸ್ಪೃಶ್ಯತೆಯ ಕಳಂಕವನ್ನು ಮುಂದುವರಿಸಿ ತಮ್ಮ ಧರ್ಮಕ್ಕೆ ಅಪಮಾನ ತರುವುದಾದರೆ ಅವರು ಸ್ವಾತಂತ್ರ್ಯಕ್ಕೆ ಅರ್ಹರಾಗುವುದುಹಾಗಿರಲಿ, ಅದನ್ನು ಹೊಂದಲೂ ಸಾಧ್ಯವಿಲ್ಲ. ನಾನು ಹಿಂದೂಧರ್ಮವನ್ನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವುದರಿಂದ, ಈ ಕಳಂಕವು ನನಗೆ ಅಸಹನೀಯ ಹೊರೆಯಾಗಿದೆ. ನಮ್ಮ ಜನಾಂಗದ ಐದನೇ ಒಂದು ಭಾಗಕ್ಕೆ ಸಮಾನ ವೇದಿಕೆಯ ಮೇಲೆ ಸಹಜೀವನದ ಹಕ್ಕನ್ನು ನಿರಾಕರಿಸಿ, ಭಗವಂತನ ನಿರಾಕರಣೆ ಮಾಡದಿರೋಣ. (ಯಂಗ್ ಇಂಡಿಯಾ: ೬-೧೦-೨೧)

ಎಲ್ಲ ಸಾಮಾಜಿಕ ವಿಕಾಸಫಲ ನಿರಾಕರಣೆ

ಸ್ಪರ್ಶನ, ಪಾನೀಯ, ಆಹಾರ ಮತ್ತು ವಿವಾಹಗಳು ಪ್ರಗತಿಸ್ವರೂಪವುಳ್ಳ ವೈಯಕ್ತಿಕ ಅಂಶಗಳು. ಆದರೆ, ಒಬ್ಬ ವ್ಯಕ್ತಿಯನ್ನು ನೀವು ಸ್ಪರ್ಶಿಸಲು ನಿರಾಕರಿಸಿದರೆ ಪೂರ್ಣವಾಗಿ ಆತನೊಂದಿಗೆ ಎಲ್ಲ ವ್ಯವಹಾರಗಳನ್ನೂ ನಿರಾಕರಿಸಿದಂತಾಗುತ್ತದೆ. ಇದರಿಂದ ಅವನಿಗೆ ಎಲ್ಲ ಸಾಮಾಜಿಕ ವಿಕಾಸಫಲ ನಿರಾಕರಣೆ ಮಾಡಿದಂತೆ. ಉದಾಹರಣೆಗೆ, ಸ್ಪೃಶ್ಯರು ಹರಿಕಥೆ, ಕೀರ್ತನೆ, ಇತ್ಯಾದಿಗಳಲ್ಲಿ ಭಾಗವಹಿಸಬಹುದು. ಅವರು ದೇವಾಲಯ ಪ್ರವೇಶವನ್ನೂ ಮಾಡಬಹುದು. ಇದರಿಂದ ಅವರಿಗೆ ಧರ್ಮ, ಆಚಾರಗಳು, ಕಲೆ, ಇವುಗಳ ಉಚಿತ ಶಿಕ್ಷಣ ದೊರಕುತ್ತದೆ. ದೇವಾಲಯದಲ್ಲಿ ಎಲ್ಲ

ಸ್ಪೃಶ್ಯರೂ ಪ್ರೇಮ, ಸೇವೆ, ಸಭ್ಯತೆಯ ಫಲ ಇವುಗಳನ್ನು ಪರಸ್ಪರ ಪಡೆಯುತ್ತಾರೆ. ಆದರೆ, ಅಸ್ಪೃಶ್ಯರಿಗೆ ಇವೆಲ್ಲ ತಾವಾಗಿಯೇ ಇಲ್ಲವಾಗಿವೆ. ಅನೇಕ ಕಡೆಗಳಲ್ಲಿ ಅವರು ಹಳ್ಳಿಗಳ ಆಚೆ ವಾಸಿಸಬೇಕಾಗಿರುವುದರಿಂದ ಅವರಿಗೆ ಜೀವ ಮತ್ತು ಆಸ್ತಿಯ ರಕ್ಷಣೆಯೂ ಇಲ್ಲವಾಗಿವೆ. ಸಾಮಾಜಿಕ ವೃತ್ತಿ ವಿಭಜನಾ ಪದ್ಧತಿಯಲ್ಲಿ ಅವರು ಸಮಾಜಕ್ಕೆ ಅತ್ಯಂತ ಅವಶ್ಯಕವಾದ ಕರ್ತವ್ಯಗಳನ್ನು ಮಾಡಿದರೂ ಎಲ್ಲ ಜಾತಿಗಳ ಸಾಮಾಜಿಕ ಜೀವನದ ಫಲ ಮಾತ್ರ ಅವರಿಗೆ ಇಲ್ಲವಾಗಿದೆ. ಅಸ್ಪೃಶ್ಯತೆಯು ದಳಿತ ವರ್ಗದವರನ್ನು ಹಿಂದೂಸಮಾಜದಲ್ಲಿ ಗಣನೆಗೆ ಬಾರದೆ ಅನಾದರ ಸ್ಥಿತಿಯಲ್ಲಿರುವಂತೆ ಮಾಡಿದೆ.

ನನ್ನ ಅಭಿಪ್ರಾಯಗಳ ಮೂಲ

ಅಸ್ಪೃಶ್ಯತೆಯು ಹಿಂದೂಧರ್ಮಕ್ಕೊಂದು ಮಹಾಕಳಂಕವೆಂದು ನಾ ಭಾವಿಸುತ್ತೇನೆ. ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ನನಗೆ ಉಂಟಾದ ಕಟು ಅನುಭವಗಳಿಂದ ಇದು ನನಗೆ ಮನವರಿಕೆಯಾಗಲಿಲ್ಲ; ನಾನೊಮ್ಮೆ ಅಜ್ಞೇಯತಾವಾದಿಯಾಗಿದ್ದೆನೆಂಬ ಕಾರಣದಿಂದಲೂ ಅಲ್ಲ. ಹಾಗೆಯೇ, ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ಓದಿ ಈ ಅಭಿಪ್ರಾಯಗಳನ್ನು ನಾ ಹೊಂದಿದೆನೆಂಬುದೂ — ಕೆಲವರ ಭಾವನೆಯಂತೆ— ಸರಿಯಲ್ಲ. ಈ ಅಭಿಪ್ರಾಯಗಳು, ನಾ ಬೈಬಲಿನಿಂದ ಪ್ರಭಾವಿತನಾಗುವುದಾಗಲೀ, ಅಥವಾ ಬೈಬಲ್ ಮತ್ತು ಬೈಬಲಿನ ಅನುಯಾಯಿಗಳ ಪರಿಚಯವಾಗುವುದಾಗಲೀ, ಇವುಗಳಿಗೆ ಎಷ್ಟೋ ಹಿಂದೆಯೇ ನನ್ನವಾಗಿದ್ದವು.

ನನಗಿನ್ನೂ ಹನ್ನೆರಡು ವರುಷ ವಯಸ್ಸೂ ಆಗದಿರುವಾಗಲೇ ಈ ಅಭಿಪ್ರಾಯ ನನಗೆ ಹೊಳೆದಿತ್ತು. ಉಕಾ ಎಂಬ ಹೆಸರಿನ ಒಬ್ಬ ಅಸ್ಪೃಶ್ಯ ಜಾಡಮಾಲಿ ಕಕ್ಕಸುಗಳನ್ನು ಶುದ್ಧಮಾಡಲು ನಮ್ಮ ಮನೆಗೆ ಬರುತ್ತಿದ್ದ. ಆತನನ್ನು ಮುಟ್ಟುವುದು ಏಕೆ ತಪ್ಪೆಂದೂ, ಏಕೆ ಮುಟ್ಟಬಾರದೆಂದೂ ನಮ್ಮ ತಾಯಿಯನ್ನು ಆಗಾಗ ಪ್ರಶ್ನೆಮಾಡುತ್ತಿದ್ದೆ. ನಾನೇನಾದರೂ ಉಕಾನನ್ನು ಆಕಸ್ಮಿಕವಾಗಿ ಮುಟ್ಟಿದರೆ, ನಾನು ಶುದ್ಧಿ ಸ್ನಾನ ಮಾಡಬೇಕಾಗಿತ್ತು.

ಇದನ್ನು ಮಾಡಲು ನಾನು ಸ್ವಾಭಾವಿಕವಾಗಿಯೇ ಒಪ್ಪಿಕೊಂಡರೂ, ಅಸ್ಪೃಶ್ಯತೆಗೆ ಧರ್ಮದ ಆಧಾರವಿಲ್ಲವೆಂದೂ ಹಾಗಿರಲು ಅಸಾಧ್ಯವೆಂದೂ ನಗುತ್ತಲೇ ಪ್ರತಿಭಟಿಸುತ್ತಿದ್ದೆ. ನಾನೊಬ್ಬ ಅತ್ಯಂತ ಕರ್ತವ್ಯಪರನೂ ಮತ್ತು ವಿಧೇಯನೂ ಆದ ಬಾಲಕನಾಗಿದ್ದೆ. ತಂದೆತಾಯಿಗಳ ಗೌರವಕ್ಕೆ ಉಚಿತರೀತಿಯಲ್ಲಿಯೇ ಅವರೊಂದಿಗೆ ಈ ವಿಷಯದಲ್ಲಿ ನಾ ಜಗಳವಾಡುತ್ತಿದ್ದೆ. ಉಕಾನೊಂದಿಗೆ ದೈಹಿಕ ಸ್ಪರ್ಶ ಪಾಪವೆಂದು ಭಾವಿಸುವುದು ಪೂರ್ಣ ತಪ್ಪೆಂದು ನಾ ಅವರಿಗೆ ಹೇಳಿದೆ.

ನಾ ಪಾಠಶಾಲೆಯಲ್ಲಿರುವಾಗ ಆಗಾಗ ಅಸ್ಪೃಶ್ಯರನ್ನು ಮುಟ್ಟಬೇಕಾಗಿತ್ತು. ಈ ವಿಷಯವನ್ನು ನನ್ನ ತಾಯಿಯೊಂದಿಗೆ ಎಂದಿಗೂ ಮುಚ್ಚುಮರೆ ಮಾಡದೆ ಹೇಳಿಬಿಡುತ್ತಿದ್ದೆ. ಈ ಅಪವಿತ್ರ ಸ್ಪರ್ಶದಿಂದ ಶುದ್ಧನಾಗಲು, ದಾರಿಯಲ್ಲಿ ಹೋಗುವ ಯಾರಾದರೂ ಮುಸ್ಲಿಮನನ್ನು ಮುಟ್ಟಿ, 'ಬಿಡತು ಎನ್ನುವುದು' ಸುಲಭೋಪಾಯವೆಂದು ನನ್ನ ತಾಯಿ ಹೇಳುತ್ತಿದ್ದರು. ನನ್ನ ತಾಯಿಯ ಮೇಲಿನ ಕೇವಲ ಪೂಜ್ಯ ಬುದ್ಧಿ ಮತ್ತು ಗೌರವಗಳಿಂದ ನಾನು ಎಷ್ಟೋಸಲ ಹಾಗೆ ಮಾಡಿದ್ದುಂಟು. ಆದರೆ, ಅದೊಂದು ಧಾರ್ಮಿಕ ಕರ್ತವ್ಯವೆಂದು ನಂಬಿ ಎಂದೂ ಹಾಗೆ ಮಾಡಲಿಲ್ಲ. ಕೆಲವು ಕಾಲದ ತರುವಾಯ ನಾವು ಪೋರಬಂದರಿಗೆ ಹೋದೆವು. ಅಲ್ಲಿ ನನಗೆ ಸಂಸ್ಕೃತದ ಪ್ರಥಮ ಪರಿಚಯವಾಯಿತು. ನಾನಿನ್ನೂ ಇಂಗ್ಲಿಷ್ ಶಾಲೆಯನ್ನು ಸೇರಿರಲಿಲ್ಲ. ನನ್ನ ಸಹೋದರನೂ ಮತ್ತು ನಾನೂ ಒಬ್ಬ ಬ್ರಾಹ್ಮಣನ ವಶಕ್ಕೆ ಕೊಡಲ್ಪಟ್ಟೆವು. ಆತ ನಮಗೆ ರಾಮರಕ್ಷಾ ಮತ್ತು ವಿಷ್ಣುಪೂಜೆ ಕಲಿಸಿದ. 'ಜಲೇ ವಿಷ್ಣುಃ' 'ಸ್ಥಲೇ ವಿಷ್ಣುಃ' (ದೇವರು ನೀರಿನಲ್ಲಿದಾನೆ; ದೇವರು ಭೂಮಿಯ ಮೇಲೆ ಇದಾನೆ) ಎಂಬ ವಾಕ್ಯಗಳು ನನ್ನ ನೆನಪಿನಿಂದ ಅಳಿದು ಹೋಗಿಲ್ಲ. ಮಾತೃ ಸಮಾನಳಾದ ಒಬ್ಬ ಅಜ್ಜಿ ನಮಗೆ ಸಮೀಪದಲ್ಲೇ ವಾಸಿಸುತ್ತಿದ್ದಳು. ಆ ಕಾಲದಲ್ಲಿ ನಾ ಬಹಳ ಅಂಜುಕುಳಿ. ಬೆಳಕು ಹೋಗಿ ಕತ್ತಲು ಬಂತೆಂದರೆ, ದೆವ್ವ, ಪಿಶಾಚಿಗಳ ದೃಶ್ಯ ನನ್ನ ಮುಂದೆ ನಿಲ್ಲುತ್ತಿತ್ತು. ಆ ವೃದ್ಧಮಾತೆ ನನಗೆ ಭಯವಾದ ಕೂಡಲೇ ಅದರ ನಿವಾರಣೆಗಾಗಿ ರಾ ಮ ರ ಕ್ಷಾ ಮಂತ್ರಗಳನ್ನು ಉಚ್ಚರಿಸಬೇಕೆಂದೂ ಇದರಿಂದ ಎಲ್ಲ ದುಷ್ಟಶಕ್ತಿಗಳೂ ಪಲಾಯನ ಮಾಡುತ್ತವೆಂದೂ ಸಲಹೆ ಮಾಡಿದಳು. ಹಾಗೆಯೇ ನಾ ಮಾಡಿದೆ; ನಾ ಯೋಚಿಸಿದಂತೆ, ಸ್ವಲ್ಪ ಒಳಿತೂ ಆಯಿತು.

ರಾಮರಕ್ಷಾ ಮಂತ್ರದಲ್ಲಿ ಅಸ್ಪೃಶ್ಯರನ್ನು ಮುಟ್ಟುವುದು ಪಾಪವೆಂಬ ಅರ್ಥ ಬರುವ ಪಾಠವಿತ್ತೆಂದು ನನಗೆ ನಂಬಲಶಕ್ಯವಾಗಿತ್ತು, ಅಂದು. ಅದರ ಅರ್ಥವನ್ನು ನಾನು ತಿಳಿದಿರಲಿಲ್ಲ; ಬಹಳ ಅಪೂರ್ಣವಾಗಿ ತಿಳಿದುಕೊಂಡಿದ್ದೆ. ಆದರೆ, ಪಿಶಾಚಿಗಳ ಭಯವನ್ನು ನಾಶಮಾಡುವ ಶಕ್ತಿಯುಳ್ಳ ರಾಮರಕ್ಷಾ, ಅಸ್ಪೃಶ್ಯರನ್ನು ಮುಟ್ಟಲು ಭಯವನ್ನು ಸಹಿಸಲಾರದೆಂದು ನನ್ನ ನಂಬಿಕೆಯಾಗಿತ್ತು.

ನಮ್ಮ ಕುಟುಂಬದಲ್ಲಿ ರಾಮಾಯಣವು ತಪ್ಪದೆ ಪಠಿಸಲ್ಪಡುತ್ತಿತ್ತು. ಲಾಧಾ ಮಹಾರಾಜ ಎಂಬ ಹೆಸರಿನ ಬ್ರಾಹ್ಮಣರೊಬ್ಬರು ಅದನ್ನು ಓದುತ್ತಿದ್ದರು. ಆತ ಕುಷ್ಠದಿಂದ ಪೀಡಿತರಾಗಿದ್ದರು. ತಪ್ಪದೆ ಮಾಡಿದ ರಾಮಾಯಣ ಪಠನದಿಂದ ತನ್ನ ಕುಷ್ಠ ನಿವಾರಣೆಯಾಗುವದೆಂದು ಆತ ನಂಬಿದ್ದರು. ನಿಜವಾಗಿಯೂ, ಅದು ಹಾಗೇ ವಾಸಿಯಾಯಿತು. ಇಂದು ಅಸ್ಪೃಶ್ಯರೆಂದು ಪರಿಗಣಿಸಲ್ಪಡುವವರಲ್ಲಿ ಒಬ್ಬಾತ ರಾಮನನ್ನು ತನ್ನ ದೋಣಿಯಲ್ಲಿ ಕೂಡಿಸಿಕೊಂಡು ದಾಟಿಸಿದನೆಂದು ಉಲ್ಲೇಖಿಸುವ ರಾಮಾಯಣ, ಯಾವ ಮಾನವನನ್ನೇ ಆಗಲಿ, ಅವನು ಪತಿತನೆಂಬ ಕಾರಣಕ್ಕಾಗಿ ಹೇಗೆ ಅಸ್ಪೃಶ್ಯನೆಂದು ಭಾವಿಸಬಲ್ಲದು ಎಂದು ನನ್ನಲ್ಲಿ ನಾನೇ ಯೋಚಿಸಿದೆ. 'ಪತಿತ ಪಾವನ' ಇತ್ಯಾದಿ ನಾಮಗಳಿಂದ ನಾವು ದೇವರನ್ನು ಸಂಬೋಧಿಸುವಾಗ, ಹಿಂದೂಧರ್ಮದಲ್ಲಿ ಜನಿಸಿದ ಯಾರನ್ನೇ ಆಗಲಿ ಪತಿತ-ಅಸ್ಪೃಶ್ಯ ಎಂದು ಕರೆಯುವುದು ಪಾಪಕರ ; ಹಾಗೆ ಮಾಡುವುದು ಪೈಶಾಚಿಕ. ಆದುದರಿಂದ ಅದೊಂದು ಮಹಾಪಾಪವೆಂದು ನಾ ಆಸರಿಲ್ಲದೆ ನುಡಿಯುತ್ತಿದೇನೆ. ಹನ್ನೆರಡನೆಯ ವಯಸ್ಸಿನಲ್ಲಿಯೇ ಈ ಭಾವನೆ ನನ್ನಲ್ಲಿ ಸ್ಥಿರ ರೂಪ ಹೊಂದಿದ ನಂಬಿಕೆಯಾಗಿತ್ತೆಂದು ನಟನೆ ಮಾಡಲಾರೆ. ಆದರೆ, ಆಗಲೂ ಅಸ್ಪೃಶ್ಯತೆ ಪಾಪವೆಂದು ನಾ ಭಾವಿಸಿದ್ದೆನೆಂದು ಮಾತ್ರ ಹೇಳಬಲ್ಲೆ. ಈ ಕಥೆಯನ್ನು ವೈಷ್ಣವರ ಮತ್ತು ಸಂಪ್ರದಾಯಸ್ಥರಾದ ಹಿಂದೂಗಳ ತಿಳಿವಳಿಕೆಗಾಗಿ ಹೇಳುತ್ತಿದೇನೆ.

(ಅಹಮುದಾಬಾದಿನ ದಳಿತವರ್ಗಗಳ ಸಮ್ಮೇಳನದ ಒಂದು ಭಾಷಣದಿಂದ) (ಯಂಗ್ ಇಂಡಿಯಾ : ೨೭-೪-೨೧)

ಹರಿಜನ

'ಅಸ್ಪೃಶ್ಯ'ರಿಗೆ – 'ಹರಿಜನ' ಎಂಬ ಹೆಸರು.

'ಅಸ್ಪೃಶ್ಯ'ರಿಗೆ ಉಪಯೋಗಿಸಲ್ಪಡುತ್ತಿರುವ 'ಅಂತ್ಯಜ' ಎಂಬ ಹೆಸರಿಗೆ ಬದಲಾಗಿ 'ಹರಿಜನ' (ದೇವರಿಗೆ ಪ್ರಿಯನಾದ ಮನುಷ್ಯ) ಎಂಬ ಹೆಸರನ್ನು ಒಬ್ಬ ಗೆಳೆಯರು ಮೊನ್ನೆ ನನಗೆ ಸೂಚಿಸಿದರು. ಬ್ರಾಹ್ಮಣ ಕುಲದಲ್ಲಿ ಜನಿಸಿ ಅಸ್ಪೃಶ್ಯರನ್ನು ತನ್ನ ಜನವೆಂದು ಕರೆದುಕೊಂಡು, ಬ್ರಾಹ್ಮಣ ಕುಲವನ್ನೇ ಎದುರಿಸಿದ ಮಹಾಸಂತ ನರಸಿಂಹ ಮೆಹಥಾರವರು ಆ ಶಬ್ದವನ್ನು ಉಪಯೋಗಿಸಿದರು. ಅಂಥ ಮಹಾಸಂತರಿಂದ ಉಪಯೋಗಿಸಲ್ಪಟ್ಟು ಪವಿತ್ರತೆಯನ್ನು ಪಡೆದ ಶಬ್ದವನ್ನು ಸ್ವೀಕರಿಸುವುದು ನನಗೆ ಬಹಳ ಹರ್ಷ. ನೀವು ಭಾವಿಸುವುದಕ್ಕಿಂತಲೂ ಆ ಶಬ್ದ ನನಗೆ ಹೆಚ್ಚು ಗಾಢವಾದ ಅರ್ಥವುಳ್ಳದು. ನಮ್ಮನ್ನು ಅಸ್ಪೃಶ್ಯನೊಂದಿಗೆ ಹೋಲಿಸಿಕೊಂಡರೆ, ಅವನು 'ಹರಿಜನ' — ದೇವರಿಗೆ ಪ್ರಿಯನಾದವನು ; ನಾವು ದುರ್ಜನರು. ಅಸ್ಪೃಶ್ಯನು, ನಾವು ಸುಖವಾಗಿಯೂ, ಶುಚಿಯಾಗಿಯೂ ಇರಲೆಂದು ಮೈಮುರಿದು ಕೈಕೆಸರಾಗಿ ದುಡಿದರೆ, ಅವನನ್ನು ತುಳಿಯಲು ನಾವು ಸಂತೋಷಿಸುತ್ತೇವೆ. ಈ ಅಸ್ಪೃಶ್ಯರ ಮೇಲೆ ಹಾಕುವ ಎಲ್ಲ ನ್ಯೂನತೆಗಳಿಗೂ ತಪ್ಪುಗಳಿಗೂ ನಾವೇ ಕಾರಣರು. ನಾವೇ ಹರಿಜನರಾಗಲು ಇನ್ನೂ ಅವಕಾಶವಿದೆ. ಆದರೆ, ಹರಿಜನರಿಗೂ ನಾವು ಎಸಗಿರುವ ಪಾಪಗಳಿಗೆ ಹೃತ್ಪೂರ್ವಕವಾಗಿ ಪಶ್ಚಾತ್ತಾಪಪಡುವುದರಿಂದ ಮಾತ್ರ ಇದು ಸಾಧ್ಯ.

(ಯಂಗ್ ಇಂಡಿಯಾ : ೬-೮-೩೧)

'ಹರಿಜನ' ಏಕೆ ?

'ಹರಿಜನ' - ಎಂದರೆ - (ದೇವರಿಗೆ ಪ್ರಿಯನಾದ ಮನುಷ್ಯ.) ಜಗತ್ತಿನ ಎಲ್ಲ ಧರ್ಮಗಳೂ ದೇವರನ್ನು ಪ್ರಧಾನವಾಗಿ ಅನಾಥ ಬಂಧು, ನಿಸ್ಸಹಾಯಕರ ಸಹಾಯಕ, ಅಶಕ್ತ ಪೋಷಕ, ಎಂಬುದಾಗಿ ವರ್ಣಿಸಿವೆ.

ಪ್ರಪಂಚದ ಇತರ ಭಾಗಗಳ ವಿಷಯ ಹೇಗೇ ಇರಲಿ, ಭಾರತದ ಹಿಂದೂಗಳಲ್ಲಿ ನಲವತ್ತು ದಶಲಕ್ಷಕ್ಕಿಂತ ಹೆಚ್ಚಾಗಿದ್ದು ಅಸ್ಪೃಶ್ಯರೆಂದು ವರ್ಗೀಕರಣ ಮಾಡಲ್ಪಟ್ಟಿರುವ ಜನರಿಗಿಂತ ಯಾರು ಹೆಚ್ಚು ಅನಾಥರಾಗಿಯೂ, ನಿಸ್ಸಹಾಯಕರಾಗಿಯೂ, ಅಶಕ್ತರಾಗಿಯೂ ಇದ್ದಾರು? ಯಾವುದಾದರೂ ಗುಂಪಿನ ಜನ ದೇವರಿಗೆ ಪ್ರಿಯವಾದ ಮನುಷ್ಯರೆಂದು ಕರೆಯಲ್ಪಡಲು ಯೋಗ್ಯರಾದರೆ, ಅವರು ನಿಜವಾಗಿಯೂ ಈ ನಿಸ್ಸಹಾಯಕ, ನಿರ್ಗತಿಕ, ಹೇಯವಾಗಿ ಪರಿಗಣಿಸಲ್ಪಟ್ಟ ಜನರಿಗಿಂತ ಇನ್ನಾರು ಇದ್ದಾರು? ಆದುದರಿಂದ ನವಜೀವನದ ಬರೆಹಗಳಲ್ಲಿ ಅಸ್ಪೃಶ್ಯರ ಸಂಜ್ಞಾರ್ಥವಾಗಿ ಹರಿಜನ ಶಬ್ದವನ್ನು ಯಾವಾಗಲೂ ಬಳಸಿದೇನೆ. ಈ ಹೆಸರಿನ ಬದಲಾವಣೆಯಿಂದಲೇ ಅವರ ಸ್ಥಾನಮಾನಗಳು ಬದಲಾವಣೆಯಾಗುತ್ತವೆಂದಲ್ಲ; ಇದರಿಂದ ಕೊನೆಯ ಪಕ್ಷ ಅವಮಾನಕ್ಕೆಡೆಯಾಗಿರುವ ಒಂದು ಶಬ್ದಪ್ರಯೋಗವಾದರೂ ನಿಂತೀತು. ಸವರ್ಣ ಹಿಂದೂಗಳು ಇಚ್ಛಾಪೂರ್ವಕವಾಗಿಯೂ, ಅಂತರಂಗ ನಿರ್ಣಯಪೂರ್ವಕವಾಗಿಯೂ, ಇಂದಿನ ಅಸ್ಪೃಶ್ಯತೆಯನ್ನು ತೊಡೆದುಹಾಕಿದರೆ, ನಾವೆಲ್ಲರೂ ಹರಿಜನರೇ ಆದೇವು. ಆಗ ಸವರ್ಣ ಹಿಂದೂಗಳು ದೇವರ ಕೃಪೆಗೆ ಪಾತ್ರರಾಗಿ, ಅವನಿಗೆ ನಿಜವಾಗಿಯೂ ಪ್ರಿಯರಾದ ಜನ ಎಂದು ಕರೆಯಲ್ಪಟ್ಟಾರೆಂದು ನನ್ನ ನಂಬಿಕೆ.

(ಯಂಗ್ ಇಂಡಿಯ: ೧೧-೨-೩೩)

ಅಸ್ಪೃಶ್ಯತೆಯೂ - ಹಿಂದೂಧರ್ಮವೂ

ಉಗ್ರ ಸ್ವರೂಪ ಹೊಂದಿರುವ ಅಸ್ಪೃಶ್ಯತೆಯು ನನಗೆ ಯಾವಾಗಲೂ ತುಂಬ ವ್ಯಥೆಯನ್ನುಂಟುಮಾಡಿದೆ; ಏಕೆಂದರೆ, ನಾನು ಹಿಂದೂಧರ್ಮದಲ್ಲಿ ಪೂರ್ಣ ಭರಿತನಾಗಿ ನಿಜ ಹಿಂದೂ ಎಂದೇ ಭಾವಿಸಿಕೊಂಡಿದೇನೆ. ನಾವು ಹಿಂದೂ ಶಾಸ್ತ್ರಗಳೆಂದು ಕರೆಯುವ ಗ್ರಂಥಗಳಲ್ಲಿ ಇಂದು ನಾವು ನಂಬಿ ಆಚರಿಸುತ್ತಿರುವ ಅಸ್ಪೃಶ್ಯತೆಗೆ ಯಾವ ಒಂದು ಆಧಾರವನ್ನೂ ಕಾಣದವನಾಗಿದೇನೆ. ಇನ್ನೂ ಅನೇಕ ಸಂದರ್ಭಗಳಲ್ಲಿ ನಾ ಪದೇ ಪದೇ ಹೇಳಿರುವಂತೆ, ಹಿಂದೂಧರ್ಮವು ಅಸ್ಪೃಶ್ಯತೆಯನ್ನು ಸಹಿಸೀತೆಂದು ಕಂಡು

ಬಂದರೆ, ಅದನ್ನೇ ತ್ಯಜಿಸಲು ನನಗೆ ಯಾವ ಅನುಮಾನವೂ ಇಲ್ಲ. ಧರ್ಮದ ಹೆಸರು ಸಾರ್ಥಕವಾಗಬೇಕಾದರೆ, ಅದು ನೀತಿಶಾಸ್ತ್ರ ಮತ್ತು ನೀತಿನಿಯಮಗಳ ಮೂಲ ತತ್ವಗಳಿಗೆ ವಿರೋಧವಾಗಿರಬಾರದು. ಆದರೆ, ಅಸ್ಪೃಶ್ಯತೆ ಹಿಂದೂಧರ್ಮದ ಅಂಶವಲ್ಲವೆಂದು ನಾ ನಂಬುವುದರಿಂದ, ಅದನ್ನು ಅವಲಂಬಿಸಿದೇನೆ, ಹಾಗೂ ಈ ಕರಾಳ ಅನ್ಯಾಯದ ವಿಷಯವಾಗಿ ದಿನದಿನಕ್ಕೂ ಹೆಚ್ಚಾಗಿ ತವಕಪಡುತ್ತಿದೇನೆ.

(ಯಂಗ್ ಇಂಡಿಯಾ : ೨೦-೧೦-೨೭)

ಶಾಸ್ತ್ರಗಳೂ - ಅಸ್ಪೃಶ್ಯತೆಯೂ

ಹಿಂದೂಧರ್ಮದಲ್ಲಿ ಅಸ್ಪೃಶ್ಯತೆ ಇರುವವರೆಗೂ ಆ ಧರ್ಮದ ವಿಷಯವಾಗಿಯೂ ಅದರ ಅನುಯಾಯಿಗಳ ವಿಷಯವಾಗಿಯೂ ಮುಸಲ್ಮಾನರು ಗೌರವ ಬುದ್ಧಿಯನ್ನು ಹೊಂದಲು ಸಾಧ್ಯವಾಗುವುದಿಲ್ಲವೆಂದು ಒಬ್ಬ ವಿಚಾರಪರ ಮುಸಲ್ಮಾನ್ ಒಮ್ಮೆ ನನ್ನೊಂದಿಗೆ ಹೇಳಿದರು. ಶಾಸ್ತ್ರಗಳಲ್ಲಿ 'ಅಸ್ಪೃಶ್ಯ' ಸಮಾಜವೆಂಬುದನ್ನು ಉಲ್ಲೇಖಿಸಿಲ್ಲವೆಂದು ಎಷ್ಟೋಸಲ ನಾ ಹೇಳಿದೇನೆ. ನೇಯ್ಗೆಯವನನ್ನೂ, ಜಾಡಮಾಲಿಯನ್ನೂ ಶಾಸ್ತ್ರಗಳು ಅಸ್ಪೃಶ್ಯನೆಂದು ಪರಿಗಣಿಸಿಲ್ಲ. ನಾನು ನೇಕಾರ ಮತ್ತು ಜಾಡಮಾಲಿ ಎರಡೂ ಆಗಿದೇನೆ. ನಾನು ಚಿಕ್ಕವನಾಗಿದ್ದಾಗ ನನ್ನನ್ನು ಶುದ್ಧ ಮಾಡುವಷ್ಟು ಕಾಲದಲ್ಲಿ ನನ್ನ ತಾಯಿಯು ನಿಜವಾಗಿ ಜಾಡಮಾಲಿಯೇ ಆಗಿರುತ್ತಿದ್ದಳು. ಈ ಕಾರಣದಿಂದ ಆಕೆ ಅಸ್ಪೃಶ್ಯಳೆನಿಸಿಕೊಳ್ಳಲಿಲ್ಲ. ಹೀಗಿರುವಾಗ, ಅದೇ ರೀತಿ ಅತ್ಯಂತ ಆವಶ್ಯಕ ಕರ್ಮಮಾಡುವ ಭಂಗಿ ಮಾತ್ರ ಹೇಗೆ ಅಸ್ಪೃಶ್ಯನಾದಾನು ? ಸಮಸ್ತ ಶಾಸ್ತ್ರಗಳು ನನಗೆ ವಿರೋಧವಾದರೂ, ಅವೆಲ್ಲವೂ ಅಸ್ಪೃಶ್ಯತೆಯನ್ನು ಹಿಂದೂಧರ್ಮದ ಅಂಶವೆಂದು ಹೇಳುವುದಾದರೆ, ಅದು ತಪ್ಪೆಂದು ನಾ ನಿಡುಘೋಷ ಮಾಡುತ್ತೇನೆ.

(ರಾಜಕೋಟೆಯ ಪ್ರಜಾಪ್ರತಿನಿಧಿ ಸಭೆಯ ಮುಂದೆ ಮಾಡಿದ ಒಂದು ಭಾಷಣದಿಂದ.) (ಯಂಗ್ ಇಂಡಿಯಾ : ೨೬-೨-೨೫)

ಹಿಂದೂಧರ್ಮದ ಆತ್ಮ

ಅಸ್ಪೃಶ್ಯತೆಗೆ ಧರ್ಮದ ಆಧಾರವಿಲ್ಲ; ಅದು ಸೈತಾನನ ತಂತ್ರ. ಪಿಶಾಚಿಯು ಯಾವಾಗಲೂ ಶಾಸ್ತ್ರಾಧಾರವನ್ನೇ ಉಲ್ಲೇಖಿಸುತ್ತದೆ. ಆದರೆ, ಶಾಸ್ತ್ರಗಳು ವಿಚಾರ ಮತ್ತು ಸತ್ಯಗಳನ್ನು ಮೀರಿದುವಲ್ಲ. ವಿಚಾರಶುದ್ಧಿ, ಸತ್ಯ-ಪ್ರಕಾಶನ, ಇವು ಅವುಗಳ ಉದ್ದೇಶ. ವೇದಗಳು ಯಜ್ಞವನ್ನು ಪ್ರತಿಪಾದಿಸಿವೆ, ಇಲ್ಲವೆ ಸಹಿಸಿವೆ, ಇಲ್ಲವೆ ಪ್ರಮಾಣಪೂರ್ವಕವಾಗಿ ಹೇಳಿವೆ, ಎಂಬ ಕಾರಣದಿಂದ ನಾ ಒಂದು ನಿಷ್ಕಳಂಕ ಅಶ್ವವನ್ನು ಆಹುತಿ ಕೊಡಲಾರೆ. ವೇದಗಳು ದೈವೀಮೂಲವುಳ್ಳವು, ಮತ್ತು ಅಲಿಖಿತ ಎಂದು ನನ್ನ ಭಾವ. "ಶಬ್ದಾರ್ಥ ಕೊಲ್ಲುತ್ತದೆ"; ಭಾವಾರ್ಥವು ಬೆಳಕನ್ನು ನೀಡುತ್ತದೆ. ವೇದಗಳ ಭಾವಾರ್ಥವೆಂದರೆ, ಪರಿಶುದ್ಧತೆ, ಸತ್ಯ, ನಿಷ್ಕಾಪಟ್ಯ, ಪಾವಿತ್ರ್ಯ ನಮ್ರತೆ, ಸರಳತೆ, ಕ್ಷಮೆ ಮತ್ತು ದೈವಭಕ್ತಿ; ಅಲ್ಲದೆ, ಯಾವವು ಪುರುಷರನ್ನೂ ಮಹಿಳೆಯರನ್ನೂ ಘನವಂತರನ್ನಾಗಿಯೂ ಮತ್ತು ಧೈರ್ಯಶಾಲಿಗಳನ್ನಾಗಿಯೂ ಮಾಡುವವೋ, ಅವು. ಯಾವ ದೂರನ್ನೂ ಕೊಡದೆ ದುಡಿಯುವ ರಾಷ್ಟ್ರಾದ್ಯಂತವಿರುವ ಭಂಗಿಗಳನ್ನು ನಾಯಿಗಳಿಗಿಂತಲೂ ಕಡೆಯಾಗಿ ಕಂಡು, ತುಚ್ಛೀಕರಿಸಿ, ಉಗುಳುವುದರಲ್ಲಿ, ಧೈರ್ಯವಾಗಲೀ, ಘನತೆಯಾಗಲೀ ಇಲ್ಲ. (ಯಂಗ್ ಇಂಡಿಯಾ : ೧೯-೧-೨೧)

ನಾನು ಯಾವಾಗಲೂ ಸನಾತನಿ ಹಿಂದೂ ಎಂದು ಕರೆದುಕೊಂಡಿದೇನೆ. ನಾನು ಸಂಸ್ಕೃತದಲ್ಲಿ ಅಪಾರ ಪರಿಣತನಲ್ಲ. ವೇದಗಳನ್ನೂ ಉಪನಿಷತ್ತುಗಳನ್ನೂ ಅವುಗಳ ಭಾಷಾಂತರಗಳ ಮೂಲಕ ಮಾತ್ರ ಓದಿದೇನೆ. ಇದರಿಂದ, ಸ್ವಾಭಾವಿಕವಾಗಿಯೇ ಅವುಗಳ ನನ್ನ ವ್ಯಾಸಂಗ ಪಾಂಡಿತ್ಯ ಪೂರ್ಣವಾದುದಲ್ಲ. ಅವುಗಳ ನನ್ನ ಜ್ಞಾನ ಗಾಢವಲ್ಲದಿದ್ದರೂ, ಹಿಂದೂ ಆಗಿ ವ್ಯಾಸಂಗ ಮಾಡಲೇಬೇಕಾಗಿರುವಂತೆ ವ್ಯಾಸಂಗ ಮಾಡಿ, ಅವುಗಳ ನಿಜ ಆತ್ಮವನ್ನು ಗ್ರಹಿಸಿದೇನೆಂದು ಹೇಳಬಲ್ಲೆ.

ಹಿಂದೂಧರ್ಮವು ಅಸ್ಪೃಶ್ಯತೆಯನ್ನು ಪಾಪವೆಂಬುದಾಗಿ ಪರಿಗಣಿಸುವುದಿಲ್ಲವೆಂಬುದು ನಿಜ. ಶಾಸ್ತ್ರಾರ್ಥಗಳ ಬಗೆಗೆ ವ್ಯಾಖ್ಯಾನ ಮಾಡಿ ವಾದಭೂಮಿಗೆ ನಾನಿಳಿಯಲು ಇಚ್ಛಿಸುವುದಿಲ್ಲ. ಭಾಗವತದಿಂದಲೋ, ಮನು-

ಮುಖಂಡ ತನ್ನ ಸ್ಥಾನ ಭದ್ರವಾದುದರ ಪರಿಣಾಮವಾಗಿ, ಕೆಳವರ್ಗಗಳವರ ಸ್ಥಾನವನ್ನು ಉತ್ತಮಪಡಿಸಬೇಕೆಂಬ ಅಂಶವಷ್ಟರಿಂದಲೇ ತೃಪ್ತರಾಗದೆ ಜನತೆಗೆ ಧಾರ್ಮಿಕ ವಿಷಯಗಳ ಮೇಲೂ ಹೇಳತೊಡಗಿದಾರೆ. ತಾವು ಹಿಂದೂಧರ್ಮ ವ್ಯಾಸಂಗದಲ್ಲಿ ಪರಿಣತರಲ್ಲವೆಂದೂ, ತಮ್ಮ ಜ್ಞಾನ ಪ್ರಧಾನ ವಾಗಿ ಭಾಷಾಂತರಗಳನ್ನು ಓದಿ ಬಂದುದೆಂದೂ ಕೇವಲ ಕೆಲವು ದಿವಸಗಳ ಹಿಂದೆ ಅವರೇ ಹೇಳಿಕೊಂಡರು. ಈಗ ಹೇಗೋ ಧೈರ್ಯ ಕೂಡಿಸಿಕೊಂಡು, ತಾವು ಸನಾತನೀ ಹಿಂದೂ ಎಂಬುದಾಗಿ ಕರೆದುಕೊಂಡು, ತಮ್ಮ ಸಭಿಕರನ್ನು ಕುರಿತು ಅಸ್ಪೃಶ್ಯತೆಗೆ ಯಾವ ಶಾಸ್ತ್ರಾಧಾರವೂ ಇಲ್ಲವೆಂಬ ಭರವಸೆ ಇತ್ತಿದಾರೆ. ಗಾಂಧೀಯವರಂಥ ಸ್ಥಾನಮಾನದಲ್ಲಿರುವವರು ಯಾವುದಾದರೂ ಹೇಳಿಕೆಗಳನ್ನು ಕೊಡಬೇಕಾದಾಗ ಎಷ್ಟು ಎಚ್ಚರಿಕೆಯಿಂದಿರಬೇಕೆಂಬುದನ್ನು ಸಾಮಾನ್ಯವಾಗಿ ಯಾರಾದರೂ ನಿರೀಕ್ಷಿಸುವರು. ಆದುದರಿಂದ ಯಾವೊಂದು ಧರ್ಮಶಾಸ್ತ್ರವನ್ನೂ ವ್ಯಾಸಂಗ ಮಾಡವೆ ಇಂಥ ತಡೆಬಡೆ ಇಲ್ಲದ ಹೇಳಿಕೆ ಗಳನ್ನು ಕೊಟ್ಟು ಅವರು ವಿವಾದಕ್ಕೆ ಗುರಿಯಾಗುವುದು ಬಹಳ ವ್ಯಸನಕರ ವಾದುದು. ಅವರು ಆ ರೀತಿ ವ್ಯಾಸಂಗ ಮಾಡಿದ್ದರೆ, ತುಂಬ ಅಪಾರ್ಥ ಕ್ಕೊಳಗಾಗಿರುವ 'ಅಸ್ಪೃಶ್ಯತೆ'ಯ ವಿಷಯದಲ್ಲಿ ಅನೇಕ ಆಧಾರಗಳು ದೊರೆಯುತ್ತಿದ್ದವು. ಅವರು, ಕೆಳವರ್ಗಗಳವರಿಗೆ ಲೌಕಿಕ ಜೀವನದ ಸೌಲಭ್ಯಗಳನ್ನು ಕಲ್ಪಿಸಿಕೊಡುವ ವಿಷಯವಷ್ಟಕ್ಕೂ ಮತ್ತು ಮೇಲಿನ ವರ್ಗಗಳವರಲ್ಲಿರುವ ಅಹಂಭಾವವನ್ನು ತೊಡೆದುಹಾಕುವುದಕ್ಕೂ ನಿರತ ರಾದರೆ, ಶಾಸ್ತ್ರಗಳಲ್ಲಿ ಇನ್ನೂ ನಂಬಿಕೆ ಇಟ್ಟುಕೊಂಡಿರುವ ಹಿಂದೂಗಳು ಅವರೊಡನೆ ಸಹಕರಿಸಲು ಪೂರ್ಣ ಸಮ್ಮತಿಸಿಯಾರು. ಆದರೆ, ಅವರು ಧಾರ್ಮಿಕ ವಿಷಯಗಳಲ್ಲಿ ಪ್ರಾಚೀನ ಮನು, ಯಾಜ್ಞವಲ್ಕ್ಯ, ಪರಾಶರ ಮೊದಲಾದ ಶಾಸ್ತ್ರಕಾರರಿಗಿಂತಲೂ ತಾವು ಹಿರಿಯ ಆಧಾರವೆಂದು ಭಾವಿಸಿ ಕೊಂಡರೆ, ಗಾಂಧೀಯವರನ್ನು ಆ ರೀತಿ ಪರಿಗಣಿಸಲು ಅಸಾಧ್ಯವೇ ಆದೀತು. ಈ ಪ್ರಶ್ನೆಗೆ ಸಂಬಂಧಿಸಿದಂತೆ ಎಲ್ಲ ಆಧಾರಗಳನ್ನೂ ಇಲ್ಲಿ ಉದಹರಿಸುವುದು ಅಸಾಧ್ಯ. ಇಲ್ಲಿ ಕೆಲವನ್ನು ಮಾತ್ರ ಉಲ್ಲೇಖಿಸಿ, ಇನ್ನು ಹೆಚ್ಚು ಆಸಕ್ತಿ ಇರುವ ನಿಮ್ಮ ಪಾಠಕರು, ಇದೇ ಬಗೆಯ ಅನೇಕ ನಿದರ್ಶನಗಳಿಂದ ತುಂಬಿ ರುವ ಶಾಸ್ತ್ರಗ್ರಂಥಗಳನ್ನು ವ್ಯಾಸಂಗ ಮಾಡಬೇಕೆಂದು ಪ್ರಾರ್ಥಿಸುತ್ತೇನೆ:

"ಚಂಡಾಲ, ಬಹಿಷ್ಠೆಯಾವ ಹೆಣ್ಣು, ಜಾತಿಭ್ರಷ್ಟನಾದವನು, ಪ್ರಸ

ವಿಸಿದ ಹೆಣ್ಣು, ಶವವನ್ನು ಅಥವಾ ಅದನ್ನು ಮುಟ್ಟಿದ ವ್ಯಕ್ತಿ, ಇವರನ್ನು ಸ್ಪರ್ಶಿಸಿದವರೆಲ್ಲ ಸ್ನಾನಮಾಡಿ ಶುದ್ಧರಾಗಬೇಕು."

(ಮನು-೫-೮೫ ; ಗೌತಮ ಧರ್ಮಶಾಸ್ತ್ರ ೧೪-೨೯)

"ಚಂಡಾಲನನ್ನೂ ಮತ್ತು ಜಾತಿಭ್ರಷ್ಟನನ್ನೂ ದೂರದಲ್ಲಿಡಬೇಕು. ಆ ದೂರ ಒಂದು ಗೋವಿನ ಬಾಲದಳತೆಯೊಳಗಿದ್ದರೆ, ಸಚೇಲ ಸ್ನಾನ ಮಾಡಬೇಕು." —ವ್ಯಾಘ್ರಪದ.

"ಜಾತಿಭ್ರಷ್ಟ, ಬಹಿಷ್ಠೆಯಾದ ಹೆಣ್ಣು, ಪ್ರಸವಿಸಿದ ಹೆಣ್ಣು, ಮತ್ತು ಚಂಡಾಲ ಇವರುಗಳು ಸಾಮಾನ್ಯವಾಗಿ ಒಂದಾರಿನ ಜಮಾನು ದೂರ, ಎರಡಾರಿನ ಜಮಾನು ದೂರ, ಮೂರಾರಿನ ಜಮಾನು ದೂರ, ನಾಲ್ಕಾರಿನ ಜಮಾನು ದೂರ, ಈ ರೀತಿ ಇರಬೇಕು." —ಬೃಹಸ್ಪತಿ.

"ಚಂಡಾಲ ಸ್ಪರ್ಶ ಮಾಡಿದವನು ಸ್ನಾನ ಮಾಡಬೇಕು."

—ಬೌಧಾಯನ.

ಯಾರು ತನ್ನ ದುರ್ನಡತೆಯನ್ನು ಬಿಡದೆ ಜಾತಿಯಿಂದ ಪತನನಾಗಿರುವನೋ ಅಂಥವನನ್ನು 'ಜಾತಿಭ್ರಷ್ಟ' ಎನ್ನುವುದು ವಾಡಿಕೆ. ಅಂಥವನೂ 'ಅಸ್ಪೃಶ್ಯನೇ'. ಜಾತಿಪತನನಾದ ಮನುಷ್ಯನಷ್ಟೇ ಅಲ್ಲದೆ ಕೆಲವು ಜಾತಿಗಳಿಗೂ ಈ ಶಬ್ದ ಅನ್ವಯಿಸುತ್ತದೆ. "ಉತ್ತಮ ವರ್ಣದ ಸ್ತ್ರೀಯಲ್ಲಿ ಶೂದ್ರನಿಗೆ ಹುಟ್ಟಿದ ಸಂತಾನ ಜಾತಿಭ್ರಷ್ಟವಾಗುತ್ತದೆ; ಅವರಲ್ಲಿ ಚಂಡಾಲನೇ ಮಹಾ ಪಾಪಿಷ್ಠ." (ಗೌತಮ, ೪-೨೭-೨೮)

ಈ ಸಂತಾನದ ಜಾತಿಗಳು ಯಾವುವು ಮತ್ತು ಅವುಗಳ ಕರ್ಮಗಳೇನು, ಇವುಗಳ ವಿವರಗಳನ್ನು ಮನುಸ್ಮೃತಿಯ ಹತ್ತನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಸ್ಪೃಶ್ಯನನ್ನು ಮುಟ್ಟಿದವರು, ಅವರೊಂದಿಗೆ ಸಂಭಾಷಣೆ ಮಾಡಿದವರು, ಅವರು ಮುಟ್ಟಿದ, ಅವರಿಗೆ ಸೇರಿದ, ಅಥವಾ ಅವರಿಂದ ಅಗೆಯಲ್ಪಟ್ಟ ಕೆರೆ ಅಥವಾ ಭಾವಿಗಳಿಂದ ನೀರನ್ನು ತೆಗೆದುಕೊಳ್ಳುವವರು, ಅವರು ದರ್ಶಿಸಿದ, ಮುಟ್ಟಿದ ಅಥವಾ ಹೊಂದಿದ್ದ ಆಹಾರವನ್ನು ತಿನ್ನು

ವವರು ಯಾವ ಯಾವ ಶುದ್ಧಿ ಸಂಸ್ಕಾರಗಳನ್ನು ಮಾಡಿಕೊಳ್ಳಬೇಕೆಂಬ ವಿವರಗಳು ಸ್ಮೃತಿಗಳಲ್ಲಿ ಹೇಳಲ್ಪಟ್ಟಿವೆ. ಈ ವಿಧಿಗಳನ್ನು ಪರಿಶೀಲಿಸಿದರೆ, ಮತ್ತು ಇವುಗಳ ಜೊತೆಗೆ ಬಹಿಷ್ಠೆಯಾದ ಹೆಣ್ಣನ್ನೂ, ಹಾಗೂ, ಪ್ರಸವಿಸಿದ ಹೆಣ್ಣನ್ನೂ (ತನ್ನ ಸ್ವಂತ ಪತ್ನಿಯೇ ಆದರೂ) 'ಅಸ್ಪೃಶ್ಯರ' ಗುಂಪಿನಲ್ಲಿ ಸೇರಿಸಿರುವುದನ್ನು ನೋಡಿದರೆ, ಶಾಸ್ತ್ರಗಳು ಈ ನಿಯಮಗಳನ್ನು ಕೇವಲ ಆಧ್ಯಾತ್ಮಿಕ ಪರಿಶುದ್ಧಿಗೋಸುಗವೇ ಹೊರತು ವ್ಯಕ್ತಿಗತ ಅಹಂಭಾವ ಮತ್ತು ಮೇಲುತನವನ್ನು ತೋರಿಸುವುದಕ್ಕಲ್ಲವೆಂದು ಗೊತ್ತಾಗುತ್ತದೆ. ಹಿಂದೂ ಗಳು ತಮ್ಮ ನಡೆವಳಿಯನ್ನು ಸರಿಪಡಿಸಿಕೊಳ್ಳುವುದಕ್ಕೆ ಶಾಸ್ತ್ರಗಳು ಎಲ್ಲಿಯ ತನಕ ಆಧ್ಯಾತ್ಮಿಕ ಮಾರ್ಗದರ್ಶಕಗಳೆಂದು ಪರಿಗಣಿಸಲ್ಪಟ್ಟಿರುವುವೋ ಅಲ್ಲಿಯವರೆಗೂ ಅಸ್ಪೃಶ್ಯತೆಯನ್ನು ಧಾರ್ಮಿಕ ಪ್ರಶ್ನೆಯಲ್ಲದೆ ಸಾಮಾಜಿಕ ಪ್ರಶ್ನೆ ಎಂಬುದಾಗಿ ಪರಿಗಣಿಸುವುದು ಶುದ್ಧ ಅಜ್ಞಾನವೆನಿಸೀತು. ಶಾಸ್ತ್ರ ಗಳಲ್ಲಿ ಏನಿವೆ, ಏನಿಲ್ಲ, ಎಂಬುದನ್ನು ಕುರಿತು ಘೋಷಿಸುವುದಕ್ಕೆ ಮುಂಚೆ, ಶ್ರೀ ಗಾಂಧಿಯವರು ಶಾಸ್ತ್ರಗಳ ಅಧ್ಯಯನ ಮಾಡಬೇಕಾದ ತೊಂದರೆ ತೆಗೆದುಕೊಳ್ಳಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ.

ಅಸ್ಪೃಶ್ಯತೆಯು ಅಶಾಸ್ತ್ರೀಯ ಎಂಬುದನ್ನು ತೋರಿಸುವುದಕ್ಕೆ ಶ್ರೀ ಗಾಂಧಿಯವರು ರಾಮ ಮತ್ತು ಗುಹ ಇವರ ಸಖ್ಯದ ನಿದರ್ಶನವನ್ನು ಕೊಟ್ಟಿರುವ ನೆನಪು ನನಗಿದೆ. ಅವರು ರಾಮಾಯಣವನ್ನು ಓದಿದ್ದರೆ ಗುಹ ಜಾತಿಯಲ್ಲಿ ಒಬ್ಬ ನಿಷಾದ (ಅನುಲೋಮ ಜಾತಿಯವನು) ನಾಗಿದ್ದನೇ ಹೊರತು ಅಸ್ಪೃಶ್ಯನಾಗಿರಲಿಲ್ಲವೆಂದು ಗೋಚರವಾಗುತ್ತಿತ್ತು.

ತಿನ್ನೆವೆಲ್ಲಿ. ಆರ್. ಕೃಷ್ಣಸ್ವಾಮಿ ಅಯ್ಯರ್.

ಯಂಗ್ ಇಂಡಿಯಾದ ವಾಚಕರಿಗೆ ವಿಷಯದ ಇನ್ನೊಂದು ಭಾಗವೂ ಪರಿಚಯವಾಗಲೆಂಬ ಉದ್ದೇಶದಿಂದ ಈ ಹಿಂದಿನ ವಿಷಯವನ್ನು ಸಂತೋಷ ವಾಗಿ ಪ್ರಕಟಿಸುತ್ತೇನೆ. ಶ್ರೀ ಐಯ್ಯರ್ ಅವರು ವಿದ್ವಾಂಸ ವಕೀಲರು; ತಮ್ಮ ಪತ್ರದಲ್ಲಿ ಅವರು ನನ್ನ ಅಭಿಪ್ರಾಯಗಳ ಬಗೆಗೆ ವ್ಯಕ್ತಪಡಿಸಿರುವುದ ಕ್ಕಿಂತ ಉತ್ತಮ ತಿಳಿವಳಿಕೆಯನ್ನು ಯಾರಾದರೂ ನಿರೀಕ್ಷಿಸಿಯಾರು. ಮದ ರಾಸ್ ಪ್ರಾಂತದ ನನ್ನ ಭಾಷಣಗಳಲ್ಲೆಲ್ಲ ಅಸ್ಪೃಶ್ಯರ ವಿಷಯಕ್ಕಿರುವ ಕಾರಣ ರಹಿತ ಕ್ರೂರ ಪೂರ್ವಾಗ್ರಹದ ವಿಷಯಕ್ಕೆ ಪ್ರಾಧಾನ್ಯತೆ ಕೊಟ್ಟು ಮಾತ

ನಾಡಿದೇನೆ. ನಮ್ಮ ತಾಯಂದಿರೂ, ಸಹೋದರಿಯರೂ ಅಸ್ಪೃಶ್ಯರಾಗಿರುವಾಗ ಅವರನ್ನು ಯಾವ ರೀತಿ ಕಾಣುತ್ತೇವೆಯೋ ಅದೇ ರೀತಿಯಲ್ಲಿ ಅಸ್ಪೃಶ್ಯ ಪಂಚಮನನ್ನೂ ಕಾಣುತ್ತೇವೆಯೇ ? ಶಾಸ್ತ್ರ ಸಾಹಿತ್ಯ ಜ್ಞಾನದ ಬಗೆಗೆ ನನ್ನ ಅಜ್ಞಾನವನ್ನು ಈಗಲೂ ಒಪ್ಪಿಕೊಳ್ಳುತ್ತೇನೆ; ಆದರೂ ಹಿಂದೂಧರ್ಮದ ರಹಸ್ಯವನ್ನು ಅರಿತಿರುವೆನೆಂದು ಹೇಳಿಕೊಳ್ಳುತ್ತೇನೆ. ಈವರೆಗೂ ನಾವು ಮುಂದುವರಿಸಿಕೊಂಡು ಬಂದಿರುವ ರೀತಿಯಲ್ಲಿಯೇ ಅಸ್ಪೃಶ್ಯತೆಯನ್ನು ನಾವು ಮುಂದುವರಿಸಿಕೊಂಡು ಹೋಗುವುದಾದರೆ ಅದು ಸ್ಮೃತಿಗಳ ಆಧಾರರಹಿತ ದುರುಪಯೋಗವೆಂದೂ, ಹಿಂದೂಧರ್ಮದ ಆಧಾರವೆನಿಸಿದ ಪ್ರೇಮತತ್ವನಿರಾಕರಣೆ ಎಂದೂ ಪೂರ್ಣ ನಮ್ರತೆಯಿಂದಲೂ ಆದರೆ, ನನ್ನ ಸರ್ವಶಕ್ತಿಗಳಿಂದಲೂ ಹೇಳುವ ಸಾಹಸ ಮಾಡುತ್ತೇನೆ. ಆದುದರಿಂದ ಇಂದು ಪ್ರಚಲಿತವಿರುವ ಅಸ್ಪೃಶ್ಯತೆಯನ್ನು ಪೈಶಾಚಿಕ ಕ್ರಿಯೆ ಎಂದು ಕರೆಯಲು ಹಿಂದೆಗೆಯುವುದಿಲ್ಲ. ಶ್ರೀ ಅಯ್ಯರ್ ಅವರು ದೇವರು ತಮಗೆ ಕೊಟ್ಟಿರುವ ಸಾಮರ್ಥ್ಯವನ್ನೆಲ್ಲ ತಮ್ಮ ದೇಶಬಾಂಧವರ ಪೈಕಿ ಜಾತಿ ಭ್ರಷ್ಟರಾದವರ ಉನ್ನತಿಗೆ ವಿನಿಯೋಗಿಸಿದರೆ, ನಾನು ಹಿಂದೂಶಾಸ್ತ್ರಗಳಲ್ಲಿ ಕಾಣುವ ಜೀವನದ ಅರ್ಥವನ್ನು ಕಂಡಾರೆಂಬ ವಿಷಯದಲ್ಲಿ ಭರವಸೆ ನೀಡಬಲ್ಲೆ. (ಯಂಗ್ ಇಂಡಿಯ : ೨೦, ೨೭-೧೦-೨೧)

ಸಾಮೀಪ್ಯ ನಿರಾಕರಣಾ ವಾದ

ತಿರುವಾಂಕೂರಿನ ಒಬ್ಬ ಪ್ರತ್ರವ್ಯವಹಾರಿ ಹೀಗೆ ಬರೆಯುತ್ತಾರೆ:

“ಬ್ರಾಹ್ಮಣರ ಪದ್ಧತಿಗಳು ಅಥವಾ ಆಚಾರಗಳ ವಿಷಯದಲ್ಲಿ ನಿಮಗೆ ಒಂದು ತಪ್ಪು ಕಲ್ಪನೆ ಇದ್ದಂತೆ ಕಂಡುಬರುತ್ತದೆ. ನೀವು ಅಹಿಂಸೆಯನ್ನು ಶ್ಲಾಘಿಸುತ್ತೀರಿ, ಆದರೆ ಬ್ರಾಹ್ಮಣರಾದ ನಾವೊಬ್ಬರೇ ಅದನ್ನು ಧಾರ್ಮಿಕ ಕ್ರಿಯೆಯಾಗಿ ಆಚರಿಸುವವರು. ಇದನ್ನು ಯಾರೇ ಮೀರಲಿ ಅವರು ನಮ್ಮಿಂದ ಜಾತಿಭ್ರಷ್ಟರೆಂದು ಪರಿಗಣಿಸಲ್ಪಡುವರು. ಕೊಲೆಗಡುಕರು, ಅಥವಾ ಮಾಂಸಾಹಾರಿಗಳು ಇವರುಗಳ ಸಹವಾಸವೂ ಪಾಪಕರವೆಂದು ಭಾವಿಸಲ್ಪಡುತ್ತದೆ. ಕೊಲೆಗಡುಕ, ಬೆಸ್ತ, ಹೆಂಡ ತೆಗೆಯುವವ, ಇವರ

ಸಾಮೀಪ್ಯವೂ ಮಾಂಸಾಹಾರಿ, ಪಾನಮಾಡುವವನು ಮತ್ತು ಮತಧರ್ಮ ನಿರೋಧಕ ಇವರ ಸ್ಪರ್ಶನವೂ ಇವುಗಳಿಂದ ನಮ್ಮ ನೈತಿಕ ಹಾಗೂ ಭೌತಿಕ ವಾತಾವರಣ ಕಲುಷಿತವಾಗುತ್ತದೆ, ತಪಸ್ಸು ಅಥವಾ ಧಾರ್ಮಿಕ ಸಿದ್ಧಿ ಕುಗ್ಗುತ್ತದೆ, ಶುದ್ಧ ಆಕರ್ಷಣ ಶಕ್ತಿ ನಷ್ಟವಾಗುತ್ತದೆ.

"ಇದನ್ನು ನಾವು ಮೈಲಿಗೆ ಎಂದು ಪರಿಗಣಿಸುತ್ತೇವೆ. ಕೂಡಲೇ ನಾವು ಸ್ನಾನ ಮಾಡಬೇಕು. ಇಂಥ ನಿಯಮಗಳನ್ನು ಅನುಸರಿಸುವುದ ರಿಂದಲೇ, ಕಾಲ ಮತ್ತು ಅದೃಷ್ಟ ಎಷ್ಟೇ ಬದಲಾವಣೆ ಹೊಂದಿದರೂ ಬ್ರಾಹ್ಮಣರು ತಮ್ಮ ಆನುವಂಶಿಕ ಗುಣಗಳನ್ನು ರಕ್ಷಿಸಿಕೊಳ್ಳಲು ಶಕ್ತರಾಗಿ ದಾರೆ. ಈ ವಿಧಿ ನಿಷೇಧಗಳನ್ನು ತ್ಯಜಿಸಿ, ಎಲ್ಲರೊಂದಿಗೂ ಸ್ವತಂತ್ರ ವರ್ತನೆಗೆ ಅವಕಾಶವಾದರೆ, ಬ್ರಾಹ್ಮಣನೂ ಜಾತಿಭ್ರಷ್ಟರಲ್ಲಿ ಅತ್ಯಂತ ಹೀನರ ಸ್ಥಿತಿಗೆ ಇಳಿದಾನು; ರಹಸ್ಯವಾಗಿ ದುಷ್ಟಕೃತ್ಯಗಳಲ್ಲಿ ತೊಡಗಿ ಯಾನು; ತನ್ನ ಪಾಪಗಳನ್ನು ಗುಪ್ತವಾಗಿಟ್ಟುಕೊಳ್ಳಲು ತೊಂದರೆಕೊಡುವ ವಿಧಿ ನಿಷೇಧಗಳನ್ನು ತೊಡೆದುಹಾಕಲು ಯತ್ನಿಸುವುದರಜೊತೆಗೆ ಶುದ್ಧ ನಾಗಿರುವಂತೆ ನಟಿಸಿಯಾನು. ಇಂದಿನ ಅನೇಕ ನಾಮಮಾತ್ರ ಬ್ರಾಹ್ಮ ಣರು ಈ ಬಗೆಯವರೆಂದು ನಮಗೆ ಗೊತ್ತು. ಅವರು ಇತರರನ್ನೂ ಈ ಪತನ ಸ್ಥಿತಿಗೆ ಒಯ್ಯಲು ವಿಶ್ವಪ್ರಯತ್ನ ಮಾಡುತ್ತಿದಾರೆ.

"ಸಾಮೀಪ್ಯ ನಿರಾಕರಣೆಯನ್ನೂ ಅಸ್ಪೃಶ್ಯತೆಯನ್ನೂ ನಮಗೆ ವಿಧಿ ಸಲು ಇವು ಆಧಾರಗಳು. ನಿಜವಾಗಿಯೂ, ಈ ಸಾಮೀಪ್ಯ ನಿರಾಕರಣೆಯೂ ಅಸ್ಪೃಶ್ಯತೆಯೂ ಅಹಿಂಸಾ ಧರ್ಮವನ್ನು ರಕ್ಷಿಸುವುದಕ್ಕೂ ಹರಡು ವುದಕ್ಕೂ ವ್ಯಾವಹಾರಿಕ ಮಾರ್ಗಗಳಲ್ಲದೆ ಬೇರೆಯಲ್ಲ."

ಮೊದಲನೆಯದಾಗಿ, ಬ್ರಾಹ್ಮಣರ ಸಸ್ಯಾಹಾರದ ಬಗೆಗೆ ಎತ್ತಿರುವ ವಾದ ಪೂರ್ಣ ಸತ್ಯವಲ್ಲ. ಅದು ದಾಕ್ಷಿಣಾತ್ಯ ಬ್ರಾಹ್ಮಣರ ವಿಷಯದಲ್ಲಿ ಮಾತ್ರ ನಿಜ. ಆದರೆ, ಇತರ ಕಡೆಗಳಲ್ಲಿ, ಮೀನನ್ನು ತಿನ್ನುತ್ತಾರೆ; ಬಂಗಾಳ, ಕಾಶ್ಮೀರಗಳಲ್ಲಂತೂ ಮಾಂಸ ಭಕ್ಷಣವನ್ನೂ ಮಾಡುತ್ತಾರೆ. ದಕ್ಷಿಣದಲ್ಲಿಯೂ ಎಲ್ಲ ಮಾಂಸ ಭಕ್ಷಕರಿಗೂ ಮತ್ತು ಎಲ್ಲ ಮತ್ಸ್ಯ ಭಕ್ಷಕರಿಗೂ ಸಾಮೀಪ್ಯ ನಿರಾಕರಣೆ ಇಲ್ಲ. ನಿಷ್ಠಾಪೂರ್ವಕವಾಗಿ ಶುದ್ಧನಾಗಿದ್ದರೂ ಸಾಮೀಪ್ಯ ನಿರಾಕರಣೆ ಹೊಂದಿದವನೂ, ಶಾಸ್ತ್ರಪ್ರಕಾರವಾಗಿ ಅಸ್ಪೃಶ್ಯವೋ ಅಥವಾ ಸಾಮೀಪ್ಯ ನಿರಾಕೃತವೋ ಎಂದು ಪರಿಗಣಿಸಲ್ಪಟ್ಟಿರುವ ಕುಟುಂಬ

ದಲ್ಲಿ ಜನಿಸಿದವನೆಂಬ ಕಾರಣದಿಂದಲೇ ಜಾತಿಭ್ರಷ್ಟನಾಗುತ್ತಾನೆ. ಮಾಂಸಾಹಾರ ಮಾಡುವ ಅಬ್ರಾಹ್ಮಣರು ಅಧಿಕಾರದಲ್ಲಿರುವವರಾದರೆ, ಬ್ರಾಹ್ಮಣರು ಅವರೊಂದಿಗೆ ಭುಜ ಉಜ್ಜುವುದಿಲ್ಲವೆ? ಮಾಂಸಾಹಾರ ಮಾಡುವ ಹಿಂದೂ ರಾಜರುಗಳನ್ನು ಅವರು ಗೌರವಿಸುವುದಿಲ್ಲವೆ?

ಈ ಪತ್ರ ವ್ಯವಹಾರಿಯಂಥ ಸುಸಂಸ್ಕೃತರು ರಕ್ಷಿಸಲಸಾಧ್ಯವಾಗಿ ಕಳಚಿಬೀಳುತ್ತಿರುವ ಪದ್ಧತಿಯೊಂದನ್ನು ರಕ್ಷಿಸಬೇಕೆಂಬ ಅಂಧಶ್ರದ್ಧೆಯಲ್ಲಿ, ತಮ್ಮ ವಾದದ ಪರಿಣಾಮಗಳನ್ನು ಮರೆಯುತ್ತಿರುವುದು ಆಶ್ಚರ್ಯಕರವೂ, ವೇದನಾಯುಕ್ತವೂ ಆಗಿದೆ. ಈತ, ಕಾಲ್ಪನಿಕ ಶುದ್ಧಿಯೊಂದರ ರಕ್ಷಣೆಗಾಗಿ, ಮಾಂಸಾಹಾರದಂಥ ಅಲ್ಪ ಹಿಂಸಕ ವಿಷಯವನ್ನು ಪ್ರಮಾದಮಾಡಿರುವುದು, ಲಕ್ಷಾಂತರ ಮಾನವ ಸೋದರರನ್ನು ಬೇಕೆಂತಲೇ ದಮನಗೈದು, ಹಿಂಸಾಯುತ ಒಂಟೆಯೊಂದನ್ನು ನುಂಗಿದಂತಾಗಿದೆ. ಯಾವ ಸಸ್ಯಾಹಾರ ಪದ್ಧತಿ ತನ್ನ ರಕ್ಷಣೆಗಾಗಿ ಇತರರನ್ನು ಅವನತಿಗೀಡುಮಾಡುವ ಬಹಿಷ್ಕಾರ ಅಪೇಕ್ಷಿಸುತ್ತದೆಯೋ ಅದು ರಕ್ಷಣೆಗೆ ಯೋಗ್ಯವಾಗಲಾರದೆಂದು ಪತ್ರವ್ಯವಹಾರಿಗೆ ಸೂಚಿಸಬಯಸುತ್ತೇನೆ. ಆ ರೀತಿ ರಕ್ಷಿಸಲ್ಪಟ್ಟರೆ ಅದೊಂದು ಕೃತಕ ಬೆಳವಣಿಗೆಯಾದೀತು; ಶೀತವಾಯುವಿನ ಪ್ರಥಮ ಸೋಂಕಿಗೇ ಅದು ನಾಶವಾದೀತು. ಸಸ್ಯಾಹಾರಕ್ಕೆ ನಾ ತುಂಬ ಬೆಲೆ ಕೊಡುತ್ತೇನೆ. ಬ್ರಾಹ್ಮಣರು ಸಸ್ಯಾಹಾರದಿಂದಲೂ ಮತ್ತು ತಾವಾಗಿಯೇ ವಿಧಿಸಿಕೊಂಡ ಶಿಸ್ತಿನ ನಿಯಮಗಳಿಂದಲೂ ಆಧ್ಯಾತ್ಮಿಕ ಪ್ರಗತಿ ಸಾಧಿಸಿದರೆಂದು ನನಗೆ ಮನವರಿಕೆಯಾಗಿದೆ. ಆದರೆ ಅವರು ತಮ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ತಮ್ಮ ಶುದ್ಧಿಗೋಸ್ಕರ ಹೊರಗಿನ ಸಹಾಯವನ್ನು ಅಪೇಕ್ಷಿಸುತ್ತಿರಲಿಲ್ಲ. ಎಲ್ಲ ಧರ್ಮಗಳೂ ಹೊರಗಿನ ಪ್ರಭಾವಗಳ ಒತ್ತಡವನ್ನು ಪಡೆಯಲಶಕ್ತವಾದರೆ, ಸತ್ವಹೀನವಾಗುತ್ತವೆ.

ಇದಲ್ಲದೆ ಪತ್ರವ್ಯವಹಾರಿಯು ಸೂಚಿಸಿರುವ ರೀತಿಯಲ್ಲಿ ರಕ್ಷಣೆಯನ್ನು ಬ್ರಾಹ್ಮಣರು ಪಡೆಯಲೆತ್ನಿಸಿರುವ ಕಾಲ ಮೀರಿದೆ. ಇಂಥ ರಕ್ಷಣೆಯನ್ನು ನಿರಾಕರಿಸಿ, ಚಿತ್ರಹಿಂಸೆಗಾದರೂ ಗುರಿಯಾಗಿ, ಸುಧಾರಣಾ ಚಳುವಳಿಯನ್ನು ಮುಂದುವರಿಸುವ ಬ್ರಾಹ್ಮಣರ ಸಂಖ್ಯೆ ದಿನದಿನಕ್ಕೂ ಏರುತ್ತಿರುವುದು ಹರ್ಷದಾಯಕ. ಸುಧಾರಣೆಯು ಶೀಘ್ರ ಪ್ರಗತಿ ಹೊಂದುವ ಶ್ರೇಷ್ಠ ಭರವಸೆ ಅದರಲ್ಲಿ ಅಡಗಿದೆ. (ಯಂಗ್ ಇಂಡಿಯಾ: ೨೧-೧-೨೬)

ಶುದ್ಧೀಕರಣದ ಪರಮ ಕ್ರಿಯೆ

ಸ್ವಾರ್ಥ ಉದ್ದೇಶಗಳಿಂದ ಪ್ರೇರಿತರಾಗಿ ನಾವು ಉಚ್ಚರೆಂದೂ, ಇತರರನ್ನು ಕೀಳೆಂದೂ ಭಾವಿಸುವುದು ಅಸಾಧುವೇ ಸರಿ. ಇದು ಅಸಾಧುವೊಂದೇ ಅಲ್ಲ; ಅಸ್ಪೃಶ್ಯತೆಯಂಥ ಪಾಪಕ್ಕೂ ಧರ್ಮವನ್ನು ಗಂಟುಹಾಕುವುದು ಇಮ್ಮಡಿ ತಪ್ಪೆನಿಸೀತು. ಆದುದರಿಂದ ಅಸ್ಪೃಶ್ಯತೆಯಂಥ ಸ್ಪಷ್ಟವಾದ ದುಷ್ಟಪದ್ಧತಿಗೆ ಮಹಾಪಂಡಿತರುಗಳು ಶಾಸ್ತ್ರಾಧಾರ ಉದಹರಿಸುವುದನ್ನು ನೋಡಿದಾಗ ನನಗೆ ತುಂಬ ವ್ಯಥೆಯಾಗುತ್ತದೆ. ಹಿಂದೂಗಳಾದ ನಾವು ಒಂದು ನೈತಿಕ ಪರೀಕ್ಷೆಗೆ ಗುರಿಯಾಗಿದೇವೆಂದು ಅನೇಕ ವೇಳೆ ಹೇಳಿದೇನೆ; ಇಂದೂ ಹೇಳುತ್ತೇನೆ. ನಮಗೆ ಇಚ್ಛೆ ಇರಲಿ, ಇಲ್ಲದಿರಲಿ, ಅಸ್ಪೃಶ್ಯತೆಯು ತೊಲಗಿಹೋಗುತ್ತಿದೆ. ಆದರೆ, ಈ ಪರೀಕ್ಷಾ ಕಾಲದಲ್ಲಿ ನಾವಾಗಿಯೇ ಈ ಪಾಪಕ್ಕೆ ಪಶ್ಚಾತ್ತಾಪಪಟ್ಟು ಇದರಿಂದ ನಮ್ಮನ್ನು ಶುದ್ಧಿಮಾಡಿಕೊಂಡರೆ, ಅದನ್ನು ಇತಿಹಾಸ ಮಹಾಶುದ್ಧೀಕರಣ ಕ್ರಿಯೆಯೆಂದು ಉಲ್ಲೇಖಿಸೀತು. ಇದನ್ನು ಬಿಟ್ಟು ಕಾಲಧರ್ಮದ ಪರಿಣಾಮವಾಗಿಯೂ ನಮ್ಮ ಅಂತಃಸಾಕ್ಷಿ ವಿರೋಧವಾಗಿ ನಾವು ವರ್ತಿಸುವುದರ ಮೂಲಕವೂ ಹರಿಜನರು ತಮ್ಮ ಸ್ವಾಸ್ಥ್ಯವನ್ನು ಹೊಂದಿದರೆ ಅದು ಹಿಂದೂಗಳಿಗಾಗಲೀ, ಹಿಂದೂಧರ್ಮಕ್ಕಾಗಲೀ ಶೋಭೆ ನೀಡದು. ಆದರೆ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಹೀಗೆ ಹೇಳಬಯಸುತ್ತೇನೆ. ಈ ಪರೀಕ್ಷೆಯಲ್ಲಿ ನಾವು ನಿಷ್ಫಲರಾದರೆ, ಹಿಂದೂಗಳೂ ಹಿಂದೂಧರ್ಮವೂ ನಾಶವೇ ಆದಾವು.

(ಹರಿಜನ : ೫-೧-೩೪)

ಅಸ್ಪೃಶ್ಯತೆ - ಜಾತಿ ಮತ್ತು ವರ್ಣ

ವರ್ಣಾಶ್ರಮವೂ ಅಸ್ಪೃಶ್ಯತೆಯೂ

ಒಬ್ಬ ಪತ್ರ ವ್ಯವಹಾರಿ ಹೀಗೆ ಬರೆಯುತ್ತಾರೆ:

"ನೀವು ಒಪ್ಪಿರುವ 'ಜನ್ಮದಾಧಾರದ ಮೇಲೆ ವೃತ್ತಿ ವಿಭಜನತತ್ವ'ಕ್ಕನುಗುಣವಾಗಿ ನಮ್ಮ ಸಮಾಜ ವ್ಯವಸ್ಥೆ ಮುಂದುವರಿಯುವುದಾದರೆ

ಎಂದೆಂದಿಗೂ ‘ ಅಸ್ಪೃಶ್ಯರು ’ ನಮ್ಮೊಂದಿಗೆ ಇರುವರೆಂಬುದು ಸ್ಪಷ್ಟವಲ್ಲವೆ ? ಇಂಥ ಸಂದರ್ಭದಲ್ಲಿ, ಸಮಾಜದಲ್ಲಿ ಯಾರುಯಾರು ಜಾಡಮಾಲಿಯ ಕೆಲಸ, ಹೆಣ ಹೊರುವುದು, ಸಮಾಧಿ ಗುಂಡಿ ಅಗೆಯುವ ಕೆಲಸ ಮೊದಲಾದುವುಗಳನ್ನು ಮಾಡುವರೋ ಅವರು ಸಮಾಜದ ಇತರರಿಂದ ಮುಟ್ಟಲ್ಪಡಲು ತುಂಬ ಕೊಳಕರೆಂದು ಪರಿಗಣಿಸಲ್ಪಡುತ್ತಿರುವುದು ಮುಂದುವರಿಯುವುದೆಂದು ಭಾವಿಸುವುದಕ್ಕಿಂತಲೂ ಹೆಚ್ಚು ಕಾರಣಯುಕ್ತವಾದುದು ಯಾವುದಾದರೂ ಇದೆಯೆ? ಇತರ ಎಲ್ಲ ದೇಶಗಳಲ್ಲಿಯೂ ಜಾಡಮಾಲಿಗಳು, ಮೋಚಿಗಳು, ಕ್ಷೌರಕರು, ಅಗಸರು, ಸಮಾಧಿ ಗುಂಡಿ ಅಗೆಯುವವರು, ಶವಸಂಸ್ಕಾರ ನಿರ್ವಾಹಕರು, ಮೊದಲಾದವರು ವೈಯಕ್ತಿಕವಾಗಿಯಾಗಲೀ, ಸಾಮೂಹಿಕವಾಗಿಯಾಗಲೀ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟಿಲ್ಲ. ಏಕೆಂದರೆ, ಆ ದೇಶಗಳಲ್ಲಿ ಈ ವೃತ್ತಿಗಳು ಆನುವಂಶಿಕ ವೃತ್ತಿಗಳಲ್ಲ; ಯಾವ ವರ್ಗದ ಜನ ಯಾವಾಗ ಬೇಕಾದರೂ ಸೈನಿಕ, ವ್ಯಾಪಾರಿ, ಅಧ್ಯಾಪಕ, ನ್ಯಾಯವಾದಿ, ರಾಜಕಾರಣಿ, ಅಥವಾ ಮತಬೋಧಕ, ಯಾವುದು ಬೇಕಾದರೂ ಆಗಬಹುದು. ಆದುದರಿಂದ, ನಮ್ಮ ದೇಶಕ್ಕೇ ವಿಲಕ್ಷಣವಾಗಿರುವ ಈ ಅಸ್ಪೃಶ್ಯತಾ ಕೆಡುಕಿನ ಮೂಲಬೇರು ನಮ್ಮಲ್ಲಿ ವ್ಯಾವರ್ತಕವಾಗಿ ಆನುವಂಶಿಕತೆಯ ಆಧಾರದಮೇಲೆ ನಿಂತಿರುವ ಸಮಾಜ ಪದ್ಧತಿಯಲ್ಲಿದೆ ಎಂದು ನನಗೆ ಗೋಚರವಾಗುತ್ತದೆ. ಎಲ್ಲಿಯವರೆಗೆ ಈ ತತ್ವಕ್ಕೆ ನಾವು ಅಂಟಿಕೊಂಡಿರುವೆವೋ ಅಲ್ಲಿಯವರೆಗೂ ಅಸ್ಪೃಶ್ಯತೆಯನ್ನು ತೊಡೆದುಹಾಕುವ ಭರವಸೆಯಿಲ್ಲವೆಂದೂ ನನಗೆ ಗೋಚರಿಸುತ್ತದೆ. ರಾಮಾನುಜರಂಥ ಮಹಾ ಸುಧಾರಕರ ಪ್ರಭಾವದಿಂದಲೋ ಅಥವಾ ಪ್ರಬಲವಾದ ರಾಜಕೀಯ ಭಾವೋದ್ರೇಕ ಶಕ್ತಿಯಿಂದಲೋ ಅದರ ಉಗ್ರರೂಪ ಕಾಲಕಾಲಕ್ಕೆ ಸ್ವಲ್ಪ ಕಮ್ಮಿಯಾಗಬಹುದೆಂದು ಊಹಿಸಲು ಸಾಧ್ಯವಾದರೂ ಅದು ಪೂರ್ಣವಾಗಿ ವರ್ಜಿತವಾಗದು. ಜಾತಿಭಾವನೆಯನ್ನೇ ಕೊನೆಗಾಣಿಸಿದ ಹೊರತು ಅಸ್ಪೃಶ್ಯತೆಯನ್ನು ಕೊನೆಗಾಣಿಸಲು ಮಾಡುವ ಎಲ್ಲ ಪ್ರಯತ್ನವೂ ವೃಕ್ಷವೊಂದನ್ನು ಮೇಲುಭಾಗದಲ್ಲಿ ಕತ್ತರಿಸಿ ಅದನ್ನು ನಾಶಮಾಡಲೆತ್ನಿಸಿದಂತೆ ನಿರರ್ಥಕವಾಗುವುದೆಂದು ನನ್ನ ಭಾವನೆ.”

ಈ ಪತ್ರ ಬಹಳ ನ್ಯಾಯ ಸಮ್ಮತ. ಪತ್ರವ್ಯವಹಾರಿಯು ಎತ್ತಿ ತೋರಿಸಿರುವ ಅಪಾಯದ ವಿಷಯದಲ್ಲಿ ಸುಧಾರಕ ಎಚ್ಚರವಿದ್ದ ಹೊರತು

ಆದು ಕಠೋರ ಸತ್ಯವೇ ಆದೀತು. ಆದರೂ, ಈ ವಾದದಲ್ಲಿ ಸ್ಪಷ್ಟವಾದ ವಿಚಾರ ಗೊಂದಲ ಕಂಡುಬರುತ್ತದೆ. ಮೋಚಿ ಅಥವಾ ಜಾಡಮಾಲಿಯ ವಿಷಯದಲ್ಲಿ ಅಸ್ಪೃಶ್ಯತೆಯು ಹುಟ್ಟಿಗೋ ಅಥವಾ ವೃತ್ತಿಗೋ ಯಾವುದಕ್ಕೆ ಅನ್ವಯಿಸುತ್ತದೆ. ಅದು ಜನ್ಮಕ್ಕೆ ಹತ್ತಿಬಂದರೆ ಘೋರವಾದುದು, ಮತ್ತು ನಿರ್ಮೂಲಮಾಡಲ್ಪಡಬೇಕು; ಅದು ವೃತ್ತಿಗೆ ಮಾತ್ರ ಅನ್ವಯಿಸುವಂತಿದ್ದರೆ, ಅದೊಂದು ಪರಿಣಾಮಕಾರೀ ಆರೋಗ್ಯ ನಿಯಮ. ಅದು ಸರ್ವತ್ರ ವ್ಯಾಪ್ತಿಯುಳ್ಳದು. ಇದ್ದಲು ಗಣಿಯಲ್ಲಿ ಕೆಲಸಮಾಡುವವನು, ಆ ಕೆಲಸ ದಲ್ಲಿರುವಾಗ ನಿಜವಾಗಿಯೂ ಅಸ್ಪೃಶ್ಯ. ಆತನ 'ಕೈ ಕುಲುಕಲು' ನೀವು ಅಪೇಕ್ಷಿಸಿದರೆ, ಅವನೇ 'ಕೈತುಂಬ ಕೊಳೆ' ಎಂದಾನು. ಆದರೆ, ಕೆಲಸ ಮುಗಿದಮೇಲೆ ಆತ ಸ್ನಾನ ಮಾಡಿ, ಬಟ್ಟೆ ಬದಲಾಯಿಸಿ, ಅನಂತರ ಬಹಳ ಯುಕ್ತವಾಗಿಯೇ ದೇಶದ ಅತ್ಯಂತ ಘನತೆ ಹೊಂದಿದವರೊಂದಿಗೆ ಬೆರೆತಾನು. ಜನ್ಮಕ್ಕೆ ಹತ್ತಿಬಂದ ಉಚ್ಚನೀಚ ಭಾವನೆಯನ್ನು ತೊಡೆದು ಹಾಕಿದ ಕೂಡಲೇ ವರ್ಣಾಶ್ರಮವನ್ನು ಶುದ್ಧಿಮಾಡಿದಂತೆ. ಜಾಡಮಾಲಿಯ ಮಕ್ಕಳು ಜಾಡಮಾಲಿಗಳಾಗಿದ್ದರೂ ಕೀಳೆಂಬ ಭಾವನೆ ಇರದು. ಬ್ರಾಹ್ಮಣರು ಯಾವರೀತಿ ಅಸ್ಪೃಶ್ಯರಲ್ಲವೋ ಅದೇ ರೀತಿ ಭಾವಿಸಲ್ಪಡುವರು. ಆದುದರಿಂದ ಆನುವಂಶಿಕತೆಯ ತತ್ವದ ಅಂಗೀಕಾರ ಅಥವಾ ವಂಶಪಾರಂಪರ್ಯವಾಗಿ ಗುಣಗಳ ಮುಂದುವರಿಕೆ ಇವುಗಳಲ್ಲಿ ತಪ್ಪಿಲ್ಲ; ಅದು ಅಸಮಾನತೆಯ ತಪ್ಪು ಕಲ್ಪನೆಯಲ್ಲಿ ಅಡಗಿದೆ.

ವರ್ಣಾಶ್ರಮವು ಸಂಕುಚಿತ ಭಾವನೆಯಿಂದ ಕೂಡಿದುದಲ್ಲವೆಂದು ನನ್ನ ಅಭಿಪ್ರಾಯ. ಅದರಲ್ಲಿ ಶ್ರಮಜೀವಿ ಶೂದ್ರನಿಗೂ ವಿಚಾರಪರ ಬ್ರಾಹ್ಮಣನಿಗೂ ಒಂದೇ ಸ್ಥಾನ. ಯೋಗ್ಯತೆ ವೃದ್ಧಿಗೊಳ್ಳುವುದಕ್ಕೂ, ಅಯೋಗ್ಯತೆಯನ್ನು ತೆಳೆಯುವುದಕ್ಕೂ ಅದು ಅವಕಾಶವಿತ್ತಿದ್ದಿತು. ಅದು ಮಾನವಸಹಜ ಮಹತ್ವಾಕಾಂಕ್ಷೆಯನ್ನು ಸಾಮಾನ್ಯ ಪ್ರಾಪಂಚಿಕ ವಲಯದಿಂದ ಶಾಶ್ವತವಾದ ಆಧ್ಯಾತ್ಮಿಕತೆಯ ಕಡೆಗೆ ತಿರುಗಿಸುತ್ತಿದ್ದಿತು. ಬ್ರಾಹ್ಮಣ ಮತ್ತು ಶೂದ್ರ, ಇಬ್ಬರ ಜೀವನೋದ್ದೇಶವೂ ಮೋಕ್ಷ ಅಥವಾ ಆತ್ಮಸಾಕ್ಷಾತ್ಕಾರ ಒಂದೇ ಆಗಿದ್ದಿತೇ ಹೊರತು, ಕೀರ್ತಿ, ಐಶ್ವರ್ಯ ಮತ್ತು ಅಧಿಕಾರವನ್ನು ಹೊಂದುವುದಾಗಿರಲಿಲ್ಲ. ಬರುಬರುತ್ತ, ವರ್ಣಾಶ್ರಮದ ಈ ಮಹೋನ್ನತ ಕಲ್ಪನೆಯು ಪತನ ಹೊಂದಿ, ಕೇವಲ ಅರ್ಥಶೂನ್ಯ ಆಚರಣೆ

ಯಾಗಿ ಪರಿಣಮಿಸಿತು. ಕೆಲವರು ಉಚ್ಚ ಎಂದು ಭಾವಿಸಿಕೊಂಡರು; ಕೆಲವರ ಮೇಲೆ ಕೀಳುತನವೆಂಬುದು ಹೇರಲ್ಪಟ್ಟಿತು. ಇದು ವರ್ಣಾಶ್ರಮ ಧರ್ಮದ ಸತ್ವಹೀನತೆಯನ್ನು ತೋರಿಸುವುದಿಲ್ಲ; ಆದರೆ, ಮಾನವಸ್ವಭಾವ ಕೆಲವು ಸಂದರ್ಭಗಳಲ್ಲಿ ಹೇಗೆ ಅತ್ಯುನ್ನತ ಸ್ಥಿತಿಗೆ ಏರಬಲ್ಲದೋ ಹಾಗೆಯೇ ಬೇರೆ ಇತರ ಕೆಲವು ಸಂದರ್ಭಗಳಲ್ಲಿ ಅತ್ಯಂತ ಕೀಳುಮಟ್ಟಕ್ಕೆ ಇಳಿಯಬಲ್ಲದೆಂಬುದನ್ನು ತೋರಿಸುತ್ತದೆ. ಸುಧಾರಕನು ಮಾಡಬೇಕಾದುದೆಂದರೆ, ಅಸ್ಪೃಶ್ಯತೆಯ ಶಾಪವನ್ನು ತೊಡೆದುಹಾಕಿ, ವರ್ಣಾಶ್ರಮವನ್ನು ಪುನರುಜ್ಜೀವನಗೊಳಿಸಬೇಕು. ಈ ರೀತಿ ಪುನರುಜ್ಜೀವನ ಪಡೆದ ವರ್ಣಾಶ್ರಮ ಬಾಳೀತೋ ಹೇಗೋ ನೋಡಬೇಕು. ಅದು ಅಗೋಚರವಾಗಿ ರೂಪುಗೊಳ್ಳುತ್ತಿರುವ ಹೊಸ ಬ್ರಾಹ್ಮಣ ವರ್ಗವನ್ನು ಅವಲಂಬಿಸಿದೆ. ಅವರು ಶರೀರ, ಆತ್ಮ, ಮನಸ್ಸು ಇವುಗಳಿಂದ ಹಿಂದೂಧರ್ಮಕ್ಕೂ, ದೇಶಕ್ಕೂ ಸೇವೆ ಸಲ್ಲಿಸುತ್ತಿದಾರೆ. ಅವರು ಎಲ್ಲ ಐಹಿಕ ಆಶೋತ್ತರಗಳನ್ನೂ ತ್ಯಜಿಸಿದರೆ, ಹಿಂದೂಧರ್ಮಕ್ಕೆ ಒಳಿತು; ಅದನ್ನು ಬಿಟ್ಟು, ಇತರ ವಾದಗಳಂತೆ ಹಿಂದೂಧರ್ಮ ಆಶಾಗ್ರಸ್ತರ ಕೈವಾಡವಾಗುವುದಾದರೆ, ನಾಶವಾದೀತು. ಆದರೆ, ಕಾಲಕಾಲಕ್ಕೆ ತನ್ನನ್ನು ಚೊಕ್ಕಗೊಳಿಸಿಕೊಳ್ಳುವ ಶಕ್ತಿ ಹಿಂದೂಧರ್ಮಕ್ಕಿದೆ ಎಂಬ ನಿರ್ವಿಕಲ್ಪ ನಂಬಿಕೆ ನನಗಿದೆ. ಹಿಂದೂಧರ್ಮದ ಆ ಶಕ್ತಿ ಮುಗಿದಿದೆ ಎಂದು ನನಗನ್ನಿಸುವುದಿಲ್ಲ.

(ಯಂಗ್ ಇಂಡಿಯಾ : ೧೩-೮-೨೫)

ನನ್ನ ವರ್ಣಾಶ್ರಮ ಧರ್ಮ

ಇಂದು ವರ್ಣಾಶ್ರಮ ಧರ್ಮದ ಹೆಸರಿನಲ್ಲಿ ಬೆಳೆದಿರುವ ಪಿಶಾಚಿಯೊಂದಿಗೆ ಎಲ್ಲ ವಿಧಾನಗಳಿಂದಲೂ ಹೋರಾಡಿ. ನಾನೂ ನಿಮ್ಮೊಂದಿಗೆ ಭುಜಕ್ಕೆ ಭುಜ ಕೊಡುವೆ. ಹಿಂದುವೋ, ಮುಸ್ಲಿಮನೋ, ಕ್ರೈಸ್ತನೋ, ಪಾರ್ಸಿಯೋ, ಯಾರೇ ಆಗಲಿ ಶುದ್ಧ ಆಹಾರವನ್ನು ಕೊಟ್ಟರೆ, ಅವರೊಂದಿಗೆ ಸಹಭೋಜನ ಮಾಡಲು ನನ್ನ ವರ್ಣಾಶ್ರಮ ನನಗೆ ಅವಕಾಶವೀಯುತ್ತದೆ. ನನ್ನ ಸ್ವಂತ ಮಗಳು ನನ್ನ ಮನೆಯಲ್ಲಿ ಯಾವರೀತಿ ಇರಬಲ್ಲಳೋ ಆದೇ

ರೀತಿ ಹರಿಜನ ಬಾಲಿಕೆಯೂ ಇರಲು ನನ್ನ ವರ್ಣಾಶ್ರಮ ನನಗೆ ಅವಕಾಶ ವೀಯುತ್ತದೆ. ನನ್ನ ವರ್ಣಾಶ್ರಮವು ನಾನು ಅತ್ಯಂತ ಹರ್ಷದಿಂದ ಭೋಜನಗೈವ ಪಂಚಮರ ಕುಟುಂಬಗಳಿಗೆ ಅವಕಾಶವೀಯುತ್ತದೆ. ಅವರೊಂದಿಗೆ ಭೋಜನಗೈವುದು ಒಂದು ಭಾಗ್ಯ ನನಗೆ. ಪ್ರಪಂಚದ ಅತ್ಯಂತ ಮಹಾಶಕ್ತಿಗೂ ತಲೆಬಾಗಲು ನಿರಾಕರಿಸುತ್ತದೆ ನನ್ನ ವರ್ಣಾಶ್ರಮ. ಆದರೆ ಜ್ಞಾನ, ಪರಿಶುದ್ಧತೆ, ಮತ್ತು ಪ್ರತ್ಯಕ್ಷ ದೇವರ ರೂಪದಲ್ಲಿ ಕಾಣುವ ಪ್ರತಿಯೊಬ್ಬ ಮಾನವ ವ್ಯಕ್ತಿಗೆ ಮಣಿಯಲು ನನ್ನ ವರ್ಣಾಶ್ರಮ ನನ್ನನ್ನು ಬಲಾತ್ಕರಿಸುತ್ತದೆ. (ಯಂಗ್ ಇಂಡಿಯಾ : ೨೨-೯-೨೭)

ಮೇಲುತನ ಮತ್ತು ಕೀಳುತನದಮೇಲೆ ದಾಳಿ

ಅಸ್ಪೃಶ್ಯತೆಯು ಜಾತಿಪದ್ಧತಿಯ ಫಲವಲ್ಲ. ಆದರೆ, ಹಿಂದೂ ಧರ್ಮದೊಳಕ್ಕೆ ನುಸುಳಿಹೋಗಿ ಅದನ್ನು ತಿಂದುಹಾಕುತ್ತಿರುವ ಮೇಲು – ಕೀಳು ಎಂಬ ವ್ಯತ್ಯಾಸದ ಫಲ. ಆದುದರಿಂದ, ಅಸ್ಪೃಶ್ಯತೆಯಮೇಲಿನ ದಾಳಿ ಈ ಮೇಲು ಕೀಳುತನದ ಮೇಲಿನ ದಾಳಿ. ಅಸ್ಪೃಶ್ಯತೆಯು ಹೋದ ಕೂಡಲೇ, ಜಾತಿಪದ್ಧತಿಯೂ ಶುದ್ಧವಾಗುತ್ತದೆ. ಆಗ, ಅದು ನನ್ನ ಕನಸಿನ ನಿಜ ವರ್ಣಧರ್ಮವಾಗಿ ಪರಿಣಮಿಸುತ್ತದೆ. ಸಮಾಜವು, ಪರಸ್ಪರ ಪೂರಕವಾಗಿದೆ, ಯಾರಿಗೆ ಯಾರೂ ಮೇಲು ಕೀಳಲ್ಲದ, ಪ್ರತಿಯೊಬ್ಬರೂ ಎಲ್ಲರಿಗೂ ಆವಶ್ಯಕವೆನಿಸಿದ ನಾಲ್ಕು ವರ್ಣಗಳಾಗಿ ರೂಪುಗೊಳ್ಳುತ್ತದೆ.

(ಹರಿಜನ : ೧೧-೨-೩೩)

ಜನ್ಮವೊಂದೇ ಅಲ್ಲ

ಕೆಲವು ದಿವಸಗಳ ಹಿಂದೆ ಶ್ರೀಮತಿ ವಾಡಿಯಾ ಅವರು ಇತ್ತ ಬೋಧಪ್ರದ ಭಾಷಣದಿಂದ ಆರಿಸಿದ ಈ ಮೂರು ಶ್ಲೋಕಗಳು ಉಲ್ಲೇಖನಾರ್ಹವಾಗಿವೆ :

ಮಹಾಭಾರತದ ವನಪರ್ವದಲ್ಲಿ ಯುಧಿಷ್ಠಿರನು ನುಡಿಯುವ ಈ ಮಾತುಗಳನ್ನು ಲಾಲಿಸಿ : 'ಸತ್ಯ, ದಾನ, ಕ್ಷಮೆ, ಸೌಶೀಲ್ಯ, ಮೃದು ಸ್ವಭಾವ, ತಪಸ್ಸು ಮತ್ತು ದಯೆ, ಈ ಗುಣಗಳು ಯಾವಾತನಲ್ಲಿವೆಯೋ ಆವನನ್ನು ಬ್ರಾಹ್ಮಣನೆಂದು ಅರಿ, ಓ ಸರ್ಪರಾಜ. ಈ ಗುಣಗಳು ಒಬ್ಬ ಶೂದ್ರನಲ್ಲಿದ್ದು, ಒಬ್ಬ ದ್ವಿಜನಲ್ಲಿಲ್ಲದೆ ಹೋದರೆ, ಆ ಶೂದ್ರ ಶೂದ್ರನಲ್ಲ, ಆ ಬ್ರಾಹ್ಮಣ ಬ್ರಾಹ್ಮಣನಲ್ಲ.'

ವಿಷ್ಣು ಭಾಗವತದಲ್ಲಿ ಇದನ್ನು ಹೀಗೆ ಓದಬಹುದು :

'ಒಬ್ಬ ವ್ಯಕ್ತಿಯ ಜಾತಿಸೂಚಕಗಳೆಂದು ಹೇಳಲಾದ ಗುಣಗಳು ಯಾರಲ್ಲಿ ಕಂಡುಬಂದರೂ ಆತನನ್ನು ಆ ಗುಣಸೂಚಕ ಜಾತಿಯಿಂದ ಕರೆಯಬೇಕು; ಅವನ ಶರೀರ ಮತ್ತು ಜನ್ಮದಿಂದಲ್ಲ.'

ನಿಮ್ಮಲ್ಲಿ ಕೆಲವರು ಮನುಸ್ಮೃತಿಯನ್ನು ಒಪ್ಪಬಹುದು. ಇದನ್ನು ಕೇಳಿ :

'ವಿದ್ಯಾವಿಹೀನ ಬ್ರಾಹ್ಮಣ, ಮರದ ಆನೆಯ ಹಾಗೆ, ಚರ್ಮದ ಜಿಂಕೆಯ ಹಾಗೆ; ಈ ಮೂರೂ ನಾಮ ಮಾತ್ರವಾದವು. ವೇದಾಧ್ಯಯನ ಮಾಡದೆ, ಇತರ ಕರ್ಮವೆಸಗುವ ಬ್ರಾಹ್ಮಣ ತನ್ನ ಬಾಳಿನಲ್ಲಿಯೂ ತನ್ನ ಪೀಳಿಗೆಯವರೊಡನೆ ಶೂದ್ರನೇ ಆಗುತ್ತಾನೆ.'

ಮೇಲಿನ ಈ ಶ್ಲೋಕಗಳೂ, ಶಾಸ್ತ್ರಗಳಲ್ಲಿ ಕಂಡುಬರುವ ಇತರ ಶ್ಲೋಕಗಳೂ ಜನ್ಮವೊಂದೇ ಏತಕ್ಕೂ ಗಣನೆಗೆ ಬಾರದೆಂದು ಯಾವ ತಪ್ಪು ತಿಳಿವಳಿಕೆಗೂ ಎಡೆಯಿಲ್ಲದಂತೆ ತೋರಿಸುತ್ತವೆ. ವ್ಯಕ್ತಿ ತನ್ನ ಜನ್ಮದ ಹಕ್ಕನ್ನು ಸಾಧಿಸಬೇಕಾದರೆ ಜೊತೆಗೆ ತನ್ನ ಕರ್ಮ ಮತ್ತು ಗುಣಗಳನ್ನೂ ತೋರ್ಪಡಿಸಬೇಕು. (ಹರಿಜನ : ೧೫-೪-೩೩)

ಅಸ್ಪೃಶ್ಯತಾ ನಿವಾರಣೆ

ಅಹಿಂಸಾ ಮಾರ್ಗ

ಯಾವರೀತಿ ಸ್ಪೃಶ್ಯರೆಂಬುವರು ಅಸ್ಪೃಶ್ಯರಾದ ನಿಮ್ಮನ್ನು ತುಚ್ಛವಾಗಿ ಕಾಣಬಾರದೆಂದು ಅಪೇಕ್ಷಿಸುವೆನೋ ಅದೇರೀತಿ ನೀವೂ ಅವರ

ವಿಷಯದಲ್ಲಿ ಯಾವಬಗೆಯ ದ್ವೇಷಭಾವವನ್ನಾಗಲೀ, ವಿರೋಧವನ್ನಾಗಲೀ ಹೊಂದಿರಬಾರದೆಂದು ನಾನು ಅಪೇಕ್ಷಿಸುತ್ತೇನೆ. ನೀವು ನಿಮ್ಮ ಹಕ್ಕು ಬಾಧ್ಯತೆಗಳನ್ನು ಹಿಂಸಾಮಾರ್ಗದಿಂದ ಕಸಿದುಕೊಳ್ಳಲೆತ್ನಿಸುವುದನ್ನು ನಾನು ಅಪೇಕ್ಷಿಸುವುದಿಲ್ಲ. ಜಗತ್ತಿನ ಅಭಿಪ್ರಾಯವು ಇಂಥ ಹಿಂಸೆಗೆ ವಿರೋಧವಾಗಿ ಬೆಳೆಯುತ್ತಿದೆ. ಬಲವಂತ ಪ್ರಯೋಗದಿಂದ ಯಾವ ಹಕ್ಕು ಬಾಧ್ಯತೆಗಳನ್ನೂ ಹೊಂದಲು ಅಸಾಧ್ಯವಾಗುವ ಕಾಲ ಜಗತ್ತಿಗೆ ಬರುವುದನ್ನು ನಾ ಸ್ಪಷ್ಟವಾಗಿ ಕಾಣಬಲ್ಲೆ. ಆದುದರಿಂದ ನೀವು ನಿಮ್ಮ ಧ್ಯೇಯವನ್ನು ಸಾಧಿಸಲು ಬಲಪ್ರಯೋಗವನ್ನು ಅನುಸರಿಸಿದರೆ, ಖಂಡಿತ ವಿಫಲರಾಗುವಿರೆಂದು ಇಂದೇ ಹೇಳಬಯಸುತ್ತೇನೆ. ನಿಮ್ಮೊಡನಾಗಲೀ ಅಥವಾ ಇತರರೊಡನಾಗಲೀ ನಾನು ವ್ಯವಹಾರ ನಡೆಸುವಾಗ ಚಾತುರ್ಯವನ್ನು ಉಪಯೋಗಿಸಲು ಅಪೇಕ್ಷಿಸುವುದಿಲ್ಲ. ನಾನು ನಿಮ್ಮನ್ನು ಯಾವ ಬಗೆಯ ಮಿಥ್ಯಾತ್ಮಕ ಭ್ರಮೆಯಲ್ಲಿಯೂ ಇಡಲು ಅಪೇಕ್ಷಿಸುವುದಿಲ್ಲ ; ಅಥವಾ ಆಶೆಗಳನ್ನು ಹುಟ್ಟಿಸಿ, ನಿಮ್ಮ ಬೆಂಬಲವನ್ನು ಪಡೆಯಲಪೇಕ್ಷಿಸುವುದಿಲ್ಲ. ನಾನು ಯಾವ ರಾಜಕೀಯ ಫಲವನ್ನೇ ಹೊಂದುವ ಸಲುವಾಗಿ ನಿಮ್ಮನ್ನು ಶೋಷಿಸಲಾರೆ. ನನ್ನ ಸಮಸ್ಯೆ ಸ್ವರಾಜ್ಯದ ಸಮಸ್ಯೆಯನ್ನು ಮೀರಿದುದಾಗಿದೆ. ಅಸ್ಪೃಶ್ಯತೆ ನಿರ್ನಾಮವಾಗಲು ನಾನು ತುಂಬ ಕುತೂಹಲ ಉಳ್ಳವನಾಗಿದ್ದೇನೆ, ಏಕೆಂದರೆ, ನನ್ನ ದೃಷ್ಟಿಯಲ್ಲಿ ಅದೊಂದು ಆತ್ಮಪ್ರಾಯಶ್ಚಿತ್ತ ರೂಪವಾದ ತಪಸ್ಸು. ಈ ದುಷ್ಟಪದ್ಧತಿಗೆ ಮಾನ್ಯತೆ ಕೊಟ್ಟಿರುವ ಹಿಂದೂಧರ್ಮ ಮಹಾಪಾಪವೆಸಗಿದೆ. ಒಬ್ಬರ ಪರವಾಗಿ ಮತ್ತೊಬ್ಬರು ಆತ್ಮಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಸಾಧ್ಯವಿರುವುದಾದರೆ, ಹಿಂದೂಧರ್ಮವನ್ನು ಈ ಪಾಪವಿಮುಕ್ತವನ್ನಾಗಿ ಮಾಡಲು ನಾನೇ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸಿದ್ಧನಿದೇನೆ.

ಇರುವುದು ಹೀಗಿರುವುದರಿಂದ, ನನ್ನ ಉದ್ದೇಶ ಸಾಧನೆಗೆ ಸತ್ಯ ಅಹಿಂಸೆಗಳ ಮಾರ್ಗವೊಂದೇ ಎಂದು ಸಿದ್ಧವಾಗುತ್ತದೆ. ಒಂದು 'ಅಸ್ಪೃಶ್ಯ' ಶಿಶುವನ್ನು ನನ್ನದನ್ನಾಗಿ ಸ್ವೀಕರಿಸಿದೇನೆ. ನನ್ನ ಹೆಂಡತಿಯನ್ನು ಪೂರ್ಣವಾಗಿ ನನ್ನ ಅಭಿಪ್ರಾಯಕ್ಕೆ ಪರಿವರ್ತನೆ ಮಾಡಲು ನನಗೆ ಸಾಧ್ಯವಾಗಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆಕೆ, ಆ ಶಿಶುವನ್ನು ನಾನು ಪ್ರೀತಿಸುವಂತೆ ಪ್ರೀತಿಸಲು ಸಮರ್ಥಳಾಗಿಲ್ಲ. ಆದರೆ, ಕ್ರೋಧ ತೋರಿ ನನ್ನ ಹೆಂಡತಿಯನ್ನು ಪರಿವರ್ತಿಸಲಾರೆ. ಪ್ರೇಮದಿಂದಲೇ ಅದನ್ನು ಮಾಡಬಲ್ಲೆ. ನನ್ನ

ಜನ ನಿಮಗೆ ಏನಾದರೂ ತೊಂದರೆಯನ್ನು ಮಾಡಿದ್ದರೆ, ಅದಕ್ಕೆ ನಿಮ್ಮ ಕ್ಷಮೆ ಬೇಡುವೆ. ನಾನು ಪೂನಾದಲ್ಲಿ ಇದ್ದಾಗ ಕೆಲವು ಅಸ್ಪೃಶ್ಯ ಜನರು, ತಮ್ಮ ವಿಷಯದಲ್ಲಿ ಹಿಂದೂಗಳು ಭಾವನೆಯನ್ನು ಬದಲಾಯಿಸಿಕೊಳ್ಳದಿದ್ದರೆ ದಂಗೆ ಏಳುವುದಾಗಿ ತಿಳಿಸಿದರು. ಅಸ್ಪೃಶ್ಯತೆಯು ದಂಗೆ ಏಳುವುದರಿಂದ ನಿರ್ಮೂಲವಾದೀತೆ? ಈ ವಿಧಾನಗಳಿಂದ ಅಸ್ಪೃಶ್ಯರಿಗೆ ಪರಿಹಾರ ದೊರೆತೀತೆ? ಆದುದರಿಂದ, ಸಂಪ್ರದಾಯ ಬದ್ಧ ಹಿಂದೂಗಳನ್ನು ಧರ್ಮಾಂಧತೆಯಿಂದ ನೀವಾಗಲೀ ನಾನಾಗಲೀ ತಿರುಗಿಸಲು, ಇರುವ ಒಂದೇ ಒಂದು ಮಾರ್ಗವೆಂದರೆ, ಸಹನೆಯಿಂದ ಕೂಡಿದ ವಿಚಾರ ಮತ್ತು ಸರಿಯಾದ ವರ್ತನೆ. ಅವರು ಪರಿವರ್ತನೆ ಹೊಂದದ ಇರುವವರೆಗೂ ನೀವು ತಾಳ್ಮೆಯಿಂದ ಸಹಿಸಿಕೊಂಡಿರಬೇಕೆಂದು ಪ್ರಾರ್ಥಿಸುತ್ತೇನೆ. ನಾನು ನಿಮ್ಮೊಡನಿದ್ದು ನಿಮ್ಮ ಕಷ್ಟಗಳನ್ನು ಹಂಚಿಕೊಳ್ಳಬಯಸುತ್ತೇನೆ. ಇತರ ಜಾತಿಗಳವರು ಯಾವ ದೇವಾಲಯಗಳಲ್ಲಿ ಪ್ರವೇಶಾಧಿಕಾರವನ್ನು ಹೊಂದಿ, ಪೂಜೆ ಮಾಡಲು ಹಕ್ಕನ್ನು ಹೊಂದಿರುವರೋ ಅಂಥ ದೇವಾಲಯಗಳಲ್ಲಿ ಪೂಜೆ ಮಾಡುವ ಹಕ್ಕು ನಿಮಗೂ ಇರಲೇಬೇಕು. ಪಾಠಶಾಲೆಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದಂತೆ, ಇತರ ಜಾತಿಗಳವರ ಮಕ್ಕಳೊಂದಿಗೆ ನಿಮ್ಮ ಮಕ್ಕಳೂ ಸೇರಿ ವ್ಯಾಸಂಗ ಮಾಡುವಂತಾಗಬೇಕು. ನಾಡಿನ ಯಾವ ಅಧಿಕಾರವನ್ನೂ ಹೊರಗೆಣಿಸದೆ ಅತ್ಯಂತ ದೊಡ್ಡ ಅಧಿಕಾರ ಸ್ಥಾನಕ್ಕೂ ನೀವು ಯೋಗ್ಯರಾಗಬೇಕು. ಇದೇ ಅಸ್ಪೃಶ್ಯತಾ ನಿವಾರಣೆಯ ಬಗೆಗೆ ನನ್ನ ವಿವರಣೆ.

ಆದರೆ, ನನ್ನ ಧರ್ಮದಲ್ಲಿ ಸೂಚಿತವಾದ ಮಾರ್ಗವನ್ನು ನೀವು ಅನುಸರಿಸಿದರೆ ಮಾತ್ರ ನಿಮಗೆ ನೆರವೀಯಬಲ್ಲೆನೇ ಹೊರತು ಪಾಶ್ಚಾತ್ಯ ಮಾರ್ಗವನ್ನು ಅನುಸರಿಸಿದರಲ್ಲ. ಪಾಶ್ಚಾತ್ಯ ಮಾರ್ಗದಿಂದ ನಾನು ಹಿಂದೂಧರ್ಮವನ್ನು ರಕ್ಷಿಸಲಾರೆ. ನಿಮ್ಮ ಗುರಿ ಪವಿತ್ರವಾದುದು. ಸೈತಾನನ ಮಾರ್ಗವನ್ನು ಅನುಸರಿಸಿ ಒಂದು ಪವಿತ್ರ ಧ್ಯೇಯವನ್ನು ಯಾರಾದರೂ ಸಾಧಿಸಲಾದೀತೆ? ಆದುದರಿಂದ ನಿಮ್ಮ ಸ್ಥಿತಿಗತಿಗಳನ್ನು ಪಾಶವೀ ಶಕ್ತಿಯ ಪ್ರಯೋಗದಿಂದ ಪರಿಹರಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ನಿಮ್ಮ ಮನಸ್ಸಿನಿಂದ ತ್ಯಜಿಸಬೇಕೆಂದು ಪ್ರಾರ್ಥಿಸುತ್ತೇನೆ. ಹೃದಯದಲ್ಲಿ ಅನನ್ಯ ಧ್ಯಾನ ಸಲ್ಲಿಸುವುದರಿಂದ ಮೋಕ್ಷ ಲಭಿಸುತ್ತದೆಂದು ಗೀತೆಯ ಬೋಧೆ.

ಧ್ಯಾನವೆಂದರೆ, ಪರಮಾತ್ಮನ ಕೈಂಕರ್ಯ. ಭಗವಂತನ ಕೈಂಕರ್ಯದಿಂದ ಪರಮಾನಂದಮಯ ಮೋಕ್ಷವೇ ದೊರಕುವುದಾದರೆ, ಅಸ್ಪೃಶ್ಯತಾ ನಿವಾರಣೆ ಎಷ್ಟು ಜಾಗ್ರತೆ ಸಾಧ್ಯವಾದೀತು! ಪರಮಾತ್ಮನ ಕೈಂಕರ್ಯವೆಂದರೆ, ಪರಿಶುದ್ಧತೆಯ ವೃದ್ಧಿ. ಪ್ರಾರ್ಥನೆಯಿಂದ ಆತ್ಮಶುದ್ಧಿ ಮಾಡಿಕೊಂಡು ಅಸ್ಪೃಶ್ಯತಾ ನಿವಾರಣೆಯನ್ನಷ್ಟೇ ಅಲ್ಲ ಸ್ವರಾಜ್ಯವನ್ನೂ ಜಾಗ್ರತೆ ಸಿದ್ಧಿಸಿಕೊಳ್ಳೋಣ.

(ಬೆಳಗಾಂವಿಯಲ್ಲಿ ನಡೆದ ಅಸ್ಪೃಶ್ಯತಾ ನಿವಾರಣೆ ಸಮ್ಮೇಳನ ಭಾಷಣದಿಂದ.)

(ಯಂಗ್ ಇಂಡಿಯಾ : ೨೨-೧-೨೫)

ಸಹಭೋಜನ ಮತ್ತು ಜಾತ್ಯಂತರ ವಿವಾಹ

ಅಸ್ಪೃಶ್ಯತೆಯ ನಿವಾರಣೆಗೆ, ಸಹಭೋಜನವೂ ಜಾತ್ಯಂತರ ವಿವಾಹವೂ ಆವಶ್ಯಕವೆ?

'ಇಲ್ಲ' — 'ಹೌದು' — ಈ ಎರಡೂ ನನ್ನ ಉತ್ತರ. 'ಇಲ್ಲ' ಏಕೆಂದರೆ, ಅದು ಹರಿಜನ ಸೇವಕ ಸಂಘದ ಕಾರ್ಯಕ್ರಮದ ಅಂಶವಲ್ಲ. ಸಾಮಾನ್ಯವಾಗಿ, ವಿವಾಹ ಮತ್ತು ಭೋಜನ, ಇವು ವ್ಯಕ್ತಿಗತ ವಿಷಯಗಳು. ಯಾರೇ ಆಗಲಿ, ಇನ್ನೊಬ್ಬನ ಮನಸ್ಸಿಗೆ ವಿರೋಧವಾಗಿ, ಹುಡುಗಿಯೊಬ್ಬಳನ್ನು ಹೆಂಡತಿಯನ್ನಾಗಿ ಸ್ವೀಕರಿಸಬೇಕೆಂದಾಗಲೀ, ಅಥವಾ ಭೋಜನ ಮಾಡಬೇಕೆಂದಾಗಲೀ ಹೇಳುವ ಹಕ್ಕನ್ನು ಹೊಂದಿಲ್ಲ. ಇದನ್ನು ಹೇಳುವಾಗಲೇ ನನ್ನ ಉತ್ತರ 'ಹೌದು' ಎಂದಿದೆ; ಏಕೆಂದರೆ, ಅಸ್ಪೃಶ್ಯತೆ ಅಥವಾ ಕೀಳುತನವೆಂಬ ಕಾರಣದಮೇಲೆ, ಇನ್ನೊಬ್ಬನಿಂದ ಸ್ಪರ್ಶವಾದ ಆಹಾರವನ್ನು ಒಬ್ಬನು ಸೇವಿಸಲು ನಿರಾಕರಿಸುವುದಾದರೆ, ಅವನು ಅಸ್ಪೃಶ್ಯತೆಯನ್ನು ಆಚರಿಸಿದಂತೆಯೇ ಸರಿ. ಇದನ್ನೇ ಬೇರೆ ಮಾತಿನಲ್ಲಿ ಹೇಳುವುದಾದರೆ, ಜಾತ್ಯಂತರ ವಿವಾಹ ಅಥವಾ ಸಹಭೋಜನ ನಿರೋಧಕ್ಕೆ ಅಸ್ಪೃಶ್ಯತೆಯು ಯಾವ ರೀತಿಯಿಂದಲೂ ಆಧಾರವಾಗಲಾರದು.

ಜಾತಿ ನಿರ್ಮೂಲವಾಗಬೇಕು

ಇಂದಿನ ಜಾತಿ ಪದ್ಧತಿ ವರ್ಣಾಶ್ರಮಕ್ಕೆ ಕೇವಲ ವಿರುದ್ಧವಾಗಿದೆ. ಅದನ್ನು ಸಾರ್ವಜನಿಕ ಅಭಿಪ್ರಾಯ ಎಷ್ಟು ಜಾಗ್ರತೆ ತೊಡೆದುಹಾಕುತ್ತದೆಯೋ ಅಷ್ಟೂ ಉತ್ತಮ.

ವರ್ಣಾಶ್ರಮದಲ್ಲಿ ಜಾತ್ಯಂತರ ವಿವಾಹ ಅಥವಾ ಸಹಭೋಜನಕ್ಕೆ ಪ್ರತಿಬಂಧಕವಿರಲಿಲ್ಲ; ಇರಬಾರದು. ಲಾಭದಾಸೆಗಾಗಿ ತನ್ನ ಆನುವಂಶಿಕ ಉದ್ಯೋಗವನ್ನು ಬದಲಾವಣೆ ಮಾಡುವುದಕ್ಕೆ ಪ್ರತಿಬಂಧಕವೇನೋ ಇದೆ.

ಜಾತ್ಯಂತರ ವಿವಾಹ ಮತ್ತು ಸಹಭೋಜನಗಳ ವಿಷಯದಲ್ಲಿ ವರ್ಣಾಶ್ರಮವು ನಿರೋಧ ಮಾಡದಿದ್ದರೂ, ಬಲಾತ್ಕಾರಕ್ಕಂತೂ ಅವಕಾಶವೇ ಇಲ್ಲ. ಯಾರನ್ನು ವಿವಾಹವಾಗಬೇಕು, ಎಲ್ಲಿ ಭೋಜನ ಮಾಡಬೇಕು ಎಂಬ ಬಗೆಗೆ ವ್ಯಕ್ತಿಗೇ ಅನಿರ್ಬಂಧಯುತ ಸ್ವಾತಂತ್ರ್ಯವಿರಬೇಕು. ವರ್ಣಾಶ್ರಮ ಧರ್ಮವು ಅನುಸರಿಸಲ್ಪಟ್ಟರೆ, ವಿವಾಹಕ್ಕೆ ಸಂಬಂಧಿಸಿದಂತೆ, ಜನ ಸ್ವಾಭಾವಿಕವಾಗಿಯೇ ಅದನ್ನು ತಮ್ಮ ವರ್ಣಕ್ಕೇ ಪರಿಮಿತಿಗೊಳಿಸಿಕೊಳ್ಳುವರು.

ಸುಧಾರಕರು, ಅತ್ಯಂತ ಪ್ರಭಾವಯುತವೂ, ಶೀಘ್ರವೂ ಮತ್ತು ಅಪ್ರತಿಬಂಧಕವೂ ಆದ ರೀತಿಯಲ್ಲಿ ಜಾತಿಯನ್ನು ನಾಶಮಾಡಬೇಕೆಂದರೆ, ಅವರೇ ಅದನ್ನು ಆರಂಭಿಸಿ, ಆವಶ್ಯಕ ಬಿದ್ದರೆ ಸಾಮಾಜಿಕ ಬಹಿಷ್ಕಾರವನ್ನೂ ಸ್ವೀಕರಿಸಬೇಕು. ಸಂಪ್ರದಾಯಸ್ಥರಮೇಲೆ ಬೈಗುಳು ಸುರಿಸುತ್ತ ಮಾತನಾಡಿದರೆ ಸುಧಾರಣೆ ಆಗಲಾರದು. ಪರಿವರ್ತನೆ ಕ್ರಮವಾಗಿ ಆಗುತ್ತದೆ. ಉಚ್ಚವರ್ಗದವರೆನಿಸಿಕೊಂಡವರು ಕೀಳುವರ್ಗಗಳೆನಿಸಿಕೊಂಡವರ ಮನಸ್ಸಿನಮೇಲೆ ಏನಾದರೂ ಪರಿಣಾಮಗೈಯಬೇಕಾದರೆ, ಅವರು ತಮ್ಮ ದೊಡ್ಡಸ್ತಿಕೆಯಿಂದ ದೂರವಾಗಬೇಕು. ಗ್ರಾಮಸೇವೆಯ ದೈನಂದಿನ ಅನುಭವವು ಪಟ್ಟಣವಾಸಿಗಳಿಗೂ ಗ್ರಾಮೀಣರಿಗೂ ಉಚ್ಚವರ್ಗಗಳವರಿಗೂ ಕೀಳುವರ್ಗಗಳವರಿಗೂ ಮಧ್ಯೆ ಇರುವ ಅಂತರವನ್ನು ಕೂಡಿಸುವ ಕಾರ್ಯ ಎಷ್ಟೊಂದು ದುಸ್ತರವಾದುದೆಂಬುದನ್ನು ತೋರಿಸುತ್ತದೆ.

(ಹರಿಜನ: ೧೬-೧೧-೩೫)

'ಜಾತಿ ನಿರ್ಮೂಲವಾಗಬೇಕು' ಎಂಬ ಲೇಖನದಲ್ಲಿ ನಾ ವ್ಯಕ್ತ ಪಡಿಸಿರುವ ಅಭಿಪ್ರಾಯಗಳು ಈ ಪತ್ರಿಕೆಯಲ್ಲಿ ವಿವಿಧ ಶೀರ್ಷಿಕೆಗಳಡಿ ಆಗಾಗ ವ್ಯಕ್ತಪಡಿಸಲ್ಪಟ್ಟಿದೆ. ಜೊತೆಗೆ, ಆ ಲೇಖನವು ಸವರ್ಣ ಹಿಂದೂಗಳಿಗೂ, ಹರಿಜನ ಹಿಂದೂಗಳಿಗೂ ಇರುವ ಸಂಬಂಧವನ್ನು ಕುರಿತು ಹೇಳುವುದಿಲ್ಲ. ಅದು ಸವರ್ಣರಲ್ಲಿಯೇ ಆಗಬೇಕಾದ ಸುಧಾರಣೆಯನ್ನು ಮಾತ್ರ ಕುರಿತು ಹೇಳುತ್ತದೆ. ಅಸ್ಪೃಶ್ಯತೆಯು ಹೋದಾಗ, ಅಸ್ಪೃಶ್ಯರು ಸವರ್ಣ ಹಿಂದೂಗಳ ಸ್ಥಾನವನ್ನೇ ಹೊಂದುವರು. ಯಾವ ನಿಯಮ ಅಥವಾ ಪದ್ಧತಿಗಳು ಸವರ್ಣ ಹಿಂದೂಗಳಿಗೆ ಅನ್ವಯಿಸುವುವೋ ಅವೇ ಇನ್ನುಮುಂದೆ ಹರಿಜನರೆನಿಸಿಕೊಳ್ಳದ ಹರಿಜನರಿಗೂ ಅನ್ವಯಿಸುತ್ತವೆ. ಆದುದರಿಂದ ಜಾತಿ ಇಂದಿರುವಂತೆಯೇ ಇರುವುದಾದರೆ, ಹರಿಜನರಿಗೂ ಸವರ್ಣ ಹಿಂದೂಗಳಿಗೂ ಸಹಭೋಜನ ಮತ್ತು ಜಾತ್ಯಂತರ ವಿವಾಹ, ಇವು ಸಾಧ್ಯವಾಗದು. ಇಂದಿನ ರೂಪದಲ್ಲಿರುವ ಜಾತಿ ಹೋಗುವುದಾದರೆ — ಅದು ಎಂದಾದರೂ ಹೋಗಲೇಬೇಕು — ಸವರ್ಣೀಯರ ನಡುವೆ ಪರಸ್ಪರ ಇರುವಂತೆ, ಸಹಭೋಜನವೂ ಜಾತ್ಯಂತರ ವಿವಾಹವೂ ನಿಸ್ಸಂದೇಹವಾಗಿ ಆಗುತ್ತದೆ. ಒಂದುವೇಳೆ ವರ್ಣ ನಿಲ್ಲುವುದಾದರೆ—ಅದು ನಿಲ್ಲುವುದೆಂದು ನನ್ನ ನಂಬಿಕೆ—ಅದು ಪ್ರಾಚೀನಕಾಲದಲ್ಲಿ ಪರಿಮಿತಗೊಳಿಸಲ್ಪಟ್ಟಂತೆ ಇರುವುದು; ಸಹಭೋಜನಕ್ಕೂ ಜಾತ್ಯಂತರ ವಿವಾಹಕ್ಕೂ ಪ್ರಾಚೀನ ಕಾಲದಲ್ಲಿದ್ದಂತೆ ನಿರ್ಬಂಧವಿಲ್ಲದೆ ಇರುವುದು. ಏನೇ ಆಗಲಿ, ಅದು, ವ್ಯವಸ್ಥಾರೂಪದಲ್ಲಿರುವ ಹರಿಜನ ಸೇವಕ ಸಂಘದ ಕಾರ್ಯಕ್ರಮದಿಂದಲೇ ಆಗಲಾರದು. ಅದು, ಸಂಘದ ಅಧೀನದಲ್ಲಿಲ್ಲದ ಮತ್ತು ಸಂಘ ಹತೋಟಿಯಲ್ಲಿಡಲಾರದ ಇತರ ಶಕ್ತಿಗಳ ಪ್ರಭಾವದಿಂದ ಆಗುತ್ತದೆ. ವ್ಯಕ್ತಿರೂಪವಾಗಿರುವ ಅದರ ಸದಸ್ಯರು ತಮ್ಮ ಮನಸ್ಸಿನ ಒಲವಿಗೆ ತಕ್ಕಂತೆ ಆ ಶಕ್ತಿಗಳಿಗೆ ಆಕಾರ ಬರುವಂತೆ ಮಾಡಲು ನಿಸ್ಸಂದೇಹವಾಗಿ ಪ್ರಯತ್ನಿಸುವರು.

(ಹರಿಜನ : ೩೦-೧೧-೩೫)

ಸಹಭೋಜನ

ಪ್ರಶ್ನೆ: ಹರಿಜನ ಸೇವಕ ಸಂಘದ ಸದಸ್ಯರು ಅಸ್ಪೃಶ್ಯರೊಂದಿಗೆ ಸಹಭೋಜನ ಮಾಡಲು ನಿರಾಕರಿಸಬಹುದೆ? ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಬದಲಾವಣೆ ಹೊಂದಿದೆಯೆ?

ಉತ್ತರ: ಒಂದುಕಾಲದಲ್ಲಿ ಅಸ್ಪೃಶ್ಯತಾ ನಿವಾರಣೆಯ ಪ್ರಚಾರ ಕಾರ್ಯದಲ್ಲಿ ಅದು ಒಂದು ಆವಶ್ಯಕವಾದ ಭಾಗವಲ್ಲವೆಂದು ಹೇಳಿದ್ದುಂಟು. ವೈಯಕ್ತಿಕವಾಗಿ ಅದು ನನ್ನ ಅಭಿಪ್ರಾಯವಾಗಿತ್ತು. ಇಂದು ನಾನು ಸಹಭೋಜನಕ್ಕೆ ಪ್ರೋತ್ಸಾಹವೀಯುತ್ತೇನೆ. ವಾಸ್ತವಿಕವಾಗಿ ನಾನಿನ್ನೂ ಪುರೋಗಾಮಿ. (ಹರಿಜನ : ೨೮-೭-೪೬)

ಹರಿಜನರಿಗೂ ಹರಿಜನೇತರರಿಗೂ ವಿವಾಹ

ಸೂರತ್ತಿನ ಪತ್ತಿದಾರ್ ಆಶ್ರಮದ ಒಬ್ಬ ಗೆಳೆಯ ಶ್ರೀ ನರಹರಿ ಪಾರೀಖರಿಗೆ ಈ ರೀತಿ ಬರೆಯುತ್ತಾರೆ:

"ಗಾಂಧೀಜೀ ರಾಜಕೀಯ ಪ್ರವೇಶ ಮಾಡಿದಂದಿನಿಂದ, ಭಾರತದಲ್ಲಿ ಅಸ್ಪೃಶ್ಯತಾ ನಿವಾರಣೆಯ ಚಳುವಳಿಗೆ ದೊಡ್ಡ ಜೋರು ಬಂದಿದೆ. ಸವರ್ಣ ಹಿಂದೂವನ್ನು ವಿವಾಹ ಮಾಡಿಕೊಳ್ಳುವ ವಿದ್ಯಾವಂತ ಹರಿಜನ ಕನ್ಯೆಯೊಬ್ಬಳು ಅವರಿಗೆ ಸಿಕ್ಕಿದರೆ, ಒಂದು ವಿಧದಲ್ಲಿ ಅದು ಚಳುವಳಿಗೆ ಸಹಾಯಕವಾದೀತು. ಈ ಸಮಸ್ಯೆಯನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬೇಕು. ಸ್ತ್ರೀಯರ ವಿದ್ಯಾಪ್ರಗತಿಯಲ್ಲಿ ನಮ್ಮ ದೇಶ ಇನ್ನೂ ಹಿಂದೆಬಿದ್ದಿದೆ. ಅದರಲ್ಲಿಯೂ, ಎಲ್ಲ ವಿಧಗಳಲ್ಲಿ ಹಿಂದೆ ಬಿದ್ದಿರುವ ಹರಿಜನರಲ್ಲಿ ವಿದ್ಯಾವಂತ ಕನ್ಯೆಯರನ್ನು ಬೆರಳ ತುದಿಯಲ್ಲಿ ಎಣಿಸಬಹುದು. ಅವರು ಸವರ್ಣ ಹಿಂದೂಗಳನ್ನು ವಿವಾಹವಾಗುವುದಾದರೆ, ಸಾಮಾನ್ಯವಾಗಿ ತಮ್ಮ ಜನರಿಂದ ದೂರವಾಗಿ, ಸವರ್ಣ ಹಿಂದೂಗಳಲ್ಲಿ ಲೀನವಾಗುವರು. ತಮ್ಮ ಹರಿಜನ

ಸೋದರಿಯರಿಗೆ ಅವರೊಡನಿದ್ದು ಸೇವೆ ಸಲ್ಲಿಸಲು ಸಾಧ್ಯವಿಲ್ಲದೆ ಹೋಗುತ್ತದೆ. ಅಂಥ ಒಂದೆರಡು ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ.

"ಒಂದು ದೃಷ್ಟಿಯಿಂದ ಇಂಥ ವಿವಾಹಗಳು ಹರಿಜನರನ್ನು ಅಜ್ಞಾನದಲ್ಲಿಯೇ ಇಡಲು ನೆರವಾಗುತ್ತವೆಂದು ಯಾರಾದರೂ ವಾದಿಸಬಹುದು. ಒಂದು ಜನತೆಯ ಪ್ರಗತಿ ಅದರ ಸ್ತ್ರೀಯರ ಪ್ರಗತಿಯನ್ನು ಅವಲಂಬಿಸಿದೆ. ಹರಿಜನರಲ್ಲಿ ಅತಿ ಶ್ರೇಷ್ಠ ಹೆಣ್ಣನ್ನು ಸವರ್ಣ ಹಿಂದೂಗಳಿಗೆ ಕೊಟ್ಟು ವಿವಾಹ ಮಾಡುವದರಿಂದ, ಇಂದು ತಾವಿರುವ ಅಂಧಕಾರದ ಕಮರಿಯಿಂದ ಪಾರಾಗಲು ಹರಿಜನರಿಗೆ ದಾರಿಯನ್ನೇ ಮುಚ್ಚಿದಂತಾಗುತ್ತದೆ, ಬಾಪೂ. ಇದು ನಿಲ್ಲಬೇಕೆನಿಸುತ್ತದೆ ನನಗೆ. ಹರಿಜನ ಕನ್ಯೆಯರು ಸವರ್ಣ ಹಿಂದೂಗಳನ್ನು ವಿವಾಹಮಾಡಿಕೊಳ್ಳಬೇಕಾದರೆ, ಇಬ್ಬರೂ ಹರಿಜನ ಸೇವೆಗಾಗಿಯೇ ತಮ್ಮ ಜೀವನವನ್ನು ಸಮರ್ಪಿಸಬೇಕೆಂಬ ಷರತ್ತು ಹಾಕಬೇಕು. ಇಲ್ಲವಾದರೆ, ವಿದ್ಯಾವಂತ ಹರಿಜನ ಕನ್ಯೆಯರು ತಮ್ಮ ಜಾತಿಯ ವಿದ್ಯಾವಂತ ತರುಣರನ್ನೇ ವಿವಾಹ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಅವರು ನಿಜವಾಗಿಯೂ ವಿದ್ಯಾವಂತರಾದರೆ, ತಮ್ಮ ಜಾತಿಯವರಿಗೆ ಆದರ್ಶ ನಿದರ್ಶನಗಳಾದಾರು.

"ನಮ್ಮ ಆಶ್ರಮದಲ್ಲಿ ಹರಿಜನ ಮತ್ತು ಹರಿಜನೇತರ ವಿದ್ಯಾರ್ಥಿಗಳು ಯಾವ ಬಗೆಯ ವ್ಯತ್ಯಾಸವೂ ಇಲ್ಲದೆ ಒಟ್ಟಿಗೆ ವಾಸಿಸುತ್ತಿರುವುದನ್ನು ನೀವು ಅರಿತಿರಬಹುದು. ಪ್ರತಿ ವರುಷವೂ ಒಬ್ಬರಿಬ್ಬರು ಹರಿಜನ ವಿದ್ಯಾರ್ಥಿಗಳನ್ನು ಪರೀಕ್ಷಿತಲಾಲರು ಕಳಿಸುತ್ತಾರೆ. ಈ ವರುಷ ಇಬ್ಬರು ಬಂದರು. ಅವರಲ್ಲಿ ಒಬ್ಬನು ನನ್ನಲ್ಲಿ ಹೀಗೆ ಹೇಳಿದ: 'ಬಾಪೂ ವಿದ್ಯಾವಂತ ಸವರ್ಣ ಹಿಂದೂ ಕನ್ಯೆಯರನ್ನು ವಿದ್ಯಾವಂತ ಹರಿಜನರಿಗೆ ಕೊಟ್ಟು ವಿವಾಹಮಾಡುವುದನ್ನು ಏಕೆ ಪ್ರೋತ್ಸಾಹಿಸುವುದಿಲ್ಲ? ಇದನ್ನೇ ಅವರು ನಿಜವಾಗಿ ಪ್ರೋತ್ಸಾಹಿಸಬೇಕು. ಸವರ್ಣ ಹಿಂದೂ ಕನ್ಯೆಯರು ಹರಿಜನ ಕನ್ಯೆಯರೊಂದಿಗೆ ಹರಿಜನರಂತೆಯೇ ವಾಸಿಸಿದರೆ, ಹರಿಜನ ತಂಗಿಯರು ಅವರಿಂದ ಎಷ್ಟೋ ಕಲಿಯಲು ಸಾಧ್ಯವಾದೀತು. ಇದರಿಂದ ಹರಿಜನೋದ್ಧಾರ ಕಾರ್ಯಕ್ಕೆ ತುಂಬ ಪ್ರಗತಿ ಬಂದೀತು.' ನಾನೇ ಈ ಪ್ರಶ್ನೆಗೆ ಉತ್ತರವಿತ್ತೇನು. ಆದರೆ, ಬಾಪೂ ಕೊಟ್ಟರೆ ಉತ್ತಮ. ಇದಕ್ಕೆ ಗಂಭೀರವಾದ ಆಲೋಚನೆ ಅಗತ್ಯ."

ಒಬ್ಬ ವಿದ್ಯಾವಂತ ಹರಿಜನ ಕನ್ಯೆ ಸವರ್ಣ ಹಿಂದೂವನ್ನು ವಿವಾಹ ಮಾಡಿಕೊಂಡರೆ, ದಂಪತಿಗಳಿಬ್ಬರೂ ಹರಿಜನ ಸೇವೆಗೆ ಶ್ರಮಿಸಬೇಕು. ಭೋಗೇಚ್ಛೆ ಎಂದಿಗೂ ಅಂಥ ವಿವಾಹದ ಉದ್ದೇಶವಾಗಬಾರದು. ಅದು ಅಯುಕ್ತ. ನಾನೆಂದಿಗೂ ಅದನ್ನು ಪ್ರೋತ್ಸಾಹಿಸಲಾರೆ. ಉತ್ತಮ ಸದುದ್ದೇಶಗಳಿಂದಲೇ ಆದ ವಿವಾಹಸಂಬಂಧವೂ ಭಂಗವಾಗುವುದು ಸಾಧ್ಯ. ಯಾರೂ ಅಂಥ ಆಕಸ್ಮಿಕಗಳನ್ನು ತಪ್ಪಿಸಲಾರರು. ಒಬ್ಬಳೇ ಒಬ್ಬಳು ಹರಿಜನ ಕನ್ಯೆ ಉತ್ತಮ ಶೀಲಭರಿತ ಸವರ್ಣ ಹಿಂದೂವನ್ನು ವಿವಾಹವಾಗುವುದಾದರೆ, ಅದು ಹರಿಜನ ಮತ್ತು ಸವರ್ಣ ಹಿಂದೂ ಇಬ್ಬರಿಗೂ ಒಳಿತನ್ನು ಮಾಡುತ್ತದೆ. ಅವರು ಒಳ್ಳೆಯ ಮೇಲುಪಂಙ್ಕ್ತಿ. ಹರಿಜನ ಕನ್ಯೆ ನಿಜವಾಗಿಯೂ ಯೋಗ್ಯಳಾದರೆ, ಆಕೆ ತನ್ನ ಒಳ್ಳೆಯತನದ ಸೌರಭವನ್ನು ಎಲ್ಲೆಲ್ಲಿಯೂ ಬೀರಿ, ತನ್ನ ಮೇಲುಪಂಙ್ಕ್ತಿಯನ್ನು ಇತರರೂ ಅನುಸರಿಸಲು ಪ್ರೋತ್ಸಾಹಿಸುತ್ತಾಳೆ. ಇಂಥ ವಿವಾಹಗಳಿಂದ ಸಮಾಜದಲ್ಲಿ ಯಾವ ಗಾಬರಿಯೂ ಉಂಟಾಗದು. ಇದರಲ್ಲಿ ಯಾವ ತಪ್ಪೂ ಇಲ್ಲವೆಂದು ಎಲ್ಲರಿಗೂ ತಾನಾಗಿಯೇ ಗೋಚರಿಸುವುದು. ಇಂಥ ವಿವಾಹ ಸಂಬಂಧಗಳಿಂದ ಜನಿಸಿದ ಮಕ್ಕಳು ಒಳ್ಳೆಯವರಾದರೆ, ಅವರು ಅಸ್ಪೃಶ್ಯತಾ ನಿವಾರಣೆಗೆ ತುಂಬಾ ನೆರವಾದಾರು. ಎಲ್ಲ ಸುಧಾರಣೆಯೂ ಶಂಬುಕದ ಗತಿಯಲ್ಲಿ ಮುಂದುವರಿಯುತ್ತದೆ. ಇಂಥ ಪ್ರಗತಿ ನಿಧಾನವೆಂದು ಅತೃಪ್ತಿಗೊಳ್ಳುವುದು, ಸುಧಾರಣಾಕೆಲಸದ ವಿಧಾನ ಅರಿವಿಲ್ಲದಿರುವುದನ್ನು ಎತ್ತಿ ತೋರಿಸುತ್ತದೆ.

ಸವರ್ಣ ಹಿಂದೂ ಕನ್ಯೆಯರು ಹರಿಜನ ವರಗಳನ್ನು ಆರಿಸಿಕೊಳ್ಳುವುದು ನಿಜಕ್ಕೂ ಅಪೇಕ್ಷಣೀಯ. ಇದು ಉತ್ತಮವೆಂದು ಹೇಳಲು ನಾ ಹಿಂಜರಿಯುತ್ತೇನೆ. ಹಾಗೆಂದರೆ, ಹೆಂಗಸರು ಗಂಡಸರಿಗಿಂತ ಕೀಳೆಂದು ಅರ್ಥವಾದೀತು. ಈ ಕಾರಣದಿಂದ, ಈಗ್ಗೆ, ಸವರ್ಣ ಹಿಂದೂ ಕನ್ಯೆ ಹರಿಜನನೊಬ್ಬನನ್ನು ವಿವಾಹಮಾಡಿಕೊಳ್ಳುವುದು ಹರಿಜನ ಕನ್ಯೆ ಸವರ್ಣ ಹಿಂದೂವನ್ನು ಲಗ್ನ ಮಾಡಿಕೊಳ್ಳುವುದಕ್ಕಿಂತ ಉತ್ತಮವೆಂದು ನಾ ಒಪ್ಪುತ್ತೇನೆ. ನನ್ನ ಪ್ರಭಾವಕ್ಕೆ ಬರುವ ಎಲ್ಲ ಸವರ್ಣ ಹಿಂದೂ ಕನ್ಯೆಯರೂ, ಸಾಧ್ಯವಾದರೆ, ,ಹರಿಜನ ಪತಿಯನ್ನು ಆರಿಸಿಕೊಳ್ಳಲು ಒಪ್ಪಿಸಿಯೇನು. ಅದು ಬಹಳ ಕಠಿಣವೆಂದು ನನ್ನ ಅನುಭವ. ಹಳೆಯ ಅಭಿಪ್ರಾಯಗಳನ್ನು ಬಿಡುವುದು ಕಷ್ಟ. ಇಂಥ ಅಭಿಪ್ರಾಯಗಳನ್ನು ಕಂಡು ಗೇಲಿಮಾಡುವುದೂ

ಸಾಧ್ಯವಿಲ್ಲ. ಅವು ತಾಳ್ಮೆಯಿಂದ ಜಯಿಸಲ್ಪಡಬೇಕು. ಒಬ್ಬ ಹುಡುಗಿ ಹರಿಜನನೊಬ್ಬನನ್ನು ಲಗ್ನ ಮಾಡಿಕೊಂಡು ಅಷ್ಟರಿಂದಲೇ ತನ್ನ ಕರ್ತವ್ಯ ಮುಕ್ತಾಯವಾಯಿತೆಂದು ಭಾವಿಸಿ, ಅನಂತರ ಭೋಗಮಗ್ನಳಾದರೆ, ಅದು ಅನರ್ಥಕಾರಿ. ಪ್ರತಿ ವಿವಾಹದ ಅಂತಿಮ ಪರೀಕ್ಷೆ ಎಂದರೆ, ಅದು ವಧೂವರರಲ್ಲಿ ಎಷ್ಟರಮಟ್ಟಿನ ಸೇವಾವೃತ್ತಿಯನ್ನುಂಟುಮಾಡುತ್ತದೆಂಬುದು. ಪ್ರತಿ ಮಿಶ್ರವಿವಾಹವೂ, ಅಂಥ ವಿವಾಹಗಳ ಬಗೆಗೆ ಇರುವ ಕಳಂಕವನ್ನು ಸಾಧ್ಯವಾದಷ್ಟು ಕಮ್ಮಿಮಾಡುತ್ತದೆ. ಅಂತ್ಯದಲ್ಲಿ ಇರುವ ಜಾತಿ ಒಂದೇ — ಭಂಗಿ — ಎಂದರೆ, ಸುಧಾರಕ ಅಥವಾ ಎಲ್ಲ ಕಶ್ಮಲನಾಶಕ. ಅಂಥ ಸುದಿನ ಜಾಗ್ರತೆ ಬರಲೆಂದು ಎಲ್ಲರೂ ಪ್ರಾರ್ಥಿಸೋಣ.

ಕೇವಲ ಮಾತಿನಿಂದಲೇ ನನ್ನ ಎಲ್ಲ ಶ್ರೇಷ್ಠತಮ ಸದಾಶಯಗಳೂ ಯಥಾರ್ಥವಾಗಲಾರವೆಂಬುದನ್ನು ನನ್ನ ಪತ್ರ ಲೇಖಕ ಅರಿತಿರಬೇಕು. ಇದುವರೆಗೂ ಹರಿಜನ ಕನ್ಯೆಯೊಬ್ಬಳನ್ನು ಸವರ್ಣ ಹಿಂದೂವಿಗೆ ಕೊಟ್ಟು ವಿವಾಹವೆಸಗುವುದರಲ್ಲಿ ನಾ ಜಯಶಾಲಿಯಾಗಿಲ್ಲ. ತನ್ನ ತಂದೆಯ ಆಶೆಯಂತೆಯೇ, ಆತನು ಆಯ್ಕೆ ಮಾಡಿದ ಹರಿಜನನೊಬ್ಬನನ್ನು ಲಗ್ನ ಮಾಡಿಕೊಳ್ಳ ಬಯಸುವ ಸವರ್ಣ ಹಿಂದೂ ಕನ್ಯೆಯೊಬ್ಬಳು ನನ್ನೊಂದಿಗಿದಾಳೆ. ಸಧ್ಯಕ್ಕೆ ಹುಡುಗ ಸೇವಾಗ್ರಾಮದಲ್ಲಿ ಶಿಕ್ಷಣ ಪಡೆಯುತ್ತಿದಾನೆ. ದೈವೇಚ್ಛೆ ಇದ್ದರೆ ಇಬ್ಬರ ವಿವಾಹವೂ ಸ್ವಲ್ಪಕಾಲದಲ್ಲಿಯೇ ನಡೆದೀತು.

(ಹರಿಜನ : ೭-೭-೪೬)

ದೇವಾಲಯ ಪ್ರವೇಶ

ದೇವಾಲಯ ಪ್ರವೇಶವೂ - ಆರ್ಥಿಕೋನ್ನತಿಯೂ

ದೇವಾಲಯ ಪ್ರವೇಶ ಪ್ರಶ್ನೆಗೆ ಸಂಬಂಧಿಸಿದಂತೆ ಟೀಕೆಯನ್ನು ಸಾರ್ವಜನಿಕ ಪತ್ರಿಕೆಗಳಲ್ಲಿ ಆಗಾಗ ಯಾರಾದರೂ ಕಾಣಬಹುದು. ಅದು ಇಮ್ಮುಖವುಳ್ಳದು. ಒಂದುಕಡೆ ಹರಿಜನರಿಂದ ಬಂದರೆ, ಇನ್ನೊಂದು ಕಡೆ ಸನಾತನಿಗಳಿಂದ. ಕೆಲವು ಹರಿಜನರು ಹೀಗೆ ಹೇಳುತ್ತಾರೆ : 'ನಮಗೆ

ದೇವಾಲಯ ಪ್ರವೇಶ ಬೇಡ; ದೇವಾಲಯಗಳನ್ನು ಕಟ್ಟಬೇಡಿ. ಬರುವ ಆದಾಯವನ್ನೆಲ್ಲಾ ಹರಿಜನ ಆರ್ಥಿಕೋನ್ನತಿಗಾಗಿ ಉಪಯೋಗಿಸಿ.' ಕೆಲವು ಸನಾತನಿಗಳು ಹೀಗೆ ಹೇಳುತ್ತಾರೆ: 'ದೇವಾಲಯ ಪ್ರವೇಶ ಪ್ರಶ್ನೆಯನ್ನು ಪೂರ್ತಿಯಾಗಿ ಬಿಟ್ಟುಬಿಡಿ. ನೀವು ಹರಿಜನರನ್ನು ಬಲವಂತವಾಗಿ ದೇವಾಲಯಕ್ಕೆ ಪ್ರವೇಶ ಮಾಡಿಸುತ್ತಿರುವುದರಿಂದ ನಮಗೆ ಮಾನಸಿಕ ವ್ಯಥೆಯನ್ನು ಉಂಟುಮಾಡುತ್ತಿದೀರಿ.' ನಿಜವಾಗಿ, ಈ ಎರಡು ಭಾವಗಳೂ ತಪ್ಪು. ಹರಿಜನ ನಿಧಿಯಿಂದ ಒಂದು ಕುರುಡು ಕಾಸನ್ನೂ ದೇವಾಲಯಗಳನ್ನು ಕಟ್ಟಿಸಲು ಉಪಯೋಗಿಸಿಲ್ಲ; ಉಪಯೋಗಿಸುವುದೂ ಇಲ್ಲ. ಸವರ್ಣ ಹಿಂದೂಗಳಿಗೆ ಅವಕಾಶವಿರುವ ರೀತಿಯಲ್ಲಿಯೇ ಹರಿಜನರಿಗೂ ದೇವಾಲಯ ಪ್ರವೇಶ ದೊರಕುವಂತೆ ಪ್ರಯತ್ನ ಮಾಡಲಾಗುತ್ತಿದೆ. ಅವುಗಳಿಗೆ ಹೋಗುವುದೂ, ಬಿಡುವುದೂ, ಹರಿಜನರ ಸ್ವಾತಂತ್ರ್ಯಕ್ಕೇ ಬಿಟ್ಟಿದೆ. ಸವರ್ಣ ಹಿಂದೂಗಳು ಹರಿಜನರಿಗಿರುವ ಅಡಚಣೆಯನ್ನು ತೆಗೆದುಹಾಕಬೇಕು. ದೇವಾಲಯಗಳನ್ನೇ ಅಧ್ಯಾತ್ಮಿಕ ನಿಧಿ ಭಂಡಾರಗಳೆಂಬುದಾಗಿ ಎಣಿಸಿರುವ ಲಕ್ಷಾಂತರ ಮಂದಿಗೆ ಅವು ಪ್ರಾಣಪ್ರಿಯವಾದ ಸತ್ಯಾಂಶಗಳು. ಹರಿಜನರಿಗಾಗಿ ಅವರು ನಿಜವಾಗಿ ಅನುಕಂಪ ಪಡುವುದಾದರೆ, ತಮ್ಮ ಸಂಪತ್ತನ್ನೆಲ್ಲ ಅವರೊಂದಿಗೆ ಹಂಚಿಕೊಳ್ಳಬೇಕು. ಹರಿಜನರಿಗೆ ದೇವಾಲಯ ಪ್ರವೇಶವೆಂದರೆ ಏನೆಂಬುದು ನನಗೆ ಗೊತ್ತು. ಕಳೆದ ವಾರ ಧಾರವಾಡ ಮತ್ತು ಬೆಳಗಾಂವಿಯ ಮಧ್ಯೆ ಅನೇಕ ಸವರ್ಣ ಹಿಂದೂಗಳ ಮೂರು ದೇವಾಲಯಗಳನ್ನು ಹರಿಜನರ ಪ್ರವೇಶಕ್ಕೆ ತೆರೆಯಲಾಯ್ತು. ಟೀಕಾಕಾರರು ಆ ಸಂದರ್ಭದಲ್ಲಿ ಹಾಜರಿದ್ದು, ದೇವರ ವಿಗ್ರಹಕ್ಕೆ ಮಣಿದು ಪ್ರಸಾದ ಸ್ವೀಕಾರ ಮಾಡಿದ ಹರಿಜನರ ಮುಖದಲ್ಲಿ ವ್ಯಕ್ತವಾದ ಸಂತೋಷವನ್ನು ನೋಡಿದ್ದರೆ, ಅವರ ಟೀಕೆ ನಿಂತುಹೋಗುತ್ತಿತ್ತು. ಹರಿಜನ ಟೀಕಾಕಾರರು, ತಮ್ಮ ವಿಷಯ ಹೇಗಾದರೂ ಇರಲಿ, ಸಾಮಾನ್ಯ ಹರಿಜನರು ದೇವಾಲಯ ಪ್ರವೇಶವನ್ನು ಅಪೇಕ್ಷಿಸುವರೆಂದು ಅರಿತುಕೊಳ್ಳುತ್ತಿದ್ದರು. ಎಲ್ಲೆಲ್ಲಿ ದೇವಾಲಯಗಳು ಹರಿಜನರ ಪ್ರವೇಶಕ್ಕೆ ತೆರೆಯಲ್ಪಟ್ಟವೆಯೋ, ಅವೆಲ್ಲ ದೇವಾಲಯಕ್ಕೆ ಹೋಗುವವರ ಪೂರ್ಣ ಒಪ್ಪಿಗೆಯಿಂದಲೂ, ಅನೇಕರ ಸಮ್ಮುಖದಲ್ಲಿಯೂ, ತೆರೆಯಲ್ಪಟ್ಟವು. ಯಾವುದೋ ಗವಿಗುಂಡಾರವನ್ನು ತೆರೆದ ಮಾತ್ರಕ್ಕೆ ಹಿಂದೂಧರ್ಮಕ್ಕೆ

ಒಳಿತಾಗದು. ದೇವಾಲಯ ಪ್ರವೇಶ ಆಧ್ಯಾತ್ಮಿಕವಾಗಿಯೂ ಅಥವಾ ಏನಾದರೂ ಬೆಲೆಯುಳ್ಳದೂ ಆಗಬೇಕಾದರೆ, ಅದು ಸೂಕ್ತ ಪ್ರಚಾರ, ಗಾಂಭೀರ್ಯತೆ ಮತ್ತು ದೇವಾಲಯಕ್ಕೆ ಹೋಗುವವರ ಮನಃಪೂರ್ವಕ ಒಪ್ಪಿಗೆ, ಇವುಗಳಿಂದ ಆಗಬೇಕು; ಎಂದಿಗೂ ದೇವಾಲಯಗಳಲ್ಲಿ ನಂಬಿಕೆ ಅಥವಾ ಆಸಕ್ತಿ ಇಲ್ಲದ ಅಥವಾ ದೇವಾಲಯಗಳೆಂದರೆ ಮೂಢನಂಬಿಕೆ ಎಂದು ಭಾವಿಸುವ ಮತ್ತು ತಾವೇ ಸುಧಾರಕರೆಂದು ಭಾವಿಸುವವರ ಒಪ್ಪಿಗೆಯಿಂದ ಮಾತ್ರ ಆಗಬಾರದು. ದೇವಾಲಯ ಪ್ರವೇಶ ಚಳುವಳಿಗೆ ಹಣದ ಬಂಡವಾಳವೇನೂ ಬೇಡ. ದೇವಾಲಯಗಳಲ್ಲಿ ನಂಬಿಕೆಯುಳ್ಳವರಾಗಿಯೂ, ಸವರ್ಣ ಹಿಂದೂಗಳ ಮೇಲೆ ಪ್ರಭಾವ ಉಳ್ಳವರಾಗಿಯೂ ಇರುವ ಕೆಲವೇ ಮಂದಿ ಕಾರ್ಯಕರ್ತರನ್ನುಳಿದು ಇತರರಿಂದ ಇದು ಚಳುವಳಿಯ ಸ್ವರೂಪವನ್ನು ತಾಳಲಾರದು. ಆದುದರಿಂದ, ಇದು ಬಹಳ ಸೌಮ್ಯವಾಗಿಯೂ ಎಚ್ಚರಿಕೆಯಿಂದಲೂ ನಿರ್ವಹಿಸಬೇಕಾದ ವಿಚಾರ. ಒಂದೇ ಒತ್ತಾಯದ ಅಂಶವೆಂದರೆ, ಅದು ದೇವಾಲಯ ಪ್ರವೇಶದ ಬಗೆಗೆ ಹಕ್ಕುಬಾಧ್ಯತೆ, ಕರ್ತವ್ಯ, ಇವುಗಳನ್ನು ಪ್ರತಿಪಾದಿಸುವ ಸುಧಾರಕನ ನಂಬಿಕೆ. ಇದಿಲ್ಲದೆ ಸುಧಾರಣೆಯು ಅಪೂರ್ಣವೆಂದೂ, ನಿಷ್ಫಲವೆಂದೂ ಆತ ತೋರಿಸಬೇಕು. ಏಕೆಂದರೆ, ದೇವಾಲಯಗಳು ಸ್ವತಂತ್ರವಾಗಿ ಹರಿಜನ ಪ್ರವೇಶಕ್ಕೆ ದೊರೆತಂತಾಗುವ ವರೆಗೂ ಅಸ್ಪೃಶ್ಯತೆಯು ಆಮೂಲಾಗ್ರ ಹೋಯಿತೆಂದು ಹೇಳಲಾಗುವುದಿಲ್ಲ.

ಆರ್ಥಿಕೋನ್ನತಿಯ ವಿಷಯವನ್ನೂ ದೇವಾಲಯ ಪ್ರವೇಶವನ್ನೂ ಪರಸ್ಪರ ವಿರುದ್ಧವೆಂದು ತಿಳಿಯುವುದು ತಪ್ಪು. ದೇವಾಲಯ ಪ್ರವೇಶ ಅಂಥ ಉನ್ನತಿಗೆ ನೆರವು ನೀಡೀತು. ಏಕೆಂದರೆ, ಹರಿಜನರು ಸ್ವತಂತ್ರವಾಗಿ ದೇವಾಲಯ ಪ್ರವೇಶ ಮಾಡುವಂತಾದರೆ, ಇತರರಿಗೆ ದೊರಕುವಂತೆಯೇ ಹರಿಜನರಿಗೂ ಎಲ್ಲ ಆರ್ಥಿಕೋನ್ನತಿಯ ಮಾರ್ಗಗಳೂ ತಾವಾಗಿಯೇ ಲಭಿಸುತ್ತವೆ. ನಿಧಿಗೆ ಶೇಖರವಾಗುವ ಹಣವೆಲ್ಲ ಆರ್ಥಿಕೋನ್ನತಿಗಾಗಿಯೇ ವಿನಿಯೋಗಿಸಲ್ಪಡುವುದು. ವಿದ್ಯಾವಂತ ಹರಿಜನ, ಜೀವನ ಸ್ಪರ್ಧೆಯಲ್ಲಿ ಉತ್ತಮ ರೀತಿಯಿಂದ ಭಾಗವಹಿಸುವಂತೆ ಮಾಡುವ ಶಿಕ್ಷಣೋನ್ನತಿಯ ಮಾರ್ಗವನ್ನೂ ಆರ್ಥಿಕೋನ್ನತಿಯ ಮಾರ್ಗವೆಂದು ಒಪ್ಪಬಹುದು.

(ಹರಿಜನ: ೧೬-೩-೩೪)

ಹರಿಜನರೂ - ದೇವಾಲಯ ಪ್ರವೇಶವೂ

ವರ್ಧಾನಿಂದ ಒಬ್ಬ ಗೆಳೆಯ ಹೀಗೆ ಬರೆಯುತ್ತಾರೆ:

"ಹರಿಜನದೇವಾಲಯ ಪ್ರವೇಶದ ವರದಿಗಳು ನಿಮಗೆ ತಲುಪುತ್ತಿರಬೇಕು. ದೇವಾಲಯದ ಧರ್ಮದರ್ಶಿಗಳ ಒಪ್ಪಿಗೆ ಇರಲಿ, ಇಲ್ಲದಿರಲಿ, ಹೇಗೋ ಅಂತೂ, ಹರಿಜನರ ದೇವಾಲಯ ಪ್ರವೇಶವಾಗುತ್ತಿದೆ, ಈ ದಿನಗಳಲ್ಲಿ. ವೈಷ್ಣವರ ಹವೇಲಿಗಳು ಅಥವಾ ರಾಮಮಂದಿರಗಳಿಗೆ ಅವರ ಪ್ರವೇಶವನ್ನು ಒತ್ತಾಯ ಮಾಡುವುದರಲ್ಲಿ ಅರ್ಥವಿದೆ. ಆದರೆ, ಅವರಿಗೇ ನಂಬಿಕೆ ಇಲ್ಲದಿರುವ ಸ್ವಾಮಿ ನಾರಾಯಣ ಅಥವಾ ಜೈನ ದೇವಾಲಯಗಳಿಗೂ ಅವರ ಪ್ರವೇಶ ಒತ್ತಾಯಪಡಿಸುವುದರಲ್ಲಿ ಏನು ಒಳ್ಳೆಯದಾದೀತೋ ಅರಿವಾಗುವುದಿಲ್ಲ. ಅವರು ದೇವಾಲಯ ಪ್ರವೇಶ ಮಾಡಿದ ಕೂಡಲೇ ಅವರಲ್ಲಿ ನಂಬಿಕೆ ವೃದ್ಧಿಯಾಗುತ್ತದೆಂದು ಭಾವಿಸಲಾಗಿದೆಯೆ?"

ಮತ್ತೊಂದು ಪತ್ರ ಅಹಮದಾಬಾದಿನಿಂದ. ಅದು ಹೀಗಿದೆ. ಲೇಖಕ ಅದಕ್ಕೆ ಸಹಿ ಮಾಡಿಲ್ಲ. 'ನಿಮ್ಮ ದಳಿತರು' ಎಂಬ ಸಂಕೇತನಾಮ ಮಾತ್ರವಿದೆ. ಅಕ್ಷರ ಮತ್ತು ಭಾಷೆಗಳನ್ನು ನೋಡಿದರೆ, ನನಗೆ ಪರಿಚಿತವಿರುವ ಹರಿಜನರಿಂದ ಅದು ಬಂದಿಲ್ಲವೆಂದು ಸ್ಪಷ್ಟವಾಗುತ್ತದೆ. ಅದರ ಸಂಬಂಧಪಟ್ಟ ಭಾಗ ಈ ಕೆಳಗಿನ ರೀತಿ ಇದೆ:

"ಮಕರಸಂಕ್ರಾಂತಿ ಹಬ್ಬದ ದಿವಸ ಹರಿಜನರು ದೇವಾಲಯ ಪ್ರವೇಶ ಮಾಡಲು ಪ್ರಯತ್ನಿಸಿದರು. ಪ್ರಾತಃಕಾಲ ೮ ಘಂಟೆಗೆ ಅವರು ಸ್ವಾಮಿ ನಾರಾಯಣ ದೇವಾಲಯದ ಬಳಿ ಬಂದಾಗ ಬಾಗಿಲು ಮುಚ್ಚಿ, ಬೀಗ ಹಾಕಲ್ಪಟ್ಟಿದ್ದಿತು. ಅವರು ಅಲ್ಲೇ ಇನ್ನೂ ಸತ್ಯಾಗ್ರಹ ಮಾಡುತ್ತಾ ಕುಳಿತಿದಾರೆ. ಅವರು ತಮ್ಮ ಕೆಲಸಗಳಿಗೆ ಹೋಗಲು ನಿರಾಕರಿಸುತ್ತಾರೆ. ಸ್ಥಳೀಯ ಕಾಂಗ್ರೆಸ್ ಸಮಿತಿಯು ಅವರ ಕ್ರಿಯೆಯನ್ನು ಖಂಡಿಸಿದೆ. ಇದೆಷ್ಟು ವಿಚಿತ್ರ! ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೂ ಅವರು ಹಕ್ಕುಬಾಧ್ಯತೆಗಳನ್ನು ಪಡೆಯಲಾರದೆ ಹೋದರೆ, ಯಾವಾಗ ಪಡೆಯಬಲ್ಲರು? ಸ್ಥಳೀಯ ಕಾಂಗ್ರೆಸ್ಸಿಗರು ಅಲ್ಲಿಗೆ ಹೋಗಿ ನಿಮಿಷ ಮಾತ್ರ ಇದ್ದು ಹೊರಟುಹೋಗು

ತ್ತಾರೆ. ಆ ಬಡಪಾಯಿ! ಹರಿಜನರಿಗೆ ಪ್ರಭಾವಯುತವಾಗಿ ನೆರವಾಗಲು ಮನಃಪೂರ್ವಕವಾದ ಪ್ರಯತ್ನವಿಲ್ಲ. ಅವರು ಕೊರೆಯುವ ಚಳಿಯಲ್ಲಿ ಕುಳಿತು ತಮ್ಮ ಕಂಗೆಟ್ಟ ಸ್ಥಿತಿಯನ್ನು ಭಜನಾ ಗೀತೆಗಳನ್ನು ಹೇಳುವುದರಲ್ಲಿ ಕಳೆಯುತ್ತಿದಾರೆ. ಈ ಬಿಕ್ಕಟ್ಟನ್ನು ಯಾರು ಪರಿಹರಿಸಬಲ್ಲರು? ಇಲ್ಲಿನ ಕಾಂಗ್ರೆಸ್ಸಿಗರಲ್ಲಿ ಅಂಥ ವ್ಯಕ್ತಿತ್ವವಾಗಲೀ ಸೌಶೀಲ್ಯ ಉಳ್ಳವರಾಗಲೀ ಯಾರೂ ಇಲ್ಲ. ಡಾಕೋರದಲ್ಲಿ ರವಿಶಂಕರ ಮಹಾರಾಜರು ತಮ್ಮ ಪ್ರಭಾವ ವನ್ನು ಬೀರಿ ಹರಿಜನರಿಗೆ ದೇವಾಲಯ ಪ್ರವೇಶ ಮಾಡಿಸಿದರು. ಆದರೆ ಇಲ್ಲಿ ಆ ರೀತಿ ಪ್ರವೇಶ ದೊರಕಿಸಿಕೊಡಬಲ್ಲವರು ಯಾರೂ ಇಲ್ಲ. ಹೀಗಾಗಿ, ಹರಿಜನರು ತಮ್ಮ ನೈಸರ್ಗಿಕ ಹಕ್ಕು ಎಂದೆಂದಿಗೂ ತಡೆಯಲ್ಪಟ್ಟ ಸ್ಥಿತಿ ಯಲ್ಲಿಯೇ ಇರಬೇಕೆ? ನೀವು ಮಧ್ಯೆ ಪ್ರವೇಶಮಾಡಿದರೆ ಮಾತ್ರ ಪರಿಸ್ಥಿತಿ ಯನ್ನು ಉತ್ತಮಪಡಿಸಬಹುದು. ಸತ್ಯಾಗ್ರಹದ ಮೂರನೇ ದಿವಸವಾದ ಇಂದು ಸಾವಿರಾರು ಜನ ಹರಿಜನ ಸತ್ಯಾಗ್ರಹಿಗಳು ಕೊರೆತದಿಂದ ಕೂಡಿದ ವಾತಾವರಣಕ್ಕೀಡಾಗಿ ದೇವಾಲಯದ ಮುಂದೆ ಕುಳಿತಿದಾರೆ. ಅವರು ನ್ಯಾಯಾಸ್ಥಾನಕ್ಕೆ ದೂರನ್ನು ಒಯ್ಯಲು ಇಚ್ಛಿಸುವುದಿಲ್ಲ. ಸವರ್ಣ ಹಿಂದೂಗಳ ಹೃದಯ ಪರಿವರ್ತನೆಯಾಗುವ ಸಾಧ್ಯತೆಯೂ ಕಂಡು ಬರುತ್ತಿಲ್ಲ. ಇದರ ಪರಿಣಾಮವೇನು? ನೀವಾದರೂ ದಯಮಾಡಿ ಮಾರ್ಗ ತೋರುತ್ತೀರಾ ?"

ಮೊದಲನೆಯ ಪತ್ರದ ಲೇಖಕ ಮಾಡಿರುವ ವ್ಯತ್ಯಾಸ ಅರ್ಥವಿಲ್ಲ ವೆನಿಸುತ್ತದೆ ನನಗೆ. ಹರಿಜನರು ಸ್ವಾಮಿ ನಾರಾಯಣ ಮತ್ತು ಜೈನ ದೇವಾಲಯಗಳಿಗೂ ಭೇಟಿ ಕೊಡುವ ಹಕ್ಕನ್ನು ಹೊಂದಿದಾರೆ. ಅವರಿಗೆ ಪ್ರವೇಶಾಧಿಕಾರವನ್ನು ಕೊಡಲೇಬೇಕು. ಬ್ರಾಹ್ಮಣರೊಂದಿಗೆ ಹರಿಜನರಿಗೂ ದೇವಾಲಯ ಪ್ರವೇಶದ ಸಮಾನಾಧಿಕಾರವನ್ನು ಗಳಿಸಿಕೊಡುವ ಸಲುವಾಗಿ ಕೆಲವು ವರುಷಗಳಿಂದ ಒಂದು ಆಂದೋಳನ ನಡೆಯುತ್ತಿದೆ. ಅದಕ್ಕೆ ಬಹುಮಟ್ಟಿನ ಯಶವೂ ದೊರೆತಿದೆ. ಈಗ ಮುಂಬೈ ಸರಕಾರದವರು ಇದಕ್ಕೆ ಅನ್ವಯಿಸುವಂತೆ ಒಂದು ಶಾಸನ ಮಾಡಿರುವುದರಿಂದ ಸತ್ಯಾಗ್ರಹಕ್ಕೆ ಕಾರಣವೇ ಇಲ್ಲವೆನಿಸುತ್ತದೆ. ಶಾಸನವು ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಾದರೆ, ಅದಕ್ಕೆ ಸ್ವಾಭಾವಿಕವಾಗಿಯೇ ಒಪ್ಪಿಗೆ ಮತ್ತು ಮನ್ನಣೆ ದೊರಕುತ್ತವೆ. ಇದಕ್ಕೆ ಬದಲಾಗಿ ಸಾರ್ವಜನಿಕಾಭಿಪ್ರಾಯದ

ಪ್ರತಿಭಟನೆಯ ಮೂಲಕ ಶಾಸನವಾಗಿದ್ದರೆ, ಅದು ಆಚರಣೆಗೆ ಬರಲು ತಡ ವಾಗುತ್ತದೆ. ಬಲವಂತದಿಂದ ಶಾಸನವನ್ನು ಕಾರ್ಯರೂಪಕ್ಕೆ ತರುವುದು ಪ್ರಜಾ ಪ್ರಭುತ್ವವಲ್ಲ. ಅದಕ್ಕೆ ವಿವೇಕಯುತ ವಿಶಾಲದೃಷ್ಟಿ ಬೇಕು. ಸುಧಾರಕ ಜಾಣತನದಿಂದಲೂ ತಾರತಮ್ಯದಿಂದಲೂ ಆದನ್ನು ಉಪಯೋಗಕ್ಕೆ ತಂದರೆ ಆದು ತನ್ನ ಗುರಿಯನ್ನು ಗೆದ್ದೀತು. ಅವಸರವೂ ಅಸಹನೆಯೂ ಉದ್ದೇಶ ಭಂಗ ಮಾಡುತ್ತದೆ.

ಧರ್ಮದರ್ಶಿಗಳು ದೇವಾಲಯಗಳ ಒಡೆಯರಲ್ಲ. ಸಾರ್ವಜನಿಕ ಉಪಯೋಗದ ಪ್ರಶ್ನೆ ಬಂದಾಗ, ದೇವಸ್ಥಾನಗಳ ಮೇಲೆ ಆಸ್ತಿಯ ಹಕ್ಕು ಬಾಧ್ಯತೆಯನ್ನು ಹೊಂದಿದ ಒಡೆಯರೂ ಅದನ್ನು ಕಳೆದುಕೊಳ್ಳುತ್ತಾರೆ. ದೇವಸ್ಥಾನಗಳಿಗೆ ಪೂಜೆಗಾಗಿ ಹೋಗುವ ಭಕ್ತರೇ ಅದರ ನಿಜ ಒಡೆಯರು. ಈ ಬೆಳಕಿನಲ್ಲಿ ನೋಡಿದಾಗ ಎಲ್ಲ ಜೈನ ಮತ್ತು ಸ್ವಾಮಿ ನಾರಾಯಣ ದೇವಾಲಯಗಳೂ ಹಿಂದೂ ದೇವಾಲಯಗಳೇ. ನಾನೇ ಇವುಗಳಿಗೆ ಭೇಟಿ ಕೊಟ್ಟಿದೇನೆ. ನನ್ನ ಜಾತಿ, ಕುಲ, ಪ್ರಶ್ನಿಸಿದವರೇ ಇಲ್ಲ. ನಾನು ಹಿಂದೂವಂತೆ ಕಂಡುಬಂದರೆ ಸಾಕಾಗಿತ್ತು. ಇದೇ ಮಾತು, ನನ್ನಂತೆ ದೇವಾಲಯಗಳಿಗೆ ಹೋಗುವ ನೂರಾರು ಜನಕ್ಕೂ ಅನ್ವಯಿಸುತ್ತದೆ. ಆದುದರಿಂದ ಹಿಂದೂಗಳಿಗೆ ಪ್ರವೇಶಾಧಿಕಾರವಿರುವ ಎಲ್ಲ ದೇವಸ್ಥಾನ ಗಳಲ್ಲಿಯೂ ಹರಿಜನರಿಗೆ ಸ್ವತಂತ್ರ ಪ್ರವೇಶಾಧಿಕಾರವಿರಬೇಕು. ಇಂದು ಜಾಗೃತವಾಗಿರುವ ಸಾರ್ವಜನಿಕ ಅಭಿಪ್ರಾಯವೂ ಮತ್ತು ಈ ಅಭಿಪ್ರಾಯ ವನ್ನು ವ್ಯಕ್ತಪಡಿಸುವ ಶಾಸನವೂ, ಹರಿಜನರನ್ನು ಪ್ರತ್ಯೇಕ ಜಾತಿಯೆಂದು ಪರಿಗಣಿಸದೆ ಅವರನ್ನು ನಾಲ್ಕು ವರ್ಣಗಳ ಅಥವಾ ಹದಿನೆಂಟು ವರ್ಣ ಗಳಿಂದ ಕೂಡಿದ ಹಿಂದೂಧರ್ಮದ ಭಾಗವೆಂದೇ ಎಣಿಸುತ್ತಾರೆ. ಆದುದ ರಿಂದ ಇದಕ್ಕೆ ವಿರುದ್ಧವಾದ ಅಭಿಪ್ರಾಯಕ್ಕೆ ಸ್ಥಾನವಿಲ್ಲ. ಭಕ್ತನ ಭಕ್ತಿ ಯಿಂದಲೇ ದೇವಸ್ಥಾನಕ್ಕೆ ಚೇತನ ಬರುತ್ತದೆ. ದೇವಸ್ಥಾನದಲ್ಲಿರುವ ವಿಗ್ರಹ, ಭಕ್ತನ ಚೈತನ್ಯದ ಪ್ರತಿಬಿಂಬ.

ಈಗ ಎರಡನೆಯ ಪತ್ರದ ವಿಷಯ. ನನ್ನ ಅಭಿಪ್ರಾಯ ಮೇಲೆ ತಿಳಿಸಿದ ರೀತಿಯಲ್ಲಿ ಸ್ಪಷ್ಟವಾಗಿದ್ದರೂ, ಹರಿಜನರ ಪ್ರಾರ್ಥನೆ ನನಗೆ ಅರ್ಥವಾಗುವುದಿಲ್ಲ. ದೇವಾಲಯದ ಮುಂದೆ ಧರಣಿ ಹಿಡಿದು ಕುಳಿತಿರು ವವರು ನಿಜವಾಗಿಯೂ ನಿಷ್ಠಾವಂತರಲ್ಲ. ಅವರಿಗೆ ದೇವದರ್ಶನ ಬೇಕಿಲ್ಲ;

ಅವರು ಕೇವಲ ಹಕ್ಕುಬಾಧ್ಯತೆಗಾಗಿ ಪರದಾಡುವವರು. ಅಷ್ಟೂ ಅವರು ಧರ್ಮವಿದೂರರು. ಬೇನಾಮಿ ಪತ್ರ ಬರೆವುದಾಗಲೀ ಅಥವಾ ಇತರರು ಆ ರೀತಿ ಬರೆವಂತೆ ಮಾಡುವುದಾಗಲೀ ನಿಷ್ಠಾವಂತನ ಕುರುಹಲ್ಲ. ನಿಜ ನಿಷ್ಠಾವಂತನು ದೇವರ ನೆರವೊಂದನ್ನಲ್ಲದೆ ಇತರ ಎಲ್ಲ ನೆರವನ್ನೂ ನಿರಾಕರಿಸಿದ ಭಕ್ತ ನಂದನಾರ್ ಮಾರ್ಗವನ್ನು ಅನುಸರಿಸುವನು. ಇಂದಿಗೂ ನಂದನಾರ್, ತಾನೇ ಉತ್ತಮ ವರ್ಣದವನೆನಿಸಿಕೊಳ್ಳುವ ಬ್ರಾಹ್ಮಣನಿಂದಲೂ ಮನ್ನಣೆಗೆ ಪಾತ್ರನಾಗಿದಾನೆ. ತಾವೇ ಸ್ವೇಚ್ಛೆಯಿಂದ ಹರಿಜನರಾದವರಲ್ಲಿ ಒಬ್ಬ ನಂದನಾರ್ ಜನಿಸುವನೆಂದು ನಾ ಆಶಿಸುತ್ತೇನೆ. ಇದೇ ಬಗೆಯ ಆಶೆ ಜನ್ಮತಃ ಹರಿಜನರಾದವರದೂ ಆಗುವುದೆಂದು ನಾ ಬಲ್ಲೆ. ಹರಿಜನೇತರ ಹಿಂದೂ ಸಮಾಜ ಅಪೇಕ್ಷಿಸುವುದಾದರೆ, ಎಲ್ಲ ಗೌರವ ಮತ್ತು ಮನ್ನಣೆಗಳಿಂದ ಹರಿಜನರನ್ನು ತಮ್ಮ ದೇವಾಲಯಗಳಿಗೆ ಕರೆದುಕೊಂಡು ಹೋಗಲಿ. ಇಲ್ಲವಾದರೆ ಈ ಗುರಿ ಸಾಧಿಸುವವರೆಗೆ ಹರಿಜನರು ತಮ್ಮ ಗೃಹಗಳಲ್ಲೇ ಇದ್ದು ತಮ್ಮ ಭಕ್ತಿಭಾವದ ಪವಿತ್ರ ಗಂಗೆಯಿಂದ ಪರಿಶುದ್ಧರಾಗಲಿ. ಅವರು ಯಾವ ದೇವಾಲಯದ ಮುಂದೆಯೂ ಧರಣಿ ಹಿಡಿದು ಕೂಡಬೇಕಾದ ಅಗತ್ಯವಿಲ್ಲ. ಇಂಥ ಧರಣಿ ಹಿಡಿದು ಕೂಡುವುದರಿಂದ ಯಾವ ಯೋಗ್ಯತೆಯೂ ಬರದೆಂದು ನನ್ನ ಭಾವನೆ. ಅದು ಅಧರ್ಮ, ಪಾಪಕರ, ತ್ಯಾಜ್ಯಯೋಗ್ಯ. (ಹರಿಜನ : ೧-೩-೪೮)

ಮತಾಂತರ

ಮತಾಂತರ ಒಂದು ಪರಿಹಾರವಲ್ಲ

ಹಿಂದೂಧರ್ಮವನ್ನು ಬಿಟ್ಟು, ಇಸ್ಲಾಂ ಅಥವಾ ಕ್ರೈಸ್ತಮತಕ್ಕೆ ಒಟ್ಟೊಟ್ಟಾಗಿ ಮತಾಂತರ ಹೊಂದುವುದು ಹರಿಜನರಿಗೆ ಸೂಚಿಸಲಾದ ಪರಿಹಾರಗಳಲ್ಲಿ ಒಂದು. ಒಂದು ಮತವನ್ನು ತ್ಯಜಿಸುವುದರಿಂದ ಐಹಿಕ ಉನ್ನತಿ ಆಗುವುದಾದರೆ, ನಿಸ್ಸಂದೇಹವಾಗಿ ನಾನು ಅದನ್ನು ಸಲಹೆ ಮಾಡೇನು. ಆದರೆ ಮತವು ಹೃದಯಕ್ಕೆ ಸಂಬಂಧಪಟ್ಟುದು. ಎಷ್ಟೇ

ದೈಹಿಕ ಅನಾನುಕೂಲ ಬಂದರೂ ಅದು ಮತವನ್ನು ತ್ಯಜಿಸುವುದಕ್ಕೆ ಆಧಾರವಾಗಲಾರದು. ಪಂಚಮರಿಗೆ ಕೊಡಲಾಗುತ್ತಿರುವ ಕ್ರೂರ ಪರಿಭಾವನೆ ಹಿಂದೂಧರ್ಮದ ಒಂದು ಅಂಶವಾಗಿದ್ದರೆ, ಮತವನ್ನು ಒಂದು ಅಂಧಶ್ರದ್ಧೆಯನ್ನಾಗಿ ಪರಿಗಣಿಸದ ನನ್ನಂಥವರಿಗೂ ಮತ್ತು ಇತರರಿಗೂ ಅದನ್ನು ತ್ಯಜಿಸಿ, ಅದರ ಪವಿತ್ರ ಹೆಸರಿನಲ್ಲಿ ನಡೆವ ಎಲ್ಲ ಕೆಡುಕನ್ನೂ ಕ್ಷಮಿಸಿಬಿಡುವುದು ಒಂದು ಪ್ರಧಾನ ಕರ್ತವ್ಯವಾಗುತ್ತಿತ್ತು. ಆದರೆ, ಅಸ್ಪೃಶ್ಯತೆಯು ಹಿಂದೂಧರ್ಮದ ಒಂದು ಅಂಶವಲ್ಲವೆಂದು ನನ್ನ ನಂಬಿಕೆ. ಎಲ್ಲ ಪ್ರಯತ್ನಗಳಿಂದಲೂ ತೆಗೆದುಹಾಕಲ್ಪಡಬೇಕಾದ ಮೇಲಿನ ಅನವಶ್ಯ ಬೆಳವಣಿಗೆ ಅದು. ಈ ಕಳಂಕದಿಂದ ಹಿಂದೂಧರ್ಮವನ್ನು ದೂರಮಾಡಲು ಸ್ಥಿರ ಸಂಕಲ್ಪಮಾಡಿರುವ ಅಸಂಖ್ಯ ಹಿಂದೂ ಸುಧಾರಕರಿದಾರೆ. ಆದುದರಿಂದ, ಮತಾಂತರ ಯಾವ ರೀತಿಯಲ್ಲಿಯೂ ಒಂದು ಪರಿಹಾರವಲ್ಲವೆಂದು ನನ್ನ ಅಭಿಪ್ರಾಯ. (ಯಂಗ್ ಇಂಡಿಯಾ : ೨೭-೧೦-೨೦)

ಮತಾಂತರದ ಹೆದರಿಕೆಯನ್ನು ತೋರಿಸುವವರಿಗೆ ಮತವೆಂದರೇನೆಂಬುದರಿಯದೆಂದು ನನ್ನ ನಮ್ರಭಾವನೆ. ಮತವು ಜನನದಿಂದ ಮರಣ ಪರ್ಯಂತ ಇರುವಂಥದು. ಒಬ್ಬ ಮನುಷ್ಯ ತನ್ನ ಬಟ್ಟೆಗಳನ್ನು ಬದಲಾಯಿಸುವಂತೆ ಮತವನ್ನು ಬದಲಾಯಿಸಲಾರ. ಅದು ಮರಣಾನಂತರವೂ ಇರುತ್ತದೆ. ಇತರರ ಪ್ರೀತ್ಯರ್ಥವಾಗಿ ಒಂದು ಮತವನ್ನವಲಂಬಿಸಲು ಸಾಧ್ಯವಿಲ್ಲ ಒಬ್ಬ ಒಂದು ಮತಾವಲಂಬಿಯಾಗಿರದೆ ಅನ್ಯಥಾ ಇರಲಾರ. ವಿಶ್ವಾಸವುಳ್ಳ ಪತಿ ಇತರ ಯಾವ ಹೆಣ್ಣನ್ನೂ ಪ್ರೀತಿಸದಷ್ಟು ತನ್ನ ಪತ್ನಿಯನ್ನು ಪ್ರೀತಿಸುತ್ತಾನೆ. ಇಬ್ಬರ ಸಂಬಂಧ ರಕ್ತಸಂಬಂಧವನ್ನು ಮೀರಿದುದು. ಹಾಗೆಯೇ ಮತಸಂಬಂಧವೂ ಅದು ಹೃದಯಸ್ಥ ವಿಷಯ. ತಾವೇ ಉತ್ತಮರೆಂದು ಭಾವಿಸಿಕೊಳ್ಳುವ ಹಿಂದೂಗಳಿಂದ ಚಿತ್ರಹಿಂಸೆಗೊಳಗಾದರೂ ಹಿಂದೂಮತವನ್ನು ಅನುಸರಿಸುವ ಹರಿಜನರು ಉತ್ತಮ ಹಿಂದೂ ಆದಾರು. ತಾವೇ ಉತ್ತಮರೆಂದು ಭಾವಿಸಿಕೊಳ್ಳುವವರು ತಮ್ಮ ಕರ್ಮದಿಂದಲೇ ಹಿಂದೂಧರ್ಮ ನಿರಾಕರಣೆಮಾಡಿದಂತಾಗುತ್ತದೆ. ಆದುದರಿಂದ ಹಿಂದೂಧರ್ಮವನ್ನು ತ್ಯಜಿಸುವೆವೆಂದು ಬೆದರಿಕೆ ಹಾಕುವವರು ತಮ್ಮ ಧರ್ಮದ್ರೋಹಿಗಳೆಂದು ನನ್ನ ಅಭಿಪ್ರಾಯ.

(ಯಂಗ್ ಇಂಡಿಯಾ : ೪-೬-೨೫)

ಮತಾಂತರಗಳು

ಸವರ್ಣ ಹಿಂದೂಗಳ ಚಿತ್ರಹಿಂಸೆಗೊಳಗಾಗಿ, ಅವರಿಂದ ಎಂದಾದರೂ ಸಹಾಯ ಪಡೆಯಬಹುದೆಂಬ ಆಶೆಯೆಲ್ಲ ಬಯಲಾಗಿ, ಬಡ ಹರಿಜನರು ಕ್ರೈಸ್ತಮತದಲ್ಲಿ ರಕ್ಷಣೆಯನ್ನು ಅರಸುವುದು ನಮಗೇನೂ ಆಶ್ಚರ್ಯವನ್ನುಂಟು ಮಾಡಬೇಕಾಗಿಲ್ಲ. ಈ ದುಃಖವನ್ನು ಪ್ರಬಲವಾದ ಶಕ್ತಿಯನ್ನಾಗಿ ನಾವು ಪರಿವರ್ತಿಸಲು ಅಸಮರ್ಥರಾದರೆ ಅದು ನಿಷ್ಪ್ರಯೋಜನಕ್ಕಿಂತ ಹೀನ, ಸನ್ನಿವೇಶದ ಕ್ಲೇಶಕ್ಕೆ ತುತ್ತಾಗಿ ಆದ ಪರಿವರ್ತನೆ, ಅಂತರಾತ್ಮನ ಒಪ್ಪಿಗೆ ಯಿಂದ ಆದ ಪರಿವರ್ತನೆಯಲ್ಲ. ಆದರೆ, ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದಲೂ ಚಿತ್ರಹಿಂಸೆಯಿಂದ ರಕ್ಷಣೆ ಹೊಂದಬೇಕೆಂಬ ದೃಷ್ಟಿಯಿಂದಲೂ, ಹರಿಜನರು ತಮ್ಮ ಮತವನ್ನು ಬದ ಲಾಯಿಸಿದರೆ, ಅದಕ್ಕೋಸ್ಕರ ನಾವು ಗೊಣಗಾಡಬೇಕಾಗಿಲ್ಲ.

ಮತಾಂತರದ ಕಾರಣಕ್ಕಾಗಿ ನಾವು ವ್ಯಸನಪಡಬೇಕು. ಇದಕ್ಕೆ ಸವರ್ಣ ಹಿಂದೂಗಳು ಕಾರಣವಲ್ಲವೆಂಬುದನ್ನು ಅರಿತು ಒಪ್ಪಿಕೊಳ್ಳೋಣ. ಅವರು ಈ ಸಲಹೆಗೆ ಕಿವಿಗೊಡುವರೆ? ಮತಾಂತರಗಳು ವ್ಯಾಧಿಯ ಒಂದು ಸಣ್ಣ ಪರಿಣಾಮ ಮಾತ್ರ. ಕಾರಣವನ್ನು ತೆಗೆದುಹಾಕಿದರೆ, ಮತಾಂತರ ಗಳೂ ಇನ್ನೂ ಇತರ ಕೆಟ್ಟ ಪರಿಣಾಮಗಳೂ ನಿಲ್ಲುವುವು.

(ಹರಿಜನ : ೨೨-೩-೩೫)

ತಮ್ಮ ಮತದವರೇ ಎಂದು ನಟಿಸುವ ಕೆಲವರು ತಮಗೆ ದೇವಾಲಯ ಪ್ರವೇಶ ಮಾಡಲು ಪ್ರತಿಬಂಧಕ ಮಾಡುವರೆಂಬ ಕಾರಣದಿಂದ ತಮ್ಮ ಮತ ತ್ಯಜಿಸುವೆವೆಂದು ಬೆದರಿಕೆ ಹಾಕುವವರಲ್ಲಿ ಏನೂ ಧಾರ್ಮಿಕ ಭಾವನೆ ಇಲ್ಲ. ಅಂಥ ಜನ ಧಾರ್ಮಿಕ ಚೈತನ್ಯದಿಂದ ಪ್ರೇರಿತರಾದವರೆಂದು ಹೇಳಲು ಸಾಧ್ಯವಿಲ್ಲ. ದೇವಾಲಯಗಳು ಅರ್ಚನೆಯ ಸ್ಥಾನಗಳು. ನಂಬಿಕೆ ಇರು ವವರಿಗೆಲ್ಲ ಅವು ಇದ್ದೇ ಇರುತ್ತವೆ. ಧರ್ಮದ ಹೆಸರಿನಲ್ಲಿ ಹಿಂಸಾಕೃತ್ಯ ನಡೆವುದು ಇಂದಿಗೆ ಹೊಸದಲ್ಲ. ಅದು ಧರ್ಮದಷ್ಟೇ ಹಿಂದಿನಿಂದ ಬಂದುದು. ಅದು ಹಿಂಸೆಗೆ ಗುರಿಯಾದವರನ್ನು ಪರೀಕ್ಷಿಸಿ ಶುದ್ಧ ಮಾಡುತ್ತದೆ. ಅವರ ಧರ್ಮನಿಷ್ಠೆಯನ್ನು ಸ್ಥಾಪಿಸುತ್ತದೆ. ಹರಿಜನರು ತಾಳ್ಮೆಯಿಂದ ಹಿಂಸೆ

ಯನ್ನು ಸಹಿಸಿಕೊಂಡರೆ, ಅಂತ್ಯದಲ್ಲಿ ಅವರಿಗೆ ವಿಜಯ ಕಟ್ಟಿಟ್ಟದ್ದು. ತಮಗೆ ದೇವಾಲಯ ಪ್ರವೇಶದ ಹಕ್ಕು ಅಂಗೀಕರಿಸಲ್ಪಟ್ಟಿಲ್ಲವೆಂಬ ಕಾರಣ ದಿಂದಲೇ ಅನಾದಿಕಾಲದಿಂದ ಅವರು ದೂರಿಡದೆ ಅನುಸರಿಸುತ್ತ ಬಂದಿರುವ ಮತವನ್ನು ತ್ಯಜಿಸುವೆನೆಂಬ ಬೆದರಿಕೆಯು ಸಾಧುವಾಗಲಾರದು. ಹರಿಜನರು ಹಿಂದೂ ಕುಲವನ್ನು ತ್ಯಜಿಸುವ ಬಗೆಗೆ ಸನಾತನಿಗಳು ಲಕ್ಷಿಸದೆ ಇರಬಹುದು. ಸುಧಾರಕರಿಗೆ ಇದು ಹೋರಾಟದ ಕಾರಣವಾಗದಿದ್ದರೆ, ಅವರು ದಿಕ್ಕು ತೋಚದ ಸ್ಥಿತಿಗೆ ಹೋದಾರು. ಅದೃಷ್ಟವಶಾತ್, ಚಿತ್ರಹಿಂಸೆಗೊಳ ಗಾಗಿದ್ದರೂ ತಮ್ಮ ಮತದಲ್ಲಿ ಅಚಲ ನಿಷ್ಠಾವಂತರಾದ ಹತ್ತಾರು ಸಹಸ್ರ ಹರಿಜನರಿದಾರೆ.

ಧರ್ಮವು ಪ್ರಧಾನವಾಗಿ ವೈಯಕ್ತಿಕ ವಿಷಯ. ಅದು ವ್ಯಕ್ತಿಗೂ ಅವನ ಪರಮಾತ್ಮನಿಗೂ ಸಂಬಂಧಪಟ್ಟುದು. ಅದನ್ನು ಎಂದಿಗೂ ಕೊಡ ತರುವ ವಿಷಯವನ್ನಾಗಿ ಮಾಡಬಾರದು. (ಹರಿಜನ : ೨೯-೩-೩೫)

ಕ್ರೈಸ್ತ ಮತಪ್ರಸಾರ ಸಂಸ್ಥೆಗಳ ಪ್ರಯತ್ನ

(ಡಾ. ಮೊಟ್ ಅವರ ಪ್ರಶ್ನೆಗಳು)

ಡಾ. ಮೊಟ್ : "ಅಸ್ಪೃಶ್ಯತಾ ನಿವಾರಣೆ ನಿಮ್ಮ ಬಾಳ ಕರ್ತವ್ಯ. ಭಾರತದ ಹೊರಗಡೆಯೂ ಈ ಚಳುವಳಿಗೆ ಪ್ರಾಮುಖ್ಯತೆ ಇದೆ. ಆದರೂ, ಈ ವಿಷಯದ ಬಗೆಗೆ ಇರುವಷ್ಟು ವಿಚಾರಗೊಂದಲ ಬಹಳ ಕಮ್ಮಿ ವಿಷಯ ಗಳ ಬಗೆಗೆ ಇದೆ. ಉದಾಹರಣೆಗೆ, ಪಾದರಿಗಳನ್ನೂ ಅವರ ಸಂಸ್ಥೆಗಳನ್ನೂ ನೋಡಿ. ಎಲ್ಲರ ಮನಸ್ಸೂ ಒಂದೇ ಇಲ್ಲ. ನಾವೆಲ್ಲಾ ಏಕಮನಸ್ಕರಾಗಿ ಯಾವ ಅಡಚಣೆ ಇಲ್ಲದಂತೆ ಎಷ್ಟರಮಟ್ಟಿಗೆ ನೆರವಾಗಬಲ್ಲೆವು ಎಂಬುದನ್ನು ಶೋಧನೆ ಮಾಡಬೇಕಾದುದು ತುಂಬ ಅವಶ್ಯ. ಪ್ರಪಂಚದ ಮೂರುನೂರು ಪ್ರಸಾರ ಸಂಸ್ಥೆಗಳನ್ನೊಳಗೊಂಡ ಅಂತರರಾಷ್ಟ್ರೀಯ ಪ್ರಸಾರ ಸಂಸ್ಥೆಯ ಅಧ್ಯಕ್ಷ ನಾನು. ಈ ಸಂಸ್ಥೆಗಳ ವರದಿಗಳು ನನ್ನ ಮುಂದೆ ಇವೆ. ಇವು ಗಳನ್ನು ನೋಡಿ ಅಸ್ಪೃಶ್ಯರ ಬಗೆಗೆ ಈ ಸಂಸ್ಥೆಗಳ ಆಸಕ್ತಿ ಹೆಚ್ಚುತ್ತಿದೆ

ಎಂದು ಹೇಳಬಲ್ಲೆ. ಈ ಪ್ರಸಾರ ಸಂಸ್ಥೆಗಳವರು ಎಲ್ಲಾದರೂ ತಪ್ಪುಮಾರ್ಗ ಹಿಡಿದಿದ್ದರೆ ಅದನ್ನು ನೀವು ಸ್ವತಂತ್ರವಾಗಿ ನನ್ನಲ್ಲಿ ಹೇಳುವುದಾದರೆ, ನಾನು ತುಂಬ ಆಸಕ್ತಿ ವಹಿಸುತ್ತೇನೆ. ಈ ಸಂಸ್ಥೆಗಳ ಉದ್ದೇಶ ನೆರವನ್ನು ನೀಡುವುದೇ ಹೊರತು ಅಡಚಣೆಯನ್ನು ಒಡ್ಡುವುದಲ್ಲ.

ಗಾಂಧೀಜೀ : ಕ್ರೈಸ್ತಮತ ಪ್ರಸಾರ ಸಂಸ್ಥೆಗಳ ಚಟುವಟಿಕೆಗಳು ನನಗೆ ವ್ಯಥೆಯನ್ನುಂಟುಮಾಡಿವೆ ಎಂದು ಈ ಸಂದರ್ಭದಲ್ಲಿ ಹೇಳದೆ ಇರಲಾರೆ. ಡಾ. ಅಂಬೇಡ್‌ಕರ್ ಸಿಡಿಗುಂಡನ್ನು ಹಾರಿಸಿದೊಡನೆ ಮುಸಲ್ಮಾನ ಮತ್ತು ಸಿಕ್ಕರೊಡನೆ ಇವರೂ ಕೂಡಿಕೊಂಡರು. ಎಲ್ಲರೂ ಸೇರಿ ಅದಕ್ಕೆ ಅತಿ ಮಹತ್ವ ಕೊಟ್ಟರು. ಅನಂತರ ಎಲ್ಲರೊಳಗೆ ಪೈಪೋಟಿ ಆರಂಭವಾಯಿತು. ಮುಸ್ಲಿಂ ಸಂಸ್ಥೆಗಳು ಈ ರೀತಿ ಮಾಡುವುದನ್ನು ನಾ ಅರ್ಥಮಾಡಿಕೊಳ್ಳಬಲ್ಲೆ, ಏಕೆಂದರೆ, ಹಿಂದೂಗಳೂ ಮುಸಲ್ಮಾನರೂ ಪರಸ್ಪರ ಕಿತ್ತಾಡುತ್ತಿದಾರೆ. ಈ ಮಧ್ಯೆ ಸಿಕ್ಕರು ಪ್ರವೇಶಿಸಿದ್ದಂತೂ ಒಂದು ಒಗಟಿಯೇ. ಆದರೆ, ಕ್ರೈಸ್ತ ಮತಪ್ರಸಾರ ಸಂಸ್ಥೆಗಳು ಮಾತ್ರ ತಮ್ಮ ಪ್ರಯತ್ನ ಆತ್ಮೋನ್ನತಿಯ ಪ್ರಯತ್ನ ಎಂದು ಹೇಳಿಕೊಳ್ಳುತ್ತಿದಾರೆ. ತಮ್ಮ ಗುಂಪಿನ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಪೈಪೋಟಿಯಲ್ಲಿ ಕ್ರೈಸ್ತ ಸಂಸ್ಥೆಗಳೂ ಮುಸ್ಲಿಂ ಮತ್ತು ಸಿಕ್ಕರೊಂದಿಗೆ ಪೈಪೋಟಿ ಮಾಡುತ್ತಿರುವುದನ್ನು ನೋಡಿ ನನಗೆ ವ್ಯಥೆಯಾಗಿದೆ. ಅದು ವಿಕಾರಯುತವಾಗಿಯೂ ಧರ್ಮವೈಪರೀತ್ಯವಾಗಿಯೂ ನನಗೆ ಕಂಡುಬಂದಿದೆ. ಅವರು ಡಾ. ಅಂಬೇಡ್ಕರ್ ಒಂದಿಗೆ ಗುಪ್ತ ಸಮಾಲೋಚನೆಗಳನ್ನೂ ಮಾಡಿದ್ದುಂಟು. ಹರಿಜನರ ಉನ್ನತಿಗಾಗಿ ನೀವು ಮಾಡುವ ಪ್ರಾರ್ಥನೆ ನನಗೆ ಅರ್ಥವಾಗಿ ಮೆಚ್ಚುತ್ತಿದ್ದೆ. ಇದಕ್ಕೆ ಪ್ರತಿಯಾಗಿ, ನೀವು ಹೇಳುವುದನ್ನು ಅರ್ಥಮಾಡಿಕೊಳ್ಳಲು ಮಾನಸಿಕ ಶಕ್ತಿಯಾಗಲೀ, ಬುದ್ಧಿಶಕ್ತಿಯಾಗಲೀ ಇಲ್ಲದ ಜನಕ್ಕೆ ಮೊರೆ ಇಟ್ಟರಿ; ಜೀಸಸ್ಸೋ, ಮೊಹಮ್ಮದನೋ, ನಾನಕನೋ, ಯಾರೋ ಅವರ ವಿಷಯವಾಗಿ ಏನೂ ವಿಚಾರಮಾಡಿ ತಿಳಿದುಕೊಳ್ಳುವ ಬುದ್ಧಿಶಕ್ತಿ ಇಲ್ಲದ ಜನ ಅವರು."

ಡಾ. ಮೊಟ್‌ರವರು ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪನ ಭಾಷಣವನ್ನೂ, ತಾವು ಅವರೊಂದಿಗೂ ಇಂಗ್ಲೆಂಡಿನ ಇತರ ಕ್ರೈಸ್ತಮತಪ್ರಸಾರ ಮುಖಂಡರೊಡನೆಯೂ ನಡೆಸಿದ ಮಾತುಕತೆಯ ವಿಷಯವನ್ನು ತಿಳಿಸಿ,

ಕ್ರೈಸ್ತರು ಹಿಂದೂಸ್ಥಾನದ ಜನರ ಮತಾಂತರ ಮಾಡುವ ವಿಚಾರದಲ್ಲಿ ಇತರ ಯಾರೊಂದಿಗೂ ಪೈಪೋಟಿ ನಡೆಸುತ್ತಿಲ್ಲವೆಂಬ ಅಂಶವನ್ನು ಒತ್ತಿ ಹೇಳಿದರು. ಇದೇ ಬಗೆಯ ನಂಬಿಕೆಯನ್ನು ಇತರ ಕ್ರೈಸ್ತ ಮುಖಂಡರೂ ತಮಗೆ ಕೊಟ್ಟಿದ್ದಾರೆಂದೂ, ಆದರೆ, ಕೆಲವು ಲೌಕಿಕ ಪತ್ರಿಕೆಗಳಲ್ಲಿ ಸ್ವೀಕರಿಸಲು ಸಿದ್ಧರಾಗಿರುವವರಿಗೆ ತಾವು ೫೦ ಮಿಲಿಯ ಜನರನ್ನು ಮತಾಂತರಕ್ಕೆ ಕೊಡಲು ಸಿದ್ಧರಾಗಿರುವುದಾಗಿ ಡಾ. ಅಂಬೇಡ್ಕರ್‌ರು ತಿಳಿಸಿರುವರೆಂದು ಪ್ರಕಟವಾಗಿದೆ ಎಂದೂ, ಇದು ಒಂದು ಅಗಾಧವಾದ ಅಪಸೇವೆಯಾಗುವುದೆಂದು ತಾವು ಭಾವಿಸುವುದಾಗಿಯೂ ತಿಳಿಸಿದರು. ಮುಂದುವರಿಸಿ, ಅತ್ಯಂತ ನಂಬಿಕೆಗೆ ಅರ್ಹರಾದ ಪ್ರಾಟೆಸ್ಟೆಂಟ್ ಮತಪ್ರಸಾರ ಸಂಸ್ಥೆಗಳ ಮುಖಂಡರು, ಗಾಂಧೀಜೀ ತಿಳಿಸುವಂತೆ ತುಂಬ ಎಚ್ಚರಿಕೆಯಿಂದ ಇರುವರೆಂದೂ, ಅವರು ಹೆಚ್ಚು ಹೆಚ್ಚಾಗಿ ಅಸ್ಪೃಶ್ಯರ ಸೇವೆಯಲ್ಲಿ ನಂಬುವರೆಂದೂ, ತಾವು ವಿವೇಕಯುಕ್ತರಾಗಿ ಮಾಡಬಹುದಾದುದನ್ನೂ, ಮಾಡಬಾರದುದನ್ನೂ ಸೂಚಿಸಬೇಕೆಂದು ಕೇಳಿದರು.

ಗಾಂಧೀಜೀ: "ಡಾ. ಅಂಬೇಡ್ಕರ್ ಅವರ ಯೋಚನೆ ಮತ್ತು ಚಳುವಳಿಯ ವಿಷಯವಾಗಿ ನೀವು ಪೂರ್ಣ ಶಾಂತಿಯಿಂದಲೂ, ನಿರ್ಲಕ್ಷ್ಯ ಭಾವದಿಂದಲೂ ಇರಬಹುದು. ಅವರ ಪ್ರಾರ್ಥನೆಗೆ ಏನಾದರೂ ಪ್ರತಿಕ್ರಿಯೆ ಕಂಡುಬರುವುದಾದರೆ, ಮತ್ತು ಅವರೂ ಹರಿಜನರೂ ಒಂದು ತೀರ್ಮಾನಕ್ಕೆ ಬಂದು ನಿಮ್ಮ ಬಳಿಸಾರಿದರೆ, ನಿಮ್ಮ ಅಂತರಾತ್ಮ ಬೋಧಿಸುವ ಬಗೆ ನೀವು ಕಾರ್ಯಕ್ರಮ ಕೈಗೊಳ್ಳಬಹುದು. ಆದರೆ, ಈ ದಿನವೇ ಅಂಬೇಡ್ಕರ್‌ರೂ, ಹರಿಜನರೂ ಏನು ಮಾಡುವರೆಂಬ ಬಗೆಗೆ ಯೋಚಿಸುವುದು ಅಕಾಲಿಕವೂ ಮತ್ತು ಅವಸರದಿಂದ ಕೂಡಿದುದೂ ಎನಿಸುತ್ತದೆ."

ದೀನಬಂಧು ಆಂಡ್ರೂಸರು ಲಕ್ನೋ ಸಮ್ಮೇಳನವನ್ನು ಕುರಿತು ಟೀಕಿಸಿದರು. ಅದಕ್ಕೆ ಡಾ. ಮೊಟ್ ಅವರು, ಆ ಸಮ್ಮೇಳನದ ತೀರ್ಮಾನಗಳು ಅಧಿಕೃತವಲ್ಲವೆಂದು ಉತ್ತರವಿತ್ತರು.

ಗಾಂಧೀಜೀ: "ಕ್ರೈಸ್ತಮತಸಂಸ್ಥೆಗಳು ಏನೂ ನುಡಿಯದೆ ಸುಮ್ಮನಿರುವುದರಿಂದ ಅದು ಅಧಿಕೃತವಾಗುತ್ತದೆ. ಅವು ಸಮ್ಮೇಳನದಲ್ಲಿ ನಡೆದುದೆಲ್ಲವನ್ನೂ ನಿರಾಕರಿಸಿದ್ದರೆ ಸರಿಯಾಗುತ್ತಿತ್ತು. ಆದರೆ, ಲಕ್ನೋ

ಸಮ್ಮೇಳನದಲ್ಲಿ ಸೇರಿದ್ದವರು, ಅಷ್ಟಾಗಿ ತೀವ್ರಾಭಿಪ್ರಾಯ ಹೊಂದದಿರುವ ಪ್ರಸಾರ ಸಂಸ್ಥೆಗಳ ಭಾವವನ್ನು ವ್ಯಕ್ತಪಡಿಸುವುದಾಗಿ ಭಾವಿಸಿರಬೇಕು."

ಡಾ. ಮೊಟ್ : "ಆದರೆ, ಒಂದು ನಿರಾಕರಣೆ ಇತ್ತಲ್ಲ."

ಗಾಂಧೀಜೀ : "ಒಂದು ವೇಳೆ ಇದ್ದರೆ, ಅದು ಇಂಗ್ಲಿಷ್ ಕಡಲಿನಾಚೆ ಪ್ರಯಾಣ ಮಾಡಲಿಲ್ಲ.

ಡಾ. ಮೊಟ್ : ಸ್ನೇಹಿತರೊಳಗೂ ಈ ಬಗೆಯ ವಿಚಾರಗೊಂದಲ ಮತ್ತು ಅಭಿಪ್ರಾಯಭೇದ ಇರುವುದು ನಿಜವಾಗಿಯೂ ವ್ಯಸನಕರ. ಸೈತಾನನಿಗೆ ಇದಕ್ಕಿಂತ ಹೆಚ್ಚಾಗಿ ಏನೂ ಬೇಡ. ನನ್ನ ಬಾಳು ಬಹುಮಟ್ಟಿಗೆ ಬುದ್ಧಿವಂತರ ವರ್ಗದ ಸೇವೆಯಲ್ಲಿ ಕಳೆದಿದೆ. ಈ ಚಳುವಳಿಯಲ್ಲಿ ನೆರವು ನೀಡಬೇಕೆಂದು ನನ್ನ ಆತ್ಮ ಪರಿತಪಿಸುತ್ತಿದೆ"

ಹಿಂದೂಗಳ ನಡುವೆ ಕೆಲಸಮಾಡುತ್ತಾ, ನೆರವು ನೀಡಿರುವ ಒಳ್ಳೆಯ ಕ್ರೈಸ್ತರ ನಿದರ್ಶನವನ್ನು ಕೊಟ್ಟರು. ಇಂಥವರಲ್ಲಿ ಡಾ. ಕೈಥಾರ್ ಒಬ್ಬರು. ಅವರು ಹರಿಜನರ ಪಥ ಸುಗಮ ಮಾಡುವುದಕ್ಕೆ ತುಂಬ ಶ್ರಮಿಸುತ್ತಿದ್ದರು. ಮಿಸ್. ಬಾರ್ ಮತ್ತು ಮಿಸ್. ಮ್ಯಾಡನ್ ಗ್ರಾಮ ಪುನರುಜ್ಜೀವನ ಚಳುವಳಿಯಲ್ಲಿ ಪೂರ್ಣ ನಿಮಗ್ನರಾಗಿದ್ದರು. ಅನಂತರ "ತಿರುವಾಂಕೂರಿನಲ್ಲಿ ಇಳವರುಗಳನ್ನು ಹಿಂದೂ ಪಂಗಡದಿಂದ ಸೆಳೆದುಕೊಳ್ಳುವುದಕ್ಕಾಗಿ ನಡೆಯುತ್ತಿರುವ ಅಸಭ್ಯ ಪೈಪೋಟಿ ಕುರಿತು ಹೇಳಿದರು. ತಿರುವಾಂಕೂರಿನ ಇಳವರುಗಳು ದೇವಾಲಯ ಪ್ರವೇಶವನ್ನು ಬಯಸುತ್ತಾರೆ. ಅವರಿಗೆ ದೇವಾಲಯ ಪ್ರವೇಶ ಬೇಕೆ? ಎಂಬುದಾಗಿ ನೀವು ಪ್ರಶ್ನಿಸುವುದು ಪ್ರಯೋಜನವಿಲ್ಲ. ಒಂದುವೇಳೆ ಅವರಿಗೆ ಅದು ಬೇಡವಾಗಿದ್ದರೂ ನಾನು ಅನುಭವಿಸುವ ಹಕ್ಕನ್ನೇ ಅವರೂ ಅನುಭವಿಸುವಂತೆ ಮಾಡಬೇಕಾದುದು ನನ್ನ ಕರ್ತವ್ಯ. ಇದಕ್ಕಾಗಿಯೇ ಅಲ್ಲಿನ ಸುಧಾರಕರು ಹರಿಜನರಿಗೆ ದೇವಾಲಯಗಳನ್ನು ತೆರೆಯುವುದಕ್ಕೋಸ್ಕರ ಹರಪ್ರಯತ್ನ ಮಾಡುತ್ತಿದಾರೆ." (ತಿರುವಾಂಕೂರಿನಲ್ಲಿ ಹರಿಜನ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿದಂತೆ ರಾಜ್ಯಘೋಷಣೆ ನಡೆಯುತ್ತಿದ್ದ ಘಳಿಗೆಯಲ್ಲೇ ಈ ಸಂಭಾಷಣೆ ನಡೆಯುತ್ತಿದ್ದುದು ಒಂದು ವಿಚಿತ್ರ.)

ಡಾ. ಮೊಟ್ : "ಆದರೆ, ನಾವು ಅವರ ಸೇವೆ ಮಾಡಬೇಡವೆ?"

ಗಾಂಧೀಜೀ: "ಅವಶ್ಯವಾಗಿ ಮಾಡಿ; ಆದರೆ ನಿಮ್ಮ ಸೇವೆಯ ಪ್ರತಿಫಲ ಮತಾಂತರವಾಗದಿರಲಿ."

ಡಾ. ಮೊಟ್: "ಅವರು ಕ್ರೈಸ್ತರಾಗಲಿ, ಬಿಡಲಿ, ಅವರ ಸೇವೆ ಸಲ್ಲಿಸಬೇಕೆಂಬ ಅಂಶವನ್ನು ನಾ ಒಪ್ಪುತ್ತೇನೆ. ಕ್ರಿಸ್ತ ಯಾವ ಆಕರ್ಷಣೆಯನ್ನೂ ತೋರಲಿಲ್ಲ. ಅವನಿತ್ತುದು ಸೇವೆ ಮತ್ತು ತ್ಯಾಗ."

ಗಾಂಧೀಜೀ: "ಕ್ರೈಸ್ತರು ಈ ಸುಧಾರಣಾ ಚಳುವಳಿಯಲ್ಲಿ ಭಾಗವಹಿಸಬೇಕಾದರೆ, ಮತಾಂತರದ ಭಾವನೆಯೇ ಅವರ ಮನದಲ್ಲಿ ಸುಳಿಯಬಾರದು."

ಡಾ. ಮೊಟ್: "ಈ ಅಭಾಸಕರ ಸ್ಪರ್ಧೆಯನ್ನು ಬಿಟ್ಟು, ಅವರು ಬೈಬಲನ್ನು ಅಂಗೀಕರಿಸುವಂತೆ ಬೋಧಿಸಬಾರದೆ?"

ಗಾಂಧೀಜೀ: "ಡಾ. ಮೊಟ್ ಅವರೇ, ನೀವು ಬೈಬಲನ್ನು ಒಂದು ಹಸುವಿಗೆ ಬೋಧಿಸುವಿರಾ? ಕೆಲವು 'ಅಸ್ಪೃಶ್ಯರು' ತಿಳಿವಳಿಕೆಯಲ್ಲಿ ಹಸುಗಳಿಗಿಂತಲೂ ಕಡೆ. ಅವರು ಇಸ್ಲಾಂ, ಹಿಂದೂಧರ್ಮ, ಕ್ರೈಸ್ತಧರ್ಮ ಇವುಗಳ ಪರಸ್ಪರ ಹಿರಿಮೆಯನ್ನು ಪೃಥಕ್ಕರಿಸಿ ತಿಳಿದುಕೊಳ್ಳಲಾರರು. ನೀವು ನಿಮ್ಮ ಅನುಷ್ಠಾನದ ಮೂಲಕವೇ ಬೋಧಿಸಲು ಸಾಧ್ಯ. ಗುಲಾಬಿ ಹೂ, 'ಬನ್ನಿ, ನನ್ನ ಸೌರಭವನ್ನು ಸೇವಿಸಿ' ಎಂಬುದಾಗಿ ಎಂದಿಗೂ ಹೇಳದು.

ಡಾ. ಮೊಟ್: "ಆದರೆ, ಕ್ರಿಸ್ತ ಹೀಗೆ ಹೇಳಿದಾನೆ: 'ಬೋಧಿಸಿ, ಶಿಕ್ಷಣ ಕೊಡಿ'. ಶ್ರವಣದಿಂದಲೂ ಆಸ್ತಿಕತೆ ಹುಟ್ಟುತ್ತದೆ. ಆ ಶ್ರವಣ ದೇವವಾಣಿಯಾಗಬೇಕು. ನಾನೂ ಒಂದಾನೊಂದು ಕಾಲದಲ್ಲಿ ನಾಸ್ತಿಕನಾಗಿದ್ದೆ. ಒಂದು ದಿನ ಕೇಂಬ್ರಿಜ್ಜಿನ ಪ್ರಸಿದ್ಧ ಕ್ರಿಕೆಟ್ ಆಟಗಾರ ಜೆ. ಇ. ಕೆ. ಸ್ಮಡ್ ಅವರು ನನ್ನ ವಿಶ್ವವಿದ್ಯಾಲಯಕ್ಕೆ ಸಂಚಾರೋಪನ್ಯಾಸಿಯಾಗಿ ಬಂದು ನನ್ನ ಕಣ್ಣು ತೆರೆಸಿದರು. ಅವರ ಬಾಳು ಮತ್ತು ಉಜ್ವಲ ನಿದರ್ಶನವೊಂದೇ ನನ್ನ ಪ್ರಶ್ನೆಗೆ ಉತ್ತರ ನೀಡಿ ನನ್ನ ಅಂತರಂಗದ ಬಯಕೆಯನ್ನು ತೃಪ್ತಿಪಡಿಸಲು ಸಾಧ್ಯವಾಗುತ್ತಿರಲಿಲ್ಲ. ನಾನು ಅವರ ವಾಣಿ ಕೇಳಿ ಪರಿವರ್ತನೆ ಹೊಂದಿದೆ. ಬಾಳಿನಲ್ಲಿ ಅನುಷ್ಠಾನ ಪ್ರಧಾನವಾಗಬೇಕು. ಅನಂತರ ವಿವೇಕದಿಂದಲೂ, ಸಹೃದಯತೆಯಿಂದಲೂ ಪರಸತ್ಯವನ್ನು ವಿಶಾಲಗೊಳಿಸುತ್ತಾ, ನಮ್ಮ ಕರ್ಮಗಳ ಮೇಲೂ, ಭಾವಗಳ ಮೇಲೂ

ಅದರ ಬೆಳಕನ್ನು ಬೀರಿಕೊಳ್ಳುತ್ತಾ, ಬೌದ್ಧಿಕವಾಗಿ ಪ್ರಾಪ್ತವಾಗುವ ತೊಡಕುಗಳನ್ನೂ ಬಿಡಿಸಿಕೊಳ್ಳುತ್ತಾ, ಅದರಿಂದ ನಿಜಮುಕ್ತಿಯನ್ನು ಪಡೆಯ ಬೇಕು. ನಾಳೆಯೇ ಕ್ರೈಸ್ತರು ಹಿಂದಿರುಗಬೇಕೆಂದು ನೀವು ಅಪೇಕ್ಷಿಸು ವುದಿಲ್ಲ ತಾನೇ ? ”

ಗಾಂಧೀಜೀ : “ ಇಲ್ಲ ನಿಮಗೆ ನೆರವು ನೀಡಲು ಸಾಧ್ಯವಿಲ್ಲವಾದರೆ, ನೀವು ನಮ್ಮ ಕಾರ್ಯದ ನಡುವೆ ಪ್ರವೇಶಿಸಬಾರದೆಂದು ನನ್ನ ಇಚ್ಛೆ.”

ಡಾ. ಮೊಟ್ : “ ಕ್ರೈಸ್ತಧರ್ಮವೆಲ್ಲ ಬಾಳಿನ ಅನುಭವಗಳನ್ನು ಹಂಚಿಕೊಳ್ಳುವ ಧರ್ಮವಾಗಿರುವಾಗ ಮಾತಿನಿಂದಲೂ ಬಾಳನ್ನು ಭರಿಸ ದಿರಲು ಹೇಗೆ ಸಾಧ್ಯ ? ”

ಗಾಂಧೀಜೀ : “ ಹಾಗಾದರೆ ಅವರು ತಿರುವಾಂಕೂರಿನಲ್ಲಿ ಮಾಡು ತ್ತಿರುವುದು ಸರಿಯೆ ? ನೀವು ಹೇಳುವುದಕ್ಕೂ ಅವರು ಮಾಡುವುದಕ್ಕೂ ತಾರತಮ್ಯವಿರಬಹುದು. ಆದರೆ ಗುಣದಲ್ಲಿ ತಾರತಮ್ಯವಿಲ್ಲ. ನೀವು ಹರಿಜನರೊಂದಿಗೆ ಹಂಚಿಕೊಳ್ಳಲಪೇಕ್ಷಿಸಿದರೆ ನನ್ನೊಡನೆಯೂ ಥಕ್ಕರ್ ಬಾಪಾ ಮತ್ತು ಮಹದೇವ ದೇಸಾಯಿಯೊಂದಿಗೂ ಹಂಚಿಕೊಳ್ಳಬಾರದೇಕೆ? ನೀವು ಹರಿಜನರಲ್ಲಿಗೇ ಹೋಗಿ, ಈ ಚಳುವಳಿಯನ್ನೇಕೆ ದುರುಪಯೋಗ ಪಡಿಸಿಕೊಳ್ಳಲು ಯತ್ನಿಸುವಿರಿ ? ಇದನ್ನು ಬಿಟ್ಟು ನಮ್ಮಲ್ಲಿಗೇ ಏಕೆ ಬರಬಾರದು ?

ಡಾ. ಮೊಟ್ : “ ಪ್ರಸಕ್ತ ಚರ್ಚೆಯೆಲ್ಲ ಅಂಬೇಡ್ಕರ್ ಅವರ ಘೋಷಣೆಯಾದಂದಿನಿಂದ ಅನುಚಿತ ಉದ್ದೇಶಗಳೊಂದಿಗೆ ತಳಕು ಹಾಕ ಲ್ಪಟ್ಟಿದೆ. ಇದು ವಿಸರ್ಜನೆಯಾಗಬೇಕು. ಜೀಸಸ್ ಹೀಗೆ ಹೇಳಿದಾರೆ: ‘ ನೀವು ನನಗೆ ಸಾಕ್ಷೀಭೂತರು ’. ಒಳ್ಳೆಯ ಕ್ರೈಸ್ತನು ತನ್ನ ಸ್ವಂತ ಜೀವನದಲ್ಲಿ ಗಳಿಸಿದ ಅನುಭವದಿಂದಲೂ ಅಥವಾ ಆತನ ಸ್ವಂತ ವೀಕ್ಷಣೆ ಯಿಂದಲೂ ಬಂದುದಕ್ಕೆ ಸಾಕ್ಷೀಭೂತನಾಗಬೇಕು. ಕ್ರೈಸ್ತನಿಗೆ ನಾವು ನಿಜವಾಗಿಯೂ ಸಾಕ್ಷೀಭೂತರಾಗದಿದ್ದರೆ ಅವನ ನಿಜವಾದ ಅನುಯಾಯಿ ಗಳೆನಿಸಿಕೊಳ್ಳಲಾರೆವು. ಅವನ ಬೋಧೆ ಹೀಗೆ: ‘ ಮಬ್ಬು ಕಡಿದೆಡೆ ಹೋಗಿ ಬೋಧಿಸಿ. ಅವರ ಕೈಹಿಡಿದು ಹೆಚ್ಚು ಬೆಳಕಿಗೊಯ್ಯಿರಿ’.”

ಈ ಸಂದರ್ಭದಲ್ಲಿ ದೀನಬಂಧು ಆಂಡ್ರೂಸರು ಒಂದು ಒಪ್ಪಂದಕ್ಕೆ ಬರುವ ವಿಷಯವನ್ನು ಕುರಿತು ನುಡಿಯಲು ಅಪ್ಪಣೆ ಬೇಡಿ, ಹೀಗೆ ಹೇಳಿ

ದರು : 'ನಿಮಗೂ ಮತಪ್ರಚಾರಕರಿಗೂ ಮೂಲಭೂತ ವ್ಯತ್ಯಾಸಗಳಿವೆ. ಆದರೂ, ನೀವು ಅವರ ಗೆಳೆಯರು. ಅವರೊಂದಿಗೆ ಕಾರ್ಯಕ್ರಮದಲ್ಲಿ ಸೇರಿಲ್ಲವೆಂದು ನೀವು ಭಾವಿಸಿದೀರಿ. ಚರ್ಚಿನ ಮುಖಂಡರು ಈ ರೀತಿ ಹೇಳಬೇಕೆಂದು ನಿಮ್ಮ ಆಶಯವಾಗಬೇಕು : "ನಾವು ಕೊಚ್ಚೆ ನೀರಿನಲ್ಲಿ ಮೀನು ಹಿಡಿಯಲೆತ್ನಿಸುವುದಿಲ್ಲ, ವಿಶೇಷ ರೀತಿಯಲ್ಲಿ ಉದ್ಭವವಾಗಿರುವ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳುವರೆಂಬ ಅರ್ಥ ಬರುವಂತೆ ನಾವೇನನ್ನೂ ಮಾಡುವುದಿಲ್ಲ."

ಗಾಂಧೀಜೀ: "ಇದು ಪರಸ್ಪರ ಅಂಗೀಕಾರದಿಂದ ಇತ್ಯರ್ಥವಾಗುವ ವಿಷಯವೇ ಅಲ್ಲವೆನಿಸುತ್ತದೆ ನನಗೆ. ಇದು ತೀವ್ರ ಧಾರ್ಮಿಕ ಪ್ರಶ್ನೆ; ಪ್ರತಿಯೊಬ್ಬರೂ ಅವರ ಅಂತರಂಗದ ಬೋಧೆಯಂತೆ ವರ್ತಿಸಬೇಕು. ನಿಮ್ಮ ಸಧ್ಯದ ಪ್ರಯತ್ನವು ಆತ್ಮಪೂರ್ವಕವಾಗಿ ನಿಮ್ಮ ಧ್ಯೇಯವೆನಿಸಿದರೆ, ಹಿಂದೂ ಸುಧಾರಕರಿಗೆ ನೀವು ಸ್ವಲ್ಪವೂ ಆಶ್ರಯ ಕೊಡಬೇಕಾದುದಿಲ್ಲ. ಆದರೆ, ಇಂದು ಕ್ರೈಸ್ತ ಪ್ರಚಾರಕರು ಮಾಡುತ್ತಿರುವ ಕೆಲಸ ಆಧ್ಯಾತ್ಮಿಕವಲ್ಲವೆಂದು ನನ್ನ ನಂಬಿಕೆಯಾಗಿದೆ."

(ಹರಿಜನ : ೧೯-೧೨-೩೬)

ಹರಿಜನರನ್ನು ಪ್ರಲೋಭನಕ್ಕೆಳೆವುದು

ಹರಿಜನ ಸೇವಕರ ಸಭೆಯೊಂದರಲ್ಲಿ ಗಾಂಧೀಜೀಯನ್ನು ಕೇಳಿದ ಒಂದು ಪ್ರಶ್ನೆ, ಕ್ರೈಸ್ತಮತ ಪ್ರಸಾರಕರು ಹುಡುಗರಿಗೆ ಪುಸ್ತಕ, ಶಾಲಾಶುಲ್ಕ ಇತ್ಯಾದಿಗಳನ್ನು ಕೊಟ್ಟು ಅವರನ್ನು ಕೊನೆಯದಾಗಿ ಮತಾಂತರ ಹೊಂದುವಂತೆ ಪ್ರಲೋಭನಕ್ಕೆಳೆವ ವಿಷಯವನ್ನು ಕುರಿತುದಾಗಿತ್ತು. ಇಂಥ ಸಂದರ್ಭದಲ್ಲಿ ಹೇಗೆ ವ್ಯವಹರಿಸಬೇಕು? ಗಾಂಧೀಜೀ ಹೀಗೆ ಉತ್ತರವಿತ್ತರು: "ಕ್ರೈಸ್ತಮತಪ್ರಚಾರಕರು ಕ್ರಿಸ್ತನ ತತ್ವಗಳನ್ನು ಬೋಧಿಸಿ, ಕ್ರೈಸ್ತರಲ್ಲದವರನ್ನು ಕ್ರೈಸ್ತ ಮತಕ್ಕೆ ಸೇರಿರೆಂದು ಆಹ್ವಾನಿಸುವ ಹಕ್ಕನ್ನು ಹೊಂದಿದಾರೆ. ಆದರೆ, ಆರ್ಥಿಕ ಅನುಕೂಲತೆಗಳ ಮೂಲಕ ಆಕರ್ಷಣೆ ಒಡ್ಡಿ, ಮತಾಂತರಗೊಳಿಸುವ ಪ್ರಯತ್ನವನ್ನು ಯಾವ ಅಡ್ಡಿಯೂ ಇಲ್ಲದಂತೆ ಬಯಲಿಗೆಳೆಯಬೇಕು. ಹರಿಜನರೂ ಈ ಪ್ರಲೋಭನೆಗಳನ್ನು ಎದುರಿಸುವಂತೆ ಶಿಕ್ಷಣ ಕೊಡಬೇಕು."

(ಹರಿಜನ : ೧-೨-೪೨)

ಅಸ್ಪೃಶ್ಯತೆಯೂ ಮತ್ತು ಮತಾಂತರವೂ

ಪ್ರಶ್ನೆ : ಅಸ್ಪೃಶ್ಯತಾ ನಿವಾರಣೆಮಾಡಿ ಹರಿಜನರಿಗೆ ಇತರರೊಡನೆ ಸಮಾನ ಸ್ಥಾನವನ್ನು ಕೊಡುವುದೇ ಕಾಂಗ್ರೆಸಿನ ಉದ್ದೇಶವಾಗಿದ್ದರೆ, ಆ ಉದ್ದೇಶವು ಅವರು ಇಸ್ಲಾಂ ಸೇರುವುದರಿಂದ ಸಾಧಿತವಾಗದೆ? ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮವನ್ನು ಹಿಂದೂಗಳಿಗೆ ಮಾತ್ರ ಏಕೆ ಸೂಚಿಸಲಾಗಿದೆ. ಇದು ಕಾಂಗ್ರೆಸ್ ಸಂಸ್ಥೆ ಹಿಂದೂಗಳ ಬಹು ಸಂಖ್ಯೆಯನ್ನು ಹೊಂದಬೇಕೆಂಬ ಕಾತುರತೆಯನ್ನೂ ಮುಸಲ್ಮಾನರಿಗೆ ಮತಾಂತರ ಮಾಡುವ ಹಕ್ಕನ್ನು ನಿರಾಕರಿಸುವುದನ್ನು ತೋರಿಸುವುದಿಲ್ಲವೆ?

ಉತ್ತರ : ಹರಿಜನರನ್ನು ಇಸ್ಲಾಮಿಗೋ ಅಥವಾ ಇತರ ಬೇರೆ ಧರ್ಮಕ್ಕೋ ಪರಿವರ್ತನೆಮಾಡುವುದರಿಂದ ಅಸ್ಪೃಶ್ಯತಾ ನಿವಾರಣೆಯಾಗಲಾರದು. ಏಕೆಂದರೆ, ಅಸ್ಪೃಶ್ಯತೆಯ ಪಾಪವಿಮುಕ್ತನಾಗಬೇಕಾದವನು ಸವರ್ಣ ಹಿಂದೂ. ಎಷ್ಟೇ ನಿಧಾನವಾದರೂ, ಹರಿಜನನಿಗೆ ಸವರ್ಣ ಹಿಂದೂ ನ್ಯಾಯ ತೋರುವುದರಿಂದ ಮಾತ್ರ ಇದು ಸಾಧ್ಯ. ಆದುದರಿಂದ ಈ ಹೊರೆಯನ್ನು ಹಂಚಿಕೊಳ್ಳುವುದರಲ್ಲಿ ಮುಸ್ಲಿಮರಿಗೇಕೆ ಕಾಂಗ್ರೆಸ್ ಕರೆ ಕೊಟ್ಟಿಲ್ಲವೆಂಬುದನ್ನು ನೀವು ಅರಿತುಕೊಳ್ಳಬಹುದು. ಅವರು ಅಸ್ಪೃಶ್ಯರಿಗೆ ಯಾವ ಪಾಪವನ್ನೂ ಎಸಗಿಲ್ಲ. ಬಹಳ ಸರಳವೂ, ಆವಶ್ಯಕವೂ ಆದ ಸುಧಾರಣಾ ಕಾರ್ಯವೊಂದನ್ನು ಬಹು ಸಂಖ್ಯಾತರನ್ನು ಮಾಡಿಕೊಳ್ಳುವ ರಾಜಕೀಯ ತಡೆ ಎಂದು ನೀವು ಭಾವಿಸುವುದಾದರೆ ಅದನ್ನು ನಾನು ತಪ್ಪಿಸಲಾರೆ. ಹರಿಜನೋದ್ಧಾರಕ್ಕಾಗಿ ಪರಿತಪಿಸುತ್ತಿರುವ ಹತ್ತಾರು ಸಹಸ್ರ ಹಿಂದೂಗಳು ಈ ಬಹು ಸಂಖ್ಯಾತರೆಂಬ ಯೋಚನೆ ಕೂಡ ಇಲ್ಲದವರಾಗಿದ್ದಾರೆ. ಧರ್ಮದ ಹೆಸರಿನಲ್ಲಿ ಸವರ್ಣ ಹಿಂದೂಗಳು ಗುಲಾಮಗಿರಿಗಿಂತಲೂ ಕಡೆಯಾಗಿ ಕಂಡಿರುವ ಜನಕ್ಕೆ ನ್ಯಾಯ ದೊರಕಲೆಂಬುದೇ ಅವರ ಅಭಿಲಾಷೆ. ಕೊನೆಯದಾಗಿ, ಮುಸ್ಲಿಮರು ಹರಿಜನರನ್ನು ಜಾತ್ಯಂತರ ಮಾಡುವ ಕಾರ್ಯಕ್ಕೆ ಕಾಂಗ್ರೆಸ್ ತಡೆಮಾಡಿದೆಯೆಂದು ನೀವು ಸೂಚಿಸುವುದು ಶುದ್ಧಾಂಗ ತಪ್ಪು. ಯಾರೇ ಆಗಲೀ ಮಾಡುವ ಮತಾಂತರ ಕಾರ್ಯವನ್ನು ಕಾಂಗ್ರೆಸ್

ತಡೆಗಟ್ಟಲಾರದು. ಈ ಹಕ್ಕನ್ನು ನ್ಯಾಯಬದ್ಧವಾಗಿಯೋ, ಅನ್ಯಾಯವಾಗಿಯೋ ಉಪಯೋಗಿಸುತ್ತೀರೆಂಬುದನ್ನು ಯೋಚಿಸಬೇಕಾದವರು ನೀವೇ.

(ಹರಿಜನ : ೨೦-೪-೪೦)

ಚಳುವಳಿಯ ವ್ಯಾಪಕಾರ್ಥ—ಧರ್ಮಗಳ ಮೈತ್ರೀಮಾರ್ಗ

ಅಸ್ಪೃಶ್ಯತೆಯ ಭೂತವನ್ನು ಕುರಿತು ನನ್ನ ಪ್ರಯತ್ನ ನಡೆವಾಗ ಅದು ಹಿಂದೂಗಳೆಲ್ಲರ ಸೋದರ ಭಾವವಷ್ಟೇ ಸಾಧಿತವಾಗಬೇಕೆಂಬುದು ನನ್ನ ಅಂತರಂಗದ ಅಭಿಲಾಷೆಯಲ್ಲ; ಅದು ಪ್ರಧಾನವಾಗಿ, ಹಿಂದೂ, ಮುಸಲ್ಮಾನ್, ಕ್ರೈಸ್ತ, ಪಾರಸೀ, ಎಹೂದ್ಯ, ಹೀಗೆ ಎಲ್ಲ ಮಾನವರ ಸೋದರಭಾವದ ಸ್ಥಾಪನೆಯೇ ಆಗಬೇಕು. ಏಕೆಂದರೆ, ಜಗತ್ತಿನ ಎಲ್ಲ ಪ್ರಧಾನ ಧರ್ಮಗಳ ಮೂಲ ಸತ್ಯವನ್ನೂ ನಾ ನಂಬುತ್ತೇನೆ. ಅವೆಲ್ಲವೂ ದೈವದತ್ತವೆಂದೂ, ಯಾವ ಜನಾಂಗಕ್ಕೆ ಅವು ದಿವ್ಯದರ್ಶನದ ಫಲವಾಗಿ ಬಂದವೋ, ಆ ಜನಾಂಗಕ್ಕೆ ಅವು ಆವಶ್ಯಕವಾಗಿದ್ದವೆಂದು ನಾ ನಂಬುತ್ತೇನೆ. ಬೇರೆಬೇರೆ ಧರ್ಮಗಳ ಪವಿತ್ರ ಗ್ರಂಥಗಳನ್ನು ಆ ಆ ಧರ್ಮಾನುಯಾಯಿಗಳೇ ಪಠಿಸುವ ದೃಷ್ಟಿಯಿಂದ ಪಠಿಸುವುದಾದರೆ, ಅವೆಲ್ಲವುಗಳ ಮೂಲವೂ ಒಂದೇ ಇರುವುದೆಂದೂ, ಎಲ್ಲವೂ ಪರಸ್ಪರ ಪ್ರಯೋಜನಕಾರಿ ಎಂದೂ ನಮಗೆ ಅರಿವಾಗುತ್ತದೆ.

'ನನ್ನನ್ನು ಸ್ಪರ್ಶಿಸಬೇಡ' ಎಂಬ ತತ್ವವು ಹರಿಜನರಿಗಷ್ಟೇ ಪರಿಮಿತವಾಗಿಲ್ಲ. ಅದು ಜಾತಿಜಾತಿಗಳ ಮೇಲೂ ಧರ್ಮಧರ್ಮಗಳ ಮೇಲೂ ಪ್ರಭಾವ ಬೀರಿದೆ. ಈ ಚಳುವಳಿಯ ಪರಿಣಾಮವಾಗಿ ಈ ದೇಶದಲ್ಲಿ ವಾಸಿಸುವ ಎಲ್ಲ ಕುಲಗಳ, ಎಲ್ಲ ಪಂಗಡಗಳ ಹೃತ್ಪೂರ್ವಕ ಐಕ್ಯತೆಯಾಗುವವರೆಗೂ ನನಗೆ ತೃಪ್ತಿ ಎಂಬುದಿಲ್ಲ. ಈ ಕಾರಣದಿಂದಲೇ ಭಾರತದಲ್ಲಿಯೂ ಹೊರಗಡೆಯೂ ವಾಸಿಸುವ ಎಲ್ಲ ಜನರ ಸಹಕಾರವನ್ನು ನಾ ಸ್ವಾಗತಿಸಿದೇನೆ.

(ಹರಿಜನ : ೧೬-೨-೩೪)

ಹಿಂದೂ ಮುಸಲ್ಮಾನರ ನಡುವಿನ ಅಸ್ಪೃಶ್ಯತೆ

ನನ್ನ ಮುಸ್ಲಿಂ ಪತ್ರಕಾರರು ಹೀಗೆ ಬರೆಯುತ್ತಾರೆ:

'ಮುಸ್ಲಿಂ ಲೀಗಿನ ಮೇಲೆ ನೀವು ಅಸ್ಪೃಶ್ಯತೆಯ ಆಪಾದನೆಯನ್ನು ಹೊರಿಸಿರುವುದಕ್ಕೆ ನಾಚಿಕೆ ಪಡಬೇಕು. ಮುಸ್ಲಿಮನ ಕಣ್ಣಿನಲ್ಲಿರುವ ಸಣ್ಣ ಮಚ್ಚೆಯನ್ನು ತೆಗೆಯಲು ಪ್ರಯತ್ನಿಸುವುದಕ್ಕೆ ಮುಂಚೆ ಹಿಂದೂವಿನ ಕಣ್ಣಿನಲ್ಲಿರುವ ದೊಡ್ಡ ಮಚ್ಚೆಯನ್ನು ತೆಗೆದುಹಾಕಿ. ಹಿಂದೂಗಳು ಸಾವಿರಾರು ವರುಷಗಳಿಂದಲೂ ಮುಸ್ಲಿಮರನ್ನು ಪೂರ್ಣವಾಗಿ ಬಹಿಷ್ಕರಿಸಿಲ್ಲವೆ? ಹಿಂದೂ ಮುಸ್ಲಿಮನೊಂದಿಗೆ ಅನ್ನಪಾನಾದಿಗಳನ್ನು ಸೇವಿಸುವುದಿಲ್ಲ. ಇಬ್ಬರಿಗೂ ಪರಸ್ಪರ ವಿವಾಹ ಸಂಬಂಧವಿಲ್ಲ. ಮುಸ್ಲಿಮನಿಗೆ ತನ್ನ ಮನೆಯನ್ನು ಬಾಡಿಗೆಗೂ ಕೊಡುವದಿಲ್ಲ. ಒಂದು ಪಂಗಡದ ಮೇಲೆ ಈ ರೀತಿಯಲ್ಲಿ ಹಿಂದೂ ನಡೆಸಿರುವ ಬೇರ್ಪಡೆ ನೀತಿಗಿಂತಲೂ ಪರಿಣಾಮಕಾರಿಯಾದ ಇನ್ನೊಂದು ನೀತಿಯುಂಟೆ? ಹಿಂದೂ ಮಾಡಿದ ರೀತಿಯಲ್ಲಿಯೇ ಇಂದು ಮುಸ್ಲಿಮನು ಮುಯ್ಯಿ ತೀರಿಸಿಕೊಳ್ಳಲೆತ್ನಿಸಿದರೆ, ಅದು ನ್ಯಾಯಬದ್ಧ ಪ್ರತೀಕಾರವಲ್ಲವೆ?"

ಇದನ್ನು ನಾನು ಒಪ್ಪಿಕೊಂಡಿದೇನೆ. ಮುಸ್ಲಿಮರು ಪ್ರತೀಕಾರ ಬುದ್ಧಿಯಿಂದ ಏನನ್ನು ಮಾಡಿದರೂ ಅದು ಅವರಿಗೆ ತುಂಬ ಯೋಗ್ಯಪ್ರತಿಫಲ. ಆದರೆ, ಮುಸ್ಲಿಮರು ಹಾಗೆ ಮಾಡಬೇಕೆ? ಇದು ನನ್ನ ಪ್ರಶ್ನೆಯಾಗಿತ್ತು; ಇಂದೂ ಆಗಿದೆ. ಒಂದು ದೊಡ್ಡ ರಾಜಕೀಯ ಪಕ್ಷ ಮತೀಯ ರಾಗದ್ವೇಷಗಳನ್ನು ಎತ್ತಿ ಬೆಳೆಸುವುದು ಯುಕ್ತವೆ?

ಮುಸ್ಲಿಂ ಲೀಗಿನವರು ಏನನ್ನಾದರೂ ಮಾಡಲಿ, ಬಿಡಲಿ, ವಿಚಾರಪರ ಹಿಂದೂಗಳು ಯುಕ್ತವೆನಿಸುವ ಈ ಮೂದಲಿಕೆಯನ್ನು ಗಮನಕ್ಕೆ ತಂದುಕೊಂಡು, ಹಿಂದೂಧರ್ಮವನ್ನು ಅದರ ಸಂಕುಚಿತ ಮನೋಭಾವದಿಂದ ಶುದ್ಧಮಾಡಬೇಕು. ಅದು ಕೃತಕ ತಡೆಗಳಿಂದ ರಕ್ಷಿಸಲ್ಪಡಲಾರದು. ಪ್ರಾಚೀನ ಹಿಂದೂಧರ್ಮದಲ್ಲಾಗಲೀ ವಿಚಾರದಲ್ಲಾಗಲೀ ಅದಕ್ಕೆ ಆಧಾರವಿಲ್ಲ. ರೈಲ್ವೆ ನಿಲ್ದಾಣಗಳಲ್ಲಿ ಹಿಂದೂ ಟೀ, ಮುಸ್ಲಿಂ ಟೀ, ಅಥವಾ ಹಿಂದೂ ಪಾನೀ, ಮುಸ್ಲಿಂ ಪಾನೀ, ಎಂದು ಕೂಗಿದಾಗ ತಮಗೆಷ್ಟು ಹಿಂಸೆ

ಯಾಗುವುದೆಂಬುದನ್ನು ವ್ಯಕ್ತಪಡಿಸಿದ ಅಬುಲ್‌ಕಲಾಂ ಆಜಾದರು ಒಳ್ಳೆಯದನ್ನೇ ಮಾಡಿದರು. ಈ 'ನನ್ನನ್ನು ಮುಟ್ಟಬೇಡ' ಎಂಬ ವಾದ ಇಂದೂ ಆಚರಣೆಯಲ್ಲಿರುವ ಹಿಂದೂಧರ್ಮದಲ್ಲಿ ಎಷ್ಟು ಆಳವಾಗಿದೆ ಎಂಬುದನ್ನು ನಾ ಅರಿತಿದೇನೆ. ಅಸ್ಪೃಶ್ಯತಾ ನಿವಾರಣೆ ಚಳುವಳಿಯ ಧ್ಯೇಯವು ಕೇವಲ ಅಸ್ಪೃಶ್ಯರೆಂದು ಕರೆಯಲ್ಪಡುವವರನ್ನು ಸ್ಪರ್ಶಮಾಡುವುದರಿಂದ ಕೊನೆಗೊಳ್ಳದು. ಅದರ ಅರ್ಥ ಇನ್ನೂ ಗಾಢವಾಗಿದೆ.

(ಹರಿಜನ : ೧-೬-೪೦)

ನನ್ನ ಬಾಳಿನ ಬಯಕೆ

ಏಪ್ರಿಲ್ ೬ ರಂದು ನಾನು ನೆಲ್ಲೂರಿನಲ್ಲಿದ್ದೆ. ಅಲ್ಲಿ ಅಸ್ಪೃಶ್ಯರನ್ನು ಸಂಧಿಸಿ, ಇಂದು ನಿಮ್ಮೊಡನೆ ಪ್ರಾರ್ಥನೆ ಮಾಡಿದಂತೆ ಅಲ್ಲಿಯೂ ಪ್ರಾರ್ಥನೆ ಸಲ್ಲಿಸಿದೆ. ನಾನು ಪುನಃ ಹುಟ್ಟುವುದಾದರೆ, ಅಸ್ಪೃಶ್ಯನಾಗಿಯೇ ಹುಟ್ಟಬೇಕು. ಇದರಿಂದ ಅವರ ದುಃಖ ವೇದನೆಗಳು ಮತ್ತು ಅವರ ಮೇಲೆ ಹೇರಲಾದ ತಿರಸ್ಕಾರಗಳು ಇವನ್ನೆಲ್ಲ ನಾನೂ ಹಂಚಿಕೊಳ್ಳಲು ಸಾಧ್ಯವಾದೀತು; ನನ್ನ ಮೋಕ್ಷ ಪಡೆಯಲೂ ಅವರನ್ನು ದುಃಖತಪ್ತಸ್ಥಿತಿಯಿಂದ ವಿಮುಕ್ತರನ್ನಾಗಿ ಮಾಡಲೂ ಸಾಧ್ಯವಾದೀತು. ನನ್ನ ಬಯಕೆಗಳು ಪೂರ್ತಿಯಾಗದೆ ನಾ ಸಾಯುವುದಾದರೆ, ಹರಿಜನನಿಗೆ ನನ್ನ ಸೇವೆ ಪೂರ್ಣವಾಗದೆ ಹೋದರೆ, ನನ್ನ ಹಿಂದೂಧರ್ಮ ಪರಿಪೂರ್ಣವಾಗದೆ ಹೋದರೆ, ಅದರ ಪರಿಪೂರ್ಣತೆಗಾಗಿ ಅಸ್ಪೃಶ್ಯರ ನಡುವೆ ನಾ ಪುನಃ ಜನ್ಮ ಪಡೆಯುವಂತೆ ಆಗಲೆಂದು ಪ್ರಾರ್ಥಿಸಿದೆ.

(ಅಹಮದಾಬಾದಿನಲ್ಲಿ ನಡೆದ ಒಂದು ನಿಮ್ನವರ್ಗ ಸಮ್ಮೇಳನ ಭಾಷಣದಿಂದ)

(ಯಂಗ್ ಇಂಡಿಯಾ : ೪-೫-೨೧)

ನನ್ನ ಜೀವನ

ಪ್ರಶ್ನೆ : ನೀವು ನಿಮ್ಮ ಜೀವನವನ್ನು ಹರಿಜನರಿಗೆ ನಿವೇದನ ಮಾಡಿರುವುದರಿಂದ, ಈಗ ಅದು ಅವರಿಗೇ ಸೇರಿದುದು ತಾನೆ?

ಉತ್ತರ : ನನ್ನ ಜೀವನ ಹರಿಜನರಿಗೆ ಸೇರಿದುದೆಂದು ಹೇಳುವುದು ಕೇವಲ ಅರ್ಧ ಸತ್ಯ. ಇದರ ಪೂರ್ಣ ಸತ್ಯವೆಂದರೆ, ನನ್ನ ಜೀವನ ದೇವರದು ; ಆದುದರಿಂದ ಅದು ದೇವರಿಗೂ, ಅಷ್ಟೇಕೆ ಸಕಲ ಸೃಷ್ಟಿಗೂ ಸೇರಿದುದು. ದೇವರೇ ನನ್ನ ಕಾಪುಗಾರ, ಅಥವಾ ನನ್ನನ್ನು ಒಯ್ಯುವವನು.

(ನನ್ನ ಆತ್ಮವ್ಯಥೆ: ೧೯೩೩—೬-೧೨-೩೨ ; ಪು. ೮೩)

ವಿವಾಹ

★

ಎಲ್ಲಿಯ ವರೆಗೆ ಭಾರತದಲ್ಲಿ ಲಕ್ಷಾಂತರ ಜನರು ಹೊಟ್ಟೆಗಿಲ್ಲದೆ ಇರುವರೋ ಅಲ್ಲಿಯ ವರೆಗೆ ಭೋಜನ ಕೂಟ, ವಿವಾಹ ಕೂಟ, ತಮಾಷೆಗಳು ಮತ್ತು ಇತರ ಬೋಗಾನುಭವ ವಸ್ತುಗಳು, ಇವುಗಳ ಮೇಲೆ ದ್ರವ್ಯ ವೆಚ್ಚ ಮಾಡುವುದು ಒಂದು ಅಪರಾಧವೆಂದು ಪರಿಗಣಿಸಲ್ಪಡಬೇಕು. ಕುಟುಂಬವೊಂದರಲ್ಲಿ ಯಾರಾದರೊಬ್ಬರು ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಯಲ್ಲಿದ್ದರೆ, ನಾವು ಸಂತೋಷಕೂಟಗಳನ್ನು ಆಚರಿಸಲಾರೆವು. ಭಾರತವನ್ನು ಒಂದೇ ಕುಟುಂಬವೆಂಬಂತೆ ನಾವು ಭಾವಿಸಬೇಕಾದರೆ, ಒಂದು ಸ್ವಕೀಯ ಕುಟುಂಬದಲ್ಲಿ ಹೊಂದಿರುವ ಭಾವವನ್ನೇ ಹೊಂದಿರಬೇಕು.

(ಯಂಗ್ ಇಂಡಿಯಾ: ೨೨-೧೨-೨೦)

ರಾಷ್ಟ್ರಸೇವೆಯನ್ನು ಮಾಡಬಯಸುವವರಾಗಲೀ, ನಿಜವಾದ ಧಾರ್ಮಿಕ ಜೀವನದ ದರ್ಶನವನ್ನಪೇಕ್ಷಿಸುವವರಾಗಲೀ, ಅವರು ವಿವಾಹಿತರಾಗಿದ್ದರೂ ಅವಿವಾಹಿತರಾಗಿದ್ದರೂ ಬ್ರಹ್ಮಚರ್ಯ ಜೀವನವನ್ನು ನಡೆಸಲೇಬೇಕು. ವಿವಾಹವು ಸ್ತ್ರೀಪುರುಷರೀರ್ವರನ್ನೂ ಹತ್ತಿರದ ಸಂಪರ್ಕ ಹೊಂದುವಂತೆ ಮಾಡುತ್ತದೆ. ಒಂದು ವಿಶೇಷಾರ್ಥದಲ್ಲಿ, ಈರ್ವರೂ ಗೆಳೆಯರಾಗುತ್ತಾರೆ. ಆ ಗೆಳೆತನ ಈ ಜೀವನದಲ್ಲಿಯೂ, ಜನ್ಮ ಜನ್ಮಾಂತರಗಳಲ್ಲಿಯೂ ಭೇದ್ಯವಲ್ಲ. ವಿವಾಹ ಕಲ್ಪನೆಯಲ್ಲಿ ಸಂಭೋಗಾಕಾಂಕ್ಷೆ ಇದ್ದೇ ಇರಬೇಕೆಂದು ನನಗೆ ಅನ್ನಿಸುವುದಿಲ್ಲ. (ಯಂಗ್ ಇಂಡಿಯಾ : ೨-೧೨-೨೧)

ಪ್ರತಿಯೊಬ್ಬ ಹುಡುಗಿ, ಪ್ರತಿಯೊಬ್ಬ ಭಾರತೀಯ ಹುಡುಗಿ, ವಿವಾಹ ಮಾಡಿಕೊಳ್ಳುವುದಕ್ಕೇ ಜನ್ಮ ತಾಳಿಲ್ಲ. ಕೇವಲ ಒಬ್ಬ ಪುರುಷನ ಸೇವೆಯನ್ನು ಸಲ್ಲಿಸುವುದಕ್ಕೆ ಪ್ರತಿಯಾಗಿ, ಇಂದು ಸೇವೆಗಾಗಿಯೇ ತಮ್ಮ ಬಾಳನ್ನು ಮುಡುಪಾಗಿಟ್ಟಿರುವ ಅನೇಕ ಹುಡುಗಿಯರ ನಿದರ್ಶನವಿತ್ತೇನು. ಹಿಂದೂ ಹುಡುಗಿಯರಲ್ಲಿ ಪಾರ್ವತಿ ಮತ್ತು ಸೀತೆ ಇವರನ್ನು ಹೋಲುವ,

ಸಾಧ್ಯವಾದರೆ, ಇವರಂತೆ ಮಾಹಾತ್ಮ್ಯೆ ಪಡೆದ ವ್ಯಕ್ತಿಗಳ ಆವಿರ್ಭಾವವಾಗಬೇಕಾದುದು ಅತ್ಯಂತ ಆವಶ್ಯಕವಾಗಿದೆ.

(ಸಿಲೋನಿನಲ್ಲಿ ಗಾಂಧೀಜಿ : ಪು. ೯೬)

ಪ್ರಶ್ನೆ : ವಿವಾಹ ಪದ್ಧತಿಗೆ ನೀವು ವಿರೋಧವಾಗಿದ್ದೀರಾ ?

ಉತ್ತರ : 'ಈ ಪ್ರಶ್ನೆಗೆ ಸ್ವಲ್ಪ ದೀರ್ಘವಾಗಿಯೇ ಉತ್ತರವೀಯಬೇಕು' ಎಂದರು ಬಾಪೂ. 'ಮಾನವ ಬಾಳಿನ ಪ್ರಧಾನ ಗುರಿ ಮೋಕ್ಷ. ಕಾಯದ ಬಂಧನ ಹರಿದು, ದೇವರಲ್ಲಿ ಐಕ್ಯವಾಗಿ, ಜನ್ಮ ವಿಮುಕ್ತಿ ಪಡೆವುದೇ ಮೋಕ್ಷವೆಂದು ಹಿಂದೂ ಆದ ನನ್ನ ನಂಬಿಕೆ. ವಿವಾಹವು ಕೇವಲ ಕಾಯದ ಹಿಡಿತವನ್ನು ಹೆಚ್ಚಿಸಿದಷ್ಟೂ ಅದು ಈ ಪರಮೋದ್ದೇಶ ಸಾಧನೆಗೆ ಅಡಚಣೆಯಾಗುತ್ತದೆ. ಇಂದ್ರಿಯ ನಿಗ್ರಹವು ಜೀವನವನ್ನು ಪೂರ್ಣ ಭಗವದರ್ಪಣ ಮಾಡಲು ನೆರವಾದಷ್ಟೂ ಮಹತ್ವವುಳ್ಳದಾಗುತ್ತದೆ. ಸಾಮಾನ್ಯವಾಗಿ, ವಿವಾಹವೆಂದರೆ ಪ್ರಜೋತ್ಪಾದನೆಯಲ್ಲದೆ ಬೇರೆ ಏನು ಅರ್ಥವಿದೆ? ಹೀಗಿರುವಾಗ, ನೀವೇಕೆ ವಿವಾಹದ ಪರ ವಾದಿಸುವಿರಿ? ಅದು ತಾನಾಗಿಯೇ ಪ್ರಸಾರವಾಗುತ್ತದೆ. ಅದರ ಬೆಳವಣಿಗೆಯನ್ನು ಮುಂದುರಿಸಲು ಯಾರ ಕಾರ್ಯಭಾರವೂ ಬೇಡ.

ಪ್ರಶ್ನೆ : ಆದರೆ, ನೀವು ಬ್ರಹ್ಮಚರ್ಯವನ್ನು ಪ್ರತಿಪಾದಿಸಿ, ಅದನ್ನು ಎಲ್ಲರಿಗೂ ಬೋಧಿಸಬೇಕೋ ?

'ಹೌದು' ಎಂದರು ಗಾಂಧೀಜೀ. ರಾಮಚಂದ್ರನ್ ದಿಕ್ಕುತೋಚದಂತಾದರು.

'ಹಾಗಾದರೆ, ಸೃಷ್ಟಿಯೇ ಅಂತ್ಯವಾಗುವುದೆಂದು ನಿಮ್ಮ ಭಯವೋ ?'

'ಇಲ್ಲ. ಇದರ ಅತ್ಯಂತ ತರ್ಕಬದ್ಧ ಪರಿಣಾಮವೆಂದರೆ, ಮಾನವ ವರ್ಗದ ನಿರ್ನಾಮವಾಗುವುದಿಲ್ಲ. ಅದು ಉಚ್ಚತರ ಮಟ್ಟಕ್ಕೆ ಏರುತ್ತದೆ.'

ಪ್ರಶ್ನೆ : ಆದರೆ, ಒಬ್ಬ ಕಲೆಗಾರನೋ, ಒಬ್ಬ ಮಹಾ ಪ್ರತಿಭಾಶಾಲಿಯೋ ತನ್ನ ಸಂತಾನದ ಮೂಲಕ ತನ್ನ ಪ್ರತಿಭೆಯ ಭಾವ ಸ್ವರೂಪ ಸ್ವತ್ತನ್ನು ಮುಂದಿನ ತಲೆಮಾರಿನವರಿಗೆ ಬಿಡಬಾರದೆ?

"ನಿಜವಾಗಿಯೂ ಕೂಡದು,' ಎಂದರು ಬಾಪೂ, ಸ್ವರಭಾರಹಾಕಿ 'ಆತ ಹೊಂದಬಹುದಾದ ಮಕ್ಕಳುಗಳಿಗಿಂತಲೂ ಆತನ ಶಿಷ್ಯರೇ ಬಹು ಮಂದಿ ಇರುತ್ತಾರೆ; ಆ ಶಿಷ್ಯರ ಮೂಲಕ ಇನ್ನಾವ ವಿಧಾನದಿಂದಲೂ ಆಗುವುದಕ್ಕಿಂತ ಮಿಗಿಲಾಗಿ ಜಗತ್ತಿಗೆ ಆತನ ಎಲ್ಲ ಶಕ್ತಿಗಳೂ ಪರಂಪರಾ ರೂಪದಲ್ಲಿ ದೊರೆತೀತು. ಅದು ಆತ್ಮ—ಪರಮಾತ್ಮ ಇವುಗಳ ವಿವಾಹ ವಾದೀತು: ಶಿಷ್ಯನೇ ಸಂತಾನ; ಅದೊಂದು ದಿವ್ಯಸೃಷ್ಟಿ. ಬೇಡ! ವಿವಾಹದ ಪಾಡಿಗೆ ವಿವಾಹ. ಇದರ ಪರಿಣಾಮ ಪ್ರಜೋತ್ಪತ್ತಿಯೇ ಹೊರತು ಬೆಳವಣಿಗೆಯಾಗಲಾರದು. ಏಕೆಂದರೆ, ವಿವಾಹದಲ್ಲಿ ಕಾಮ ತೃಪ್ತಿಯೇ ಪ್ರಧಾನಪಾತ್ರವಹಿಸಿದಂತಾಗಿದೆ.

'ಶ್ರೀ ಆಂಡ್ರೂಸರು, ನೀವು ಬ್ರಹ್ಮಚರ್ಯಕ್ಕೆ ಕೊಟ್ಟಿರುವ ಪ್ರಾಧಾನ್ಯತೆಯನ್ನು ಮೆಚ್ಚುವುದಿಲ್ಲ' ಎಂದರು ಶ್ರೀ ರಾಮಚಂದ್ರನ್.

'ಹೌದು, ನನಗೆ ಗೊತ್ತು,' ಎಂದರು ಗಾಂಧೀಜೀ. ಅದು ಪ್ರಾಟೆಸ್ಟೆಂಟ್ ಮತಪಂಥಕ್ಕೆ ಪರಂಪರಾಗತವಾದುದು. ಪ್ರಾಟೆಸ್ಟೆಂಟ್ ಮತಪಂಥವು ಎಷ್ಟೋ ಒಳ್ಳೆಯ ಕಾರ್ಯಗಳನ್ನು ಮಾಡಿದ್ದುಂಟು; ಆದರೆ ಅದರಿಂದ ಉಂಟಾಗಿರುವ ಕೆಲವು ಕೆಡಕುಗಳಲ್ಲಿ ಬ್ರಹ್ಮಚರ್ಯವನ್ನು ಅಪಹಾಸ್ಯ ಮಾಡುವುದೂ ಒಂದು.

'ಅದಕ್ಕೆ ಕಾರಣ, ಅದು ಆ ಕಾಲದಲ್ಲಿ ಕ್ರೈಸ್ತ ಪುರೋಹಿತವರ್ಗ ಗಾಢವಾಗಿ ಮುಳುಗಿಹೋಗಿದ್ದ ದುರಾಚಾರಗಳ ಮೇಲೆ ಹೋರಾಡ ಬೇಕಾಗಿದ್ದುದು' ಎಂದು ಉತ್ತರಿಸಿದರು ರಾಮಚಂದ್ರನ್.

'ಆದರೆ, ಅವೆಲ್ಲವೂ ಬ್ರಹ್ಮಚರ್ಯೆಯಲ್ಲಿಯೇ ಮೂಲಭೂತವೆನಿಸಿದ ಯಾವ ಕೆಡುಕಿನಿಂದಲೂ ಅಲ್ಲ; ಬ್ರಹ್ಮಚರ್ಯೆಯೇ ಕ್ಯಾಥೊಲಿಕ್ ಮತ ಪಂಥವನ್ನು ಇಂದಿಗೂ ತೇಜಸ್ವಿಯಾಗಿ ಇರುವಂತೆ ಮಾಡಿದೆ.' ಅಂದರು ಬಾಪೂ. (ಎಂ. ಡಿ.)

(ಯಂಗ್ ಇಂಡಿಯಾ : ೧೪-೧೧-೨೪)

ದಂಪತಿಗಳಲ್ಲಿ ಯಾರೊಬ್ಬರೂ ಸಂಯಮದ ಎಲ್ಲ ಕಟ್ಟುಗಳನ್ನು ಮುರಿಯುವುದಾದರೆ, ವಿವಾಹಿತ ಜೀವನವು ಅಸಹನೀಯವೆನಿಸುತ್ತದೆ. ದಂಪತಿಗಳು ಒಮ್ಮತದಿಂದ ಸಂಯೋಗವು ಅಪೇಕ್ಷಣೀಯವೆಂದು ಭಾವಿಸುವು

ದಾದರೆ, ಇತರರೆಲ್ಲರನ್ನೂ ಬಿಟ್ಟು, ಅವರಿಬ್ಬರೇ ಸಂಯೋಗ ಹೊಂದುವ ಅಧಿಕಾರವನ್ನು ವಿವಾಹವು ಸ್ಥಿರಪಡಿಸುತ್ತದೆಯೇ ಹೊರತು, ಇಬ್ಬರಲ್ಲಿ ಯಾರೊಬ್ಬರೂ ಮತ್ತೊಬ್ಬರ ಇಚ್ಛೆಯಂತೆ ಸಂಯೋಗಕ್ಕೆ ತಲೆಬಾಗುವಂತೆ ಬಲಾತ್ಕರಿಸುವ ಅಧಿಕಾರವನ್ನು ನೀಡುವುದಿಲ್ಲ. ಇಬ್ಬರಲ್ಲಿ ಯಾರೊಬ್ಬರೂ ನೈತಿಕ ಅಥವಾ ಇತರ ಯಾವ ಕಾರಣಕ್ಕೇ ಆಗಲಿ, ಮತ್ತೊಬ್ಬರ ಇಚ್ಛೆಯಂತೆ ಒಪ್ಪದಿದ್ದರೆ ಏನು ಮಾಡಬೇಕೆಂಬ ಪ್ರಶ್ನೆ ಪ್ರತ್ಯೇಕ. ವಿಚ್ಛೇದನವೇ ಆಯ್ದುಕೊಳ್ಳಬೇಕಾದ ಅವಕಾಶವೆನಿಸಿದಲ್ಲಿ ಅದನ್ನು ಒಪ್ಪಿಕೊಳ್ಳಲು ನಾ ಹಿಂದೆಗೆಯಬಾರದು. ಅದು ನನ್ನ ನೈತಿಕ ಪ್ರಗತಿಯನ್ನು ತಡೆಮಾಡಿಕೊಳ್ಳುವುದಕ್ಕೆ ಪ್ರತಿಯಾಗಿ, ಕೇವಲ ನೈತಿಕ ಕಾರಣಗಳಿಗಾಗಿಯೇ ನಾನು ಸಂಯಮಿಯಾಗಬೇಕೆಂಬುದನ್ನು ಭಾವಿಸಿಕೊಳ್ಳಬೇಕು.

(ಯಂಗ್ ಇಂಡಿಯಾ : ೮-೧೦-೨೫)

ವಿವಾಹವು ಒಂದು ಪವಿತ್ರ ಸಂಸ್ಕಾರವಾದಾಗ, ಸತಿಪತಿಗಳ ಸಂಯೋಗ ದೈಹಿಕ ಸಂಯೋಗವಲ್ಲ. ಅದು ಪೃಥಕ್ಕರಿಸಲಸಾಧ್ಯವಾದ, ಇಬ್ಬರಲ್ಲಿ ಯಾರೊಬ್ಬರ ಮರಣದಿಂದಲೂ ಪೃಥಕ್ಕರಿಸಲಸಾಧ್ಯವಾದ, ಆತ್ಮ-ಸಂಯೋಗ. ಎಲ್ಲಿ ಆತ್ಮಗಳ ನಿಜ ಸಂಯೋಗವಾಗಿದೆಯೋ ಅಲ್ಲಿ ವಿಧವಾ ಅಥವಾ ವಿಧುರ ಪುನರ್ವಿವಾಹ ಎಂಬುದು ಊಹಾತೀತವಾದುದು; ಅಯುಕ್ತ ಹಾಗೂ ಕೆಟ್ಟದು. ವಿವಾಹದ ನೈಜ ಧರ್ಮವನ್ನು ಗಣನೆಗೆ ತಂದುಕೊಳ್ಳದ ವಿವಾಹಗಳಿಗೆ ಆ ಹೆಸರೇ ಸಲ್ಲದು. ಈಗಿನ ಕಾಲದಲ್ಲಿ ನಿಜವಾದ ವಿವಾಹಗಳು ಬಹಳ ಕಡಿಮೆಯಾಗಿದ್ದರೆ, ಅದಕ್ಕೆ ವಿವಾಹಪದ್ಧತಿಯೇ ನಿಂದೆಗರ್ಹವಲ್ಲ; ಅದು ಅದರ ಇಂದಿನ ಸ್ವರೂಪ. ಅದು ಸುಧಾರಿತವಾಗಬೇಕು.

ವಿವಾಹವು ಧರ್ಮಕ್ಕೆ ಒಂದು ರಕ್ಷಾ ಆವರಣ. ಈ ಆವರಣವು ನಾಶವಾದರೆ, ಧರ್ಮವು ಚೂರುಚೂರಾದೀತು. ಸಂಯಮವು ಧರ್ಮದ ತಳಹದಿ. ವಿವಾಹವು ಸಂಯಮವಲ್ಲದೆ ಬೇರೆಯಲ್ಲ. ಸಂಯಮವರಿಯದ ವ್ಯಕ್ತಿ ಆತ್ಮಸಾಕ್ಷಾತ್ಕಾರದ ಆಸೆಯನ್ನು ಹೊಂದಲಾರ. ನಾಸ್ತಿಕನಿಗೂ, ಐಹಿಕ ಭೋಗವಾದಿಗೂ ಸಂಯಮದ ಆವಶ್ಯಕತೆಯನ್ನು ರುಜುವಾತು ಮಾಡಿಕೊಡಲು ನನಗೆ ಕಷ್ಟವಾದೀತೆಂದು ಒಪ್ಪಿಕೊಳ್ಳುತ್ತೇನೆ. ಆದರೆ, ಯಾರು ಕಾಯದ ವಿನಾಶ ಹೊಂದುವ ಸ್ವಭಾವವನ್ನೂ ಆತ್ಮದ ಅವಿನಾಶತೆ

ಯನ್ನೂ ಅರಿತಿರುವರೋ ಅವರು ಶಿಸ್ತು ಮತ್ತು ಆತ್ಮಸಂಯಮ ಇವುಗಳಿಲ್ಲದೆ ಆತ್ಮ-ಸಾಕ್ಷಾತ್ಕಾರ ಸಾಧ್ಯವಿಲ್ಲವೆಂಬುದನ್ನು ಸಹಜ ಪ್ರವೃತ್ತಿಯಿಂದಲೇ ಬಲ್ಲರು. ಈ ಕಾಯವು ಕಾಮೋದ್ರೇಕಗಳ ಆಡುಂಬೊಲಾಗಿ ಇರಬಹುದು ಅಥವಾ ಆತ್ಮ-ಸಿದ್ಧಿಯ ದೇಗುಲವಾಗಿರಬಹುದು. ಅದು ಎರಡನೆಯದಾದರೆ, ಸ್ವೇಚ್ಛಾಚಾರಕ್ಕೆ ಎಡೆಯಿಲ್ಲ. ಆತ್ಮವು ಪ್ರತಿಕ್ಷಣವೂ ಕಾಯವನ್ನು ಅಂಕೆಯಲ್ಲಿಡಬೇಕಾದ ಆವಶ್ಯಕತೆ ಇದೆ.

ವಿವಾಹದ ಕಟ್ಟು ಸಡಿಲವಾದಾಗ, ಸಂಯಮದ ಆಚರಣೆಯಿಲ್ಲದ ಸ್ತ್ರೀ ವೈಮನಸ್ಯದ ಮೂಲವಾದಾಳು. ಮಾನವರು ಪಶುಗಳಂತೆ ನಿಗ್ರಹವಿಲ್ಲದೆ ಹೋದಾಗ, ಅವರು ವಿನಾಶದ ನೇರ ಪಥ ಹಿಡಿದಂತೆ.

(ಯಂಗ್ ಇಂಡಿಯಾ : ೩-೬-೨೬)

ಸಾಮಾನ್ಯವಾಗಿ, ತನ್ನ ಪತಿಯ ವೃತ್ತಿಯಿಂದ ಪ್ರತ್ಯೇಕವಾದ ವೃತ್ತಿಯಲ್ಲಿ ತೊಡಗಿರುವ ಸತಿಯನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳಲಾರೆ. ಮಕ್ಕಳ ಪೋಷಣೆ, ಗೃಹಕೃತ್ಯ ನಿರ್ವಹಣೆ, ಇವೇ ಆಕೆಯ ಸರ್ವ ಶಕ್ತಿಗಳನ್ನೂ ಪೂರ್ಣವಾಗಿ ಆಕರ್ಷಿಸಲು ಸಾಕು. ಒಂದು ಸುವ್ಯವಸ್ಥಿತ ಸಮಾಜದಲ್ಲಿ ಕುಟುಂಬಕ್ಕೆ ಜೀವನೋಪಾಯ ಕಲ್ಪಿಸುವ ಹೆಚ್ಚುವರಿ ಹೊರೆಯೂ ಆಕೆಯ ಪಾಲಿಗೆ ಬರಬಾರದು. ಪುರುಷನು ಕುಟುಂಬಕ್ಕೆ ಜೀವನೋಪಾಯ ಒದಗಿಸಲು ನಿರತನಾಗಬೇಕು, ಸ್ತ್ರೀ ಗೃಹಕೃತ್ಯ ನಿರ್ವಹಣೆ ಮಾಡಬೇಕು. ಹೀಗೆ, ಒಬ್ಬರು ಮತ್ತೊಬ್ಬರ ಕರ್ಮಕ್ಕೆ ಪೂರಕವಾಗಿಯೂ, ಅನುಬಂಧಿಸಿಯೂ ಇರಬೇಕು. (ಹರಿಜನ : ೧೨-೧೦-೩೪)

ಸತಿಪತಿಯರಲ್ಲಿ ಪರಸ್ಪರ ಗುಟ್ಟೆಂಬುದು ಇರಬಾರದು. ವಿವಾಹ ಸಂಬಂಧದ ವಿಷಯದಲ್ಲಿ ನಾನು ಬಹಳ ಉಚ್ಚ ಅಭಿಪ್ರಾಯ ಇಟ್ಟುಕೊಂಡಿದೇನೆ. ಸತಿಪತಿಗಳು ಒಬ್ಬರಲ್ಲೊಬ್ಬರು ಏಕೀಭಾವವುಳ್ಳವರೆಂದು ನನ್ನ ಅಭಿಪ್ರಾಯ. ಅವರು ದ್ವೈತದಲ್ಲಿ ಅದ್ವೈತ; ಅದ್ವೈತದಲ್ಲಿ ದ್ವೈತ.

(ಹರಿಜನ : ೯-೩-೪೦)

ವಿವಾಹವು ಬಾಳಿನಲ್ಲಿ ಒಂದು ನೈಸರ್ಗಿಕ ಅಂಶ. ಅದನ್ನು ಯಾವ ಅರ್ಥದಲ್ಲಿಯೇ ಆಗಲಿ, ಕೀಳೆಂದು ಭಾವಿಸುವುದು ಶುದ್ಧಾಂಗ ತಪ್ಪು.

ವಿವಾಹವನ್ನು ಒಂದು ಪವಿತ್ರ ಸಂಸ್ಕಾರವೆಂದು ಭಾವಿಸಿ, ಆದರ ಅನಂತರವೂ ಆತ್ಮಸಂಯಮದ ಜೀವನವನ್ನು ನಡೆಸುವುದು ಆದರ್ಶ. ಹಿಂದೂಧರ್ಮದ ನಾಲ್ಕು ಆಶ್ರಮಗಳಲ್ಲಿ ಒಂದು ವಿವಾಹ. ವಾಸ್ತವವಾಗಿ, ಉಳಿದ ಮೂರು ಆಶ್ರಮಗಳಿಗೂ ಅದೇ ಆಧಾರ. ಆದರೆ, ದುರದೃಷ್ಟವಶಾತ್ ಆಧುನಿಕ ಕಾಲದಲ್ಲಿ ವಿವಾಹವು ಕೇವಲ ಒಂದು ದೈಹಿಕ ಸಂಯೋಗವೆಂದು ಪರಿಗಣಿಸಲ್ಪಟ್ಟಿದೆ. (ಹರಿಜನ: ೨೨-೩-೪೨)

ವಿವಾಹದ ಆದರ್ಶ

ಒಬ್ಬ ಗೆಳೆಯ ಹೀಗೆ ಬರೆಯುತ್ತಾರೆ:

ವಿವಾಹಕ್ಕೆ ಸಂಬಂಧಿಸಿದ ವಿಧಿ ನಿಷೇಧಗಳು ಬಹುಶಃ ಉತ್ತಮ ಸಂತಾನದ ದೃಷ್ಟಿಯಿಂದ ಪ್ರಸಾರಕ್ಕೆ ಬಂದವೆಂದು ನನ್ನ ಅನುಭವದ ಆಧಾರ ಹೊಂದಿದ ಸಹಜ ಪ್ರವೃತ್ತಿಗೆ ಗೋಚರಿಸುತ್ತದೆ. ಭಿನ್ನ ಗೋತ್ರಗಳವರ ಸಂಯೋಗದಿಂದ, ಸ್ವಗೋತ್ರಗಳವರ ಸಂಯೋಗಕ್ಕಿಂತಲೂ ಹೆಚ್ಚು ಸಮರ್ಥ ಫಲ ದೊರಕುತ್ತದೆಂಬುದು ಉತ್ತಮ ಸಂತಾನ ಶಾಸ್ತ್ರದ ಒಂದು ಪ್ರಸಿದ್ಧ ನಿಯಮ. ನೀವು ಹೇಳುವಂತೆ, ಸಂತಾನೋತ್ಪನ್ನವೇ ವಿವಾಹದ ನ್ಯಾಯಬದ್ಧ ಗುರಿಯಾದರೆ, ಸತಿಪತಿಯರನ್ನು ಆರಿಸಿಕೊಳ್ಳುವುದು ಪೂರ್ಣವಾಗಿ ಉತ್ತಮ ಸಂತಾನದ ಪ್ರಶ್ನೆಯೇ ಆದೀತು. ಉಳಿದ ಎಲ್ಲ ಭಾವನೆಗಳೂ ಅಮುಖ್ಯವೆಂದು ವರ್ಜನೀಯ. ಇವುಗಳ ಸ್ಥಾನ ತಾರತಮ್ಯವನ್ನು ಈ ಕೆಳಕಂಡಂತೆ ನಿರೂಪಿಸುವೆ.

(೧) ಪರಸ್ಪರ ಆಕರ್ಷಣೆ ಅಥವಾ ಪ್ರೇಮ.

(೨) ಉತ್ತಮ ಸಂತಾನೋತ್ಪತ್ತಿ ಸಾಮರ್ಥ್ಯ.

(೩) ಸಂಬಂಧಪಟ್ಟ ಕುಟುಂಬವರ್ಗಗಳ ಒಪ್ಪಿಗೆ ಮತ್ತು ಅನುಮತಿ; ತಮ್ಮ ಸಾಮಾಜಿಕ ವರ್ಗದ ಹಿತಾಕಾಂಕ್ಷೆ.

(೪) ಆಧ್ಯಾತ್ಮಿಕ ಬೆಳವಣಿಗೆ.

‘ ಇವುಗಳ ಬಗೆಗೆ ನಿಮ್ಮ ಅಭಿಪ್ರಾಯವೇನು ? ’

“ ಹಿಂದೂ ಶಾಸ್ತ್ರಗಳು, ಸಂತಾನೋತ್ಪನ್ನವನ್ನು ವಿವಾಹದ ಏಕೈಕ

ಉದ್ದೇಶವೆಂದು ಸ್ಪಷ್ಟವಾಗಿ ವಿಧಿಸಿವೆ. ಭಾವೀ ಗೃಹಿಣಿಯನ್ನು ಕುರಿತು, ವಿವಾಹಕಾಲದಲ್ಲಿ ಹಿರಿಯರು ಮಾಡುವ 'ನಿನಗೆ ಎಂಟು ಮಕ್ಕಳಾಗಲಿ' ಎಂಬ ಆಶೀರ್ವಚನ, ಇದನ್ನು ತೋರಿಸುತ್ತದೆ. ಗಂಡಹೆಂಡಿರ ಸಹಜೀವನ ಸಂತಾನೋತ್ಪತ್ತಿಯ ಉದ್ದೇಶಕ್ಕೆ ಮಾತ್ರ, ಎಂದಿಗೂ ಕಾಮೋಪಭೋಗಕ್ಕಲ್ಲ ವೆಂಬ ನಿಮ್ಮ ವಾದವನ್ನು ಇದು ಸಮರ್ಥಿಸುತ್ತದೆ."

ವಿವಾಹಕ್ಕೆ ಸಂಬಂಧಿಸಿದ ವಿಧಿನಿಷೇಧಗಳಿಗೆ ನಿಷ್ಕೃಷ್ಟ ಆಧಾರ ನನಗೆ ತಿಳಿಯದು. ಆದರೆ, ಧರ್ಮಾಚರಣೆ ಮತ್ತು ಆತ್ಮನಿಗ್ರಹ, ಇವುಗಳ ಅನುಷ್ಠಾನಕ್ಕೆ ಸಹಾಯಕವಾಗುವ ಒಂದು ಸಾಮಾಜಿಕ ಪದ್ಧತಿ ಅಥವಾ ಸಂಪ್ರದಾಯಕ್ಕೆ ನೀತಿಧರ್ಮದ ಪವಿತ್ರತೆ ಇರಬೇಕು. ಉತ್ತಮ ಸಂತಾನದ ಕಾರಣವು ಸಹೋದರ ಸಹೋದರಿಯರ ವಿವಾಹ ನಿಷೇಧದ ಮೂಲವಾಗಿದ್ದರೆ, ಅದು ಸಹೋದರ ಬಾಂಧವ್ಯವುಳ್ಳ ವಿವಾಹಗಳಿಗೂ ಅನ್ವಯಿಸಲೇಬೇಕು. ಯಾವುದೇ ಸಮಾಜದಲ್ಲಿ ಇರಬಹುದಾದ ಇಂಥ ವಿಧಿನಿಷೇಧವನ್ನು ಮಾನ್ಯಮಾಡುವುದೇ ಸುರಕ್ಷಿತ ಆಚಾರ ವಿಧಾನ. ನನ್ನ ಪತ್ರವ್ಯವಹಾರಿ, ಆದರ್ಶ ವಿವಾಹಕ್ಕೆ ಸಂಬಂಧಿಸಿದಂತೆ ನಮೂದಿಸಿರುವ ಅಂಶಗಳನ್ನು ನಾನು ಸಾಮಾನ್ಯವಾಗಿ ಒಪ್ಪುತ್ತೇನೆ. ಆದರೆ, ನಾನು ಅವುಗಳ ಸ್ಥಾನ ಪ್ರಾಧಾನ್ಯತೆಯನ್ನು ಮಾತ್ರ ಬದಲಾಯಿಸ ಬಯಸುತ್ತೇನೆ; ಪಟ್ಟಿಯಲ್ಲಿ ಕಾಮಪ್ರಧಾನ ಪ್ರೇಮಕ್ಕೆ ಕೊನೆಯಸ್ಥಾನ ಕೊಡುತ್ತೇನೆ. ಅದಕ್ಕೆ ಪ್ರಥಮಸ್ಥಾನ ಕೊಟ್ಟಿರುವುದರಿಂದ ಇತರ ಅಂಶಗಳು ಅದರಿಂದ ಬಹಳ ಮಟ್ಟಿಗೆ ಆಚ್ಛಾದಿಸಲ್ಪಟ್ಟು, ಹೆಚ್ಚು ಕಡಿಮೆ, ನಿರರ್ಥಕವೆನಿಸಿಯಾವು. ಆದುದರಿಂದ ವಿವಾಹ ಸಂಬಂಧದಲ್ಲಿ ಆಧ್ಯಾತ್ಮಿಕ ಬೆಳವಣಿಗೆಗೆ ಮೊದಲನೆಯ ಸ್ಥಾನ ಕೊಡಲ್ಪಡಬೇಕು; ಮುಂದಿನದು ಸೇವೆ; ಅನಂತರ ಕುಟುಂಬ ಮತ್ತು ಸಾಮಾಜಿಕ ಹಿತದ ಪರಿಗಣನೆ; ಪರಸ್ಪರ ಆಕರ್ಷಣೆ ಅಥವಾ 'ಪ್ರೇಮ', ನಾಲ್ಕನೆಯ ಎಂದರೆ ಕೊನೆಯ ಸ್ಥಾನ ಹೊಂದಬೇಕು. ಇದರ ಅರ್ಥ, ಕಾಮಪ್ರಧಾನ ಪ್ರೇಮವೊಂದೇ ಇತರ ಅಂಶಗಳು ಪಾಲಿಸಲ್ಪಡದಿದ್ದಾಗ ವಿವಾಹಕ್ಕೆ ಸಮ್ಮತವಾದ ಕಾರಣವೆಂದು ಎಣಿಸಲ್ಪಡಬಾರದು. ಇದೇರೀತಿ, ಇತರ ಎಲ್ಲ ಅಂಶಗಳು ಪಾಲಿಸಲ್ಪಟ್ಟರೂ, ಪ್ರೇಮಶೂನ್ಯವಾದ ವಿವಾಹವು ವರ್ಜನೀಯ. ಉತ್ತಮ ಸಂತಾನೋತ್ಪತ್ತಿ ಸಾಮರ್ಥ್ಯದ ಅಂಶವನ್ನು ನಾನು ಬಿಟ್ಟುಬಿಡುತ್ತೇನೆ, ಏಕೆಂದರೆ, ವಿವಾಹದ ಪ್ರಧಾನ ಉದ್ದೇಶವೇ

ಸಂತಾನೋತ್ಪತ್ತಿಯಾದುದರಿಂದ, ಅದಕ್ಕೆ ಸಾಮರ್ಥ್ಯವನ್ನು ಕೇವಲ ಒಂದು 'ಅಂಶ'ವನ್ನಾಗಿ ಪರಿಗಣಿಸಬಾರದು. ವಿವಾಹಕ್ಕೆ ಅದೇ ಅನಿವಾರ್ಯವಾದುದು ; ಅತ್ಯಾವಶ್ಯಕವಾದುದು.

ನಾವು ವಿವಾಹವನ್ನು ಒಂದು ಪವಿತ್ರ ಸಂಸ್ಕಾರವೆಂಬುದಾಗಿ ಪರಿಗಣಿಸಿದರೆ, ಒಂದೇ ಸಂತಾನಕ್ಕೆ ಅವಕಾಶವಿದೆ. ಆದುದರಿಂದಲೇ ನಮ್ಮ ಶಾಸ್ತ್ರಗಳಲ್ಲಿ ಪ್ರಥಮ ಸಂತಾನಕ್ಕೆ 'ಧರ್ಮಜ' ಎಂಬುದಾಗಿಯೂ, ಮುಂದಿನ ಮಕ್ಕಳಿಗೆ 'ಕಾಮಜ' ಎಂಬುದಾಗಿಯೂ ಹೇಳಲ್ಪಟ್ಟಿದೆ.

ಸಂತಾನೋತ್ಪನ್ನ ಉದ್ದೇಶದಿಂದಲೇ ಮಾಡಲ್ಪಟ್ಟ ಲೈಂಗಿಕ ಕ್ರಿಯೆಯು ಬ್ರಹ್ಮಚರ್ಯದ ಪರಮಾದರ್ಶಕ್ಕೆ ಅಸಮಂಜಸವಾದುದಲ್ಲ. ಕೇವಲ ಇಂದ್ರಿಯ ಸುಖ ತೃಪ್ತಿಯ ಉದ್ದೇಶದಿಂದಲೇ ಲೈಂಗಿಕ ಕ್ರಿಯೆ ಮಾಡುವುದು ಪಾಶವಿಕ ವೃತ್ತಿಗೆ ಇಳಿದಂತೆ. ಆದುದರಿಂದ, ಪಾಶವಿಕ ವೃತ್ತಿಯಿಂದ ಮೇಲೇರಲು ಮಾನವನ ಪ್ರಯತ್ನ ಸಾಗಬೇಕು. ಇದರಲ್ಲಿ ಉಂಟಾಗುವ ವಿಫಲತೆಯನ್ನು ಪಾಪವೋ, ಅವಮರ್ಯಾದೆಯೋ ಎಂದು ಪರಿಗಣಿಸಲಾಗದು. ಜಗತ್ತಿನಲ್ಲಿ ಲಕ್ಷಾಂತರ ಮಂದಿ ನಾಲಗೆಯ ತೃಪ್ತಿಗಾಗಿ ತಿನ್ನುತ್ತಾರೆ; ಹಾಗೆಯೇ, ಲಕ್ಷಾಂತರ ಸತಿಪತಿಯರು ಇಂದ್ರಿಯ ಭೋಗಕ್ಕಾಗಿಯೇ ಲೈಂಗಿಕ ಕ್ರಿಯೆಯಲ್ಲಿ ಮಿತಿಮೀರಿ ತೊಡಗುವರು. ಹೀಗೆ ಮಾಡುತ್ತಾ ಪ್ರಕೃತಿಯ ವ್ಯವಸ್ಥೆಯನ್ನು ಮೀರಿದುದರ ಪರಿಣಾಮವಾಗಿ ಉಂಟಾಗುವ ಅಸಂಖ್ಯ ವ್ಯಾಧಿಗಳ ರೂಪದಲ್ಲಿ ಕಠೋರ ದಂಡ ತೆರುವರು. ಕೇವಲ ಬ್ರಹ್ಮಚರ್ಯದ ಆದರ್ಶ ಅಥವಾ ವಿವಾಹಿತ ಜೀವನದ ಬ್ರಹ್ಮಚರ್ಯವು ಆಧ್ಯಾತ್ಮಿಕ ಅಥವಾ ಪಾರಮಾರ್ಥಿಕ ಜೀವನವನ್ನಾಗಿ ಬಯಸುವವರಿಗೆ ಅನ್ವಯಿಸುತ್ತದೆ; ಅಂಥ ಜೀವನಕ್ಕೆ ಅದು ಅನಿವಾರ್ಯ.

(ಹರಿಜನ: ೫-೬-೩೭)

ಗಾಂಧೀಜಿಯೇ ನಡೆಸಿದ ವಿವಾಹೋತ್ಸವಗಳಲ್ಲಿ ಇಬ್ಬರು ಯುವಕ ದಂಪತಿಗಳನ್ನು ಕುರಿತು ಹೀಗೆ ಆಪ್ತತೆಯಿಂದ ನುಡಿದರು :

ನಮ್ಮಲ್ಲಿ 'ಕರ್ತವ್ಯಜ್ಞಾನವನ್ನು ಎಚ್ಚರಗೊಳಿಸುವಷ್ಟನ್ನುಳಿದ ಸಮಾರಂಭಗಳಲ್ಲಿ ನನಗೆ ನಂಬಿಕೆ ಇಲ್ಲವೆಂಬುದನ್ನು ನೀವು ತಿಳಿದುಕೊಳ್ಳಬೇಕು. ಸ್ವಯಂ ವಿಚಾರಮಾಡುವ ಶಕ್ತಿ ಪಡೆದಂದಿನಿಂದ ಆ ಮನೋಧರ್ಮವನ್ನು

ನಾ ಹೊಂದಿದೇನೆ. ನೀವು ಉಚ್ಚರಿಸಿದ ಮಂತ್ರಗಳೂ, ನೀವು ಸ್ವೀಕರಿಸಿದ ವ್ರತಗಳೂ ಎಲ್ಲ ಸಂಸ್ಕೃತದಲ್ಲಿದ್ದವು. ಆದರೆ ನಿಮಗಾಗಿ ಅವೆಲ್ಲ ಭಾಷಾಂತರಿಸಲ್ಪಟ್ಟವು. ಸಂಸ್ಕೃತ ಶಬ್ದದಲ್ಲಿ ಒಂದು ಶಕ್ತಿ ಇದೆ. ಆ ಶಕ್ತಿಯ ಪ್ರಭಾವಕ್ಕೆ ಒಳಗಾಗಲು ಯಾರಾದರೂ ಪ್ರೀತಿಸಿಯಾರು. ಆದುದರಿಂದಲೇ ಸಂಸ್ಕೃತ ಮೂಲಪಾಠವನ್ನು ಉಪಯೋಗಿಸಲಾಯ್ತು.

'ಸಮಾರಂಭದಲ್ಲಿ ಪತಿಯು ತನ್ನ ಭಾರ್ಯೆ ಒಳ್ಳೆಯ ಆರೋಗ್ಯವಂತ ಪುತ್ರನ ತಾಯಿಯಾಗಲೆಂದು ಹಾರೈಸುವುದಿದೆ. ಈ ಹಾರೈಕೆ ನನ್ನನ್ನು ತಲ್ಲಣಗೊಳಿಸಲಿಲ್ಲ. ಸಂತಾನೋತ್ಪತ್ತಿಯು ನಿರ್ಬಂಧವೆಂದು ಇದರ ಅರ್ಥ ವಲ್ಲ; ಸಂತಾನದ ಅಪೇಕ್ಷೆಯಿದ್ದರೆ, ನಿಷ್ಕಾಮಯುತ ಧಾರ್ಮಿಕ ಮನಸ್ಸಿನಿಂದ ವಿವಾಹ ಮಾಡಿಕೊಳ್ಳಬೇಕಾದುದು ಅವಶ್ಯಕ. ಸಂತಾನದ ಅಪೇಕ್ಷೆಯೇ ಇಲ್ಲದವನು ವಿವಾಹವನ್ನೇ ಮಾಡಿಕೊಳ್ಳಬೇಕಾಗಿಲ್ಲ. ಲೈಂಗಿಕ ತೃಪ್ತಿ ಗಾಗಿಯೇ ಮಾಡಿಕೊಂಡ ವಿವಾಹವು ವಿವಾಹವೆನಿಸದು. ಅದು ವ್ಯಭಿಚಾರ; ಕಾಮವಿಕಾರ. ಆದುದರಿಂದ ಇಂದಿನ ಸಮಾರಂಭದ ಅರ್ಥವೆಂದರೆ, ಇಬ್ಬರಿಗೂ ಸಂತಾನಾಪೇಕ್ಷೆ ಸ್ಪಷ್ಟವಾಗಿದ್ದರೆ ಮಾತ್ರ, ಸಂಭೋಗ ಕ್ರಿಯೆಗೆ ಅನುಮತಿಯುಂಟು. ಈ ಸಮಗ್ರ ಕಲ್ಪನೆಯೇ ಪವಿತ್ರವಾದುದು. ಆದುದ ರಿಂದ, ಈ ಕ್ರಿಯೆ ಪ್ರಾರ್ಥನಾಪರತೆಯಿಂದ ಆಚರಿಸಲ್ಪಡಬೇಕು. ಲೈಂಗಿಕ ಉದ್ದೀಪನ ಮತ್ತು ಇಂದ್ರಿಯಭೋಗ ಇವುಗಳನ್ನುಂಟುಮಾಡುವ ಪ್ರಣಯಾ ಚರಣೆ ಇದಕ್ಕೆ ಪೂರ್ವಭಾಯಿಯಾಗಿ ಇರದು. ಬೇರೊಂದು ಮಗುವಿನ ಅಪೇಕ್ಷೆಯಿಲ್ಲದಿದ್ದರೆ, ಜೀವಿತದಲ್ಲಿ ಇಂಥ ಸಂಯೋಗ ಒಂದೇಬಾರಿ ಆದೀತು. ನೈತಿಕವಾಗಿಯೂ, ಶಾರೀರಕವಾಗಿಯೂ ಆರೋಗ್ಯವಿಲ್ಲದವರು ಸಂಭೋಗ ಮಾಡಲೇಬಾರದು; ಹಾಗೆ ಮಾಡಿದರೆ ಅದು ವ್ಯಭಿಚಾರ; ವಿಷಯ ಲೋಲುಪತೆ. ಪಶುತೃಷ್ಣೆಗಾಗಿ ವಿವಾಹ ಮಾಡಿಕೊಳ್ಳಬೇಕೆಂಬ ಭಾವನೆ ನಿಮ್ಮಲ್ಲಿದ್ದರೆ ಅದನ್ನು ನೀವು ಮರೆಯಬೇಕು. ಸಮಾರಂಭವೆಲ್ಲ ಪವಿತ್ರ ಅಗ್ನಿದೇವನ ಸಾಕ್ಷಿಯಲ್ಲಿ ನಡೆದಿದೆ. ಈ ಅಗ್ನಿ ನಿಮ್ಮಲ್ಲಿರುವ ಭೋಗ ಲಾಲಸೆಯನ್ನೆಲ್ಲ ಸುಟ್ಟು ಭಸ್ಮ ಮಾಡಲಿ.

ಈಗಿನ ಕಾಲದಲ್ಲಿ ಅತಿಯಾಗಿ ಹಬ್ಬಿರುವ ಇನ್ನೊಂದು ಮೂಢನಂಬಿಕೆ ಯಂಥ ತಪ್ಪು ತಿಳಿವಳಿಕೆಯನ್ನು ನೀವು ಬಿಡಬೇಕೆಂದು ಕೇಳುತ್ತೇನೆ. ಸಂಯಮವೂ, ಭೋಗವಿಮುಖತೆಯೂ ತಪ್ಪೆಂದೂ, ಲೈಂಗಿಕ ತೃಷೆಯನ್ನು

ಯಾವ ಅಡ್ಡಿಯೂ ಇಲ್ಲದಂತೆ ತೃಪ್ತಿ ಪಡೆಯಬೇಕೆಂದೂ, ನಿಶ್ಶೃಂಖಲೆಯ ಕಾಮ ಅತ್ಯಂತ ಸ್ವಾಭಾವಿಕವಾದುದೆಂದೂ ಹೇಳಲಾಗುತ್ತಿದೆ. ಯಾವ ಕಾಲಕ್ಕೂ ಇದಕ್ಕಿಂತ ಹೆಚ್ಚು ವಿನಾಶಾತ್ಮಕ ಮೂಢನಂಬಿಕೆ ಇರಲಿಲ್ಲ. ಆದರ್ಶ ಸಾಧಿಸಲು ನೀವು ಅಶಕ್ತರಿರಬಹುದು, ನಿಮ್ಮ ಪ್ರಕೃತಿ ದುರ್ಬಲವಿರಬಹುದು; ಆದರೆ ಆದರ್ಶವನ್ನು ಕೆಳಗಿಳಿಸಬೇಡಿ; ಅಧರ್ಮವನ್ನು ನಿಮ್ಮ ಧರ್ಮವನ್ನಾಗಿ ಮಾಡಬೇಡಿ. ದುರ್ಬಲತೆಯ ಸಮಯಗಳಲ್ಲಿ ನನ್ನ ಮಾತುಗಳನ್ನು ನೆನಪಿಗೆ ತಂದುಕೊಳ್ಳಿ. ಈ ಪವಿತ್ರ ಗಂಭೀರ ಸಮಯದ ನೆನಪು ನಿಮ್ಮನ್ನು ದೃಢವಾಗಿಟ್ಟು, ಸಂಯಮದಲ್ಲಿಡಬಹುದು. ವಿವಾಹದ ಉದ್ದೇಶವೇ ಸಂಯಮ ಮತ್ತು ಕಾಮೇಚ್ಛೆಯನ್ನು ಪರಮೋದಾತ್ತ ಮಾಡುವುದು. ಬೇರೆ ಉದ್ದೇಶವಿದ್ದರೆ, ಅದು ಪವಿತ್ರವೆನಿಸದು; ಅವುಗಳಿಗಾಗಿಯೂ, ಜೊತೆಗೆ ಸಂತಾನೋತ್ಪತ್ತಿಗಾಗಿಯೂ ಆದ ವಿವಾಹವೆನಿಸೀತು.

'ಗೆಳೆಯರಂತೆಯೂ, ಸಮಾನರಾಗಿಯೂ, ನೀವು ವಿವಾಹದಲ್ಲಿ ಕೂಡುತ್ತಿದೀರಿ. ಪತಿಯು ಸ್ವಾಮಿನ್ ಎಂದು ಕರೆಯಲ್ಪಟ್ಟರೆ, ಪತ್ನಿಯು ಸ್ವಾಮಿನಿ: ಒಬ್ಬರು ಮತ್ತೊಬ್ಬರಿಗೆ ಗುರು; ಒಬ್ಬರು ಮತ್ತೊಬ್ಬರಿಗೆ ನೆರವೀವ ಸಂಗಾತಿ; ಜೀವನದ ಕಾರ್ಯಭಾರವನ್ನೂ ಮತ್ತು ಕರ್ತವ್ಯಗಳನ್ನೂ ಎಸಗುವುದರಲ್ಲಿ ಒಬ್ಬರು ಮತ್ತೊಬ್ಬರ ಜೊತೆಯಲ್ಲಿ ಸಹಕರಿಸುವವರು. ಯುವಕರಾದ ನೀವು ಉತ್ತಮ ಬುದ್ಧಿಯಿಂದಲೂ, ಭಾವಸಂಪತ್ತಿನಿಂದಲೂ ಕೂಡಿದ್ದರೆ, ಹೆಣ್ಣುಮಕ್ಕಳಿಗೂ ಆ ಭಾವಗಳು ತಲೆಗೆ ಹತ್ತುವಂತೆ ಮಾಡಿ. ಅವರಿಗೆ ನಿಜವಾದ ಗುರುಗಳೂ, ಮಾರ್ಗದರ್ಶಕರೂ ಆಗಿರಿ; ನೆರವನ್ನು ನೀಡಿ, ಮಾರ್ಗದರ್ಶನ ಮಾಡಿ; ಆದರೆ, ಎಂದಿಗೂ ಅವರಿಗೆ ಅಡಚಣೆಯೊಡ್ಡಬೇಡಿ ಅಥವಾ ತಪ್ಪುಮಾರ್ಗ ತೋರಬೇಡಿ. ನಿಮ್ಮಿಬ್ಬರ ಭಾವ, ಮಾತು, ಕೃತಿಗಳಲ್ಲಿ ಪೂರ್ಣ ಸಾಮರಸ್ಯವಿರಲಿ. ಪರಸ್ಪರ ಗುಟ್ಟು ಎನ್ನುವುದಿರದಿರಲಿ. ನಿಮ್ಮೀರ್ವರ ಆತ್ಮಗಳೂ ಒಂದಾಗಲಿ.

"ಕಪಟಾಚರಣೆಯವರಾಗದಿರಿ. ಯಾವುದು ನಿಮಗೆ ಅಸಾಧ್ಯ ಎನಿಸಬಹುದೋ ಅದನ್ನು ಮಾಡಲು ವೃಥಾ ಪ್ರಯತ್ನಿಸಿ, ನಿಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳಬೇಡಿ. ಸಂಯಮವು ಎಂದಿಗೂ ಆರೋಗ್ಯವನ್ನು ಕೆಡಿಸುವುದಿಲ್ಲ. ಆರೋಗ್ಯವನ್ನು ಕೆಡಿಸುವುದು ಬಾಹ್ಯ ನಿಗ್ರಹವೇ ಹೊರತು ಸಂಯಮವಲ್ಲ. ನಿಜವಾಗಿಯೂ ಆತ್ಮಸಂಯಮವನ್ನು ಹೊಂದಿದ ವ್ಯಕ್ತಿ

ಪ್ರತಿದಿನ ಹೆಚ್ಚು ಶಕ್ತಿಯನ್ನೂ ಹೆಚ್ಚು ಶಾಂತಿಯನ್ನೂ ಪಡೆಯುವನು. ಆತ್ಮಸಂಯಮದಲ್ಲಿ ಭಾವಗಳ ಮೇಲಿನ ಹತೋಟಿ ಮೊದಲ ಹೆಜ್ಜೆ. ನಿಮ್ಮ ಮಿತಿಯನ್ನು ಅರಿತುಕೊಂಡು, ಅದಕ್ಕೆ ಅನುಗುಣವಾಗಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿ. ಸಮಕೋನದಂತೆ ಇರುವ ಆದರ್ಶವನ್ನು ನಿಮ್ಮ ಮುಂದಿಟ್ಟದ್ದೇನೆ. ಸಮಕೋನವನ್ನು ಸಾಧಿಸಲು ನಿಮ್ಮ ಸರ್ವ ಸಾಮರ್ಥ್ಯದಿಂದಲೂ ಪ್ರಯತ್ನಿಸಿ. ನೀವು ಸೋತರೆ, ದುಃಖಕ್ಕಾಗಲೀ ಅವಮಾನಕ್ಕಾಗಲೀ ಕಾರಣವಿಲ್ಲ. ವಿವಾಹವು ಒಂದು ನಿವೇದಿತ ಜೀವನ, ಹೊಸ ಹುಟ್ಟು; ಉಪನಯನವು ಹೇಗೆ ಒಂದು ನಿವೇದಿತ ಜೀವನವೋ, ಹೊಸಹುಟ್ಟೋ ಹಾಗೆ. ಇದನ್ನು ನಿಮಗೆ ಸರಳವಾಗಿ ವಿವರಿಸಿದೇನೆ. ನನ್ನ ಈ ಮಾತು ನಿಮಗೆ ಭಯವನ್ನೂ, ನಿರ್ಬಲತೆಯನ್ನೂ ಉಂಟುಮಾಡದಿರಲಿ. ಭಾವ, ಮಾತು, ಕೃತಿಗಳಲ್ಲಿ ಸದಾ ಪೂರ್ಣಸಾಮರಸ್ಯ ಗುರಿಯಾಗಿರಲಿ. ಸದಾ ಭಾವಶುದ್ಧಿಗೆ ಯತ್ನಿಸಿ. ಆಗ ಎಲ್ಲ ಸರಿಹೋದೀತು. ಭಾವಕ್ಕಿಂತ ಶಕ್ತಿಯುತವಾದುದು ಯಾವುದೂ ಇಲ್ಲ. ಮಾತನ್ನು ಕೃತಿಯೂ, ಭಾವವನ್ನು ಮಾತೂ ಅನುಸರಿಸುತ್ತವೆ. ಈ ಜಗತ್ತು ಒಂದು ಮಹಾ ಭಾವದ ಪರಿಣಾಮ; ಭಾವ ಸತ್ವಯುತವೂ ಶುದ್ಧವೂ ಆದಷ್ಟೂ ಪರಿಣಾಮ ಶಕ್ತಿಯುತವೂ, ಶುದ್ಧವೂ ಆಗುತ್ತದೆ. ಘನ ಆದರ್ಶದ ರಕ್ಷಾ ಕವಚ ತೊಟ್ಟು ನೀವಿಲ್ಲಿಂದ ತೆರಳಬೇಕೆಂದು ನನ್ನ ಇಚ್ಛೆ. ಇದರಿಂದ ಯಾವ ಮನೋಸೆಳೆತವೂ ನಿಮಗೆ ಅಪಾಯ ತರದು; ಯಾವ ಅಪವಿತ್ರತೆಯೂ ನಿಮ್ಮ ಬಳಿಸಾರದು.

"ನಿಮಗೆ ವಿವರಿಸಲ್ಪಟ್ಟಿರುವ ವಿವಿಧ ಸಂಸ್ಕಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಸರಳವಾದ ಮಧುಪರ್ಕವಿಧಿಯನ್ನು ನೋಡಿರಿ. ಈ ಜಗತ್ತೆಲ್ಲ ಮಧುವಿನಿಂದ ತುಂಬಿದೆ. ಆದರೆ, ಇತರರೆಲ್ಲರೂ ತಮ್ಮ ಭಾಗವನ್ನು ಸವಿದ ತರುವಾಯವೇ ನೀವು ನಿಮ್ಮ ಭಾಗವನ್ನು ಸವಿಯಲು ಅನುವಾಗಬೇಕು. ಇದರ ಅರ್ಥ ತ್ಯಾಗದಿಂದಲೇ ಭೋಗ."

"ಸಂತಾನದ ಅಪೇಕ್ಷೆಯೇ ಇಲ್ಲವಾದರೆ ವಿವಾಹವೇ ಕೂಡದೇನು? ಎಂದು ಒಬ್ಬ ವರ ಪ್ರಶ್ನಿಸಿದ."

"ಖಂಡಿತವಾಗಿಯೂ ಕೂಡದು. ಕೇವಲ ಆಧ್ಯಾತ್ಮಿಕ ಪ್ರೇಮ

ಪೂರಿತ ವಿವಾಹಗಳಲ್ಲಿ ನನಗೆ ನಂಬಿಕೆ ಇಲ್ಲ. ಕೆಲವು ಅಪರೂಪ ಸಂದರ್ಭಗಳಲ್ಲಿ ಪುರುಷರು ದೈಹಿಕ ಸಂಬಂಧದ ಉದ್ದೇಶವೇ ಇಲ್ಲದೆ ಸ್ತ್ರೀಯರ ರಕ್ಷಣೆಗಾಗಿ ಅವರನ್ನು ವಿವಾಹವಾದದ್ದುಂಟೆಂಬ ಪ್ರತೀತಿ ಇದೆ. ಆದರೆ, ಅಂಥ ಸಂದರ್ಭಗಳು ತೀರ ವಿರಳ. ಶುದ್ಧ ವೈವಾಹಿಕ ಜೀವನದಮೇಲೆ ನಾನು ಬರೆದಿರುವುದನ್ನೆಲ್ಲ ನೀವು ಓದಬೇಕು. ನಾನು ಮಹಾಭಾರತದಲ್ಲಿ ಓದಿದ ಒಂದು ಸಂಗತಿ ದಿನವೂ ನನ್ನಲ್ಲಿ ಬೇರೂರುತ್ತಿದೆ. ವ್ಯಾಸರು 'ನಿಯೋಗ' ಎಂಬ ವಿಧಾನವನ್ನು ಆಚರಿಸಿದುದಾಗಿ ಅಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅವರು ಸುಂದರಾಂಗ ಎಂಬುದಾಗಿ ವರ್ಣಿಸಲ್ಪಟ್ಟಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಅವರ ರೂಪವನ್ನು ವಿಕಾರವೆಂದು ವರ್ಣಿಸಲಾಗಿದೆ. ಅವರು ಯಾವ ಬಗೆಯ ಪ್ರಣಯ ಚೇಷ್ಟೆಯನ್ನೂ ಮಾಡಲಿಲ್ಲ. ಸಂಭೋಗ ಮಾಡುವುದಕ್ಕೆ ಮುಂಚೆ ಅವರು ತಮ್ಮ ಶರೀರವನ್ನೆಲ್ಲ ತುಪ್ಪದಿಂದ ಲೇಪನ ಮಾಡಿಕೊಂಡರು. ಅವರು ಕಾಮೇಚ್ಛೆಯೇ ಇಲ್ಲದೆ ಸಂತಾನಪಡೆಯುವ ಇಚ್ಛೆಯಿಂದಲೇ ಕ್ರಿಯೆ ನಡೆಸಿದರು. ಸಂತಾನ ಹೊಂದಬೇಕೆಂಬ ಆಸೆ ಸ್ವಾಭಾವಿಕವಾದುದು. ಅದು ತೃಪ್ತಿಯಾದ ಕೂಡಲೇ ಸಂಭೋಗವೇ ಕೂಡದು.

"ಮನುವು, ಮೊದಲನೆಯ ಮಗುವನ್ನು ಧರ್ಮಜ - ಕರ್ತವ್ಯನಿಷ್ಠೆಯಿಂದ ಜನಿಸಿದವನು—ಎಂದೂ, ಮೊದಲನೆಯದರ ತರುವಾಯ ಜನಿಸಿದ ಮಕ್ಕಳನ್ನು ಕಾಮಜ — ಕಾಮೇಚ್ಛೆಯಿಂದ ಜನಿಸಿದವರು — ಎಂದೂ, ವರ್ಣಿಸಿದಾನೆ. ಈ ಮಾತು ಲೈಂಗಿಕ ಸಂಬಂಧದ ಧರ್ಮವನ್ನು ಸಂಗ್ರಹವಾಗಿ ತಿಳಿಸುತ್ತದೆ. ದೇವರು ಧರ್ಮವಲ್ಲದೆ ಮತ್ತೇನು? ದೇವರಿಗೆ ವಿಧೇಯತೆ ಎಂದರೆ, ಧರ್ಮಾನುಸರಣೆ. ನೀವು ಈ ರೀತಿ ಮೂರು ಬಾರಿ ಪುನಶ್ಚರಣೆ ಮಾಡಿದುದನ್ನು ಜ್ಞಾಪಕವಿಡಿ: 'ನಾನು ಯಾವ ರೀತಿಯಲ್ಲಿಯೂ ಧರ್ಮವನ್ನು ಉಲ್ಲಂಘಿಸಿ ನಡೆಯುವುದಿಲ್ಲ'. ಹೀಗೆ ಧರ್ಮಮಾರ್ಗದಲ್ಲಿ ನಡೆಯಲು ಕೆಲವೇ ಮಂದಿ ಸ್ತ್ರೀ ಪುರುಷರು ಸಿದ್ಧರಾದರೆ ಆಗ, ಧೀರರೂ, ಸತ್ಯಪ್ರಿಯರೂ ಆದ ಜನಾಂಗವನ್ನು ನಾವು ಹೊಂದುತ್ತೇವೆ.

'ಬಾ ಬಗೆಗೆ ಕಾಮುಕ ದೃಷ್ಟಿಯನ್ನು ನಾ ಬಿಟ್ಟಂದಿನಿಂದ ವೈವಾಹಿಕ ಜೀವನದ ಸುಖವನ್ನು ನಿಜವಾಗಿಯೂ ಅನುಭವಿಸಲಾರಂಭಿಸಿದೆನೆಂಬುದನ್ನು ನೆನಪಿನಲ್ಲಿಡಿ. ನಾ ಯೌವನದ ಭರದಲ್ಲಿದ್ದು, ಆರೋಗ್ಯವಂತ

ನಾಗಿದ್ದು, ವಿವಾಹಿತ ಬಾಳಿನ ಸುಖವನ್ನು ಅನುಭವಿಸಲು ಯೋಗ್ಯವೆಂದು ಪರಿಗಣಿಸಲ್ಪಟ್ಟ ಕಾಲದಲ್ಲಿಯೇ ಭೋಗವರ್ಜನೆಯ ವ್ರತವನ್ನು ಕೈಗೊಂಡೆ. ನಾವೆಲ್ಲರೂ ಜನ್ಮತಾಳಿರುವಂತೆಯೇ ನಾನು ಒಂದು ಪವಿತ್ರ ಧ್ಯೇಯಸಾಧನೆಗಾಗಿಯೇ ಜನ್ಮ ತಾಳಿದೇನೆಂದು ನನಗೆ ಕ್ಷಣಮಾತ್ರದಲ್ಲಿ ಹೊಳೆಯಿತು. ವಿವಾಹವಾದ ಕಾಲದಲ್ಲಿ ನನಗಿದು ತಿಳಿದಿರಲಿಲ್ಲ. ನನಗೆ ಜ್ಞಾನೋದಯವಾದ ಕೂಡಲೇ ನಾನು ಯಾವ ಪವಿತ್ರ ಧ್ಯೇಯಕ್ಕಾಗಿ ಜನ್ಮಿಸಿದೇನೋ ಅದಕ್ಕೆ ವಿವಾಹವು ಸಾಧನವಾಗುವಂತೆ ನೋಡಿಕೊಳ್ಳಬೇಕೆಂದು ನಾನು ಭಾವಿಸಿದೆ. ಆಗಲೇ ನಾನು ಧರ್ಮದ ನಿಜ ಸ್ವರೂಪವನ್ನು ಅರಿತುಕೊಂಡೆ. ವ್ರತಾಚರಣೆಯ ನಿಯಮವನ್ನು ತೆಗೆದುಕೊಂಡಾಗಲೇ ನಮ್ಮ ದಾಂಪತ್ಯ ಜೀವನದಲ್ಲಿ ನಿಜವಾದ ಸುಖ ನಮಗೆ ದೊರಕಿತು. ಬಾ, ದುರ್ಬಲಳಂತೆ ಕಂಡುಬಂದರೂ ಒಳ್ಳೆಯ ದೇಹ ಪ್ರಕೃತಿಯುಳ್ಳವಳಾಗಿದಾಳೆ. ಪ್ರಾತಃಕಾಲದಿಂದ ಸಾಯಂಕಾಲದವರೆಗೆ ದುಡಿಯುತ್ತಾಳೆ. ಆಕೆ, ನನ್ನ ಲೋಲುಪತೆಯ ಗುರಿಯೇ ಮುಂದುವರಿದಿದ್ದರೆ, ಆ ರೀತಿ ಮಾಡಲು ಸಮರ್ಥಳಾಗುತ್ತಿರಲಿಲ್ಲ.

"ಆದರೂ, ಅನೇಕ ವರುಷಗಳು ನಾನು ದಾಂಪತ್ಯಜೀವನ ನಡೆಸಿದೆನಾದ್ದರಿಂದ, ನಾ ಜಾಗೃತಿ ಹೊಂದಿದುದು ಬಹಳ ತಡವಾಯಿತೆಂದೇ ಹೇಳಬೇಕು. ಸಕಾಲದಲ್ಲಿ ಜಾಗೃತಿ ಹೊಂದುವಷ್ಟು ಅದೃಷ್ಟ ನಿಮ್ಮದು. ನಾ ವಿವಾಹವಾದ ಸಂದರ್ಭ ಎಷ್ಟು ಅಹಿತವಾಗಬಹುದೋ ಅಷ್ಟೂ ಆಗಿದ್ದಿತು. ಆದರೂ, ನನ್ನಲ್ಲಿದ್ದ ಒಂದು ಅಂಶಮಾತ್ರ ನನ್ನನ್ನು ಕಡೆಹಾಯಿಸಿತು. ಅದು ಸತ್ಯದ ರಕ್ಷಾಕವಚ. ಅದು ನನ್ನನ್ನು ರಕ್ಷಿಸಿ ಕಾಪಾಡಿತು. ಸತ್ಯವು ನನ್ನ ಬಾಳಿನ ಅಸ್ತಿಭಾರವೇ ಆಗಿದೆ. ಈ ಸತ್ಯದಿಂದ ಬ್ರಹ್ಮಚರ್ಯವೂ ಅಹಿಂಸೆಯೂ ಕ್ರಮೇಣ ಹುಟ್ಟಿದವು. ಆದುದರಿಂದ, ನೀವೇನನ್ನು ಮಾಡಿದರೂ, ನಿಮಗೂ ಲೋಕಕ್ಕೂ ಪ್ರಾಮಾಣಿಕರಂತೆ ವರ್ತಿಸಿ. ನಿಮ್ಮ ಭಾವಗಳನ್ನು ಮುಚ್ಚಿಟ್ಟುಕೊಳ್ಳಬೇಡಿ. ಅವುಗಳನ್ನು ಹೊರಗೆಡಹುವುದು ಅಪಮಾನಕರವೆನಿಸಿದರೆ, ಅವುಗಳ ಬಗೆಗೆ ಚಿಂತಿಸುವುದು ಇನ್ನೂ ಹೆಚ್ಚು ಅಪಮಾನಕರ. (ಹರಿಜನ : ೧೫-೩-೪೨)

ಉತ್ತಮ ರೀತಿಯಲ್ಲಿ ದೇಶಸೇವೆ ಸಲ್ಲಿಸುವ ಉದ್ದೇಶದಿಂದ ವಿವಾಹರಹಿತಳಾಗಿಯೇ ಇರಬೇಕೆಂದು ಉತ್ಸುಕಳಾಗಿದ್ದ ಒಳ್ಳೆಯ ಕಾರ್ಯಕರ್ತೆ

ತಂಗಿಯೊಬ್ಬಳು ಈಚೆಗೆ ತನ್ನ ಕನಸಿನ ಸಂಗಾತಿಯನ್ನು ಕಂಡುಕೊಂಡು ಮದುವೆಯಾದಳು. ಆ ರೀತಿ ಮಾಡಿದುದರಿಂದ ತಾನು ತಪ್ಪೆಸಗಿದೆನೆಂದೂ, ತನ್ನ ಮುಂದಿಟ್ಟುಕೊಂಡಿದ್ದ ಹಿರಿಯ ಆದರ್ಶ ಗುರಿಯಿಂದ ಪತನಳಾದೆನೆಂದೂ ಆಕೆ ಭಾವಿಸಿದಾಳೆ. ಆಕೆಯ ಈ ಮನೋಭ್ರಾಂತಿಯನ್ನು ತೊಡೆದುಹಾಕಲು ನಾ ಪ್ರಯತ್ನಿಸಿದೇನೆ. ಕನ್ಯೆಯರು ಸೇವಾಕಾಂಕ್ಷೆಯಿಂದ ಅವಿವಾಹಿತರಾಗಿ ಇರಲಪೇಕ್ಷಿಸುವುದು ನಿಜವಾಗಿಯೂ ಶ್ರೇಷ್ಠ ವಿಷಯವೇ. ಆದರೆ, ಹತ್ತುಲಕ್ಷಮಂದಿಗೆ ಒಬ್ಬರು ಹೀಗೆ ಮಾಡಲು ಶಕ್ತರಾಗಬಹುದು. ವಿವಾಹವು ಬಾಳಿನಲ್ಲಿ ಸ್ವಾಭಾವಿಕ ಅಂಶ. ಮೇಲೆ ಉದಹರಿಸಿದ ತಂಗಿ ಮತ್ತು ಈಕೆಯಂತೆಯೇ ಯೋಚಿಸುವ ಇತರ ತಂಗಿಯರ ಕರ್ತವ್ಯವು, ವಿವಾಹವನ್ನು ಕೀಳೆಂದು ಎಣಿಸದೆ, ಬಾಳಿನ ಸಂಸ್ಕಾರಗಳಲ್ಲೊಂದಾಗಿರುವ ಅದಕ್ಕೆ ಯೋಗ್ಯ ಸ್ಥಾನವನ್ನು ಕೊಡಬೇಕು. ಅವರು ಆವಶ್ಯಕವಾದ ಆತ್ಮಸಂಯಮದಿಂದ ನಡೆದರೆ, ಸೇವೆಗಾಗಿ ಹೆಚ್ಚು ಆಂತರಿಕ ಶಕ್ತಿ ಅವರಲ್ಲಿ ವೃದ್ಧಿಯಾಗುವುದನ್ನು ಕಂಡಾರು. ಸೇವೆಮಾಡಲು ಬಯಸುವಾಕೆ, ಸ್ವಾಭಾವಿಕವಾಗಿಯೇ, ತನ್ನಂತೆಯೇ ಮನೋಧರ್ಮವುಳ್ಳ ಜೀವನ ಸಂಗಾತಿಯನ್ನು ಆರಿಸಿಕೊಂಡಾಳು. ಅವರಿಬ್ಬರ ಸಂಯುಕ್ತ ಸೇವೆಯು ದೇಶಕ್ಕೆ ಒಳಿತನ್ನು ಮಾಡೀತು. ಯಾವಾಕೆ ಬುದ್ಧಿವಂತರೂ, ಆರೋಗ್ಯವಂತರೂ, ಹೃಷ್ಟಪುಷ್ಟರೂ ಆದ ಮಕ್ಕಳನ್ನು ದೇಶಕ್ಕೆ ಕೊಡುವಳೋ ಆಕೆ ನಿಜಸೇವೆ ಸಲ್ಲಿಸಿದ ಹಾಗೆ. ಆ ಮಕ್ಕಳೂ ದೊಡ್ಡವರಾದ ಮೇಲೆ ಸೇವೆ ಮಾಡಲು ಅನುವಾಗುವರು. ಇದರ ನಿಜಾಂಶವೆಂದರೆ, ಯಾರಲ್ಲಿ ಸೇವಾಧರ್ಮ ಉಜ್ವಲವಾಗಿ ತುಂಬಿದೆಯೋ ಅವರು ಜೀವನದ ಯಾವ ಸ್ಥಿತಿಯಲ್ಲಿ ಎಲ್ಲಿದ್ದರೂ ಯಾವಾಗಲೂ ಸೇವೆ ಸಲ್ಲಿಸಿಯೇ ಸಲ್ಲಿಸುವರು. ಸೇವಾಜೀವನಕ್ಕೆ ಎಡರುತರುವ ಜೀವನ ವಿಧಾನವನ್ನು ಅವರೆಂದಿಗೂ ಅನುಸರಿಸರು.

(ಹರಿಜನ: ೨೨-೩-೪೨)

ಭೋಗಾಪೇಕ್ಷೆಯಿಲ್ಲದೆ, ಚೆನ್ನಾಗಿಯೂ ನಿಜವಾಗಿಯೂ ನಡೆಸುವ ವೈವಾಹಿಕ ಜೀವನವು ಅನೇಕ ವಿಧಗಳಲ್ಲಿ ಅವಿವಾಹಿತ ಜೀವನಕ್ಕಿಂತ ಹೆಚ್ಚು ಕಷ್ಟವಾದುದು.

(ಹರಿಜನ: ೧೫-೩-೪೨)

ವಿವಾಹ

ಕಠಿಣವಾದ ಪ್ರಶ್ನೆಗಳು

ನನ್ನ ವಿವೇಕದಲ್ಲಿಯೂ ಮತ್ತು ಪ್ರಾಮಾಣಿಕತೆಯಲ್ಲಿಯೂ ನಂಬಿಕೆಯುಳ್ಳ ಮಹಿಳಾ ಗೆಳತಿಯೊಬ್ಬರು ಕೆಲವು ಜಟಿಲ ಪ್ರಶ್ನೆಗಳನ್ನು ಕೇಳಿದಾರೆ. ಇವು ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಜಾಗರೂಕತೆಯಿಂದಿರುವ ಕೆಲವು ಗಂಡಂದಿರನ್ನು ರೇಗಿಸಿ, ಅವರೆಲ್ಲಿ ವಾಗ್ವಾದಕ್ಕೆ ಇಳಿಯುವರೋ ಎಂಬ ಭೀತಿಯಿಂದ ನಾ ಈ ಪ್ರಶ್ನೆಗಳಿಂದ ದೂರವಿರಲು ನನ್ನ ಮನ ಒಪ್ಪೀತು. ಆದರೆ, ಆಗಾಗ ಕಿರಿಕಿರಿ ಒದಗಿದರೂ, ಒಟ್ಟಿನಲ್ಲಿ ಕಳೆದ ನಲವತ್ತು ವರುಷಗಳಿಂದ ಸುಖಮಯ ಸಾಂಸಾರಿಕ ಜೀವನ ನಡೆಸಿದೆನೆನ್ನಬಹುದಾದ ನಾನೂ ಗಂಡನಾಗಿ ನನ್ನ ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳಲು ಕಾತುರನಾಗಿದ್ದೆನೆಂಬ ಅಂಶವನ್ನು ಅರಿತ ಗಂಡಂದಿರು ನನ್ನನ್ನು ಕ್ಷಮಿಸುವರೆಂದು ನಂಬಿದೇನೆ.

ಮೊದಲನೆಯ ಪ್ರಶ್ನೆಯು ಉಚಿತವೂ, ಸಕಾಲಿಕವೂ ಆಗಿದೆ. (ಇದರ ಮೂಲ ಮರಾಠೀ ಭಾಷೆಯಲ್ಲಿದೆ. ಆದುದರಿಂದ ಸರಳ ಭಾವಾನುವಾದ ಮಾತ್ರ ಕೊಟ್ಟಿದೇನೆ.)

‘ ಒಬ್ಬ ಪುರುಷನೋ ಮಹಿಳೆಯೋ ರಾಷ್ಟ್ರಸೇವೆಯಲ್ಲಿ ಭಾಗವಹಿಸದೆ ಕೇವಲ ರಾಮನಾಮ ಪುನಶ್ಚರಣೆ ಮಾಡುವುದರಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯುವರೆ? ನನ್ನ ಕೆಲವು ಭಗಿನಿಯರು, ಗೃಹಕೃತ್ಯದ ಕಾರ್ಯಗಳಲ್ಲಿ ತೊಡಗಿರುವುದು, ಆಗಾಗ ಬಡವರಿಗೆ ದಾನಧರ್ಮ ಮಾಡುವುದು ಇವುಗಳನ್ನು ಹೊರತು ಬೇರೆ ಯಾವ ಕಾರ್ಯವನ್ನೂ ಮಾಡಬೇಕಾಗಿಲ್ಲವೆಂದು ಹೇಳುತ್ತಿರುವುದರಿಂದ, ಈ ಪ್ರಶ್ನೆ ಕೇಳುತ್ತಿದೇನೆ.’

ಈ ಪ್ರಶ್ನೆ ಮಹಿಳೆಯರನ್ನಷ್ಟೇ ಅಲ್ಲ, ಅನೇಕ ಪುರುಷರನ್ನೂ ನನ್ನನ್ನೂ ತುಂಬ ಕಾಡಿದೆ. ಪೂರ್ಣ ನಿಷ್ಕ್ರಿಯತೆಯನ್ನೂ, ಎಲ್ಲ ಪ್ರಯತ್ನಗಳ ಅಸಾರತೆಯನ್ನೂ ಬೋಧಿಸುವ ತತ್ವಜ್ಞಾನಪಂಥವೊಂದಿರುವುದು ನನಗೆ ಗೊತ್ತು. ಆ ತತ್ವಜ್ಞಾನ ನನಗೆ ರುಚಿಸದಿದ್ದರೂ, ಕೇವಲ ವಾಚಾತರ್ಕಕ್ಕೋಸ್ಕರ ಅದಕ್ಕೆ ನನ್ನ ವಿವರಣೆಯನ್ನೇ ಕೊಟ್ಟೇನು. ಪ್ರಗತಿಗೆ ಪ್ರಯತ್ನ

ಆವಶ್ಯಕವೆಂದು ನನ್ನ ಅಭಿಪ್ರಾಯ. ಫಲವೇನೇ ಆಗಲಿ, ಪ್ರಯತ್ನವಂತೂ ನಡೆಯಲೇಬೇಕು. ರಾಮನಾಮವೋ ಅಥವಾ ಬೇರೆ ಯಾವುದಾದರೂ ನಾಮವೋ ಬರೀ ಪುನಶ್ಚರಣೆಗಲ್ಲದೆ, ಶುದ್ಧಿಗಾಗಿಯೂ, ಪರಾಶಕ್ತಿಯ ಪ್ರತ್ಯಕ್ಷ ಮಾರ್ಗದರ್ಶನಕ್ಕೆ ಸಾಧನ ರೂಪವಾಗಿಯೂ ಆವಶ್ಯಕ ; ಪ್ರಯತ್ನ ತೀವ್ರಗತಿ ಹೊಂದುವುದಕ್ಕೂ ಅದನ್ನು ಸರಿಯಾದ ಪಥದಲ್ಲಿ ಒಯ್ಯುವುದಕ್ಕೂ ಆವಶ್ಯಕ. ಎಲ್ಲ ಪ್ರಯತ್ನ ನಿರರ್ಥಕವೆನ್ನುವುದಾದರೆ, ಕುಟುಂಬದ ಬಗೆಗೆ ಆತಂಕವೂ ಆಗಾಗ ಬಡವರಿಗಾಗಿ ಧರ್ಮಕಾರ್ಯವೂ ಏತಕ್ಕೆ ಸಾಗಬೇಕು? ಈ ಪ್ರಯತ್ನದಲ್ಲಿಯೇ ರಾಷ್ಟ್ರಸೇವೆಯ ಬೀಜ ಅಡಗಿದೆ. ನನ್ನ ದೃಷ್ಟಿಯಲ್ಲಿ ರಾಷ್ಟ್ರಸೇವೆ ಎಂದರೆ, ಮಾನವಸೇವೆ; ಹಾಗೆಯೇ ನಿಸ್ವಾರ್ಥಮಯವಾದ ಕುಟುಂಬಸೇವೆಯೂ ರಾಷ್ಟ್ರಸೇವೆಯೇ ಎನಿಸೀತು. ನಿಸ್ವಾರ್ಥಮಯ ಕುಟುಂಬಸೇವೆ ಖಂಡಿತವಾಗಿಯೂ ರಾಷ್ಟ್ರಸೇವೆಯಾಗುತ್ತದೆ. ರಾಮನಾಮ ಪಠನವು ಅನಾಸಕ್ತಿಯನ್ನು ಕಲಿಸುತ್ತದಲ್ಲದೆ, ಶಕ್ತಿಯನ್ನೂ ನೀಡಿ ಪರೀಕ್ಷಾಸಮಯ ಬಂದಾಗ ಎಂದಿಗೂ ಆಯ ತಪ್ಪದಂತೆ ಕಾಪಾಡುತ್ತದೆ. ಅತ್ಯಂತ ದರಿದ್ರರ ಸೇವೆಗಾಗಿ ಅವರೊಂದಿಗೆ ಸಮರಸವಾಗದ ಹೊರತು ಆತ್ಮ–ಸಾಕ್ಷಾತ್ಕಾರ ಲಭಿಸಲಾರದೆಂದು ನನ್ನ ನಂಬಿಕೆ.

ಇದು ಎರಡನೆಯ ಪ್ರಶ್ನೆ :

ಹಿಂದೂಧರ್ಮದ ಪ್ರಕಾರ, ಪತಿಯು ಎಷ್ಟೇ ಪೈಶಾಚಿಕ ವರ್ತನೆಯವನಿರಲಿ ಅಥವಾ ಪ್ರೇಮ ಮೂರ್ತಿಯಾಗಿರಲಿ, ಹೇಗಿದ್ದರೂ ಪತ್ನಿಯು ಆತನಲ್ಲಿ ಪೂರ್ಣವಾಗಿ ತಾದಾತ್ಮ್ಯ ಹೊಂದಿರುವುದು, ಪತಿಭಕ್ತಿಯಿಂದ ಕೂಡಿರುವುದು ಆಕೆಯ ಅತ್ಯಂತ ಹಿರಿಯ ಗುರಿ. ಇದು ಪತ್ನಿಗೆ ಉಚಿತವಾದ ನಡೆವಳಿಕೆಯಾದರೆ, ಆಕೆಯು ತನ್ನ ಪತಿಯ ಉಗ್ರವಿರೋಧವನ್ನೂ ನಿರ್ಲಕ್ಷಿಸಿ ರಾಷ್ಟ್ರಸೇವೆಯನ್ನು ಕೈಗೊಳ್ಳಬಹುದೆ? ಅಥವಾ ಆಕೆಯು ತನ್ನ ಪತಿ ಎಷ್ಟು ಅವಕಾಶ ನೀಡುವನೋ ಅಷ್ಟು ಮಾತ್ರ ಹೊಗಬೇಕೆ?

ನನ್ನ ಆದರ್ಶ ಪತ್ನಿ ಸೀತಾ ; ನನ್ನ ಆದರ್ಶ ಪತಿ ರಾಮ. ಆದರೆ ಸೀತೆಯು ರಾಮನ ಗುಲಾಮಳಾಗಿರಲಿಲ್ಲ. ಇಬ್ಬರೂ ಪರಸ್ಪರ ವಶವರ್ತಿಗಳಾಗಿದ್ದರು. ಸೀತೆಯ ವಿಷಯದಲ್ಲಿ ರಾಮ ಸದಾ ದಾಕ್ಷಿಣ್ಯವರ್ತಿಯಾಗಿದ್ದನು. ನಿಜವಾದ ಪ್ರೇಮವಿರುವೆಡೆ ಮೇಲೆ ಕೇಳಿರುವ ಪ್ರಶ್ನೆಯೇ

ಉದ್ಭವಿಸುವುದಿಲ್ಲ. ಎಲ್ಲಿ ನಿಜವಾದ ಪ್ರೇಮವಿಲ್ಲವೋ ಅಲ್ಲಿ ಒಡಂಬಡಿಕೆಯೇ ಇರುವುದಿಲ್ಲ. ಆದರೆ, ಇಂದಿನ ಹಿಂದೂ ಸಂಸಾರವು ಒಂದು ಒಗಟಿ ಯಾಗಿದೆ. ಮದುವೆಯಾಗುವ ಸತಿಪತಿಗಳು ಒಬ್ಬರನ್ನೊಬ್ಬರು ಅರಿತಿರು ವುದೇ ಇಲ್ಲ. ಪದ್ಧತಿ, ವಿವಾಹಿತರ ಸುಗಮ ಜೀವನ ಇವುಗಳಿಂದ ಬಲ ಪಡೆದ ಧಾರ್ಮಿಕ ಆಧಾರ ಇವು ಅಸಂಖ್ಯವಾದ ಹಿಂದೂ ಸಂಸಾರಗಳಲ್ಲಿ ಶಾಂತಿಯನ್ನು ರಕ್ಷಿಸಿವೆ. ಆದರೆ, ಪತಿಯೋ ಪತ್ನಿಯೋ ಅಸಾಮಾನ್ಯವಾದ ಅಭಿಪ್ರಾಯವನ್ನು ಹೊಂದಿದ್ದರೆ, ಆಗ ಕಿರಿಕಿರಿಯುಂಟಾಗುವ ಸಂಭವವಿದೆ. ಪತಿಗೆ ಯಾವ ಮಾನಸಿಕ ಆತಂಕವೂ ಇರದು. ತನ್ನ ಸಂಗಾತಿಯ ಅಭಿಪ್ರಾಯವನ್ನು ಕೇಳುವುದು ತನ್ನ ಕರ್ತವ್ಯವೆಂದು ಅವನು ಭಾವಿಸು ವುದಿಲ್ಲ. ಪತ್ನಿ ಅವನ ಆಸ್ತಿ. ಪತಿಯ ಈ ವಾದವನ್ನು ನಂಬುವ ದೀನ ಸತಿ ತನ್ನನ್ನು ದಮನ ಮಾಡಿಕೊಳ್ಳುವಳು. ಇದಕ್ಕೆ ಒಂದು ಮಾರ್ಗವಿದೆ. ಅದನ್ನು ಮೀರಾಬಾಯಿ ತೋರಿಸಿದಾಳೆ. ಪತ್ನಿಯು ತನ್ನ ಸ್ವಂತಂತ್ರವಾದ ಮಾರ್ಗವನ್ನು ಆರಿಸಿಕೊಂಡು, ತಾನು ಸರಿ ಎಂದು ಭಾವಿಸಿರುವ ಘನವಾದ ಉದ್ದೇಶಕ್ಕಾಗಿ ನಮ್ರಪೂರ್ವಕ ಧೈರ್ಯದಿಂದ ಪರಿಣಾಮಗಳನ್ನು ಎದುರಿಸ ಬೇಕು.

ಇದು ಮೂರನೆಯ ಪ್ರಶ್ನೆ :

'ಪತಿಯು ಮಾಂಸಾಹಾರಿಯಾಗಿದ್ದು, ಪತ್ನಿಯು ಅದನ್ನು ಕೆಟ್ಟದೆಂದು ಭಾವಿಸಿದರೆ, ಆಕೆ ತನ್ನ ಮನೋಭೀಷ್ಟದಂತೆ ನಡೆಯಬಹುದೆ? ಮಾಂಸಾ ಹಾರ ಮತ್ತಿತರ ಇಂಥದೇ ಆದ ಅಭ್ಯಾಸಗಳಿಂದ ತನ್ನ ಪತಿಯನ್ನು ತಪ್ಪಿಸಲು ಪ್ರೇಮಪೂರ್ವಕ ವಿಧಾನಗಳಿಂದ ಪ್ರಯತ್ನಿಸಬಹುದೆ? ಆಕೆ ತನ್ನ ಗಂಡನಿಗಾಗಿ ಮಾಂಸವನ್ನು ಬೇಯಿಸಲೇಬೇಕಾದರೆ ಅಥವಾ ಇನ್ನೂ ಕೆಟ್ಟ ದೆಂದರೆ, ಆತನ ಇಚ್ಛೆಯ ಪ್ರಕಾರ ಮಾಂಸವನ್ನು ತಿನ್ನಲೇಬೇಕಾದರೆ, ಆ ರೀತಿ ಮಾಡಬಹುದೆ? ಇಂಥ ವಿಷಯಗಳಲ್ಲಿ ಪತ್ನಿ ತನ್ನ ಮಾರ್ಗವನ್ನು ಅನುಸರಿಸಬಹುದೆಂದರೆ, ಒಬ್ಬರ ಬಲಾತ್ಕಾರದಿಂದಲೂ, ಇನ್ನೊಬ್ಬರ ಪ್ರತಿ ಭಟನೆಯಿಂದಲೂ ಕೂಡಿದ ಸಾಂಸಾರಿಕ ಜೀವನ ಸಾಗೀತೇ?'

ಎರಡನೆಯ ಪ್ರಶ್ನೆಯ ಉತ್ತರದಲ್ಲಿ ಈ ಪ್ರಶ್ನೆಗೆ ಸ್ವಲ್ಪ ಉತ್ತರ ಕೊಡಲ್ಪಟ್ಟಿದೆ. ಒಬ್ಬ ಪತ್ನಿಯು ತನ್ನ ಪತಿಯ ದುಷ್ಕಾರ್ಯಗಳಿಗೆ ಬೆಂಬಲ ನೀಡಬೇಕೆಂಬ ನಿರ್ಬಂಧವಿಲ್ಲ. ಆಕೆಯ ದೃಷ್ಟಿಯಲ್ಲಿ ಯಾವುದಾದರೂ

ತಪ್ಪೆಂದು ಕಂಡುಬಂದರೆ ಅದನ್ನು ಸರಿಪಡಿಸಲು ಆಕೆ ಧೈರ್ಯಮಾಡಬೇಕು. ಯಾವರೀತಿ ಪತಿಯು ಸಂಪಾದನೆಯ ಕಾರ್ಯ ಮಾಡಬೇಕೋ ಹಾಗೆಯೇ ಪತ್ನಿಯು ಗೃಹಕೃತ್ಯ ನಿರ್ವಾಹಕಳಾಗಿದ್ದು, ಅಡಿಗೆ ಮಾಡುವುದು ಆಕೆಯ ಕರ್ತವ್ಯವಾಗಿದ್ದಲ್ಲಿ, ಮತ್ತು ಇಬ್ಬರೂ ಹಿಂದಿನಿಂದಲೂ ಮಾಂಸಾಹಾರಿಗಳಾಗಿದ್ದರೆ, ಆಗ ಆಕೆಯು ಸಂಸಾರಕ್ಕಾಗಿ ಮಾಂಸ ಬೇಯಿಸಲೇಬೇಕು. ಇದಕ್ಕೆ ಪ್ರತಿಯಾಗಿ ಒಂದು ಸಸ್ಯಾಹಾರೀ ಕುಟುಂಬದಲ್ಲಿ ಪತಿಯು ಮಾಂಸಾಹಾರಿಯಾಗಿಬಿಟ್ಟು, ತನ್ನ ಪತ್ನಿಯನ್ನು ಮಾಂಸ ಬೇಯಿಸಬೇಕೆಂದು ಬಲಾತ್ಕರಿಸಿದ್ದರೆ, ಆಕೆಗದು ಸರಿಯಲ್ಲವೆನಿಸಿದರೆ, ಆಕೆ ಆ ರೀತಿ ಮಾಡಬೇಕೆಂಬ ನಿರ್ಬಂಧವಿಲ್ಲ. ಕುಟುಂಬಶಾಂತಿಯು ಅತ್ಯಂತ ಅಪೇಕ್ಷಣೀಯವಾದ ಅಂಶವೇನೋ ಸರಿ. ಆದರೆ, ಅದೇ ಅಂತಿಮವಲ್ಲ. ಜೀವನದ ಇತರ ಅವಸ್ಥೆಗಳಂತೆಯೇ ವೈವಾಹಿಕ ಅವಸ್ಥೆಯೂ ಒಂದು ಸಾಧನಾಮಾರ್ಗ; ಶಿಸ್ತು ಎಂದು ನನ್ನ ಭಾವನೆ. ಬಾಳೊಂದು ಕರ್ತವ್ಯಕರ್ಮ; ಅದು ಪರೀಕ್ಷೆಯ ಕಾಲ. ಗೃಹಸ್ಥಾಶ್ರಮವು ಇಹಪರಗಳೆರಡರಲ್ಲಿಯೂ ಸತಿಪತಿಗಳ ಪರಸ್ಪರ ಕಲ್ಯಾಣವನ್ನು ಗಳಿಸಿಕೊಳ್ಳುವ ಉದ್ದೇಶದಿಂದ ಕೂಡಿದೆ. ಜೊತೆಯಲ್ಲಿ ಲೋಕಸೇವೆಯನ್ನೂ ಸಾಧಿಸಬೇಕು. ಇಬ್ಬರಲ್ಲಿ ಯಾರಾದರೂ ಶಿಸ್ತಿನ ನಿಯಮಕ್ಕೆ ಭಂಗ ತಂದರೆ, ಇನ್ನೊಬ್ಬರಿಗೆ ಸಂಸಾರಬಂಧನದಿಂದ ಪ್ರತ್ಯೇಕವಾಗುವ ಹಕ್ಕು ಬರುತ್ತದೆ. ಇಲ್ಲಿ ಪ್ರತ್ಯೇಕವೆಂದರೆ, ನೈತಿಕ ಪ್ರತ್ಯೇಕತೆಯೇ ಹೊರತು ಭೌತಿಕ ಪ್ರತ್ಯೇಕತೆಯಲ್ಲ. ಇದರಲ್ಲಿ ವಿವಾಹ ವಿಚ್ಛೇದನಕ್ಕೆ ಸ್ಥಾನವಿಲ್ಲ. ಪತಿಪತ್ನಿಯರು ಪ್ರತ್ಯೇಕವಾದರೂ ಅದು ಅವರು ಯಾವ ಉದ್ದೇಶಕ್ಕೆ ಒಂದುಗೂಡಿದ್ದರೋ ಅದರ ಸಾರ್ಥಕ್ಯಕ್ಕಾಗಿ. ಇಬ್ಬರೂ ಎಲ್ಲ ವಿಧಗಳಲ್ಲಿಯೂ ಸಮಾನರು ಎಂಬುದಾಗಿ ಪರಿಗಣಿಸುತ್ತದೆ ಹಿಂದೂಧರ್ಮ. ಆದರೆ ಇದಕ್ಕೆ ವಿರುದ್ಧವಾದ ಆಚರಣೆ, ಎಂದಿನಿಂದಲೋ ಯಾರಿಗೂ ಅರಿವಿಲ್ಲದಂತೆ ನಡೆದು ಬಂದಿದೆ. ಹಾಗೆಯೇ ಇನ್ನೂ ಎಷ್ಟೋ ಕೆಟ್ಟ ಅಂಶಗಳು ನುಸುಳಿ ಬಂದಿವೆ. ಹಿಂದೂಧರ್ಮವು, ಪುರುಷ, ಸ್ತ್ರೀ, ಇಬ್ಬರಿಗೂ ಅವರು ಅಪೇಕ್ಷಿಸುವ ರೀತಿಯಲ್ಲಿ ಅವರ ಹುಟ್ಟಿನ ಏಕಮಾತ್ರ ಗುರಿಯಾದ ಆತ್ಮ ಸಾಕ್ಷಾತ್ಕಾರವನ್ನು ಹೊಂದಲು ಪೂರ್ಣ ವ್ಯಕ್ತಿಸ್ವಾತಂತ್ರ್ಯವನ್ನು ನೀಡುತ್ತದೆಂಬುದು ನನ್ನ ಸ್ಪಷ್ಟವಾದ ಗ್ರಹಿಕೆ.

(ಯಂಗ್ ಇಂಡಿಯಾ: ೨೧-೧೦-೨೬)

ಸರಳ ವಿವಾಹದ ಆವಶ್ಯಕತೆ

ಕರಾಚಿಯಲ್ಲಿ ಆಚರಿಸಲ್ಪಟ್ಟ ವಿವಾಹ ಸಮಾರಂಭವೊಂದನ್ನು ವಿವರಿಸಿ ಗೆಳೆಯರೊಬ್ಬರು ವರದಿ ಇತ್ತಿದಾರೆ.

ಸೇಠ್ ಲಾಲ್‌ಚಂದ್ ಎಂಬ ಹಣವಂತರು ತಮ್ಮ ಹದಿನಾರು ವರುಷದ ಕನ್ಯೆಯ ವಿವಾಹವನ್ನು ಅತ್ಯಂತ ಕಮ್ಮಿ ವೆಚ್ಚದಲ್ಲಿ ಮಾಡಿ, ಸಮಾರಂಭಕ್ಕೆ ಧಾರ್ಮಿಕ ಘನತೆಯುಳ್ಳ ಸ್ವರೂಪವನ್ನು ಕೊಟ್ಟರು. ಪೂರ್ಣ ವಿವಾಹ ಸಮಾರಂಭವು ಎರಡು ಘಂಟೆಗಳ ಮೇಲೆ ಹಿಡಿಯಲಿಲ್ಲವೆಂದು ವರದಿಯಿಂದ ಗೊತ್ತಾಗುತ್ತದೆ. ಸಾಮಾನ್ಯವಾಗಿ ಇದು ದಿನಗಟ್ಟಲೆ ನಡೆದು ವೃಥಾ ವೆಚ್ಚವಾಗುತ್ತಿತ್ತು. ವಿವಾಹಮಹೋತ್ಸವವನ್ನು ನಡೆಸಿದ ಬ್ರಾಹ್ಮಣ ಪಂಡಿತರು ಆ ಸಂದರ್ಭದಲ್ಲಿ ದಂಪತಿಗಳು ಪಠಿಸಬೇಕಾಗಿದ್ದ ಮಂತ್ರಾರ್ಥವನ್ನು ಅವರಿಗೆ ತಿಳಿಸಿದರು. ಬಹಳ ಹಿಂದೆಯೇ ಆಗಬೇಕಾಗಿದ್ದುದು ಈ ಬಗೆಯ ಸುಧಾರಣೆ. ಇದನ್ನು ಆರಂಭ ಮಾಡಿದ ಸೇಠ್ ಲಾಲ್‌ಚಂದ್ ಅವರನ್ನೂ, ಇದಕ್ಕೆ ಪೂರ್ಣ ಬೆಂಬಲವಿತ್ತ ಅವರ ಪತ್ನಿಯನ್ನೂ ನಾ ಅಭಿನಂದಿಸುತ್ತೇನೆ. ಇವರ ಮಾರ್ಗವು ಇತರ ಹಣವಂತರಿಂದ ಅನುಸರಿಸಲ್ಪಡುವುದೆಂದು ನಂಬಿದ್ದೇನೆ. ಈ ವಿವಾಹ ಸಮಾರಂಭವು ಆಗ್ರಾ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ನಡೆದ ದೃಶ್ಯವನ್ನು ನನ್ನ ನೆನಪಿಗೆ ತರುತ್ತದೆ. ಸಂಯುಕ್ತ ಪ್ರಾಂತದಲ್ಲಿ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ವ್ಯಾಸಂಗ ಮಾಡುವ ತರುಣರು ಚಿಕ್ಕ ವಯಸ್ಸಿನಲ್ಲಿಯೇ ವಿವಾಹ ಮಾಡಿಕೊಳ್ಳಲಾಶಿಸುವರೆಂದೂ, ಇದಕ್ಕಾಗಿ ತಮ್ಮ ತಂದೆತಾಯಿಗಳು ಬೆಲೆಬಾಳುವ ತೊಡಿಗೆಗಳಿಗಾಗಿಯೂ, ಮತ್ತು ಅನೇಕ ವೇಳೆ ಇದಕ್ಕಿಂತ ಹೆಚ್ಚು ಬೆಲೆಬಾಳುವ ಮನೋರಂಜನ ಕಾರ್ಯಗಳಿಗಾಗಿಯೂ, ದುಂದುವೆಚ್ಚ ಮಾಡಲಪೇಕ್ಷಿಸುವರೆಂದೂ ನನಗೆ ತಿಳಿದಿದ್ದ ವಾರ್ತೆಯನ್ನು ಅವರು ಸ್ಥಿರಪಡಿಸಿದರು. ತುಂಬ ವಿದ್ಯಾವಂತ ತಂದೆತಾಯಿಗಳೂ ದೊಡ್ಡಸ್ತಿಕೆಯ ಮದದಿಂದ ದೂರವಾಗಿರಲಿಲ್ಲವೆಂದೂ, ವೆಚ್ಚದ ಪ್ರಶ್ನೆ ಬಂದಾಗ ಅವರು ಅವಿದ್ಯಾವಂತರಾಗಿದ್ದ ಶ್ರೀಮಂತ ವರ್ತಕರಿಗಿಂತಲೂ ಅತಿಯಾಗಿದ್ದಾರೆಂಬ ಅಂಶವನ್ನು ಆ ವಾರ್ತೆ ತಂದಾತ ತಿಳಿಸಿದ್ದ. ಇಂಥವರೆಲ್ಲರಿಗೂ ಸೇಠ್ ಲಾಲ್‌ಚಂದರ ಇತ್ತೀಚಿನ

ನಿದರ್ಶನವೂ, ಸ್ವಲ್ಪ ಹಿಂದಿನದಾದ ಸೇಠ್ ಜಮುನಾಲಾಲ್ ಬಜಾಜರ ನಿದರ್ಶನವೂ ವೆಚ್ಚವನ್ನು ಕಮ್ಮಿ ಮಾಡುವುದಕ್ಕೆ ಉತ್ತೇಜಕವಾದಾವು. ತಂದೆತಾಯಿಗಳಿಗಿಂತ ಹೆಚ್ಚಾಗಿ ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವನ್ನೂ, ಅದರಲ್ಲಿಯೂ ಅತಿ ಮುಖ್ಯವಾಗಿ ವಿದ್ಯಾರ್ಥಿದೆಸೆಯಲ್ಲಿರುವಾಗ ವಿವಾಹ ಮಾಡಿಕೊಳ್ಳುವುದನ್ನೂ, ವೆಚ್ಚಮಾಡುವುದನ್ನೂ, ತರುಣರೇ ಪ್ರಬಲವಾಗಿ ತಡೆಗಟ್ಟುವುದು ಅವರ ಕರ್ತವ್ಯ. ವಾಸ್ತವಿಕವಾಗಿ ಮತಸಂಬಂಧವಾದ ಆಚರಣೆಗೆ ಹತ್ತು ರೂಪಾಯಿಗಳಿಗಿಂತಲೂ ಹೆಚ್ಚು ಆವಶ್ಯವೆಂದು ನೆನಿಸ ಬಾರದು. ಈ ಆಚರಣೆಗೆ ಸಂಬಂಧಿಸದ ಯಾವುದನ್ನೂ ವಿವಾಹ ವಿಧಿಯ ಆವಶ್ಯಕ ಅಂಗವೆಂದು ಭಾವಿಸಲಾಗದು. ಬಡವ - ಶ್ರೀಮಂತ, ಮೇಲು - ಕೀಳು, ಎಂಬ ವ್ಯತ್ಯಾಸಗಳನ್ನೂ ನಿರ್ಮೂಲನಗೊಳಿಸಬೇಕೆಂಬ ಈ ಪ್ರಜಾ ಪ್ರಭುತ್ವದ ಯುಗದಲ್ಲಿ ಶ್ರೀಮಂತರು ತಮ್ಮ ಎಲ್ಲ ಸುಖ - ಲೋಲುಪತೆಗಳ ಮೇಲೂ ಆತ್ಮ - ಸಂಯಮ ವಿಧಿಸಿಕೊಂಡು, ಭಗವದ್ಗೀತೆಯಲ್ಲಿ ಉಕ್ತ ವಾಗಿರುವ 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ' (ಸಮಾಜದ ವರಿಷ್ಠರು ಎಂತು ಆಚರಿಸುವರೋ, ಅಂತೆಯೇ ಇತರರೂ) ಎಂಬ ಸೂಕ್ತಿಯನ್ನು ನೆನಪಿನಲ್ಲಿಟ್ಟುಕೊಂಡು, ಬಡವರಿಗೆ ತೃಪ್ತಿಯುತ ಜೀವನಕ್ಕೆ ಮಾರ್ಗದರ್ಶನ ಮಾಡಬೇಕು. ಈ ಸೂಕ್ತಿಯ ಸತ್ಯ ನಮ್ಮ ನಿತ್ಯ ಜೀವನದಲ್ಲಿ ಪ್ರತ್ಯಕ್ಷಾನುಭವಕ್ಕೆ ಬರುತ್ತಿದ್ದರೂ ಎಲ್ಲಕ್ಕಿಂತ ಹೆಚ್ಚಾಗಿ ವಿವಾಹ ಮತ್ತು ಪಿತೃಶ್ರಾದ್ಧ ಕರ್ಮಗಳಲ್ಲಿ ಕಂಡುಬರುತ್ತಿದೆ. ಇವುಗಳ ಕಾರಣಗಳಿಂದ ಸಹಸ್ರಾರು ಜನ ಬಡವರು ನಿತ್ಯಜೀವನದ ಆವಶ್ಯಕತೆ ಗಳನ್ನೂ ಹೊಂದಲು ಗತಿ ಇಲ್ಲದಂತಾಗಿ, ವಿನಾಶಕ ಬಡ್ಡಿ ತೆರುವ ಹೊರೆಗೆ ಗುರಿಯಾಗಿದಾರೆ. ದೇಶದ ವಿದ್ಯಾವಂತ ತರುಣರು, ಅದರಲ್ಲಿಯೂ ಶ್ರೀಮಂತರ ಮಕ್ಕಳು ತಮಗೋಸ್ಕರ ಇಂಥ ಎಲ್ಲ ಬಗೆಯ ದುಂದುವೆಚ್ಚ ವನ್ನೂ ಮಾಡದಿರುವ ಸ್ಥಿರಮನಸ್ಸನ್ನು ಮಾಡಿದರೆ, ಎಷ್ಟೋ ರೀತಿಯಲ್ಲಿ ರಾಷ್ಟ್ರ ಸಂಪತ್ತಿನ ನಷ್ಟ ನಿಂತೀತು. (ಯಂಗ್ ಇಂಡಿಯಾ : ೨೬-೯-೨೯)

ಅಂತರ್ಜಾತೀಯ ವಿವಾಹಗಳು

ಪ್ರಶ್ನೆ : ನೀವು ಅಂತರ್ಜಾತೀಯ ವಿವಾಹಗಳನ್ನು ಒಪ್ಪುವುದಾಗಿಯೂ ಅಂಥ ಸತಿಪತಿಗಳು ತಮ್ಮ ತಮ್ಮ ಮತಧರ್ಮದಲ್ಲಿಯೇ ಇರಬೇಕೆಂದೂ, ಆದುದರಿಂದ ಶಾಸನಿಕ ವಿವಾಹವನ್ನು (Civil Marriage) ಸಹಿಸುವುದಾಗಿಯೂ ಹೇಳಿದೀರಿ. ವಿವಾಹಿತರಾದ ಸತಿಪತಿಗಳು ಬೇರೆಬೇರೆ ಮತಧರ್ಮದವರಾಗಿದ್ದು, ಅವುಗಳನ್ನು ಆಜೀವಪರ್ಯಂತ ಉಳಿಸಿಕೊಂಡಿರುವ ಯಾವುದಾದರೂ ನಿದರ್ಶನಗಳಿವೆಯೇ ? ಶಾಸನಿಕ ವಿವಾಹ ಪದ್ಧತಿಯು ಮತಧರ್ಮಾಚರಣೆಗೆ ವಿರುದ್ಧವಾಗಿದ್ದು ಕೊನೆಗೆ ಧರ್ಮನಿಷ್ಠೆಯು ಸಡಿಲವಾಗುವುದಕ್ಕೆ ಆಸ್ಪದವಾಗುವುದಿಲ್ಲವೆ ?

ಉತ್ತರ : ಈ ಪ್ರಶ್ನೆಗಳು ಯೋಗ್ಯವಾದವೆಂದರು ಗಾಂಧೀಜೀ. ಆಮರಣಾಂತ ತಮ್ಮ ತಮ್ಮ ಭಿನ್ನಭಿನ್ನ ಮತಧರ್ಮಗಳನ್ನು ಬಿಡದೆ ಅನುಸರಿಸಿರುವ ಸತಿಪತಿಗಳ ನಿದರ್ಶನಗಳು ತಮ್ಮ ಅನುಭವಕ್ಕಿನ್ನೂ ಬಂದಿಲ್ಲವೆಂದೂ; ಏಕೆಂದರೆ, ತಮಗೆ ಪರಿಚಿತರಿರುವ ಅಂಥ ದಂಪತಿ ಗೆಳೆಯರು ಇನ್ನೂ ಮರಣ ಹೊಂದಿಲ್ಲವೆಂದೂ ತಿಳಿಸಿದರು. ಭಿನ್ನ ಭಿನ್ನ ಮತಧರ್ಮಗಳವರಾದರೂ, ತಮ್ಮ ತಮ್ಮ ಮತಧರ್ಮವನ್ನು ಬಿಡದೆ ಅನುಸರಿಸುತ್ತಿರುವ ಸ್ತ್ರೀ ಪುರುಷರು ತಮಗೆ ಗೊತ್ತಿರುವರೆಂದರು. ಇದಕ್ಕೋಸ್ಕರ ಹಿಂದಿನ ನಿದರ್ಶನಗಳನ್ನು ಕಂಡುಹಿಡಿಯುವ ವರೆಗೂ ಕಾಯಬೇಕಾಗಿಲ್ಲವೆಂದೂ, ಅಂಜಕುಳಿಗಳ ಅಂಜಕುಳಿತನವನ್ನು ಕಳೆಯುವುದಕ್ಕೋಸ್ಕರ ಹೊಸ ನಿದರ್ಶನಗಳನ್ನು ಸೃಷ್ಟಿಮಾಡಬೇಕೆಂದೂ ನುಡಿದರು.

ಶಾಸನಿಕ ವಿವಾಹದಲ್ಲಿ ತಮಗೆ ನಂಬಿಕೆ ಇಲ್ಲವೆಂದೂ, ಬಹು ದಿವಸಗಳಿಂದ ಆಗಬೇಕಾಗಿರುವ ಸುಧಾರಣೆಯೊಂದು ಆಚರಣೆಗೆ ಬರಬೇಕೆಂಬ ದೃಷ್ಟಿಯಿಂದ ಮಾತ್ರ ಅದನ್ನು ಸ್ವಾಗತಿಸುವುದಾಗಿಯೂ ನುಡಿದರು.

(ಹರಿಜನ : ೧೬-೩-೪೭)

ಮಾತ್ಸರ್ಯಪೂರಿತ ಹಾಗೂ ಪಕ್ಷಪಾತಯುಕ್ತ ಒಬ್ಬ ಪತ್ರವ್ಯವಹಾರಿ ಈ ರೀತಿ ಬರೆಯುತ್ತಾರೆ:

‘ ಅನೇಕ ವಿಷಯಗಳಲ್ಲಿ ಗೌರವಾನ್ವಿತರು, ಪ್ರಾಮಾಣಿಕರು, ವಿಶ್ವಾಸ

ಹೃದಯರು, ಧರ್ಮನಿಷ್ಠರು, ಉದಾತ್ತ ಮನಸ್ಸಿನವರು ಆಗಿದ್ದರೂ ಕೇವಲ ಗಂಡುಸಂತಾನವಾಗಬೇಕೆಂಬ ಕಾರಣಕ್ಕಾಗಿ ಪುನರ್ವಿವಾಹ ಮಾಡಿಕೊಳ್ಳಲು ಯಾವ ಬಗೆಯ ಮಾನಸಿಕ ಅಳುಕೂ ಇಲ್ಲದ ಗೃಹಸ್ಥರು ಇಂದು ನಮ್ಮೊಡನೆ 'ಕಚ್' (Cutch) ನಲ್ಲಿ ಇದಾರೆ. ಹೆಣ್ಣುಶಿಶು ಜನನವನ್ನು ದೊಡ್ಡ ಅಪವಾದವೆಂಬುದಾಗಿ ಪರಿಗಣಿಸುವ ಹಿಂದೂಗಳಲ್ಲಿರುವ ನಂಬಿಕೆಯ ಬಗೆಗೆ ನೀವು ಒಪ್ಪುವಿರಾ ಹೇಗೆ? ನಿಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸ ಬೇಕಾಗಿ ಬೇಡುತ್ತೇನೆ. ಪುತ್ರಸಂತಾನವಿಲ್ಲದೆ ಸ್ವರ್ಗ ದೊರಕದೆಂಬ ಸಂಪ್ರದಾಯಬದ್ಧ ಅಭಿಪ್ರಾಯವನ್ನು ನೀವೂ ಹೊಂದಿದೀರಾ ?

ದಾನಧರ್ಮಗಳನ್ನು ಮಾಡುವುದರಲ್ಲಿ ಎತ್ತಿದ ಕೈ ಎನಿಸಿಕೊಂಡ ಒಬ್ಬಾತನಿಗೆ ಮೂವರು ಹೆಂಡತಿಯರಿದಾರೆ. ಆದರೆ, ಆತನಿಗೆ ಗಂಡು ಸಂತಾನವಿಲ್ಲ. ಆತ, ಈಗ ನಾಲ್ಕನೆಯ ವಿವಾಹ ಮಾಡಿಕೊಂಡಿದಾನೆ. ಕೆಲವು ತಿಂಗಳುಗಳ ಕೆಳಗೆ ಆತ ಯಜ್ಞವನ್ನು ಆಚರಿಸಿ, ದಿನವೂ ಐದು ನೂರು ಜನ ಬ್ರಾಹ್ಮಣರಿಗೆ ಸಂತರ್ಪಣೆ ಏರ್ಪಡಿಸಿದ್ದ. ಈ ಕಾರ್ಯಕ್ಕಾಗಿ ಒಂದು ಲಕ್ಷ ರೂಪಾಯಿ ಮೇಲ್ಪಟ್ಟು ವೆಚ್ಚವಾಯಿತು. ಇಂಥ ಎಷ್ಟೋ ನಿದರ್ಶನಗಳನ್ನು ನಾ ಕೊಡಬಲ್ಲೆ.'

ಪುತ್ರಸಂತಾನಕ್ಕಾಗಿ ಹಾತೊರೆಯುವುದು ಹಿಂದೂ ಧರ್ಮದಲ್ಲಿ ಸಾರ್ವತ್ರಿಕವಾಗಿ ಆವರಿಸಿದೆ. ಇದೊಂದು ದುರದೃಷ್ಟ. ಇದರ ಮೂಲ ವನ್ನು ಹುಡುಕಬೇಕಾದ ಪ್ರಮೇಯವಿಲ್ಲ. ಸ್ತ್ರೀಪುರುಷರ ಸಮಾನತೆಯ ಈ ಯುಗದಲ್ಲಿ ಸ್ತ್ರೀ ವಿಷಯವಾಗಿ ಈ ಬಗೆಯ ಮಾತ್ಸರ್ಯಪೂರಿತ ಪಕ್ಷಪಾತ ಕಾಲವಿರೋಧವೆನಿಸೀತು. ಮಗನ ಜನನಕ್ಕಾಗಿ ಹರ್ಷಿಸುವುದೂ, ಮಗಳ ಜನನಕ್ಕೆ ವಿಲಾಪಿಸುವುದೂ ನನಗೆ ಸರಿ ಎನಿಸದು. ಇಬ್ಬರೂ ದೇವರ ಕೊಡುಗೆಯೇ. ಇಬ್ಬರಿಗೂ ಸಮಾನವಾಗಿ ಬಾಳುವ ಹಕ್ಕಿದೆ. ಲೋಕ ಸಂಗ್ರಹಕ್ಕೆ ಇಬ್ಬರೂ ಆವಶ್ಯಕ. ಆದರೆ, ಯುಗಾಂತರಗಳಿಂದ ರೂಢ ಮೂಲವಾಗಿ ಬಂದಿರುವ ಇಂಥ ಪದ್ಧತಿಗಳನ್ನು ಇದ್ದಕ್ಕಿದ್ದಂತೆ ತೊಡೆದು ಹಾಕಲು ಸಾಧ್ಯವಿಲ್ಲ. ಸಾಮಾಜಿಕ ಮನೋಧರ್ಮವನ್ನು ಎಚ್ಚರ ಗೊಳಿಸುವುದರಿಂದಲೂ, ಮಹಿಳೆಯರ ನಿಜಸ್ಥಾನಮಾನ, ಗಾಂಭೀರ್ಯ, ಇವುಗಳನ್ನು ಎತ್ತಿ ಹಿಡಿಯುವುದರಿಂದಲೂ, ಮಾತ್ರ ಸಾಧ್ಯ. ಇಂದು, ಸತಿಪತಿಯರಲ್ಲಿ ಗಂಡುಸಂತಾನವಿಲ್ಲವೆಂಬ ಕಾರಣಕ್ಕಾಗಿ ಪತಿ ಪುನರ್ವಿವಾಹ

ಮಾಡಿಕೊಳ್ಳಲು ಇಬ್ಬರೂ ಒಪ್ಪುತ್ತಾರೆ. ನನ್ನ ಪತ್ರವ್ಯವಹಾರಿಯಂಥ ಸುಧಾರಕರು ಇಂಥ ನಡವಳಿಕೆಯನ್ನು ಕಂಡು ಸಿಟ್ಟಿಗೇಳುವುದಾಗಲೀ, ನಿರಾಶ ರಾಗುವುದಾಗಲೀ ಆಗದೆ, ಶಾಂತಿಯನ್ನು ಅಭ್ಯಸಿಸಬೇಕು. ತಾವು ಯಾವ ಧ್ಯೇಯ ಸಾಧನೆಗಾಗಿ ದುಡಿಯುತ್ತಿದಾರೋ ಅದರಲ್ಲಿ ಪೂರ್ಣ ವಿಶ್ವಾಸ ವುಳ್ಳವರಾಗಿಯೂ ಒಂದಲ್ಲ ಒಂದುದಿನ ಸಮಾಜವು, ಗಂಡು ಮತ್ತು ಹೆಣ್ಣು ಸಂತಾನದ ವಿಷಯದಲ್ಲಿ ಮಾಡುತ್ತಿರುವ ಅರ್ಥಶೂನ್ಯ, ಮಾತ್ಸರ್ಯಪೂರಿತ ಪಕ್ಷಪಾತವನ್ನು ಅರಿತುಕೊಳ್ಳುವದೆಂಬ ನಂಬಿಕೆಯಿಂದಲೂ ಕೂಡಿರಬೇಕು.

(ಹರಿಜನ : ೨೮-೫-೩೮)

ಹಿಂದೂ ಸತೀ

ವಿವಾಹಿತಳಾದ ತನ್ನ ಸಹೋದರಿಯೊಬ್ಬಳ ದುರವಸ್ಥೆಯನ್ನು ಕುರಿತು ಸಹೋದರನೊಬ್ಬ ಬರೆದ ದೀರ್ಘ ಪತ್ರವೊಂದರ ಸಾರಾಂಶವಿದು :

"ಕೆಲವು ಕಾಲದ ಹಿಂದೆ ನನ್ನ ಸಹೋದರಿಯನ್ನು ಒಬ್ಬಾತನಿಗೆ ಕೊಟ್ಟು ವಿವಾಹ ಮಾಡಿದೆವು. ಆತನ ಶೀಲ ನಮಗರಿವಿರಲಿಲ್ಲ. ಆತ ಸ್ತ್ರೀ ಲಂಪಟನಾಗಿ ಕಂಡುಬಂದಿದಾನೆ. ವಿಷಯಲೋಲುಪತೆ, ವ್ಯಭಿಚಾರ, ಇವುಗಳಲ್ಲಿ ಎಷ್ಟು ತೊಡಗಿದರೂ ಆತನಿಗೆ ತೃಪ್ತಿ ಇಲ್ಲ. ಆತನಿಗೆ ಮಾನ ಮರ್ಯಾದೆಯ ಭಾವನೆಯೇ ಇಲ್ಲ. ವಿವಾಹವಾದ ಸ್ವಲ್ಪ ಕಾಲದಲ್ಲಿಯೇ ತನ್ನ "ಸ್ವಾಮಿ" ದಿನದಿನಕ್ಕೂ ಅಧಃಪಾತಾಳಕ್ಕೆ ಇಳಿಯುತ್ತಿರುವುದು ನನ್ನ ಸಹೋದರಿಗೆ ಅರಿವಾಯಿತು. ಇದನ್ನು ಆಕೆ ಪ್ರತಿಭಟಿಸಿದಳು. ಆತ, ಇದನ್ನು ಸಹಿಸದೆ, ಆಕೆಗೊಂದು "ಪಾಠ ಕಲಿಸಲೋಸುಗ" ಆಕೆಯ ಎದುರಿನಲ್ಲಿಯೇ ತನ್ನ ಅತ್ಯಾಚಾರಗಳನ್ನು ನಡೆಸಲಾರಂಭಿಸಿದ. ಚಾಟಿಯಿಂದ ಹೊಡೆಯುವುದು, ನಿಲ್ಲಿಸಿರುವುದು, ಅನ್ನವೀಯದಿರುವುದು, ಇತ್ಯಾದಿ ಎಲ್ಲವನ್ನೂ ಮಾಡಲಾರಂಭಿಸಿದ. ತನ್ನ ವ್ಯಭಿಚಾರವನ್ನು ಆಕೆ ಪ್ರತ್ಯಕ್ಷವಾಗಿಯೇ ನೋಡಬೇಕೆಂದು ಆಕೆಯನ್ನು ಬಲಾತ್ಕಾರವಾಗಿ ಕಂಬಕ್ಕೆ ಕಟ್ಟಿಸಿದ. ಇವೆಲ್ಲವುಗಳಿಂದ ನನ್ನ ಸಹೋದರಿ ಭಗ್ನ ಹೃದಯಳಾಗಿದ್ದಾಳೆ. ಅವಳ ಸಂಕಟದಿಂದ ನಾವೂ ದುಃಖಾರ್ತರಾಗಿದೇವೆ. ನಾವು ನಿಸ್ಸಹಾಯಕರಾಗಿ

ದೇವೆ. ಆಕೆಗೂ ನಮಗೂ ನಿಮ್ಮ ಸಲಹೆ ಏನು? ಹೀಗೆ, ಸ್ತ್ರೀ ಪೂರ್ಣವಾಗಿ ಪುರುಷನ ದಯಾಭಿಕ್ಷೆಗೊಳಗಾಗಿ ಯಾವ ಹಕ್ಕುಬಾಧ್ಯತೆಗಳೂ ಇಲ್ಲದಿರುವ ಸ್ಥಿತಿ ಹಿಂದೂಧರ್ಮದ ಒಂದು ಅತ್ಯಂತ ಅಪಮಾನಕರ ಅಂಶ. ಪುರುಷನು ನಿರ್ದಯನೂ ಕ್ರೂರಿಯೂ ಆದರೆ ಬಡ ಹೆಣ್ಣಿಗೆ ಗತಿಯೇ ಇಲ್ಲದಂತಾಗುತ್ತದೆ. ಪುರುಷನ ಇಷ್ಟಬಂದಂತೆ ಸಂಬಂಧ ಬೆಳೆಸಬಹುದು; ಆದರೆ, ಅದರ ಬಗೆಗೆ ಒಂದು ಚಕಾರ ನುಡಿಯುವಂತಿಲ್ಲ ಸ್ತ್ರೀ. ಒಮ್ಮೆ ವಿವಾಹಿತ ಸ್ತ್ರೀ ತನ್ನ ಯಜಮಾನನ ಪೂರ್ಣ ಕೃಪಾಶ್ರಯದಲ್ಲಿರಬೇಕು. ಸಹಸ್ರಾರು ಸ್ತ್ರೀಯರು ಈ ರೀತಿಯಲ್ಲಿ ನಿಟ್ಟುಸಿರು ಬಿಡುತ್ತಾ ಕಂಬನಿಗರೆಯುತ್ತಿದಾರೆ. ಈ ಬಗೆಯ ದುಷ್ಟ ಅಂಶಗಳಿಂದ ಹಿಂದೂಧರ್ಮ ಪಾರಾದ ಹೊರತೂ, ಪ್ರಗತಿಯ ಭರವಸೆ ಎಂಬುದೇ ಇಲ್ಲ."

ಈ ಲೇಖಕ ವಿದ್ಯಾವಂತ. ಈತ ತನ್ನ ಸಹೋದರಿಯ ಅಳಲನ್ನು ವಿವರಿಸಿರುವ ರೀತಿ, ಈ ಸಾರಾಂಶಕ್ಕಿಂತ, ಹೆಚ್ಚು ಕಣ್ಣಿಗೆ ಕಟ್ಟುವಂತಿದೆ. ಈತ ತನ್ನ ಪೂರ್ಣ ಹೆಸರನ್ನೂ ವಿಳಾಸವನ್ನೂ ಇತ್ತಿದಾನೆ. ಹಿಂದೂಧರ್ಮದ ವಿಷಯದಲ್ಲಿ ಈತನ ದೋಷಾರೋಪಣೆ ತೀವ್ರ ವೇದನೆಯ ಪರಿಣಾಮವಾದುದೆಂಬ ಕಾರಣದಿಂದ ಕ್ಷಮ್ಯವಾದುದಾದರೂ, ಪೃಥಕ್ಕರಿಸಲ್ಪಟ್ಟ ಒಂದು ನಿದರ್ಶನದಿಂದುಂಟಾದ ಚಿತ್ತಕ್ಷೋಭೆಯ ಆಧಾರದ ಮೇಲೆ ಸಾಮಾನ್ಯವೆಂಬಂತೆ ತೋರಿಬರುತ್ತದೆ. ಲಕ್ಷಾಂತರ ಹಿಂದೂ ಸತಿಯರು ತಮ್ಮ ತಮ್ಮ ಕುಟುಂಬಗಳ ಸಾಮ್ರಾಜ್ಞಿಯರಾಗಿ ಪೂರ್ಣ ಶಾಂತಿಯಿಂದ ಬಾಳುತ್ತಿದಾರೆ. ಬೇರೆ ಸ್ತ್ರೀಯರು ಹೊಟ್ಟೆಕಿಚ್ಚು ಪಡುವಷ್ಟು ಅಧಿಕಾರವನ್ನು ಅವರು ತಮ್ಮ ಗಂಡಂದಿರ ಮೇಲೆ ನಡೆಸುತ್ತಾರೆ. ಇದು ಪ್ರೇಮದ ಅಧಿಕಾರ. ಪತ್ರವ್ಯವಹಾರಿಯು ಪ್ರಕಟಪಡಿಸಿರುವ ಕ್ರೌರ್ಯವು ಹಿಂದೂ ಧರ್ಮದಲ್ಲಿ ಕಂಡುಬರುವ ಕೆಡುಕಿನ ನಿದರ್ಶನವಲ್ಲ. ಅದು ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಭಿನ್ನಭಿನ್ನ ಧರ್ಮಾನುಯಾಯಿಗಳಲ್ಲಿಯೂ ಮಾನವ ಸ್ವಭಾವದ ಮೂಲಕ ವ್ಯಕ್ತವಾಗುವ ಕೆಡುಕಿನ ಪರಿಣಾಮವೇ ಹೊರತು ಹಿಂದೂಧರ್ಮದ ನ್ಯೂನತೆಯಲ್ಲ. ಯಾವ ಪತ್ನಿ ಸುಲಭವಾಗಿ ಮಣಿಯುವ ಸ್ವಭಾವದವಳಾಗಿದ್ದು ಆತ್ಮಪ್ರತಿಷ್ಠಾಪನೆ ಮಾಡಿಕೊಳ್ಳಲಶಕ್ತಳಾಗಿರುವಳೋ ಅಥವಾ ಕೆಲವು ವೇಳೆ ತಾನಾಗಿಯೇ ಆತ್ಮಪ್ರತಿಷ್ಠಾಪನೆ ಮಾಡಿಕೊಳ್ಳಲಿಚ್ಛಿಸುವುದಿಲ್ಲವೋ, ಅಂಥವಳಿಗೆ ವಿವಾಹ ವಿಚ್ಛೇದನದ ಸೌಕರ್ಯವು ಕ್ರೂರ

ಪತಿಯಿಂದ ರಕ್ಷಣೆ ನೀಡಲಾರದು. ಆದುದರಿಂದ ಸುಧಾರಣೆಯ ದೃಷ್ಟಿಯಿಂದಲೇ ಸುಧಾರಕರು ಉತ್ಪ್ರೇಕ್ಷೆಯನ್ನೂ, ಉನ್ಮಾದದಿಂದ ಕೆರಳುವುದನ್ನೂ ಬಿಡಬೇಕು.

ಆದರೂ, ಈ ಲೇಖನದ ಮೂಲಕ ಗಮನ ಸೆಳೆದಿರುವ ಘಟನೆ ಹಿಂದೂ ಸಮಾಜದಲ್ಲಿ ಪೂರ್ಣವಾಗಿ ಅಸಾಮಾನ್ಯವಾದ ಘಟನೆಯೇನೂ ಅಲ್ಲ. ಹಿಂದೂ ಸಂಸ್ಕೃತಿಯು ಪತ್ನಿಯನ್ನು ಪೂರ್ಣವಾಗಿ ಪತಿಗೆ ಅಧೀನಳನ್ನಾಗಿಯೂ ಆತನಲ್ಲಿ ಪೂರ್ಣವಾಗಿ ಲೀನಳನ್ನಾಗಿಯೂ ಮಾಡಿರುವುದರ ಮೂಲಕ ತಪ್ಪನ್ನೆಸಗಿದೆ. ಇದರ ಪರಿಣಾಮವಾಗಿಯೇ ಪತಿಯು ಆಗಾಗ ತನ್ನ ಪತ್ನಿಯ ಮೇಲೆ ಅಧಿಕಾರ ನಡೆಸುವುದಲ್ಲದೆ ಮೃಗ ವರ್ತನೆಗೂ ಇಳಿದಿದಾನೆ. ಆದುದರಿಂದ ಇಂಥ ಅತ್ಯಾಚಾರಗಳಿಗೆ ಮದ್ದು ಶಾಸನಗಳಿಂದ ಸಾಧ್ಯವಿಲ್ಲ. ಇದು ಅವಿವಾಹಿತ ಹುಡುಗಿಯರನ್ನುಳಿದ ಇತರ ಮಹಿಳೆಯರಿಗೆ ನಿಜಶಿಕ್ಷಣ ಕೊಡುವುದರಿಂದಲೂ ಮತ್ತು ಗಂಡಂದಿರ ಅಮಾನುಷ ವರ್ತನೆಯ ವಿರುದ್ಧವಾಗಿ ಸಾರ್ವಜನಿಕಾಭಿಪ್ರಾಯವನ್ನು ಉಂಟುಮಾಡುವುದರಿಂದಲೂ ಆದೀತು. ಪ್ರಕೃತ ಸಂದರ್ಭದಲ್ಲಿ ಪರಿಹಾರ ಅತ್ಯಂತ ಸುಲಭ. ಸಂಕಟಕ್ಕೀಡಾಗಿರುವ ಹುಡುಗಿಯ ಜೊತೆಯಲ್ಲಿ ಆಕೆಯ ಸಹೋದರನೂ ಇತರ ಬಂಧುಗಳೂ ನಿಸ್ಸಹಾಯಕರೆಂದು ಭಾವಿಸಿಕೊಂಡು ದುಃಖಿಸುವುದಕ್ಕೆ ಪ್ರತಿಯಾಗಿ ಆಕೆಗೆ ಸರ್ವ ರಕ್ಷಣೆಯನ್ನು ಕೊಟ್ಟು, ಪಾಪಿ ಗಂಡನ ವಿಷಯದಲ್ಲಿ ಮೃದುಸ್ವಭಾವದಿಂದಿರುವುದಾಗಲೀ, ಆತನ ಸಹವಾಸವನ್ನು ಬಯಸುವುದಾಗಲೀ ತನ್ನ ಕರ್ತವ್ಯವಲ್ಲವೆಂದು ಅರಿವು ಮಾಡಿಕೊಡಬೇಕು. ತನ್ನ ಪತ್ನಿಗೆ ಆತನೇ ಸ್ವಲ್ಪವೂ ಗಮನಿಸುವುದಿಲ್ಲವೆಂಬುದು ಸುಸ್ಪಷ್ಟ. ಆದುದರಿಂದ ಆಕೆ ಶಾಸನದ ದೃಷ್ಟಿಯಿಂದ ತನ್ನ ಪತಿಯ ಸಂಬಂಧವನ್ನೂ ತ್ಯಜಿಸದೆ, ತಾನು ವಿವಾಹಿತಳೇ ಆಗಿರಲಿಲ್ಲವೆಂದು ಭಾವಿಸಿಕೊಂಡು, ತನ್ನ ತಂದೆಯ ಮನೆಯಲ್ಲಿಯೇ ವಾಸಿಸಬಹುದು. ಇದನ್ನು ಬಿಟ್ಟರೆ, ವಿವಾಹ ವಿಚ್ಛೇದನವನ್ನು ಪಡೆಯಲಾರದ ಹಿಂದೂ ಮಹಿಳೆಗೆ ಎರಡು ಬಗೆಯ ಶಾಸನರೂಪದ ಪರಿಹಾರಗಳು ಸಾಧ್ಯ. ಒಂದನೆಯದು ತನ್ನ ಮೇಲೆ ಆಘಾತ ನಡೆಸಿದುದಕ್ಕಾಗಿ ಪತಿಗೆ ಶಿಕ್ಷೆಯಾಗುವಂತೆ ಮಾಡುವುದು, ಎರಡನೆಯದು, ಗಂಡನನ್ನು ತನ್ನ ರಕ್ಷಣೆ ಮಾಡಲು ಒತ್ತಾಯ ಮಾಡುವುದು. ಈ ಬಗೆಯ ಪರಿಹಾರ ಅನೇಕ ಸಂದರ್ಭಗಳಲ್ಲಿ ಒಟ್ಟನಲ್ಲಿ

ಅಪ್ರಯೋಜಕವೆನಿಸಿಕೊಂಡಿರುವುದಲ್ಲದೆ ನೀತಿ ನಿಷ್ಠೆಯಿಂದ ಕೂಡಿದ ಮಹಿಳೆಗೆ ಯಾವ ಬಗೆಯ ಸಂತೋಷವನ್ನೂ ಉಂಟುಮಾಡಿಲ್ಲ. ಇದರ ಜೊತೆಗೆ ಗಂಡನ ಸುಧಾರಣೆಯ ಪ್ರಶ್ನೆಯು ಪೂರ್ಣ ಅಸಾಧ್ಯವೆನಿಸದಿದ್ದರೆ, ಹೆಚ್ಚು ಕಷ್ಟತರವಾಗಿ ಪರಿಣಮಿಸಿದೆ. ಸುಧಾರಣೆಯೇ ಪ್ರಮುಖವಾಗಿ ಸಮಾಜದ ಗುರಿಯಾಗಿರಬೇಕು ; ಪತ್ನಿಗಂತೂ ಇನ್ನೂ ಹೆಚ್ಚಿನ ಗುರಿಯಾಗಿರಬೇಕು. ಪ್ರಕೃತ ಪ್ರಶ್ನೆಯಲ್ಲಿ ತಂದೆತಾಯಿಗಳು ತಮ್ಮ ಮಗಳನ್ನು ರಕ್ಷಿಸಲು ಶಕ್ತಿಯುಳ್ಳವರಾಗಿದಾರೆ. ಹೀಗೆ ರಕ್ಷಣೆ ಸಾಧ್ಯವಿಲ್ಲದೆಡೆ ಇಂಥ ದುರುಳ ವರ್ತನೆಗೆ ತುತ್ತಾದ ಮಹಿಳೆಯರ ರಕ್ಷಣಾ ಭಾರವನ್ನು ಹೊರುವ ಸಂಘ, ಸಂಸ್ಥೆಗಳು ದೇಶದಾದ್ಯಂತ ಬೆಳೆಯುತ್ತಿವೆ.

ಇಷ್ಟಾದರೂ, ತಮ್ಮ ಔದಾರ್ಯರಹಿತ ಪತಿಗಳ ಮನೆಯನ್ನು ಬಿಟ್ಟು ಹೋಗುವ ಅಥವಾ ಅವರಿಂದಲೇ ತ್ಯಜಿಸಲ್ಪಟ್ಟು, ಇನ್ನೂ ಯುವತಿಯರಾಗಿದ್ದು ಕಾಮೇಚ್ಛೆ ತೃಪ್ತಿಯಾಗದೆ ಇರುವ ಮತ್ತು ಅದನ್ನು ವಿವಾಹ ವಿಚ್ಛೇದನದಿಂದ ಪಡೆಯಲು ಸಾಧ್ಯವಿಲ್ಲದ ಮಹಿಳೆಯರ ಪ್ರಶ್ನೆ ಹಾಗೇ ಉಳಿಯುತ್ತದೆ. ಸಂಖ್ಯಾದೃಷ್ಟಿಯಿಂದ ನೋಡಿದಾಗ ಇದೊಂದು ತೀವ್ರ ಸಮಸ್ಯೆಯಾಗಿ ಕಾಣಬರದು ; ಏಕೆಂದರೆ, ಶತಮಾನಗಳಿಂದ ಯಾವ ಸಮಾಜದಲ್ಲಿ ವಿವಾಹ ವಿಚ್ಛೇದನಕ್ಕೆ ಮಾನ್ಯತೆಯಿಲ್ಲವೋ ಅಲ್ಲಿ, ದುಃಖಮಯ ಸಂಸಾರದಿಂದ ಕೂಡಿದಾಕೆ ಪುನಃ ವಿವಾಹ ಮಾಡಿಕೊಳ್ಳಲು ಅಪೇಕ್ಷಿಸಲಾರಳು. ಯಾವುದಾದರೂ ಸಾಮಾಜಿಕ ಪಂಗಡದಲ್ಲಿ ಅಂಥ ಪರಿಹಾರವನ್ನು ಸಾರ್ವಜನಿಕಾಭಿಪ್ರಾಯ ಬಯಸುವುದಾದರೆ, ಅದು ತಾನಾಗಿಯೇ ಆದೀತು. ಪ್ರಕೃತ ಪತ್ರವ್ಯವಹಾರಿಯು ತನ್ನ ಪತ್ರದಲ್ಲಿ ಕಾಮೇಚ್ಛೆಯನ್ನು ತೃಪ್ತಿಪಡಿಸಿಕೊಳ್ಳಲು ಪತ್ನಿಗೆ ಉಂಟಾಗಿರುವ ಕೊರಗನ್ನು ವ್ಯಕ್ತಪಡಿಸಿಲ್ಲವೆಂದು ನಾನು ಅರ್ಥಮಾಡಿಕೊಂಡಿದೇನೆ. ಅದು ಪತಿಯ ಅಸಹ್ಯವೂ ನಿರ್ಲಕ್ಷ್ಯವೂ ಆದ ಅನೀತಿಯ ವಿಷಯಕ್ಕೆ ಸಂಬಂಧಪಟ್ಟುದು. ಇದಕ್ಕೆ ಪರಿಹಾರ, ನಾ ಹಿಂದೆ ಹೇಳಿದಂತೆ, ಮನೋಭಾವ ಪರಿವರ್ತನೆ. ನಮ್ಮನಮ್ಮ ಎಲ್ಲ ಸಂಕಷ್ಟಗಳೂ ಕೇವಲ ಕಾಲ್ಪನಿಕವಾದಂತೆ ನಿಸ್ಸಹಾಯಕ ಮನೋಭಾವವೂ ಕಾಲ್ಪನಿಕವೇ. ಸ್ವಲ್ಪ ಹೊಸ ದೃಷ್ಟಿ, ಸ್ವಲ್ಪ ಮೂಲಭೂತ ವಿಚಾರ, ಇವುಗಳು ಭಾವನ್ಯೂನತೆಯಿಂದ ಪ್ರಾಪ್ತವಾದ ದುಃಖವನ್ನು ಹೋಗಲಾಡಿಸಲು ಸಾಧ್ಯವಾದೀತು. ಅಲ್ಲದೆ, ಇಂಥ ಸಂದರ್ಭಗಳಲ್ಲಿ

ಗೆಳೆಯರೂ ಬಂಧುಗಳೂ ಸಂಕಟಕ್ಕೆ ತುತ್ತಾಗಿರುವಾಕೆಯನ್ನು ದೌರ್ಜನ್ಯದ ವಲಯದಿಂದ ಪ್ರತ್ಯೇಕ ಮಾಡುವ ನಿಷೇಧಕ ಕ್ರಿಯೆಯಿಂದಲೇ ತೃಪ್ತರಾಗಬಾರದು. ಆಕೆ ಸಮಾಜಸೇವೆಯನ್ನು ಮಾಡಲು ಅರ್ಹತೆ ಗಳಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಈ ಬಗೆಯ ಶಿಕ್ಷಣ ಗಂಡನೊಡನೆ ಸಂಶಯಾತ್ಮಕವಾಗಿ ದೊರೆಯಬಹುದಾದ ರತಿಸುಖಕ್ಕಿಂತ ಎಷ್ಟೋ ಹೆಚ್ಚು ಪರಿಹಾರವೆನಿಸೀತು. (ಯಂಗ್ ಇಂಡಿಯಾ : ೩-೧೦-೨೯)

ವರದಕ್ಷಿಣೆ

★

ಒಬ್ಬ ಪತ್ರಲೇಖಕ ನನಗೊಂದು ವೃತ್ತಪತ್ರಿಕೆಯಿಂದ ಕತ್ತರಿಸಿ ತೆಗೆದ ವಿಷಯ ಭಾಗವನ್ನು ಕಳುಹಿಸಿ, ಸಿಂಧೂದೇಶದ ಹೈದರಾಬಾದಿನಲ್ಲಿ ಈಚೆಗೆ ವರಗಳ ಆವಶ್ಯಕತೆ ಭೀತಿಯನ್ನುಂಟುಮಾಡುವ ರೀತಿಯಲ್ಲಿ ಹೆಚ್ಚುತ್ತಿದೆ ಎಂದು ತಿಳಿಸಿದಾನೆ. ಇಂಪೀರಿಯಲ್ ಟೆಲಿಗ್ರಾಫ್ ಇಂಜಿನಿಯರಿಂಗ್ ಇಲಾಖೆಯ ನೌಕರನೊಬ್ಬ ೨೦,೦೦೦ ರೂಪಾಯಿಗಳ ನಗದು ವರದಕ್ಷಿಣೆಯನ್ನು ವಿವಾಹ ನಿಶ್ಚಿತಾರ್ಥ ಸಮಯದಲ್ಲಿಯೇ ಸೆಳೆದುಕೊಳ್ಳುವುದರ ಜೊತೆಗೆ ವಿವಾಹದ ದಿನವೂ ಮತ್ತಿತರ ವಿಶೇಷ ಸಮಾರಂಭ ಕಾಲದಲ್ಲಿಯೂ ಹೇರಳ ಕೊಡುಗೆಗಳ ವಾಗ್ದಾನವನ್ನೂ ಹೊಂದಿದನಂತೆ. ವಿವಾಹ ಮಾಡಿಕೊಳ್ಳಲು ವರದಕ್ಷಿಣೆಯ ಷರತ್ತನ್ನು ಹಾಕುವ ಯಾವ ಯುವಕನೇ ಆಗಲಿ, ತನ್ನ ವಿದ್ಯಾಭ್ಯಾಸ ಮತ್ತು ತನ್ನ ದೇಶ ಹಾಗೂ ಸ್ತ್ರೀತ್ವಕ್ಕೆ ಅಪಮಾನವೆಸಗಿದಂತೆ. ದೇಶದಲ್ಲಿ ವಿವಿಧ ಯುವಜನ ಚಳುವಳಿಗಳಿವೆ. ಈ ಚಳುವಳಿಗಳು ಇಂಥ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುವುವೆಂದು ನಾ ಅಪೇಕ್ಷಿಸುತ್ತೇನೆ. ಇಂಥ ಸಂಸ್ಥೆಗಳು ಆಂತರ್ಯದಿಂದ ಘನವಾದ ಸುಧಾರಣೆ ಮಾಡುವುದಕ್ಕೆ ಪ್ರತಿಯಾಗಿ ಬಹುಮಟ್ಟಿಗೆ ಆತ್ಮಸ್ತುತಿಯ ಸಂಸ್ಥೆಗಳಾಗಿಬಿಡುತ್ತವೆ. ಆಗಾಗ ಸಾರ್ವಜನಿಕ ಚಳುವಳಿಗೆ ಇವು ಮಾಡುವ ಸೇವೆ ಶ್ಲಾಘನೀಯವಾದರೂ, ಯುವಜನ, ಸಾರ್ವಜನಿಕರಿಂದ ಪಡೆಯುವ ಮೆಚ್ಚುಗೆಯೇ ತಮ್ಮ ಪ್ರತಿಫಲವೆಂದು ಭಾವಿಸಬೇಕೆಂಬುದನ್ನು ಮರೆಯಬಾರದು. ಈ ಬಗೆಯ ಕೆಲಸ ಆಂತರ್ಯ ಸುಧಾರಣೆಯಿಂದ ಬೆಂಬಲ ಪಡೆಯದೆ ಹೋದರೆ, ಯುವಕರಲ್ಲಿ ನಿರಾಧಾರಯುತ ಆತ್ಮತೃಪ್ತಿಯನ್ನುಂಟುಮಾಡಿ, ಅವರನ್ನು ನೀತಿರಹಿತರನ್ನಾಗಿ ಮಾಡೀತು. ಈ ಹೀನ ವರದಕ್ಷಿಣೆ ಪದ್ಧತಿಯನ್ನು ಹಳಿಯಲು ಪ್ರಬಲವಾದ ಸಾರ್ವಜನಿಕ ಅಭಿಮತವನ್ನು ರೂಢಿಸಬೇಕು. ಇಂಥ ಅನ್ಯಾಯದ ಹಣದಿಂದ ತಮ್ಮ ಹಸ್ತವನ್ನು ಮಲಿನ ಮಾಡಿಕೊಳ್ಳುವ ಯುವಕರು ಸಮಾಜದಿಂದ ಬಹಿಷ್ಕೃತರಾಗಬೇಕು. ಕನ್ಯೆಯರ ತಂದೆತಾಯಿಗಳೂ ಇಂಗ್ಲಿಷ್ ಡಿಗ್ರಿಗಳಿಗೆ ಮೋಹಗೊಳ್ಳದೆ ತಮ್ಮ ಕನ್ಯೆಯರಿಗೆ ನಿಜವಾಗಿಯೂ

ಧೀರರಾದ ಯುವಕರನ್ನು ಪಡೆಯಲು ತಮ್ಮ ಪುಟ್ಟ ಜಾತಿಗಳೂ ಮತ್ತು ಪ್ರಾಂತಗಳಿಂದ ಹೊರಹೋಗಲು ಹಿಂದೆ ಮುಂದೆ ನೋಡಬಾರದು.

(ಯಂಗ್ ಇಂಡಿಯಾ : ೨೧-೬-೨೮)

ಕನ್ಯೆಯೊಬ್ಬಳನ್ನು ವಿವಾಹವಾಗಲು ಬೆಲೆಯನ್ನು ಸೆಳೆದುಕೊಳ್ಳುವ ತುಚ್ಛರೀತಿ ಒಂದು ಅಯೋಗ್ಯತೆ ಎಂದು ಪರಿಗಣಿತವಾಗದಿರುವುದು ನಮ್ಮ ದೌರ್ಭಾಗ್ಯವೇ ಸರಿ. (ಹರಿಜನ : ೫-೯-೩೬)

ವರದಕ್ಷಿಣೆ ಪದ್ಧತಿಯು ಹೃದಯಶೂನ್ಯವೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ನನಗೆ ತಿಳಿದಂತೆ ಅದು ಲಕ್ಷಾಂತರ ಜನರಿಗೆ ಅನ್ವಯಿಸುವುದಿಲ್ಲ. ಭಾರತೀಯ ಜನಸಮುದಾಯದಲ್ಲಿ ಕೇವಲ ಹನಿಯಂತಿರುವ ಮಧ್ಯಮವರ್ಗದವರಿಗೆ ಮಾತ್ರ ಅದು ಅನ್ವಯಿಸುತ್ತದೆ. ನಾವು ಕೆಟ್ಟ ಪದ್ಧತಿಗಳನ್ನು ಕುರಿತು ಯೋಚಿಸಿದಾಗಲೆಲ್ಲ ಸಾಮಾನ್ಯವಾಗಿ ಮಧ್ಯಮ ವರ್ಗದವರನ್ನೇ ನಮ್ಮ ಲಕ್ಷ್ಯದಲ್ಲಿಟ್ಟುಕೊಂಡಿರುತ್ತೇವೆ. ಹಳ್ಳಿಗಳಲ್ಲಿ ವಾಸಿಸುವ ಲಕ್ಷಾಂತರ ಜನರು ತಮ್ಮದೇ ಆದ ಆಚಾರ ರೂಢಿಗಳನ್ನೂ ಮತ್ತು ದುಃಖವನ್ನೂ ಹೊಂದಿರುತ್ತಾರೆ. ಇವುಗಳ ವಿಚಾರವಾಗಿ ನಮ್ಮ ತಿಳಿವಳಿಕೆ ಅತ್ಯಲ್ಪ.

ಹೀಗೆ ಹೇಳುವುದರ ಅರ್ಥ, ವರದಕ್ಷಿಣೆಯ ಕೆಟ್ಟ ಪದ್ಧತಿ ಈ ದೇಶದ ಎಲ್ಲೋ ಕೆಲವು ಮಂದಿಗೆ ಮಾತ್ರ ಪರಿಮಿತವಾಗಿದೆಯೆಂಬ ಕಾರಣದಿಂದ ಲಕ್ಷ್ಯಕ್ಕೆ ತಂದುಕೊಳ್ಳಬಾರದೆಂದಲ್ಲ. ಈ ಪದ್ಧತಿ ಹೋಗಲೇಬೇಕು. ತಂದೆತಾಯಿಗಳು ಹಣಕ್ಕೋಸ್ಕರ ಮಾಡಿಕೊಳ್ಳುವ ವ್ಯವಹಾರವಾಗಬಾರದು ವಿವಾಹ. ಎಲ್ಲಿಯ ತನಕ, ವರಗಳ ಆಯ್ಕೆ ಒಂದೇ ಜಾತಿಯ ಕೇವಲ ನೂರಾರು ಯುವಕ ಯುವತಿಯರಿಗೆ ಮಾತ್ರ ಪರಿಮಿತಗೊಳಿಸಲ್ಪಟ್ಟಿರುತ್ತದೆಯೋ, ಅಲ್ಲಿಯ ತನಕ ಈ ಪದ್ಧತಿಯ ವಿರುದ್ಧವಾಗಿ ಏನು ಹೇಳಿದರೂ ವ್ಯರ್ಥವೇ ಸರಿ. ಇದು ನಿರ್ನಾಮವಾಗಬೇಕಾದರೆ, ಹುಡುಗಿಯರೋ, ಹುಡುಗರೋ ಅಥವಾ ತಂದೆತಾಯಿಗಳೋ ಜಾತಿಯ ಕಟ್ಟನ್ನು ಉಲ್ಲಂಘಿಸಬೇಕು. ಇದರ ಜೊತೆಗೆ ಮದುವೆಯ ವಯಸ್ಸೂ ಹೆಚ್ಚಬೇಕು. ಕನ್ಯೆಯರು ತಮಗೆ ಅನುಗುಣನಾದ ವರ ದೊರಕದಿದ್ದರೆ, ಅವಿವಾಹಿತ ವೃದ್ಧ ಕನ್ಯೆಯರಾಗಲು ಧೈರ್ಯ ಮಾಡಬೇಕು. ಇದೆಲ್ಲದರಿಂದ ರಾಷ್ಟ್ರದ ಯುವಕರ

ಮನೋಧರ್ಮ ಕ್ರಾಂತಿಕಾರಕವಾಗಿ ಪರಿವರ್ತನೆ ಹೊಂದುವ ಶಿಕ್ಷಣವೇ ಆದೀತು. ದುರದೃಷ್ಟವಶಾತ್, ನಮ್ಮ ಶಿಕ್ಷಣ ಪದ್ಧತಿಗೂ ಸುತ್ತಮುತ್ತಲಿನ ಸನ್ನಿವೇಶಕ್ಕೂ ಸಂಬಂಧವಿಲ್ಲವಾಗಿದೆ. ಆದುದರಿಂದ, ರಾಷ್ಟ್ರದ ಎಲ್ಲೋ ಅಣುವಿನಷ್ಟು ಅಲ್ಪಸಂಖ್ಯೆಯ ಬಾಲಕ ಬಾಲಕಿಯರು ಪಡೆವ ಶಿಕ್ಷಣದಿಂದ ಇದು ಶುದ್ಧಾಂಗವಾಗಿ ಪರಿಣಾಮ ಹೊಂದದೆ ಇದೆ. ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸಲು ಎಲ್ಲ ಪ್ರಯತ್ನವನ್ನೂ ಮಾಡಬೇಕು. ವೇಗವಾಗಿ ಪರಿವರ್ತನೆ ಹೊಂದುತ್ತಿರುವ ದೇಶದ ಸ್ಥಿತಿಗತಿಗಳೊಂದಿಗೆ ಹೊಂದಿಕೊಳ್ಳುವ ಶಿಕ್ಷಣದಿಂದ ಮಾತ್ರ ಈ ಕೆಟ್ಟ ಪದ್ಧತಿಯನ್ನೂ ಇದರಂಥ ಮತ್ತಿತರ ಕೆಟ್ಟ ಪದ್ಧತಿಗಳನ್ನೂ ಎದುರಿಸಲು ಸಾಧ್ಯವಾದೀತೆಂದು ನನಗೆ ಸ್ಪಷ್ಟವಾಗಿದೆ. ತಮ್ಮ ಭವಿಷ್ಯ ಜೀವನದ ಮೇಲೆ ಗಾಢವಾಗಿ ಪರಿಣಾಮ ಮಾಡುವ ವಿವಾಹದಂಥ ವಿಷಯಕ್ಕೆ ಸಂಬಂಧಪಟ್ಟ ಈ ಕೆಟ್ಟ ಪದ್ಧತಿಯನ್ನು ಕಾಲೇಜು ಶಿಕ್ಷಣ ಪಡೆದ ಅನೇಕ ಬಾಲಕ ಬಾಲಕಿಯರೂ ಪ್ರತಿಭಟಿಸಲು ಏಕೆ ಶಕ್ತರಾಗಿಲ್ಲವೋ ಅಥವಾ ಮನಸ್ಸು ಮಾಡಿಲ್ಲವೋ ಎಂಬುದು ನನಗೊಂದು ಪ್ರಶ್ನೆಯಾಗಿದೆ. ಶಿಕ್ಷಣ ಹೊಂದಿದ ಬಾಲೆಯರೂ ತಮಗೆ ಯೋಗ್ಯ ವರ ಸಿಕ್ಕಲಿಲ್ಲವೆಂದು ಏಕೆ ಆತ್ಮಹತ್ಯ ಮಾಡಿಕೊಳ್ಳಬೇಕೋ? ಒಂದು ಪದ್ಧತಿ ರಕ್ಷಿಸಲಸಾಧ್ಯವೆಂದೂ, ನೈತಿಕ ಭಾವನೆಗೆ ವಿರುದ್ಧವೆಂದೂ, ಕಂಡುಬಂದರೆ ಅದನ್ನು ಪ್ರತಿಭಟಿಸುವ ಶಕ್ತಿ ನೀಡದಿರುವ ಶಿಕ್ಷಣದಿಂದ ಪ್ರಯೋಜನವಾದರೂ ಏನು? ಇದಕ್ಕೆ ಉತ್ತರ ಸ್ಪಷ್ಟ. ಸಾಮಾಜಿಕವೋ ಅಥವಾ ಇತರ ಸ್ವರೂಪದ ಕೆಟ್ಟ ಪದ್ಧತಿಯೋ ಅದನ್ನು ಎದುರಿಸಿ ಹೋರಾಡಲು ಬಾಲಕ ಬಾಲಕಿಯರಿಗೆ ಶಕ್ತಿ ನೀಡದಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಏನೋ ಮೂಲಭೂತವಾದ ನ್ಯೂನತೆ ಇದೆ. ಬಾಳಿನ ಎಲ್ಲ ಕ್ಷೇತ್ರಗಳ ಸಮಸ್ಯೆಗಳನ್ನೂ ಸರಿಯಾಗಿ ಬಿಡಿಸಲು ಸಾಮರ್ಥ್ಯವೀವಂತೆ ಬಾಲಕನ ಶಕ್ತಿವಿಶೇಷಗಳನ್ನು ಜಾಗೃತಗೊಳಿಸುವ ಶಿಕ್ಷಣವೇ ನಿಜಶಿಕ್ಷಣದ ಬೆಲೆಯುಳ್ಳದು.

(ಹರಿಜನ : ೨೩-೫-೩೬)

ತನ್ನ ಮಗಳ ವಿವಾಹಕ್ಕೆ ಆವಶ್ಯಕವಾದ ವರದಕ್ಷಿಣೆ ಹಣ ಶೇಖರಿಸಲು ಸಹಾಯ ಅಪೇಕ್ಷಿಸಿ ಬರೆದ ಬಂಗಾಳೀ ತಂದೆಯೊಬ್ಬನ ಪತ್ರದ ಸಂಬಂಧವಾಗಿ ಗಾಂಧೀಜೀ ಈ ರೀತಿ ಬರೆದರು :

ಬಂಗಾಳೀ ತಂದೆಯ ಇಂಥ ಪ್ರಸಂಗದಲ್ಲಿ ಆವಶ್ಯಕ ಹಣವನ್ನು ಸಾಲ ರೂಪವಾಗಿಯೋ ದಾನರೂಪವಾಗಿಯೋ ಕೊಡದಿರುವುದೇ ಶ್ರೇಷ್ಠ ಸಹಾಯ ವಾಗುತ್ತದೆ. ಆತನು ತನ್ನ ಮಗಳ ವಿವಾಹಕ್ಕಾಗಿ ವರನನ್ನು ಕೊಂಡು ಕೊಳ್ಳಲು ನಿರಾಕರಿಸುವ ಅಭಿಪ್ರಾಯವನ್ನು ಪ್ರೋತ್ಸಾಹಿಸಿ ಬಲಪಡಿಸು ವುದಷ್ಟೇ ಅಲ್ಲದೆ, ಆತನೋ ಆಕೆಯೋ ಹಣವನ್ನು ಬಿಟ್ಟು ಪ್ರೇಮಕ್ಕಾಗಿ ವಿವಾಹ ಮಾಡಿಕೊಳ್ಳುವವರನ್ನು ಆರಿಸಿಕೊಳ್ಳಬೇಕು. ಇದರ ಅರ್ಥ, ಸ್ವೇಚ್ಛೆಯಿಂದಲೇ ವರನನ್ನು ಆರಿಸಿಕೊಳ್ಳುವ ಕ್ಷೇತ್ರವನ್ನು ವಿಶಾಲಗೊಳಿಸು ವುದು. ಇದಕ್ಕಾಗಿ ಜಾತಿ ಮತ್ತು ಪ್ರಾಂತ, ಈ ಎರಡರ ಗೋಡೆಗಳನ್ನೂ ಒಡೆಯಬೇಕಾಗಿದೆ. ಭಾರತವು ಅವಿಭಾಜ್ಯ ಏಕೈಕ ರಾಷ್ಟ್ರವೆನ್ನಬೇಕಾದರೆ, ಪರಸ್ಪರ ಸಹಭೋಜನ, ಅಥವಾ ಮಿಶ್ರವಿವಾಹ, ಇವುಗಳನ್ನು ಪ್ರತಿಬಂಧಿ ಸುವ ಅಸಂಖ್ಯ ಪುಟ್ಟ ಗುಂಪುಗಳ ಕೃತಕ ಪ್ರತ್ಯೇಕತೆ ಖಂಡಿತ ಇರಬಾರದು. ಈ ಕ್ರೂರ ಪದ್ಧತಿಯಲ್ಲಿ ಯಾವ ಬಗೆಯ ಧರ್ಮವೂ ಇಲ್ಲ.

(ಹರಿಜನ: ೨೫-೭-೪೬)

ತುಂಬ ಹಾನಿದಾಯಕವಾದ ಜಾತಿಯ ಅಡ್ಡಿ ಆತಂಕಗಳನ್ನು ತೊಡೆದುಹಾಕುವ ಆವಶ್ಯಕತೆಯನ್ನು ನಾ ಒತ್ತಿ ಹೇಳಬೇಕು. ಈ ರೀತಿಯ ಅಡ್ಡಿ ಆತಂಕಗಳನ್ನು ತೊಡೆದುಹಾಕುವುದರಿಂದ ವರಗಳನ್ನು ಆರಿಸಿಕೊಳ್ಳುವ ವಲಯ ವಿಸ್ತಾರವಾಗಿ ಅದು ಬಹುಮಟ್ಟಿಗಾದರೂ ವರದಕ್ಷಿಣೆಯ ಸುಲಿಗೆ ಯನ್ನು ಕಡಿಮೆ ಮಾಡೀತು. (ಹರಿಜನ: ೫-೯-೪೬)

ಓರ್ವ ಮಹಿಳೆ ಹೀಗೆ ಬರೆಯುತ್ತಾರೆ:

"ತಂದೆತಾಯಿಗಳು ಗಂಡುಮಕ್ಕಳಿಗೆ ಸ್ವತಂತ್ರ ಜೀವನೋಪಾಯ ಪಡೆಯಲು ಶಿಕ್ಷಣ ಕೊಡಿಸುವಂತೆ, ಹೆಣ್ಣುಮಕ್ಕಳಿಗೂ ಶಿಕ್ಷಣ ಕೊಡಿಸಿದರೆ ಅವರು ತಮ್ಮ ಹುಡುಗಿಯರಿಗೆ ವರಾನ್ವೇಷಣೆ ಮಾಡುವ ಆತಂಕ ತಪ್ಪುತ್ತದೆ. ಹುಡುಗಿಯರು ಸಾಕಷ್ಟು ರೀತಿಯಲ್ಲಿ ಮಾನಸಿಕ ಬೆಳವಣಿಗೆಯನ್ನು ಪಡೆ ಯುವ ಅವಕಾಶ ಹೊಂದಿ, ಗೌರವರೀತಿಯಲ್ಲಿ ತಮ್ಮ ಜೀವನ ನಡೆಸುವ ಸ್ಥಿತಿ ಪಡೆದರೆ, ಅವರು ವಿವಾಹ ಮಾಡಿಕೊಳ್ಳಬೇಕೆಂದು ಇಚ್ಛಿಸಿದಾಗ, ಯೋಗ್ಯ ವರನನ್ನು ಹೊಂದುವುದು ಕಷ್ಟವೆನಿಸಲಾರದು. ಹುಡುಗಿಯರಿಗೆ, ನಾನು ಪ್ರೌಢ ಶಿಕ್ಷಣವೆಂದು ಹೆಸರು ಪಡೆದಿರುವ ಶಿಕ್ಷಣವನ್ನು ಪ್ರತಿಪಾದಿಸು

ತ್ತಿದೇನೆಂದು ಅರ್ಥ ಮಾಡಿಕೊಳ್ಳಬಾರದು. ಸಹಸ್ರಾರು ಹುಡುಗಿಯರಿಗೆ ಇದು ಸಾಧ್ಯವಿಲ್ಲವೆಂದು ನಾ ತಿಳಿದಿದೇನೆ. ಹುಡುಗಿಯರಿಗೆ ಉಪಯುಕ್ತ ಜ್ಞಾನ, ತಮ್ಮ ತಂದೆತಾಯಿಗಳ ಅಥವಾ ತಮ್ಮ ಭಾವೀ ಪತಿಗಳ ಆಶ್ರಯ ವಿಲ್ಲದೆ ಯಾವುದಾದರೊಂದು ಉದ್ಯೋಗವನ್ನವಲಂಬಿಸಿ, ಜಗತ್ತಿನಲ್ಲಿ ಸ್ವತಂತ್ರವಾಗಿ ಬಾಳಬಲ್ಲೆನೆಂಬ ನಂಬಿಕೆ ಧೈರ್ಯಗಳನ್ನು ಹುಟ್ಟಿಸುವ ಶಿಕ್ಷಣ ಕೊಡಬೇಕೆಂಬುದನ್ನು ನಾ ಪ್ರತಿಪಾದಿಸುತ್ತೇನೆ. ತಮ್ಮ ಗಂಡಂದಿರಿಂದ ತ್ಯಜಿಸಲ್ಪಟ್ಟಿದ್ದ ಕೆಲವು ಹುಡುಗಿಯರು ಈಗ ಅದೇ ಗಂಡಂದಿರ ಜೊತೆಯಲ್ಲಿ ಗೌರವಯುತ ಜೀವನ ನಡೆಸುತ್ತಿರುವ ಕೆಲವರನ್ನು ನಾ ಬಲ್ಲೆ. ಇದಕ್ಕೆ ಕಾರಣ, ಅವರು ತ್ಯಜಿಸಲ್ಪಟ್ಟಿದ್ದ ಕಾಲದಲ್ಲಿ ಆತ್ಮಾವಲಂಬಿಗಳಾಗಿ ಇರಲು ಅನುಕೂಲವಾಗುವಂಥ ಒಂದು ಸಾಮಾನ್ಯ ಶಿಕ್ಷಣ ಪಡೆವ ಸುಯೋಗವನ್ನು ಹೊಂದಿದ್ದುದೇ. ವಿವಾಹದ ವಯಸ್ಸಿನವರಾದ ಹೆಣ್ಣುಮಕ್ಕಳನ್ನು ಹೊಂದಿರುವ ತಂದೆತಾಯಿಗಳ ಕಷ್ಟಗಳನ್ನು ಪರಿಗಣಿಸುವಾಗ ಈ ಪ್ರಶ್ನೆಯ ವಿಷಯವನ್ನು ನೀವು ಒತ್ತಿ ಹೇಳುವಿರೆಂದು ನಾ ಆಶಿಸುತ್ತೇನೆ!! ”

ಈ ಲೇಖಕಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನಾ ಹೃತ್ಪೂರ್ವಕ ವಾಗಿ ಒಪ್ಪುತ್ತೇನೆ. (ಹರಿಜನ: ೫-೯-೩೬)

ಇಲ್ಲಿ ಅಸಹ್ಯ ಹುಟ್ಟಿಸುವ ಮತ್ತು ಯುವತಿಯರಿಗೆ ಯೋಗ್ಯ ವರಗಳು ದೊರಕುವುದನ್ನು ದುಸ್ತರ ಮಾಡುವ ವರದಕ್ಷಿಣೆ ಪದ್ಧತಿ ಇದೆಯೆಂದು ತಿಳಿಯಬಂತು. ವಯಸ್ಸಾದ ಹುಡುಗಿಯರು — ನಿಮ್ಮಲ್ಲಿ ಕೆಲವರು ವಯಸ್ಸಾದವರಿದೀರಿ — ಇಂಥ ಸೆಳೆತಗಳನ್ನು ಪ್ರತಿಭಟಿಸಲು ನಿರೀಕ್ಷಿಸ ಲಾಗಿದೆ. ಹೀಗೆ, ಈ ಕೆಟ್ಟ ಪದ್ಧತಿಯನ್ನು ಪ್ರತಿಭಟಿಸುವುದರಿಂದ ನಿಮ್ಮಲ್ಲಿ ಕೆಲವರು ಆಜೀವಪರ್ಯಂತವೋ ಅಥವಾ ಕೊನೆಯ ಪಕ್ಷ ಕೆಲವು ವರುಷ ಗಳೋ ಕನ್ಯೆಯರಾಗಿಯೇ ಇರಲು ಆರಂಭಮಾಡಿದರೆ ನೀವು ವಿವಾಹ ವಾಗುವ ಕಾಲ ಪ್ರಾಪ್ತವಾದಾಗ, ನೀವು ಜೀವನ ಸಂಗಾತಿಯನ್ನು ಹೊಂದಲೇ ಬೇಕೆಂದು ಅಪೇಕ್ಷಿಸಿದಾಗ, ಹಣ, ಖ್ಯಾತಿ, ದೇಹಸೌಂದರ್ಯ ಇವುಗಳನ್ನು ಹೊಂದಿದವನಿಗಾಗಿ ಹಾತೊರೆಯುವುದಿಲ್ಲ. ಪಾರ್ವತಿಯಂತೆ ಒಬ್ಬನನ್ನು ಆರಿಸಿಕೊಳ್ಳುವಿರಿ — ಆತ ಸುಶೀಲತೆಯ ಅನುಪಮ ಗುಣಗಳಿಂದ ಕೂಡಿರು ವನು. ನಾರದ ಪಾರ್ವತಿಗೆ ಶಿವನನ್ನು ವರ್ಣಿಸಿದ ರೀತಿ ನೀವು ಕೇಳಿರ

ಬೇಕು — 'ದರಿದ್ರತಮ, ಬೂದಿಬಡಕ, ಸೌಂದರ್ಯಹೀನ, ಬ್ರಹ್ಮಚಾರಿ'— ಇದಕ್ಕೆ ಪಾರ್ವತಿ ಕೊಟ್ಟ ಉತ್ತರ: 'ಹೌದು, ಆತನೇ ನನ್ನ ಪತಿ.' ಪಾರ್ವತಿಯಂತೆ ಸಹಸ್ರ ವರುಷಗಳಲ್ಲದಿದ್ದರೂ, ತಪಶ್ಚರ್ಯವನ್ನು ಆಚರಿಸಲು ನೀವು ಮನಸ್ಸು ಮಾಡದ ಹೊರತು ಶಿವನಂಥ ಅನೇಕರನ್ನು ನೀವು ಹೊಂದಲಾರಿರಿ. ದುರ್ಬಲ ಮಾನವರಾದ ನಾವು ಆ ರೀತಿ ಮಾಡಲು ಶಕ್ಯವಿಲ್ಲವೆಂದರೂ, ನೀವು ಮಾತ್ರ ನಿಮ್ಮ ಬಾಳಿನ ಅವಧಿಯಲ್ಲಾದರೂ ಆಚರಿಸಬಹುದು. (ಗಾಂಧೀಜಿಯೊಂದಿಗೆ ಸಿಲೋನಿನಲ್ಲಿ: ಪು: ೧೪೮ - ೪೯)

ಪರದಾ ಪದ್ಧತಿ

★

ಪರದಾ ಪದ್ಧತಿಯನ್ನು ತೊಡೆದುಹಾಕಿ

ಬಂಗಾಳ, ಬಿಹಾರ, ಸಂಯುಕ್ತ ಪ್ರಾಂತಗಳು ಇವುಗಳಿಗೆ ನಾ ಹೋದಾಗಲೆಲ್ಲ ಇತರ ಪ್ರಾಂತಗಳಿಗಿಂತಲೂ ಅಲ್ಲಿ ಪರದಾ ಪದ್ಧತಿ ಹೆಚ್ಚು ಕಟ್ಟುನಿಟ್ಟಾಗಿ ಆಚರಿಸಲ್ಪಡುವುದನ್ನು ಕಂಡಿದೇನೆ. ಆದರೆ, ದರ್ಭಾಂಗಾ ದಲ್ಲಿ ರಾತ್ರಿ ಬಹಳ ಹೊತ್ತಾದ ತರುವಾಯ ಹಕೋಟಿ ಮೀರಿದ ಗುಂಪಿನ ಶಬ್ದ ಮತ್ತು ಗಲಿಬಿಲಿ ಇವುಗಳಿಲ್ಲದೆ ಪ್ರಶಾಂತವಾದ ವಾತಾವರಣವುಳ್ಳ ಸಭೆಯೊಂದನ್ನುದ್ದೇಶಿಸಿ ನಾ ಭಾಷಣಮಾಡಿದಾಗ ನನ್ನ ಎದುರಿಗೆ ಪುರುಷರೂ, ನನ್ನ ಹಿಂದುಗಡೆ ಒಂದು ಅಡ್ಡ ತೆರೆಯೂ ಆ ಅಡ್ಡ ತೆರೆಯ ಹಿಂದುಗಡೆ ಮಹಿಳೆಯರೂ ಇದ್ದರು. ಆದರೆ, ಆ ರೀತಿ ಮಹಿಳೆಯರೂ ಇರುವರೆಂಬುದನ್ನು ನನ್ನ ಗಮನಕ್ಕೆ ತರುವವರೆಗೂ ಅದು ನನಗೆ ತಿಳಿಯಲೇ ಇಲ್ಲ. ಆ ಸಮಾರಂಭವು ಒಂದು ಅನಾಥಾಲಯದ ಅಸ್ತಿಭಾರ ಶಿಲಾ ಸ್ಥಾಪನೋತ್ಸವವಾಗಿತ್ತು ; ಅಡ್ಡ ತೆರೆಯ ಹಿಂಭಾಗದಲ್ಲಿ ಕುಳಿತಿದ್ದ ಮಹಿಳೆಯರನ್ನುದ್ದೇಶಿಸಿ ನಾ ಭಾಷಣ ಮಾಡಬೇಕಾಗಿತ್ತು. ನನ್ನ ಶ್ರೋತೃಗಳು ಅವರ ಸಂಖ್ಯೆ ಎಷ್ಟೆಂಬುದು ನನಗೆ ಪರಿಚಯವಿಲ್ಲದೆ ಪರದೆಯ ಹಿಂದೆ ಕುಳಿತಿದ್ದ ದೃಶ್ಯ ನನಗೆ ವ್ಯಸನವನ್ನುಂಟುಮಾಡಿತು. ಅದು ನನಗೆ ನೋವನ್ನೂ ಅತಿಶಯ ಅಪಮಾನವನ್ನೂ ಉಂಟುಮಾಡಿತು. ಈ ಅನಾಗರಿಕ ಪದ್ಧತಿಗೆ ಕಚ್ಚಿಕೊಂಡಿರುವುದರಿಂದ ಭಾರತದ ಮಹಿಳೆಯರಿಗೆ ಪುರುಷರು ಮಾಡಿದ ಅನ್ಯಾಯದ ವಿಷಯವಾಗಿ ನಾ ಚಿಂತಿಸಿದೆ. ಈ ಪದ್ಧತಿ ಆರಂಭವಾದಾಗ ಅದರ ಉಪಯುಕ್ತತೆ ಏನೇ ಇದ್ದರೂ, ಈಗಂತೂ ಅದು ಸಂಪೂರ್ಣವಾಗಿ ನಿಷ್ಪ್ರಯೋಜಕವೂ ದೇಶಕ್ಕೆ ಅಗಣಿತ ಕೆಡುಕನ್ನು ಉಂಟುಮಾಡುವಂಥದೂ ಆಗಿದ್ದಿತು. ಕಳೆದ ನೂರು ವರುಷಗಳಿಂದಲೂ ನಾವು ಪಡೆಯುತ್ತಿರುವ ವಿದ್ಯಾಭ್ಯಾಸ ನಮ್ಮ ಮೇಲೆ ಏನೂ ಪರಿಣಾಮ ಮಾಡಿಲ್ಲವೆನಿಸಿತು ; ಏಕೆಂದರೆ, ವಿದ್ಯಾವಂತರ ಮನೆಗಳಲ್ಲಿಯೇ ಈ ಪದ್ಧತಿ

ಇನ್ನೂ ಸುಭದ್ರವಾಗಿ ನೆಲೆಮಾಡಿಕೊಂಡಿದೆ. ಇದು ವಿದ್ಯಾವಂತ ಪುರುಷರು ಈ ಪದ್ಧತಿಯನ್ನು ನಂಬುವರೆನ್ನುವ ಕಾರಣದಿಂದಲ್ಲ; ಅವರು ಈ ಪಾಶವ ಪದ್ಧತಿಯನ್ನು ದಿಟ್ಟತನದಿಂದ ಎದುರಿಸಿ ಒಮ್ಮೆಲೇ ನಾಶಮಾಡದಿರುವುದ ರಿಂದ ಸಹಸ್ರಾರು ಸಂಖ್ಯೆಯಲ್ಲಿ ನೆರೆದ ಮಹಿಳೆಯರ ನೂರಾರು ಸಭೆಗಳನ್ನು ಕುರಿತು ಭಾಷಣಮಾಡುವ ಸೌಭಾಗ್ಯ ಹೊಂದಿದೇನೆ. ಈ ಸಭೆಗಳಲ್ಲಿ ಉಂಟಾಗುವ ಶಬ್ದ, ಗದ್ದಲಗಳಿಂದ ಸಭೆಗೆ ಬರುವ ಮಹಿಳೆಯರಿಗೆ ಮನ ದಟ್ಟಾಗುವಂತೆ ಉಪನ್ಯಾಸಮಾಡುವುದು ಅಸಾಧ್ಯ. ಎಲ್ಲಿಯವರೆಗೆ ಅವರು ತಮ್ಮ ಮನೆಗಳಿಗೂ ಅವುಗಳ ಚಿಕ್ಕ ಅಂಗಳಗಳಿಗೂ ಮಾತ್ರ ಕಚ್ಚಿಕೊಂಡಿರು ವರೋ ಅಲ್ಲಿಯವರೆಗೂ ಏನನ್ನೂ ಪರಿಣಾಮಕಾರಿಯಾಗಿ ಮಾಡಲು ಸಾಧ್ಯವೆನಿಸಲಾರದು. ಅವರೂ ಇದ್ದಕ್ಕಿದ್ದಂತೆ ಒಂದು ದೊಡ್ಡ ಕೊಠಡಿ ಯಲ್ಲಿ ಸಮಾವೇಶವಾಗುವಂತಾಗಿ, ಭಾಷಣವೊಂದನ್ನು ಕೇಳುವಂತಾದರೆ, ತಮ್ಮ ವಿಷಯದಲ್ಲಿಯೂ ಭಾಷಣಕಾರನ ವಿಷಯದಲ್ಲಿಯೂ ಹೇಗೆ ನಡೆದು ಕೊಳ್ಳಬೇಕೆಂಬುದು ಅವರಿಗೆ ಅರಿವಾಗದು. ಶಾಂತಿ ನೆಲೆಸಿದಾಗ, ಸ್ವಾತಂತ್ರ್ಯದ ಗಾಳಿಯನ್ನೇ ಎಂದೂ ಅನುಭವಿಸಲವಕಾಶ ಕಾಣದ ಅವರಿಗೆ ಅನೇಕ ಪ್ರಚಲಿತ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸಲು ಕಷ್ಟವಾಗುತ್ತದೆ. ಇದು ಸ್ವಲ್ಪ ಉತ್ಪ್ರೇಕ್ಷಾಪೂರಿತ ಚಿತ್ರವೆಂದು ನಾ ಬಲ್ಲೆ. ನಾ ಭಾಷಣ ವೀಯುವ ಸೌಭಾಗ್ಯ ಹೊಂದಿರುವ ಈ ಸಹಸ್ರಾರು ಮಹಿಳೆಯರ ಉದಾತ್ತ ಸಂಸ್ಕೃತಿಯನ್ನು ಬಲ್ಲೆ. ಪುರುಷರು ಯಾವ ಮಟ್ಟಕ್ಕೆ ಏರಲು ಸಾಧ್ಯವೋ ಅದೇ ಮಟ್ಟಕ್ಕೆ ಇವರೂ ಏರಲು ಸಾಧ್ಯವಿರುವಂತೆಯೇ ಜಾರುವ ಅವಕಾಶ ಗಳುಂಟೆಂಬುದನ್ನೂ ಬಲ್ಲೆ. ಇದನ್ನು ವಿದ್ಯಾವಂತ ವರ್ಗದವರ ವಿಶೇಷ ಗುಣವೆಂದು ಅನ್ವಯಿಸಲಾಗದು. ಅವರು ಏಕೆ ಮುಂದುವರಿದಿಲ್ಲವೆಂಬುದೇ ಪ್ರಶ್ನೆ: ಪುರುಷರು ಅನುಭವಿಸುವಂತೆಯೇ ನಮ್ಮ ಮಹಿಳೆಯರೂ ಏಕೆ ಸ್ವಾತಂತ್ರ್ಯವನ್ನು. ಅನುಭವಿಸಬಾರದು? ಅವರೂ ಹೊರಗೆ ಹೋಗಿ ಹೊರಗಿನ ಹೊಸ ಗಾಳಿಯನ್ನೇಕೆ ಅನುಭವಿಸಬಾರದು?

ಪಾತಿವ್ರತ್ಯವು ಬಾಳೆಹಣ್ಣಿನ ಗುಡಾಣದ ಬೆಳೆವಣಿಗೆಯಲ್ಲ (Hot-house growth). ಅದನ್ನು ಬಲಾತ್ಕಾರವಾಗಿ ಹೇರಲು ಸಾಧ್ಯವಿಲ್ಲ. ಪರದೆಯ ಸುತ್ತುಗೋಡೆಯಿಂದ ಅದು ರಕ್ಷಿಸಲ್ಪಡಬಾರದು. ಅದು ಅಂತ ರಂಗದಿಂದ ಬೆಳೆಯಬೇಕು- ಅನಿರೀಕ್ಷಿತವಾಗಿ ಪ್ರಾಪ್ತವಾಗುವ ಎಲ್ಲ ಆಶೆ

ಗಳನ್ನೂ ಎದುರಿಸುವ ಸಾಮರ್ಥ್ಯವಿದ್ದರೇ ಅದಕ್ಕೆ ಬೆಲೆ. ಅದು ಸೀತಾ ದೇವಿಯ ನಿರ್ಲಕ್ಷ್ಯ ಭಾವದಂತಿರಬೇಕು. ಪುರುಷರ ದೃಷ್ಟಿಯನ್ನು ಎದುರಿಸುವ ಶಕ್ತಿ ಅದಕ್ಕಿಲ್ಲದಿದ್ದರೆ ಅದು ನಿರ್ಬಲವಾದುದು. ಸ್ತ್ರೀಯರು ಪುರುಷರನ್ನು ನಂಬಲು ಹೇಗೆ ಬಲಾತ್ಕರಿಸಲ್ಪಡುವರೋ ಅದೇ ರೀತಿ ಪುರುಷರು ತಮ್ಮ ಸ್ತ್ರೀಯರನ್ನು ನಂಬುವುದು ಅವರ ಪುರುಷತ್ವಕ್ಕೆ ಶೋಭಾಯಮಾನ. ನಮ್ಮ ಒಂದು ಅಂಗ ಪೂರ್ತಿಯಾಗಿ ಅಥವಾ ಆಂಶಿಕವಾಗಿ ಶಕ್ತಿಶೂನ್ಯವಾಗಿರುವ ಸ್ಥಿತಿಯಲ್ಲಿ ಬದುಕುವುದು ಬೇಡ. ರಾಮ ಸ್ವತಂತ್ರನೂ ಸ್ವಚ್ಛಂದನೂ ಆಗಿದ್ದ ರೀತಿಯಲ್ಲಿಯೇ ಸೀತೆಯೂ ಇರದಿದ್ದ ಪಕ್ಷದಲ್ಲಿ ರಾಮನೆಲ್ಲಿರುತ್ತಿದ್ದನೋ? ಆದರೆ, ವೀರ್ಯವತ್ತಾದ ಸ್ವಾತಂತ್ರ್ಯಕ್ಕೆ ಬಹುಶಃ ದ್ರೌಪದಿ ಇನ್ನೂ ಉತ್ತಮ ನಿದರ್ಶನ. ಸೀತೆಯು ಸಾತ್ವಿಕಮೂರ್ತಿಯಾಗಿದ್ದಳು. ಆಕೆಯೊಂದು ಕೋಮಲ ಕುಸುಮ. ದ್ರೌಪದಿಯಾದರೋ ಒಂದು ಮಹಾ ಓಕ್ ವೃಕ್ಷದಂತೆ. ಆಕೆ ಮಹಾಭೀಮನನ್ನೂ ತನ್ನ ಪ್ರಬಲವಾದ ಸಂಕಲ್ಪಕ್ಕೆ ಬಗ್ಗಿಸಿಕೊಂಡಳು. ಎಲ್ಲರಿಗೂ ಭಯೋತ್ಪಾದಕ ಭೀಮ ದ್ರೌಪದಿಯ ಎದುರು ಕುರಿಮರಿ. ಪಾಂಡವರಲ್ಲಿ ಯಾರ ರಕ್ಷಣೆಯನ್ನೂ ಆಕೆ ಅಪೇಕ್ಷಿಸಲಿಲ್ಲ. ಭಾರತದ ಮಹಿಳೆಯರ ಸ್ವತಂತ್ರ ಬೆಳವಣಿಗೆಗೆ ಅಡ್ಡಿ ಬರಲೆತ್ನಿಸುವುದರಿಂದ ಭಾರತದ ಸ್ವತಂತ್ರ ಸ್ವಚ್ಛಂದ ಮನೋಧರ್ಮದ ಪುರುಷರ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡಿದಂತಾಗುತ್ತದೆ, ನಮ್ಮ ಮಹಿಳೆಯರ ಕೃತಿ. ನಾವು, ನಮ್ಮ ಮಹಿಳೆಯರಿಗೂ 'ಅಸ್ಪೃಶ್ಯರಿಗೂ' ನಾವು ಮಾಡುತ್ತಿರುವುದು ಸಹಸ್ರ ಮಡಿ ರೂಪದಲ್ಲಿ ನಮ್ಮ ತಲೆಯ ಮೇಲೆ ಸುತ್ತಿ ಬೀಳುತ್ತದೆ. ನಮ್ಮ ದೌರ್ಬಲ್ಯ, ಅನಿಶ್ಚಿತ ಬುದ್ಧಿ, ಸಂಕುಚಿತತನ ಮತ್ತು ನಿಸ್ಸಹಾಯಕ ಸ್ಥಿತಿ ಇವುಗಳಿಗೆ ಇದು ಸ್ವಲ್ಪಮಟ್ಟಿನ ಕಾರಣವೆನ್ನಬೇಕು. ಆದುದರಿಂದ ಪ್ರಬಲ ಪ್ರಯತ್ನಪೂರ್ವಕವಾಗಿ ಪರದಾ ಪದ್ಧತಿಯನ್ನು ತೊಡೆದುಹಾಕೋಣ. (ಯಂಗ್ ಇಂಡಿಯಾ : ೩-೨-೨೭)

ದೇವದಾಸಿಯರು

★

ಮಾಯವರಂನಲ್ಲಿ ದೇವದಾಸಿಯರೊಂದಿಗೆ ಸಂಭಾಷಣೆ ನಡೆಸಿದ ತರುವಾಯ ಹೀಗೆ ನುಡಿದರು, ಗಾಂಧೀಜೀ :

ಅವರೊಂದಿಗೆ ನಾ ಸಂಭಾಷಿಸುತ್ತಾ ಅದರ ಅಂತರಾರ್ಥವನ್ನು ತಿಳಿದುಕೊಳ್ಳುತ್ತಿದ್ದಾಗ, ಪ್ರಾಪ್ತ ವಯಸ್ಕರಾಗದ ಬಾಲಕಿಯರನ್ನು ಅನೀತಿಯ ಉದ್ದೇಶಗಳಿಗಾಗಿ ಅರ್ಪಿಸುವ ಪದ್ಧತಿಯ ಬಗೆಗೆ ನನ್ನಾತ್ಮ ಪ್ರತಿಭಟಿಸುತ್ತಿತ್ತು. ಅವರನ್ನು ದೇವದಾಸಿಯರೆಂದು ಕರೆದು ಧರ್ಮದ ಹೆಸರಿನಲ್ಲಿ ದೇವರಿಗೇ ಅವಮಾನ ಮಾಡುತ್ತಿದೇವೆ. ಇದು ಎರಡು ರೀತಿಯ ಅಪರಾಧ; ಒಂದನೆಯದಾಗಿ, ಈ ಸಹೋದರಿಯರನ್ನು ನಮ್ಮ ಕಾಮ ತೃಪ್ತಿಗೆ ಉಪಯೋಗಿಸಿಕೊಳ್ಳುವದು, ಇನ್ನೊಂದು, ದೇವರ ಹೆಸರಿನಲ್ಲಿ ಈ ಕಾರ್ಯ ನಡೆಸುವುದು. ಈ ರೀತಿಯ ಅನೀತಿ ಸೇವೆ ಸಲ್ಲಿಸುವುದಕ್ಕಾಗಿಯೇ ಒಂದು ಜನವರ್ಗವೂ, ಈ ಕರಾಳ ಅನೀತಿಯನ್ನು ಸಹಿಸಿಕೊಂಡಿರುವ ಇನ್ನೊಂದು ಜನವರ್ಗವೂ ಇರುವುದನ್ನು ಯೋಚಿಸಿದರೆ ಬಾಳಿನ ಬಗೆಗೇ ನಿರಾಶೆ ಜನಿಸುತ್ತದೆ. ನಾ ಅವರಲ್ಲಿ ಸಂಭಾಷಿಸುತ್ತಿದ್ದಾಗ ಅವರ ದೃಷ್ಟಿ ಪಥದಲ್ಲಿ ಯಾವ ಕುಂದೂ ಇಲ್ಲದುದನ್ನು ಕಂಡೆ. ಅವರೂ ಇತರ ಮಹಿಳೆಯರಂತೆ ಸದ್ಭಾವ, ಸದ್ಗುಣ, ಇವುಗಳಿಂದ ಭರಿತರಾಗಬಲ್ಲರೆಂಬ ವಿಷಯದಲ್ಲಿ ನಾ ನಿಮಗೆ ಭರವಸೆ ನೀಡಬಲ್ಲೆ. ಅವರಿಗೂ ನಮ್ಮ ಸ್ವಂತ ಸಹೋದರಿಯರಿಗೂ ಯಾವ ವ್ಯತ್ಯಾಸವಿದ್ದೀತು? ನಮ್ಮ ಸ್ವಂತ ಸಹೋದರಿಯರನ್ನು ಇಂಥ ಅನೀತಿ ಕೃತ್ಯಗಳಿಗೆ ಬಿಡದಿರುವಾಗ, ಇವರು ಈ ರೀತಿ ಉಪಯೋಗಿಸಲ್ಪಡಲು ಅವಕಾಶ ಕೊಡಲು ನಮಗೆ ಹೇಗೆ ಧೈರ್ಯ ಬರುತ್ತದೆ? ಈ ವಿಷಯಗಳಿಗೆ ಯಾವ ರೀತಿಯಲ್ಲಾದರೂ ಸಂಬಂಧ ಹೊಂದಿರುವ ಹಿಂದೂಗಳು ಸಮಾಜವನ್ನು ಈ ಪಿಡುಗಿನಿಂದ ನಿರ್ಮೂಲ ಮಾಡಲಿ. ನಾ ಅವರಿಗೆ ಕೊಟ್ಟಿರುವ ವಚನದಂತೆ ನಡೆವುದಾದರೆ, ಅವರಲ್ಲಿ ಬಹುಸಂಖ್ಯಾತರು ತಮ್ಮ ಹಾದಿಯನ್ನು ತಿದ್ದಿಕೊಳ್ಳಲು ಭಾಷೆ ಇತ್ತಿದಾರೆ. ಒಂದು ವೇಳೆ ಅವರಿಗಿದು ಅಸಾಧ್ಯವಾದರೆ ನಾ ಅವರನ್ನು ನಿಂದಿಸುವುದಕ್ಕೆ

ಪ್ರತಿಯಾಗಿ, ಅವರು ಜೀವಿಸುತ್ತಿರುವ ಸಮಾಜವನ್ನು ನಿಂದಿಸುವೆ. ಈ ಸಹೋದರಿಯರಿಗೆ ಸ್ನೇಹಹಸ್ತ ನೀಡುವುದು ನಿಮ್ಮ ಕರ್ತವ್ಯ; ತಮ್ಮ ಹೇಯವಾದ ಬಾಳಿನಿಂದ ಇವರನ್ನು ಪುನರುದ್ಧರಿಸುವುದು ನಿಮ್ಮ ಕರ್ತವ್ಯ. ದುಷ್ಪ್ರೇರಣೆಯು ಎದುರಿಗೆ ನಿಂತಾಗ ಅದನ್ನು ಪ್ರತಿಭಟಿಸುವುದು ಅವರಿಗೆ ಕಷ್ಟಕರವೆಂಬುದನ್ನು ನಾ ಬಲ್ಲೆ. ಆದರೆ ಮಾನವ ತನ್ನ ಕಾಮವನ್ನು ಹತೋಟಿಯಲ್ಲಿಟ್ಟುಕೊಂಡು ಜೊತೆಗೆ ಸಮಾಜವೂ ಈ ದುಷ್ಟ ಪದ್ಧತಿಯ ವಿರುದ್ಧ ಸೆಟೆದು ನಿಂತರೆ ಇದನ್ನು ಸಮಾಜದಿಂದ ತೊಡೆದುಹಾಕಲು ಸುಲಭಸಾಧ್ಯವಾದೀತು. (ಯಂಗ್ ಇಂಡಿಯಾ : ೨೨-೯-೨೭)

ಅವಿಶ್ರಾಂತ ಕಾರ್ಯಕರ್ತೆ ಡಾ. ಎಸ್. ಮುತ್ತುಲಕ್ಷ್ಮೀ ರೆಡ್ಡಿಯವರು ಹೀಗೆ ಬರೆಯುತ್ತಾರೆ.

“ಹಿಂದೂ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿರುವ ದೇವದಾಸೀ ಪದ್ಧತಿಯನ್ನು ನೀವು ಬಹಿರಂಗವಾಗಿ ನಿರಾಕರಿಸುತ್ತಿರುವುದರಿಂದ ಇದನ್ನು ತೊಡೆದುಹಾಕುವ ಮಹಾಕಾರ್ಯಕ್ಕೆ ನಿಮ್ಮ ನೆರವು ನೀಡಬೇಕೆಂದು ಪ್ರಾರ್ಥಿಸುವ ಧೈರ್ಯಮಾಡಿದೇನೆ. ಈ ಪ್ರಾಂತದಲ್ಲಿ ಈ ಕಾರ್ಯ ನನಗೆ ಮಹಾ ಪ್ರಯಾಸವಾಗಿ ಕಂಡುಬರುತ್ತಿದೆ. ವಿದ್ಯಾವಂತರೆನಿಸಿಕೊಂಡವರೂ ಮತ್ತು ಪ್ರಮುಖ ಕಾಂಗ್ರೆಸ್ಸಿಗರೆನಿಸಿಕೊಂಡವರಲ್ಲಿ ಬಹಳ ಮಂದಿಯೂ ನಾ ತಂದಿರುವ ಸುಧಾರಣಾ ಮಸೂದೆಯನ್ನು ವಿರೋಧಿಸುವುದಲ್ಲದೆ ಈ ದುಷ್ಟಪದ್ಧತಿಯನ್ನು ಸಮರ್ಥಿಸುತ್ತಿದಾರೆ.

ಈಗ ಶಾಸನವಾಗಿರುವ ನನ್ನ ಮಸೂದೆಯು ಇನಾಂ ಪಡೆದಿರುವ ದೇವದಾಸಿಯರಿಗೆ ಮಾತ್ರ ಅನ್ವಯಿಸುತ್ತದೆ. ಆದರೆ ಆ ಬುಡಕಟ್ಟಿನ ಒಂದು ಶಾಖೆಯವರು ಮತಧರ್ಮದ ಹೆಸರಿನಲ್ಲಿ ಸಮರ್ಪಣೆ ಮಾಡಿಕೊಳ್ಳುವ ಪದ್ಧತಿ ಇದೆ. ಇದು ಕೇವಲ ವ್ಯಭಿಚಾರದಿಂದ ಜೀವನವನ್ನು ನಡೆಸುವುದಕ್ಕಾಗಿ. ಇದು ಮಕ್ಕಳ ವಿಕ್ರಯವಲ್ಲದೆ ಬೇರೆಯಲ್ಲ; ಏಕೆಂದರೆ ಏನೂ ಅರಿಯದ ಮತ್ತು ವಿಚಾರಶಕ್ತಿಯಾಗಲೀ ನಿರ್ಣಯ ಸಾಮರ್ಥ್ಯವಾಗಲೀ ಇಲ್ಲದ ಮಕ್ಕಳು ಕೊಂಡುಕೊಳ್ಳಲ್ಪಟ್ಟು ದತ್ತುವಾಗಿ ಸ್ವೀಕೃತವಾಗುತ್ತಾರೆ. (ದೇವದಾಸಿಯರು ದತ್ತು ಸ್ವೀಕಾರ ಮಾಡಿಕೊಳ್ಳುವ ಅವಕಾಶ ಹಿಂದೂ

ಶಾಸನದಲ್ಲಿದೆ.) ಹೀಗೆ ಸ್ವೀಕೃತರಾದ ಮಕ್ಕಳು ಹೊಲಸು ಜೀವನ ನಡೆಸುವವರಾಗಿ ಅದರಿಂದ ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲದವರಾಗುತ್ತಾರೆ. ಆ ಬುಡಕಟ್ಟಿನಲ್ಲಿ ಸ್ವಲ್ಪ ಸುಧಾರಿತ ಜನ ನನಗೆ ಅನೇಕ ಮನವಿಗಳನ್ನೂ ಪ್ರಾರ್ಥನೆಗಳನ್ನೂ ಸಲ್ಲಿಸಿ, ಮಕ್ಕಳ ಆತ್ಮ ಮತ್ತು ಶರೀರಗಳನ್ನು ವಿಕ್ರಯ ಮಾಡುವ ಕೆಟ್ಟ ಜನಗಳಿಗೆ ಶಿಕ್ಷೆ ವಿಧಿಸುವ ಶಾಸನ ಮಾಡಿಸಬೇಕೆಂದು ಕೋರಿದಾರೆ.

ಪೀನಲ್ ಕೋಡಿನ ೩೭೨ ಮತ್ತು ೩೭೩ ನೇ ವಿಧಿಗಳು ಅಪ್ರಯೋಜಕವೆನಿಸಿವೆ. ಆದುದರಿಂದ ಇನ್ನೊಂದು ಮಸೂದೆ ತರಲು ನಾ ತಿಳುವಳಿಕೆ ಕೊಟ್ಟದೇನೆ. ಇದರ ಯಶಸ್ಸಿಗೆ ನಿಮ್ಮ ಆಶೀರ್ವಾದವನ್ನು ಬೇಡುತ್ತೇನೆ. ಪದ್ಧತಿಯ ಕೆಡುಕನ್ನು ಜನರೇ ಅರ್ಥಮಾಡಿಕೊಳ್ಳುವವರೆಗೂ ಶಾಸನ ಪ್ರಯೋಜನವಿಲ್ಲವೆಂದು ಕೆಲವರು ವಾದಿಸಬಹುದು; ಆದರೆ ನನ್ನ ವಾದ ಹೀಗೆ. ಜನತೆಯ ಬಹುಭಾಗ ಈ ಅನ್ಯಾಯವನ್ನು ಬಲ್ಲರು. ಸ್ವಲ್ಪ ಶಾಸನದ ಬೆಂಬಲವಿದ್ದರೆ ಅನೇಕ ಹುಡುಗಿಯರನ್ನು ಪಾತಕಿ ತಂದೆತಾಯಿಗಳಿಂದ ಬಿಡಿಸಬಹುದೆಂದು ನನಗೂ ಅನಿಸುತ್ತಿದೆ.

ದೇವದಾಸೀ ಪಂಗಡದಲ್ಲಿಯೇ ಒಳ್ಳೆಯ ಜಾಗೃತಿಯುಂಟಾಗಿದೆ. ದೊಡ್ಡ ಪ್ರಚಾರವನ್ನು ಅವರೇ ಮಾಡುತ್ತಿದಾರೆ. ಆದರೆ, ಉಚ್ಚ ಜಾತಿಯ ಜನ ಈ ಸುಧಾರಣೆಯ ಪ್ರಯತ್ನಕ್ಕೆ ನೆರವು ನೀಡದಿರುವುದನ್ನು ಕಂಡು ನನಗೆ ದುಃಖವೆನಿಸಿದೆ. ಇದರ ಜೊತೆಗೆ ಇತರ ದೇಶಗಳಲ್ಲಿರುವಂತೆಯೂ ಅಷ್ಟೇಕೆ ಇತರ ಪ್ರಾಂತಗಳಾದ ಬೊಂಬಾಯಿ ಮತ್ತು ಬಂಗಾಳಗಳಲ್ಲಿ ಇರುವಂತೆಯೂ ಮಕ್ಕಳ ರಕ್ಷಣೆಯ ಶಾಸನ ಈ ಪ್ರಾಂತದಲ್ಲಿಲ್ಲ.

ಮುಂದುವರಿದ ದೇಶಗಳಲ್ಲಿ ಅನುಕೂಲವಾದ ಸಾರ್ವಜನಿಕ ಅಭಿಪ್ರಾಯ ಮೂಡುವುದಕ್ಕೆ ಮುಂಚೆಯೇ ಆರೋಗ್ಯ ಮತ್ತು ನೀತಿಗೆ ಸಂಬಂಧಪಟ್ಟ ಸುಧಾರಣೆಗಳು ನಡೆದಿರುವುದು ನಮಗೆ ಗೊತ್ತು; ಏಕೆಂದರೆ, ಅವುಗಳೇ ಶೈಕ್ಷಣಿಕ ಅಂಶಗಳಾಗಿದ್ದವು. ಈ ಪ್ರಾಂತದಲ್ಲಿ, ಉಚ್ಚ ಜಾತಿಯವರಾಗಿರುವವರು, ಎಲ್ಲ ಮಕ್ಕಳನ್ನೂ, ಅವರು ಯಾವ ಜಾತಿ ಮತದವರೇ ಆಗಿರಲಿ, ರಕ್ಷಣೆ ಕರುಣೆಗಳಿಗೆ ಪಾತ್ರರೆಂದು ಸಾಕಷ್ಟು ಭಾವಿಸದಿರುವುದರಿಂದ ಈ ವಿಷಯದಲ್ಲಿ ಇವರು ದೂಷಣೆಗೆ ಗುರಿಯಾಗಿರುವಷ್ಟು ಸರಕಾರ ಗುರಿ ಆಗಲಾರದು. ಘೋರ ಜೀವನಕ್ಕೆ ತುತ್ತಾಗುವ ಮಕ್ಕಳನ್ನು

ರಕ್ಷಿಸುವ ಕಾರ್ಯದಲ್ಲಂತೂ ಅವರು ಕೋಮುವಾರು ಮತ್ತು ಜಾತೀಯ ಭಾವನೆಗಳಿಂದ ಮೇಲ್ಮಟ್ಟಕ್ಕೆ ಏರಬೇಕು."

ಲೇಖಕಿಯ ಸಲಹೆಗಳನ್ನು ನಾ ಹೃತ್ಪೂರ್ವಕವಾಗಿ ಒಪ್ಪುತ್ತೇನೆ. ಈಕೆ ಸಲಹೆ ಮಾಡಿರುವ ಶಾಸನ ನಿಜವಾಗಿಯೂ ಸಾರ್ವಜನಿಕ ಮತಕ್ಕಿಂತ ಮುಂದಾಯಿತೆಂದು ನಾ ಭಾವಿಸಲಾರೆ. ಈ ವಿಷಯದ ಮೇಲೆ ವ್ಯಕ್ತಪಡಿಸಲ್ಪಟ್ಟಿರುವ ಸುಧಾರಿತ ಸಾರ್ವಜನಿಕ ಅಭಿಪ್ರಾಯ, ಅದು ಯಾವ ರೂಪದಲ್ಲಿಯೇ ಇರಲಿ, ಈ ಪದ್ಧತಿಯ ಮುಂದುವರಿಕೆಗೆ ವಿರೋಧವಾಗಿದೆ. ಈ ಅನೀತಿ ವ್ಯಾಪಾರದಲ್ಲಿ ತೊಡಗಿರುವವರ ಅಭಿಪ್ರಾಯಕ್ಕೆ ಬೆಲೆ ಇಲ್ಲ ; ಹೇಗೆ ಸಾರ್ವಜನಿಕ ಅಭಿಪ್ರಾಯ ಬೇರೆ ರೀತಿಯಲ್ಲಿ ವಿರುದ್ಧವಾಗಿದ್ದ ಹೊರತೂ ಅಫೀಮು ಕೋಠಿಗಳನ್ನು ಇಟ್ಟಿರುವವರ ವಾದ ಅವುಗಳ ಮುಂದುವರಿಕೆಗೆ ಸಿಂಧುವಾಗಲಾರವೋ ಹಾಗೆ. ಯಾರು ದೇವದಾಸೀ ಪದ್ಧತಿಯನ್ನು ಒಪ್ಪುವರೋ ಅವರಮೇಲೊಂದು ದೊಡ್ಡ ಕಳಂಕ. ಸಾರ್ವಜನಿಕರ ಜಡ ಮನೋಭಾವವಿಲ್ಲದಿದ್ದರೆ, ಅದು ಎಂದೋ ಹೆಸರಿಲ್ಲದಂತಾಗುತ್ತಿತ್ತು. ಏಕೋ ಏನೋ, ಈ ದೇಶದಲ್ಲಿ ಸಾರ್ವಜನಿಕ ವಿಚಾರಶಕ್ತಿಯು ಸುಪ್ತವಾಗಿದೆ. ಅನೇಕ ಘೋರ ಅನ್ಯಾಯಗಳ ವಿಷಯದಲ್ಲಿ ಅದು ಆಗಾಗ ಉದ್ಯಮ ವ್ಯಕ್ತಪಡಿಸಿದರೂ, ಅತ್ಯಂತ ಔದಾಸೀನ್ಯತೆಯಿಂದಲೋ ಅಥವಾ ಸೋಮಾರಿತನದಿಂದಲೋ ಅಲ್ಲಿಂದ ಮುಂದುವರಿಯದೆ ಹಾಗೇ ನಿಲ್ಲುತ್ತದೆ. ಆದರೆ, ಡಾ. ರೆಡ್ಡಿಯವರಂಥ ಜಾಗೃತ ಚೇತನದ ಪ್ರಭಾವದಿಂದ ಆ ವಿಚಾರಶಕ್ತಿ ಎಚ್ಚರವಾಗಿ, ಉದಾಸೀನತೆಯೂ ಉತ್ಸಾಹ ಹೊಂದಿ ಕೊಡಬಹುದಾದ ನೆರವನ್ನು ನೀಡೀತು. ಆದುದರಿಂದ ಡಾ. ರೆಡ್ಡಿಯವರ ಸಲಹೆ ಯಾವ ರೀತಿಯಲ್ಲಿಯೂ ಅಕಾಲಿಕವಲ್ಲವೆಂದು ನನ್ನ ಅಭಿಪ್ರಾಯ. ಇಂಥ ಶಾಸನ ಇನ್ನೂ ಮುಂಚೆ ಬಂದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಧರ್ಮ ಮತ್ತು ಸಾಮಾನ್ಯ ಸಾಮಾಜಿಕ ಜೀವನದ ಪಾವಿತ್ರ್ಯತೆಯ ಪ್ರೇಮಿಗಳೆಲ್ಲರೂ ತಮ್ಮ ಹೃತ್ಪೂರ್ವಕವಾದ ನೆರವನ್ನು ಇದಕ್ಕೆ ನೀಡುವರೆಂದು ನಂಬಿದೇನೆ.

(ಯಂಗ್ ಇಂಡಿಯಾ : ೨೯-೮-೨೯)

ವೇಶ್ಯಾ ವೃತ್ತಿ

★

ಸ್ತ್ರೀಯರನ್ನು ನಮ್ಮ ಕಾಮತೃಷ್ಣೆಗೆ ಬಲಿಗೊಡದಿರೋಣ. ದುರ್ಬಲರ ರಕ್ಷಣೆ ಮಾಡಬೇಕೆಂಬ ಧರ್ಮ ಈ ಸಂದರ್ಭದಲ್ಲಿ ವಿಶೇಷ ರೀತಿಯಲ್ಲಿ ಅನ್ವಯಿಸುತ್ತದೆ. ನನಗಂತೂ ಗೋ-ಸಂರಕ್ಷಣೆ ಅರ್ಥದಲ್ಲಿಯೇ ಸ್ತ್ರೀಯರ ಪಾವಿತ್ರ್ಯ ರಕ್ಷಣೆಯೂ ಅಡಕವಾಗಿದೆ. ನಾವು ನಮ್ಮ ಸ್ತ್ರೀಯರನ್ನು ತಾಯಿಯರಂತೆಯೂ, ಭಗಿನಿಯರಂತೆಯೂ, ಹೆಣ್ಣು ಮಕ್ಕಳಂತೆಯೂ ಗೌರವಿಸುವುದನ್ನು ಕಲಿಯುವವರೆಗೂ ಭಾರತದ ಪುನರುತ್ಥಾನವಾಗದು. ನಮ್ಮ ಮಾನವೀಯತೆಯನ್ನು ಕೊಂದು ನಮ್ಮನ್ನು ಪಶುಗಳೋಪಾದಿ ಮಾಡುವ ಪಾಪಗಳಿಂದ ಶುದ್ಧರಾಗೋಣ.

(ಯಂಗ್ ಇಂಡಿಯಾ: ೧೩-೪-೨೧)

ನಮ್ಮ ಕಾಮತೃಪ್ತಿಗಾಗಿ ಒಬ್ಬ ಭಗಿನಿಯೂ ಅಪಮಾನ ಮತ್ತು ತೇಜೋಹೀನತೆಯಿಂದ ಬದುಕುವುದು ನಮಗೆ ಯುಕ್ತವಲ್ಲ. ಈ ಶುದ್ಧಿ ಚಳುವಳಿಯಲ್ಲಿ ಈ ಹುಡುಗಿಯರನ್ನು ನಮ್ಮ ಭಗಿನಿಯರಂತೆಯೂ, ಹೆಣ್ಣು ಮಕ್ಕಳಂತೆಯೂ ಭಾವಿಸುವುದು ನಮ್ಮ ಕರ್ತವ್ಯ.

(ಯಂಗ್ ಇಂಡಿಯಾ: ೧೧-೫-೨೧)

ಒಬ್ಬ ಹೆಣ್ಣೇ ಆದರೂ ನಮ್ಮ ಕಾಮತೃಪ್ತಿಗೋಸ್ಕರ ಮೀಸಲಾಗಿರುವ ಪರಿಸ್ಥಿತಿ ಇರುವವರೆಗೂ ಪುರುಷರಾದ ನಾವೆಲ್ಲ ನಾಚಿಕೆಯಿಂದ ನಮ್ಮ ತಲೆ ತಗ್ಗಿಸಬೇಕು. ಭಗವಂತನ ಅತ್ಯಂತ ಘನವಾದ ಕೃತಿ ನಮ್ಮ ಕಾಮತೃಪ್ತಿಯ ವಸ್ತುವಾಗುವ ಬದಲು ಮನುಜ ಕುಲವೇ ಇಲ್ಲವಾಗುವಂತಾದರೆ ಮೇಲೆನಿಸುತ್ತದೆ ನನಗೆ. ಆದರೆ ಇದು ಭಾರತವೊಂದರ ಸಮಸ್ಯೆಯಷ್ಟೇ ಅಲ್ಲ, ಪ್ರಪಂಚದ ಸಮಸ್ಯೆ. (ಯಂಗ್ ಇಂಡಿಯಾ: ೨೧-೭-೨೧)

ಅಬಲೆಯರೆನಿಸಿಕೊಂಡ ಸ್ತ್ರೀಯರ ಮೇಲೆ ಹೇರಿದ ಅವನತಿಗಾಗಿ ಶಾಸನ-ಕರ್ತ ಮಾನವ ಘೋರವಾದ ದಂಡ ತೆರಬೇಕಾಗಿದೆ. ಪುರುಷನ

ಜಾಲದಿಂದ ಮುಕ್ತಳಾದ ಸ್ತ್ರೀ ತನ್ನ ಪೂರ್ಣ ಬೆಳವಣಿಗೆ ಹೊಂದುವಳು. ಆಕೆ, ಪುರುಷ-ಕೃತ ಶಾಸನಗಳ ಮೇಲೆ ದಂಗೆ ಎದ್ದಾಳು. ಆ ದಂಗೆ ನಿಸ್ಸಂಶಯವಾಗಿ ಅಹಿಂಸಾತ್ಮಕವಾಗಿದ್ದರೂ ಯಾವ ರೀತಿಯಲ್ಲಿಯೂ ಪ್ರಭಾವವಿಲ್ಲದಿರುವುದಿಲ್ಲ.

ಭಾರತೀಯ ಪುರುಷರು ತಮ್ಮ ಅಧರ್ಮಯುತವೂ, ಅನೀತಿಯುತವೂ ಆದ ಇಂದ್ರಿಯಭೋಗಕ್ಕೋಸ್ಕರ ಗೌರವರಹಿತ ಜೀವನವನ್ನು ನಡೆಸುತ್ತಿರುವ ಸಹಸ್ರಾರು ಭಗಿನಿಯರ ದುರದೃಷ್ಟದ ಬಗೆಗೆ ಕುರಿತು ಚಿಂತಿಸಲಿ. ಇದರಲ್ಲಿಯೂ ವ್ಯಸನಕರವೆಂದರೆ, ಈ ಹಾನಿಕರ ಜಾಗಗಳಿಗೆ ಹೋಗುತ್ತಿರುವ ಬಹುಮಂದಿ ಜನರು ವಿವಾಹಿತರಾಗಿರುವುದರಿಂದ ಅವರು ಎರಡು ಬಗೆ ಪಾಪಕೃತ್ಯ ಮಾಡಿದಂತಾಗುತ್ತದೆ. ತಾವು ಭಾಷೆಕೊಟ್ಟ ಪತ್ನಿಯರಿಗೆ ಒಂದುಕಡೆ ಪಾಪವೆಸಗಿದರೆ, ಇನ್ನೊಂದೆಡೆ, ತಮ್ಮ ಸ್ವಂತ ಸಹೋದರಿಯರ ಪಾವಿತ್ರ್ಯವನ್ನು ಕಾಪಾಡುವಂತೆ ಇತರ ಭಗಿನಿಯರ ಪಾವಿತ್ರ್ಯವನ್ನೂ ಕಾಪಾಡಬೇಕಾದುದಕ್ಕೆ ಪಾಪವೆಸಗುತ್ತಾರೆ. ಈ ಪಾತಕ ಒಂದು ದಿನವೂ ನಿಲ್ಲದು, ಭಾರತೀಯರಾದ ನಮಗೆಲ್ಲ ಆತ್ಮಗೌರವದ ಪ್ರಜ್ಞೆಬಂದರೆ.

ನಮ್ಮಲ್ಲಿ ಗೌರವಾನ್ವಿತರೆನಿಸಿಕೊಂಡ ಅನೇಕರೇ ಈ ಪಾಪದಲ್ಲಿ ಮುಳುಗಿರದಿದ್ದರೆ, ಈ ಉಪಭೋಗ ಪಾತಕವು ಹಸಿದವನೊಬ್ಬ ಬಾಳೆ ಹಣ್ಣನ್ನು ಕದಿಯುವುದಕ್ಕಿಂತಲೂ, ಹಣದ ಅವಶ್ಯಕತೆಗಾಗಿ ಚಿಕ್ಕಹುಡುಗನೊಬ್ಬ ಜೇಬು ಕಳ್ಳತನ ಮಾಡುವುದಕ್ಕಿಂತಲೂ ಹಿರಿದಾದ ಅಪರಾಧವೆಂದು ಪರಿಗಣಿಸಲ್ಪಡುತ್ತಿತ್ತು. ಆಸ್ತಿ ಕಳ್ಳತನ ಮಾಡುವುದೋ ಅಥವಾ ಸ್ತ್ರೀಯೊಬ್ಬಳ ಮಾನ ಹರಣಮಾಡುವುದೋ, ಈ ಎರಡರಲ್ಲಿ ಯಾವುದು ಸಮಾಜಕ್ಕೆ ಹೆಚ್ಚು ಕೆಡುಕಾದುದು ಮತ್ತು ಅಪಾಯಕಾರಿಯಾದುದು? ಈ ಕುಲಟೆ ಹೆಣ್ಣೇ ತನ್ನ ಮಾನಭಂಗಕ್ಕೆ ತಾನೇ ಸ್ವಲ್ಪಮಟ್ಟಿಗಾದರೂ ಕಾರಣಳೆಂದು ಹೇಳಲ್ಪಡದಿರಲಿ ಇದು ಜೂಜುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಉಳ್ಳವನ ಜೇಬನ್ನು ಜೇಬುಕಳ್ಳತನದ ವೃತ್ತಿಯವನೊಬ್ಬ ಹೇಗೆ ಎಸಗುವನೋ ಹಾಗೆ. ಇವರಲ್ಲಿ ಯಾರು ಹೆಚ್ಚು ಪಾತಕಿಗಳು—ಜೇಬುಕಳ್ಳತನಮಾಡುವ ಸಣ್ಣ ವಯಸ್ಸಿನ ಬಾಲಕನೋ, ತನ್ನ ಬಲೆಗೆ ಬಿದ್ದವರಿಗೆ ಉನ್ಮತ್ತತೆ ಬರುವಂತೆ ಮಾಡಿ, ರುಜುವನ್ನು ತೆಗೆದುಕೊಂಡು ಆಸ್ತಿಯನ್ನೆಲ್ಲ

ಹೊಡೆಯುವ ವೋಸಗಾರನೋ ? ಪುರುಷನು ತನ್ನ ಸೂಕ್ಷ್ಮವೂ ವಿಚಾರ ವಿಹೀನವೂ ಆದ ವಿಧಾನಗಳಿಂದ ಸ್ತ್ರೀಯ ಅಮೂಲ್ಯವಾದ ಪ್ರಜ್ಞೆಯನ್ನೇ ಮೊದಲು ಹರಣಮಾಡಿ, ತರುವಾಯ ಆಕೆಯ ಮೇಲೆ ಎಸಗುವ ಅಪರಾಧ ದಲ್ಲಿ ಆಕೆಯೂ ಭಾಗಿನಿಯಾಗುವಂತೆ ಮಾಡುವುದಲ್ಲವೆ ? ಅಥವಾ ಕೆಲವು ಸ್ತ್ರೀಯರು ಪಂಚಮರಂತೆ ಈ ಬಗೆಯ ಪತಿತ ಜೀವನಕ್ಕೇ ಹುಟ್ಟಿದಾರೆಯೆ ? ಪ್ರತಿಯೊಬ್ಬ ವಿವಾಹಿತ, ಅವಿವಾಹಿತ ಯುವಕನೂ ನಾ ಬರೆದಿರುವ ಇವುಗಳ ಅರ್ಥವನ್ನು ಕುರಿತು ಧ್ಯಾನಮಾಡಲೆಂದು ಕೇಳುತ್ತೇನೆ. ಈ ಸಾಮಾಜಿಕ ವ್ಯಾಧಿ, ನೈತಿಕ ಕುಷ್ಠದ ವಿಷಯವಾಗಿ ನಾ ತಿಳಿದಿರುವುದನ್ನೆಲ್ಲ ಬರೆಯಲಾರೆ. ಉಳಿದುದನ್ನು ಅವನು ತನ್ನ ಕಲ್ಪನೆಯಿಂದ ತುಂಬಿಕೊಂಡು, ತಾನೇ ಆ ಪಾಪಕ್ಕೆ ಪಕ್ಕಾಗಿದ್ದರೆ, ಅದಕ್ಕಾಗಿ ನಾಚಿಕೆಯನ್ನೂ ಹೇಸಿಗೆಯನ್ನೂ ಪಟ್ಟುಕೊಳ್ಳಲಿ. ಪ್ರತಿಯೊಬ್ಬ ಪರಿಶುದ್ಧನಾದ ವ್ಯಕ್ತಿಯೂ, ಎಲ್ಲಿದ್ದರೂ ತನ್ನ ವಾತಾವರಣವನ್ನು ಶುದ್ಧಮಾಡಲು ಪ್ರಯತ್ನಿಸಲಿ. ಈ ಎರಡನೆಯ ವಿಷಯ ಆಚರಿಸುವುದಕ್ಕಿಂತಲೂ ಬರೆಯಲು ಸುಲಭವೆಂದು ನಾ ಬಲ್ಲೆ. ಇದು ಸೂಕ್ಷ್ಮವಾದ ವಿಷಯ ; ತನ್ನ ಸೂಕ್ಷ್ಮತೆಯಿಂದಲೇ ಎಲ್ಲ ವಿಚಾರ ಪರರ ಗಮನವನ್ನೂ ಅಪೇಕ್ಷಿಸುತ್ತದೆ. (ಯಂಗ್ ಇಂಡಿಯಾ : ೧೬-೪-೨೫)

ವಿಶೇಷ ಪರಿಶುದ್ಧತೆಯಿಂದಲೂ ಶೀಲ ಶಕ್ತಿಯಿಂದಲೂ ಕೂಡಿದ ಮಹಿಳೆಯರು ಈ ಪತಿತ ಸ್ತ್ರೀಯರ ಉದ್ಧಾರಕ್ಕೆ ಮನಸ್ಸುಮಾಡಿ ಕಾರ್ಯದಲ್ಲಿ ಪ್ರವೃತ್ತರಾಗುವವರೆಗೂ, ವೇಶ್ಯಾವೃತ್ತಿಯ ಸಮಸ್ಯೆ ಪರಿಹಾರವಾಗದು. ಕಾಮತೃಪ್ತಿಗಾಗಿ ತಮ್ಮನ್ನು ಮಾರಿಕೊಳ್ಳುವುದಕ್ಕೆ ಯುವತಿಯರನ್ನು ಅಡ್ಡ ದಾರಿಗೆಳೆಯುವ ಪುರುಷರನ್ನು ಪುರುಷರೇ ನಿಸ್ಸಂದೇಹವಾಗಿ ಬಹುಮಟ್ಟಿಗೆ ಸರಿಪಡಿಸಬಲ್ಲರು. ವ್ಯಭಿಚಾರವು ಈ ಜಗತ್ತಿನಷ್ಟೇ ಹಿಂದಿನಿಂದ ಬಂದುದು, ಆದರೆ ಅದು ಇಂದು ಪಟ್ಟಣಗಳಲ್ಲಿ ಇರುವಂಥ ರೀತಿಯಲ್ಲಿ ಹಿಂದೆ ಎಂದಾದರೂ ಇದ್ದಿತೇ ಎಂಬುದು ನನ್ನ ಕೌತುಕ. ಇದು ಹೇಗೇ ಇರಲಿ, ಒಂದು ಕಾಲದಲ್ಲಿ ಮನುಜಕುಲವೇ ಈ ಪಾತಕಕ್ಕೆ ಎದುರಾಗಿ ನಿಂತು ಇದನ್ನು ನಿರ್ನಾಮ ಮಾಡೀತು. ಎಷ್ಟೇ ಪ್ರಾಚೀನವಾದರೂ ನಿರ್ನಾಮವಾದ ಅನೇಕ ಪಾತಕಗಳಂತೆ ಇದೂ ಆದೀತು.

(ಯಂಗ್ ಇಂಡಿಯಾ : ೨೮-೫-೨೫)

ಕಳೆಯ ಹೆಸರಿನಲ್ಲಿಯೋ ಅಥವಾ ಇತರ ದುರ್ಭಾವನೆಯಲ್ಲಿಯೋ ದುರ್ಗುಣವನ್ನೇ ಸದ್ಗುಣವನ್ನಾಗಿ ಕಾಣುವ ಪ್ರವೃತ್ತಿ ಈ ಕೀಳು ಬಗೆಯ ಭೋಗಕ್ಕೆ ಒಂದು ಬಗೆಯ ಸೂಕ್ಷ್ಮಗೌರವದ ಹೊದಿಕೆಯನ್ನು ಕೊಟ್ಟಿದೆ. ಇದು ಎದ್ದುಕಾಣುವ ನೈತಿಕ ಕುಷ್ಠಕ್ಕೆ ಕಾರಣಭೂತವಾಗಿದೆ. ಶ್ರದ್ಧಾ ಶೂನ್ಯವಾಗಿ ಅಥವಾ ಈಶ್ವರನಲ್ಲಿ ಕೇವಲ ಯಾಂತ್ರಿಕ ನಂಬಿಕೆಯಿಂದ ಕೂಡಿ ಸುಖಲೋಲುಪತೆಗಳು ಹೆಚ್ಚುತ್ತಾ, ರೋಮ್ ನಗರವು ತನ್ನ ಸಾಮ್ರಾಜ್ಯದ ಉತ್ತುಂಗ ಸ್ಥಿತಿಯಲ್ಲಿದ್ದಾಗಲೇ ಹೊಂದಿದ್ದ ಪತನ ಸ್ಥಿತಿಯನ್ನು ನೆನಪಿಗೆ ತರುವ ಇಂದಿನ ವ್ಯಾಧಿಗೆ ಪರಿಹಾರವನ್ನು ಸೂಚಿಸುವುದು ಸುಲಭವಲ್ಲ. ಶಾಸನದಿಂದ ಇದನ್ನು ಪರಿಹರಿಸಲು ಸಾಧ್ಯವಿಲ್ಲ. ಲಂಡನ್ ನಗರವು ಈ ಪಾಪದಿಂದ ತುಂಬಿ ತುಳುಕುತ್ತಿದೆ. ಪ್ಯಾರಿಸ್ ನಗರವಂತೂ ಕೆಟ್ಟ ಹೆಸರು ಪಡೆದು ಅದೇ ಒಂದು ಸಂಪ್ರದಾಯವಾಗಿ ಹೋಗಿದೆ. ಶಾಸನದಿಂದ ಇದು ಹೋಗುವಂತಿದ್ದರೆ, ಈ ತುಂಬ ಸುಸಂಘಟಿತ ಜನಾಂಗಗಳು ತಮ್ಮ ಪ್ರಮುಖ ನಗರಗಳನ್ನು ಈ ಪಾಪ ವಿಮುಕ್ತವನ್ನಾಗಿ ಮಾಡುತ್ತಿದ್ದವು. ನನ್ನಂಥ ಎಷ್ಟೋಜನ ಸುಧಾರಕರು ಎಷ್ಟು ಬರೆದರೂ ಇದರ ಮೇಲೆ ಕಾಣಬರುವಂಥ ಪರಿಣಾಮವಾಗಲಾರದು.

ಬ್ರಿಟಿಷರ ರಾಜ್ಯಭಾರಕ್ಕೆ ಮುಂಚೆ ಭಾರತದಲ್ಲಿ ವೇಶ್ಯಾವೃತ್ತಿ ಇರಲಿಲ್ಲವೆಂದು ನಾ ಹೇಳುವುದಿಲ್ಲ. ಆದರೆ ಅದು ಇಷ್ಟು ಸರ್ವಸಾಮಾನ್ಯವಾಗಿರಲಿಲ್ಲವೆಂದು ಮಾತ್ರ ಹೇಳಬಲ್ಲೆ. ಈಗ ಇದು ಮಧ್ಯಮ ವರ್ಗದ ಯುವಕರನ್ನು ಬಹಳ ಜಾಗ್ರತೆ ಕೆಡಿಸುತ್ತಿದೆ. ಹಿಂದೆ ಇದು ಕೇವಲ ಮೇಲು ವರ್ಗದ ಕೆಲವರಿಗೆ ಮಾತ್ರ ಅನ್ವಯಿಸಿತ್ತು. ನನ್ನ ಆಶೆಯೆಲ್ಲ ದೇಶದ ಯುವಕರ ಮೇಲಿದೆ. ಈ ಪಾಪಕ್ಕೆ ತುತ್ತಾಗಿರುವ ಕೆಲವರು ಸ್ವಾಭಾವಿಕವಾಗಿಯೇ ಕೆಟ್ಟ ಗುಣದವರಲ್ಲ. ಅವರು ನಿಸ್ಸಹಾಯಕರಾಗಿಯೂ ವಿಚಾರವಿಲ್ಲದವರಾಗಿಯೂ ಇದರೆಡೆಗೆ ಆಕರ್ಷಿಸಲ್ಪಡುತ್ತಾರೆ. ಇದು ಅವರಿಗೂ ಸಮಾಜಕ್ಕೂ ಎಸಗಿರುವ ಹಾನಿಯನ್ನು ಅವರು ಅರಿತುಕೊಳ್ಳಬೇಕು. ನಿಷ್ಠಾಯುತ ಶಿಸ್ತಿನ ಜೀವನವಲ್ಲದೆ ಬೇರೆ ಯಾವುದರಿಂದಲೂ ಅವರಿಗಾಗಲೀ ದೇಶಕ್ಕಾಗಲೀ ವಿನಾಶದಿಂದ ಮುಕ್ತಿ ಇಲ್ಲವೆಂಬುದನ್ನೂ ಅವರು ಅರಿತುಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಅವರು ದೇವರನ್ನು ಸ್ಮರಿಸಿ, ತಮ್ಮನ್ನು

ದುಷ್ಟ ಸೆಳತದಿಂದ ದೂರವಿಡೆಂದು ಪ್ರಾರ್ಥಿಸಿದ ಹೊರತೂ ಶುಷ್ಕ ಶಿಸ್ತಿನಿಂದ ಏನೂ ಪ್ರಯೋಜನವಾಗಲಾರದು.

ಶಾಸನದಿಂದ ಮಾನವನನ್ನು ಒಳ್ಳೆಯವನನ್ನಾಗಿ ಮಾಡಲು ಸಾಧ್ಯವಿಲ್ಲ ವೆಂದು ನಾ ಹಿಂದೆ ತಿಳಿಸಿದೇನೆ. ಮನ ಒಲಿಸಿಕೊಳ್ಳುವ ಶಕ್ತಿ ನನ್ನಲ್ಲಿದ್ದಿದ್ದರೆ ದುಷ್ಟ ಶೀಲದ ಸ್ತ್ರೀಯರು ನಟಿಯರಾಗಿ ಪಾತ್ರವಹಿಸುವುದನ್ನು ಖಂಡಿತ ತಪ್ಪಿಸಿಯೇನು. ಜನರು ಕುಡಿಯುವುದನ್ನೂ ಹೊಗೆಸೊಪ್ಪು ಸೇವಿಸುವುದನ್ನೂ ನಿಲ್ಲಿಸಿಯೇನು. ಪ್ರಸಿದ್ಧ ಹೊಂದಿದ ವೃತ್ತಪತ್ರಿಕೆಗಳಲ್ಲಿಯೂ, ಮಾಸಿಕ ಇತ್ಯಾದಿಗಳಲ್ಲಿಯೂ ಪ್ರಕಟವಾಗುವ ಕೀಳುಬಗೆಯ ಪ್ರಕಟಣೆಗಳನ್ನು ಖಂಡಿತ ನಿಲ್ಲಿಸಿಯೇನು. ಅಶ್ಲೀಲ ಸಾಹಿತ್ಯವನ್ನೂ ಕೆಲವು ಪತ್ರಿಕೆಗಳ ಪುಟಗಳ ಅಂದವನ್ನು ಕೆಡಿಸುವ ಚಿತ್ರಪ್ರಕಟಣೆಯನ್ನೂ ಖಂಡಿತ ನಿಲ್ಲಿಸಿಯೇನು. ಆದರೆ, ಅಯ್ಯೋ ! ಅಂಥ ಮನ ಒಪ್ಪಿಸುವ ಶಕ್ತಿ ನನ್ನಲ್ಲಿಲ್ಲವಾಗಿದೆ. ಇಂಥ ವಿಷಯಗಳನ್ನು ರಾಜ್ಯದ ಅಥವಾ ಕಾಂಗ್ರೆಸಿನ ನಿರ್ಬಂಧಯುತ ಕಾನೂನಿನಿಂದ ನಿಲ್ಲಿಸಲೆತ್ನಿಸುವುದು ವ್ಯಾಧಿಗಿಂತ ಹೆಚ್ಚು ಕೆಡುಕಿನ ಪರಿಣಾಮವುಳ್ಳ ಚಿಕಿತ್ಸೆಯಂತೆ. ವಿಚಾರಯುಕ್ತವೂ, ವಿವೇಕಯುಕ್ತವೂ, ಆರೋಗ್ಯಕರವೂ, ಶುದ್ಧವೂ ಆದ ಸಾರ್ವಜನಿಕ ಅಭಿಪ್ರಾಯ ಇದಕ್ಕೆ ಆವಶ್ಯಕವಾದುದು. ಅಡಿಗೆ ಮನೆಗಳನ್ನು ಶೌಚದ ಮನೆಗಳನ್ನಾಗಿಯೂ, ಹಜಾರಗಳನ್ನು ಕುದುರೆ ಕಟ್ಟುವ ಸ್ಥಳಗಳನ್ನಾಗಿಯೂ ಮಾಡದಿರುವುದಕ್ಕೆ ಯಾವ ಶಾಸನವೂ ಇಲ್ಲ. ಆದರೆ, ಸಾರ್ವಜನಿಕ ಅಭಿಪ್ರಾಯ, ಎಂದರೆ, ಸಾರ್ವಜನಿಕ ರುಚಿ, ಅಂಥ ವಿಪರ್ಯಾಸವನ್ನು ಸಹಿಸದು. ಕೆಲವು ವೇಳೆ ಸಾರ್ವಜನಿಕಾಭಿಪ್ರಾಯದ ವಿಕಾಸವೂ ತಡವಾಗುವುದಾದರೂ, ಅದೊಂದೇ ಪ್ರಭಾವಕಾರೀ ಮಾರ್ಗ. (ಯಂಗ್ ಇಂಡಿಯಾ : ೯-೭-೨೫)

ವ್ಯಭಿಚಾರದ ಮನೆಗಳಿಗೆ ರಹದಾರಿಕೊಟ್ಟು ನಿಯಂತ್ರಿಸಬೇಕೆಂಬ ಸಲಹೆ ಬಂದಿದೆ. ಇದಕ್ಕೆ ಎತ್ತಿರುವ ವಾದ, ಇಂಥ ಇತರ ವಿಷಯಗಳಿಗೆ ಅನ್ವಯಿಸುವ ರೀತಿಯಲ್ಲಿಯೇ, ಇದೆ. ಶಾಸನ ಮಾಡಲಿ, ಮಾಡದಿರಲಿ, ದುಷ್ಕೃತ್ಯವು ನಡದೇ ನಡೆಯುತ್ತದೆಯಾದುದರಿಂದ, ಅದಕ್ಕೆ ಶಾಸನದ ಆಧಾರವನ್ನು ಕಲ್ಪಿಸಿ, ವೇಶ್ಯಾಗೃಹಗಳಿಗೆ ಹೋಗುವವರಿಗೆ ಮಾರ್ಗ ಸುಗಮ ಮಾಡಬೇಕು, ಎಂಬುದೇ ಅದು. ವೇಶ್ಯಾಗೃಹಗಳ ಬಗೆಗೆ ಕಾರ್ಯವೆಸ

ಗುವ ಸ್ತ್ರೀಯರು ಎರಡು ಬಗೆಯ ಪ್ರಚಾರ ನಡೆಸಬೇಕು: (೧) ತಮ್ಮ ಜೀವನೋಪಾಯಕ್ಕಾಗಿ ಯಾವ ಸ್ತ್ರೀಯರು ತಮ್ಮ ಗೌರವವನ್ನು ಮಾರಿಕೊಂಡಿರುವರೋ ಅಂಥವರೊಡನೆ ಕಲೆಯಬೇಕು. (೨) ಯಾವ ಪುರುಷರು ಅಜ್ಞಾನದಿಂದಲೋ, ಮದಾಂಧತೆಯಿಂದಲೋ ತಮ್ಮ ಸೋದರಿಯರನ್ನು ಅಬಲೆಯರೆಂದು ಕರೆಯುವರೋ ಅಂಥವರು ಉತ್ತಮವಾಗಿ ನಡೆಯುವಂತೆ ನಾಚಿಕೆ ಹುಟ್ಟಿಸುವುದು. (ಹರಿಜನ: ೪-೯-೩೬)

ಭಾಗ ೪

ಸಮಾಜದ ಕೆಲವು ಅಹಿತ ವ್ಯಸನಗಳು

★

ಮದ್ಯಪಾನದ ಕೆಡುಕು

★

ಮದ್ಯಪಾನ ಸಮಸ್ಯೆ

ನನ್ನ ದೃಷ್ಟಿಯಲ್ಲಿ, ಮದ್ಯಪಾನ ಸಮಸ್ಯೆಯು ಒಂದು ಬೆಳೆಯುತ್ತಿರುವ ಸಾಮಾಜಿಕ ದುಷ್ಟಪದ್ಧತಿ. ರಾಜ್ಯವು ತನಗೆ ಅವಕಾಶ ಸಿಕ್ಕಿದಾಗ ಇದನ್ನು ತೊಡೆದುಹಾಕಲು ಪ್ರಯತ್ನ ಮಾಡಲೇಬೇಕು. ಇದರ ಉದ್ದೇಶ ಸರ್ವ ವಿದಿತ. ಇದರ ಹಾನಿಯಿಂದ ಕೂಲಿಕಾರರನ್ನೂ ಮತ್ತು ಹರಿಜನರನ್ನೂ ತಪ್ಪಿಸಬೇಕೆಂಬುದು ನಮ್ಮ ಉದ್ದೇಶ. ಇದೊಂದು ಮಹಾ ಸಮಸ್ಯೆ. ಇದು ನಿರ್ನಾಮವಾಗುವುದಕ್ಕೆ ಮುಂಚೆ, ಎಲ್ಲ ಸಾಮಾಜಿಕ ಕಾರ್ಯಕರ್ತರ, ಪ್ರಧಾನವಾಗಿ ಮಹಿಳಾ ಕಾರ್ಯಕರ್ತರ ಶ್ರೇಷ್ಠ ಶಕ್ತಿಗಳು ಇದಕ್ಕೆ ವಿನಿಯೋಗ ವಾಗಬೇಕು. ನಾನು ದಿಗ್ದರ್ಶನ ಮಾಡಿರುವ ಪಾನನಿರೋಧವು (ನಿಸ್ಸಂದೇಹ ವಾಗಿ ಅನಿವಾರ್ಯವಾದುದು) ಸುಧಾರಣೆಯ ಕೇವಲ ಆರಂಭ ಮಾತ್ರ. ಮದ್ಯಪಾನ ಮಾಡುವವನ ಮನೆಯ ಪಕ್ಕದಲ್ಲಿಯೇ ಅವನನ್ನು ಸೆಳೆಯುವ ಪಾನದಂಗಡಿ ಇರುವವರೆಗೆ ನಾವು ಕುಡುಕನ ಮೇಲೆ ಪ್ರಭಾವ ಬೀರಲಾರೆವು.

(ಹರಿಜನ: ೧೪-೮-೩೭)

ಕಳ್ಳತನ, ವ್ಯಭಿಚಾರಗಳಿಗಿಂತ ಹೇಯ

ದೇಶವೆಲ್ಲ ಕುಡಿತದ ಹಾನಿಯಿಂದ ಬೇಸತ್ತಿದೆ ಎಂಬ ನನ್ನ ಸಾಕ್ಷಿ ಯನ್ನು ಒಪ್ಪಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತೇನೆ. ಈ ಪದ್ಧತಿಗೆ

ಗುಲಾಮರಾದ ನತದೃಷ್ಟ ಜನರು ತಮ್ಮಿಂದಲೇ ಪಾರಾಗಬೇಕಾಗಿದೆ. ಕೆಲವರು ನೆರವನ್ನು ಅಪೇಕ್ಷಿಸುವರು. ಪಾನದ ಅಭ್ಯಾಸದ ಬಗೆಗೆ ವಿರುದ್ಧವಾಗಿ ಉಂಟಾಗಿರುವ ಭಾವನೆಯನ್ನು ಉಪಯೋಗಿಸಿಕೊಳ್ಳಬೇಕೆಂದು ನಿಮ್ಮನ್ನು ಸ್ವಾಗತಿಸುತ್ತೇನೆ. ಈ ಚಳುವಳಿ ಸ್ವಾಭಾವಿಕವಾಗಿಯೇ ಉದ್ಭವಿಸಿತು. ಈ ಚಳುವಳಿಯಿಂದ ಸರಕಾರಕ್ಕೆ ರಾಜ್ಯಾದಾಯ ಕಮ್ಮಿಯಾಗುತ್ತದೆಂಬ ಅಂಶ ಏನೂ ಪ್ರಾಮುಖ್ಯವಲ್ಲ. ಈ ದುಷ್ಟಪದ್ಧತಿಯ ಬಗೆಗೆ ದೇಶದ ಸಹನೆ ಮೀರಿದೆ. ಇಂದು ಭಾರತದಲ್ಲಿ ಕಂಡುಬರುವಂಥ ಸುಸಂಘಟಿತ, ವಿಚಾರಯುಕ್ತ ಜನತಾ ಪ್ರತಿಭಟನೆಯ ಎದುರಿಗೆ ಯಾವ ದೇಶದಲ್ಲಿಯೂ ಈ ಪದ್ಧತಿಯನ್ನು ಮುಂದುವರಿಸಲು ಸಾಧ್ಯವಿಲ್ಲ. ನಾಗಪುರದಲ್ಲಿ ಜನಸಮೂಹ ಎಸಗಿರುವ ತಪ್ಪುಗಳೂ, ಅತಿವರ್ತನೆಯೂ, ಏನೇ ಇರಲಿ ಕಾರಣ ನ್ಯಾಯಬದ್ಧ. ತಮ್ಮನ್ನು ಹತವೀರ್ಯರನ್ನಾಗಿ ಮಾಡುತ್ತಿರುವ ದುಷ್ಟಪದ್ಧತಿಯನ್ನು ತೊಡೆದುಹಾಕಬೇಕೆಂದು ಜನ ದೃಢಮನಸ್ಕರಾಗಿದ್ದರು. ಬಲವಂತವಾಗಿ ಭಾರತವು ಕುಡಿತವಿಲ್ಲದ ದೇಶವನ್ನಾಗಿ ಮಾಡಲಾಗದೆಂದೂ, ಕುಡಿಯಬೇಕೆನ್ನುವವರಿಗೆ ಅವಕಾಶವಿರಬೇಕೆಂದೂ, ಹೇಳಲಾಗುತ್ತಿರುವ ಸತ್ಯಾಭಾಸದ ವಾದಕ್ಕೆ ಮರುಳಾಗಬೇಡಿ. ಜನರ ದುಷ್ಟಕೃತ್ಯಗಳಿಗೆ ರಾಜ್ಯ ಪ್ರೋತ್ಸಾಹ ನೀಡಬಾರದು. ಕೆಟ್ಟ ಹೆಸರನ್ನು ಪಡೆದಿರುವ ಪಡಖಾನೆಗಳನ್ನು ನಿಯಮಬದ್ಧ ಮಾಡುವುದಾಗಲೀ, ರಹದಾರಿಯುಳ್ಳವನ್ನಾಗಿ ಮಾಡುವುದಾಗಲೀ ನಮಗೆ ಸಾಧ್ಯವಿಲ್ಲ. ಕಳ್ಳರು ತಮ್ಮ ಕಳ್ಳತನದಲ್ಲಿ ವರ್ಧಿಸುವಂತೆ ನಾವು ಅವಕಾಶ ಕಲ್ಪಿಸಲಾರೆವು. ಮದ್ಯಪಾನವು ಕಳ್ಳತನ ಮತ್ತು ವ್ಯಭಿಚಾರಕ್ಕಿಂತ ಹೇಯವಾದುದೆಂದು ನಾನು ನಂಬುತ್ತೇನೆ. ಈ ಎರಡಕ್ಕೂ ಅದು ಎಷ್ಟೋಸಲ ಮಾತೃಸ್ಥಾನವಿದ್ದಂತೆ. ಕುಡಿತದಂಗಡಿಗಳನ್ನು ನಿಲ್ಲಿಸುವುದಕ್ಕೂ ಅದರಿಂದ ಬರುವ ರಾಜ್ಯಾದಾಯವನ್ನು ಪೂರ್ಣವಾಗಿ ಇಲ್ಲದಂತೆ ಮಾಡುವುದಕ್ಕೂ ನೀವು ಜನತೆಯೊಂದಿಗೆ ಸಹಕರಿಸಬೇಕೆಂದು ಬೇಡುತ್ತೇನೆ. (ಯಂಗ್ ಇಂಡಿಯಾ : ೮-೬-೨೧)

ಭಾರತದಲ್ಲಿ ಹೊಟ್ಟೆಗಿಲ್ಲದ ಸ್ತ್ರೀ ಪುರುಷರು ಸಣ್ಣಪುಟ್ಟ ಕಳ್ಳತನಗಳನ್ನು ಮಾಡಿ, ಶಿಕ್ಷೆಗೊಳಗಾಗುವುದನ್ನು ನಾ ನೋಡಿದೇನೆ. ಈ ಸಣ್ಣ

ಪುಟ್ಟ ಕಳ್ಳತನಗಳಿಗಿಂತಲೂ ಮಾದಕ ದ್ರವ್ಯಗಳನ್ನು ಸೇವಿಸುವುದು ಹೆಚ್ಚು ಕೆಟ್ಟದೆಂದು ನನ್ನ ನಂಬಿಕೆ. ಇದನ್ನು ನಾನು ಇಷ್ಟವಿಲ್ಲದಿದ್ದರೂ ಸಹಿಸುತ್ತೇನೆ, ನಿಜ. ಏಕೆಂದರೆ, ಪ್ರೇಮಧರ್ಮದ ಪೂರ್ಣಾನುಭವವಿಲ್ಲದಿರುವುದರಿಂದ ಸೌಮ್ಯರೀತಿಯ ದಂಡ ಶಾಸನವನ್ನು ನಿಸ್ಸಹಾಯಕತೆಯಿಂದ ನಾ ಸಹಿಸುತ್ತೇನೆ. ಈ ಭಾವನೆ ನನ್ನಲ್ಲಿರುವವರೆಗೆ ಈ ಕೆಟ್ಟ ದ್ರವ್ಯವನ್ನು ತಯಾರಿಸುವವರಿಗೂ, ಆಗಾಗ ಎಚ್ಚರವಿತ್ತರೂ ಬಿಡದೆ ಕುಡಿಯುವವರಿಗೂ ಕ್ಷಿಪ್ರರೀತಿಯ ಶಿಕ್ಷೆ ವಿಧಿಸುವುದನ್ನು ನಾ ಸಮರ್ಥಿಸಲೇಬೇಕು. ನನ್ನ ಮಕ್ಕಳು ಬೆಂಕಿಗಾಗಲೀ ಆಳವಾದ ನೀರಿನ ಕಡೆಗಾಗಲೀ ಓಡುತ್ತಿರುವುದನ್ನು ನೋಡಿದರೆ, ಬಲವಂತದಿಂದ ತಪ್ಪಿಸಲು ನಾ ಹಿಂದೆ ಮುಂದೆ ನೋಡುವುದಿಲ್ಲ. ಮದ್ಯಪಾನಕ್ಕೆ ಪರಿದೋಡುವುದು ಪ್ರಜ್ವಲಿಸುವ ಬೆಂಕಿ ಅಥವಾ ಪ್ರವಾಹದೆಡೆಗೆ ಪರಿದೋಡುವುದಕ್ಕಿಂತಲೂ ಹೆಚ್ಚು ಅಪಾಯಕರ. ಮೊದಲನೆಯದು ದೇಹವೊಂದನ್ನು ನಾಶಮಾಡಿದರೆ, ಎರಡನೆಯದು ದೇಹ, ಆತ್ಮ, ಎರಡನ್ನೂ ನಾಶಮಾಡುತ್ತದೆ. (ಯಂಗ್ ಇಂಡಿಯಾ : ೮-೮-೨೯)

ಮದ್ಯಪಾನದಿಂದ ರಾಷ್ಟ್ರಕ್ಕೇ ವಿನಾಶ

ಶೀತದೇಶಗಳ ವಿಷಯ ಏನೇ ಆಗಿರಲಿ, ನಮ್ಮ ದೇಶಕ್ಕಂತೂ ಮದ್ಯಪಾನದ ಆವಶ್ಯಕತೆಯೇ ಇಲ್ಲವೆಂದು ನನ್ನ ನಂಬಿಕೆ. ಯಾವ ದೇಶ ಕುಡಿತದ ಅಭ್ಯಾಸಕ್ಕೆ ತುತ್ತಾಗಿದೆಯೋ ಆ ದೇಶಕ್ಕೆ ವಿನಾಶವಲ್ಲದೆ ಬೇರೆ ಗತಿ ಇಲ್ಲ. ಈ ಅಭ್ಯಾಸಕ್ಕೆ ತುತ್ತಾದ ಚಕ್ರಾಧಿಪತ್ಯಗಳು ನಾಶವಾಗಿರುವುದನ್ನು ಚರಿತ್ರೆ ತೋರಿಸುತ್ತದೆ. ನಮ್ಮ ದೇಶದಲ್ಲಿಯೇ ಶ್ರೀ ಕೃಷ್ಣನ ಕುಲದವರಾದ ಯಾದವರು ಇದರಿಂದ ನಾಶಹೊಂದಿದರು. ಈ ಪೈಶಾಚಿಕ ದುಷ್ಟ ಪದ್ಧತಿಯೂ ರೋಮ್ ದೇಶದ ವಿನಾಶ ಕಾರಣಗಳಲ್ಲಿ ಒಂದೆಂಬುದು ನಿಸ್ಸಂದೇಹ. ಆದುದರಿಂದ, ನೀವು ಚೆನ್ನಾಗಿ ಬಾಳಬೇಕೆಂದರೆ, ಈಗಲೇ ಎಚ್ಚತ್ತು ಈ ದುಷ್ಟ ಪದ್ಧತಿಯಿಂದ ದೂರವಾಗಿ.

(ಯಂಗ್ ಇಂಡಿಯಾ : ೧೧-೪-೨೯)

ಮದ್ಯಪಾನವು ಇಸ್ಲಾಂ ಮತ್ತು ಹಿಂದೂಧರ್ಮ ಗಳಿಗೆ ವಿರುದ್ಧ

ಭಾರತದ ಪ್ರಜೆಗಳಲ್ಲಿ ಬಹುಸಂಖ್ಯಾತರು ಮದ್ಯಪಾನ ಮಾಡುವುದಿಲ್ಲ. ಉನ್ಮಾದಕ ವಸ್ತುಗಳನ್ನು ಸೇವಿಸುವುದು ಇಸ್ಲಾಂ ಮತ್ತು ಹಿಂದೂಧರ್ಮ ಗಳಿಗೆ ವಿರುದ್ಧ. (ಯಂಗ್ ಇಂಡಿಯಾ : ೮-೪-೨೬)

ಮದ್ಯಪಾನವು ಸೈತಾನನ ಸೃಷ್ಟಿ. ಸೈತಾನನು ಸ್ತ್ರೀ ಪುರುಷರನ್ನು ತಪ್ಪುಮಾರ್ಗ ಹಿಡಿಯುವಂತೆ ಮಾಡಲು ಅವರ ಮುಂದೆ ಈ ಸ್ವರೂಪದಲ್ಲಿ ನರ್ತಿಸಲಾರಂಭಿಸಿದನೆಂದು ಇಸ್ಲಾಂ ಹೇಳುತ್ತದೆ.

(ಯಂಗ್ ಇಂಡಿಯಾ : ೧೪-೧-೩೨)

ಮಾದಕ ದ್ರಾಕ್ಷಾರಸಗಳೂ - ಯೆಹೂದ್ಯ ಧರ್ಮವೂ

ಯೆಹೂದ್ಯರ ಪರವಾಗಿ ಮಾದಕ ದ್ರವ್ಯಗಳ ಸೇವನೆಗೆ ಡಾ. ಗಿಲ್ಡರ್ ಅವರಿಂದ ಒಪ್ಪಿಗೆ ಬಂದುದನ್ನು ನೋಡಿ ನನಗೆ ತುಂಬ ವ್ಯಾಕುಲವಾಯಿತು. ಜೋಹನ್ಸ್‌ಬರ್ಗ್‌ನಲ್ಲಿ ನನಗೆ ಅನೇಕ ಯೆಹೂದ್ಯ ಗೆಳೆಯರಿದ್ದರು. ಅವರೊಡನೆ ನಾ ಪಡೆದ ಅನುಭವಕ್ಕೆ ಬೊಂಬಾಯಿಯವರ ಅಭಿಪ್ರಾಯ ಪೂರ್ಣ ವ್ಯತಿರಿಕ್ತವಾಗಿದೆ. ಆದುದರಿಂದ ಜೋಹನ್ಸ್‌ಬರ್ಗ್‌ನಲ್ಲಿರುವ ಪ್ರದಾನ ಯೆಹೂದ್ಯಮತ ಗುರುವಿನ ಅಧಿಕಾರಯುತ ಅಭಿಪ್ರಾಯವನ್ನು ತಿಳಿಸಬೇಕೆಂದು ನನ್ನ ಗೆಳೆಯ ಹೆರ್. ಎಚ್. ಕಾಲನ್‌ಬಾಕ್ ಅವರಿಗೆ ಪತ್ರಬರೆದೆ. ಡಾ. ಲಾಂಡಾ ಅವರು ಕಳಿಸಿರುವ ಅಭಿಪ್ರಾಯ ಹೀಗಿದೆ :

"ಸಂಪ್ರದಾಯಬದ್ಧ ಯೆಹೂದ್ಯ ವಿಶೇಷ ರೀತಿಯಲ್ಲಿ ತಯಾರಿಸಿದ ದ್ರಾಕ್ಷಾರಸವನ್ನು (ಕಾರ್ಷೆ) ವಿಶ್ರಾಂತಿ ದಿನದ (ಸಬ್ಬತ್) ಪವಿತ್ರತೆಗಾಗಿಯೂ, ಹಬ್ಬದ ದಿನಗಳಲ್ಲಿ, ಪ್ರಾರ್ಥನಾ ಮಂದಿರಗಳಲ್ಲಿ ಪವಿತ್ರ

ಪ್ರಾರ್ಥನೆಯ ತರುವಾಯವೂ, ಗೃಹಗಳಲ್ಲಿ ಭೋಜನಕ್ಕೆ ಮುಂಚೆಯೂ, ಪಾಸೋವರ್* ಹಬ್ಬದ ಹಿಂದಿನ ದಿನಗಳ ಎರಡು ಸಂಜೆಗಳಲ್ಲಿಯೂ ಸೇವಿಸಬಹುದು.

ಈ ದ್ರಾಕ್ಷಾರಸ ಹುಳಿಹಿಡಿಯುವಂತೆ ಮಾಡಬೇಕಾಗಿಲ್ಲ.

ದ್ರಾಕ್ಷಾರಸವನ್ನು ಉಪಯೋಗಿಸುವುದು ಸಾಂಪ್ರದಾಯಕ ಯೆಹೂದ್ಯರು ಅಪೇಕ್ಷಿಸುವ ಒಂದು ರೂಢಿಯೇ ಹೊರತು ಧಾರ್ಮಿಕ ನಿಯಮವಲ್ಲ. ಇದನ್ನು ಯೆಹೂದ್ಯರ ಧರ್ಮಗ್ರಂಥಗಳಿಂದ ಅರಿಯಬಹುದು."

ಬೊಂಬಾಯಿಯ ಯೆಹೂದ್ಯರು ಈ ಅಭಿಪ್ರಾಯವನ್ನು ಆಧಾರಯುತವೆಂದು ಒಪ್ಪುವುದಾದರೆ, ಮದ್ಯಪಾನದ ಬಗೆಗೆ ತಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಂಡು, ದ್ರಾಕ್ಷಾರಸವೆಂದರೆ, ಅದರ ಮೂಲ ಅರ್ಥದಲ್ಲಿರುವಂತೆ ಹೊಸ ದ್ರಾಕ್ಷಿಯ ರಸವೆಂದು ಭಾವಿಸುವರೆಂದು ನಂಬಿದೇನೆ. ಜೊತೆಗೆ, ಇದು ಕೇವಲ ಸಂಪ್ರದಾಯವೇ ಹೊರತು ಧರ್ಮಗ್ರಂಥಗಳ ಆಧಾರ ಹೊಂದಿಲ್ಲವೆಂಬುದನ್ನು ಲಕ್ಷಿಸಬೇಕಾದುದು ಮುಖ್ಯ.

(ಹರಿಜನ : ೧೬-೯-೩೯)

ಶೀತವಲಯದಲ್ಲಿಯೂ ಅಪಾಯಕರ

ಶೀತವಲಯದಲ್ಲಿ ಮದ್ಯಸಾರ ಆವಶ್ಯಕವಾದೀತೇನೋ ಎಂದು ನಾ ಹೇಳಿದ ವಿಷಯಕ್ಕೂ ಸಂಬಂಧಿಸಿದಂತೆ, 'ಮದ್ಯಪಾನ ನಿಷೇಧ' ಎಂಬ ಪತ್ರಿಕೆಯಲ್ಲಿ ಜಿ. ಇ. ಜಿ. ಪ್ಯಾರ್ಟ್ಲೀ ಎಂಬುವವರು ಅದರಿಂದ ಉಂಟಾಗುವ ಶಾಖದ ವಿಚಾರವನ್ನು ಚರ್ಚಿಸಿ ಬರೆದಿರುವ ಸ್ವಾರಸ್ಯವಾದ ಈ ಕೆಳಗಿನ ವಾಕ್ಯವೃಂದವನ್ನು ಗೆಳೆಯರೊಬ್ಬರು ನನಗೆ ಕಳಿಸಿದಾರೆ:

(* ದೇವರು ಈಜಿಪ್ಟಿನವರ ಹಿರಿಯ ಮಕ್ಕಳನ್ನು ವಧೆಗೀಡುಮಾಡುವಾಗ ಅಲ್ಲಿದ್ದ ಯೆಹೂದ್ಯರ ಮನೆಗಳ ಗೊಡವೆಗೆ ಹೋಗದೆ ಅವರನ್ನು ಸಂರಕ್ಷಿಸಿದುದರ ಸ್ಮಾರಕವಾಗಿ ಆಚರಿಸುವ ಯೆಹೂದ್ಯರ ಒಂದು ಹಬ್ಬ.)

" ಸರಳವಾದ, ಯಾಂತ್ರಿಕವಾದ, ಪರಿಶೀಲನೆಯೇ ಈ ಪರಿಣಾಮಗಳ ತಪ್ಪು ತಿಳಿವಳಿಕೆಯ ಬಗೆಗೆ ಎಚ್ಚರಿಕೆ ನೀಡೀತು. ಶರೀರದ ಶಾಖದಲ್ಲಿ ಏನೂ ಬದಲಾವಣೆಯಾಗುವುದಿಲ್ಲ. ಹೆಚ್ಚು ಶಾಖದಿಂದ ಕೂಡಿದ ರಕ್ತವು ಮೇಲಕ್ಕೆ, ಶೈತ್ಯವಾಗಿರುವ ಜಾಗಕ್ಕೆ ಬರುತ್ತದೆ. ಇದರಿಂದ ಒಟ್ಟು ಶರೀರದ ಶಾಖವು ಕಮ್ಮಿಯಾಗುತ್ತದೆ. ತುಂಬ ಶೈತ್ಯದಿಂದ ತೀವ್ರರಕ್ಷಣೆಯನ್ನು ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿಯೂ ಮದ್ಯಸಾರವು ನಿರುಪಯೋಗವೂ, ಅಪಾಯಕರವೂ, ಆಗಿದೆ. ಫ್ರಿಡಾಫ್ ನಾನ್‌ಸೆನ್ ಹೀಗೆ ಹೇಳಿದಾನೆ? 'ಶೀತವಲಯಗಳ ಪ್ರಯಾಣದಲ್ಲಿ ಎಲ್ಲ ಬಗೆಯ ಉತ್ತೇಜಕ ಮತ್ತು ಮಾದಕ ವಸ್ತುಗಳ ಉಪಯೋಗದ ವಿರುದ್ಧವಾಗಿ ನನ್ನ ಅನುಭವಪೂರ್ಣ ನಿಶ್ಚಯಕ್ಕೆ ಬಂದಿದೇನೆ.' ಮದ್ಯಸಾರ ಹೆಪ್ಪುಕಟ್ಟುವಿಕೆಯಿಂದ ಸಾವಿನ ಸಂಭವ ಹೆಚ್ಚು."

ಭಾರತದಲ್ಲಿರುವ ನಮಗೆ ಇಂಥ ಪ್ರಮಾಣ ಅನಾವಶ್ಯಕ. ಉಷ್ಣ ವಲಯದಲ್ಲಿರುವ ನಮಗೆ ಸೂರ್ಯನೇ ಎಲ್ಲ ಶಾಖವನ್ನೂ ಕೊಡುವುದರಿಂದ ಮದ್ಯಸಾರ ಮತ್ತಿತರ ಪಾನೀಯಗಳನ್ನು ಉಪಯೋಗಿಸುವುದಕ್ಕೆ ಪ್ರತ್ಯಕ್ಷವೂ, ಅಪ್ರತ್ಯಕ್ಷವೂ ಆದ ಕಾರಣವೇ ಇಲ್ಲ.

(ಹರಿಜನ: ೨೮-೮-೩೭)

ಮದ್ಯಪಾನ ನಿರ್ಮೂಲನ ವಿಧಾನಗಳು

★

ಖಾ ಸ ಗೀ ಪ್ರ ಯ ತ್ನ

★

ಪಾನ ನಿರೋಧ

ಕುಡಿತ ಪದ್ಧತಿಯ ಬಗೆಗೆ ನಡೆಯಬೇಕಾದ ಕಾರ್ಯ ಪ್ರಾಥಮಿಕವಾಗಿ ನಮ್ಮಿಂದಲೇ ಆಗಬೇಕು. ಈ ವಿಷಯದಲ್ಲಿ ಸರಕಾರ ಮಾಡಬಹುದಾದ ಅತ್ಯಂತ ಹೆಚ್ಚಿನ ಕಾರ್ಯವೆಂದರೆ, ಅಥವಾ ಮಾಡಿಸಬಹುದಾದ ಕಾರ್ಯವೆಂದರೆ, ಹೆಂಡ ಮಾರಲು ಅನುಜ್ಞೆಯನ್ನು ನಿಲ್ಲಿಸುವುದು. ಇದು ಕುಡುಕನನ್ನು ದುಷ್ಟ ಪದ್ಧತಿಯಿಂದ ತಪ್ಪಿಸಲಾರದು. ಆ ಕಾರ್ಯವನ್ನು ಖಾಸಗೀ ಪ್ರಯತ್ನದಿಂದಲೇ ಮಾಡಬೇಕು. (ಯಂಗ್ ಇಂಡಿಯಾ : ೧೩-೯-೨೮)

ರಚನಾತ್ಮಕ ಕಾರ್ಯಕ್ರಮ

ಕುಡುಕನ ಅಂತರಂಗವನ್ನು ಭೇದಿಸಿದ ಹೊರತು ನಮ್ಮ ಪ್ರಯತ್ನ ಫಲಗೂಡದು. ಕುಡಿತಕ್ಕೆ ಕಾರಣವೇನೆಂಬುದನ್ನೂ ಅದಕ್ಕೆ ಪ್ರತಿಯಾಗಿ ಇನ್ನಾವ ಪಾನೀಯವನ್ನು ಉಪಯೋಗಿಸಬಹುದೆಂಬುದನ್ನೂ ನಾವು ತಿಳಿಯಬೇಕು. ಭಾರತದಲ್ಲಿರುವ ಎಲ್ಲ ಕುಡುಕರ ಜನಗಣತಿಯನ್ನು ತೆಗೆದುಕೊಳ್ಳಬೇಕು. (ಯಂಗ್ ಇಂಡಿಯಾ : ೨-೩-೨೨)

ಪಿಕೆಟಿಂಗ್

ಪಿಕೆಟಿಂಗ್ ತಾತ್ಕಾಲಿಕ ಸ್ವರೂಪವುಳ್ಳದಾಗಿರಬೇಕು. ಅದು ಔಷಧಿಯ ರೂಪದಲ್ಲಿ ತೆಗೆದುಕೊಳ್ಳುವ ಉತ್ತೇಜಕ ವಸ್ತುವಿನಂತೆ. ಕುಡಿತವು ಒಂದು ದುರ್ಗುಣಕ್ಕಿಂತಲೂ ಹೆಚ್ಚಾಗಿ ಒಂದು ವ್ಯಾಧಿಯೇ ಸರಿ. ತಮಗೆ ಸಾಧ್ಯವಾಗುವುದಾದರೆ, ಅದನ್ನು ಸಂತೋಷದಿಂದ ತ್ಯಜಿಸಲು ಸಿದ್ಧವಿರುವ ಕೋಟ್ಯಂತರ ಮಂದಿಯನ್ನು ನಾ ಬಲ್ಲೆ. ಇದರ ದುಷ್ಟ ಸೆಳೆತವನ್ನು ತಮ್ಮಿಂದ ದೂರವಿಡಬೇಕೆಂದು ಕೇಳಿಕೊಂಡ ಕೆಲವರನ್ನು ನಾ ಬಲ್ಲೆ. ಅವರ ಪ್ರಾರ್ಥನೆಯಂತೆಯೇ ದುಷ್ಟ ಸೆಳೆತವನ್ನು ದೂರವಿಟ್ಟರೂ, ಅವರು ಕಳ್ಳತನದಿಂದ ಕುಡಿಯುವುದನ್ನೂ ನಾ ಬಲ್ಲೆ. ಇದರಿಂದಲೇ ದುಷ್ಟ ಸೆಳತವನ್ನು ದೂರವಿಟ್ಟುದೇ ತಪ್ಪೆಂದು ನಾ ಭಾವಿಸಲಾರೆ. ವ್ಯಾಧಿಗ್ರಸ್ತರು ಅವರಿಂದಲೇ ಸಂರಕ್ಷಿಸಲ್ಪಡಬೇಕು. ನನ್ನ ಮಗನೊಬ್ಬ ದ್ಯೂತವಾಡಲು ತುತ್ತಾಗಿದಾನೆಂದೂ ಮತ್ತು ಒಂದು ದ್ಯೂತಗಾರರ ಕೂಟ ಅವನಿಗೆ ದುಷ್ಟ ಸೆಳೆತವನ್ನು ಕೊಡುತ್ತದೆಂದೂ ಭಾವಿಸೋಣ. ಆಗ ನಾನು ಬಲಪ್ರಯೋಗ ಮಾಡಿ ಆ ಕೂಟವನ್ನೇ ಒಡೆಯಲೆತ್ನಿಸಬೇಕು; ಅಥವಾ ಸಾಧ್ಯವಾದರೆ, ಜೂಜು ಕಟ್ಟೆಯ ಬಳಿ ಕಾವಲುಗಾರರನ್ನು ಹಾಕಿ, ನನ್ನ ಮಗನೇ ಅಲ್ಲಿಗೆ ಹೋಗಲು ನಾಚಿಕೊಳ್ಳುವಂತೆ ಮಾಡಬೇಕು. ನನ್ನ ಮನೆಗೆ ಸ್ವಲ್ಪ ದೂರದಲ್ಲಿ ಇತರ ಜೂಜುಕಟ್ಟೆಗಳೂ ಇರಬಹುದು. ಆದರೂ ಜೂಜು ಕೂಟದ ಬಳಿ ನಾನು ಕಾವಲುಗಾರನನ್ನು ನೇಮಿಸಿದುದು ಯುಕ್ತವೆಂದು ಪರಿಗಣಿಸಲ್ಪಡುವುದು. ನಾನು ನನ್ನ ಮಗನಿಗೆ ದ್ಯೂತವಾಡಲು ಕಷ್ಟವಾಗುವಂತೆ ಮಾಡಬೇಕು. ಸುಧಾರಕನು ಸರಕಾರ ಪಾನ ನಿಷೇಧಮಾಡುವ ತತ್ವವನ್ನು ಒಪ್ಪುವುದಾದರೆ, ಅದರಿಂದ ಉಪಲಬ್ಧವಾಗುವ ಪಿಕೆಟಿಂಗ್ ಕ್ರಮವನ್ನೂ ಒಪ್ಪಬೇಕು. ಇದು ಎಲ್ಲಿಯವರೆಗೆ ಸಾರ್ವಜನಿಕ ಅಭಿಪ್ರಾಯದ ಮೇಲೆ ಸರಕಾರ ದಬ್ಬಾಳಿಕೆಯನ್ನು ನಡೆಸುತ್ತದೋ ಅಲ್ಲಿಯ ವರೆಗೂ ನಡೆಯಬೇಕು. ಒಂದು ವೇಳೆ ಸರಕಾರವೇ ಕುಲಟೆಯರಿಗೆ ಊರಿನ ಒಂದೊಂದು ಬೀದಿಯಲ್ಲಿಯೂ ಒಂದೊಂದು ಭವ್ಯ ಕಟ್ಟಡ ಕಟ್ಟಿಸಿಕೊಟ್ಟು ಅವರ ವೃತ್ತಿಯನ್ನು ನಡೆಸಲು ಅಪ್ಪಣೆ

ಕೊಟ್ಟರೆ, ಸಾರ್ವಜನಿಕರು ಏನನ್ನು ಮಾಡಬೇಕು? ಪಾಪದ ಕೇಂದ್ರಗಳಾದ ಈ ಕಟ್ಟಡಗಳು ನೆಲಸಮವಾದ ಹೊರತು, ಅವುಗಳ ಸುತ್ತ ಕಾವಲು ಹಾಕಿ, ದುಷ್ಟ ಸೆಳೆತಕ್ಕೆ ಜನ ಬಲಿಯಾಗದಂತೆ ಎಚ್ಚರಿಸುವುದು ಕರ್ತವ್ಯವೆನಿಸುವುದಿಲ್ಲವೆ? ಈ ಕಾವಲಿಗೆ ಶೀಲವಂತರಾದ ಪುರುಷರನ್ನೂ, ಮಹಿಳೆಯರನ್ನೂ, ಉಪಯೋಗಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ನಾ ಒಪ್ಪಿಕೊಳ್ಳುತ್ತೇನೆ. ಸಾರ್ವಜನಿಕಾಭಿಪ್ರಾಯದ ವ್ಯತಿರಿಕ್ತವಾಗಿಯೂ ಕುಡಿಯಲೆತ್ನಿಸುವ ಜನಕ್ಕೆ ಆಗಬಹುದಾದ ದೌರ್ಜನ್ಯವನ್ನು ತಪ್ಪಿಸಲು ಇವರು ಯತ್ನಿಸಬೇಕು. ಸರಕಾರದಿಂದ ನೆರವು ದೊರೆಯದ ಸನ್ನಿವೇಶದಲ್ಲಿ ಪಿಕೆಟಿಂಗ್ ಮಾಡುವುದು ನಾಗರಿಕ ಪ್ರಜೆಯ ಅವಶ್ಯ ಕರ್ತವ್ಯವಾಗುತ್ತದೆ. ಕಳ್ಳರಿಂದ ಎಚ್ಚರಿರಬೇಕೆಂಬುದಕ್ಕೆ ಪೋಲೀಸರ ಕಾವಲು ಪಿಕೆಟಿಂಗ್ ಅಲ್ಲದೆ ಮತ್ತೇನು? ಕಳ್ಳನು ಒಬ್ಬರ ಮನೆಯೊಳಕ್ಕೆ ಕನ್ನ ಹಾಕುವನೆಂಬ ಸೂಚನೆ ಕಂಡುಬಂದಾಗ ಪೋಲೀಸರು ಬಂದೂಕವನ್ನು ಉಪಯೋಗಿಸುವರು. ಆದರೆ ಪಿಕೆಟಿಂಗ್ ಮಾಡುವವರು, ತಮ್ಮ ದುರ್ಬಲ ಸಹೋದರರನ್ನು ಕುಡಿತದ ದುಷ್ಪರಿಣಾಮಗಳಿಂದ ಎಚ್ಚರಗೊಳಿಸುವುದಕ್ಕಾಗಿ ನಾಚಿಕೆಯುಂಟುಮಾಡುವ ಶಕ್ತಿಯನ್ನು ಎಂದರೆ ಪ್ರೇಮವನ್ನು ಉಪಯೋಗಿಸುವರು.

(ಯಂಗ್ ಇಂಡಿಯಾ: ೬-೭-೨೧)

ಪಿಕೆಟಿಂಗ್ ಮಾಡುವ ಹಕ್ಕು

ಮದ್ಯ ಮಾರಾಟಗಾರ ಅಥವಾ ಕುಡುಕ ಇವರಿಗೆ ವಿರೋಧವಾಗಿ ದೌರ್ಜನ್ಯವನ್ನೋ, ದ್ವೇಷವನ್ನೋ ತೋರಿಸದೆ ನಡೆಸುವ ಪಿಕೆಟಿಂಗ್ ಒಂದು ನೈತಿಕ ಕರ್ತವ್ಯವಾಗುತ್ತದೆ. ಅದು ಪಾನ ನಿರೋಧ ಚಳುವಳಿಗೆ ತುಂಬ ಪ್ರೋತ್ಸಾಹವಿತ್ತಿದೆ ಎಂಬುದನ್ನು ಯಾರೂ ಇಲ್ಲವೆನ್ನರು. ಮೊನ್ನೆ ತಾನೆ ಕರಮ್‌ಸಾದಿನ ಕ್ರೈಸ್ತ ಮತ್ತು ಹಿಂದೂ 'ಥೇಡ್' ಜನಾಂಗದವರು ಪಿಕೆಟಿಂಗ್ ಪರಿಣಾಮವಾಗಿ ತಮ್ಮ ಸುತ್ತಮುತ್ತಲೂ ಇದ್ದ ಕುಡಿತ ಪದ್ಧತಿಯನ್ನು ತೊಡೆದುಹಾಕಲು ತಮಗೆ ಸಾಧ್ಯವಾಯಿತೆಂದು ಕೃತಜ್ಞತಾಪೂರ್ವಕವಾಗಿ ನನಗೆ ತಿಳಿಸಿದರು. ನವೆಂಬರ್ ೧೭ ರಂದು ಮತ್ತು

ಮುಂದಿನ ಎರಡು ದಿವಸಗಳೂ ಬೇಕೆಂದೇ ದುರುದ್ದೇಶ ಪೂರ್ವಕವಾಗಿ ಪಾನದಂಗಡಿಗಳನ್ನು ನಾಶ ಮಾಡಿದುದರಿಂದಲೂ ಪಾರ್ಸೀ ಮತ್ತು ಕ್ರೈಸ್ತ ಜನರೊಂದಿಗೆ ವಿನಯರಹಿತರಾಗಿ ನಡೆದುಕೊಂಡುದರಿಂದಲೂ ಬೊಂಬಾಯಿ ತಾತ್ಕಾಲಿಕವಾಗಿ ತನ್ನ ಈ ಹಕ್ಕನ್ನು ಕಳೆದುಕೊಂಡಿದೆ. ಇದು ಹೇಗೇ ಆಗಲಿ, ಇನ್ನು ಎಲ್ಲಿಯೇ ಆದರೂ ಪಿಕೆಟಿಂಗ್ ನಡೆದರೆ, ಅದು ನಿರ್ದೋಷ ಶೀಲತೆಯುಳ್ಳ ಪುರುಷರಿಗೂ ಸ್ತ್ರೀಯರಿಗೂ ವಹಿಸಲ್ಪಟ್ಟು ಅತ್ಯಂತ ಸ್ನೇಹಮಯ ಭಾವದಿಂದ ನಡೆಸಲ್ಪಡುವುದೆಂದು ನಂಬಿದೇನೆ. ಜನರನ್ನು ಬಲಾತ್ಕಾರವಾಗಿ ಸಜ್ಜನರನ್ನಾಗಿ ಮಾಡಲು ನಾವು ಇಚ್ಛಿಸುವುದಿಲ್ಲ.

(ಯಂಗ್ ಇಂಡಿಯಾ : ೨೨-೧೧-೨೧)

ಅದನ್ನು ಮಾಡುವುದು ಹೇಗೆ ?

ಬಂಗಾಳದ ಸೇವಕ ಸಂಘದ ಕಾರ್ಯದರ್ಶಿಯ ಪ್ರಶ್ನೆಗೆ ಮಿ. ಆಂಡ್ರೂ ಸರು ಉತ್ತರ ಕೊಡಲು ಯತ್ನಿಸಿದಾರೆ. ಅವರ ಉತ್ತರ ಪುಸ್ಸಿಫುಟ್ ಜಾನ್‌ಸನ್ ಅವರ ಮಾರ್ಗವನ್ನು ಅನುಸರಿಸುತ್ತದೆ. ಆತ, ಕೆಲವು ಆಂಗ್ಲ ವಿದ್ಯಾರ್ಥಿಗಳನ್ನು ಪರಿವರ್ತಿಸಲು ಪ್ರಯತ್ನಿಸುತ್ತಿದ್ದಾಗ ಕಲ್ಲೇಟಿಗೆ ಗುರಿಯಾದ. ಈ ಏಟಿನ ಪರಿಣಾಮವು ಒಂದು ಕಣ್ಣಿನ ನಾಶದಲ್ಲಿ ಕೊನೆಗೊಂಡಿತು. ಆತ, ತಪ್ಪಿತಸ್ಥರನ್ನು ಕ್ಷಮಿಸಿದ್ದಲ್ಲದೆ ಬ್ರಿಟಿಷ್ ಸರಕಾರ ನೀಡಿದ ಪರಿಹಾರವನ್ನೂ ನಿರಾಕರಿಸಿದ. ಇದು ಭಾವ, ಮಾತು, ಕ್ರಿಯೆ ಇವುಗಳಲ್ಲಿ ಅಹಿಂಸೆಯ ಆಚರಣೆಯನ್ನು ತೋರಿಸುತ್ತದೆ. ಇಲ್ಲಿಯೂ ಇಂಥ ಅಹಿಂಸೆಯ ಭರವಸೆ ನನಗೆ ಕಂಡುಬಂದರೆ ಪಾನದಂಗಡಿಗಳ ಪಿಕೆಟಿಂಗ್ ನಡೆಸುವ ಚಳುವಳಿಯನ್ನು ಪುನಃ ಆರಂಭಿಸಲು ನನಗೆ ಏನೂ ಅನುಮಾನ ವಿರದು. ಆದರೆ, ನಮಗೆ ಕೆಟ್ಟ ಹೆಸರು ಬಂದಿದೆ. ೧೯೨೧ರಲ್ಲಿ ಅನೇಕ ಕಡೆಗಳಲ್ಲಿ ನಡೆದ ಪಿಕೆಟಿಂಗ್ ಅಹಿಂಸೆಯಿಂದ ಬಹಳ ದೂರವಿತ್ತು. ನಮ್ಮಲ್ಲಿ ಸರಕಾರಕ್ಕೆ ಪೇಚನ್ನುಂಟುಮಾಡಬೇಕೆಂಬ ರಾಜಕೀಯ ಉದ್ದೇಶವು ಪ್ರಧಾನವಾಗಿದ್ದಿತು. ಕುಡುಕನನ್ನು ಸುಧಾರಿಸಬೇಕೆಂಬ ಭಾವವು ಬಹಳ ಗೌಣವಾಗಿದ್ದಿತು. ಅಸಹಕಾರ ಹೋರಾಟದಲ್ಲಿ ರಾಜಕೀಯವು ನೈತಿಕೋ

ದ್ದೇಶಕ್ಕೆ ಹೊಂದಿಕೊಂಡಿರಬೇಕು. ನಾವು ಕುಡುಕನನ್ನು ಸುಧಾರಿಸಬಲ್ಲೆವಾದರೆ, ಆಡಳಿತವನ್ನೂ ಆಡಳಿತಗಾರರನ್ನೂ ನಾವು ಸುಧಾರಿಸಬಲ್ಲೆವು. ಇದಕ್ಕೆ ಪ್ರತಿಯಾಗಿ ಬಲವಂತದಿಂದ ನಾವು ಕುಡುಕನನ್ನು ನಿಗ್ರಹಿಸಲೆತ್ನಿಸಿದರೆ, ಸರಕಾರಕ್ಕೆ ಕುಡಿತದ ಬಾಬಿನಿಂದ ಲಭಿಸುವ ಆದಾಯವನ್ನು ಸ್ವಲ್ಪ ಕಾಲದವರೆಗೆ ತಡೆಗಟ್ಟಬಹುದು. ಆದರೆ, ಕೊನೆಗೆ ನಿಗ್ರಹಿಸಲ್ಪಟ್ಟ ಕುಡುಕನೂ ಅಥವಾ ಧೂಮಪಾನ ಮಾಡುವವನೂ ತಲೆ ಎತ್ತುವನು; ಸರಕಾರದ ಆದಾಯವೂ ಹೆಚ್ಚಾಗುವುದು. ಕುಡುಕರ ಮೇಲೆ ಪ್ರೇಮವುಳ್ಳವರಾಗಿ, ತಮ್ಮ ಪ್ರಾಣವನ್ನಾದರೂ ತೆರಲು ಸಿದ್ಧವಿರುವ ಸ್ತ್ರೀಪುರುಷರು ದೊರಕುವವರೆಗೂ ಪಿಕೆಟಿಂಗ್ ಚಳುವಳಿಯನ್ನು ಆರಂಭಿಸುವ ಯೋಚನೆಯನ್ನು ನಾವು ಮಾಡುವುದಿಲ್ಲ.

(ಯಂಗ್ ಇಂಡಿಯಾ : ೧೬-೪-೨೪)

ಮಹಿಳೆಯರಿಗೆ ಬಿನ್ನಹ

ಪಾನ ನಿರೋಧ ಚಳುವಳಿಗೆ ಸಂಬಂಧಿಸಿದಂತೆ ಸಹಾಯ ಮಾಡಬೇಕೆಂದು ಗುಜರಾತಿನ ಮಹಿಳೆಯರಿಗೆ ಗಾಂಧೀಜೀ ಬಿನ್ನಹಮಾಡಿಕೊಂಡರು. ಅವರು ಪಾನದಂಗಡಿಗಳಿರುವ ಜಾಗಗಳಿಗೆ ಭೇಟಿಕೊಟ್ಟು ಪಾನೀಯ ಮಾರುವವರೊಂದಿಗೆ ವಿಚಾರಮಾಡಬೇಕು. ಇದರಿಂದ ಅವರಿಗೆ ಜಯ ಲಭಿಸದಿದ್ದರೆ, ಅವರು ಕುಡುಕರೊಂದಿಗೆ ವಿಚಾರಮಾಡಬೇಕು. ಅವರು ನಿಷ್ಠೂರದ ಮಾತನಾಡುವುದನ್ನು ಪೂರ್ಣವಾಗಿ ಎಚ್ಚರಿಕೆಯಿಂದ ವರ್ಜಿಸಬೇಕು : "ನೀವು ನಮ್ಮ ಸೋದರರು. ನಮ್ಮ ಸೋದರರಾರೂ ಮದ್ಯಪಾನ ಮಾಡುವುದಿಲ್ಲ. ದೇವರಾಣೆಯಿಟ್ಟು ನೀವು ಕುಡಿತವನ್ನು ನಿಲ್ಲಿಸಿ." ಇಷ್ಟೇ ಮಾತ್ರ ಸಾಕು, ಅವರ ಮಾತು ಇದರಿಂದ ಕುಡುಕರನ್ನು ನಾಚಿಕೆಗೀಡುಮಾಡಿ ಅವರು ಪಾನದಂಗಡಿಗಳನ್ನು ಬಿಟ್ಟು ಹೋಗುವಂತೆ ಮಾಡುವುದರಲ್ಲಿ ಖಂಡಿತ ಯಶ ಗಳಿಸುವುದು. ಒಂದು ವೇಳೆ ಅವರು ಅಂಗಡಿಯನ್ನು ಬಿಟ್ಟುಹೋಗದೆ ಸರಿಯಲ್ಲದ ರೀತಿಯಲ್ಲಿ ನಡೆದುಕೊಂಡರೂ ಬೈದರೂ, ದೇಶದ ಹಿತಕ್ಕಾಗಿ ಅದನ್ನೆಲ್ಲ ಸಹಿಸಬೇಕು.

(ಯಂಗ್ ಇಂಡಿಯಾ : ೩೦-೩-೨೧)

ಪುರುಷರ ಪಾತ್ರ

ವಿದೇಶೀ ವಸ್ತ್ರದ ಅಂಗಡಿಗಳು ಪಾನದಂಗಡಿಗಳು ಇವುಗಳ ಬಗೆಗೆ ಮಹಿಳೆಯರು ಮಾಡುವ ಪಿಕೆಟಿಂಗ್ ಕಾರ್ಯದಲ್ಲಿ • ಪುರುಷರು ಮಧ್ಯೆ ಪ್ರವೇಶಿಸಬೇಕಾಗಿಲ್ಲ. ಹಾಗಾದರೆ, ೧೯೨೧ ರಲ್ಲಿ ಆದಂತೆ ಕುಲಗೆಟ್ಟು ಹೋಗುತ್ತದೆ. ನಾವು ಅವರಿಗೆ ಅನೇಕ ವಿಧಗಳಲ್ಲಿ ಸಹಾಯವೆಸಗ ಬಹುದು. ಹೀಗೆ ಇದನ್ನು ಪುರುಷರಿಗೇ ಬೇರೆ ಮಹಿಳೆಯರಿಗೇ ಬೇರೆ ಎಂದು ಬೇರ್ಪಡಿಸುವುದರ ಉದ್ದೇಶ, ಮಹಿಳೆಯರಿಗೇ ವಿಶಿಷ್ಟವೂ, ಪ್ರತ್ಯೇಕವೂ ಆದ ಕ್ರಿಯಾಕ್ಷೇತ್ರವನ್ನುಂಟುಮಾಡುವುದು. ಪಾನ ಮತ್ತು ಹೆಂಡದಂಗಡಿಗಳ ವ್ಯವಹಾರ ನಡೆಸುವವರನ್ನು ಪ್ರತ್ಯಕ್ಷ ಭೇಟಿಮಾಡಿ, ರಾಷ್ಟ್ರವು ಹೊಸ ಹುಟ್ಟಿನ ನೋವನ್ನು ಅನುಭವಿಸುತ್ತಿರುವ ಈ ಸಮಯದಲ್ಲಿ ಅವರು ತಮ್ಮ ವ್ಯವಹಾರವನ್ನು ತ್ಯಜಿಸಬೇಕೆಂದು ಪ್ರಾರ್ಥಿಸುವುದರ ಮೂಲಕ ಸಹಾಯವೆಸಗಬಹುದು. ಮಹಿಳೆಯರಿಗೆ ಅಧಿಕವೂ, ಸೂಕ್ಷ್ಮವೂ, ಆದ ಮರ್ಯಾದೆಯನ್ನು ತೋರಿಸುವುದರ ಮೂಲಕವಾಗಿಯೂ ಸಹಾಯವೆಸಗಬಹುದು. ಹೀಗೆ ವಾತಾವರಣವನ್ನು ಸಮಪಡಿಸುವುದರಿಂದ ಅದು ಪಾನೀಯ ವ್ಯವಹಾರಿ, ವಿದೇಶೀ ವಸ್ತ್ರ ಮಾರುವವನು, ಕೊಳ್ಳು ವವನು ಮತ್ತು ಕುಡುಕ ಇವರೆಲ್ಲರ ಮೇಲೂ ಪರಿಣಾಮ ಮಾಡುತ್ತದೆ. ಸಾಧ್ವಿಯರು ಮಾಡುವ ಬಿನ್ನಹಕ್ಕೆ ಅವರು ಪ್ರತಿಭಟಿಸಲು ಸಾಧ್ಯವಾಗ ಲಾರದು. ಈ ವಿಷಯಗಳಲ್ಲಿ ಮಹಿಳೆಯರು ಪುರುಷರಿಗಿಂತ ಮೇಲೆಂದು ನನ್ನ ಭಾವನೆ. ಅಹಿಂಸೆಯು ಪ್ರಧಾನವಾಗಿ ಅಂಥ ಒಂದು ಗುಣ. ಸ್ತ್ರೀ ಅದನ್ನು ಸ್ವಾಭಾವಿಕವಾಗಿಯೂ ಮತ್ತು ಅಂತಃಸ್ಫುರಣೆಯಿಂದಲೂ ಆಚರಿ ಸಿದರೆ, ಪುರುಷನು ಪ್ರಯತ್ನಪೂರ್ವಕವಾಗಿ ಅದನ್ನು ಸಾಧಿಸಲೆತ್ನಿಸಬೇಕು. ಮಹಿಳೆಯರು ಮಾಡುವ ಪಿಕೆಟಿಂಗ್ ಕಾರ್ಯದಲ್ಲಿ ಪುರುಷರ ಪ್ರವೇಶವಿಲ್ಲದೆ ಅವರೇ ಅದನ್ನು ಮಾಡುವುದಾದರೆ, ಜಾಗ್ರತೆ ಗುರಿಯನ್ನು ಮುಟ್ಟಿಯಾರು. ಆದರೆ, ಆಗಾಗ ಅವರು ಅಪೇಕ್ಷಿಸುವ ಸಲಹೆಯನ್ನೂ ಮಾರ್ಗದರ್ಶನವನ್ನೂ ಪುರುಷರು ಕೊಡಬಹುದು.

(ಯಂಗ್ ಇಂಡಿಯಾ : ೧೭-೪-೩೦)

ಪಿಕೆಟಿಂಗ್ ಮಾಡುವುದರಲ್ಲಿ ನಿಸ್ಸಂಶಯವಾಗಿಯೂ ಹಿಂಸೆಯ ಅಪಾಯವಿದೆ. ಆದುದರಿಂದ, ಭಾರತೀಯ ಭಗಿನಿಯರು ಈ ಕಾರ್ಯವನ್ನೂ ಕೈಕೊಳ್ಳಬೇಕೆಂದು ನನ್ನ ಬಿನ್ನಹ. ವಿದ್ಯಾವತಿಯರಾದ ಕೆಲವು ಮಂದಿ ತಮ್ಮ ಭಯವನ್ನೂ ಅಪನಂಬಿಕೆಯನ್ನೂ ವರ್ಜಿಸಿದರೆ, ಇತರ ಭಗಿನಿಯರು ತಾವಾಗಿಯೇ ಖಂಡಿತ ಅನುಸರಿಸುವರು. (ಯಂಗ್ ಇಂಡಿಯಾ : ೨೪-೪-೩೦)

ಪಿಕೆಟಿಂಗ್ ಮಾಡುವ ವಿಧಾನ

೧. ಒಂದು ಪಾನದಂಗಡಿ ಅಥವಾ ವಿದೇಶೀ ವಸ್ತ್ರದ ಅಂಗಡಿ ಇವನ್ನು ಪಿಕೆಟಿಂಗ್ ಮಾಡಬೇಕಾದರೆ ಕೊನೆಯ ಪಕ್ಷ ಹತ್ತು ಮಂದಿ ಮಹಿಳೆಯರಾದರೂ ಬೇಕು. ಅವರು ತಮ್ಮಲ್ಲಿಯೇ ಒಬ್ಬಾಕೆಯನ್ನು ನಾಯಿಕೆಯನ್ನಾಗಿ ಆರಿಸಿಕೊಳ್ಳಬೇಕು.

೨. ಪ್ರಥಮತಃ ಅವರೆಲ್ಲರೂ ಪಾನದಂಗಡಿ ಅಥವಾ ಹೆಂಡದಂಗಡಿ ವ್ಯವಹಾರ ನಡೆಸುವವನ ಬಳಿಗೆ ನಿಯೋಗ ಹೋಗಿ, ಪಾನವೋ ಅಥವಾ ವಿದೇಶೀ ವಸ್ತ್ರ ಮಾರಾಟವೋ ಅದಕ್ಕೆ ಸಂಬಂಧಿಸಿದ ಅಂಕಿ ಅಂಶಗಳುಳ್ಳ ಕರಪತ್ರಗಳನ್ನು ಕೊಟ್ಟು, ತಮ್ಮ ವ್ಯವಹಾರಗಳನ್ನು ತ್ಯಜಿಸಬೇಕೆಂದು ಪ್ರಾರ್ಥಿಸಬೇಕು. ಆ ವ್ಯವಹಾರಕರ್ತನಿಗೆ ತಿಳಿಯುವ ಭಾಷೆಯಲ್ಲಿಯೇ ಈ ಕರಪತ್ರಗಳು ಇರಬೇಕೆಂಬ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

೩. ಆ ವ್ಯವಹಾರಕರ್ತರು ತಮ್ಮ ವ್ಯವಹಾರವನ್ನು ನಿಲ್ಲಿಸಲು ನಿರಾಕರಿಸಿದರೆ ಸ್ವಯಂಸೇವಕರು ದಾರಿಯನ್ನು ಬಿಟ್ಟು ಅಂಗಡಿಯ ಸುತ್ತ ಕಾವಲನ್ನು ಏರ್ಪಡಿಸಿ, ಕೊಳ್ಳುವುದಕ್ಕೆ ಬರುವ ಗಿರಾಕಿಗಳಿಗೆ ಪ್ರಾರ್ಥನೆ ಮಾಡಬೇಕು.

೪. ಸ್ವಯಂಸೇವಕರು, ವಿದೇಶೀ ವಸ್ತ್ರ ಕೊಳ್ಳುವುದೋ ಅಥವಾ ಮಾದಕವಸ್ತು ಸೇವನೆಯೋ ಅದರ ಬಗೆಗೆ ದಪ್ಪ ಅಕ್ಷರಗಳಲ್ಲಿ ಎಚ್ಚರಿಕೆ ಕೊಡುವ ಜಾಹಿರಾತು ಪಟ್ಟಿಗಳನ್ನೋ ಬಾವುಟಗಳನ್ನೋ ಹಿಡಿದುಕೊಂಡಿರಬೇಕು.

೫. ಸ್ವಯಂಸೇವಕರು, ಸಾಧ್ಯವಾದಷ್ಟು ಸಮ-ವಸ್ತ್ರಧಾರಿಗಳಾಗಿರಬೇಕು.

೬. ಸ್ವಯಂಸೇವಕರು, ಆಗಾಗ ವಿಷಯಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡಬೇಕು.

೭. ಸ್ವಯಂಸೇವಕರು, ಪುರುಷರಿಂದ ಬಲಾತ್ಕಾರವನ್ನೂ ಅಥವಾ ಹಸ್ತಕ್ಷೇಪವನ್ನೂ ತಪ್ಪಿಸಬೇಕು.

೮. ಯಾವ ಕಾರಣಕ್ಕೇ ಆಗಲಿ ಅಸಭ್ಯ, ಕೆಟ್ಟ, ಹೆದರಿಕೆಯ ಅಥವಾ ಅಯೋಗ್ಯ ಭಾಷೆಯನ್ನು ಪ್ರಯೋಗ ಮಾಡಬಾರದು.

೯. ಬಿನ್ನಹವು ಸದಾ ವಿಚಾರ ಮತ್ತು ಹೃದಯಕ್ಕೆ ಮುಟ್ಟುವಂತಿರಬೇಕೇ ವಿನಾ ಭಯೋತ್ಪಾದಕವಾಗಬಾರದು.

೧೦. ಪುರುಷರು ಪಿಕೆಟಿಂಗ್ ನಡೆಯುವ ಸ್ಥಳದ ಸುತ್ತಲೂ ಯಾವ ಕಾರಣದಿಂದಲೂ ಗುಂಪುಕೂಡಬಾರದು. ರಸ್ತೆಯಲ್ಲಿ ಪ್ರಯಾಣಕ್ಕೆ ಅಡಚಣೆಯನ್ನುಂಟುಮಾಡಬಾರದು. ಆದರೆ, ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಕುಡಿತ ಮತ್ತು ವಿದೇಶೀ ವಸ್ತ್ರ ವಿರುದ್ಧವಾಗಿ ಪ್ರಚಾರ ಮಾಡಬಹುದು. ಆ ಪ್ರದೇಶದಲ್ಲಿ ಪಾನನಿರೋಧ ಮತ್ತು ಖಾದೀ ಇವುಗಳ ಪ್ರಚಾರಕ್ಕೆ ಸಹಾಯಕವಾಗುವಂತೆಯೂ ಪಾನ ಮತ್ತು ವಿದೇಶೀ ವಸ್ತ್ರ ಇವುಗಳ ಬಹಿಷ್ಕಾರಕ್ಕೆ ಅನುಕೂಲವಾಗುವಂತೆಯೂ ಸ್ತ್ರೀಯರ ಮೆರವಣಿಗೆಗಳನ್ನು ಏರ್ಪಡಿಸಲು ಸಹಾಯ ಮಾಡಬಹುದು.

೧೧. ಈ ಪಿಕೆಟಿಂಗ್ ನಡೆಸುವ ಘಟಕಗಳಿಗೆ ಬೆಂಬಲವಾಗಿ ತಕಲೀ ಮತ್ತು ಚರಖಾಗಳ ಸಂದೇಶವನ್ನು ಹರಡುವುದಕ್ಕೂ ಮತ್ತು ಹೊಸ ಹಸ್ತಪತ್ರಿಕೆಗಳನ್ನೂ, ಹೊಸ ಪ್ರಚಾರ ವಿಧಾನಗಳನ್ನೂ ಕುರಿತು ಯೋಚಿಸುವ ಶಾಖೋಪಶಾಖೆಗಳುಳ್ಳ ಸಂಘಗಳಿರಬೇಕು.

೧೨. ಹಣಕಾಸಿನ ಜಮಾ-ಖರ್ಚಿನ ವಿಷಯವಾಗಿ ಪೂರ್ಣ ಯಥಾರ್ಥವಾದ, ಕ್ರಮಬದ್ಧವಾದ ಲೆಕ್ಕವಿಟ್ಟಿರಬೇಕು. ಇದು ಕ್ಲಿಪ್ತಕಾಲಕ್ಕೆ ಪರಿಶೀಲಿಸಲ್ಪಡಬೇಕು. ಇದು ಮಹಿಳೆಯರ ಮೇಲ್ವಿಚಾರಣೆಗೊಳಪಟ್ಟು ಪುರುಷರಿಂದ ಮಾಡಲ್ಪಡಬೇಕು. ಒಟ್ಟಿನಲ್ಲಿ, ಈ ಯೋಜನೆಯಂತೆ ಪುರುಷರು ಮಹಿಳೆಯರ ವಿಷಯವಾಗಿ ನಿಜವಾದ ಗೌರವ ಮತ್ತು ಅವರ

ಏಳಿಗೆಯ ವಿಷಯದಲ್ಲಿ ತೀವ್ರ ಆಸಕ್ತಿ ಇವುಗಳನ್ನು ಇಟ್ಟುಕೊಂಡಿರಬೇಕೆಂಬುದು ಪೂರ್ವ ಸೂಚನೆ. (ಯಂಗ್ ಇಂಡಿಯಾ: ೨೪-೪-೩೦)

ಕುಡಿತದ ಶಾಪ

ಒಬ್ಬ ಭಗಿನಿ ಹೀಗೆ ಬರೆಯುತ್ತಾರೆ:

"ಆ ಹಳ್ಳಿಗೆ ಹೋಗಿ, ಅಲ್ಲಿನ ಜನಗಳಿಗೆ ಕುಡಿತ ಮಾಡಿರುವ ಹಾವಳಿಯ ವಿಷಯವಾಗಿ ಕೇಳಿ ಅತಿಶಯ ವ್ಯಸನವಾಯಿತು. ಕೆಲವು ಸ್ತ್ರೀಯರಂತೂ ಕಣ್ಣೀರಿಟ್ಟರು. ಪಾಪ, ಅವರೇನು ಮಾಡಬಲ್ಲರು? ಮದ್ಯ ಸಾರವನ್ನು ಪೂರ್ಣವಾಗಿ ಎಲ್ಲ ಕಾಲಕ್ಕೂ ತ್ಯಜಿಸಲು ಸಿದ್ಧವಿಲ್ಲದ ಒಬ್ಬ ಸ್ತ್ರೀಯೂ ಇಲ್ಲ. ಪಾನವು, ಗೃಹಕೃತ್ಯದ ತಾಪತ್ರಯ, ಬಡತನ, ಆರೋಗ್ಯ ಮತ್ತು ಶರೀರಗಳ ನಾಶ, ಇವಕ್ಕೆಲ್ಲ ಕಾರಣವಾಗಿದೆ. ಸಾಮಾನ್ಯವಾಗಿ ಪುರುಷನ ಈ ದುಷ್ಟ ಉಪಭೋಗದ ಭಾರವನ್ನೆಲ್ಲ ಸ್ತ್ರೀಯೇ ಹೊರಬೇಕಾಗಿದೆ. ಈ ಸ್ತ್ರೀಯರಿಗೆ ಏನೆಂದು ಸಲಹೆ ನೀಡಲಿ ನಾನು? ಕ್ರೋಧ ಮತ್ತು ಕ್ರೌರ್ಯಗಳನ್ನು ಎದುರಿಸುವುದು ಬಹಳ ಕಷ್ಟ. ಈ ಪ್ರಾಂತದ ನಾಯಕರು 'ಜಾತೀಯ ತೀರ್ಪಿ'ನ ಅನ್ಯಾಯದ (communal award) ವಿಷಯವಾಗಿ ತಮ್ಮ ಸಾಮರ್ಥ್ಯ, ಯೋಚನೆಗಳೆಲ್ಲವನ್ನೂ ವೃಥಾ ಕಳೆಯುವುದರ ಬದಲು ಈ ಕೆಡುಕಿನ ನಿರ್ಮೂಲನಕ್ಕಾಗಿ ಕೇಂದ್ರೀಕರಿಸಿದರೆ ಎಷ್ಟೋ ಚೆನ್ನಾದೀತೆನಿಸುತ್ತದೆ ನನಗೆ. ನಮ್ಮ ಜನದ ನೈತಿಕ ಮಟ್ಟ, ಏರಿದರೆ, ಯಾವ ಸಣ್ಣ ವಿಷಯುಗಳು ತಾವಾಗಿಯೇ ಇತ್ಯರ್ಥವಾಗುವುವೋ ಅದನ್ನೇ ಮರೆಯುವುದು ನಮಗೆ ಸ್ವಾಭಾವಿಕವಾಗಿಹೋಗಿದೆ. ಈ ಪಾನಪ್ರಶ್ನೆಯ ವಿಷಯ ಕುರಿತು ನಮ್ಮ ಜನಕ್ಕೆ ನೀವೊಂದು ಮನವಿ ನೀಡಲಾರಿರಾ? ನಮ್ಮ ಜನ ಈ ಅಭಿಶಾಪದ ಫಲವಾಗಿ ಆತ್ಮನಾಶ ಹೊಂದುತ್ತಿರುವುದನ್ನು ನೋಡಿದರೆ ಬಹು ದುಃಖವಾಗುತ್ತದೆ."

ಕುಡುಕರಿಗೆ ನನ್ನ ಬಿನ್ನಪವು ನಿಷ್ಪ್ರಯೋಜಕ. ಅದು ಹಾಗೆಯೇ ಆಗಬೇಕು. ಅವರು ಹರಿಜನವನ್ನು ಓದುವುದಿಲ್ಲ. ಒಂದುವೇಳೆ ಓದಿದರೆ, ಅದು ನಗೆಗೀಡು ಮಾಡುವುದಕ್ಕೆ. ಕುಡಿತದ ಪದ್ಧತಿಯಿಂದಾಗುವ ಕೆಡುಕಿನ ವಿಷಯವಾಗಿ ಅವರು ತಿಳಿದುಕೊಳ್ಳಲು ಅವರಿಗೆ ಆಸಕ್ತಿಯೇ ಇಲ್ಲ. ಅವರು

ಕೆಡುಕನ್ನೇ ಅಪ್ಪಿಕೊಳ್ಳುತ್ತಾರೆ. ಈ ಭಗಿನಿಗೂ ಈಕೆಯ ಮೂಲಕ ಭಾರತದ ಎಲ್ಲ ಭಗಿನಿಯರಿಗೂ ಈ ವಿಷಯವನ್ನು ನೆನಪಿಗೆ ತರಲು ಬಯಸುತ್ತೇನೆ. ದಾಂಡೀ ಸತ್ಯಾಗ್ರಹದ ಕಾಲದಲ್ಲಿ ಭಾರತದ ಮಹಿಳೆಯರು ನನ್ನ ಕರೆಗೆ ಓ ಕೊಟ್ಟು, ಕುಡಿತದ ಮೇಲೆ ಹೋರಾಟವನ್ನೂ, ಚರಖಾವನ್ನೂ ತಮ್ಮ ವೈಶಿಷ್ಟ್ಯವನ್ನಾಗಿ ಮಾಡಿಕೊಂಡಿದ್ದರು. ಸಹಸ್ರಾರು ಮಂದಿ ಮಹಿಳೆಯರು ನಿರ್ಭಯತೆಯಿಂದ ಪಾನದಂಗಡಿಗಳ ಸುತ್ತುಗಟ್ಟಿ, ಪಾನ ಚಟಕ್ಕೆ ಬಿದ್ದವರನ್ನು ಬಿಟ್ಟುಬಿಡಬೇಕೆಂದು ಪ್ರಾರ್ಥಿಸಿಕೊಂಡು, ಎಷ್ಟೋ ವೇಳೆ ಯಶಸ್ಸುಗಳಿಸುತ್ತಿದ್ದುದನ್ನು ಪತ್ರಲೇಖಕಿಯೇ ನೆನಪಿಗೆ ತಂದುಕೊಳ್ಳಲಿ. ಅವರು ಸ್ವಸಂತೋಷದಿಂದ ತಾವು ಆರಂಭಿಸಿದ ಕಾರ್ಯದಲ್ಲಿ ಕುಡುಕರ ಬೈಗುಳನ್ನೂ, ಕೆಲವು ವೇಳೆ ಆಘಾತವನ್ನೂ ಸಹಿಸುತ್ತಿದ್ದರು. ಪಾನದಂಗಡಿಗಳ ಪಿಕೆಟಿಂಗ್ ನಡೆಸಿದ ತಪ್ಪಿಗಾಗಿ ನೂರಾರು ಮಂದಿ ತುರಂಗವಾಸವನ್ನು ಅನುಭವಿಸಿದರು. ಅವರ ಉತ್ಸಾಹಭರಿತ ಕ್ರಿಯೆ ದೇಶಾದ್ಯಂತ ಆಶ್ಚರ್ಯಕರ ಪರಿಣಾಮವನ್ನುಂಟುಮಾಡಿತು. ಆದರೆ ದುರದೃಷ್ಟವಶಾತ್, ಶಾಸನೋಲ್ಲಂಘನ ನಿಂತಕೂಡಲೇ, ಮತ್ತು ಅದು ನಿಲ್ಲುವುದಕ್ಕೂ ಮುಂಚೆ, ಕಾರ್ಯ ಮಂದಗತಿ ಹೊಂದಿತು. ಈ ಮಂದಗತಿಗೆ ಕಾರಣಗಳೇನೆಂಬುದನ್ನು ನಾನು ವಿವರಿಸಬೇಕಾಗಿಲ್ಲ. ಆದರೂ ಕಾರ್ಯಕರ್ತರನ್ನು ಕಾರ್ಯ ಕರೆಯುತ್ತಲೇ ಇದೆ. ಮಹಿಳೆಯರ ಪ್ರತಿಜ್ಞೆ ಪೂರ್ಣವಾಗದೆ ನಿಂತಿದೆ. ಅದು ಯಾವುದೋ ಕ್ಲಿಪ್ತ ಕಾಲಕ್ಕೆ ಮಾತ್ರ ತೆಗೆದುಕೊಂಡುದಲ್ಲ. ಭಾರತಾದ್ಯಂತ ಪಾನನಿರೋಧ ಘೋಷಣೆಯಾಗುವವರೆಗೂ ಅದು ಪೂರ್ಣವಾದಂತಲ್ಲ. ಇದರಲ್ಲಿ ಮಹಿಳೆಯರ ಪಾತ್ರ ಘನವಾದುದು. ಮಾನವನಲ್ಲಿರುವ ಉತ್ತಮ ಭಾವಗಳನ್ನು ಎಚ್ಚರಗೊಳಿಸಿ, ಹೆಂಡದಂಗಡಿಗಳನ್ನು ಬರಿದುಮಾಡುವುದರ ಮೂಲಕ ಪಾನನಿರೋಧವನ್ನು ತರುವುದು ಅವರ ಕರ್ತವ್ಯವಾಗಿತ್ತು. ಅವರು ತಮ್ಮ ಕಾರ್ಯವನ್ನು ಮುಂದುವರಿಸಲು ಸಾಧ್ಯವಾಗಿದ್ದರೆ, ತಮ್ಮ ಸಾಧುವರ್ತನೆಯಿಂದಲೂ, ತೀವ್ರ ಶ್ರದ್ಧೆಯಿಂದಲೂ ಕುಡುಕರನ್ನು ಖಂಡಿತವಾಗಿಯೂ ಅವನ ಚಟದಿಂದ ಒಳ್ಳೆ ಮಾರ್ಗಕ್ಕೆ ತಿರುಗಿಸುತ್ತಿದ್ದರು.

ಆದರೆ, ಎಲ್ಲವೂ ಮುಗಿದುಹೋಗಿಲ್ಲ. ಈಗಲೂ ಮಹಿಳೆಯರು ಚಳುವಳಿಯನ್ನು ನಡೆಸಬಹುದು. ಲೇಖಕಿಯು ಉದಹರಿಸಿರುವವರ ಪತ್ನಿಯರು ಶ್ರದ್ಧೆಯುಳ್ಳವರಾದರೆ ಅವರು ನಿಶ್ಚಯವಾಗಿಯೂ ತಮ್ಮ ಪತಿಗಳನ್ನು

ಪರಿವರ್ತನೆಗೊಳಿಸಿಯಾರು. ತಮ್ಮ ಪತಿಗಳ ಮೇಲೆ ಒಳ್ಳೆಯದನ್ನು ಮಾಡುವುದಕ್ಕೆ ತಮ್ಮ ಪ್ರಭಾವವೆಷ್ಟಿದೆ ಎಂಬುದನ್ನು ಮಹಿಳೆಯರು ಅರಿತಿಲ್ಲ. ಅವರು ಅದನ್ನು ಅಗೋಚರವಾಗಿ ಪ್ರಯೋಗಿಸುತ್ತಾರೆ. ಆದರೆ ಅದು ಸಾಲದು. ಅದರ ಅರಿವು ಅವರಿಗೆ ಬರಬೇಕು. ಆ ಅರಿವು ಅವರಿಗೆ ಶಕ್ತಿ ನೀಡುತ್ತದೆ. ಅದರಿಂದ ತಮ್ಮ ಸಂಗಾತಿಗಳನ್ನು ಉತ್ತಮಪಡಿಸುವ ಮಾರ್ಗ ಗೋಚರಿಸುತ್ತದೆ. ಅನೇಕ ಸತಿಯರು ತಮ್ಮ ಪತಿಗಳ ನಡೆವಳಿಕೆಯ ಬಗೆಗೆ ಆಸಕ್ತಿ ವಹಿಸದಿರುವುದೇ ದೊಡ್ಡ ವಿಷಾದ. ಆ ರೀತಿ ಮಾಡುವುದು ತಮಗೆ ಹಕ್ಕಿಲ್ಲವೆಂದು ಅವರ ಭಾವನೆ. ಪತಿಗಳಿಗೆ ತಮ್ಮ ಪತ್ನಿಯರ ಶೀಲ ರಕ್ಷಣೆ ಹೇಗೆ ಕರ್ತವ್ಯವೋ ಹಾಗೆಯೇ ಪತ್ನಿಯರಿಗೆ ತಮ್ಮ ಪತಿಗಳ ಶೀಲ ರಕ್ಷಣೆಯ ಕಾರ್ಯ ತಮ್ಮ ಕರ್ತವ್ಯವೆಂದು ಅವರಿಗೆಂದಿಗೂ ತೋಚುವುದಿಲ್ಲ. ಆದರೂ ಸತಿಪತಿಗಳು ತಮ್ಮ ಪರಸ್ಪರ ಗುಣಾವಗುಣಗಳ ಬಗೆಗೆ ಸಮಾನ ಭಾಗಿಗಳೆಂಬುದಕ್ಕಿಂತಲೂ ಹೆಚ್ಚು ಸ್ಪಷ್ಟವಾದ ಅಂಶವೇನುಂಟು? ಆದರೆ, ಮಹಿಳೆಯೇ ಅಲ್ಲದೆ ಮತ್ತಿನ್ನಾರು ಸತಿಯರಿಗೆ ಅವರ ಶಕ್ತಿಯನ್ನೂ ಕರ್ತವ್ಯ ಭಾವವನ್ನೂ ಪ್ರಭಾವಯುತವಾಗಿ ಎಚ್ಚರಗೊಳಿಸಿಯಾರು? ಪಾನನಿರೋಧ ಚಳುವಳಿಯ ಬಗೆಗೆ ಮಹಿಳೆಯರ ಕರ್ತವ್ಯದಲ್ಲಿ ಇದೊಂದು ಭಾಗ ಮಾತ್ರ.

ಪಾನದ ವ್ಯಾಪ್ತಿಯ ಅಂಕಿ ಅಂಶಗಳನ್ನೂ, ಎಂದರೆ, ಈ ಪದ್ಧತಿಯನ್ನು ಉಂಟುಮಾಡುವ ಕಾರಣಗಳು, ಅವುಗಳ ನಿವಾರಣೋಪಾಯಗಳು ಇದನ್ನೆಲ್ಲ ಸಾಕಷ್ಟು ಮಹಿಳೆಯರು ಚೆನ್ನಾಗಿ ಅರಿತುಕೊಳ್ಳಬೇಕು. ಕುಡುಕರಿಗೆ ಕೇವಲ ಬಿನ್ನಹ ಮಾಡಿಕೊಳ್ಳುವುದರಿಂದ ಶಾಶ್ವತ ಪರಿಣಾಮಗಳಾಗುವುದಿಲ್ಲವೆಂಬುದನ್ನು ಹಿಂದಿನ ಅನುಭವದಿಂದ ಅರಿತುಕೊಳ್ಳಬೇಕು. ಈ ಪದ್ಧತಿ ಒಂದು ವ್ಯಾಧಿ ಎಂಬುದಾಗಿ ಪರಿಗಣಿಸಲ್ಪಟ್ಟು ಆ ಪ್ರಕಾರವಾಗಿಯೇ ಅದಕ್ಕೆ ಚಿಕಿತ್ಸೆಯಾಗಬೇಕು. ಕೆಲವು ಮಹಿಳೆಯರು ಸಂಶೋಧನಾ ಕಾರ್ಯದಲ್ಲಿ ನಿರತರಾಗಿ ಅನೇಕ ವಿಧಗಳಲ್ಲಿ ಸಂಶೋಧನೆ ನಡೆಸಬೇಕು. ಪ್ರತಿಯೊಂದು ಸುಧಾರಣಾ ಕಾರ್ಯದಲ್ಲಿಯೂ ವಿಷಯದ ಪೂರ್ಣ ಕೌಶಲ್ಯ ಪಡೆಯಬೇಕಾದರೆ ಸತತ ವ್ಯಾಸಂಗ ಅವಶ್ಯಕ. ಅಂಶಿಕವಾಗಿಯೋ ಪೂರ್ಣವಾಗಿಯೋ ಆಗುವ ಎಲ್ಲ ಒಳ್ಳೆಯ ಸುಧಾರಣಾ ಚಳುವಳಿಯ ಸೋಲಿಗೆ ಅಜ್ಞಾನವೇ ಮೂಲ ಕಾರಣ. ಸುಧಾರಣೆಯ ಸೋಗನ್ನು ಹೊಂದಿದ ಪ್ರತಿಯೊಂದು ಪ್ರಯತ್ನವೂ ಆ ಹೆಸರಿಗೆ ಯೋಗ್ಯವೆನಿಸಲಾರದು. (ಹರಿಜನ: ೨೪-೪-೩೭)

ಸರಕಾರದ ಪ್ರಯತ್ನ

★

ಪಾನ ನಿಷೇಧ

★

ಪಾನ ನಿಷೇಧದ ಅರ್ಥ

ಬೊಂಬಾಯಿಯ ಗೌರವಯುತ ಆರ್ಚ್‌ಬಿಷಪ್ ಅವರು, ಪಾನ ನಿಷೇಧದ ವಿರೋಧವಾಗಿ ರೋಟರಿ ಕೂಟದಲ್ಲಿ ತಾವಿತ್ತ ಭಾಷಣದ ಒಂದು ಪ್ರತಿಯನ್ನೂ ಅದರ ಜೊತೆಗೆ ಒಂದು ಪತ್ರವನ್ನೂ ಕಳಿಸುವ ಕೃಪೆ ಮಾಡಿದ್ದಾರೆ. ಅವುಗಳ ಕರ್ತೃ ಎಷ್ಟು ಗೌರವ ಮತ್ತು ಅವಧಾನಕ್ಕೆ ಪಾತ್ರರೋ ಅಷ್ಟರಿಂದಲೇ ಎರಡನ್ನೂ ನಾ ಓದಿದೇನೆ.

ಆರ್ಚ್‌ಬಿಷಪ್ಪರ ಪತ್ರವನ್ನೂ, ಭಾಷಣವನ್ನೂ ಓದಿದ ಕೂಡಲೇ ನನಗೆ ಒಂದು ಪ್ರಬಲವಾದ ದೋಷ ಗೋಚರವಾಯಿತು. ಅದಕ್ಕೆ ಪ್ರಾಥಮಿಕ ಜವಾಬ್ದಾರಿ ನನ್ನದೇ. ಕಾಂಗ್ರೆಸ್ ಮಂತ್ರಿಮಂಡಲಗಳಿರುವೆಡೆ ಎಂದರೆ, ಬೊಂಬಾಯಿ ಸರಕಾರವೂ, ಮತ್ತಿತರ ಪ್ರಾಂತೀಯ ಸರಕಾರಗಳೂ, ಮದ್ಯಪಾನ ವ್ಯಾಪಾರದ ಬಗೆಗೆ ಮಾಡುತ್ತಿರುವ ಕಾರ್ಯಕ್ಕೆ ಪಾನ ನಿಷೇಧ ಎಂಬ ಶಬ್ದ ತಪ್ಪೆನಿಸುತ್ತದೆ. ಈ ಸರಕಾರಗಳು ನಿಜವಾಗಿ ಮಾಡುತ್ತಿರುವ ಕಾರ್ಯ ಪಾನೀಯ ನಿಷೇಧವನ್ನಲ್ಲ; ಸರಕಾರದ ಪೂರ್ಣ ಅಧೀನದಲ್ಲಿರುವ ಪಾನದಂಗಡಿಗಳನ್ನು ನಿಲ್ಲಿಸುವುದು. ಅಂಗಡಿ ಮಾಲೀಕರಿಗೆ ವರುಷ ವರುಷವೂ ಸರಕಾರದಿಂದ ದೊರಕುವ ಶಾಸನಬದ್ಧ ರಕ್ಷಣೆಯಲ್ಲದೆ ಬೇರೆ ಏನೂ ಇಲ್ಲ. ಪ್ರತಿಯೊಬ್ಬ ಪಾನದಂಗಡಿ ಮಾಲೀಕನೂ ಮುಂದಿನ ವರುಷ ತನಗೆ ಸರಕಾರ ಕೊಟ್ಟಿರುವ ಅನುಜ್ಞೆ ಮುಂದುವರಿಸಲ್ಪಡಲಾರದೆಂದೂ ತಿಳಿದಿದ್ದಾನೆ. ಅವನು ಹೆಂಡ ಮಾರುವ ಅನುಜ್ಞೆ ಪಡೆದಿದ್ದರೆ, ಅದು ಪ್ರತಿ ವರುಷವೂ ನವೀಕರಿಸಲ್ಪಡುವುದರಿಂದ ಹರಾಜಿನಲ್ಲಿ ಹೆಚ್ಚು

ಸವಾಲಿನಿಂದ ತನ್ನ ಹಕ್ಕನ್ನು ಕಳೆದುಕೊಳ್ಳಬಹುದು. ಆದುದರಿಂದ ಈ ಮಾರಾಟದ ಅನುಜ್ಞೆ ಹೊಂದಿದವರು, ಅನುಜ್ಞೆಯಲ್ಲಿ ಕಾಣಿಸಿದ ಕಠಿನ ಷರತ್ತುಗಳಿಗೆ ಬದ್ಧರಾಗಿರುವುದಲ್ಲದೆ, ವರುಷ ಮುಗಿಯುತ್ತಲೇ ಅವರ ಹಕ್ಕೂ ಮುಗಿಯುತ್ತದೆ. ಹೆಂಡ ಮಾರುವ ಹಕ್ಕನ್ನು ಕೊಡುವ ರಹದಾರಿಯನ್ನು ನಿಲ್ಲಿಸುವ ಶಾಸನವು—ಸಮರ್ಥ ಪ್ರಭುತ್ವ, ಜನತೆಯ ಸಾಮಾನ್ಯ ಒಳಿತಿಗಾಗಿ ಮಾಡುವ ವಿಚಾರಬದ್ಧ ಶಾಸನವೆಂದು ನಾ ಭಾವಿಸುತ್ತೇನೆ. ಪ್ರಭುತ್ವ ಮಾಡುವ ಕಾರ್ಯವಾದರೂ ಇಷ್ಟೆ; ಕುಡುಕನಿಗೆ ದೊರಕುವ ಸೌಲಭ್ಯವನ್ನು ಅಥವಾ ಆಕರ್ಷಣೆಯನ್ನು—ಔಷಧಿಯ ರೂಪದಲ್ಲಿ ಬಿಟ್ಟು ಬೇರಾವ ರೂಪದಲ್ಲಿಯೂ ಅದನ್ನು ಕೆಡುಕೆಂದು ಪರಿಗಣಿಸುವುದರಿಂದ—ತೆಗೆದುಹಾಕುವುದು.

ಅಸಹಕಾರ ಚಳುವಳಿಯ ಕಾಲದಲ್ಲಿಯೇ ನಿಷೇಧಕ ಶಾಸನ ಮಾಡುವುದಕ್ಕೆ ಪ್ರಭುತ್ವಗಳನ್ನು ಒತ್ತಾಯಮಾಡುವ ಪ್ರಯತ್ನವೂ ನಡೆಯಿತು. ಎಲ್ಲ ಪ್ರಭುತ್ವಗಳೂ ಧನಾಭಾವದ ಕಾರಣವನ್ನು ಮುಂದಿಟ್ಟವೇ ಹೊರತು ಅಂಗಡಿಗಳ ಮೂಲಕ ಪ್ರಜೆಗಳಿಗೆ ಹೆಂಡವನ್ನು ಒದಗಿಸುವ ಹಕ್ಕಿಗೆ ವಿರೋಧವಾಗುತ್ತದೆಂಬ ಸೊಲ್ಲೇ ಎತ್ತಲಿಲ್ಲ. ಒಬ್ಬ ಮಂತ್ರಿಯಂತೂ ಪಾನೀಯ ಮಾರಾಟದಿಂದ ಬರುವ ಆದಾಯವನ್ನು ಬೇರಾವ ವಿಧಾನದಿಂದಾದರೂ ನಾ ಕೂಡಿಸಿಕೊಡುವ ಸಹಾಯ ನೀಡುವುದಾದರೆ, ಅದನ್ನು ತತ್‌ಕ್ಷಣ ನಿಲ್ಲಿಸುವುದಾಗಿ ನನಗೆ ತಿಳಿಸಿದರು. ಆದಾಯ ಹೋಗುತ್ತದೆಂಬ ಕಾರಣದಿಂದಲೇ ಈ ಸುಧಾರಣೆ ಕಾರ್ಯರೂಪಕ್ಕೆ ಬರಲು ನಿಧಾನವಾಗಿದೆ ಎಂಬುದು ಬಹಿರಂಗವಾದ ಗುಟ್ಟು; ಎಂದರೆ, ಆದಾಯ ಹುಟ್ಟಿಸಿಕೊಳ್ಳುವುದಕ್ಕೆ ಕುಡಿತದ ಆಕರ್ಷಣೆಯನ್ನು ಜನತೆಯ ಮುಂದಿಡಲಾಗಿದೆ. ಅಫೀಮು ವ್ಯಾಪಾರದ ಕರಾಳ ಇತಿಹಾಸವಂತೂ ಈ ಮಾತಿನ ಸತ್ಯಕ್ಕೆ ಸಾಕ್ಷೀಭೂತವಾಗಿದೆ.

ವೈಯಕ್ತಿಕ ಸ್ವಾತಂತ್ರ್ಯದ ಮಾತನಾಡುವವರಿಗೆ ಭಾರತದ ನಿಜ ಸ್ವರೂಪ ತಿಳಿಯದು. ಒಬ್ಬ ವ್ಯಕ್ತಿ, ಪ್ರಭುತ್ವದಿಂದ ಕುಡಿತ ಸೌಲಭ್ಯದ ಹಕ್ಕನ್ನು ಕೇಳುವುದು ಹೇಗೋ ಅವನ ತೃಷ್ಣೆಯನ್ನು ಪೂರೈಸುವುದಕ್ಕೆ ಪ್ರಭುತ್ವ ಕುಲಟೆಯರನ್ನು ಒದಗಿಸಬೇಕೆಂದು ಕೇಳುವುದೂ ಹಾಗೆಯೇ. ನನ್ನ ಈ ಉದಾಹರಣೆಯಿಂದ ಮಿತಪಾನ ಮಾಡುವೆವೆಂದು ಹೆಮ್ಮೆಪಡು

ವವರಿಗೆ ಮನೋವ್ಯಥೆಯಾಗದೆಂದು ನಂಬಿದೇನೆ. ಈ ದೇಶದಲ್ಲಿ ಪಾಪ ಕೃತ್ಯಗಳನ್ನು ಶಾಸನಮಾಡಿ ಹತೋಟಿಯಲ್ಲಿಟ್ಟುಕೊಳ್ಳುವ ರೂಢಿ ನಮಗಿಲ್ಲ. ಜರ್ಮನಿ ಮುಂತಾದ ದೇಶಗಳಲ್ಲಿ ತಮ್ಮ ಶೀಲವನ್ನು ಮಾರಿಕೊಳ್ಳುವ ಹೆಂಗಸರಿಗೆ ರಹದಾರಿಯುಳ್ಳ ಗೃಹಗಳೇ ಇರುತ್ತವೆ. ಈ ಕುಲಟೆಯರ ಗೃಹಗಳ ಮತ್ತು ಪಾನಗೃಹಗಳ ರಹದಾರಿಯನ್ನು ನಿಲ್ಲಿಸುವುದರಿಂದ ಆ ದೇಶ ಗಳಲ್ಲಿ ಉಂಟಾಗಬಹುದಾದಷ್ಟು ಪ್ರತಿಭಟನೆ ಬೇರೆ ಇನ್ನಾವುದಕ್ಕೆ ಆದೀತೋ, ನಾನರಿಯೆ. ಹೆಣ್ಣಿಗೆ ತನ್ನ ಸ್ಥಾನಗೌರವದ ಅರಿವಾದರೆ, ಆಕೆ ತನ್ನ ಶೀಲವನ್ನು ಮಾರಲು ನಿರಾಕರಿಸಿಬಿಡುವಳು. ತಮ್ಮ ಸ್ತ್ರೀತ್ವದ ಬಗೆಗೆ ಗೌರವಾಭಿಮಾನವುಳ್ಳ ಮಹಿಳೆಯರು ಈ ಶಾಸನ ಬೆಂಬಲಪಡೆದ ವ್ಯಭಿಚಾರವನ್ನು ತೊಡೆದುಹಾಕಲು ಭೂಮ್ಯಂತರಿಕ್ಷಗಳನ್ನು ಒಂದು ಮಾಡಿಯಾರು. ಆಗ ವ್ಯಭಿಚಾರದಿಂದ ಜೀವನ ನಡೆಸುತ್ತಿದ್ದ ಸ್ವೈರಿಣಿ ಯರಿಗೂ ಅವರ ಅನುಬಂಧಿಗಳಿಗೂ ಬದುಕು ಕಷ್ಟವಾಯಿತೆಂದು ವಾದ ಮಾಡಲಾಗುವುದೇ ?

ಎಲ್ಲಿಯ ವರೆಗೆ ರಹದಾರಿ ಪಡೆದ ಕುಡಿತದಂಗಡಿಗಳು ಇರುವುವೋ ಮತ್ತು ಕುಡುಕರನ್ನು ದುರ್ಮಾರ್ಗಕ್ಕೆ ಸೆಳೆಯುವುವೋ ಅಲ್ಲಿಯವರೆಗೆ ಸುಧಾರಕರು ಪರಿಣಾಮಕಾರಿಯಾಗುವಂತೆ ಕೆಲಸಮಾಡಲು ಸಾಧ್ಯವಿಲ್ಲ ವೆಂದು ನನ್ನ ವಾದ. (ಹರಿಜನ : ೧೭-೬-೩೯)

ಶಿಕ್ಷಣಕ್ಕೆ ಮುಂಚೆ ಶಾಸನ

ಬರ್ಮಾದೇಶದ ಕ್ರೈಸ್ತ ಮಹಿಳಾ ಮಿತಪಾನ ಸಂಘದವರು ಗಾಂಧೀಜೀ ರಂಗೂನಿಗೆ ಭೇಟಿಕೊಟ್ಟ ಅವಕಾಶವನ್ನು ಉಪಯೋಗಿಸಿ ಕೊಂಡು, ಸಂಘದ ಸಭೆಯನ್ನುದ್ದೇಶಿಸಿ ಭಾಷಣಮಾಡಲೇರ್ಪಡಿಸಿದ್ದರು. ಸಭಾಧ್ಯಕ್ಷತೆ ವಹಿಸಿದ್ದ ಮಿಸ್. ಮೇ. ಮ್ಯಾಕ್ ಅವರು, ಗಾಂಧೀಜೀ ಯನ್ನು ಸ್ವಾಗತಿಸುತ್ತಾ ತಮ್ಮ ಸಂಸ್ಥೆ ಪಾನ ನಿರೋಧ ಶಾಸನಕ್ಕೆ ಮುಂಚೆ ಶಿಕ್ಷಣ ಆವಶ್ಯಕವೆಂಬುದನ್ನು ಅರಿತಿದೆ ಎಂದೂ, ಅದರಿಂದ ಶಾಸನವು ಪರಿಣಾಮಕಾರಿಯಾಗುವುದೆಂದೂ ತಿಳಿಸಿದರು. ಆದುದರಿಂದ ಬರ್ಮಾ

ದೇಶದ ವಿವಿಧ ಕುಲಗಳ ಪ್ರಾಪ್ತವಯಸ್ಕ ಜನಕ್ಕೆ ಪೂರ್ಣವಾಗಿ ಪಾನವನ್ನು ತ್ಯಜಿಸುವ ಆವಶ್ಯಕತೆಯನ್ನು ಕುರಿತು, ವ್ಯಕ್ತಿಗಳು, ತೀವ್ರ ಶೈಕ್ಷಣಿಕ ಚಳುವಳಿಯೊಂದನ್ನು ನಡೆಸಬೇಕೆಂಬ ಸಲಹೆಯನ್ನು ನೀಡಿದರು. ಏಕೆಂದರೆ, ಉತ್ತೇಜನನೇ ದೊರಕದೆ ಹೋದರೆ ಯಾವ ಅಂಗಡಿಯೂ ಬಹುಕಾಲ ಬಾಳಲಾರದು.

ಗಾಂಧೀಜೀ, ತಮ್ಮ ಉತ್ತರವೀಯುತ್ತಾ ಹೀಗೆ ನುಡಿದರು: "ತಾಯೀ, ನೀವು, ಜನತೆಯ ಮಧ್ಯೆ ಒಂದು ಶೈಕ್ಷಣಿಕ ಚಳುವಳಿಯೇ ನಡೆದರೆ ಅದರ ಪರಿಣಾಮವಾಗಿ ಕುಡಿತದ ಅಭ್ಯಾಸವಿರುವ ಜನ ಕುಡಿತದ ಅಂಗಡಿಗಳಿಗೆ ಹೋಗುವುದನ್ನೇ ನಿಲ್ಲಿಸುವರೆಂದೂ, ಕುಡಿತದ ಅಂಗಡಿಗಳೇ ಇಲ್ಲವಾಗುವುವೆಂದೂ ಸೂಚನೆ ಮಾಡಿದಿರಿ. ನಿಮ್ಮ ಅಭಿಪ್ರಾಯವನ್ನು ವಿರೋಧಿಸದೆ, ನನ್ನ ಅನುಭವಗಳನ್ನು ನಿಮ್ಮ ಮುಂದಿಡಬೇಕೆಂದಿದೇನೆ.

ದಕ್ಷಿಣ ಆಫ್ರಿಕಾದ ಪರಿಸ್ಥಿತಿ

"ಪಾನ ನಿರೋಧದ ಬಗೆಗೆ ನನ್ನ ಕಾರ್ಯ ೧೮೯೩ ರ ವೇಳೆಗೇ, ನಾನು ದಕ್ಷಿಣ ಆಫ್ರಿಕಾಕ್ಕೆ ಹೋದಾಗಲೇ ಆರಂಭವಾಯಿತು. ನನ್ನ ಜನ, ನನ್ನ ಸ್ವದೇಶೀಯರು, ಹೆಂಗಸರೂ ಸಹಾ—ಯಾರು ಭಾರತದಲ್ಲಿ ಕುಡಿಯುವ ಯೋಚನೆಯನ್ನೂ ಮಾಡರೋ ಅಂಥವರು—ಕುಡಿಯುವ ಪದ್ಧತಿಗೆ ತುತ್ತಾಗಿ, ಅದರ ಪರಿಣಾಮವಾಗಿ ತುಚ್ಛಜೀವನ ನಡೆಸುತ್ತಿರುವುದನ್ನು ಕಂಡು ಅದೊಂದು ಮಹಾ ಪ್ರಯಾಸದ ಕಾರ್ಯವೆನಿಸಿತು ನನಗೆ. ಆ ಸ್ತ್ರೀ ಪುರುಷರು ಪಾನನಿರೋಧದ ಮೇಲೆ ಉಪನ್ಯಾಸ ಕೇಳುವ ಸ್ಥಿತಿಯಲ್ಲಿರಲಿಲ್ಲ; ವೈಯಕ್ತಿಕ ಬುದ್ಧಿವಾದವೂ ಅವರ ಮೇಲೆ ಪರಿಣಾಮ ಮಾಡುವಂತಿರಲಿಲ್ಲ. ಅವರಲ್ಲಿ ಅನೇಕರು ಪೂರ್ಣವಾಗಿ ನಿಸ್ಸಹಾಯಕರಂತೆಯೂ ಇತರರು ಆ ರೀತಿ ಭಾವಿಸಿಕೊಂಡಿರುವುದಾಗಿಯೂ ನನಗೆ ಕಂಡುಬಂದರು. ಯಾವ ಅಧಿಕಾರವೂ ಇಲ್ಲದ ವ್ಯಕ್ತಿ ಯಾವ ಯಾವ ಕಾರ್ಯಕ್ರಮ ಕೈಗೊಳ್ಳಬಹುದೋ ಅದನ್ನೆಲ್ಲ ನಾ ಕೈಗೊಂಡೆ. ಆ ಪ್ರಯತ್ನಗಳಿಗೆ ಕಾಣಬಹುದಾದಂಥ ವಿಜಯ ದೊರಕಿತೆಂದು ಹೇಳಿಕೊಳ್ಳಲಾರೆ.

ದಕ್ಷಿಣ ಆಫ್ರಿಕಾ, ಒಕ್ಕೂಟ ಸರಕಾರವಾದ ಮೇಲೆ, ಒಂದು “ಸಾರಾಯಿ ನಿಯೋಗ”ವು (Liquor Commission) ಏರ್ಪಟ್ಟಿತು. ನಾನೂ ಆ ನಿಯೋಗದ ಮುಂದೆ ಸಾಕ್ಷ್ಯ ನುಡಿದೆ. ಆದರೆ, ಆ ನಿಯೋಗದಿಂದಲೂ ಏನೂ ಪ್ರಯೋಜನವಾಗಲಿಲ್ಲವೆಂಬುದನ್ನು ವ್ಯಸನದಿಂದ ಹೇಳಬೇಕಾಗಿದೆ. ಇಂದಿಗೂ 'ದಕ್ಷಿಣ ಆಫ್ರಿಕಾದ ಸ್ಥಿತಿ ಹಾಗೆಯೇ ವಿಚಿತ್ರವಾಗಿಯೂ ವ್ಯತಿಕ್ರಮವಾಗಿಯೂ ಇದೆ. ಸಾರಾಯಿ ಇಟ್ಟುಕೊಳ್ಳುವುದಕ್ಕೂ ಮತ್ತು ಕುಡಿಯುವುದಕ್ಕೂ ಸಂಬಂಧಿಸಿದಂತೆ ಮೂರು ಪ್ರತ್ಯೇಕಬಗೆಯ ನಿರ್ಬಂಧಗಳಿವೆ. ಬಂಟೆಂಗಳೂ, ಝೂಲೂಗಳೂ ತಮ್ಮೊಂದಿಗೆ ಸೀಸೆಗಳನ್ನು ತೆಗೆದುಕೊಂಡು ಹೋಗುವುದಕ್ಕೂ, ಕ್ಯಾಂಟೀನುಗಳಲ್ಲಿ ಪಡೆಯುವುದಕ್ಕೂ ಅವಕಾಶವಿಲ್ಲ. ಆದರೂ ಅವರು ಕುಡಿಯುತ್ತಾರೆ. ಭಾರತೀಯರೂ ಸೀಸೆಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿಲ್ಲ. ಆದರೆ ಕ್ಯಾಂಟೀನುಗಳಲ್ಲಿ ಅವರು ಅಪೇಕ್ಷಿಸಿದಷ್ಟು ಕುಡಿಯಬಹುದು. ಇದರ ಪರಿಣಾಮ, ಮುಖ್ಯವಾಗಿ ಸ್ತ್ರೀಯರ ಮೇಲೆ, ನಾ ವಿವರಿಸಿದಂತೆ ಆಗಿದೆ. ಶ್ವೇತವರ್ಣೀಯನಂತೂ ಸರ್ವಸ್ವತಂತ್ರ, ಅವನಿಗೆ ಸಂಬಂಧಿಸಿದಂತೆ ಯಾವ ಶಾಸನವೂ ಇಲ್ಲ. ಹೀಗಾಗಿ, ಶ್ವೇತವರ್ಣೀಯು ಅನುಭವಿಸುವ ಸ್ವಾತಂತ್ರ್ಯದಿಂದಲೇ ದಕ್ಷಿಣ ಆಫ್ರಿಕದ ಎಲ್ಲ ಕೆಡುಕೂ ಹುಟ್ಟಿದೆ. ಕೆಲವರಂತೂ ಬಂಟೂಗಳ ಮತ್ತು ಭಾರತೀಯರ ಕುಡಿತದ ಅಭ್ಯಾಸವನ್ನು ಶೋಷಣೆಮಾಡಿ ಹೇರಳ ಧನ ಸಂಗ್ರಹಮಾಡಿದಾರೆ.

ಭಾರತದಲ್ಲಿ ಆದುದೇನು ?

“ಅನಂತರ ನಾನು ಭಾರತಕ್ಕೆ ಬಂದೆ. ಅಲ್ಲಿನ ಸ್ಥಿತಿ ದಕ್ಷಿಣ ಆಫ್ರಿಕಾದ ಸ್ಥಿತಿಗಿಂತ ಒಂದು ವಿಧದಲ್ಲಿ ವ್ಯತ್ಯಾಸವಿದ್ದರೂ, ಸಮಸ್ಯೆ ಮೂಲತಃ ಒಂದೇ ಇರುವಂತೆ ಕಂಡುಬಂದಿತು. ನಿಮಗೆ ಗೊತ್ತಿರುವಂತೆ ೧೯೨೦–೨೧ ರಲ್ಲಿ ಪಾನನಿರೋಧಕ್ಕಾಗಿ ಒಂದು ಬಿರುಸಾದ ಚಳುವಳಿ ನಡೆಯಿತು. ಆ ಸಮಯದಲ್ಲಿ ದೇಶದ ಎಲ್ಲ ಪಾನ ನಿರೋಧ ಸಂಸ್ಥೆಗಳಿಂದಲೂ ಹೃತ್ಪೂರ್ವಕ ನೆರವು ದೊರೆತಿದ್ದರೆ ನಮಗೆ ಪೂರ್ಣ ಜಯ

ದೊರಕುತ್ತಿತೆಂದು ನಾ ಹೇಳಿದರೆ ನೀವು ಅನ್ಯಥಾ ಭಾವಿಸಲಾರಿರೆಂದು ನಂಬಿದೇನೆ. ನೀವು ಭಾರತದಲ್ಲಿ ನಡೆದ ಪಾನ ನಿರೋಧ ಚಳುವಳಿಯ ಇತಿಹಾಸವನ್ನು ಎಚ್ಚರಿಕೆಯಿಂದ ಓದಿದರೆ, ಸರಕಾರದ ವರದಿಗಳಿಂದಲೇ, ಅದು ಪೂರ್ಣ ಜಯದ ಹತ್ತಿರಹತ್ತಿರ ನಡೆದಿತ್ತೆಂದು ವಿದಿತವಾಗುತ್ತದೆ. ಅನೇಕ ಸಾರಾಯಿ ಅಂಗಡಿಗಳು ಪೂರ್ಣವಾಗಿ ನಿಂತೇ ಹೋಗಿದ್ದವು. ಅಸ್ಸಾಮಿನಲ್ಲಿ ನೂರಾರು ಅಫೀಮಿನ ಅಂಗಡಿಗಳು ತ್ಯಜಿಸಲ್ಪಟ್ಟದ್ದವು. ಅನಂತರ ದುರಂತದ ಅಧ್ಯಾಯ ಆರಂಭವಾಯಿತು. ಅದು ಸರಕಾರದ ದಮನಕಾರ್ಯ. ಅದೊಂದು ಅಪಮಾನಕರ ಹಾಗೂ ವ್ಯಸನಕರ ಪ್ರಸಂಗ. ಚಳುವಳಿಗೆ ರಾಜಕೀಯ ಬಣ್ಣವಿತ್ತೆಂಬುದನ್ನು ನಾ ಒಪ್ಪಿಕೊಳ್ಳುತ್ತೇನೆ. ಆ ರಾಜಕೀಯ ಬಣ್ಣವನ್ನು ಅದು ಹೊಂದಲೇಬೇಕಾಗಿತ್ತು. ಕೇವಲ ರಾಜಕೀಯ ಬಣ್ಣವಿತ್ತೆಂಬ ಕಾರಣದಿಂದಲೇ ಮೂಲಭೂತವಾಗಿ ನೈತಿಕ ಸ್ವರೂಪದ ಚಳುವಳಿಗೆ ಪಾನ ನಿರೋಧ ಸಂಘಗಳು ನೆರವು ನೀಡದಿರಬೇಕಾಗಿರಲಿಲ್ಲ. ವಿಷಾದಕರವಾದರೂ, ಸ್ವಾರಸ್ಯವಾಗಿರುವ ಈ ಚರಿತ್ರೆಯನ್ನು ನಿಮಗೆ ಹೇಳಿದುದಕ್ಕಾಗಿ ನೀವು ಕ್ಷಮಿಸುವಿರೆಂದು ನಂಬಿದೇನೆ. ಸರಕಾರದ ದಮನ ನೀತಿ ಹೀಗಾಯಿತು. ಬಿಹಾರ, ಅಸ್ಸಾಂ, ಮತ್ತು ಮಧ್ಯ ಪ್ರಾಂತಗಳಲ್ಲಿ ಸರಕಾರದ ಆದಾಯ ತತ್‌ಕ್ಷಣ ತುಂಬ ಕಮ್ಮಿಯಾಯಿತು. ಆತ್ಮಶುದ್ಧಿಗಾಗಿ ಒಂದು ಭಾವ ಲಹರಿ, ಆಕಾಂಕ್ಷೆ, ತೀವ್ರ ಆಸೆ ಉದ್ಭವವಾಯಿತು. ಆ ತೀವ್ರ ಆಸೆ ಹೇಗೆ ಬಂದಿತೋ ನಾನರಿಯೆ— ದೈವೀಮಾಯೆಯನ್ನು ನಾವು ಯಾವಾಗಲೂ ಅರಿಯಲಾರೆವು. ಆದರೆ, ರಾಜಕೀಯ ಚಳುವಳಿಯೂ ಆತ್ಮಶುದ್ಧಿಯ ಚಳುವಳಿಯಾಯಿತು. ಆ ಪ್ರವಾಹದಲ್ಲಿ ಸಾವಿರಾರು ಜನ ಸಾರಾಯಿ ಮತ್ತು ಅಫೀಮು ಅಂಗಡಿಗಳನ್ನು ಪಿಕೆಟ್ ಮಾಡುವ ಸ್ವಯಂಸೇವಕರಾದರು. ಕುಡಿತದ ಅಂಗಡಿಗಳನ್ನು ವರ್ಜಿಸುವುದು ತಮ್ಮ ಕರ್ತವ್ಯವೆಂದು ಪ್ರಜೆಗಳೂ ಅರ್ಥಮಾಡಿಕೊಂಡರು. ಸರಕಾರ ತನ್ನ ದಮನಕಾರ್ಯವನ್ನು ಆರಂಭಮಾಡಿ, ಸಾವಿರಾರು ಸ್ವಯಂಸೇವಕರನ್ನು ಕುಡಿತ ಮತ್ತು ಅಫೀಮು ಅಂಗಡಿಗಳನ್ನು ಪಿಕೆಟ್‌ಮಾಡಿದ ತಪ್ಪಿಗಾಗಿ ಜೈಲಿಗೆ ಹಾಕಿತು. ಇದರ ಪರಿಣಾಮವಾಗಿ ಒಮ್ಮೆ ಬರಿದಾಗಿ ಹಾಳು ಸುರಿಯುತ್ತಿದ್ದ ಸಾರಾಯಿ ಮತ್ತು ಅಫೀಮು ಅಂಗಡಿಗಳ ಮಾಲೀಕರು, ಬಹುಶಃ ೧೯೨೦–೨೧ ಕ್ಕೆ ಹಿಂದೆ ಮಾಡುತ್ತಿದ್ದ

ವ್ಯಾಪಾರಕ್ಕಿಂತ ಈಗ ಹೆಚ್ಚಾಗಿ ವ್ಯಾಪಾರ ಮಾಡುತ್ತಿರಬಹುದೆನಿಸುತ್ತದೆ ನನಗೆ.

ಶಿಕ್ಷಣಕ್ಕಿಂತ ಮುಂಚೆ ಶಾಸನ

ಈ ಕಥೆಯಿಂದ ಭಾರತ ಮತ್ತು ಬರ್ಮಾದೇಶಗಳಲ್ಲಿ ಅರಿಯಬಹುದಾದ ನೀತಿ ಎಂದರೆ, ಶಾಸನವು ಶೈಕ್ಷಣಿಕ ಪ್ರಚಾರದ ಜೊತೆಜೊತೆಯಲ್ಲಿಯೇ, ಒಂದು ವೇಳೆ ಮುಂಚೆ ಆಗದಿದ್ದರೆ, ನಡೆಯಬೇಕೆಂಬುದು. ಬರ್ಮಾ ದೇಶದಲ್ಲಿ ಪಾನದ ಸಮಸ್ಯೆ ಹೇಗಿದೆ ಎಂಬುದನ್ನು ನಾನು ಅರಿಯಲು ಇಚ್ಛೆ ಹೊಂದಿದ್ದರೂ, ಅರಿಯಲು ಸಾಧ್ಯವಾಗಿಲ್ಲ. ಬರ್ಮೀಯರ ಸಂಪರ್ಕ ಹೊಂದಿದಾಗಿನಿಂದ ಇದನ್ನು ಅರಿಯಲು ನಾನು ಪ್ರಯತ್ನಿಸುತ್ತಿದೇನೆಂದು ಭರವಸೆ ನೀಡಬಲ್ಲೆನಾದರೂ, ಬರ್ಮೀ ಗೆಳೆಯರಿಂದ ಇದನ್ನು ಅರಿಯಲು ಯತ್ನಿಸುತ್ತಿದ್ದರೂ, ಕೇವಲ ಎರಡನೆಯವರ ಅನುಭವದ ಆಧಾರದಿಂದಲೇ ಹೇಳಬೇಕು. ಆದರೆ, ಭಾರತದ ಬಗೆಗೆ ಮಾತ್ರ ಸ್ವಾನುಭವದಿಂದ ನುಡಿಯಬಲ್ಲೆ. ಶ್ರೀಮಂತ ವರ್ಗದಲ್ಲಿ ಕುಡಿತವು ಒಂದು ಅಭ್ಯಾಸವಾಗಿಲ್ಲವೆಂದು ಸ್ವಂತ ರುಜುವಾತು ಕೊಡಬಲ್ಲೆ. ಮಧ್ಯಮ ದರ್ಜೆಯ ವ್ಯಕ್ತಿಯಲ್ಲಂತೂ ಖಂಡಿತ ಇದು ಅಭ್ಯಾಸವಲ್ಲ. ಕೇವಲ ಕಾರ್ಮಿಕ ವರ್ಗ, ಅದರಲ್ಲಿಯೂ, ಗಿರಣಿ ಕಾರ್ಮಿಕರಿಗೆ ಅದು ಪರಿಮಿತವಾಗಿದೆ. ಇದೊಂದು ಸ್ವಾರಸ್ಯವಾದ ವಿಷಯ. ಗಿರಣಿಗಳಲ್ಲಿ ಕೆಲಸಮಾಡಲು ಬರುವುದಕ್ಕೆ ಮುಂಚೆ ಕುಡಿಯುವ ಅಭ್ಯಾಸವಿಲ್ಲದಿದ್ದ ಜನ ಗಿರಣಿಗಳಿಗೆ ಕೆಲಸಮಾಡಲು ಬಂದ ಮೇಲೆ ಏಕೆ ಕುಡಿಯುವುದನ್ನು ಅಭ್ಯಾಸಮಾಡುತ್ತಾರೆ ; ದಕ್ಷಿಣ ಆಫ್ರಿಕಾಕ್ಕೆ ವಲಸೆ ಹೋಗುವುದಕ್ಕೆ ಮುಂಚೆ ಕುಡಿಯದಿದ್ದ ಜನ, ಅಲ್ಲಿಗೆ ಹೋದ ಮೇಲೆ ಕುಡಿಯುವ ಅಭ್ಯಾಸ ಮಾಡಿದಂತೆ? ಇದಕ್ಕೆ ಉತ್ತರ, ಅಲ್ಲಿನ ಬಲವತ್ತರವಾದ ದುಷ್ಪ್ರಸೆಳೆವಿನ ಸನ್ನಿವೇಶ. ಅದಕ್ಕೆ ಅವರು ತುತ್ತಾಗಿ ಬಿಡುತ್ತಾರೆ. ಹೀಗೆ ಈ ಅಭ್ಯಾಸಕ್ಕೆ ತುತ್ತಾದ ಜನರೂ ತಮ್ಮ ಅಭ್ಯಾಸ ಸರಿ ಎಂದು ಹೇಳುವುದಿಲ್ಲ. ಅದರ ಬಗೆಗೆ ಅವರು ನಾಚಿಕೆಯನ್ನೇ ಪಡುತ್ತಾರೆ. ಆದರ ವಿಷಯವಾಗಿ ನೀವು ಅವರೊಡನೆ ಮಾತನಾಡಿದರೆ

ಅವರು ತಾವು ಕಾರ್ಮಿಕ ವರ್ಗದವರೆಂದೂ, ನಿಸ್ಸಹಾಯಕರೆಂದೂ ಉತ್ತರ ವೀಯುತ್ತಾರೆ. ಅನೇಕ ಬಗೆಯ ಸುಳ್ಳನ್ನು ಹೇಳಿ ನಮ್ಮನ್ನು ವಂಚಿಸಲು ಅವರು ಯತ್ನಿಸುತ್ತಾರೆ. ಇಷ್ಟಾದರೂ ತಮ್ಮ ಅಭ್ಯಾಸಕ್ಕೆ ಅವರು ನಾಚಿಕೆ ಪಡುತ್ತಾರೆ. ಯೂರೋಪಿನಲ್ಲಾದರೋ ನೀವು ನನ್ನ ಭೇಟಿಗೆ ಬಂದಾಗ ನಾನು ಕುಡಿತವನ್ನು ಸಹಿಸದಿದ್ದರೆ ಅದು ಅಸಭ್ಯತೆಯೆಂದು ಪರಿಗಣಿಸಲ್ಪಡುತ್ತದೆ. ನಾನು ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಗೆಳೆಯರ ಕುಡಿತವನ್ನು ನಾ ಸಹಿಸದಿದ್ದುದರಿಂದ ಅದು ನನ್ನನ್ನು ಕಿರಿಕಿರಿ ಸ್ಥಿತಿಗೆ ಈಡು ಮಾಡುತ್ತಿದ್ದಿತು. ಆದರೆ, ಭಾರತದಲ್ಲಿ ಹಾಗಿಲ್ಲ. ಆದುದರಿಂದ ಶಾಸನಕ್ಕೆ ಮುಂಚೆ ಶಿಕ್ಷಣವಾಗಬೇಕೆಂಬ ವಾದ ಸರಿಯಲ್ಲವೆಂದು ನಾ ಸೂಚಿಸಬಯಸುತ್ತೇನೆ. ಶಿಕ್ಷಣವು ಈ ದುಷ್ಟ ಪದ್ಧತಿಯೊಂದಿಗೆ ಎಂದಿಗೂ ಸರಿತೂಗದು. ಅಪಾರ ಆದಾಯ ಬರುತ್ತದೆಂಬ ದೃಷ್ಟಿಯಿಂದಲೇ ಪಾನ ನಿಷೇಧವಿಲ್ಲ. ಭಾರತೀಯ ಮಂತ್ರಿಗಳೂ ಹೀಗೆ ಹೇಳುತ್ತಾರೆ: 'ನಾವು ಈ ಆದಾಯವನ್ನು ತ್ಯಜಿಸಲಾರೆವು. ಇದಕ್ಕಾಗಿ ಶಿಕ್ಷಣ ಕಾರ್ಯವೇ ನಡೆಯಬೇಕು.'

ಆದುದರಿಂದ ಪಾನ ನಿರೋಧ ಕಾರ್ಯದಲ್ಲಿ ಆಸಕ್ತಿ ಹೊಂದಿರುವ ಮಹಿಳೆಯರಾದ ನೀವು ಧೈರ್ಯವುಳ್ಳವರಾಗಬೇಕೆಂದು ನಿಮ್ಮಲ್ಲಿ ಬಿನ್ನಯಿಸುತ್ತೇನೆ. ನಾನು ಹೇಳಿದುದನ್ನೇ ವೇದವಾಕ್ಯವೆಂದು ನೀವು ಪರಿಗಣಿಸಬೇಕಾಗಿಲ್ಲ. ನೀವೇ ಸತ್ಯಪರೀಕ್ಷೆ ಮಾಡಿ; ನಿಮ್ಮ ಈ ಪರೀಕ್ಷಣದಿಂದ ನಾನು ಹೇಳಿದುದು ನಿಮಗೆ ನಿಜವೆನಿಸಿದರೆ ಆಗ ನೀವು ಪೂರ್ಣ ಪಾನ ನಿಷೇಧವನ್ನು ನಿಮ್ಮ ಪವಿತ್ರ ಕರ್ತವ್ಯವೆಂದು ಭಾವಿಸಿ, ಬಿರುಗಾಳಿಯಂತೆ ತೀವ್ರತರ ಚಳುವಳಿಯನ್ನು ಆರಂಭಿಸಿ. ಇದೇನೋ ಕಷ್ಟವಾದ ಕಾರ್ಯವೇ; ಏಕೆಂದರೆ, ಪಾನದ ಕೆಡುಕಿನಿಂದ ಉಂಟಾದ ಹಕ್ಕು ಆಡಳಿತ ನಡೆಸುವವರಿಗೆ ಸೇರುತ್ತದೆ.

ಸುಧಾರಕನ ಸ್ಥಾನ

ನೀವು ಈ ವಿಷಯವನ್ನು ಆಡಳಿತಗಾರರೊಂದಿಗೆ ಚರ್ಚಿಸಿದರೆ ಅವರು ಎಲ್ಲ ಬಗೆಯ ಕಥೆಗಳನ್ನೂ ಹೇಳಿ, ಎಲ್ಲ ಬಗೆಯ ಕಷ್ಟಗಳನ್ನೂ ತಂದೊಡ್ಡಿ,

ಶಾಸನ ಅಸಾಧ್ಯವಾಗುವುದೆನ್ನುವರು. ಈ ಕಷ್ಟಗಳನ್ನು ನೀವು ನಂಬಬೇಡಿ. ಕಮ್ಮಿಬೀಳುವ ಆದಾಯವನ್ನು ತುಂಬುವುದರ ಹೊರತು ಬೇರಾವ ಕಷ್ಟವೂ ಇಲ್ಲ. ನೀವೂ ನಾನೂ ಈ ದುಷ್ಟ ಪದ್ಧತಿಯನ್ನು ತೊಡೆದುಹಾಕಬೇಕೆಂದು ಮನಸ್ಸು ಮಾಡಿದರೆ, ಅದು ಶಾಸನದಿಂದಲೇ ಆಗಬೇಕಾದರೆ, ಆಗ, ಕಮ್ಮಿ ಬೀಳುವ ಆದಾಯ ತೊಂದರೆಯನ್ನು ಪರಿಹರಿಸಿಕೊಳ್ಳುವುದಕ್ಕೆ ಸರಕಾರ ಉಪಾಯ ಹುಡುಕಲೇಬೇಕಾಗುತ್ತದೆ. ಕಮ್ಮಿಬೀಳುವ ಆದಾಯವನ್ನು ತುಂಬುವುದಕ್ಕೆ ಮಾರ್ಗ ಸೂಚಿಸಿರೆಂದು ನಿಮ್ಮನ್ನೇ ಕೇಳುವುದು ಅದಕ್ಕೆ ಯುಕ್ತವಲ್ಲ. ಅದು, ಕೊಳಕು ಕೈಯ ಮನುಷ್ಯನೊಬ್ಬ ನಿಮ್ಮ ಬಳಿಗೆ ಬಂದು ಕೈ ಶುದ್ಧಿಮಾಡೆಂದು ಕೇಳಿಕೊಂಡಂತಾಗುತ್ತದೆ. ಹೇಗಿದ್ದರೂ, ಪಿಕೆಟಿಂಗ್ ಮಾಡುವ ಪ್ರಶ್ನೆ ಏಳುತ್ತದೆ. ಸರಿಯಾದ ವೇಳೆ ಬಂದಾಗ,—ಅದು ಬರಲೆಂದು ನಾನು ಪ್ರಾರ್ಥಿಸುತ್ತಿದೇನೆ—ಎಲ್ಲ ಸಾರಾಯಿ ಮತ್ತು ಅಫೀಮು ಅಂಗಡಿಗಳೂ ಪಿಕೆಟ್ ಮಾಡಲ್ಪಟ್ಟಾಗ, ನೀವೆಲ್ಲ ನೆರವು ನೀಡುವಿರೆಂದೂ, 'ಅವನೊಬ್ಬ ಚಳುವಳಿಗಾರ, ನಾವು ಹೇಗೆ ಸಹಾಯ ಮಾಡೋಣ' ಎನ್ನುವುದಿಲ್ಲವೆಂದೂ ನಾನು ನಿರೀಕ್ಷಿಸುತ್ತೇನೆ. ಈಗಲೂ ಸೂರತ್ ಜಿಲ್ಲೆಯಲ್ಲಿ ಪಾನ ನಿರೋಧಕ್ಕಾಗಿ ಚಳುವಳಿ ನಡೆಯುತ್ತಿದೆ. ಅದಕ್ಕೆ ಕಾರಣ, ಒಳ್ಳೆಯ ಕಾರ್ಯಕರ್ತರು—ಸುಸಂಸ್ಕೃತ ಕುಟುಂಬಗಳ ಸ್ತ್ರೀಯರೂ ಸೇರಿ—ಧೀರರಂತೆ ಆತ್ಮಾರ್ಪಣೆಗೆ ಸಿದ್ಧರಾಗಿದ್ದಾರೆ. ನಂಬಿಕೆಗೆ ಅರ್ಹರೂ ಮತ್ತು ಆಕ್ಷೇಪಕ್ಕೆ ಸಿಕ್ಕದವರೂ ಆದ ಕಾರ್ಯಕರ್ತರ ತಂಡ ಸಿದ್ಧವಾದ ಕೂಡಲೇ ನಾವು ಚಳುವಳಿಯನ್ನು ದೇಶಾದ್ಯಂತ ಆರಂಭಿಸುತ್ತೇವೆ. ಅದು ಆರಂಭವಾದಾಗ, ಭಾರತದಲ್ಲೆಲ್ಲ ಪಿಕೆಟಿಂಗ್ ತಾನೇತಾನಾಗುತ್ತದೆ. ಅದರ ಪರಿಣಾಮ ಬಂಗಾಳಕೊಲ್ಲಿಯನ್ನೂ ದಾಟಿ, ಬರ್ಮಾ ದೇಶಕ್ಕೂ ಆಗುವುದೆಂದು ನಾ ನಂಬಿದೇನೆ. ಆಗ ಬರ್ಮಾದೇಶದ ಗೃಹಸ್ಥರೂ ಗೃಹಿಣಿಯರೂ, ಇಷ್ಟಪಟ್ಟರೆ ಪಿಕೆಟಿಂಗ್ ನಡೆಸಬಹುದು. ಇದರಿಂದ ಸಕಾಲದಲ್ಲಿ ತಪ್ಪಿಸದಿದ್ದರೆ ವಿನಾಶದೆಡೆಗೆ ಹೋಗುತ್ತಿರುವ ಘನ ಜನಾಂಗವೊಂದನ್ನು—ಭಾರತವೂ ಸೇರಿ—ರಕ್ಷಿಸಲು ಸಾಧ್ಯವಾದೀತು.

(ಯಂಗ್ ಇಂಡಿಯಾ : ೧೮-೪-೨೯)

ಆಕ್ಷೇಪಗಳಿಗೆ ಉತ್ತರ

ತತ್‌ಕ್ಷಣ ಪೂರ್ಣ ಪಾನ ನಿಷೇಧವನ್ನು ಆಚರಣೆಗೆ ತರುವುದಾದರೂ ಹೇಗೆ? 'ತತ್‌ಕ್ಷಣ' ಎಂದರೆ, ೧೯೩೭ ರ ಜುಲೈ ಹದಿನಾಲ್ಕರಿಂದ, ಪ್ರಥಮ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರ ಸ್ವೀಕಾರ ಮಾಡುವ ಸಮಯದಿಂದ, ಮೂರು ವರುಷಗಳೊಳಗೆ ಪೂರ್ಣ ಪಾನ ನಿಷೇಧವನ್ನು ಆಚರಣೆಗೆ ತರುವ ಬಗೆಗೆ ಒಂದು ಯೋಜನಾಬದ್ಧ ಘೋಷಣೆಯನ್ನು ಹೊರಡಿಸುವುದು ಎಂದು ನನ್ನ ಅಭಿಪ್ರಾಯ. ಎರಡು ವರುಷಗಳೊಳಗೇ ಇದನ್ನು ಕಾರ್ಯ ತರಲು ಸಾಧ್ಯವೆಂದು ನನ್ನ ಯೋಚನೆ. ಆದರೆ ಆಡಳಿತದ ತೊಂದರೆಗಳ ಪರಿಚಯವಿಲ್ಲದುದರಿಂದ ಮೂರು ವರುಷ ಗಡುವು ಇಟ್ಟಿದೇನೆ. ಕಾಂಗ್ರೆಸ್ಸು ಸರಕಾರದ ಆದಾಯ ಪ್ರಶ್ನೆಯನ್ನು ಪ್ರಾಮುಖ್ಯತೆಯ ರಾಷ್ಟ್ರೀಯ ಸಮಸ್ಯೆಯನ್ನಾಗಿ ಮಾಡಿದರೆ, ಪಾನ ನಿಷೇಧವು ದೂರದ ಕೂಗಾಗಿಯೇ ನಿಂತೀತು.

ಈ ಪಾನ ಮತ್ತು ಮಾದಕ ವಸ್ತುಗಳಿಂದ ಬರುವ ಆದಾಯ ಅತ್ಯಂತ ಕೀಳು ತೆರಿಗೆಯ ವಿಧಾನವೆಂಬುದು ನೆನಪಿರಲಿ. ಎಲ್ಲ ತೆರಿಗೆಯೂ ಒಳ್ಳೆಯ ದೆನಿಸಬೇಕಾದರೆ, ತೆರಿಗೆ ಕೊಡುವವನಿಗೆ ಆವಶ್ಯಕ ಸೇವೆಗಳ ರೂಪದಲ್ಲಿ ಹತ್ತರಷ್ಟು ಹಿಂದಕ್ಕೆ ಕೊಡಬೇಕು. ಸುಂಕವು, ಜನತೆ ತಮ್ಮ ನೈತಿಕ, ಮಾನಸಿಕ ಮತ್ತು ದೈಹಿಕ ನೀತಿಭ್ರಷ್ಟತೆಗೆ ತಾವೇ ಹಣವನ್ನು ಕೊಟ್ಟಹಾಗೆ ಮಾಡುತ್ತದೆ. ಅದನ್ನು ಸಹಿಸಲು ಪೂರ್ಣ ಅಶಕ್ತರಾದವರ ಮೇಲೆ ಅದೊಂದು ಹೆಣಭಾರವಾಗಿ ಪರಿಣಮಿಸುತ್ತದೆ. ಈ ಆದಾಯವು ಕಾಂಗ್ರೆಸ್ ವಿಶೇಷ ರೂಪದಲ್ಲಿ ಪ್ರತಿನಿಧಿಸುವ ಕೈಗಾರಿಕಾ ಕಾರ್ಮಿಕರಿಂದಲೂ ಮತ್ತು ವ್ಯಾವಸಾಯಿಕ ಕೂಲಿಕಾರರಿಂದಲೂ ಬಹುಮಟ್ಟಿಗೆ ಬರುತ್ತದೆಂದು ನಾ ನಂಬಿದೇನೆ.

ಆದಾಯ ನಷ್ಟವಾಗುತ್ತದೆಂಬುದು ಕೇವಲ ತೋರಿಕೆ. ಅವನತಿಗೆ ಕಾರಣವಾಗುವ ಈ ತೆರಿಗೆಯನ್ನು ತೆಗೆದುಹಾಕಿದರೆ, ಕುಡುಕ, ಎಂದರೆ, ತೆರಿಗೆ ಕೊಡುವವನು ಸಂಪಾದಿಸುವುದಕ್ಕೂ ಉತ್ತಮವಾಗಿ ವೆಚ್ಚ ಮಾಡುವುದಕ್ಕೂ ಸಹಾಯವಾಗುತ್ತದೆ. ಈ ಅಮೋಘ ಲಾಭದ ಜೊತೆಗೆ ರಾಷ್ಟ್ರಕ್ಕೆ ದೊಡ್ಡ ಪ್ರಮಾಣದ ಆರ್ಥಿಕ ಲಾಭವೂ ಆಗುತ್ತದೆ.

ಪಾನ ನಿಷೇಧವನ್ನು ನಾನು ಪ್ರಪ್ರಥಮ ವಿಷಯವಾಗಿ ಪರಿಗಣಿಸುವುದೇಕೆಂದರೆ, ಅದರ ಪರಿಣಾಮ ಕೂಡಲೇ ಸಿದ್ಧಿಸುವಂಥದು. ಕಾಂಗ್ರೆಸ್ ಕಾರ್ಯಕರ್ತ್ತರು, ವಿಶೇಷವಾಗಿ ಮಹಿಳೆಯರು ಅದಕ್ಕಾಗಿ ರಕ್ತಧಾರೆ ಎರೆದಿದಾರೆ. ನಾನು ಊಹಿಸಬಹುದಾದ ಎಲ್ಲ ಕಾರ್ಯಗಳಿಗಿಂತ ಇದೊಂದರಿಂದ ರಾಷ್ಟ್ರಗೌರವ ಅಧಿಕವಾಗುತ್ತದೆ. ಈ ಆರು ಪ್ರಾಂತಗಳನ್ನು ಉಳಿದ ಐದು ಪ್ರಾಂತಗಳು ಬಹಳಮಟ್ಟಿಗೆ ಅನುವರ್ತಿಸಿಯಾರು. ಕಾಂಗ್ರೆಸೇತರ ಮುಸಲ್ಮಾನ್ ಪ್ರಧಾನ ಮಂತ್ರಿಗಳೂ ಭಾರತವು ಕುಡಿತದ ದೇಶವಾಗಿರುವುದಕ್ಕಿಂತ, ಕುಡಿತವಿಲ್ಲದ ರಾಜ್ಯವಾಗಿರಬೇಕೆಂಬ ವಿಷಯದಲ್ಲಿ ಸಮಾನ ಆಸಕ್ತಿಯುಳ್ಳವರಾಗಿದ್ದಾರೆ.

ಕಳ್ಳ ಭಟ್ಟಿಯನ್ನು ತಪ್ಪಿಸುವುದಕ್ಕೆ ಅಗಾಧ ವೆಚ್ಚವಾಗುತ್ತದೆಂಬ ಕೂಗು ಠಕ್ಕಿನ ಕೂಗಲ್ಲದಿದ್ದರೆ ವಿಚಾರಹೀನ. ಭಾರತವು ಅಮೇರಿಕವಲ್ಲ. ಅಮೇರಿಕದ ನಿದರ್ಶನವು ನಮಗೆ ಸಹಾಯ ಮಾಡುವುದಕ್ಕಿಂತಲೂ ಅಡ್ಡಿಯನ್ನೇ ಒಡ್ಡುತ್ತದೆ. ಅಮೇರಿಕಾದಲ್ಲಿ ಕುಡಿಯುವುದೆಂದರೆ ನಾಚಿಕೆ ಇಲ್ಲ; ಕುಡಿವುದೇ ಒಂದು ರೂಢಿ. ಅಲ್ಪಸಂಖ್ಯಾತರಾದರೂ ದೃಢನಿಶ್ಚಯದಿಂದ ಕೂಡಿದವರಾಗಿ ತಮ್ಮ ನೈತಿಕ ಶಕ್ತಿಯನ್ನೆಲ್ಲ ಉಪಯೋಗಿಸಿ, ಅದು ಎಷ್ಟೇ ಕಮ್ಮಿ ಕಾಲ ಆಚರಣೆಯಲ್ಲಿದ್ದರೂ, ಪಾನ ನಿಷೇಧ ಶಾಸನಕ್ಕಾಗಿ ದುಡಿದ ಕೆಲವೇ ಅಮೇರಿಕನರು ಅತ್ಯಂತ ಗೌರವಕ್ಕೆ ಪಾತ್ರರು. ಅವರ ಪ್ರಯೋಗ ನಿಷ್ಫಲವೆಂದು ನಾ ಭಾವಿಸುವುದಿಲ್ಲ. ಮತ್ತೊಮ್ಮೆ ಹೆಚ್ಚು ಹುರುಪಿನಿಂದಲೂ ಉತ್ತಮ ಅನುಭವದಿಂದಲೂ ಅದು ಮತ್ತೊಮ್ಮೆ ಆರಂಭವಾಗುವುದಾದರೆ, ಅಮೇರಿಕದ ವಿಷಯದಲ್ಲಿ ನನಗೆ ಆಶಾಭಗ್ನತೆ ಇಲ್ಲ. ಭಾರತವು ಪಾನ ನಿಷೇಧವನ್ನು ಆಚರಣೆಗೆ ತಂದರೆ, ಅದು ಅಮೇರಿಕವನ್ನೂ ತೀವ್ರಗೊಳಿಸಲು ಸಾಧ್ಯವಾದೀತೇನೋ. ಜಗತ್ತಿನ ಭಾಗಗಳಿಗಿಂತಲೂ ಭಾರತದಲ್ಲಿ ಪಾನ ನಿಷೇಧವನ್ನು ಆಚರಣೆಗೆ ತರಲು ಸುಲಭ, ಏಕೆಂದರೆ, ಇಲ್ಲಿ ಕುಡುಕರ ಸಂಖ್ಯೆ ಬಹಳ ಕಡಿಮೆ. ಕುಡಿತವು ಸಾಮಾನ್ಯವಾಗಿ ಅಗೌರವವೆಂದೇ ಪರಿಗಣಿಸಲ್ಪಟ್ಟದೆ. ಕುಡಿತವೆಂದರೇನೆಂಬುದನ್ನು ಅರಿಯದ ಲಕ್ಷೋಪಲಕ್ಷ ಜನವಿದಾರೆಂದು ನನ್ನ ನಂಬಿಕೆ.

ಆದರೆ ಕಳ್ಳಭಟ್ಟಿ ಇಳಿಸುವುದನ್ನು ತಪ್ಪಿಸಲು ಇತರ ಅಪರಾಧಗಳನ್ನು ತಪ್ಪಿಸುವುದಕ್ಕಿಂತ ಹೆಚ್ಚು ವೆಚ್ಚ ಏಕೆ ಆಗಬೇಕು? ಕಳ್ಳಭಟ್ಟಿ ಇಳಿಸು

ವುದನ್ನು ನಾನು ತುಂಬ ಶಿಕ್ಷೆಗೆ ಗುರಿಪಡಿಸಿ, ನಿಶ್ಚಿಂತನಾಗುತ್ತೇನೆ. ಇಷ್ಟಾದರೂ ಸ್ವಲ್ಪಭಾಗ ಕಳ್ಳತನದಂತೆ ಸೃಷ್ಟಿಯ ಅಂತ್ಯದ ವರೆಗೂ ಹೋಗ ಬಹುದು. ಕಳ್ಳಭಟ್ಟಿ ಸ್ಥಾನಗಳನ್ನು ಕಂಡು ಹಿಡಿಯುವುದಕ್ಕಾಗಿ ಒಂದು ವಿಶೇಷ ಪಡೆಯನ್ನೇ ನಾನು ಏರ್ಪಡಿಸೆನು. ಆದರೆ, ಕುಡಿದು ರಸ್ತೆ ಗಳಲ್ಲಿಯೂ ಇತರ ಸಾರ್ವಜನಿಕ ಸ್ಥಳಗಳಲ್ಲಿಯೂ (ಶಾಸನಬದ್ಧ ರೀತಿಯಲ್ಲಿ) ಅವ್ಯವಸ್ಥೆಯ ರೀತಿಯಲ್ಲಿ ನಡೆದುಕೊಳ್ಳುವುದು ಕಂಡುಬರದಿದ್ದರೂ, ಕುಡಿದು ಸಿಕ್ಕಿದವರಿಗೆ ಅಗಾಧ ದಂಡವನ್ನೋ ತಪ್ಪಿದರೆ, ಕುಡಿದು ತಪ್ಪುಮಾಡಿದವರು, ಹೆಣ್ಣಾಗಲೀ, ಗಂಡಾಗಲೀ ಪರಿವರ್ತನೆ ಹೊಂದುವವರೆಗೂ ಅನಿರ್ದಿಷ್ಟ ಕಾಲದ ತುರಂಗವಾಸವನ್ನೋ ವಿಧಿಸುವೆ.

ಇದು ನಿಷೇಧಕ ಮಾರ್ಗ. ಪ್ರಧಾನವಾಗಿ ಮಹಿಳೆಯರಿಂದಲೇ ಏರ್ಪಟ್ಟ ಸ್ವಯಂಸೇವಕ ಸಂಘಗಳು ಕಾರ್ಮಿಕರು ವಾಸಿಸುವ ಪ್ರದೇಶ ಗಳಲ್ಲಿ ಕೆಲಸ ಮಾಡಬೇಕು. ಅವರು, ಕುಡಿತದ ಅಭ್ಯಾಸವಿರುವವರನ್ನು ಭೇಟಿಮಾಡಿ, ಅವರನ್ನು ಅದರಿಂದ ತಪ್ಪಿಸಲು ಯತ್ನಿಸಬೇಕು. ಕಾರ್ಮಿಕ ರಿಗೆ ಕೆಲಸಕೊಡುವವರು ಅವರ ಉಪಯೋಗಕ್ಕಾಗಿ ಅಗ್ಗವೂ ಆರೋಗ್ಯ ಕರವೂ ಆದ ಮನೋರಂಜಕ ಕ್ರಿಯೆಗಳನ್ನೂ ವಾಚನಾಲಯ ಮತ್ತು ವಿನೋದ ಮಂದಿರಗಳನ್ನೂ ಏರ್ಪಡಿಸಬೇಕು. ಕಾರ್ಮಿಕರು ಅಲ್ಲಿಗೆ ಹೋಗಿ ರಕ್ಷಣೆ, ಜ್ಞಾನ ಮತ್ತು ಆರೋಗ್ಯಕರ ಆಹಾರವನ್ನೂ, ಪಾನೀಯ ಮತ್ತು ಅಪಾಯವಿಲ್ಲದ ವಿನೋದವನ್ನೂ ಹೊಂದುವಂತಿರಬೇಕು.

ಹೀಗೆ, ಪಾನ ನಿಷೇಧವೆಂದರೆ ಅದೊಂದು ಬಗೆಯ ರಾಷ್ಟ್ರೀಯ ವಯಸ್ಕರ ಶಿಕ್ಷಣವೇ ಆಗುತ್ತದೆ. ಅದು ಕೇವಲ ಕುಡಿತದ ಅಂಗಡಿ ಗಳನ್ನು ಮುಚ್ಚುವುದಲ್ಲ.

ಹೊಸ ಅಂಗಡಿಗಳು ಆರಂಭವಾಗುವದಕ್ಕೆ ಅನುಜ್ಞೆ ಕೊಡುವುದನ್ನು ತಪ್ಪಿಸುವುದು ಮತ್ತು ಸಾರ್ವಜನಿಕರಿಗೆ ತೊಂದರೆಯನ್ನೂ ಅಪಾಯವನ್ನೂ ಉಂಟುಮಾಡುವ ಅಂಗಡಿಗಳನ್ನು ನಿಲ್ಲಿಸುವುದು ಇವುಗಳಿಂದ ಪಾನ ನಿಷೇಧ ಮೊದಲಾಗಬೇಕು. ತುಂಬ ಪರಿಹಾರವನ್ನು ನೀಡದೆ ಮೊದಲನೆಯದು ಹೇಗೆ ಸಾಧ್ಯವೆಂಬುದನ್ನು ನಾನರಿಯೆ. ಹೇಗಾದರೂ, ಸಾಮಾನ್ಯವಾಗಿ, ಅನುಜ್ಞೆ ಯಾವ ಅಂಗಡಿಗಳಿಗೆ ಮುಗಿಯುತ್ತವೆಯೋ ಅವು ನವೀಕರಿಸಲ್ಪಡ ಬಾರದು. ಯಾವ ಕಾರಣಕ್ಕೇ ಆಗಲಿ, ಹೊಸ ಅಂಗಡಿಗಳು ಆರಂಭವಾಗ

ಬಾರದು. ಆದಾಯದ ದೃಷ್ಟಿಯಿಂದ, ಶಾಸನದ ಪ್ರಕಾರವಾಗಿ ಏನೇನು ಮಾಡಲು ಸಾಧ್ಯವೋ ಅವೆಲ್ಲ ಸ್ವಲ್ಪವೂ ವಿಳಂಬವಿಲ್ಲದೆ ಮಾಡಲ್ಪಡಬೇಕು.

ಆದರೆ, ಪೂರ್ಣ ಪಾನ ನಿಷೇಧದ ಅರ್ಥ ಅಥವಾ ವ್ಯಾಪ್ತಿಯಾದರೂ ಏನು ? ಪೂರ್ಣ ಪಾನ ನಿಷೇಧವೆಂದರೆ, ಎಲ್ಲ ಬಗೆಯ ಉನ್ಮಾದಕ ಪಾನೀಯಗಳನ್ನೂ, ಪದಾರ್ಥಗಳ ಮಾರಾಟವನ್ನೂ ನಿಲ್ಲಿಸಿ, ಔಷಧೀಯ ಉದ್ದೇಶಕ್ಕಾಗಿ, ವೈದ್ಯಕೀಯ ವೃತ್ತಿಯಲ್ಲಿರುವವರು ಕೊಡುವ ಸಲಹೆಗನುಸಾರವಾಗಿ, ಸರಕಾರವೇ ಇಟ್ಟಿರುವ ಕೋಠಿಗಳಲ್ಲಿ ಮಾತ್ರ ಅವನ್ನು ಕೊಂಡುಕೊಳ್ಳಲು ಅವಕಾಶವಿರುವಂತಾಗಬೇಕು. ವಿದೇಶೀ ಪಾನೀಯಗಳು, ಕುಡಿತವಿಲ್ಲದೆ ಯಾವ ಐರೋಪ್ಯರು ಇರಲಾರರೋ ಅವರ ಉಪಯೋಗಕ್ಕೆ ಬೇಕಾಗುವಷ್ಟನ್ನು ಮಾತ್ರ ಆಮದು ಮಾಡಿಕೊಳ್ಳಬಹುದು. ಇವು ಕ್ಲಿಪ್ತವಾದ ಜಾಗಗಳಲ್ಲಿ, ಅಧಿಕೃತ ಅಪ್ಪಣೆ ಚೀಟಿಗಳ ಮೇಲೆ ಸೀಸೆಗಳಲ್ಲಿ ಮಾರಲ್ಪಡುವುವು. ಭೋಜನ ಶಾಲೆಗಳಲ್ಲಿಯೂ, ವಿವಾಹ ಮಂದಿರಗಳಲ್ಲಿಯೂ ಮಾದಕ ಪಾನೀಯಗಳ ಮಾರಾಟ ನಿಲ್ಲಿಸಲ್ಪಡುವುದು.

(ಹರಿಜನ: ೩೧-೭-೩೭)

ಅವ್ಯವಹಾರ್ಯವಲ್ಲ

ಸರದಾರ್ ಜೋಗೇಂದ್ರಸಿಂಗ್ ಅವರು ದೊಡ್ಡ ಸಮಾಜ ಸುಧಾರಕರು, ಪಂಡಿತರು ಮತ್ತು ರಾಜಕಾರಣಿ. ಅವರು 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಪೂರ್ಣ ಪಾನ ನಿಷೇಧದ ವಿಷಯವಾಗಿ ಒಂದು ಲೇಖನವನ್ನು ಬರೆದಿದ್ದಾರೆ. ಆದುದರಿಂದ ಅವರು ಬರೆದುದು ಗಮನಾರ್ಹವಾದುದು. ಅವರ ಲೇಖನಗಳಿಗೆ ನಾನು ಎಷ್ಟು ಎಚ್ಚರಿಕೆ ಕೊಡಬಹುದೋ ಅಷ್ಟನ್ನೂ ಕೊಟ್ಟು ಓದಿದಮೇಲೆ ಅದನ್ನು ವ್ಯಸನದಿಂದ ಕೆಳಗಿಡಬೇಕಾಯಿತೆಂದು ನಾ ಒಪ್ಪಿಕೊಳ್ಳಬೇಕು. ಅವರಂಥ ಸುಧಾರಕರು ವಿಮರ್ಶೆಗೆ ನಿಲ್ಲದಂಥ ಕಾರಣಗಳ ಮೇಲೆ ಸೋಲನ್ನೇಕೆ ಅಂಗೀಕರಿಸಬೇಕು? ಅವರ ಒಂದೇ ವಾದ ನನಗೆ ಹೀಗೆ ಭಾಸವಾಗುತ್ತದೆ: 'ಕಳ್ಳಭಟ್ಟಿ ಮತ್ತು ಗೋಪ್ಯವಾಗಿ ಕುಡಿಯುವುದು ಆರಂಭವಾಗುತ್ತವೆ; ಆದುದರಿಂದ ಪಾನ

ನಿಷೇಧವನ್ನು ಪ್ರಯತ್ನ ಮಾಡಬೇಡಿ." ಪಂಜಾಬಿನಲ್ಲಿ ಸ್ಥಾನಿಕ ವಿವೇಚನೆ ಇತ್ತು. ಆದರೆ ಅದನ್ನು ಯಾರೂ ಪ್ರಯೋಗ ಮಾಡಲಿಲ್ಲ. "ಆದುದರಿಂದ", ಅವರು ಹೀಗೆ ಹೇಳುತ್ತಾರೆ, "ಬಲಾತ್ಕಾರವಾಗಿ ಪಾನ ನಿಷೇಧವನ್ನು ಆಚರಣೆಗೆ ತಂದರೆ ಅದು ನಿಷ್ಫಲವಾಗುತ್ತದೆಂದು ನನ್ನ ತೀರ್ಮಾನ. ಇದರ ಜೊತೆಗೆ ಗ್ರಾಮ ಪುನರುಜ್ಜೀವನಕ್ಕಾಗಿ ವಿನಿಯೋಗ ಮಾಡಬಹುದಾದ ಆದಾಯವನ್ನೂ ಪ್ರಾಂತೀಯ ಸರಕಾರಗಳು ಕಳೆದುಕೊಳ್ಳುತ್ತವೆ." ಪಾನ ನಿಷೇಧವನ್ನು ರಾಜ್ಯಾದಾಯದ ಜೊತೆಗೆ ಸೇರಿಸಿ, ಸರದಾರರು, ತಮ್ಮ ವಿಷಯವನ್ನೇ ಅವುಸರದಿಂದ ಬಿಟ್ಟಿರುವುದಲ್ಲದೆ ತಮ್ಮ ವಾದವನ್ನು ತಾವೇ ವಿರೋಧಮಾಡಿಕೊಂಡಿದಾರೆ. ಏಕೆಂದರೆ, ಅವರು ತಮ್ಮ ಲೇಖನದ ನಾಲ್ಕನೇ ವಾಕ್ಯವೃಂದದಲ್ಲಿ ಹೀಗೆ ಹೇಳಿದಾರೆ. "ಪಾನ ನಿಷೇಧವನ್ನು ಆಚರಣೆಗೆ ತರುವುದರಲ್ಲಿ ಆದಾಯದ ಪ್ರಶ್ನೆಯೇ ನನ್ನ ಗಮನಕ್ಕೆ ಬರದೆಂದು ನಾನು ಸ್ಪಷ್ಟವಾಗಿ ಘೋಷಿಸಿದೆ." ದೈವವಶಾತ್, ಕಾಂಗ್ರೆಸ್ ಮಂತ್ರಿಮಂಡಲಗಳು ಈ ಆದಾಯದ ಜಾಲವನ್ನು ಕತ್ತರಿಸಿದಾರೆ. ಪಾನದಿಂದ ಬರುವ ಆದಾಯವನ್ನು ಅವರು ತ್ಯಜಿಸಿದಾರೆ. ಸ್ವಲ್ಪ ಅವಕಾಶ ದೊರೆತರೆ ಸಾಕು; ಈ ಅನೀತಿಯ ಆದಾಯವನ್ನು ಉಪಯೋಗಿಸಿಕೊಳ್ಳಬೇಕೆಂಬ ಆಶೆಯ ಸೆಳೆತದಿಂದ ಪಾರಾಗುವುದು ಕಷ್ಟ; ಏಕೆಂದರೆ, ಒಂದು ಕ್ಷಣದಲ್ಲಿ ಕುಡುಕನನ್ನು ಸೌಮ್ಯನನ್ನಾಗಿ ಮಾಡುವುದು ಕಷ್ಟವೆಂಬುದನ್ನು ಯಾರೂ ಇಲ್ಲವೆನ್ನರು. ಹಿಂದಿನ ಮಂತ್ರಿಗಳೊಡನೆ ಪಾನ ನಿಷೇಧದ ವಿಚಾರವಾಗಿ ನಾ ವಾದ ಮಾಡಿದಾಗ ಅವರು ಅದು ಅವ್ಯವಹಾರ್ಯವೆಂಬ ಕಾರಣವನ್ನು ಹೂಡಲಿಲ್ಲ. ಆದರೆ, ಆ ವ್ಯಾಪಾರದಿಂದ ಲಭಿಸುವ ಅಪಾರ ಆದಾಯವನ್ನು ಅವರು ತ್ಯಜಿಸಲು ಸಾಧ್ಯವಿಲ್ಲವೆಂದು ವಾದಿಸುತ್ತಿದ್ದರು. ಆ ಆದಾಯ ವಿದ್ಯಾಭ್ಯಾಸಕ್ಕೆಂದು ಅವರು ಅಪೇಕ್ಷಿಸುತ್ತಿದ್ದರು. ಟೀಕೆಗೆ ಆಸ್ಪದವಾದ ಮಾರ್ಗಗಳಿಂದ ಬರುವ ಆದಾಯದ ವೆಚ್ಚದಿಂದ ಪಡೆವ ಶಿಕ್ಷಣ ಯುಕ್ತವೆ? ಅದರಲ್ಲಿ ಮೂಲ ಬೆಲೆ ಇದೆಯೆ? ಭಾರತದ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಕೊಡಲ್ಪಡುವ ಶಿಕ್ಷಣದ ಮಾದರಿಯಲ್ಲಿ ತಯಾರಾಗುವವರಿಂದ ದೇಶಕ್ಕೆ ಪ್ರತಿಫಲ ದೊರೆತಿದೆಯೆ?

ಕಳ್ಳತನ ಸೃಷ್ಟ್ಯಂತದ ವರೆಗೂ ಇದ್ದೀತು. ಆದುದರಿಂದ ಅದಕ್ಕೆ ರಹದಾರಿಯನ್ನೇ ಕೊಡಬಹುದೆ? ಮಾನಸಿಕವಾಗಿ ನಡೆಯಬಹುದಾದ

ಕಳ್ಳತನ ವಸ್ತುಗಳ ಕಳ್ಳತನಕ್ಕಿಂತ ಕಮ್ಮಿ ಎನಿಸುವ ತಪ್ಪೆ? ಸ್ವಲ್ಪ ಪ್ರಮಾಣದ ಕಳ್ಳಭಟ್ಟಿ, ನಿಸ್ಸಂದೇಹವಾಗಿ, ನಡೆದೆ ಇದ್ದೀತು. ಎಚ್ಚರಿಕೆಯುಳ್ಳ ಸಾರ್ವಜನಿಕರು ಕುಡುಕರನ್ನೂ, ಅಫೀಮು ಸೇವಿಸುವವರನ್ನೂ, ಒಂದೇ ಸಮನಾಗಿ ದಯೆಯಿಂದ ಕಂಡು ಸರಕಾರದ ಪ್ರಯತ್ನಕ್ಕೆ ನೆರವನ್ನು ಎಸಗುವುದಾದರೆ, ಅದರ ಗುಣ ಉತ್ತಮವಾದೀತು. ಭೌತಿಕ ಉನ್ನತಿಗಿಂತ ಯಾವ ವಿಧದಲ್ಲಿಯೂ ಕಮ್ಮಿಯಿಲ್ಲದ ಬೆಲೆ ನೈತಿಕ ಉನ್ನತಿಗೂ ಆವಶ್ಯಕ. ಈ ರಚನಾತ್ಮಕ ಕಾರ್ಯಕ್ರಮಕ್ಕೆ ಪೂರ್ಣ ಪಾನ ನಿಷೇಧದ ಹಿನ್ನೆಲೆ ಇಲ್ಲದಿದ್ದರೆ ಇದು ನಿರರ್ಥಕವೇ ಆದೀತು. ಎಲ್ಲಿಯವರೆಗೆ ಸರಕಾರವು, ಕುಡುಕನಿಗೆ ತನ್ನ ಚಟವನ್ನು ಪೂರ್ಣಮಾಡಿಕೊಳ್ಳಲು ಅನುಜ್ಞೆಯನ್ನು ನೀಡುವುದಲ್ಲದೆ ಅನುಕೂಲತೆಗಳನ್ನೂ ಒದಗಿಸುವುದೋ, ಅಲ್ಲಿಯವರೆಗೂ ಸುಧಾರಕನ ಯಶಸ್ಸು ಅಸಂಭವವೇ ಸರಿ. ಜಿಪ್ಸಿ ಸ್ಮಿತ್ ಎಮ್ಬವವರು ಪ್ರಬಲ ಮದ್ಯಪಾನ ನಿಷೇಧದ ಬೋಧಕರಾಗಿದ್ದರು. ಅವರ ಗೀತೆ ಮತ್ತು ಬೋಧೆಯನ್ನು ಕೇಳಿದ ಅನೇಕ ಜನ ಸಭೆಗಳಲ್ಲಿಯೇ ಕುಡಿತವನ್ನು ಪೂರ್ಣ ತ್ಯಜಿಸುವ ಪ್ರತಿಜ್ಞೆ ತೆಗೆದುಕೊಳ್ಳುತ್ತಿದ್ದುದು ಒಂದು ವಿಶೇಷ ಅಂಶವಾಗಿದ್ದಿತು. ಆದರೆ ದಕ್ಷಿಣ ಆಫ್ರಿಕಾದ ನನ್ನ ಅನುಭವದಿಂದ ಹೀಗೆ ಹೇಳುತ್ತೇನೆ. ಈ ಚಟಕ್ಕೆ ಬಲಿಬಿದ್ದಿರುವ ಅನೇಕ ಮಂದಿ ಬಡವರು ತಮ್ಮೆದುರಿಗಿದ್ದ ಕುಡಿತದ ಭವ್ಯ ಮಂದಿರಗಳಿಗೆ ಹೋಗಬೇಕೆಂಬ ಆಶಾ ಸೆಳೆತವನ್ನು ತಡೆಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಅವು ನಗರಗಳ ಪ್ರಧಾನ ವೀಧಿಗಳಲ್ಲಿಯೇ ಇರಲಿ, ನಗರಗಳ ಹೊರಗಡೆಯೇ ಇರಲಿ, ಎಲ್ಲಿಗಾದರೂ ಹೋಗುತ್ತಿದ್ದರು. ಸರಕಾರ ಮಾಡಬಹುದಾದ ನಿಷೇಧಾಜ್ಞೆಯೇ ಈ ಮಹಾಕಾರ್ಯದ ಅಂತ್ಯಮವಲ್ಲ. ಇದು ಅನಿವಾರ್ಯವಾದ ಆರಂಭ ಮಾತ್ರ.

ಸ್ಥಾನೀಯ ವಿವೇಚನೆಯ ವಿಚಾರವಾಗಿ ಎಷ್ಟು ಕಮ್ಮಿ ಹೇಳಿದರೆ ಅಷ್ಟು ಉತ್ತಮ. ಈ ಪಾಪಕೂಪಗಳನ್ನು ಮುಚ್ಚುವುದಕ್ಕೆ ಯಾವಾಗಲಾದರೂ ಪ್ರತಿಭಟನೆ ಇದ್ದಿತೆ? ಎಲ್ಲಿ ಪೂರ್ಣ ಜನಸಂಖ್ಯೆ ಕುಡಿಯಲಪೇಕ್ಷಿಸುವುದೋ ಅಲ್ಲಿ ವಿವೇಚನೆಗೆ ಸ್ಥಾನವಿದೆ.

ದೈವೇಚ್ಛೆಯಿದ್ದರೆ, ಪಾನ ನಿಷೇಧವು ಸ್ಥಿರವಾಗಿ ನಿಲ್ಲುವುದು. ಕಾಂಗ್ರೆಸ್ ಸಂಸ್ಥೆ ಇನ್ನೇನನ್ನೇ ಸಾಧಿಸಲಿ ಬಿಡಲಿ, ಅದು ೧೯೨೦ ರಲ್ಲಿಯೇ ಪೂರ್ಣ ಪಾನ ನಿಷೇಧದ ಪ್ರತಿಜ್ಞೆ ಮಾಡಿ, ತನಗೆ ಅವಕಾಶ ಸಿಕ್ಕಿದ

ಕೂಡಲೇ, ಅದರಿಂದ ದ್ರವ್ಯನಷ್ಟ ಏನೇ ಆಗಲಿ ಆದನ್ನು ಲೆಕ್ಕಿಸದೆ ಪೂರ್ಣ ಮಾಡಿತೆಂದು, ಇತಿಹಾಸದ ಸುವರ್ಣಾಕ್ಷರಗಳಲ್ಲಿ ಉಲ್ಲೇಖಿಸಲ್ಪಟ್ಟೀತು. ಇತರ ಪ್ರಾಂತಗಳೂ ಇದನ್ನು ಅನುಸರಿಸುವ ವಿಷಯದಲ್ಲಿ ನನಗೆ ಅಪ ನಂಬಿಕೆಯೇ ಇಲ್ಲ. ಸರದಾರ್ ಜೋಗೇಂದ್ರಸಿಂಗ್ ಅವರು ಈ ಪರಮ ಆವಶ್ಯಕ ಸುಧಾರಣೆಯ ವಿಷಯದಲ್ಲಿ ಕಾಂಗ್ರೆಸ್ಸಿಗೆ ಎಚ್ಚರಿಕೆ ನೀಡುವುದಕ್ಕೆ ಪ್ರತಿಯಾಗಿ ತಮ್ಮ ಸ್ವಂತ ಪ್ರಾಂತದಲ್ಲಿಯೂ ಮತ್ತು ಸಿಖ್ ಪ್ರಮುಖ ರಲ್ಲಿಯೂ ಇದರ ಪರವಾಗಿ ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸಲೆಂದು ಪ್ರಾರ್ಥಿಸುತ್ತೇನೆ. (ಹರಿಜನ : ೨೫-೯-೩೭)

ಚಳುವಳಿಯ ಕಾರ್ಯಕ್ರಮ

ಪಾನ ನಿಷೇಧವು ಭಾರತದಲ್ಲಿ ಒಂದು ದೊಡ್ಡ ನೈತಿಕ ಜಾಗೃತಿ ಯನ್ನುಂಟುಮಾಡಬೇಕಾದರೆ, ಪಾನದಂಗಡಿಗಳನ್ನು ಮುಚ್ಚುವುದು ಚಳು ವಳಿಯ ಅನಿವಾರ್ಯ ಆರಂಭವೆನ್ನಬೇಕು. ಕುಡಿತ ಮತ್ತು ಮಾದಕ ವಸ್ತು ಗಳ ಅಭ್ಯಾಸಕ್ಕೆ ಬಿದ್ದು ತಮ್ಮ ಶರೀರ ಹಾಗೂ ಆತ್ಮ ವಿನಾಶ ಮಾಡಿಕೊಂಡಿ ರುವ ಅಸಂಖ್ಯ ಬಡವರನ್ನೂ ಶ್ರೀಮಂತರನ್ನೂ ಇದರಿಂದ ಪಾರುಮಾಡು ವುದರಲ್ಲಿ ಅದು ಕೊನೆಗೊಳ್ಳಬೇಕು. ಈ ಉದ್ದೇಶವು ಕೇವಲ ಸರಕಾರ ವೊಂದರ ಪ್ರಯತ್ನದಿಂದಲೇ ಈಡೇರಲಾರದು. ಚಳುವಳಿಯ ಕಾರ್ಯಕ್ರಮ ವನ್ನು ಈ ರೀತಿ ಸೂಚಿಸಬಯಸುತ್ತೇನೆ.

೧. ಪ್ರತಿ ಪ್ರಾಂತದಲ್ಲಿಯೂ ಇರುವ ಪಾನ ಮತ್ತು ಮಾದಕ ವಸ್ತು ಗಳ ಮಾರಾಟದ ಪ್ರದೇಶವನ್ನು ತೋರಿಸುವ ನಕ್ಷೆಯನ್ನು ತಯಾರಿಸಬೇಕು.

೨. ಅಂಗಡಿಗಳನ್ನು ನಡೆಸಲು ಸರಕಾರ ಕೊಟ್ಟಿರುವ ಅನುಜ್ಞೆಯ ಅವಧಿ ತೀರಿದ ಕೂಡಲೇ ಅವುಗಳನ್ನು ನಿಲ್ಲಿಸುವುದು.

೩. ಪಾನದಿಂದ ಬರುವ ಆದಾಯವನ್ನು, ಅದು ಬರುತ್ತಿರುವವರೆಗೂ, ಪಾನ ನಿಷೇಧಕ್ಕಾಗಿಯೇ ಮೀಸಲಿಡುವುದು.

೪. ಪಾನದಂಗಡಿಗಳನ್ನು ಮನೋರಂಜನ ಕೇಂದ್ರಗಳನ್ನಾಗಿ ಪರಿ ವರ್ತನೆಗೊಳಿಸಿ, ಕುಡಿತದ ಅಭ್ಯಾಸವಿರುವವರು ಅಲ್ಲಿಗೆ ಬಂದು ಅವುಗಳ

ಪ್ರಯೋಜನ ಹೊಂದುವಂತೆ ಮಾಡುವುದು. ಈ ಮನೋರಂಜನ ಕೇಂದ್ರಗಳನ್ನು ಪಾನದಂಗಡಿಗಳ ಗುತ್ತಿಗೆದಾರರೇ ನಡೆಸುವಂತೆ ಪ್ರೇರೇಪಿಸಬೇಕು.

೫. ಕಳ್ಳಭಟ್ಟಿ ಇಳಿಸುವುದು ಮತ್ತು ಕುಡಿತ ಇವುಗಳನ್ನು ಕಂಡು ಹಿಡಿಯುವುದಕ್ಕೆ ಇಂದಿನ ಸುಂಕದ ಇಲಾಖೆಯ ಅಧಿಕಾರಿಗಳನ್ನೇ ನೇಮಿಸಿಕೊಳ್ಳಬೇಕು.

೬. ಅಧ್ಯಾಪಕರೂ, ವಿದ್ಯಾರ್ಥಿಗಳೂ ತಮ್ಮ ಕಾಲದಲ್ಲಿ ಸ್ವಲ್ಪ ಭಾಗವನ್ನು ಪಾನ ನಿರೋಧಕಾರ್ಯ ಪ್ರಚಾರಕ್ಕೆ ಉಪಯೋಗಿಸುವಂತೆ ಪ್ರಾರ್ಥನೆ.

೭. ಕುಡಿತ ಮತ್ತು ಅಫೀಮು ಸೇವನೆಗೆ ತುತ್ತಾದವರನ್ನು ಆಗಾಗ ಭೇಟಿ ಮಾಡುವುದಕ್ಕೆ ಸ್ತ್ರೀಯರ ಸಂಘಟನೆ ಮಾಡಲು ಪ್ರಾರ್ಥನೆ.

೮. ನೆರೆ ರಾಜ್ಯಗಳಲ್ಲಿ ಪಾನ ನಿಷೇಧವನ್ನು ಆಚರಣೆಗೆ ತರುವಂತೆ ಪ್ರಾರ್ಥಿಸುವುದು.

೯. ಚಟಕ್ಕೆ ತುತ್ತಾಗಿರುವವರನ್ನು ಅದರಿಂದ ತಪ್ಪಿಸುವುದಕ್ಕೂ ಮತ್ತು ಮದ್ಯಸಾರ ಮಿಶ್ರವಿಲ್ಲದ ಹಾಗೂ ಉನ್ಮತ್ತತೆಯನ್ನುಂಟುಮಾಡದ ಇತರ ವಸ್ತುಗಳನ್ನು ಉಪಯೋಗಿಸಲನುವಾಗುವಂತೆ ಸ್ವಯಂ ಪ್ರೇರಿತ ಅಥವಾ ವೇತನ ಪಡೆವ ವೈದ್ಯರನ್ನು ನೇಮಿಸುವುದು.

೧೦. ಪಾನ ನಿಷೇಧ ಮಾಡುವುದಕ್ಕೆ ಸಹಾಯಕವಾಗುವ ಸಂಘಗಳ ಕಾರ್ಯಕ್ರಮಗಳನ್ನು ಚೇತನಗೊಳಿಸುವುದು.

೧೧. ಕಾರ್ಮಿಕ ಮಾಲೀಕರು ತಮ್ಮ ಕೆಲಸಗಾರರ ವಿನೋದ ಮತ್ತು ಮನೋರಂಜನೆಗಾಗಿ ಉತ್ತಮ ದರ್ಜೆಯ ಮನೋರಂಜನ ಕೇಂದ್ರಗಳನ್ನೂ ಶೈಕ್ಷಣಿಕ ತರಗತಿಗಳನ್ನೂ ಆರಂಭಿಸಿ ನಡೆಸುವುದು.

೧೨. ಸಿಹಿ ಹೆಂಡವನ್ನು ಮಾರಾಟ ಮಾಡುವುದಕ್ಕೂ ಅದನ್ನು ಬೆಲ್ಲವಾಗಿ ಪರಿವರ್ತಿಸುವುದಕ್ಕೂ ಹೆಂಡ ತೆಗೆಯುವವರನ್ನು ನೇಮಿಸಿಕೊಳ್ಳಬೇಕು. ಸಿಹಿ ಹೆಂಡವನ್ನು ಹುಳಿ ಹಿಡಿಸಿ, ಮಾದಕ ವಸ್ತುವನ್ನಾಗಿ ಮಾಡುವುದಕ್ಕೂ ಅದನ್ನು ಹಾಗೇ ಸೇವಿಸುವುದಕ್ಕೂ ಅಥವಾ ಬೆಲ್ಲ ಮಾಡುವುದಕ್ಕೂ ಇರುವ ವ್ಯತ್ಯಾಸವನ್ನು ನಾನು ಅರಿತಿದೇನೆ.

ಇದಿಷ್ಟು ಚಳುವಳಿಯ ಸ್ವರೂಪವಾಯಿತು.

ಈಗ, ಕೆಲವು ಪ್ರಾಂತಗಳಲ್ಲಿ ಮೂರನೇ ಒಂದು ಭಾಗದಷ್ಟೇ ಕಮ್ಮಿಯಾಗುವ ಆದಾಯವನ್ನು ಕೂಡಿಸುವ ವಿಚಾರ ಹೇಗೆಂಬುದನ್ನು

ನೋಡೋಣ. ಈ ಒಳಸುಂಕದ ಆದಾಯದಿಂದಲೇ ನಡೆಸಲಾಗುತ್ತಿರುವಷ್ಟು ಮಟ್ಟಿಗೆ ಶಿಕ್ಷಣದ ಆಯ–ವ್ಯಯ ಅಂದಾಜನ್ನು ಕಮ್ಮಿ ಮಾಡಬೇಕೆಂದು ನಾ ನಿಸ್ಸಂದೇಹವಾಗಿ ಸಲಹೆ ಮಾಡಿದೇನೆ. ಶಿಕ್ಷಣವು ತನ್ನ ಕಾಲಮೇಲೆ ತಾನೇ ನಿಂತುಕೊಳ್ಳುವಂತೆ ಮಾಡಲು ಸಾಧ್ಯವೆಂದು ಇಂದಿಗೂ ನನ್ನ ನಂಬಿಕೆ. ಈ ತತ್ವವನ್ನು ಒಪ್ಪಿಕೊಂಡರೂ ಒಂದೇ ದಿನದಲ್ಲಿ ಆ ರೀತಿ ಮಾಡಲು ಸಾಧ್ಯವಿಲ್ಲ. ವಾಸ್ತವಿಕ ಹೊಣೆಗಳನ್ನು ಹೊರಲೇಬೇಕು. ಆದುದರಿಂದ ಹೊಸ ಆದಾಯದ ಮೂಲಗಳನ್ನು ಕಂಡುಹಿಡಿಯಬೇಕು. ಮರಣಾನಂತರ ಆಸ್ತಿಯನ್ನು ವಾರಸುದಾರರಿಗೆ ಹಂಚುವ ಮುಂಚೆ ತೆರಿಗೆಯನ್ನು ವಿಧಿಸುವುದು, ಹೊಗೆಸೊಪ್ಪಿನ ಮೇಲೆ — (ಬೀಡಿಯನ್ನೂ ಸೇರಿಸಿ) ತೆರಿಗೆ ವಿಧಿಸುವುದು, ಈ ರೀತಿಯ ಸಲಹೆಗಳು ಆಗಲೇ ಸೂಚಿಸಲ್ಪಟ್ಟವೆ. ಇದು ತತ್‌ಕ್ಷಣ ಸಾಧ್ಯವೆನಿಸದಿದ್ದರೆ, ಅಲ್ಪಾವಧಿ ಸಾಲವನ್ನು ಎತ್ತಿ, ಖೋತಾವನ್ನು ಸರಿಪಡಿಸಬಹುದು. ಇದೂ ನಿಷ್ಫಲವೆನಿಸಿದರೆ, ಕೇಂದ್ರ ಸರಕಾರವು ಸೈನ್ಯದ ಖರ್ಚನ್ನು ಕಮ್ಮಿ ಮಾಡಿ, ಪ್ರಾಂತಗಳಿಗೆ ಸೂಕ್ತವಾದ ಸಹಾಯದ್ರವ್ಯ ನೀಡುವಂತೆ ಮಾಡಬಹುದು. ಪ್ರಾಂತೀಯ ಸರಕಾರಗಳು ತಮ್ಮ ಆಂತರಿಕ ಶಾಂತಿ, ಸಮಾಧಾನ ರಕ್ಷಣೆಗೆ ಸೈನ್ಯದ ಆವಶ್ಯಕತೆ ಇಲ್ಲವೆಂದು ಕೇಳುವುದಾದರೆ, ಅದು ಅಪ್ರತಿಹತವಾದೀತು.

(ಹರಿಜನ: ೨೮-೮-೩೭)

ಯಶಸ್ಸಿನ ನಿಯಮಗಳು

ಪಾನ ನಿಷೇಧದ ವಿಚಾರವಾಗಿ ಚರ್ಚಿಸಲು ಬಾವೂ ಸಾಹೇಬ್ ಲಾವಟೆಯವರು ನನ್ನನ್ನು ಭೇಟಿಮಾಡುವ ಗೌರವ ಸಲ್ಲಿಸಿದರು. ವಿಚಾರ ಇಬ್ಬರಿಗೂ ಪ್ರಿಯವಾದುದು. ಇಬ್ಬರೂ ಈ ತೀರ್ಮಾನಗಳಿಗೆ ಬಂದೆವು:

೧. ಪಾನದಿಂದ ಬರುವ ಆದಾಯವನ್ನು ಇಂದಿನಿಂದಲೇ ಪಾನ ನಿಷೇಧಕ್ಕಲ್ಲದೆ ಬೇರಾವ ಉದ್ದೇಶಗಳಿಗೂ ಉಪಯೋಗಿಸದಿರುವುದು.

೨. ಸರಕಾರ ಇತ್ತಿರುವ ಅನುಜ್ಞೆ ಮುಗಿದ ಕೂಡಲೇ ಆ ಅನುಜ್ಞೆಯನ್ನು ನವೀಕರಿಸದಿರುವುದು. ಎಲ್ಲಿ ಪಾನದಂಗಡಿಗಳಿಗೆ ಹೋಗುವವರ

ಪೈಕಿ, ಕನಿಷ್ಟ ಶೇ. ೭೫ ಮಂದಿಯಷ್ಟು ಪಾನದಂಗಡಿಗಳನ್ನು ಮುಚ್ಚಬೇಕೆಂಬ ಸ್ಪಷ್ಟವಾದ ಕೇಳಿಕೆಯನ್ನು ಮುಂದಿಡುವರೋ ಅಲ್ಲಿ ಅಂಗಡಿಗಳನ್ನು ಮುಚ್ಚುವುದು.

೩. ಮದ್ಯಸಾರವನ್ನು ಮಾರಬೇಕಾದ ಸಂದರ್ಭದಲ್ಲಿ ಅದನ್ನು ನೇರವಾಗಿ ಸರಕಾರದ ಮೂಲಕವಾಗಿಯೇ ಮಾರುವುದು.

೪. ಆದಷ್ಟು ಮಟ್ಟಿಗೆ ಎಲ್ಲ ಪಾನದಂಗಡಿಗಳನ್ನೂ ಮನೋರಂಜನೆ ಮತ್ತು ವಿನೋದವನ್ನು ಒದಗಿಸುವ ಕೇಂದ್ರಗಳನ್ನಾಗಿ ಮಾರ್ಪಡಿಸುವುದು.

೫. ಕೆಲವು ಆರಿಸಿದ ಕ್ಷೇತ್ರಗಳಲ್ಲಿ ಪಾನ ಚಟಕ್ಕೆ ಕಾರಣಗಳನ್ನು ಎಚ್ಚರಿಕೆಯಿಂದ ಕಂಡುಹಿಡಿಯಬೇಕು.

೬. ಪೂರ್ಣವಾಗಿ ಶಾಂತಿಯುತವೂ, ಮೌನಯುತವೂ, ಶೈಕ್ಷಣಿಕವೂ ಆದ ರೀತಿಯಲ್ಲಿ ಅಂಗೀಕೃತ ವ್ಯಕ್ತಿಗಳಿಂದಲೂ ಸಂಘಗಳಿಂದಲೂ ಪಿಕೆಟಿಂಗ್ ನಡೆಸಲ್ಪಡಬೇಕು. ಇದರ ಉದ್ದೇಶ, ಕುಡುಕರೊಡನೆ ಆತ್ಮೀಯ ಸಂಬಂಧವನ್ನು ಬೆಳೆಸಿ, ಅವರು ಚಟವನ್ನು ಬಿಡಲು ಸಹಾಯ ಮಾಡುವಂತಿರಬೇಕು. ಕುಡಿತದ ಅಭ್ಯಾಸವಿರುವವರ ಮನೆಗಳಿಗೆ ಭೇಟಿ ಕೊಡುವುದು ಪಿಕೆಟಿಂಗಿನ ಒಂದು ವಿಶಿಷ್ಟ ರೂಪವಾಗಬೇಕು. ಸರಕಾರವೂ ಈ ಬಗೆಯ ಕಾರ್ಯವನ್ನು ಇಚ್ಛಾಪೂರ್ವಕವಾಗಿ ಮಾನವತಾ ದೃಷ್ಟಿಯಿಂದ ಮಾಡುವವರ ನೆರವನ್ನು ತೆಗೆದುಕೊಂಡು ಪ್ರೋತ್ಸಾಹಿಸಬೇಕು.*

(ಹರಿಜನ : ೯-೧೦-೩೭)

ನಾನೊಂದು ಘಂಟೆ ಅಖಿಲ ಭಾರತ ಸರ್ವಾಧಿಕಾರಿಯಾದರೆ !

ನಾನೊಂದು ಘಂಟೆ ಅಖಿಲ ಭಾರತದ ಸರ್ವಾಧಿಕಾರಿಯಾದರೆ, ನಾ ಮಾಡುವ ಪ್ರಥಮ ಕಾರ್ಯ ಈ ರೀತಿ ಇದ್ದೀತು; ಯಾವ ಪರಿಹಾರವನ್ನೂ ಕೊಡದೆ ಎಲ್ಲ ಪಾನದಂಗಡಿಗಳನ್ನೂ ನಿಲ್ಲಿಸುವೆನು. ಗುಜರಾತಿನಲ್ಲಿ ಇರುವಂಥ ಹೆಂಡ ಕೊಡುವ ತಾಳೆ ವೃಕ್ಷಗಳನ್ನು ನಾಶಮಾಡಿಸುವೆನು. ಎಲ್ಲ

ಗಿರಣೀ ಮಾಲೀಕರೂ ತಮ್ಮ ಕಾರ್ಮಿಕರಿಗೆ ಮನೋರಂಜನೆ ಮತ್ತು ವಿನೋದಕ್ಕೆ ಆಶ್ರಯವಾಗುವ ಕೇಂದ್ರಗಳನ್ನು ತೆರೆದು, ಅವುಗಳಲ್ಲಿ ಅಪಾಯವಿಲ್ಲದ ಪಾನೀಯಗಳನ್ನೂ ಮತ್ತು ವಿನೋದಗಳನ್ನೂ ಏರ್ಪಡಿಸಲು ಒತ್ತಾಯ ಮಾಡುತ್ತೇನೆ. ಗಿರಣಿ ಮಾಲೀಕರು ಧನಾಭಾವದ ಕಾರಣವನ್ನು ಎತ್ತಿದರೆ, ಗಿರಣಿಗಳನ್ನೇ ಮುಚ್ಚಿಬಿಡುತ್ತೇನೆ. ನಾನೇ ಸಂಪೂರ್ಣವಾಗಿ ಪಾನವರ್ಜಕನಾದುದರಿಂದ, ಒಂದೇ ಘಂಟೆಕಾಲ ಸರ್ವಾಧಿಕಾರಿಯಾದರೂ ನನ್ನ ಅಪ್ರಮತ್ತ ಸ್ಥಿತಿಯನ್ನು ಕಾಪಾಡಿಕೊಂಡು ವೈದ್ಯಕೀಯ ಕಾರಣಗಳಿಗಾಗಿ ಬ್ರಾಂದಿ ಮತ್ತಿತರ ಪಾನೀಯಗಳನ್ನು ಅಪೇಕ್ಷಿಸುವ ನನ್ನ ಐರೋಪ್ಯ ಮತ್ತು ಇತರ ರೋಗಗ್ರಸ್ತ ಗೆಳೆಯರಿಗೆ ಅವು ಸರಕಾರದ ವೆಚ್ಚದಿಂದಲೇ ಪರಿಣತ ವೈದ್ಯರಿಂದ ದೊರೆಯುವಂತೆ ಮಾಡುವೆನು ; ಆವಶ್ಯಕವಿದ್ದರೆ, ಪರವಾನಗಿ ಹೊಂದಿದ ಔಷಧಿ ವಸ್ತುಗಳ ವ್ಯಾಪಾರಿಗಳಲ್ಲಿ ಕ್ಲಿಪ್ತ ಪ್ರಮಾಣದಲ್ಲಿ ಪಡೆಯಲು ಅವಕಾಶ ಕಲ್ಪಿಸಿಕೊಡುವೆನು. ಇದು ಮಾದಕ ವಸ್ತುಗಳಿಗೂ ಉಚಿತ ವ್ಯತ್ಯಾಸಗಳೊಡನೆ ಅನ್ವಯಿಸುತ್ತದೆ.

ಪಾನದಿಂದ ಬರುತ್ತಿದ್ದ ಆದಾಯ ನಷ್ಟವನ್ನು ತುಂಬುವುದಕ್ಕೆ ಸೈನ್ಯದ ವೆಚ್ಚವನ್ನು ಕಡಿಮೆಮಾಡಿ, ಪ್ರಧಾನ ಸೇನಾನಿ ಈ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುವಂತೆ ಮಾಡುತ್ತೇನೆ. ಗಿರಣಿಗಳನ್ನು ಮುಚ್ಚಿದುದರ ಪರಿಣಾಮವಾಗಿ ಕೆಲಸವಿಲ್ಲದೆ ಸೋಮಾರಿಗಳಾಗುವ ಕಾರ್ಮಿಕರಿಗೆ ಆ ಒಂದು ಘಂಟೆಯ ಕಾಲಾವಧಿಯಲ್ಲಿ ಗಿರಣಿಗಳನ್ನು ಸರಕಾರಕ್ಕೆ ವಹಿಸಿಕೊಂಡು ಲಾಭದಾಯಕವಾಗಿ ಕೆಲಸ ನಡೆಸಲು ಸಾಧ್ಯವಾಗದೆಂದು ಸಲಹೆ ಪಡೆದರೆ, ಸಾಧ್ಯವಾದಷ್ಟು ಗಿರಣಿಗಳ ಪಕ್ಕದಲ್ಲಿಯೇ ಮಾದರಿ ವ್ಯವಸಾಯ ಕೇಂದ್ರಗಳನ್ನು ಆರಂಭಿಸಿ ಅವರಿಗೆ ಕೆಲಸ ಕೊಡುತ್ತೇನೆ.

(ಯಂಗ್ ಇಂಡಿಯಾ : ೨೫-೬-೩೧)

ಮಾದಕ ವಸ್ತುಗಳು ಮದ್ಯಪಾನ ಮತ್ತು ಸೈತಾನ

ಮಾದಕ ವಸ್ತುಗಳು ಮತ್ತು ಮದ್ಯಪಾನ, ಸೈತಾನನ ಎರಡು ಹಸ್ತಗಳಿದ್ದಂತೆ. ಅವುಗಳಿಂದ ಅವನು ತನಗೆ ನಿಸ್ಸಹಾಯಕರಾಗಿ ಗುಲಾಮರಾದವರನ್ನು ಜಡತ್ವಕ್ಕೂ ಮತ್ತು ಉನ್ಮತ್ತತೆಗೂ ಗುರಿಮಾಡುತ್ತಾನೆ. "ಸರ್ವೆ" ಪತ್ರಿಕೆಯಲ್ಲಿ ಪ್ರಕಟವಾದ ಒಂದು ಉಜ್ವಲ ಲೇಖನದ ಪ್ರಕಾರವಾಗಿ, ಮಾದಕ ವಸ್ತುಗಳಿಗೆ ಸಂಬಂಧಿಸಿದಂತೆ ಜಿನೀವಾದಲ್ಲಿ ನಡೆದ ಎರಡು ಸಮ್ಮೇಳನಗಳಲ್ಲಿಯೂ ಪ್ರಧಾನ ಮಾದಕ ವಸ್ತುವೆನಿಸಿದ ಅಫೀಮು "ವಿಜಯಭೇರಿ" ಹೊಡೆಯಿತು. ಲೇಖಕ ಹೀಗೆ ಹೇಳುತ್ತಾನೆ: "ಸೈನ್ಯದ ಶಿಸ್ತಿನಂಥ ಮುನ್ನಡೆ, ಪ್ರತಿ ಮುನ್ನಡೆ, ಕತ್ತಿಗಳ ಸಂಘರ್ಷಣೆ, ಸೋಲುಗೆಲವುಗಳ ವಾರ್ತೆ, ಇವುಗಳ ನಡುವೆ ಅಫೀಮು ಮತ್ತಿತರ ಮಾದಕ ವಸ್ತುಗಳ ವ್ಯಾಪಾರವು ಹೊಸ ಆಯುರ್ದಾಯವನ್ನು ಪಡೆಯಿತು. ವಿವಿಧ ರಾಷ್ಟ್ರಗಳ ಹುಚ್ಚು ಹಿಡಿಸುವ ಪರಸ್ಪರ ವಿರೋಧಾತ್ಮಕ ವರದಿಗಳ ಗೊಂದಲದ ನಡುವೆ, ತಮಗೇನು ಬೇಕು, ಬೇಡ, ತಮಗೇನು ಸ್ಪಷ್ಟವಾಗಿ ಸಿಕ್ಕಿತು ಎಂಬುದನ್ನು ಅರಿತಿದ್ದವರೆಂದರೆ, ಮಾದಕ ವಸ್ತುಗಳ ವ್ಯಾಪಾರದಿಂದ ಒಂದಲ್ಲ ಒಂದು ಬಗೆ ಲಾಭ ಗಳಿಸಿಕೊಳ್ಳುವವರೇ ಆಗಿದ್ದರು."

"ಕಳೆದ ಮಹಾ ಯುದ್ಧದ ಮಾರಕ ಪ್ರತಿಫಲಗಳಲ್ಲಿ ಇದೂ ಒಂದು. ಇದು ಲಕ್ಷಾಂತರ ಜನರ ಜೀವನವನ್ನು ಹಾಳುಮಾಡಿದೆ. ಇದು ಆತ್ಮನಾಶಕ ವಿಧಾನವನ್ನೂ ತೀವ್ರಗೊಳಿಸಿದೆ. ಇದಕ್ಕೆ ಹಿಂದೆ ಅಫೀಮು ಮತ್ತು ಅಫೀಮಿನ ಚಟ ದೂರಪೂರ್ವದ ದೇಶಗಳಿಂದ ಪಶ್ಚಿಮ ದೇಶಗಳಿಗೆ ಹರಡುತ್ತಿತ್ತು. ಈಗ ಇದು ಬದಲಾಯಿಸಿದೆ. ಇಷ್ಟೇ ಅಲ್ಲ. ಈ ವಸ್ತುಗಳು ಅತಿ ಮಾರಕ ಪರಿಣಾಮದಿಂದ ಕೂಡಿವೆ. ಯಾವ ದೇಶಗಳಲ್ಲಿ ಇವು ಉತ್ಪತ್ತಿಯಾಗುತ್ತವೆಯೋ ಆ ದೇಶಗಳಲ್ಲಿ ಅಪಾಯಕರ ರೀತಿಯಲ್ಲಿ ಹರಡುತ್ತಾ ನೆರೆ ದೇಶಗಳಿಗೂ ಹರಡುತ್ತಿವೆ. ಮಾನವ ಕುಲದ ಅಭ್ಯುದಯಕ್ಕೆ ಈ ಅಪಾಯವು ತಟ್ಟುವಂತಿದೆ. ಈ ಪಿಶಾಚಿಗೆ ಕಪ್ಪು ಅಥವಾ ಹಳದಿ ವರ್ಣಗಳ ಜನಗಳು ದಾಸರಾಗಿರುವಂತೆಯೇ ಬಿಳಿಯ ಜನರೂ ದಾಸ

ರಾಗಿದಾರೆ. ಈ ಪಿಶಾಚಿಯ ಸಾಮ್ರಾಜ್ಯದ ಮೇಲೆ ರವಿ ಮುಳುಗು ವಂತೆಯೇ ಇಲ್ಲ."

ಮಿ. ಆಂಡ್ರೂಸರು ತಯಾರಿಸಿರುವ 'ಅಸ್ಸಾಂ ಅಫೀಮು ವರದಿ' ಯನ್ನು ಓದಿದರೆ ಅಫೀಮಿನಿಂದ ಎಂಥ ದುರಂತವಾಗಿದೆ ಎಂಬುದು ಅರಿವಾಗುತ್ತದೆ. ವೃದ್ಧಿಯಾಗಿರುವ ಈ ಕೆಡುಕನ್ನು ತ್ಯಜಿಸಲು ಸರಕಾರ ವಿಫಲವಾಗಿದೆಯಲ್ಲದೆ, ಸುಧಾರಕರ ಪ್ರಯತ್ನಕ್ಕೂ ತಡೆ ಒಡ್ಡಿದೆ. ಆದುದ ರಿಂದ ಇದೊಂದು ಬಹು ಹಿಂದೆಯೇ ಆಗಬೇಕಾಗಿದ್ದ ತಡವಾಗಿರುವ ಸುಧಾರಣೆ. (ಯಂಗ್ ಇಂಡಿಯಾ : ೨೨-೪-೨೬)

ಅಫೀಮು ಲಂಪಟರು

"ರಜಪುಟಾನ (ಮಾರವಾಡ) ದ ನಿವಾಸಿಗಳಲ್ಲಿ ಬಹಳ ಮಂದಿ ಅಫೀಮು ಲಂಪಟರಾಗಿದ್ದಾರೆಂದು ನಿಮಗೆ ಗೊತ್ತಿದೆಯೋ ಹೇಗೋ ನಾನರಿಯೆ. ವಿವಾಹ, ಸಾವು, ಇತರ ಯಾವುದಾದರೂ ಸಮಾರಂಭ ಎಲ್ಲದರಲ್ಲಿಯೂ ಅಭ್ಯಾಗತರಿಗೆ ಅಫೀಮನ್ನು ಕೊಡಲೇಬೇಕಾದ ಪದ್ಧತಿ ಇದೆ. ಅದರಿಂದ ಆಸ್ತಿ ಪಾಸ್ತಿಗಳ ಅಡವಿಟ್ಟರೂ ಚಿಂತೆಯಿಲ್ಲ, ಅಫೀಮನ್ನು ಕೊಡಲೇಬೇಕು. ಪ್ರತಿವ್ಯಕ್ತಿ ಸಾಮಾನ್ಯವಾಗಿ ದಿನವೂ ೧ ೧/೨ಯಿಂದ ೨ ತೊಲಗಳಷ್ಟನ್ನೂ, ಕೆಲವು ವೇಳೆ ಇನ್ನೂ ಹೆಚ್ಚಾಗಿಯೂ ಸೇವಿಸುವು ದುಂಟು. ೫ ತೊಲಗಳಷ್ಟು ಸೇವಿಸುವವರನ್ನೂ ನಾ ಬಲ್ಲೆ. ನನ್ನ ತಂದೆ ಕಾಲವಾದಾಗ ನಾ ನನ್ನ ಊರಿಗೆ ಹೋದೆ. ಒಬ್ಬ ಬ್ರಾಹ್ಮಣ ಬಂಧು ನನ್ನನ್ನು ಸಮಾಧಾನಪಡಿಸಲು ಬಂದ. ಒಂದು ವಿಶೇಷ ಪೆಟ್ಟಿಗೆಯಲ್ಲಿಟ್ಟಿದ್ದ ಅಫೀಮನ್ನು ಆತನಿಗೆ ಕೊಡುವುದೇ ಮೊದಲನೆಯ ಕೆಲಸವಾಯಿತು. ಆ ಪೆಟ್ಟಿಗೆಯಲ್ಲಿ ಮೂರು ತೊಲ ಮಾತ್ರವಿತ್ತು. ಬ್ರಾಹ್ಮಣನು ಅದನ್ನೆಲ್ಲ ಸೇವಿಸಿದ. ತನಗೆ ತೃಪ್ತಿಯಾಗಲಿಲ್ಲವೆಂದು ಹೇಳಿದ. ಇನ್ನೆಷ್ಟು ಬೇಕಾ ದೀತೆಂದು ನಾನು ಅತನನ್ನು ಪ್ರಶ್ನಿಸಿದಾಗ, ಆತ, 'ನಾಲ್ಕು ತೊಲ' ಎಂದ. ಅಫೀಮು ಸೇವಿಸುವವರು ಸಕಾಲದಲ್ಲಿ ಉನ್ಮತ್ತತೆಯನ್ನು ಪಡೆಯದೆ ಹೋದರೆ, ಅವರು ಮಾಂಸದ ಮುದ್ದೆಗಳಲ್ಲದೆ ಬೇರೆಯಲ್ಲ. ಈ ಮಾದಕ

ವಸ್ತು ಸೇವನೆಯ ಚಟ ಸಮಾಜವನ್ನು ನಾಶಮಾಡುತ್ತಿರುವ ಉಪದ್ರವ ವಾಗಿದೆ. ”

ದೀನಬಂಧು ಆಂಡ್ರೂಸರೂ ಮತ್ತು ಪಿಯರ್‌ಸನ್ನರೂ ಈ ಲಂಪಟತೆ ಯುಳ್ಳವರಿಗಾಗಿ ತುಂಬ ಶ್ರಮಿಸಿದರು. ಪಾನದ ಚಟಕ್ಕೆ ತುತ್ತಾದವರಿಗೆ ಕೊಡುವ ಗಮನದಲ್ಲಿ ಅರ್ಧದಷ್ಟನ್ನೂ ಇವರಿಗಾಗಿ ನಾವು ಕೊಟ್ಟಿಲ್ಲ. ಸಮಾಜದ ದೃಷ್ಟಿಯಿಂದ, ಅಫೀಮಿನ ಪರಿಣಾಮಗಳು ಪಾನದ ಪರಿಣಾಮ ಗಳಷ್ಟು ವ್ಯಕ್ತವಾಗಿಲ್ಲ. ಆದರೆ, ಈ ಎರಡು ಕೆಡುಕುಗಳಲ್ಲಿ ಯಾವುದು ಉತ್ತಮವೆಂದು ಆರಿಸಿಕೊಳ್ಳುವ ಹಾಗೆಯೇ ಇಲ್ಲ. ಅಫೀಮಿಗೆ ಗುಲಾಮ ರಾದವರ ಬುದ್ಧಿ ಕ್ಷಯಿಸಿಹೋಗಿರುತ್ತದೆ. ಅವರಿಗೆ ಅಫೀಮೊಂದನ್ನು ಬಿಟ್ಟರೆ ಯಾವುದರಲ್ಲಿಯೂ ಆಸಕ್ತಿ ಇಲ್ಲದೆ ಕೇವಲ ಯಂತ್ರಗಳಂತೆ ಆಗಿ ಹೋಗಿರುತ್ತಾರೆ. ಅವರೊಂದಿಗೆ ಹೇಗೆ ವರ್ತಿಸಬೇಕೆಂಬುದು ಒಂದು ಮಹಾಸಮಸ್ಯೆ. ಚೆನ್ನಾಗಿ ಶಿಕ್ಷಣ ಪಡೆದು ಪಳಗಿದ ಕಾರ್ಯಕರ್ತರ ಒಂದು ತಂಡವೇ ಇದ್ದ ಹೊರತು ಸಮಾಜದ ಈ ನಿಸ್ಸಹಾಯಕ ವ್ಯಕ್ತಿಗಳ ಮೇಲೆ ಪರಿಣಾಮವನ್ನುಂಟುಮಾಡುವುದು ಸಾಧ್ಯವಾಗಲಾರದು. ವೈದ್ಯಕೀಯ ವೃತ್ತಿಯಲ್ಲಿ ತೊಡಗಿದವರು ಈ ಸಮಾಜ ವ್ಯಾಧಿಯ ಬಗೆಗೆ ಸಂಶೋಧನೆ ನಡೆಸಿ, ಪರಿಹಾರ ಮಾರ್ಗಗಳನ್ನು ಕಂಡುಹಿಡಿದು ಉಪಯುಕ್ತ ಸಹಾಯ ವನ್ನು ಮಾಡಬಹುದು. (ಹರಿಜನ : ೧೦-೫-೪೨)

ಮದ್ಯಪಾನಕ್ಕೆ ಪ್ರತಿಯಾಗಿ ಆರೋಗ್ಯಕರ ಪಾನೀಯಗಳು

ಪಾನ ನಿಷೇಧ ಮಾಡಿರುವ ಕೆಲವು ಬೇಸಾಯಗಾರರು ಚಳಿಗಾಲದಲ್ಲಿ ೧/೪ ಪೌಂಡು ಬೆಲ್ಲ ಮತ್ತು ಈರುಳ್ಳಿಯನ್ನು ಸೇರಿಸಿ ಉತ್ತಮ ಆಹಾರವೆಂದು ಸೇವಿಸುವುದನ್ನು ನಾನೇ ಸ್ವತಃ ನೋಡಿದೇನೆ. ‘ ಮಾಹೂರಾ ’ (ಒಂದು ಬಗೆಯ ಹೂ) ಅಂತೂ ಒಳ್ಳೆಯ ಶಕ್ತಿದಾಯಕ ಆಹಾರ. ಈ ಹೂಗಳಿಂದ ಕಳ್ಳಭಟ್ಟಿ ಇಳಿಸುವುದಕ್ಕೆ ಅವಕಾಶವಾಗದಂತೆ ಅವು ಜನರಿಗೆ ಹೇಗೆ ದೊರಕ ಬೇಕೋ ಆ ವಿಧಾನವನ್ನು ಕಂಡುಹಿಡಿಯಬೇಕಾಗಿದೆ.

ಪ್ರಾಚೀನ ಪದ್ಧತಿಯಾದ ಪಾನಕವನ್ನು ಸೇವಿಸುವುದು ಮದ್ಯ ಪಾನಕ್ಕೆ ಪ್ರತಿಯಾದ ಒಳ್ಳೆಯ ಕ್ರಮ. ಇದು ತಣ್ಣೀರು, ಬೆಲ್ಲ, ನಿಂಬೆಯ ಹುಳಿ ಇವುಗಳಿಂದ ಮಾಡಲ್ಪಡುತ್ತದೆ. ಇದರ ಸೇವನೆಯಿಂದ ಶರೀರಕ್ಕೆ ತಂಪಾಗುವುದಲ್ಲದೆ ಶಕ್ತಿಯೂ ಬರುತ್ತದೆ. ಹುಳಿ ಮಜ್ಜಿಗೆಯ ಉಪ ಯೋಗವನ್ನೂ ಸಲಹೆಮಾಡಬಹುದು. (ಹರಿಜನ : ೨೮-೮-೩೭)

ಹೆಂಡವಲ್ಲ - ನೀರಾ

ತಿಳಿದೋ ತಿಳಿಯದೆಯೋ ಕೆಲವು ಮಂದಿ ಹುಳಿ ಹಿಡಿದ ಹೆಂಡ ಸೇವನೆಗೆ ನಾ ಪ್ರೋತ್ಸಾಹವೀಯುವನೆಂಬ ಆಪಾದನೆ ಮಾಡಿದಾರೆ. ಪಾನ ನಿಷೇಧವೆಂದರೆ, ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲ ಉನ್ಮಾದಕ ವಸ್ತುಗಳ ಸೇವನೆಯ ನಿಷೇಧವೆಂದು ನಾ ಅತಿ ಸ್ಪಷ್ಟವಾಗಿ ಹೇಳಿದೇನೆ. ಆದುದರಿಂದ ಪೂರ್ಣ ಪಾನ ನಿಷೇಧ ಯೋಜನೆಯಲ್ಲಿ ಹುಳಿಹಿಡಿದ ಹೆಂಡ ಸೇವನೆಗೆ ಸ್ಥಾನವೇ ಇಲ್ಲ. ಆದರೆ, ಈ ವಿಚಾರವನ್ನು ನಾ ಒತ್ತಿ ಹೇಳಿದೇನೆ, ಪುನಃ ಹೇಳಬಯಸುತ್ತೇನೆ; ಸಿಹಿಯಾಗಿಯೂ, ಹುಳಿ ಹಿಡಿಯದೆಯೂ ಇರುವ 'ನೀರಾ' ನಿಷೇಧಿಸಲ್ಪಡದೆ, ಪ್ರೋತ್ಸಾಹಿಸಲ್ಪಡಬೇಕು. ಇದು ಹೇಗೆ ಮಾಡಬೇಕೆಂಬುದನ್ನು ಪಾನ ನಿರೋಧ ಶಾಖಾ ಮಂತ್ರಿಗಳು ನಿರ್ಣಯಿಸಬೇಕು. (ಹರಿಜನ : ೩೦-೧೦-೩೭)

ನೀರಾ ಆಕ್ಷೇಪಣೀಯವೆ ?

ಪಾರ್ಸೀ ಗೆಳೆಯರು ಪಾನ ನಿಷೇಧ ಕಾರ್ಯಕ್ರಮಕ್ಕೆ ವಿರುದ್ಧವಾಗಿ ಎತ್ತಿರುವ ಹದಿನಾಲ್ಕು ಅಂಶಗಳ ಪೈಕಿ ಈ ವಿಚಿತ್ರ ವಿಷಯ ಬರುತ್ತದೆ :

"ಸಿಹಿಯೂ, ಹುಳಿ ಹಿಡಿಯದೆಯೂ ಇರುವ ನೀರಾವನ್ನು ಪಾರ್ಸೀ ಗಳು ಕುಡಿಯಬಹುದೆಂದು ಮಹಾತ್ಮಾಜೀ ಪ್ರೇರಿಸುತ್ತಿದಾರೆ. ಆದರೆ,

ಪಾರ್ಸೀಗಳು ನೀರಾದಲ್ಲಿ ಏನೇನಿರುತ್ತದೆಂಬುದನ್ನು ಚೆನ್ನಾಗಿ ಬಲ್ಲರು. ಅಲ್ಲದೆ, ಬ್ರಿಟಿಷ್ ಸರಕಾರದವರೇ ನೀರಾ ತೆಗೆದ ಮರಕ್ಕೆ ತೆರಿಗೆ ವಜಾ ಮಾಡಿ ಇದರ ಕುಡಿತದ ಪ್ರಯೋಗವನ್ನು ನಡೆಸಿದರು. ಇದು ವಿಫಲ ವಾಯಿತು, ಏಕಂದರೆ, ಇದು ಚಳಿ, ಜಠರವಾಯುವಿನ ಉತ್ಪತ್ತಿ, ಅತಿಸಾರ, ಇತ್ಯಾದಿಗಳನ್ನು ಉಂಟುಮಾಡಿತು. ಸೇಗಾಮಿನ ಮಹಾತ್ಮಾಜೀಯವರ ಆಶ್ರಮದಲ್ಲಿಯೂ ಈ ಪ್ರಯೋಗ ನಡೆದು ದುರಂತ ಪರಿಣಾಮಗಳಾದುವು."

ಮುಂಬೈ ಸರಕಾರ ಯಾವ ಪ್ರಯೋಗ ಮಾಡಿತೋ ನಾನರಿಯೆ. ಆದರೆ, ನೀರಾ, ಅದನ್ನು ಉಪಯೋಗಿಸುತ್ತಿರುವವರಿಗೆ ಏನು ಮಾಡುತ್ತದೆ ಮತ್ತು ಮಾಡಿದೆ ಎಂಬುದನ್ನು ಬಲ್ಲೆ. ಸೇಗಾಮಿನ ಪ್ರಯೋಗ ದುರಂತ ಪರಿಣಾಮದಲ್ಲಿ ಕೊನೆಗೊಂಡಿತೆಂದು ಹೇಳುವುದು ಪೂರ್ಣ ತಪ್ಪು. ಲೇಖಕ ಆರೋಪಿಸಿರುವ ಕೆಟ್ಟ ಪರಿಣಾಮಗಳನ್ನು ಅದು ಎಂದಿಗೂ ಮಾಡಿದುದು ಕಂಡುಬಂದಿಲ್ಲ. ಇದಕ್ಕೆ ಪ್ರತಿಯಾಗಿ, ಸೇಗ್ಯಾಮಿನ ಅನೇಕರು ನೀರಾವನ್ನು ಇಚ್ಛಾಪೂರ್ವಕವಾಗಿ ಸೇವಿಸಿ, ಒಳ್ಳೆಯ ಆರೋಗ್ಯ ಭಾಗ್ಯವನ್ನು ಹೊಂದು ತ್ತಿದಾರೆ. ಅದು ಕಾಕಂಬಿ ಅಥವಾ ಬೆಲ್ಲವನ್ನಾಗಿ ಮಾಡಲ್ಪಟ್ಟು, ಆ ರೂಪ ದಲ್ಲಿ ನಾನೂ ಮತ್ತು ಇತರರೂ ಅದನ್ನು ಬಹುತೇಕ ನಿತ್ಯವೂ ಬಳಸು ತ್ತೇವೆ. ಬೆಲ್ಲದ ರೂಪದಲ್ಲಿ ಅದು ಹೇರಳವಾಗಿ ಮಾರಾಟವಾಗುತ್ತಿದೆ. ಕಬ್ಬಿನ ಬೆಲ್ಲಕ್ಕಿಂತ ಕಮ್ಮಿ ಸಿಹಿಯಾಗಿರುವುದರಿಂದ ಅದು ಹೆಚ್ಚು ಅಪೇಕ್ಷಿ ಸಲ್ಪಡುತ್ತದೆ. ದುರಂತಗಳಾದುದು ವರ್ಧಾದಲ್ಲಿ, ಸೇಗಾಂನಲ್ಲಲ್ಲ. ಅವು ನೀರಾ ಸೇವನೆಯಿಂದಲ್ಲವೆಂದೂ, ವಾಂತಿ ಭೇದಿಯಿಂದಲೆಂದೂ, ವಿಚಾರಣೆ ಯಿಂದ ಸ್ಪಷ್ಟವಾಗಿ ತಿಳಿದುಬಂದಿದೆ. ನಡೆದ ದುರಂತಕ್ಕೂ, ನೀರಾಕ್ಕೂ ಏನೇನೂ ಸಂಬಂಧವಿಲ್ಲವೆಂಬುದು ನಿರ್ಧರವಾಗಿದೆ. ಒಂದು ವೇಳೆ ಸಾವಿಗೆ ತುತ್ತಾದವರು ನೀರಾ ಸೇವಿಸದಿದ್ದರೆ, ಅವರಿಗೆ ಪ್ರಾಪ್ತವಾದ ವಾಂತಿ ಭೇದಿಯು ಅವರು ಸೇವಿಸಿದ ಆಹಾರದಿಂದ ಉಂಟಾಯಿತೆಂದು ಹೇಳುವುದು ಸರಿಯಾದೀತೆ? ವರ್ಧಾದಲ್ಲಿ ಉಪಯೋಗಿಸಿದ ನೀರಾವನ್ನೇ ಸೇಗಾಮಿ ನಲ್ಲಿಯೂ ಉಪಯೋಗಿಸಿದ ಇತರರು ಯಾವ ತೊಂದರೆಗೂ ಗುರಿಯಾಗದೆ ಸುರಕ್ಷಿತರಾಗಿದ್ದರೆಂದು ಹೇಳಬಯಸುತ್ತೇನೆ.

(ಹರಿಜನ: ೧೩-೫-೩೯)

ಟೀ, ಕಾಫೀ ಮತ್ತು ಹೊಗೆಸೊಪ್ಪು

★

ಧೂಮಪಾನದ ಕೆಡುಕು

ಕಲ್ಲೀಕೋಟೆಯ ಪ್ರೊಫೆಸರೊಬ್ಬರು ಪ್ರಶ್ನೆಗೆ ಉತ್ತರವಾಗಿ ಸಿಗರೇಟ್ ಸೇದುವ ಹಾಗೂ ಕಾಫೀ ಮತ್ತು ಟೀ ಸೇವಿಸುವ ವಿಷಯವಾಗಿ ಕೆಲವು ಮಾತನ್ನು ಹೇಳಬಯಸುತ್ತೇನೆ. ಇವು ಜೀವನಕ್ಕೆ ಅಗತ್ಯ ವಸ್ತುಗಳಲ್ಲ. ದಿನವೊಂದಕ್ಕೆ ಹತ್ತು ಲೋಟಾ ಕಾಫೀ ಆದರೂ ಸೇವಿಸುವ ಕೆಲವು ಜನರುಂಟು. ಇದು ಅವರ ಆರೋಗ್ಯದ ಬೆಳವಣಿಗೆಗೂ ಮತ್ತು ಕರ್ತವ್ಯ ಪಾಲನೆಗಾಗಿ ನಿದ್ರೆ ಇಲ್ಲದೆ ಎಚ್ಚರಿರುವುದಕ್ಕೂ ಆವಶ್ಯಕವೆ ? ಅವರು ನಿದ್ರೆ ಇಲ್ಲದೆ ಎಚ್ಚರಿರಲು ಕಾಫೀ ಮತ್ತು ಟೀ ಆವಶ್ಯಕವೆನಿಸಿದರೆ, ಅವರು ಆ ರೀತಿ ಮಾಡದೆ ನಿದ್ರೆಹೋಗಲಿ. ಈ ವಸ್ತುಗಳಿಗೆ ನಾವು ದಾಸರಾಗಬಾರದು. ಆದರೆ, ಕಾಫೀ ಮತ್ತು ಟೀಗಳನ್ನು ಸೇವಿಸುವವರಲ್ಲಿ ಬಹುಮಂದಿ ಅವುಗಳಿಗೆ ದಾಸರೇ ಆಗಿದ್ದಾರೆ. ಚುಟ್ಟಾ ಮತ್ತು ಸಿಗರೇಟುಗಳು—ಅವು ಸ್ವದೇಶದ್ದಿರಲಿ, ಪರದೇಶದ್ದಿರಲಿ—ವರ್ಜನೀಯ. ಸಿಗರೇಟು ಸೇದುವುದು ನಿದ್ರಾಜನಕ ; ನೀವು ಸೇದುವ ಚುಟ್ಟಾಗಳಲ್ಲಿ ಅಫೀಮಿನ ಅಂಶವಿದೆ. ಅವು ನಿಮ್ಮ ನರಮಂಡಲದ ಮೇಲೆ ಪರಿಣಾಮ ಮಾಡುತ್ತವೆ. ಅನಂತರ ನೀವು ಅವುಗಳನ್ನು ಬಿಡಲಾರಿರಿ. ಒಬ್ಬ ವಿದ್ಯಾರ್ಥಿಯು ತನ್ನ ಬಾಯನ್ನು ಹೊಗೆ ಕೊಳವೆಯನ್ನಾಗಿ ಮಾಡಿ ಅದು ದುರ್ನಾತ ಬರುವಂತೇಕೆ ಮಾಡಿಕೊಳ್ಳಬೇಕು ? ಸಿಗರೇಟ್ ಮತ್ತು ಚುಟ್ಟಾ ಸೇದುವುದು, ಕಾಫೀ ಮತ್ತು ಟೀ ಕುಡಿಯುವುದು, ಈ ಪದ್ಧತಿಗಳನ್ನು ನೀವು ಬಿಟ್ಟರೆ, ಅದರಿಂದ ಎಷ್ಟು ಉಳಿತಾಯ ಮಾಡಲು ಸಾಧ್ಯವಾಗುತ್ತದೆಂಬುದನ್ನು ನೀವೇ ಕಂಡುಕೊಳ್ಳುವಿರಿ. ಟಾಲ್‌ಸ್ಟಾಯಿಯ ಒಂದು ಕಥೆಯಲ್ಲಿ ಬರುವ ಒಬ್ಬ ಕುಡುಕ, ಚುಟ್ಟಾ ಸೇದುವವರೆಗೂ ತಾನು ನಿಯುಕ್ತನಾಗಿದ್ದ ಕೊಲೆಯ ಕಾರ್ಯವನ್ನು ಮಾಡಲೇ ಬೇಡವೇ ಎಂಬ ಸಂಶಯದಿಂದ ಕೂಡಿರುತ್ತಾನೆ. ಅವನು ಅದನ್ನು ಸೇದಿದ ಕೂಡಲೇ ಎದ್ದುನಿಂತು ನಗುತ್ತಾ ಹೇಳುತ್ತಾನೆ :

'ನಾನೆಂಥ ಹೇಡಿ!' ತರುವಾಯ ಕಠಾರಿ ಹಿರಿದು ಕಾರ್ಯವನ್ನು ಮುಗಿಸಿಬಿಡುತ್ತಾನೆ. ಟಾಲ್‌ಸ್ಟಾಯಿ ಅನುಭವದಿಂದ ನುಡಿದವರು. ಸ್ವಂತ ಅನುಭವಕ್ಕೆ ಬರದ ಏನನ್ನೂ ಅವರು ಬರೆದಿಲ್ಲ. ಅವರು ಕುಡಿತಕ್ಕಿಂತಲೂ, ಚುಟ್ಟಾ ಮತ್ತು ಸಿಗರೇಟುಗಳನ್ನು ಹೆಚ್ಚು ವಿರೋಧಿಸಿದಾರೆ. ಕುಡಿತ ಮತ್ತು ಹೊಗೆಸೊಪ್ಪು ಇವುಗಳಲ್ಲಿ ಹೊಗೆಸೊಪ್ಪು ಕಮ್ಮಿಯಾದ ಕೆಡುಕೆಂದು ತಪ್ಪು ತಿಳಿದುಕೊಳ್ಳಬೇಡಿ. ಇಲ್ಲ. ಸಿಗರೇಟು ಪಿಶಾಚಿಯಾದರೆ, ಕುಡಿತವು ಭಗವದ್ವೈರಿ. (ಯಂಗ್ ಇಂಡಿಯಾ : ೧೫-೯-೨೭)

ಅಸತ್ಯಯುತ ಪ್ರಕಟನೆಗಳು

ಹಿಂದಿನ ದಿನ ಅಶ್ಲೀಲ ಪ್ರಕಟನೆಯೊಂದರ ವಿಷಯವಾಗಿ ನಿಮ್ಮ ಗಮನವನ್ನು ಸೆಳೆದಿದ್ದೆ. ಈಗ ಕಲ್ಕತ್ತೆಯ ಪತ್ರಲೇಖಕರೊಬ್ಬರು ಪ್ರಸಿದ್ಧ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಕೆಲವು ಭಾಗಗಳನ್ನು ಕತ್ತರಿಸಿ ಕಳಿಸಿದಾರೆ. ಅವುಗಳನ್ನು ನಾ ಅಸತ್ಯವೆಂದು ಕರೆಯುತ್ತೇನೆ. ಭಾರತೀಯ ಟೀ ಕುಡಿಯುವುದಕ್ಕೆ ಪ್ರೋತ್ಸಾಹಕ್ಕೋಸ್ಕರ ಈಗಲೀಗ ಬಂಗಾಳದಲ್ಲಿಯೂ ಬಹುಶಃ ಇನ್ನೂ ಇತರ ಪ್ರಾಂತಗಳಲ್ಲಿಯೂ ಒಂದು ಹುರುಪಿನ ಪ್ರಚಾರ ನಡೆಯುತ್ತಿರುವಂತಿದೆ. ಕೆಳಗೆ ಇರುವುದು ಪತ್ರಲೇಖಕ ಕಳಿಸಿರುವ ಬಂಗಾಳೀ ಭಾಷೆಯ ಪ್ರಕಟನೆಯ ಭಾಷಾಂತರ :

"ಟೀ ಕುಡಿತ ಮತ್ತು ತಾರುಣ್ಯ ಮುಖ ಕಾಂತಿ"

ಜಲ್ಪೈ ಗುರಿ, ಮೇ, ೧೫

"ಟೀ ಸೇವನೆ, ತಾರುಣ್ಯ ಮುಖ ಕಾಂತಿ ಮತ್ತು ಶಕ್ತಿಯನ್ನು ಹೆಚ್ಚು ಕಾಲ ಸಂವರ್ಧಿಸಿಕೊಳ್ಳಲು ಸಹಾಯಕವಾಗುತ್ತದೆಂಬುದು ಶ್ರೀಯುತ ನೇಪಾಳಚಂದ್ರ ಭಟ್ಟಾಚಾರ್ಯ ಎಂಬುವವರ ಅನುಭವದಿಂದ ಕಂಡುಬರುತ್ತದೆ. ಅವರಿಗೀಗ ನಲವತ್ತೆಂಟು ವಯಸ್ಸು. ಆದರೆ ಮುವತ್ತು ನಾಲ್ಕಕ್ಕಿಂತಲೂ ಮೀರದ ವಯಸ್ಸಿನವರಂತೆ ಕಾಣುತ್ತಾರೆ. ಈ ತಾರುಣ್ಯ

ಮುಖ ಕಾಂತಿಯನ್ನು ಟೀ ಸೇವನೆಯಿಂದ ಅವರು ಕಾಪಾಡಿಕೊಂಡಿದಾರೆ. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಅವರು ಟೀ ಕುಡಿಯಲು ಆರಂಭ ಮಾಡಿದರು. ಅಂದಿನಿಂದ ಅವರು ತಪ್ಪದೆ ಟೀ ಕುಡಿಯುವವರಾಗಿದಾರೆ. ಕಳೆದ ಎರಡು ವರುಷಗಳಿಂದಲೂ ಅವರು ದಿನವೂ ಸ್ವಲ್ಪ ಹೆಚ್ಚುಕಡಿಮೆ ಮೂವತ್ತು ಲೋಟಗಳಷ್ಟು ಸೇವಿಸುತ್ತಿದಾರೆ. ಟೀ ತಯಾರಾದ ತತ್‌ಕ್ಷಣವೇ ಅವರು ಅದನ್ನು ಸೇವಿಸುವುದಿಲ್ಲ; ಅಥವಾ ಎಲ್ಲವನ್ನೂ ಒಮ್ಮೆಗೇ ಕುಡಿಯುವುದಿಲ್ಲ. ಬುಡದಲ್ಲಿ ಒಂದು ಸ್ವಲ್ಪ ಹಾಗೇ ಬಿಡುತ್ತಾರೆ. ಅವರು ಒಂದು ಸಲಕ್ಕೆ ಆರರಿಂದ ಹತ್ತು ಲೋಟಾಗಳ ವರೆಗೆ ಸೇವಿಸುತ್ತಾರೆ."

ಇಂಥವೆಷ್ಟೋ ಇವೆ. ಅವುಗಳ ಪೈಕಿ ಇದೊಂದು ಉದಾಹರಣೆ. ಇದು ಪತ್ರಿಕೆಯ ಸ್ವಂತ ಬಾತ್ಮೀದಾರನ ವರದಿಯಂತಿದೆ; ಟೀ ಸೇವನೆ ವಿಷಯವನ್ನು ಪುಷ್ಟೀಕರಿಸುವುದಕ್ಕೋಸ್ಕರ ಎಲ್ಲಿಯೂ ಮಾನವನ ಅನುಭವದಲ್ಲಿ ಆಧಾರಹೊಂದದ ವಾದವನ್ನು ಮುಂದಿಡಲಾಗಿದೆ. ಟೀ ಸೇವಿಸುವುದನ್ನು ಪ್ರತಿಪಾದಿಸುವವರೂ ಕೂಡ, ಈ ವಾದಕ್ಕೆ ವಿರುದ್ಧವಾಗಿ ತೀರಾ ಮಿತ ಸೇವನೆಯನ್ನು ಸಲಹೆ ಮಾಡುತ್ತಾರೆ. ಭಾರತದಲ್ಲಿ ಟೀ ಕುಡಿತವೇ ಇಲ್ಲವಾದರೆ ನಮಗೇನೂ ಕೆಡುಕು ಎನಿಸದು. ಆದರೆ ದುರದೃಷ್ಟವಶಾತ್ ಟೀ ಮತ್ತು ಇತರ ಅಪಾಯರಹಿತವೆಂದು ಪರಿಗಣಿಸಲ್ಪಟ್ಟಿರುವ ಕುಡಿತಗಳು ನಮ್ಮ ಮಧ್ಯೆ ಸ್ಥಾಯಿಯಾಗಿ ನಿಂತಿವೆ. ನನ್ನ ವಾದವಿಷ್ಟೆ. ಪ್ರಕಟನೆ ಮಾಡುವುದರಲ್ಲಿ ಸತ್ಯದ ಕಡೆ ಗಮನವಿರಲಿ. ಪುಸ್ತಕದಲ್ಲಿ ಅಚ್ಚಾದ ಅಥವಾ ಒಂದು ಸಮಾಚಾರ ಪತ್ರಿಕೆಯಲ್ಲಿ ಬರುವ ವಿಷಯವನ್ನು ಸತ್ಯವೇದವೆಂದು ಭಾವಿಸುವುದು ಜನದ—ಆದರಲ್ಲಿಯೂ ಭಾರತೀಯರಿಗೆ—ವಾಡಿಕೆಯಾಗಿದೆ. ಆದುದರಿಂದ ಒಂದು ವಿಷಯದ ಬಗೆಗೆ ಪ್ರಕಟನೆಯನ್ನು ಮಾಡುವಾಗ ಬಹಳ ಎಚ್ಚರಿಕೆ ಆವಶ್ಯಕ. ನನ್ನ ಪತ್ರಲೇಖಕ ಗಮನ ಸೆಳೆದಿರುವ ಅಸತ್ಯಗಳಂಥವಂತೂ ಬಹಳ ಅಪಾಯಕರ. ದಿನವೊಂದಕ್ಕೆ ಮೂವತ್ತು ಲೋಟಾ ಟೀ ಕುಡಿಯುವುದು ಶರೀರಕ್ಕಾಗಲೀ ಮನಸ್ಸಿಗಾಗಲೀ ಉಲ್ಲಾಸವನ್ನುಂಟು ಮಾಡದಿರುವುದೊಂದೇ ಅಲ್ಲ, ಜೀರ್ಣಶಕ್ತಿಯನ್ನೂ ಕುಂದಿಸಿ ಕುಡಿಯುವವನನ್ನು ಸತ್ವಹೀನನನ್ನಾಗಿ ಮಾಡುತ್ತದೆ. ಬಹುಶಃ ದಿನವೊಂದಕ್ಕೆ ಒಂದು ಅಥವಾ ಎರಡು ಲೋಟಾ ಸೌಮ್ಯ ಟೀಯನ್ನು ಮಾನವ ಶರೀರವು ಯಾವ ಅಪಾಯಕ್ಕೂ ಎಡೆಯಿಲ್ಲದಂತೆ ಸಹಿಸಿಕೊಂಡೀತು. ಭಾರತದಲ್ಲಿ ಟೀ

ಎಲೆಗಳಲ್ಲಿರಬಹುದಾದ ಟ್ಯಾನಿಕ್ ಆಮ್ಲವನ್ನು ತೆಗೆದುಹಾಕುವುದಕ್ಕೋಸ್ಕರ ಅವು ಕುದಿಸಲ್ಪಡುತ್ತವೆ. ಯಾವ ವೈದ್ಯನೇ ಆಗಲಿ ಟ್ಯಾನಿಕ್ ಜಠರಕ್ಕೆ ಕೆಟ್ಟದೆಂದು ರುಜುವಾತು ಕೊಡುತ್ತಾರೆ. ಚೀಣೀಯರು ಹೇಗೆ ಟೀ ಕುಡಿಯಬೇಕೆಂಬುದನ್ನು ಬಲ್ಲರು. ಅವರು ಎಲೆಗಳನ್ನು ಎಂದಿಗೂ ಟೀಪಾನೆಯಲ್ಲಿ ಹಾಕದೆ ಅದನ್ನು ಒಂದು ಶೋಧಕ ಪಾತ್ರೆಯಲ್ಲಿ ಹಾಕಿ ಅದರ ಮೇಲೆ ಮರಳುವ ನೀರನ್ನು ಸುರಿಯುತ್ತಾರೆ. ನೀರು ಒಣಹುಲ್ಲಿನ ವರ್ಣವನ್ನು ಹೊಂದಬೇಕು. ಅದು ಮಾಸಲು ಹಳದಿ ವರ್ಣವಾಗಿರುತ್ತದೆ; ಭಾರತದಲ್ಲಿ ಸಾಮಾನ್ಯವಾಗಿ ಮಾಡುವ ಟೀ ಬಣ್ಣದಂತೆ ಕೆಂಪಾಗಿರುವುದಿಲ್ಲ. ಗಟ್ಟಿಯಾದ ಟೀ ವಿಷಸಮಾನ. (ಹರಿಜನ: ೨೪-೮-೩೫)

ಗಾಂಧೀ ಸಿಗರೇಟುಗಳು !

ನನಗೆ ಗೊತ್ತಿರುವಂತೆ ನನ್ನ ಹೆಸರಿನ ದುರುಪಯೋಗವಾಗಿರುವುದರಲ್ಲೆಲ್ಲಾ ಅದನ್ನು ಬೇಕೆಂದೇ ಸಿಗರೇಟಿನೊಂದಿಗೆ ಕೂಡಿಸಿರುವದಕ್ಕಿಂತಲೂ ಹೆಚ್ಚು ಅಪಮಾನಕರವಾದುದಾವುದೂ ಇಲ್ಲವೆನಿಸುತ್ತದೆ. ಒಬ್ಬ ಗೆಳೆಯ ನನ್ನ ಚಿತ್ರವನ್ನೊಳಗೊಂಡ ತಲೆಚೀಟಿಯೊಂದನ್ನು ಕಳಿಸಿದಾನೆ. ಸಿಗರೇಟುಗಳಿಗೆ 'ಮಹಾತ್ಮಾ ಗಾಂಧೀ ಸಿಗರೇಟು'ಗಳೆಂದು ಹೆಸರು. ನನಗೆ ಮದ್ಯವೆಂದರೆ ಎಷ್ಟು ಭೀತಿಯೋ, ಅಸಹ್ಯವೋ ಸಿಗರೇಟೆಂದರೂ ಅಷ್ಟೆ. ಧೂಮಪಾನ ಮಾಡುವುದು ಒಂದು ಪಾಪವೆಂದು ನನ್ನ ಪರಿಗಣನೆ. ಅದು ಸದಸದ್ವಿವೇಚನಾ ಶಕ್ತಿಯನ್ನು ಕೊಲ್ಲುತ್ತದೆ. ಗೋಚರವಿಲ್ಲದಂತೆ ಪರಿಣಾಮವೆಸಗುವುದರಲ್ಲಿ ಅದು ಕುಡಿತಕ್ಕಿಂತಲೂ ಹೆಚ್ಚು ಕೆಡಕುಕಾರಿ. ಒಮ್ಮೆ ವ್ಯಕ್ತಿ ಅದನ್ನು ಅಭ್ಯಾಸಮಾಡಿಕೊಳ್ಳುವುದೇ ತಡ, ಅದನ್ನು ಬಿಡುವುದು ತುಂಬ ಕಷ್ಟ. ಅದು ದುಂದುವೆಚ್ಚದ ಕೆಟ್ಟ ಪದ್ಧತಿ. ಅದು ಉಸಿರನ್ನು ದುರ್ನಾತ ಬರುವಂತೆ ಮಾಡುತ್ತದೆ. ಹಲ್ಲನ್ನು ವಿವರ್ಣಗೊಳಿಸುವುದಲ್ಲದೆ ಕೆಲವು ವೇಳೆ ಕೆಟ್ಟ ಕುರುವನ್ನೂ ಉಂಟುಮಾಡುತ್ತದೆ. ಅದೊಂದು ಕೊಳಕು ಪದ್ಧತಿ. ಸಿಗರೇಟುಗಳೊಂದಿಗೆ ನನ್ನ ಹೆಸರನ್ನು ಉಪಯೋಗಿಸಿಕೊಳ್ಳಲು ಯಾವ ವ್ಯಕ್ತಿಯೂ ನನ್ನಿಂದ ಅನುಮತಿ

ಹೊಂದಿಲ್ಲ. ಹೆಸರಿಲ್ಲದ ಆ ಕಂಪೆನಿಯೇ ಮಾಗುಕಟ್ಟೆಯಿಂದ ನನ್ನ ಚಿತ್ರವಿರುವ ತಲೆಚೀಟಿಯನ್ನು ಹಿಂತೆಗೆದುಕೊಳ್ಳುವುದಾಗಲೀ ಅಥವಾ ಅಂಥ ತಲೆಚೀಟಿ ಇರುವ ಪೊಟ್ಟಣಗಳನ್ನು ಸಾರ್ವಜನಿಕರೇ ಕೊಳ್ಳಲು ನಿರಾಕರಿಸುವುದೇ ಆದರೆ, ನಾನು ಕೃತಜ್ಞ. (ಯಂಗ್ ಇಂಡಿಯಾ : ೧೩-೧-೨೧)

ಹೊಗೆಸೊಪ್ಪು ಕಾನೂನಿನ ಮಸೂದೆ

ಅನೇಕ ಬಗೆಗಳ ಸುಧಾರಣೆಯಲ್ಲಿ ಆಸಕ್ತಿಯುಳ್ಳ ಒಬ್ಬ ಪತ್ರ ಲೇಖಕ ಹೊಗೆಸೊಪ್ಪು ಕಾನೂನಿನ ಮಸೂದೆಯಿಂದ ರಾಷ್ಟ್ರಕ್ಕೆ ಎಷ್ಟು ನಷ್ಟವಾಗುತ್ತದೆಂದು ಪ್ರಶ್ನಿಸಿದಾನೆ. ನಾವು ಮಾರಾಟಕ್ಕೆ ಸಿದ್ಧಮಾಡದ ಹೊಗೆಸೊಪ್ಪು ಮತ್ತು ಸಿಗರೇಟುಗಳಿಗೆ ಪ್ರತಿ ವರುಷವೂ ೨೧೩ ಲಕ್ಷ ರೂಪಾಯಿ ತೆರುತ್ತಿದೇವೆ. ಇದು ಪ್ರತಿ ವರುಷವೂ ಹೆಚ್ಚುತ್ತಿದೆ. ೧೯೨೩ ರಲ್ಲಿ ಮಾರಾಟಕ್ಕೆ ಸಿದ್ಧವಾಗದ ಹೊಗೆಸೊಪ್ಪು ೧ ೧/೪ ದಶಲಕ್ಷ ಪೌಂಡುಗಳಿದ್ದುದು ೧೯೨೭ ರಲ್ಲಿ ೫ ದಶಲಕ್ಷಕ್ಕೇರಿತು. ಇದಕ್ಕೆ ತಕ್ಕಂತೆ ಸಿಗರೇಟಿನ ಆಮದೂ ಹೆಚ್ಚಿತು. ನನಗೆ ಬಂದಿರುವ ವಾರ್ತಾಮೂಲ ನಂಬಲರ್ಹವಾದರೆ, ನಾವು ನಮ್ಮ ಹೊಗೆಸೊಪ್ಪಿನಲ್ಲಿ ಸ್ವಲ್ಪವೂ ರಫ್ತು ಮಾಡುವದಿಲ್ಲ. ಆದುದರಿಂದ ಆ ಅಗಾಧ ಬೆಳೆಯ ಬೆಲೆಯನ್ನು ಮೇಲೆ ಸೂಚಿಸಿರುವ ಅಂಕಿಗಳೊಂದಿಗೆ ಸೇರಿಸಬೇಕು. ಪ್ರತಿಯೊಬ್ಬ ಧೂಮಪಾನ ಮಾಡುವವನೂ ಈ ಕೊಳಕು ಪದ್ಧತಿಯನ್ನು ತ್ಯಜಿಸಿ, ತನ್ನ ಬಾಯನ್ನು ಕೊಳವೆಯಂತೆ ಮಾಡಿ, ಉಸಿರನ್ನು ಹೊಲಸಾಗಿಸುವ, ಹಲ್ಲನ್ನು ಕೆಡಿಸುವ, ಸೂಕ್ಷ್ಮ ಸದಸದ್ವಿವೇಕ ಶಕ್ತಿಯನ್ನು ಮಂಕುಮಾಡುವ ಈ ಪದ್ದತಿಯನ್ನು ನಿರಾಕರಿಸಿ, ಇದರಿಂದ ಆಗುವ ಉಳಿತಾಯವನ್ನು ಯಾವುದಾದರೂ ರಾಷ್ಟ್ರೀಯ ಕಾರ್ಯಕ್ಕೆ ನೀಡುವುದಾದರೆ, ಅವನಿಗೂ ರಾಷ್ಟ್ರಕ್ಕೂ ಅನುಕೂಲವಾದೀತು. (ಯಂಗ್ ಇಂಡಿಯಾ : ೫-೭-೨೮)

ಧೂಮಪಾನದ ಕೆಟ್ಟ ಕೃತ್ಯ

ಪ್ರಶ್ನೆ : ನೀವು ಪಾನ ನಿರೋಧದ ಬಗೆಗೆ ಇಷ್ಟು ತೀವ್ರವಾಗಿಯೂ, ಒಂದೇ ಸಮನಾಗಿಯೂ, ಬರೆದಿರುವಿರೇಕೆ? ಅಂತೆಯೇ ಧೂಮಪಾನದ ವಿಷಯದಲ್ಲಿ ಅಷ್ಟೇ ತೀವ್ರವಾಗಿಯೂ ನಿಲುವಿಲ್ಲದೆಯೂ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಈ ದುಷ್ಕೃತ್ಯ ಭಯಾನಕ ರೀತಿಯಲ್ಲಿ ಹೆಚ್ಚುತ್ತಿದೆ. ಚಿಕ್ಕಮಕ್ಕಳೂ ಹೆಚ್ಚು ಹೆಚ್ಚಾಗಿ ಇದಕ್ಕೆ ತುತ್ತಾಗುತ್ತಿದಾರೆ. ಧೂಮಪಾನ ಮಾಡುವುದರಲ್ಲಿ ಭಸ್ಮವಾಗಿ ಹೋಗುವ ಕೋಟ್ಯಂತರ ರೂಪಾಯಿಗಳು ನಮ್ಮ ಈ ಬಡ ನಾಡಿನಲ್ಲಿ ಎಷ್ಟೋ ಒಳ್ಳೆಯ ವಿಧಾನದಲ್ಲಿ ಉಪಯುಕ್ತವಾಗಬಹುದು.

ಉತ್ತರ : ಈ ಕೆಣಕು ನುಡಿ ನಿಜ, ಆದರೆ ಹೊಸದೇನೂ ಅಲ್ಲ. ಸಮಾನ ಒತ್ತಾಯ ಹಾಕದಿರುವುದಕ್ಕೆ ಕಾರಣವನ್ನು ಧೂಮಪಾನ ಮಾಡುವುದಕ್ಕೆ ಭಯಂಕರ ಗೌರವ ದೊರಕುತ್ತಿರುವುದರಲ್ಲಿ ಕಾಣಬಹುದು. ಒಂದು ದುಷ್ಕೃತ್ಯ ಅಂಥ ಮಟ್ಟಕ್ಕೇರಿದಾಗ ಅದನ್ನು ತೊಡೆದುಹಾಕಲು ಕಷ್ಟವಾಗುತ್ತದೆ. ಈ ಒಪ್ಪಿಗೆಯಿಂದ ದುಷ್ಕೃತ್ಯವನ್ನು ತಡೆಯುವುದಕ್ಕಾಗಿ ಚಳುವಳಿ ಮಾಡಬಾರದೆಂದು ಅರ್ಥವಲ್ಲ. ಹೇಗೆ ಮಾಡಬೇಕು, ಮತ್ತು ಯಾವಾಗ ಎಂಬುದೇ ಪ್ರಶ್ನೆ. ಇದಕ್ಕೆ ಉತ್ತರ ಕೊಡುವ ಸಾಮರ್ಥ್ಯ ನನ್ನಲ್ಲಿಲ್ಲವೆಂದು ನಾನು ವ್ಯಸನದಿಂದ ಒಪ್ಪಿಕೊಳ್ಳುತ್ತೇನೆ.

(ಹರಿಜನ: ೨೦-೧೦-೪೬)

ದ್ಯೂತ

★

ಪಂದ್ಯದ ಹಾನಿ

" ಕುದುರೆ ಪಂದ್ಯಗಳಲ್ಲಿ ಪಣ ಕಟ್ಟಾಡುವುದನ್ನು ನಿಲ್ಲಿಸಲು ನೀವು ಯಶಸ್ವಿಯಾಗುವುದಾದರೆ, ಸಹಸ್ರಾರು ಐರೋಪ್ಯ ಮತ್ತು ಭಾರತೀಯ ಗೃಹಿಣಿಯವರ ಕೃತಜ್ಞತೆಗೂ ವಂದನೆಗೂ ಪಾತ್ರರಾಗುವಿರಿ. ಕುದುರೆ ಪಂದ್ಯಗಳಲ್ಲಿ ಪಣ ಕಟ್ಟಾಡುವುದನ್ನು ಅಭ್ಯಸಿಸುವವರೆಗೆ, ನನ್ನ ಪತಿ, ಆದರ್ಶಪತಿಯಾಗಿದ್ದರು. ಅವರಿಗೆ ಕೈತುಂಬ ಸಂಬಳ ಬಂದರೂ ಮದ್ಯ ಪಾನ ಮಾಡದಿದ್ದರೂ ನಾವೀಗ ಸಾಲಗಾರರಾಗಿದ್ದೇವೆ ; ಹಣಾಭಾವದಿಂದ ತೊಂದರೆಗೀಡಾಗಿದ್ದೇವೆ. ಅನೇಕ ಗೃಹಿಣಿಯರಿಗೂ ಇಂಥ ಅನುಭವವಿರ ಬೇಕೆಂದು ನಾನು ನಂಬಿದೇನೆ. ನಾನು ಅವರನ್ನು ಎಷ್ಟೋಸಲ ಜೂಜಿಗೆ ಹೋಗಬೇಡಿರೆಂದು ಅಂಗಲಾಚಿ ಬೇಡಿಕೊಂಡಿದೇನೆ. ಇದು ನಿಷ್ಫಲವಾಗಿದೆ. ಗಂಡಂದಿರು ಕುದುರೆ ಪಂದ್ಯಗಳಿಗೆ ಹೋಗಿ ಹಣ ಕಳೆದುಕೊಳ್ಳುವುದು ನಿಲ್ಲದೆ ಹೋಗಿರುವುದರಿಂದ, ಪತ್ನಿಯರೂ, ಮಕ್ಕಳೂ ತೊಂದರೆಗೀಡಾಗು ವುದು ತುಂಬ ಕಷ್ಟವೆನಿಸುವುದಿಲ್ಲವೆ ? "

" ಮದ್ಯಪಾನವು ಸಾವಿರಾರು ಮಂದಿಯನ್ನು ಹಾಳುಮಾಡುತ್ತಿರುವು ದೇನೋ ನಿಜ ; ಆದರೆ, ಕುದುರೆ ಪಂದ್ಯಗಳಲ್ಲಿ ಪಣ ಕಟ್ಟಿ ಆಡುವುದು ಹತ್ತಾರು ಸಾವಿರ ಮಂದಿಯನ್ನು ನಿಜವಾಗಿಯೂ ಹಾಳುಮಾಡುತ್ತಿದೆ.

" ಸಾರ್ವಜನಿಕರನ್ನು ವಾಸ್ತವಿಕವಾಗಿಯೂ ಸೂರೆಮಾಡುವ ಡಬ್ಲ್ಯೂ.ಐ.ಟಿ. ಸಂಘವು ತನ್ನ ಐರೋಪ್ಯ ಕೆಲಸಗಾರರಿಗೆ ಕೈತುಂಬ ಸಂಬಳ ಕೊಡಬಲ್ಲದು. ಕುದುರೆ ಜೂಜಿನ ಸಂಘದವರು ನಾನಾ ಬಗೆಯ ಮೋಸ ಕೃತ್ಯ ನಡೆಸಿ, ಸಾರ್ವಜನಿಕರಿಂದ ಅಗಾಧ ಹಣ ಸುಲಿಗೆ ಮಾಡುವುದನ್ನು ನೀವು ತಿಳಿದರೆ, ನನ್ನೊಂದಿಗೆ ಖಂಡಿತ ಒಪ್ಪುವಿರಿ. ನಿಮ್ಮ ದಮ್ಮಯ್ಯ, ದೇವರಿಗಾಗಿ, ಪ್ರಯತ್ನಮಾಡಿ ಇದನ್ನು ಸರಿಪಡಿಸಿ. ಜೂಜಾಟಗಳ

ವ್ಯಾಪಾರಿಗಳು ಜೂಜು ಕಟ್ಟೆಯಲ್ಲಿಯೇ ಪಣ ಕಟ್ಟುವ ಏರ್ಪಾಡಿದ್ದಾಗ ಪರಿಸ್ಥಿತಿ ಎಷ್ಟೋ ಚೆನ್ನಾಗಿತ್ತು.

"ಹೊಸ ಶಾಸನ ಸಭೆಗಳಲ್ಲಿ ನಿಮಗೆ ಅನೇಕರು ಪರಿಚಿತರೆಂದು ನಾನು ನಂಬಿದೇನೆ. ಅವರ ನೆರವಿನಿಂದ ಕುದುರೆ ಪಂದ್ಯದಲ್ಲಿ ಪಣ ಕಟ್ಟುವುದನ್ನು ತಪ್ಪಿಸಲು ನೀವು ಯಶಸ್ಸುಗಳಿಸುವಿರೆಂದು ನೆಚ್ಚಿದೇನೆ. ಸರಕಾರವೇ ಇದನ್ನು ನಡೆಸುವುದಾದರೆ, ಬಹಳ ನ್ಯಾಯ ಸಿಕ್ಕೀತು. ಸಾರ್ವಜನಿಕರು ನಿರ್ವಾಹವಿಲ್ಲದೆ ಕಳೆದುಕೊಳ್ಳುತ್ತಾರೆ; ಕುದುರೆಗಳ ಮಾಲೀಕರು, ತರಬೇತು ಕೊಟ್ಟವರು, ಮತ್ತು ಸವಾರಿ ಮಾಡುವವರೂ ಗೆಲ್ಲುತ್ತಾರೆ. ದೊಡ್ಡ ಅಧಿಕಾರಿಗಳಲ್ಲಿ ಕೆಲವರು ಕುದುರೆ ಪಂದ್ಯಗಳಲ್ಲಿ ತುಂಬ ಆಸಕ್ತಿ ವಹಿಸಿರುವರೆಂಬ ಕಾರಣಕ್ಕಾಗಿ, ಸರಕಾರವೇ ಅವರಿಗೆ ಪರೋಕ್ಷ ಸಮ್ಮತಿ ಕೊಡುವುದು ಕಳಂಕವಲ್ಲವೆ?

"ನನ್ನ ಪತಿ ಸರಕಾರೀ ನೌಕರಿಯಲ್ಲಿರುವುದರಿಂದ ನಾನು ನನ್ನ ಹೆಸರನ್ನು ಕೊಡಬಯಸುವುದಿಲ್ಲ. ಆದರೆ, ನನ್ನ ಈ ಬರವಣಿಗೆಯ ವಿಷಯ ದಲ್ಲಿ ನೀವು ಆಸಕ್ತಿವಹಿಸಿ, ಕುದುರೆ ಪಂದ್ಯಗಳಲ್ಲಿ ಪಣಕಟ್ಟುವುದನ್ನು ನಿಲ್ಲಿಸಲು ಯಶಸ್ವಿಯಾಗಬೇಕೆಂದು ಪ್ರಾರ್ಥಿಸುತ್ತೇನೆ."

ಈ ಪತ್ರ ಕೆಲವು ಕಾಲದಿಂದ ನನ್ನೊಂದಿಗೆ ಪ್ರವಾಸಮಾಡುತ್ತಿದೆ. ಇದೊಂದು ವ್ಯಸನಕರ ಪತ್ರವೆಂಬ ನನ್ನ ಭಾವವನ್ನು ಓದುಗನೂ ಹಂಚಿ ಕೊಂಡಾನು. ಅನಾಮಧೇಯ ಪತ್ರಗಳಿಗೆ ಸಾಮಾನ್ಯವಾಗಿ ಬೆಲೆಯೇ ಅಪರೂಪ. ಪತ್ರಲೇಖಕಿ ತನ್ನ ಹೆಸರನ್ನು ವ್ಯಕ್ತಪಡಿಸಲಿಚ್ಛಿಸದಿದ್ದರೂ, ಇದೊಂದು ನಿಜವಾಗಿಯೂ ಅದಕ್ಕೆ ನಿಷೇಧ.

ಕುದುರೆ ಜೂಜಿನ ವಿಷಯವಾಗಿ ನಾನೇನನ್ನೂ ಅರಿಯೆ. ಅದಕ್ಕೆ ಸಂಬಂಧಿಸಿದುದೆಲ್ಲವನ್ನೂ ನಾನು ಯಾವಾಗಲೂ ಅಸಹ್ಯವಾಗಿಯೇ ಕಂಡಿ ದೇನೆ. ಕುದುರೆ ಜೂಜಾಡಿ ಅನೇಕರು ಹಾಳಾಗಿರುವುದನ್ನು ನಾ ಬಲ್ಲೆ.

ಆದರೆ, ಅದಕ್ಕೆ ವಿರೋಧವಾಗಿ ಏನನ್ನು ಬರೆಯುವುದಕ್ಕೂ ನನಗೆ ಧೈರ್ಯ ಬಂದಿಲ್ಲವೆಂದು ಒಪ್ಪಿಕೊಳ್ಳಬೇಕು. ಆಗಾಖಾನ್ ಅಂಥವರು, ಪಾದರಿಗಳು, ವೈಸ್ ರಾಯಿಗಳು, ಹಾಗೆಯೇ ದೇಶದಲ್ಲಿ ಅತ್ಯಂತ ಶ್ರೇಷ್ಠರೆನಿಸಿಕೊಂಡ ಅನೇಕರು ಬಹಿರಂಗವಾಗಿ ಅದಕ್ಕೆ ಉತ್ತೇಜನವಿತ್ತು ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡುವುದನ್ನು ಕಂಡು, ಅದರ

ವಿಷಯವಾಗಿ ಏನನ್ನು ಬರೆಯುವುದೂ ನಿರರ್ಥಕವೆಂದು ಭಾವಿಸುತ್ತೇನೆ. ಪತ್ರಿಕೋದ್ಯೋಗಿಯಾಗಿಯೂ, ಸುಧಾರಕನಾಗಿಯೂ ಯಾವ ದುಷ್ಕೃತ್ಯಗಳ ಬಗೆಗೆ ಸಾರ್ವಜನಿಕ ಅಭಿಪ್ರಾಯ ಉಂಟಾಗಬಹುದೋ ಅದರ ಬಗೆಗೆ ಸಾರ್ವಜನಿಕ ಗಮನವನ್ನು ಸೆಳೆವುದು ನನ್ನ ಕರ್ತವ್ಯ. ಪಿಡುಬು ಹಾಕಿಸುವುದನ್ನು ನಾನು ಒಪ್ಪದಿದ್ದರೂ ಆದರ ಪಿಡುಗಿನ ಬಗೆಗೆ ಸಾರ್ವಜನಿಕ ಅಭಿಪ್ರಾಯವನ್ನು ಸೆಳೆಯಲೆತ್ನಿಸುವುದು ವ್ಯರ್ಥಪ್ರಯತ್ನವೆನಿಸುತ್ತದೆ. ಮದ್ಯಪಾನ ನಿರೋಧದ ಬಗೆಗೆ ಚಳುವಳಿಯನ್ನು ಹೂಡಲು ನನಗೆ ಧೈರ್ಯವಿರಲಿಲ್ಲವೆಂದು ಒಪ್ಪಿಕೊಳ್ಳಬೇಕು. ಆದರೆ, ಅದು ತಾನಾಗಿಯೇ ಬಂದಿತು. ಜನತೆಯು ಸ್ವೇಚ್ಛೆಯಿಂದ ಅದನ್ನು ಆರಂಭಮಾಡಿದೆ.

ಅಸಹಕಾರವು ಶುದ್ಧೀಕರಣ ಚಳುವಳಿಯ ಅತ್ಯಂತ ನೈಜ ಕುರುಹೆನ್ನಬೇಕಾದರೆ, ಯಾರ ನೆರವನ್ನೂ, ಬೋಧೆಯನ್ನೂ ಅಪೇಕ್ಷಿಸದೆ, ಜನರು ಅನೇಕ ದುಷ್ಟ ಕಾರ್ಯಗಳನ್ನು ತಾವಾಗಿಯೇ ತೊಡೆದುಹಾಕಲೆತ್ನಿಸಿರುವುದು. ಇಂಥ ನಂಬಿಕೆಯಿಂದಲೇ ಜೂಜಿಗೆ ಸಂಬಂಧಿಸಿದ ಮೇಲಿನ ಪತ್ರವನ್ನು ನಾ ಪ್ರಕಟಿಸಿದೇನೆ.

ಕೇವಲ ಸ್ವಲ್ಪ ತಿದ್ದುಪಡಿಯಿಂದ ಲೇಖಕಿಗೆ ತೃಪ್ತಿಯಾದೀತೆಂದು ನನಗೆ ಭಾಸವಾಗುತ್ತದೆ. ಆದರೆ, ಈ ಪಿಡಗು ಪೂರ್ಣವಾಗಿ ವಿನಾಶವಾಗಬೇಕು. ಕುದುರೆ ಜೂಜುಕಟ್ಟೆಯಲ್ಲೇ ಆಗಲಿ, ಪಣ ಕಟ್ಟುವುದು ದ್ಯೂತ ಮನೋಭಾವದ ಅಂಗ. ಇದರೊಂದಿಗೆ ಜನರು ಅಸಹಕರಿಸುವುದಾದರೆ, ಅದು ತಾನಾಗಿಯೇ ನಿರ್ನಾಮವಾದೀತು. ಕುದುರೆ ಜೂಜು ಕಟ್ಟೆಗೆ ಹೋಗುವ ಸಾವಿರಾರು ಜನ ಕೇವಲ ಹುಡುಗಾಟಿಕೆಗಾಗಿ ಹೋಗುತ್ತಾರೆ. ಅವರು ಕುದುರೆಗಳು ಉಸಿರುಕಟ್ಟಿ ಓಡುವುದನ್ನು ನೋಡುವುದಕ್ಕೋ, ಅಥವಾ ಇದೊಂದು ರೂಢಿಯಾಗಿಯೋ, ಹೋಗುತ್ತಾರೆ; ಹೇಗಾದರೂ, ಇದು ಅನೇಕ ಜೂಜುಕೋರರ ವಿನಾಶಕ್ಕೆ ಸಹಾಯವನ್ನೂ ಒತ್ತಾಸೆಯನ್ನೂ ನೀಡಿದಂತೆ.

ಜೂಜಿನ ವಿಷಯ ಮದ್ಯಪಾನಕ್ಕಿಂತಲೂ ಕಠಿಣವೆನಿಸುತ್ತದೆ ನನಗೆ. ಒಂದು ದುಷ್ಟಕೃತ್ಯ ರೂಢಬದ್ಧವಾಗಿ, ಸದ್ಗುಣದಂತೆ ಕಂಡುಬಂದರೆ, ಅದನ್ನು ಸರಿಪಡಿಸುವದು ದೀರ್ಘಪ್ರಯತ್ನವೇ ಸರಿ. ಜೂಜುಗಾರಿಕೆ ರೂಢಿಯಾಗಿರುವುದು ಹಾಗಿರಲಿ, ಅದೊಂದು ದುಷ್ಕೃತ್ಯವೆಂದು ಪರಿಗಣಿಸಲ್ಪಟ್ಟ

ರುವುದೇ ಅಪರೂಪ. ಕುಡಿತದ ವಿಷಯ ಹಾಗಲ್ಲ. ಅದೃಷ್ಟವಶಾತ್, ಅದು ಪೂರ್ಣವಾಗಿ ಪಾಪವೆಂದು ಪರಿಗಣಿಸಲ್ಪಡದಿದ್ದರೂ, ಅದೊಂದು ನ್ಯೂನತೆ ಯೆಂದು ಮತಧರ್ಮವೂ ಅದನ್ನು ಸ್ವಲ್ಪ ಹೆಚ್ಚುಕಡಿಮೆ ಒಂದೇ ಬಗೆಯ ತೀವ್ರತೆಯಿಂದ ಖಂಡಿಸಿವೆ. ಆದರೆ ಜೂಜುಗಾರಿಕೆಗೆ ಈ ವಿಶೇಷ ಪರಿಗಣನೆ ಇಲ್ಲ. ಆದುದರಿಂದ ವಿವೇಚನೆಯುಳ್ಳ ಸಾರ್ವಜನಿಕರು ಕುದರೆ ಜೂಜನ್ನು ನೋಡುವುದಕ್ಕಿಂತಲೂ ನಿರ್ದುಷ್ಟವಾದ ಮತ್ತೊಂದು ಹೆಚ್ಚು ಮನೋ ರಂಜನ ಕ್ರಿಯೆಯನ್ನು ಕಂಡುಕೊಂಡು, ತಮ್ಮ ಅಸಮಾಧಾನವನ್ನು ಪ್ರಕಟಿಸುವರೆಂದು ಆಶಿಸೋಣ. (ಯಂಗ್ ಇಂಡಿಯಾ: ೨೭-೪-೨೧)

ಕಾಶೀ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಘನ ಪಂಡಿತ ಸ್ಥಾನಪತಿ ಬಾಬು ಭಗವಾನ್‌ದಾಸ್ ಅವರು ಮಹಾಪಾತಕಗಳಲ್ಲೊಂದಾದ ದ್ಯೂತದ ವಿಷಯವಾಗಿ ಮನುಸ್ಮೃತಿಯಿಂದ ಕೆಲವು ಆರಿಸಿದ ಭಾಗಗಳನ್ನು ಕಳಿಸಿ ದ್ದಾರೆ. ಅವು ಈ ರೀತಿ ಇವೆ:

"ಎಚ್ಚರಿಕೆಯುಳ್ಳ ರಾಜನು ದ್ಯೂತವನ್ನೂ, ಜೂಜನ್ನೂ, ರಾಜ್ಯ ದಲ್ಲಿರದಂತೆ ನೋಡಿಕೊಳ್ಳಬೇಕು; ಏಕೆಂದರೆ, ಈ ಎರಡು ದುಷ್ಕೃತ್ಯಗಳೂ ರಾಜ್ಯವನ್ನೂ ರಾಜನನ್ನೂ ನಾಶಮಾಡುತ್ತವೆ." (೨೨೧)

"ದ್ಯೂತ, ಜೂಜು, ನಿಜವಾಗಿಯೂ ಹಗಲು ದರೋಡೆಯಂತೆ. ಎಚ್ಚರಿಕೆಯುಳ್ಳ ರಾಜನು ಈ ಎರಡನ್ನೂ ನಿರ್ಮೂಲ ಮಾಡಲೆತ್ನಿಸಬೇಕು." (೨೨೨)

"ದ್ಯೂತದಲ್ಲಿ ನಿರ್ಜೀವ ವಸ್ತುಗಳು ಪಣವಾದರೆ, ಜೂಜಿನಲ್ಲಿ, ಜೀವಂತ ವಸ್ತುಗಳೂ ಪಣವಾಗಿ ಉಪಯೋಗಿಸಲ್ಪಡುವುವು." (೨೨೩)

"ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದನ್ನು ಸ್ವತಃ ಮಾಡಿ ದವನಿಗೂ, ಇತರರು ಮಾಡುವುದಕ್ಕೆ ಸಹಾಯವಾಗುವವನಿಗೂ, ರಾಜನು ತನ್ನ ವಿವೇಕದಂತೆ, ಮೋಸಗಾರಿಕೆ ಮತ್ತು ತಮ್ಮ ನ್ಯಾಯಬದ್ಧ ಉದ್ಯೋಗ ವಲ್ಲದಿದ್ದರೂ ಇತರರ ಉದ್ಯೋಗವನ್ನು ಮಾಡುವಂತೆ ನಟಿಸುವವರಿಗೂ ಶಿಕ್ಷೆ ವಿಧಿಸುವಂತೆ ಆಮರಣಾಂತ ಶಿಕ್ಷೆಯನ್ನು ವಿಧಿಸಬಹುದು. ಅಥವಾ ನೃತ್ಯ, ಸಂಗೀತ ಮತ್ತು ನಟನೆ ಇವುಗಳ ನೆಪದಲ್ಲಿ ವ್ಯಭಿಚಾರ ಮಾಡುವ, ಹಾಗೂ ಮಾದಕ ದ್ರವ್ಯ ಮಾರಾಟ ಮಾಡುವ, ಕೆಟ್ಟ ಮೋಸಕೃತ್ಯಗಳಲ್ಲಿ

ತೊಡಗುವ, ಪಾಪಕರ ವ್ಯಾಪಾರಗಳಲ್ಲಿ ತೊಡಗುವ ಜನರನ್ನು ದೇಶಭ್ರಷ್ಟರನ್ನಾಗಿ ಮಾಡುವಂತೆ, ದ್ಯೂತಗಾರರನ್ನೂ, ಜೂಜಾಳಿಗಳನ್ನೂ ದೇಶಭ್ರಷ್ಟರನ್ನಾಗಿ ಮಾಡಬಹುದು." (೨೨೪–೨೨೮)

(ಯಂಗ್ ಇಂಡಿಯಾ : ೨೫-೫-೨೧)

ದ್ಯೂತದ ಕೆಡುಕು

ಬೊಂಬಾಯಿಯ ಮೇಲುವರ್ಗದವರೆನಿಸಿಕೊಂಡ ಜನರಲ್ಲಿ ಹರಡಿರುವ ಒಂದು ಬಗೆಯ ದ್ಯೂತದ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಒಬ್ಬ ಗೆಳೆಯ ಬಿಡದೆ ನನ್ನನ್ನು ಕೇಳುತ್ತಿದಾನೆ. ಈ ಕೆಡುಕನ್ನು ಅಲ್ಲಗಳೆಯುವುದರಲ್ಲಿ ಗೆಳೆಯನೊಂದಿಗೆ ನಾನು ತುಂಬ ಆತ್ಮೀಯ ಹೊಂದಿದ್ದರೂ ಅದರ ವಿಚಾರವಾಗಿ ಬರೆಯಲು ನನಗೆ ಧೈರ್ಯ ಬಂದಿಲ್ಲ. ಈ ಕೆಡುಕಿನಮೇಲೆ ವ್ಯವಸ್ಥಿತ ರಚನಾತ್ಮಕ ವಿಧಾನದಿಂದ ಹೋರಾಡುವ ಅವಕಾಶವಿಲ್ಲದಿರುವುದರಿಂದ, ಇದರ ಬಗೆಗೆ ನಾ ಹೇಳಬಹುದಾದ ವಿಷಯ ನಿಷ್ಫಲ ಪ್ರಯತ್ನವಾದೀತೋ ಎನ್ನಿಸುತ್ತದೆ. ಹೀಗೆ, ಈ ಕೆಡುಕಿನ ಬಗೆಗೆ ಬರೆಯಬೇಕೆಂಬ ವಿಷಯದಲ್ಲಿ ನಾ ವಿಚಾರಪರನಾಗಿದ್ದಾಗ ಸರದಾರರ ಕರೆಯಂತೆ ನಾನು ಬೋರ್‌ಸಾದಿಗೆ ಹೋಗಬೇಕಾಯಿತು. ಅಲ್ಲಿ ಸರದಾರರೂ ಅವರ ಸ್ವಯಂಸೇವಕರೂ, ಗುಜರಾತಿನ ಹಳ್ಳಿಗಳಲ್ಲಿ ನಡೆಯುತ್ತಿರುವ ದ್ಯೂತದ ಹಾವಳಿಯನ್ನು ಕುರಿತು ಮನ ನೋಯಿಸುವ ಕಥೆಗಳನ್ನು ಅಗಾಧವಾಗಿ ಹೇಳಿದರು. ಅದು ರಾತ್ರಿವೇಳೆ ಗಾಳಿಗೊಡ್ಡಿದ ಹುಲ್ಲಿಗೆ ಬಿದ್ದ ಬೆಂಕಿಯಂತೆ ಹರಡುತ್ತಿದೆ. ಕೆಲಸವನ್ನೇ ಮಾಡದೆ ಎಲ್ಲರೂ ಐಶ್ವರ್ಯ ಸಂಪಾದಿಸಬೇಕೆಂಬ ಆತುರದಲ್ಲಿ ಇರುವಂತೆ ಕಾಣುತ್ತದೆ. 'ಯಾರೋ ಯಾವುದೋ ವಸ್ತುವಿನ ಅಂದಿನ ಬೆಲೆಯನ್ನು ಸರಿಯಾಗಿ ಊಹಿಸಿರುವರು. ನಾನೇ ಅವನೇಕೆ ಆಗಿರಬಾರದು?' ಹೀಗೆಂದು ವಾದಿಸುತ್ತಾ ದ್ಯೂತಗಾರ ತನ್ನ ವಿನಾಶದತ್ತ ಧಾವಿಸುತ್ತಿದಾನೆ. ಒಮ್ಮೆ ಆನಂದಮಯ ಕುಟುಂಬಗಳಿಂದ ಕೂಡಿದ್ದ ಗುಜರಾತಿನ ಹಳ್ಳಿಗಳ ನೆಮ್ಮದಿ ನಾಶವಾಗುತ್ತಿದೆ.

ಹೆಸರು ಏನೇ ಆಗಲಿ, ಈ ದ್ಯೂತ ಪದ್ಧತಿ ಆದಿಪುರುಷನ ಕಾಲದಿಂದ ನಡೆದುಬಂದಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಹೆಸರು, ರೂಪ, ಬದಲಾಯಿಸಿದ್ದರೂ, ಮೂಲ ಅಭಿಪ್ರಾಯ ಬದಲಾವಣೆಯನ್ನೇ ಹೊಂದಿಲ್ಲ.

ದ್ಯೂತಕ್ಕೆ ವಿರುದ್ಧವಾದ ಶಾಸನವೇನೋ ಇರಬೇಕು. ಆದರೆ, ಅದರ ಹಿಂದೆ ಸಾರ್ವಜನಿಕ ಅಭಿಪ್ರಾಯವಿಲ್ಲದಿದ್ದರೆ ಏನೂ ಪ್ರಯೋಜನ ವಿಲ್ಲ. ಆದುದರಿಂದ, ಪ್ಲೇಗಿನ ಸಮಯದಲ್ಲೋ, ಭೂಕಂಪದ ಸಮಯ ದಲ್ಲೋ ಕಾರ್ಯಕರ್ತರು ಸ್ಫೂರ್ತಿ ಪಡೆದಂತೆ ಪಡೆದುಕೊಳ್ಳಬೇಕಾದುದು ಆವಶ್ಯಕ. ಈ ದುಷ್ಟಪದ್ಧತಿಯನ್ನು ಪೂರ್ಣವಾಗಿ ನಿರ್ಮೂಲ ಮಾಡುವ ವರೆಗೂ ಅವರು ತೃಪ್ತರಾಗಬಾರದು. ಒಂದು ದೃಷ್ಟಿಯಲ್ಲಿ ಇದು ಪ್ಲೇಗು ಮತ್ತು ಭೂಕಂಪಗಳಿಗಿಂತಲೂ ಹೆಚ್ಚು ಹಾನಿಕರ. ಏಕೆಂದರೆ, ಅದು ಆತ್ಮ ವಿನಾಶ ಮಾಡುತ್ತದೆ. ಆತ್ಮವಿರಹಿತಮಾನವ, ಲೋಕಕ್ಕೊಂದು ಹೊರೆ. ಪ್ಲೇಗು ಅಥವಾ ಭೂಕಂಪದ ದುಃಖ ಇವುಗಳ ವಿರುದ್ಧ ನಡೆಸುವ ಸಮರ ದಷ್ಟು ಸುಲಭವಲ್ಲ, ದ್ಯೂತದ ಮೇಲಿನ ಸಮರ. ಒಂದರಲ್ಲಿ ದುಃಖಿಗಳು ಪರಸ್ಪರ ಸಹಕರಿಸುತ್ತಾರೆ. ಇನ್ನೊಂದರಲ್ಲಿ ದುಃಖಿತರು ದುಃಖವನ್ನೇ ಸ್ವಾಗತಿಸಿ ಅಪ್ಪಿಕೊಳ್ಳುತ್ತಾರೆ. ದ್ಯೂತಗಾರನನ್ನು ಅವನ ದುಷ್ಕೃತ್ಯದಿಂದ ತಿರುಗಿಸಲೆತ್ನಿಸುವುದು ಮದ್ಯಪಾನಕ್ಕೆ ತುತ್ತಾದವನನ್ನು ಅದರಿಂದ ತಿರುಗಿಸ ಲೆತ್ನಿಸಿದಂತೆ. ಆದುದರಿಂದ ದ್ಯೂತದ ಮೇಲೆ ಹೂಡುವ ಸಮರ ಏರುದಿಣ್ಣೆ ಹತ್ತುವಂತೆ ಪ್ರಯಾಸದ ಕೆಲಸ. ಸಕಾಲದಲ್ಲಿ ಆಗದಿದ್ದರೂ, ಈ ದುಷ್ಟ ಪದ್ಧತಿ ಪ್ರತಿಭಟಿಸಲ್ಪಡಲೇಬೇಕು. ಬೊಂಬಾಯಿಯಲ್ಲಂತೂ ಇದು ಸಾಕಷ್ಟು ಕೆಟ್ಟದೆ. ಇದು ಗ್ರಾಮಗಳಮೇಲೆ ಮಾಡುತ್ತಿರುವ ಧಾಳಿ, ಭಾರಿ ಅಪಾಯ ಸೂಚಕ. ಯಾವ ದೇಶಪ್ರೇಮಿಯೂ ಇದನ್ನು ಪರಿಗಣನೆಗೆ ತೆಗೆದುಕೊಳ್ಳದಿರುವ ಧೈರ್ಯ ಮಾಡಲಾರ. (ಹರಿಜನ: ೧೫-೬-೩೫)

ಕುದುರೆ ಜೂಜು ಕಟ್ಟೆಯಲ್ಲಿ ದ್ಯೂತವಾಡುವುದು, ನಾನರಿತಿರುವಂತೆ ಪಾಶ್ಚಿಮಾತ್ಯ ದೇಶಗಳಿಂದ ಆಮದಾಗಿ ಬಂದ ಅನೇಕ ಅಂಶಗಳ ಪೈಕಿ ಒಂದು. ನನಗೆ ಸಾಧ್ಯವಿದ್ದರೆ, ಜೂಜು ಕಟ್ಟೆಯಲ್ಲಿ ಪಣಕಟ್ಟಾಡುವುದಕ್ಕೆ ಇರುವ ಅನುಕೂಲಕರ ಶಾಸನ ಎಷ್ಟಿದ್ದರೂ ತೆಗೆದುಹಾಕುತ್ತಿದ್ದೆ. ಕಾಂಗ್ರೆಸ್ ಸಂಸ್ಥೆಯು, ೧೯೨೦ನೇ ಇಸವಿಯ ನಿರ್ಣಯದಲ್ಲಿ ವಿವರಿಸಿದಂತೆ

ಆತ್ಮಶುದ್ಧಿಯ ಕಾರ್ಯಕ್ರಮಕ್ಕೆ ಬದ್ಧವಾಗಿರುವದರಿಂದ ಯಾವ ಬಗೆಯ ಕಲುಷಿತ ರೀತಿಯಲ್ಲಿಯೇ ಆಗಲಿ ಬರುವ ಆದಾಯವನ್ನು ತೆಗೆದುಕೊಳ್ಳು ವಂತಿಲ್ಲ. ಆದುದರಿಂದ ಮಂತ್ರಿಗಳು ಸಾರ್ವಜನಿಕ ಅಭಿಪ್ರಾಯವನ್ನು ಸರಿ ಯಾದ ರೀತಿಯಲ್ಲಿ ಬೆಳೆಸುವುದಕ್ಕೂ, ಮೇಲು ವರ್ಗಗಳವರಲ್ಲಿ ಇರುವ ದ್ಯೂತ ಪದ್ಧತಿಯನ್ನು ನಿಲ್ಲಿಸುವುದಕ್ಕೂ ತಮ್ಮ ಅಧಿಕಾರವನ್ನು ಉಪ ಯೋಗಿಸಬೇಕು. ದೊಡ್ಡ ಅಂತಸ್ತಿನಲ್ಲಿರುವ ಜನರ ದುರ್ಮಾರ್ಗವನ್ನು ಜಾಗರೂಕರಲ್ಲದ ಸಾಮಾನ್ಯರು ಅನುಸರಿಸಲಾರರೆಂದು ಆಶಿಸುವುದು ನಿರರ್ಥಕ. ಕುದುರೆಗಳ ಒಳ್ಳೆಯ ತಳಿಯನ್ನು ವೃದ್ಧಿಪಡಿಸುವುದಕ್ಕೆ ಕದುರೆ ಜೂಜು ಆವಶ್ಯಕವೆಂಬ ವಾದವನ್ನು ನಾ ಕೇಳಿದೇನೆ. ಇದರಲ್ಲಿ ಸತ್ಯವಿರ ಬಹುದು. ಪಣವೊಡ್ಡಿ ಜೂಜಾಟವಿಲ್ಲದೆ ಕುದುರೆ ಪಂದ್ಯ ಇರಲಾರದೆ? ಜೂಜಾಟವೂ ಕುದುರೆಗಳ ಒಳ್ಳೆಯ ತಳಿಗೆ ಒಂದು ಸಾಧನವೆ?

(ಹರಿಜನ : ೪–೯–೩೭)

ಕುದುರೆ ಜೂಜು

ಪ್ರಶ್ನೆ : ಅನೇಕ ಪ್ರಮುಖ ನಗರಗಳಲ್ಲಿ ಕುದುರೆ ಜೂಜು ನಡೆಯು ತ್ತಿದೆ. ಅದು, ಮೇಲು–ಕೀಳು, ಶ್ರೀಮಂತ-ಬಡವ, ಹೀಗೆ ಎಲ್ಲರಿಗೂ ಸಮಾನವಾಗಿ ದುಷ್ಪ್ರೇರಕವಾಗಿದೆ; ನೈತಿಕ ಪತನಕ್ಕೂ, ಕೆಲವು ಸಂದರ್ಭ ಗಳಲ್ಲಿ ನಿರ್ಗತಿಕ ಸ್ಥಿತಿಗೂ ಕಾರಣವಾಗಿದೆ. ಅನೇಕ ರಾಜರುಗಳು ಪಂದ್ಯದ ಕುದುರೆಗಳನ್ನು ಕೊಳ್ಳುವುದಕ್ಕೆ ತಮ್ಮ ಸಾರ್ವಜನಿಕ ಆದಾಯದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಈ ದುಷ್ಟ ಪದ್ಧತಿ ಯನ್ನು ತಪ್ಪಿಸಲು ನಮ್ಮ ನೂತನ ಸರಕಾರಗಳು ಯಾವ ಕಾರ್ಯಕ್ರಮ ಕೈಗೊಳ್ಳಬೇಕು?

ಉತ್ತರ : ಈ ದುಷ್ಟ ಪದ್ಧತಿಯ ವಿಷಯದಲ್ಲಿ ಸಂದೇಹವೇ ಇಲ್ಲ. ಆದರಿಂದಾಗಬಹುದೆಂದು ನಿರೀಕ್ಷಿಸಲಾದ ಒಳಿತೆನ್ನುವುದು ತೀರ ಸಂದೇಹಾ ಸ್ಪದ. ದೇಶದಲ್ಲಿ ಏರುತ್ತಿರುವ ದುಃಖದ ಈ ಸಮಯದಲ್ಲಂತೂ ಅದು

ಮಹಾ ಕೇಡಿಗತನ. ನೂತನ ರಾಷ್ಟ್ರೀಯ ಸರಕಾರಗಳು ಇದನ್ನು ತಡೆಯಲು ತುಂಬ ಕೆಲಸಮಾಡಬಹುದು. ಆದರೆ, ಅವರ ಇತಿಮಿತಿಗಳನ್ನೂ ನಾವು ಅರ್ಥ ಮಾಡಿಕೊಳ್ಳೋಣ. ಅವು ಜನಪ್ರಿಯ ಸರಕಾರಗಳಾಗಿರುವುದರಿಂದ ಜನಾಭಿಪ್ರಾಯಕ್ಕೆ ತುಂಬ ಮುಂದೆ ಹೋಗಲಾರವು. ಅದು ಸುಧಾರಕರ ವಿಶೇಷ ಕರ್ತವ್ಯ. ಆದರೆ ಸರಕಾರಗಳು ತಮ್ಮ ಸ್ವಂತ ಮೇಲ್ಪಂಕ್ತಿಯಿಂದ, ಈ ದುಂದುಗಾರಿಕೆಗೆ ಸಾರ್ವಜನಿಕ ಹಣವನ್ನು ವೆಚ್ಚಮಾಡಬಹುದೆಂದು ಅಧಿಕಾರೀ ಶಾಹಿಯವರು ಬೆಳೆಸಿರುವ ಕೆಟ್ಟ ರೂಢಿಯನ್ನು ಖಂಡಿತವಾಗಿಯೂ ತಪ್ಪಿಸಲೆತ್ನಿಸಬೇಕು. ರಾಷ್ಟ್ರೀಯ ಸರಕಾರಗಳು ತೋರಿಸಬಹುದಾದ ಒಳ್ಳೆಯ ಮಾರ್ಗದರ್ಶನವನ್ನು ರಾಜರುಗಳು ಅನುಸರಿಸುವರು. (ಹರಿಜನ: ೭-೭-೪೬)

ಈ ಹಿಂದೆ, ಕುದುರೆ ಜೂಜಿನಿಂದ ಆಗುವ ಮಾನವಧನ ವಿನಾಶ ಕುರಿತು ಬರೆದಿದೇನೆ. ಆದರೆ, ಕುದುರೆ ಜೂಜುಕಟ್ಟೆಯಲ್ಲಿ ನಡೆಯುವ ಕೆಡುಕು ಮದ್ಯಪಾನಕ್ಕಿಂತ ಯಾವ ವಿಧದಲ್ಲಿಯೂ ಕಮ್ಮಿಯಲ್ಲವೆಂದು ಒಬ್ಬ ಗೆಳೆಯ ಒತ್ತಾಯಪೂರ್ವಕವಾಗಿ ಬರೆದಿರುವುದರಿಂದ ಅದರ ವಿಷಯವಾಗಿ ಪುನಃ ನಾನು ಬರೆಯಲೇಬೇಕಾಗಿದೆ. ಆ ಪತ್ರಲೇಖಕ ಇನ್ನೂ ಹೀಗೆ ಹೇಳುತ್ತಾರೆ :

“ಕುದುರೆ ಜೂಜಿಗಾಗಿ ವಿಶೇಷ ರೈಲುಗಳು ಹೋಗಿಬರುತ್ತವೆ. ಅವುಗಳ ತುಂಬ ಗಾಂಧೀ ಟೋಪಿ ಧರಿಸಿ, ಕಾಂಗ್ರೆಸಿಗರೆನಿಸಿಕೊಂಡ ಜನ ತಮ್ಮ ಹಣವನ್ನು ವೆಚ್ಚಮಾಡುವುದಕ್ಕಾಗಿಯೇ ಹೋಗುತ್ತಾರೆ. ಈ ಹಣ ಎಲ್ಲಿಂದ ಬರುತ್ತದೆ? ನಮಗೀಗ ಜನಪ್ರಿಯ ಸರಕಾರಗಳಿದ್ದರೂ, ಮಂತ್ರಿಗಳು ತುಟಿಪಿಟಿಕ್ಕೆನ್ನದೆ ಈ ಕೆಟ್ಟ ಪದ್ಧತಿಯನ್ನು ಸಹಿಸಿಕೊಂಡಿದಾರೆ.”

ನನ್ನ ಅಭಿಪ್ರಾಯದಲ್ಲಿ ಕುದುರೆ ಜೂಜಿನ ಪಂದ್ಯಾಟವು ನಿಜವಾಗಿಯೂ ಮದ್ಯಪಾನದಷ್ಟು ದೊಡ್ಡ ಕೆಡುಕೆನಿಸದಿದ್ದರೂ, ಒಂದರೊಡನೊಂದನ್ನು ಹೋಲಿಸುವುದೇ ಸರಿಯಲ್ಲ. ಕಮ್ಮಿ ಕೆಡುಕು ಎಂಬ ಕಾರಣ

ದಿಂದ ಕುದುರೆ ಜೂಜು ಒಳ್ಳೆಯದೆನಿಸದು. ಕುದುರೆ ಜೂಜಿನ ಸೂಕ್ಷ್ಮ ವಿಷಯಗಳನ್ನೆಲ್ಲ ನಾನರಿಯೆ. ನಾನು ಹೇಳಬಹುದಾದುದೆಲ್ಲ ಇಷ್ಟೆ. ಜನಪ್ರಿಯ ಸರಕಾರಗಳಿಗೆ ಈ ಕೆಟ್ಟ ಪದ್ಧತಿಯನ್ನು ನಿರ್ಮೂಲ ಮಾಡಲು ಸಾಧ್ಯವಿದ್ದರೆ, ಅವು ಆ ರೀತಿ ಖಂಡಿತ ಮಾಡಬೇಕು.

(ಹರಿಜನ : ೧೮-೮-೪೬)

ಭಾಗ ೫

ಸಂತತಿ ನಿಯಮನ

★

ಒಂಭತ್ತು ಸೂಚನೆಗಳು

ಯಾರು ಲೋಲುಪತೆಯನ್ನೇ ತಮ್ಮ ಜೀವನಧರ್ಮವನ್ನಾಗಿ ಮಾಡಿಕೊಂಡಿಲ್ಲವೋ, ಯಾರು ಸಹಜವಾಗಿಯೇ ತಮ್ಮಲ್ಲಿರಬೇಕಾದ ಆತ್ಮಸಂಯಮನ್ನು ಕಳೆದುಕೊಂಡು ಅದನ್ನು ಪುನಃ ಗಳಿಸಿಕೊಳ್ಳುವುದಕ್ಕಾಗಿ ಪ್ರಬಲ ಹೋರಾಟ ನಡೆಸುತ್ತಿರುವರೋ, ಅಂಥವರಿಗೆ ಕೆಳಗಿನ ಸೂಚನೆಗಳು ಮಾರ್ಗದರ್ಶನ ಮಾಡಿಯಾವು :

೧. ನೀವು ವಿವಾಹಿತರಾಗಿದ್ದರೆ, ನಿಮ್ಮ ಪತ್ನಿ ನಿಮ್ಮ ಗೆಳೆಯ, ಸಂಗಾತಿ, ಸಹಚರಿಯೇ ಹೊರತು ಕಾಮೋಪಭೋಗದ ಸಾಧನವಲ್ಲವೆಂಬುದನ್ನು ನೆನಪಿನಲ್ಲಿಡಿ.

೨. ಆತ್ಮಸಂಯಮವು ನಿಮ್ಮ ಜೀವನಧರ್ಮ. ಆದುದರಿಂದ, ಸಂಭೋಗಕ್ರಿಯೆಯು ಇಬ್ಬರೂ ಅದನ್ನು ಅಪೇಕ್ಷಿಸಿದಾಗಲೇ ಮತ್ತು ಇಬ್ಬರೂ ಸ್ಪಷ್ಟವಾಗಿ ಒಪ್ಪಿಕೊಂಡ ನಿಯಮಗಳಿಗನುಗುಣವಾಗಿಯೇ ನಡೆಯಬೇಕು.

೩. ನೀವು ಇನ್ನೂ ವಿವಾಹಿತರಾಗಿಲ್ಲದಿದ್ದರೆ, ನಿಮ್ಮ ಸಲುವಾಗಿಯೂ, ಸಮಾಜದ ಸಲುವಾಗಿಯೂ, ನಿಮ್ಮ ಭಾವೀ ಜೀವನ ಸಂಗಾತಿಯ ಸಲುವಾಗಿಯೂ ಪರಿಶುದ್ಧರಾಗಿರಬೇಕು. ನೀವು ಈ ನಿಷ್ಠೆಯ ಭಾವವನ್ನು ಅಭ್ಯಸಿಸಿದರೆ, ಅದು ಎಲ್ಲ ದುಷ್ಟಸೆಳೆತಗಳಿಂದಲೂ ತಪ್ಪದೆ ನಿಮ್ಮನ್ನು ಕಾಪಾಡೀತು.

೪. ನಮಗೆಂದಿಗೂ ಗೋಚರವಾಗಲಾರದಿದ್ದರೂ, ನಮ್ಮ ಎಲ್ಲ ಅಪರಿಶುದ್ಧ ಭಾವಗಳನ್ನೂ ಎಚ್ಚರಿಕೆಯಿಂದ ಪರೀಕ್ಷಿಸುತ್ತಿರುವ ಅಗೋಚರ ಶಕ್ತಿಯನ್ನು ಕುರಿತು ಸದಾ ಚಿಂತಿಸಿ. ಆ ಶಕ್ತಿ ನಿಮಗೆ ನೆರವೀಯುವುದನ್ನು ನೀವೇ ಅರಿಯುವಿರಿ.

೫. ಆತ್ಮ ಸಂಯಮದ ಜೀವನ ನಿಯಮಗಳಿಗೂ ಕಾಮೋಪಭೋಗದ ಜೀವನ ನಿಯಮಗಳಿಗೂ ವ್ಯತ್ಯಾಸ ಅವಶ್ಯಕ. ಆದುದರಿಂದ ನಿಮ್ಮ ಸಹವಾಸಿಗಳು, ನಿಮ್ಮ ವ್ಯಾಸಂಗ, ನಿಮ್ಮ ಮನೋರಂಜನೆಯ ಸ್ಥಾನಗಳು, ನಿಮ್ಮ ಆಹಾರ, ಎಲ್ಲವನ್ನೂ ಕ್ರಮಪಡಿಸಿಕೊಳ್ಳಿ.

ಒಳ್ಳೆಯವರ ಮತ್ತು ಪರಿಶುದ್ಧರ ಸಂಗ ಬೆಳೆಸಿಕೊಳ್ಳಿ.

ಕಾಮೋದ್ರೇಕಗೊಳಿಸುವ ಕಾದಂಬರಿಗಳನ್ನೂ ಮತ್ತು ಪತ್ರಿಕೆಗಳನ್ನೂ ಓದುವುದನ್ನು ದೃಢನಿಶ್ಚಯಪೂರ್ವಕವಾಗಿ ತ್ಯಜಿಸಿ, ಮಾನವನ ಅಭಿವೃದ್ಧಿಗೆ ಸಾಧಕವಾದ ಗ್ರಂಥಗಳನ್ನು ಓದಿ. ಒಂದು ಗ್ರಂಥ ಸದಾ ನಿಮ್ಮ ಪರಾಮರ್ಶೆ ಮತ್ತು ಮಾರ್ಗದರ್ಶನಕ್ಕೆ ಒಡನಾಡಿಯಾಗಿರಲಿ.

ನಾಟಕಶಾಲೆ ಮತ್ತು ಚಲನಚಿತ್ರ ಮಂದಿರಗಳಿಂದ ದೂರವಿರಿ. ಮನೋರಂಜನೆ ಎಂದರೆ ಮನಸ್ಸು ದುರ್ವ್ಯಸನಗಳಲ್ಲಿ ತೊಡಗುವುದಲ್ಲ; ಮನಸ್ಸು ಪುನಃ ಚೈತನ್ಯಪೂರ್ಣವಾಗಬೇಕು. ಆದುದರಿಂದ ನೀವು ಭಜನ ಮಂಡಲಿಗಳಿಗೆ ಹೋಗಿ; ಅಲ್ಲಿ ಶಬ್ದ ಮತ್ತು ರಾಗ ಎರಡೂ ಆತ್ಮೋನ್ನತಿಗೈಯುತ್ತವೆ.

ನಾಲಿಗೆಯ ರುಚಿ ತೀರಿಸಿಕೊಳ್ಳುವುದಕ್ಕಾಗಿ ತಿನ್ನಬೇಡಿ; ಅದು ಹಸಿವೆ ತೀರಿಸಿಕೊಳ್ಳುವುದಕ್ಕಾಗಿ ಮಾತ್ರ. ಕಾಮೋಪಭೋಗಿಯಾದ ಪುರುಷ ತಿನ್ನುವುದಕ್ಕಾಗಿಯೇ ಬದುಕುತ್ತಾನೆ. ಆತ್ಮ ಸಂಯಮವುಳ್ಳ ಪುರುಷ ಜೀವಿಸುವುದಕ್ಕೆ ಮಾತ್ರ ತಿನ್ನುತ್ತಾನೆ. ಆದುದರಿಂದ ಎಲ್ಲ ವಿಧದ ಸಂಬಾರ ಪದಾರ್ಥಗಳನ್ನೂ ನರಗಳನ್ನು ಉದ್ರೇಕಗೊಳಿಸುವ ಮತ್ತು ಸದಸದ್ವಿವೇಕವನ್ನು ನಾಶಮಾಡುವ ಮದ್ಯಸಾರ ಮತ್ತಿತರ ಮಾದಕ ವಸ್ತುಗಳನ್ನೂ ವರ್ಜಿಸಿ. ಊಟದ ಕಾಲ ಮತ್ತು ಪ್ರಮಾಣವನ್ನು ನಿರ್ಧರಮಾಡಿಕೊಳ್ಳಿ.

೬. ಕಾಮೋದ್ರೇಕ ನಿಮ್ಮನ್ನು ಮುಸುಕಿದಾಗ ದೇವನನ್ನು ವಿನೀತ ಭಾವದಿಂದ ಪ್ರಾರ್ಥಿಸಿ. ರಾಮನಾಮ ತಪ್ಪದೆ ರಕ್ಷಣೆ ನೀಡುತ್ತದೆ. ಇದರ ಬಾಹ್ಯ ಸಾಧನವಾಗಿ ಸೊಂಟ-ಸ್ನಾನವನ್ನು — (ಎಂದರೆ, ಒಂದು ಟಬ್ಬಿನಲ್ಲಿ ತಣ್ಣೀರನ್ನು ತುಂಬಿ ಕಾಲುಗಳು ಹೊರಗಿರುವಂತೆ ಸೊಂಟವನ್ನು ಮಾತ್ರ ಅದರಲ್ಲಿ ಮುಳುಗಿಸಿ) — ಮಾಡಿ. ಇದರಿಂದ ಕಾಮೋದ್ರೇಕವು

ತತ್‌ಕ್ಷಣ ಶಮನವಾಗುವುದು. ನೀವು ಅಶಕ್ತರಾಗಿದ್ದರೆ ಈ ರೀತಿ ಕೆಲವು ನಿಮಿಷ ಮಾತ್ರ ಮಾಡಿ, ಏಕೆಂದರೆ ಶೀತವುಂಟಾಗುವ ಭಯವಿದೆ.

೭. ಮುಂಜಾನೆ ಮತ್ತು ರಾತ್ರಿ ಮಲಗುವುದಕ್ಕೆ ಮುಂಚೆ ಬಯಲಿನಲ್ಲಿ ವೇಗವಾಗಿ ನಡಿಗೆ ವ್ಯಾಯಾಮವನ್ನು ತೆಗೆದುಕೊಳ್ಳಿ.

೮. 'ಜಾಗ್ರತೆ ಮಲಗಿ, ಜಾಗ್ರತೆ ಏಳುವುದು, ಮನುಷ್ಯನನ್ನು ಆರೋಗ್ಯವಂತನನ್ನಾಗಿಯೂ, ಭಾಗ್ಯವಂತನನ್ನಾಗಿಯೂ, ಬುದ್ಧಿವಂತನನ್ನಾಗಿಯೂ ಮಾಡುತ್ತದೆ' ಎಂಬುದು ವಿವೇಕದ ನುಡಿ. ರಾತ್ರಿ ೯ ಘಂಟೆಗೆ ಮಲಗಿ, ಬೆಳಗಿನ ಝಾವ ೪ ಘಂಟೆಗೆ ಏಳುವುದು ಒಳ್ಳೆಯ ನಿಯಮ. ಮಲಗುವಾಗ ಹೊಟ್ಟೆ ಹಗುರವಾಗಿರಬೇಕು. ಆದುದರಿಂದ ಕೊನೆಯ ಊಟವನ್ನು ಸಂಜೆ ೬ ಘಂಟೆಯ ತರುವಾಯ ಮಾಡಬಾರದು.

೯. ಮಾನವನು ದೇವರ ಪ್ರತಿನಿಧಿಯೆಂದೂ ಜೀವಂತವಾಗಿರುವ ಎಲ್ಲವನ್ನೂ ಸೇವಿಸುವುದರ ಮೂಲಕ ದೇವನ ಘನತೆಯನ್ನೂ ಪ್ರೇಮವನ್ನೂ ವ್ಯಕ್ತಪಡಿಸಬೇಕೆಂಬುದನ್ನೂ ನೆನಪಿಡಿ. ಸೇವೆಯೇ ನಿಮ್ಮ ಏಕಮಾತ್ರ ಆನಂದವಾದರೆ, ಬಾಳಿನ ಬೇರೆ ಯಾವ ಆನಂದದ ಆವಶ್ಯಕತೆಯೂ ನಿಮಗೆ ಕಂಡುಬರದು.

('ಆತ್ಮ ಸಂಯಮವೋ-ಕಾಮೋಪಭೋಗವೋ' ಪುಸ್ತಕದ ಎರಡನೇ ಆವೃತ್ತಿಯ ಮುನ್ನುಡಿಯಿಂದ)

ಸಂತತಿ ನಿಯಮನ

ಸಂತತಿ ನಿಯಮನಕ್ಕಾಗಿ ಕೃತಕ ಸಾಧನಗಳನ್ನು ಉಪಯೋಗಿಸುವ ಪ್ರಶ್ನೆಯನ್ನು ಕುರಿತು ಕೆಲವು ಪತ್ರಲೇಖಕರು ನಾನು ಭಾರತಕ್ಕೆ ಹಿಂದಿರುಗಿ ಬಂದಾಗಿನಿಂದ ನನ್ನಲ್ಲಿ ಪ್ರಸ್ತಾಪ ಮಾಡುತ್ತಿದಾರೆ. ವೈಯಕ್ತಿಕವಾಗಿ ಅವುಗಳಿಗೆ ನಾ ಉತ್ತರವಿತ್ತಿದ್ದರೂ, ಇದುವರೆಗೂ ಈ ವಿಷಯವನ್ನು ಕುರಿತು ನಾ ಬಹಿರಂಗವಾಗಿ ವಿವೇಚನೆ ನಡೆಸಿಲ್ಲ. ಇಲ್ಲಿಗೆ ಮುವತ್ತೈದು ವರುಷಗಳ ಹಿಂದೆ ನಾ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಈ ವಿಷಯದ ಕಡೆ ನನ್ನ ಗಮನ ಹರಿಯಿತು. ಆಗ, ನೈಸರ್ಗಿಕ ವಿಧಾನವಲ್ಲದೆ ಬೇರೆ

ಯಾವುದನ್ನೂ ಸಹಿಸದಿದ್ದ ಪರಿಶುದ್ಧತಾವಾದಿಯೊಬ್ಬನಿಗೂ ಕೃತಕ ವಿಧಾನಗಳನ್ನು ಪ್ರತಿಪಾದಿಸುತ್ತಿದ್ದ ಒಬ್ಬ ವೈದ್ಯನಿಗೂ ಮಧ್ಯೆ ತೀವ್ರ ಚರ್ಚೆ ನಡೆಯುತ್ತಿತ್ತು. ನನ್ನ ಬಾಳಿನ ಅಷ್ಟು ಹಿಂದಿನ ಕಾಲದಲ್ಲಿಯೇ ಸ್ವಲ್ಪ ಕಾಲದವರೆಗೆ ಕೃತ್ರಿಮ ಸಾಧನಗಳ ಬಗೆಗೆ ನನ್ನ ಮನವೆಳೆದರೂ ಕೊನೆಗೆ ಅದಕ್ಕೆ ಕಡು ವಿರೋಧಿಯಾದೆ ನಾನು. ಈಗ ಕೆಲವು ಹಿಂದೀ ಪತ್ರಿಕೆಗಳಲ್ಲಿ ಈ ಸಾಧನಗಳು ಮನ ರೋಸಿಹೋಗುವಂಥ ಬಹಿರಂಗ ವಿಧಾನದಲ್ಲಿ ವರ್ಣಿಸಲ್ಪಟ್ಟಿರುವುದನ್ನು ನೋಡಿದೇನೆ. ಇದು ಎಂಥವರ ಸಭ್ಯತನವನ್ನೂ ತಲ್ಲಣಿಸುವಂತೆ ಮಾಡಿದೆ. ಸಂತತಿ ನಿಯಮನಕ್ಕೋಸ್ಕರ ಕೃತಕ ವಿಧಾನಗಳನ್ನು ಬಳಸುವುದಕ್ಕೆ ಪ್ರೋತ್ಸಾಹವೀಯುವವರ ಪೈಕಿ ನನ್ನ ಹೆಸರನ್ನೂ ಉದಹರಿಸಲು ಒಬ್ಬ ಲೇಖಕ ಹಿಂಜರಿಯದಿರುವುದನ್ನೂ ನೋಡಿದೇನೆ. ಈ ಸಾಧನಗಳ ಬಗೆಗೆ ಕುರಿತು ನಾ ಮಾತನಾಡಿದ ಅಥವಾ ಬರೆದ ಒಂದು ಸಂದರ್ಭವನ್ನೂ ನನ್ನ ನೆನಪಿಗೆ ತಂದುಕೊಳ್ಳಲಾರೆ.

ಸಂತತಿ ನಿಯಮನದ ಆವಶ್ಯಕತೆಯ ವಿಷಯವಾಗಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆದರೆ, ಯುಗಾಂತರಗಳಿಂದ ನಡೆದು ಬಂದಿರುವ ವಿಧಾನವೆಂದರೆ, ಆತ್ಮ ಸಂಯಮ ಅಥವಾ ಬ್ರಹ್ಮಚರ್ಯ, ಅದನ್ನು ಆಚರಿಸುವವರಿಗೆ ಅದೊಂದು ಒಳ್ಳೆಯದನ್ನು ಮಾಡುವ ಎಂದಿಗೂ ತಪ್ಪದ ಪರಮೌಷಧ. ವೈದ್ಯರು ಕೃತಕ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಪ್ರತಿಯಾಗಿ ಆತ್ಮ ಸಂಯಮದ ವಿಧಾನಗಳನ್ನು ಕಂಡುಹಿಡಿಯುವುದಾದರೆ ಅವರು ಮಾನವ ಜನಾಂಗದ ಕೃತಜ್ಞತೆಯನ್ನು ಪಡೆದಾರು. ಸ್ತ್ರೀ ಪುರುಷ ಸಂಯೋಗವು ಇಂದ್ರಿಯಭೋಗಕ್ಕಲ್ಲ, ಸಂತಾನೋತ್ಪತ್ತಿಗಾಗಿ. ಸಂತಾನೋತ್ಪತ್ತಿಯ ಇಚ್ಛೆ ಇಲ್ಲದಿದ್ದರೆ, ಸಂಯೋಗವು ಅಪರಾಧವೆನಿಸೀತು.

ಕೃತಕ ವಿಧಾನಗಳು ದುರಾಚಾರಕ್ಕೆ ಮುಂಗಡ ಸಂಭಾವನೆ ಇತ್ತಂತೆ. ಇದರಿಂದ ಸ್ತ್ರೀ ಪುರುಷರು ನಿರ್ಲಕ್ಷ್ಯಭಾವ ಹೊಂದುತ್ತಾರೆ. ಈ ವಿಧಾನಗಳಿಗೆ ಕೊಡಲ್ಪಡುತ್ತಿರುವ ಮನ್ನಣೆಯಿಂದ ಸಾರ್ವಜನಿಕಾಭಿಪ್ರಾಯದ ರೂಪದಲ್ಲಿರುವ ಸಂಯಮ ಬೇಗ ನಾಶಹೊಂದುವಂತಾಗುತ್ತದೆ. ಕೃತಕ ವಿಧಾನಗಳ ಆಚರಣೆಯಿಂದ ಹುಚ್ಚುತನವೂ ನರಗಳ ಶೈಥಿಲ್ಯವೂ ಉಂಟಾಗುತ್ತದೆ. ವ್ಯಾಧಿಗಿಂತ ಚಿಕಿತ್ಸೆಯೇ ಹೆಚ್ಚು ಕೆಡುಕನ್ನು ತರುತ್ತದೆ. ತಾನು ಎಸಗಿದ ಕರ್ಮಗಳ ಫಲ ತಪ್ಪಿಸಿಕೊಳ್ಳಲೆತ್ನಿಸುವುದು ತಪ್ಪು ಹಾಗೂ

ಅನೀತಿ. ಮಿತಿಮೀರಿ ತಿಂದ ಮನುಷ್ಯನಿಗೆ ಹೊಟ್ಟೆನೋವು, ಮತ್ತು ಉಪವಾಸ ಒಳ್ಳೆಯದನ್ನೇ ಮಾಡುತ್ತವೆ. ಅತಿಯಾಗಿ ಭುಂಜಿಸಿ, ಅದರ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಶಕ್ತಿವರ್ಧಕ ಇತ್ಯಾದಿ ಔಷಧಿಗಳನ್ನು ತೆಗೆದುಕೊಳ್ಳುವುದು ಕೆಡುಕೇ ಸರಿ. ಹಾಗೆಯೇ ಪಾಶವಿಕ ಕಾಮೇಚ್ಛೆಯಲ್ಲಿ ತುಂಬ ಭೋಗಿಸಿ ಅದರ ಪರಿಣಾಮಗಳನ್ನು ತಪ್ಪಿಸಿಕೊಳ್ಳಲೆತ್ನಿಸುವುದು ಇನ್ನೂ ಕೆಡುಕೇ ಸರಿ. ಪ್ರಕೃತಿ ದಯಾಶೂನ್ಯಳು; ಅವಳು ತನ್ನ ನಿಯಮೋಲ್ಲಂಘನ ಮಾಡಿದವರ ಮೇಲೆ ಪೂರ್ಣ ಸೇಡು ತೀರಿಸಿಕೊಳ್ಳುತ್ತಾಳೆ. ನೀತಿಯುತ ಸಂಯಮದಿಂದಲೇ ನೀತಿಯುತ ಪರಿಣಾಮ. ಬೇರೆ ಎಲ್ಲ ಬಗೆಯ ನಿರೋಧದ ವಿಧಾನವೂ ತನ್ನ ಉದ್ದೇಶದ ವಿಫಲ ಹೊಂದುತ್ತದೆ. ಕೃತಕ ಸಾಧನಗಳ ಉಪಯೋಗದ ಹಿಂದಿರುವ ತರ್ಕ, ಕಾಮೋಪಭೋಗವು ಬಾಳಿಗೆ ಆವಶ್ಯಕ ಎಂಬುದು. ಇದಕ್ಕಿಂತ ಹೆಚ್ಚಿನ ತಪ್ಪಭಿಪ್ರಾಯವಿಲ್ಲ. ಯಾರು ಮಿತ ಸಂತಾನ ಅಪೇಕ್ಷಿಸುವರೋ ಅವರು ನಮ್ಮ ಪ್ರಾಚೀನರಿಂದ ಕಂಡುಹಿಡಿಯಲ್ಪಟ್ಟಿರುವ ಯುಕ್ತವಾದ ವಿಧಾನಗಳನ್ನು ಪರಿಶೋಧಿಸಿ, ಅವುಗಳನ್ನು ಆಚರಣೆಗೆ ತರಲು ಯತ್ನಿಸಲಿ. ಬಹು ದೊಡ್ಡ ಪ್ರಮಾಣದ ಪೂರ್ವಭಾವೀ ಕಾರ್ಯ ಅವರ ಮುಂದಿದೆ. ಜನಸಂಖ್ಯೆಯ ಅಧಿಕತೆಗೆ ಬಾಲ್ಯವಿವಾಹ ಒಂದು ಫಲವತ್ತಾದ ಮೂಲ. ಇಂದಿನ ಜೀವನ ವಿಧಾನವೂ ಮಿತಿ ಇಲ್ಲದ ಸಂತಾನೋತ್ಪತ್ತಿಗೆ ಕಾರಣವಾಗಿದೆ. ಆ ಕಾರಣಗಳು ಪರಿಶೋಧಿಸಲ್ಪಟ್ಟು ಆಚರಣೆಗೆ ತರಲ್ಪಟ್ಟರೆ ಸಮಾಜವು ನೈತಿಕೋನ್ನತಿಯನ್ನು ಪಡೆದೀತು. ಸಹನೆಯಿಲ್ಲದ ಉತ್ಸಾಹಿಗಳಿಂದ ಅವು ಗಣನೆಗೆ ತಂದುಕೊಳ್ಳಲ್ಪಡದೆ, ಕೃತಕ ಸಾಧನಗಳು ಸರ್ವಸಾಮಾನ್ಯವಾದರೆ, ನೈತಿಕ ಪತನವಲ್ಲದೆ ಬೇರೆ ಏನೂ ಪರಿಣಾಮವಾಗಲಾರದು.

ಯಾವ ಸಮಾಜ ಆಗಲೇ ಅನೇಕ ಕಾರಣಗಳಿಂದ ಸತ್ವಹೀನವಾಗಿದೆಯೋ ಅದು ಕೃತಕ ಸಾಧನಗಳಿಂದ ಇನ್ನೂ ಸತ್ವಹೀನವಾಗುತ್ತದೆ. ಆದುದರಿಂದ ಯಾರು ಕೃತ್ರಿಮ ಸಾಧನಗಳನ್ನು ತಾತ್ಸಾರ ಬುದ್ಧಿಯಿಂದ ಪ್ರತಿಪಾದಿಸುವರೋ ಅವರು ಈ ವಿಷಯವನ್ನು ಹೊಸದಾಗಿ ವ್ಯಾಸಂಗ ಮಾಡದೆ ವಿಧಿಯಿಲ್ಲ; ಹಾಗೂ ತಮ್ಮ ಅಪಾಯಕರ ಚಟುವಟಿಕೆಯನ್ನು ನಿಲ್ಲಿಸಿ, ವಿವಾಹಿತರಲ್ಲಿಯೂ ಅವಿವಾಹಿತರಲ್ಲಿಯೂ ಬ್ರಹ್ಮಚರ್ಯವನ್ನು

ಜನಪ್ರಿಯಗೊಳಿಸಬೇಕು. ಇದೊಂದೇ ನೇರವೂ ಘನವೂ ಆದ ಸಂತತಿ ನಿಯಮನದ ಮಾರ್ಗ. (ಯಂಗ್ ಇಂಡಿಯಾ : ೧೨-೩-೨೫)

ಕೆಲವು ವಾದಗಳ ಪರಿಶೀಲನೆ

ನಿರೀಕ್ಷಿಸಲಾದಂತೆ, ಸಂತತಿ ನಿಯಮನದ ಮೇಲಿನ ನನ್ನ ಲೇಖನ ಕೃತ್ರಿಮ ಸಾಧನಗಳ ಪರವಾಗಿ ತೀವ್ರ ವತ್ರವ್ಯವಹಾರಕ್ಕೆಡೆಕೊಟ್ಟಿದೆ. ಮೂರು ಮಾದರಿ ಪತ್ರಗಳನ್ನು ನಾ ಆರಿಸಿಕೊಂಡಿದೇನೆ. ನಾಲ್ಕನೆಯ ಪತ್ರವೊಂದು ಮತಧರ್ಮಶಾಸ್ತ್ರಕ್ಕೆ ಸಂಬಂಧಪಡುವುದರಿಂದ ಅದನ್ನು ಬಿಟ್ಟಿದೇನೆ. ಮೂರು ಪತ್ರಗಳ ಪೈಕಿ ಒಂದು ಪತ್ರ ಹೀಗಿದೆ :

"ಸಂತತಿ ನಿಯಮನದ ಮೇಲೆ ನೀವು ಬರೆದ ಲೇಖನವನ್ನು ನಾನು ತುಂಬ ಆಸಕ್ತಿಯಿಂದ ಓದಿದೇನೆ. ಈ ವಿಷಯವು, ಈಗ, ಅನೇಕ ವಿದ್ಯಾವಂತರ ಗಮನವನ್ನು ಸೆಳೆದಿದೆ. ಕಳೆದ ವರುಷ ನಾವು ದೀರ್ಘವೂ, ತೀವ್ರವೂ ಆದ ಚರ್ಚೆಗಳನ್ನು ನಡೆಸಿದೆವು. ಅವು ಇಷ್ಟು ಮಾತ್ರವನ್ನಾದರೂ ಸ್ಥಿರಪಡಿಸಿವೆ; ಯುವಕರಿಗೆ ಈ ಸಮಸ್ಯೆಯಲ್ಲಿ ಆಸಕ್ತಿ ಇದೆ; ಇದರ ವಿಷಯದಲ್ಲಿ ತುಂಬ ಲಜ್ಜೆಯೂ, ದುರಭಿಪ್ರಾಯವೂ ಇದೆ; ಸ್ವತಂತ್ರವಾಗಿಯೂ, ಬಿಚ್ಚು ಮನಸ್ಸಿನಿಂದಲೂ ನಡೆಸಿದ ಚರ್ಚೆಯಿಂದ 'ಶಿಷ್ಟತೆಗೆ' ಕುಂದು ಬರದು. ನಿಮ್ಮ ಲೇಖನ ನನ್ನನ್ನು ಪುನಃಚಿಂತನ ಮಾಡುವಂತೆ ಮಾಡಿದೆ. ತಾವು ಇನ್ನಷ್ಟು ಬೆಳಕನ್ನು ಚೆಲ್ಲಿ, ನನ್ನ ಮನಸ್ಸಿನಲ್ಲಿ ಎದ್ದಿರುವ ಅನುಮಾನಚ್ಛೇದ ಮಾಡಬೇಕಾಗಿ ಬೇಡುತ್ತೇನೆ.

"ಸಂತತಿ ನಿಯಮನದ ಆವಶ್ಯಕತೆಯ ವಿಷಯವಾಗಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಹಾಗೆಯೇ, ಬ್ರಹ್ಮಚರ್ಯವನ್ನು ಆಚರಿಸುವವರಿಗೆ ಅದೊಂದು ಒಳ್ಳೆಯದನ್ನು ಮಾಡುವ ಎಂದಿಗೂ ತಪ್ಪದ ಪರಮೌಷಧವೆಂದೂ ಒಪ್ಪಿಕೊಳ್ಳುತ್ತೇನೆ." ಆದರೆ, ಸಮಸ್ಯೆ, 'ಆತ್ಮ ಸಂಯಮ'ಕ್ಕಿಂತಲೂ 'ಸಂತತಿ ನಿಯಮನ'ದ್ದಲ್ಲವೆ, ಎಂಬ ಪ್ರಶ್ನೆ ಕೇಳುತ್ತೇನೆ. ಹಾಗಾದರೆ, ಸಾಮಾನ್ಯ ಮನುಷ್ಯರಿಗೆ ಆತ್ಮ

ಸಂಯಮವು ಸುಲಭವಾಗಿ ಸಂತತಿ ನಿಯಮನ ಮಾಡಲು ಸಾಧ್ಯವೆ, ಎಂಬು ದನ್ನು ನೋಡೋಣ.

"ಈ ಸಮಸ್ಯೆಯನ್ನು ವ್ಯಕ್ತಿ ಮತ್ತು ಸಮಾಜ ಎರಡರ ದೃಷ್ಟಿಯಿಂದಲೂ ಪರಿಶೀಲಿಸಬಹುದೆನಿಸುತ್ತದೆ ನನಗೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಇಂದ್ರಿಯಜನ್ಯ ಕಾಮವನ್ನು ನಿಗ್ರಹಮಾಡಿ, ಆತ್ಮಶಕ್ತಿಯನ್ನು ಪಡೆಯಬೇಕು. ಎಲ್ಲ ಕಾಲಗಳಲ್ಲಿಯೂ ಅಂಥ ನೈತಿಕ ಶಕ್ತಿಯು ಎಲ್ಲೋ ಕೆಲವು ಮಂದಿ ಇರುತ್ತಾರೆ. ಈ ಆದರ್ಶವನ್ನಲ್ಲದೆ ಬೇರೆ ಯಾವುದನ್ನೂ ಅವರು ಅನುಸರಿಸುವುದಿಲ್ಲ. ಆದರೆ, ಸಂತತಿ ನಿಯಮನದ ಸಮಸ್ಯೆ ಅವರಿಗೆ ಗೋಚರವಾಗುತ್ತದೋ ಹೇಗೋ ನಾನರಿಯೆ. ನಾವು ಎದುರಿಸುತ್ತಿರುವ ಸಮಸ್ಯೆ ಇದು. ಸಂನ್ಯಾಸಿಗೆ ಮೋಕ್ಷವೇ ಗುರಿ ಹೊರತು ಸಂತತಿ ನಿಯಮನವಲ್ಲ.

"ಆದರೆ ಈ ಸಾಧನವು ಬಹುಭಾಗದ ಜನತೆಗೆ ಅತ್ಯಂತ ಮುಖ್ಯವಾಗಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಯನ್ನು ಸಾಕಷ್ಟು ಶೀಘ್ರ ಕಾಲದಲ್ಲಿ ಪರಿಹರಿಸಬಲ್ಲದೆ? ಈಗಲೂ ಪ್ರತಿಯೊಬ್ಬ ವಿಚಾರಪರ ಗೃಹಸ್ಥನಿಂದ ಈ ಸಮಸ್ಯೆಗೆ ಉತ್ತರ ದೊರೆಯಬೇಕಾಗಿದೆ. ಒಬ್ಬಾತ ಎಷ್ಟು ಮಕ್ಕಳಿಗೆ ಊಟ, ಬಟ್ಟೆ, ಶಿಕ್ಷಣ ಇವುಗಳನ್ನು ಒದಗಿಸಿ, ಜೀವನದಲ್ಲಿ ನೆಮ್ಮದಿಯಿಂದ ನೆಲಸುವಂತೆ ಮಾಡಬಲ್ಲನೆಂಬ ಪ್ರಶ್ನೆಗೆ ಉತ್ತರ, ತಡವಾಗಲವಕಾಶವಿಲ್ಲ. ಮಾನವ ಸ್ವಭಾವ, ನಿಮಗೆ ಅರಿವಿರುವಂತೆಯೇ, ಬಹು ಮಂದಿ ಸಂತತಿಯ ಆವಶ್ಯಕತೆ ಮುಗಿದಕೂಡಲೇ ಪೂರ್ಣವಾಗಿ ಲೈಂಗಿಕ ಸುಖದಿಂದ ವಿಮುಖರಾಗುವರೆಂದು ಸಾಮಾನ್ಯವಾಗಿ ನಿರೀಕ್ಷಿಸುವಿರಾ? ಆದರೆ ನಮ್ಮ ಸ್ಮೃತಿಕಾರರು ಸೂಚಿಸಿರುವಂತೆ ವಿಚಾರಯುಕ್ತವಾಗಿಯೂ, ಮಿತವಾಗಿಯೂ ಲೈಂಗಿಕ ಕ್ರಿಯೆ ನಡೆಸಲು ನೀವು ಒಪ್ಪುವಿರೆಂದು ನಾನು ನಂಬುತ್ತೇನೆ. ಬಹು ಮಂದಿ ಅತಿಕಾಮದಲ್ಲಿ ತೊಡಗದಂತೆಯೂ, ಅದನ್ನು ನಿಗ್ರಹಿಸದಂತೆಯೂ, ನಿಯಮನ ಮಾತ್ರ ಮಾಡಲು ಸಲಹೆ ನೀಡಬಹುದು. ಒಂದುವೇಳೆ ಇದು ಸಾಧ್ಯವಿದ್ದರೂ, ಇದು ಜನನವನ್ನು ಪಡೆಯಬಲ್ಲದೆ? ಆಗ, ನಮಗೆ ಉತ್ತಮ ಸಂತಾನ ದೊರೆತರೂ, ಜನ ಕಮ್ಮಿಯಾಗುವುದಿಲ್ಲ. ವಸ್ತುಶಃ ಜನಸಂಖ್ಯೆಯ ಸಮಸ್ಯೆಯು ಇನ್ನೂ ಹೆಚ್ಚು ಉಲ್ಬಣವಾದೀತು, ಏಕೆಂದರೆ, ಉತ್ತಮ ಜನಸಂಖ್ಯೆ ಅಸಮರ್ಥ

ಜನಕ್ಕಿಂತಲೂ ಜಾಗ್ರತೆ ವೃದ್ಧಿಯಾಗುತ್ತದೆ. ಪಶು ತಳಿ ಸಂವರ್ಧನೆಯು ಪಶು ಸಂಖ್ಯೆಯನ್ನು ಉತ್ತಮ ಮತ್ತು ಅಧಿಕಗೊಳಿಸುತ್ತದಲ್ಲದೆ, ಅದನ್ನು ಕಮ್ಮಿ ಮಾಡುವುದಿಲ್ಲ.

"'ಸಂಭೋಗವು ಇಂದ್ರಿಯ ಸುಖಕ್ಕಲ್ಲವೆಂದೂ, ಸಂತಾನೋತ್ಪತ್ತಿಗೆಂದೂ ನಾನು ಒಪ್ಪುತ್ತೇನೆ.' ಸುಖವೊಂದೇ ಪ್ರೇರಕ ಕಾರಣವಲ್ಲದಿದ್ದರೆ, ಅದು ಪ್ರಧಾನವೆಂಬುದನ್ನು ನೀವು ಒಪ್ಪಲೇಬೇಕು. ಪ್ರಕೃತಿ ತನ್ನ ಉದ್ದೇಶವನ್ನು ಪೂರೈಸಿಕೊಳ್ಳಲು ಒಡ್ಡಿದ ಜಾಲವಿದು. ಸುಖದ ಅಂಶ ಇಲ್ಲವಾದಾಗ ಎಷ್ಟು ಜನ ಅದನ್ನು ಪೂರೈಸಿಯಾರು? ಎಷ್ಟು ಮಂದಿ ಸುಖದ ಆಸೆಯಿಂದ ಹೋಗಿ ಸಂತಾನ ಪಡೆಯುತ್ತಾರೆ? ಎಷ್ಟು ಮಂದಿ ಸಂತಾನದ ಆಸೆಯಿಂದ ಹೋಗಿ ಸುಖವನ್ನು ಪಡೆಯುತ್ತಾರೆ? 'ಸಂತಾನ ಪಡೆಯಬೇಕೆಂಬ ಅಪೇಕ್ಷೆ ಇಲ್ಲವಾದಾಗ ಸಂಭೋಗವು ಒಂದು ಅಪರಾಧ'ವೆಂದು ನೀವು ಹೇಳುತ್ತೀರಿ. ನಿಮ್ಮಂಥ ಸನ್ಯಾಸಿಗೆ ಅದು ಸೊಗಸಾಗಿ ಒಪ್ಪುತ್ತದೆ. ಏಕೆಂದರೆ, ತನಗೆ ಆವಶ್ಯಕವಾದುದಕ್ಕಿಂತಲೂ ಹೆಚ್ಚಾಗಿ ಹೊಂದಿರುವವರು 'ಕಳ್ಳರು', 'ದರೋಡೆಗಾರರು' ಎಂದೂ, ಇತರರನ್ನು ಪ್ರೀತಿಸದವರು, ತಮ್ಮನ್ನು ಕಮ್ಮಿ ಪ್ರೀತಿಸಿಕೊಳ್ಳುವರೆಂದು ನೀವೇ ಹೇಳಿಲ್ಲವೆ? ಆದರೆ, ಬಡ, ದುರ್ಬಲ ಮರ್ತ್ಯರ ಮೇಲೆ ಏಕಿಷ್ಟು ಕಠೋರತೆ? ಸಂತಾನದ ಅಪೇಕ್ಷೆ ಇಲ್ಲದೆ ಅವರಿಗೆ ದೊರಕುವ ಸ್ವಲ್ಪ ಸುಖವು ಶರೀರ ಮತ್ತು ಮನಸ್ಸಿನ ಸ್ವಾಭಾವಿಕ ಬದಲಾವಣೆಗಳನ್ನು ತೃಪ್ತಿಗೊಳಿಸಿ, ಸಮಾಧಾನ ತಂದೀತು. ಸಂತಾನದ ಭಯವು, ಕೆಲವು ಸಂದರ್ಭಗಳಲ್ಲಿ ನರಗಳ ವಿಕ್ಷೋಭೆಯನ್ನುಂಟು ಮಾಡಿದರೆ, ಇನ್ನು ಕೆಲವು ಸಂದರ್ಭಗಳಲ್ಲಿ ವಿವಾಹವನ್ನು ತಡಮಾಡಬಹುದು. ಸಾಮಾನ್ಯ ಸಂದರ್ಭಗಳಲ್ಲಿ ಸಂತಾನಾಪೇಕ್ಷೆಯು ವಿವಾಹವಾದ ಕೆಲವು ಕಾಲದಮೇಲೆ ನಿಂತುಹೋಗಬಹುದು. ಅದರ ತರುವಾಯ ಮಾಡುವ ಸಂಭೋಗವು ಅಪರಾಧವೆನಿಸೀತೆ? ಆ 'ಅಪರಾಧ'ವೆಸಗಲು ಅಂಜುವ ಮನುಷ್ಯನು ಚಂಚಲ ಇಂದ್ರಿಯಗಳಿಗೆ ಭದ್ರವಾದ ಬಿರಟೆ ಹಾಕಿ ಅದರ ಮೇಲೆ ಕುಳಿತಿರುವ ಮನುಷ್ಯನಿಗಿಂತ ನೈತಿಕವಾಗಿ ಉತ್ತಮನೆಂದು ನೀವು ಭಾವಿಸುವಿರಾ? ಒಟ್ಟಿನಲ್ಲಿ ಸಂತಾನದ ಅಪೇಕ್ಷೆ ತೀರಿದ ಬಳಿಕ ಸಂಭೋಗ ಮಾಡುವ 'ಅಪರಾಧಿ'ಗಳಿಗಿಂತಲೂ ತಮಗೆ ಆವಶ್ಯಕವಾದುದಕ್ಕಿಂತಲೂ ಹೆಚ್ಚಾಗಿ ಇಟ್ಟುಕೊಂಡಿರುವ 'ಕಳ್ಳರನ್ನು' ನೀವೇಕೆ ಸಹಿಸು

ತ್ತೀರಿ? ಕಳ್ಳರ ಸಂಖ್ಯೆ ಹೆಚ್ಚೆಂದೂ, ಅವರನ್ನು ಸುಧಾರಿಸುವುದು ಹೆಚ್ಚು ಕಷ್ಟವೆಂಬುದೂ ಇದಕ್ಕೆ ಕಾರಣವೆ ?

" ಕೊನೆಯದಾಗಿ, ' ಕೃತಕ ಸಾಧನಗಳು ದುರಾಚಾರಕ್ಕೆ ಮುಂಗಡ ಸಂಭಾವನೆ ಇತ್ತಂತೆ' ಎಂದಿದೀರಿ, ನೀವು: ಅವು ಸ್ತ್ರೀ ಪುರುಷರನ್ನು ನಿರ್ಲಕ್ಷರನ್ನಾಗಿ ಮಾಡುತ್ತವೆ. ಇದು ನಿಜವಾದರೆ, ಪ್ರಬಲವಾದ ಆರೋಪವೇ ಸರಿ. ' ಸಾರ್ವಜನಿಕ ಅಭಿಪ್ರಾಯ'ವೆಂಬುದು ಅತಿ ಲೈಂಗಿಕ ಕ್ರಿಯೆಯನ್ನು ಎಂದಾದರೂ ತಗ್ಗಿಸಲು ಸಾಕಷ್ಟು ಶಕ್ತಿಯುತವಾಗಿದ್ದಿತೆ ಎಂಬ ಪ್ರಶ್ನೆಯನ್ನು ನಾ ಕೇಳುತ್ತೇನೆ. ಅಂಥ ಅಭಿಪ್ರಾಯ ಅಂಜಿಕೆಯಿಂದ ಕುಡುಕರು ಹಿಡಿತಕ್ಕೆ ಬಂದುದನ್ನು ನಾ ಬಲ್ಲೆ. ಆದರೆ, ಇದನ್ನೂ ನಾ ಬಲ್ಲೆ: ' ದೇವರು ಕೇವಲ ಭುಂಜಕರನ್ನೇ ಸೃಷ್ಟಿಸಿಲ್ಲ; ಅನ್ನವನ್ನೂ ಸೃಷ್ಟಿಸಿದಾನೆ; ದೇವರ ಸಂಕಲ್ಪದಂತೆ ಮಕ್ಕಳು ಜನಿಸುತ್ತವೆ,' ಹಾಗೆಯೇ, ತುಂಬ ಸಂತಾನ ಗಂಡುತನದ ಸಾಕ್ಷಿ ಎಂಬ ದುರಭಿಮಾನದ ಮಾತನ್ನೂ ಕೇಳಿದೇನೆ. ಇಂಥ ಅಭಿಪ್ರಾಯಗಳು ಪತ್ನಿಯರ ಮೇಲೆ ಪತಿಗಳಿಗೆ ವಿಶೇಷ ಅಧಿಕಾರವನ್ನು ಕೊಟ್ಟು ಲೈಂಗಿಕ ಭೋಗವೇ ವಿವಾಹಿತ ಜೀವನದ ಪ್ರಧಾನ ಉದ್ದೇಶವೆಂಬಂತೆ ಪರಿಗಣಿಸಲ್ಪಟ್ಟಿರುವ ಸಂದರ್ಭಗಳನ್ನೂ ನಾ ಬಲ್ಲೆ. ' ಕೃತಕ ಸಾಧನಗಳಿಂದ ಹುಚ್ಚುತನವೂ, ನರಗಳ ಶೈಥಿಲ್ಯವೂ ' ಸಂಭವಿಸುತ್ತದೆಂಬುದೂ ಖಚಿತವೆ? ಅನೇಕ ವಿಧಾನಗಳಿವೆ. ಅಪಾಯಕರವಿಲ್ಲದ ವಿಧಾನಗಳನ್ನು ವಿಜ್ಞಾನವು ಕಂಡುಹಿಡಿದಿದೆ, ಅಥವಾ ಜಾಗ್ರತೆ ಕಂಡುಹಿಡಿಯಬಲ್ಲದು ಎಂಬುದನ್ನು ನಾ ನಂಬುತ್ತೇನೆ. ಇದು ಮಾನವನ ಬುದ್ಧಿಗೆ ಮೀರಿದುದಲ್ಲ.

" ಆದರೆ ಯಾವ ಸಂದರ್ಭದಲ್ಲಿಯೂ ಅವುಗಳ ಉಪಯೋಗಕ್ಕೆ ನೀವು ಅನುಮತಿ ನೀಡುವುದಿಲ್ಲವೆಂಬಂತೆ ಕಂಡುಬರುತ್ತದೆ, ಏಕೆಂದರೆ — ' ತನ್ನ ಕರ್ಮಗಳ ಪರಿಣಾಮವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ತಪ್ಪು, ಹಾಗೂ ಅನೀತಿ,' ಎಂದಿದ್ದೀರಿ. ಇದು ಆಕ್ಷೇಪಣೀಯವೇ ಅಲ್ಲ ; ಆದರೆ ಸಂತಾನಾಪೇಕ್ಷೆಯಿಲ್ಲದೆ ಮಿತವಾಗಿ ಕಾಮೇಚ್ಛೆ ತೃಪ್ತಿ ಮಾಡಿಕೊಳ್ಳುವುದು ಅನೀತಿಯೆಂದು ನೀವು ಪರಿಗಣಿಸಿದೀರಿ. ಅಲ್ಲದೆ, ತನ್ನ ಕರ್ಮಗಳ ಪರಿಣಾಮವಾದ ಸಂತಾನೋತ್ಪತ್ತಿಯ ಭಯದಿಂದ ಯಾರಾದರೂ ನಿಗ್ರಹ ಮಾಡಿದ್ದುಂಟೆ ಎಂದು ನಾ ಕೇಳುತ್ತೇನೆ. ಹೇಗಿದ್ದರೂ ಅನೇಕ ಮಂದಿ, ತಮ್ಮ ಆರೋಗ್ಯ

ಮತ್ತು ಸುಖಗಳನ್ನು ನಿರ್ಲಕ್ಷಿಸಿ ಅಳಲಿಕಾಯಿ ಪಂಡಿತರ ಸಲಹೆಯನ್ನು ಕೇಳಲುದ್ಯುಕ್ತರಾದಾರು. ತಮ್ಮ ಕರ್ಮಫಲದ ಪರಿಣಾಮವನ್ನು ತಪ್ಪಿಸಿ ಕೊಳ್ಳಲು ಹೊರಟುದುದರ ಪರಿಣಾಮವಾಗಿ ಎಷ್ಟು ಗರ್ಭಪಾತಗಳಾಗುತ್ತಿಲ್ಲ? ಭಯವೇ ಪ್ರಧಾನವಾಗಿ ನಿಗ್ರಹಕ್ಕೆ ಕಾರಣವಾದರೆ, ನೈತಿಕ ಪರಿಣಾಮ ಬಹಳ ಕಮ್ಮಿಯಾದೀತು. ಇದರ ಜೊತೆಗೆ ತಂದೆತಾಯಿಗಳ ಪಾಪವನ್ನು ಮಕ್ಕಳ ತಲೆಯ ಮೇಲೆ ಹೇರುವುದೂ, ವ್ಯಕ್ತಿಗಳ ಅಜಾಗರೂಕತೆಯಿಂದ ಸಮಾಜಕ್ಕೆ ಅಪಾಯ ತಟ್ಟುವುದೂ ಯಾವ ನ್ಯಾಯ ವಿಧಾನ? 'ಪ್ರಕೃತಿ ಕಠೋರಳು. ತನ್ನ ನಿಯಮ ಭಂಗ ಮಾಡಿದವರ ಮೇಲೆ ಪೂರ್ಣವಾಗಿ ಸೇಡು ತೀರಿಸಿಕೊಳ್ಳುವಳೆಂಬುದು' ನಿಜವೇ ಸರಿ. ಆದರೆ, ಕೃತಕ ಸಾಧನ ಗಳನ್ನುಪಯೋಗಿಸುವುದು ಅಂಥ ನಿಯಮ ಭಂಗಗಳಲ್ಲೊಂದೆಂದು ಪರಿಗಣಿಸ ಲೇಕೆ? ಕೃತಕ ಹಲ್ಲು, ಕಣ್ಣು ಮತ್ತಿತರ ಅವಯವಗಳನ್ನು ಯಾರೂ 'ಅಸ್ವಾಭಾವಿಕ'ವೆಂದು ಕರೆಯುವುದಿಲ್ಲ. ಯಾವುದು ನಮ್ಮ ಅಭ್ಯುದಯ ವನ್ನುಂಟುಮಾಡುವುದಿಲ್ಲವೋ ಅದೊಂದೇ ಅಸ್ವಭಾವಿಕ. ಮನುಜವರ್ಗವು ಸ್ವಭಾವತಃ ಕೆಟ್ಟುದೆಂದೂ, ಈ ಸಾಧನಗಳ ಉಪಯೋಗದಿಂದ ಇನ್ನೂ ಕೆಟ್ಟುದಾಗುತ್ತದೆಂದೂ ನಾನು ನಂಬುವುದಿಲ್ಲ. ಈ ಹೊಸ ಸಾಧನ ಕೆಡುಕಿಗೆ ಕಾರಣವಾಗುತ್ತದೆಂದು ಹೇಳುವಂತೆಯೇ ಇದು ಒಳ್ಳೆಯದಕ್ಕೂ ಕಾರಣ ವಾಗುತ್ತದೆಂದು ವಾದಿಸಬಹುದು. ಆದರೆ ಮಾನವನು ಪ್ರಕೃತಿಯನ್ನು ಗೆದ್ದು ಅಗಾಧ ಶಕ್ತಿ ಗಳಿಸಿಕೊಳ್ಳುತ್ತಿದಾನೆಂದೂ ಅದನ್ನು ನಿರ್ಲಕ್ಷಿಸುವುದು ನಮಗೇ ಅಪಾಯವೆಂದೂ ನಾವು ಒಪ್ಪಿಕೊಳ್ಳಲೇಬೇಕು. ವಿವೇಕವು ಅದನ್ನು ಹತೋಟಿಯಲ್ಲಿಟ್ಟಿರುವುದರಲ್ಲಿದೆಯೇ ಹೊರತು, ಅದನ್ನೇ ದೂರ ಮಾಡುವುದರಲ್ಲಿಲ್ಲ. ಕೆಲವು ಘನತೆ ಹೊಂದಿದ ಕಾರ್ಯಕರ್ತರು ಮಾನವ ರಿಗೆ ಇಂದ್ರಿಯ ನಿಗ್ರಹ ಲಭಿಸಲೆಂದು ಈ ಸಾಧನಗಳನ್ನು ಪ್ರಚುರಪಡಿಸು ತ್ತಿರುವರೇ ಹೊರತು, ಇಂದ್ರಿಯ ಭೋಗಕ್ಕಲ್ಲ.

"ಮಹಿಳೆ ಮತ್ತು ಮಹಿಳೆಯ ಆವಶ್ಯಕತೆಗಳು ಬಹು ದೀರ್ಘ ಕಾಲ ದಿಂದ ನಿರ್ಲಕ್ಷಿಸಲ್ಪಟ್ಟವೆ ಎಂಬುದನ್ನು ಮರೆಯದಿರೋಣ. ಆಕೆ ತನ್ನ ಅಭಿಪ್ರಾಯವನ್ನು ತಿಳಿಸುವ ಇಚ್ಛೆಯುಳ್ಳವಳಾಗಿದಾಳೆ, ಏಕೆಂದರೆ, ಆಕೆ, ಪುರುಷನು ತನ್ನ ಶರೀರವನ್ನು ಸಂತಾನೋತ್ಪತ್ತಿಗೆ ಉಳಿಮೆ ಮಾಡಿದ ಕ್ಷೇತ್ರವನ್ನಾಗಿ ಪರಿಗಣಿಸಲು ನಿರಾಕರಿಸುತ್ತಾಳೆ. ಆಕೆಗೆ ಆಧುನಿಕ ನಾಗರಿ

ಕತೆಯ ಹೊರೆಯು ಅತ್ಯಂತವಾಗಿದ್ದು, ದೊಡ್ಡ ಕುಟುಂಬದ ದುಡಿಮೆ ಮತ್ತು ಆತಂಕಗಳನ್ನು ಸಹಿಸಲಾರದವಳಾಗಿದಾಳೆ. ಡಾ. ಮೇರಿ ಸ್ಟೋಪ್ಸ್ ಆವರಾಗಲೀ ಮಿಸ್. ಎಲ್ಲನ್ ಕೀ, ಇವರುಗಳು ಮಹಿಳೆಯರ 'ನರ-ಶೈಥಿಲ್ಯ'ವನ್ನು ಉಂಟುಮಾಡಲು ಯತ್ನಿಸುತ್ತಿಲ್ಲ. ಅವರು ಸಲಹೆಮಾಡುವ ವಿಧಾನಗಳು ಮಹಿಳೆಯರಿಂದಲೇ ಪ್ರಧಾನವಾಗಿ ಪರಿಣಾಮಕಾರಿಯಾಗುವಂತೆ ಮಾಡಲ್ಪಟ್ಟು, ನಿರ್ಲಕ್ಷ್ಯಭಾವದ ಭೋಗಲಾಲಸೆಯನ್ನು ತ್ಯಜಿಸಿ ವಿವೇಕ ಯುಕ್ತ ತಾಯ್ತನ ಹೊಂದಲು ಸಾಧ್ಯವಾದೀತು. ಯಾವ ರೀತಿಯಲ್ಲಿ ನೋಡಿದರೂ, ಒಂದು ದೊಡ್ಡ ಕೆಡುಕನ್ನು ಸಣ್ಣ ಕೆಡುಕು ತಪ್ಪಿಸಬಹುದಾದ ಅವಕಾಶವಿದ್ದೀತು. 'ನರಶೈಥಿಲ್ಯ' ಸಂಭವಿಸಿದರೂ, ಅದು ಹೆಚ್ಚು ಅಪಾಯಕಾರಿಯಾದ ವ್ಯಾಧಿಗಳನ್ನು ತಪ್ಪಿಸಲು ಸಾಧ್ಯವಾದೀತು. ಮೊಲೆ ಯೂಡಿಸುವ ಕೆಲವು ಸ್ವಾಭಾವಿಕ ಸಂದರ್ಭಗಳಲ್ಲಿ ಸಂಭೋಗವು ಅನಿವಾರ್ಯ ವಾಗಿ, ಅದು ಫಲಿತವಾದರೆ, ಅಪಾಯಕಾರಿಯಾದೀತು. ಇತರ ದೃಷ್ಟಿ ಗಳಿಂದ ಆರೋಗ್ಯವಂತರಾದ ಕೆಲವು ಸ್ತ್ರೀಯರು, ಗರ್ಭಿಣಿಯರಾದರೆ ಅವರ ಪ್ರಾಣಕ್ಕೇ ಸಂಚುಕಾರ ಬಂದೀತು.

"ನೀವು ಸಂತತಿ ನಿಯಮನದ ಪ್ರಚಾರಕರಾಗಬೇಕೆಂಬುದು ನನ್ನ ನಿರೀಕ್ಷೆಯಾಗಲೀ, ಇಚ್ಛೆಯಾಗಲೀ ಅಲ್ಲ. ಸತ್ಯ ಮತ್ತು ಪವಿತ್ರತೆ ಇವು ಗಳ ಬೆಳಕನ್ನು ಉಜ್ವಲಗೊಳಿಸುವುದರಲ್ಲಿ ನೀವು ಅಗ್ರಗಣ್ಯರಾಗಿದೀರಿ; ಇವುಗಳನ್ನು ಅರಸುವ ಮಾನವರ ಮುಂದೆ ಎತ್ತಿ ಹಿಡಿದಿದೀರಿ; ಆದರೆ ವಿವೇಕಿಗಳಾದ ತಂದೆತಾಯಿಗಳು ಇವುಗಳನ್ನು ಅರಸುವರೇ ವಿನಾ ವಿವೇಕ ವಿಲ್ಲದವರಲ್ಲ. ಸಂತತಿ ನಿಯಮನದ ಆವಶ್ಯಕತೆಯನ್ನು ತಿಳಿದವರು ಸುಲಭ ವಾಗಿ ಆತ್ಮಸಂಯಮವನ್ನು ಬೆಳೆಸಿಕೊಳ್ಳಬಹುದು. ಇಂದಿನ ಸ್ವೈರಸ್ಥಿತಿ, ವಿವೇಚನಾ ಶೂನ್ಯತೆ ಮತ್ತು ಅಜ್ಞಾನಗಳ ಅಗಾಧತೆಯನ್ನು ಕಂಡು ನಿಮ್ಮಂಥವರೂ ಅರಣ್ಯರೋದನ ಮಾಡುವಂತಿದೆ. ನಿಮ್ಮ ಸಮರ್ಥನೆ, ಮತ್ತು ಹೆಣಗಾಡುವ ಲೇಖನಕ್ಕಿಂತಲೂ ವಿಚಾರಯುಕ್ತ ಚರ್ಚೆಗೆ ಹೆಚ್ಚು ಆವಶ್ಯಕತೆ ಇದೆ. ನೀವೇ ಅದರಲ್ಲಿ ಭಾಗವಹಿಸದಿದ್ದರೂ, ಆವಶ್ಯಕತೆ ಬಿದ್ದರೆ, ಸಕಾಲದಲ್ಲಿಯೇ ಮಾರ್ಗದರ್ಶನ ಮಾಡಬೇಕು; ಏಕೆಂದರೆ, ಭಂಗ ಮಾಡುವವರೇ ಮುನ್ನಡೆಯಲ್ಲಿದಾರೆ. ವಿಷಯ ಪ್ರವೇಶ ಮಾಡಲು ಹಿಂಜರಿ

ಯುತ್ತಾ, ಅಪಾಯವನ್ನು ಕಂಡೂ, ರೆಪ್ಪೆ ಹೊಡೆಯುತ್ತ ನಿಲ್ಲುವುದು ಏನೂ ಉದ್ದೇಶವನ್ನು ಸಾಧಿಸಿದಂತಾಗಲಾರದು."

ಒಬ್ಬ ಸಂನ್ಯಾಸಿಯಾಗಿ ಸಂನ್ಯಾಸಿಗಳಿಗಾಗಿ ನಾ ಬರೆದಿಲ್ಲವೆಂಬ ಅಂಶವನ್ನು ಮೊದಲೇ ತಿಳಿಸಬಯಸುತ್ತೇನೆ. ಆ ಮಾತಿಗೆ ಪ್ರಚಲಿತವಿರುವ ಅರ್ಥದಲ್ಲಿ ನಾನೊಬ್ಬನೆಂದು ಕರೆದುಕೊಳ್ಳಲಾರೆ. ಹತ್ತಿರ ಹತ್ತಿರ ಇಪ್ಪತ್ತೈದು ವರುಷಗಳ ಸ್ವಂತ ಅನುಭವದಿಂದಲೂ ಮತ್ತು ನನ್ನ ಈ ಪ್ರಯೋಗದಲ್ಲಿ ಸಾಕಾದಷ್ಟು ದೀರ್ಘ ಕಾಲದಿಂದ ನನ್ನೊಂದಿಗೆ ಜೊತೆ ಸೇರಿರುವ ಕೆಲವರ ಅನುಭವ, ಇವುಗಳ ಆಧಾರದ ಮೇಲಿದೆ ನನ್ನ ಅಭಿಪ್ರಾಯಗಳು. ಈ ಪ್ರಯೋಗದಲ್ಲಿ ಯುವಕರೂ ಮತ್ತು ವಯಸ್ಸಾದ ಪುರುಷ-ಸ್ತ್ರೀಯರೂ ಭಾಗಗೊಂಡಿದಾರೆ. ಪ್ರಯೋಗಕ್ಕೆ ಸ್ವಲ್ಪಮಟ್ಟಿನ ವೈಜ್ಞಾನಿಕ 'ಕರಾರುವಾಕತನ' ವನ್ನೂ ನಾ ಹೇಳಿಕೊಳ್ಳಬಲ್ಲೆ. ಇದಕ್ಕೆ ನೈತಿಕ ಆಧಾರವೇ ಪ್ರಧಾನವೆನಿಸಿದರೂ, ಇದು ಸಂತಾನನಿಯಮನದ ಉದ್ದೇಶದಿಂದಲೇ ಆರಂಭವಾಯಿತು. ನನ್ನ ಸ್ವಂತ ವಿಷಯವೂ ಅದೇ ವಿಶಿಷ್ಟ ಉದ್ದೇಶವನ್ನು ಹೊಂದಿದ್ದಿತು. ಇದರ ಪರಿಣಾಮವಾಗಿ, ಪೂರ್ಣ ಸ್ವಾಭಾವಿಕ ರೀತಿಯಲ್ಲಿಯೇ ಅದ್ಭುತ ನೈತಿಕ ಸಾಧನೆಯಾಯಿತು. ವಿವೇಕಯುಕ್ತ ವಿಧಾನದಿಂದ, ಹೆಚ್ಚು ಕಷ್ಟವಿಲ್ಲದೆ ಸಂತತಿ ನಿಯಮನವನ್ನು ಅನುಸರಿಸಲು ಸಾಧ್ಯವಿದೆಯೆಂದು ನಾ ಧೈರ್ಯವಾಗಿ ಹೇಳುತ್ತೇನೆ. ನಿಜವಾಗಿಯೂ, ಈ ಅಭಿಪ್ರಾಯ ನನ್ನೊಬ್ಬನದೇ ಅಲ್ಲ, ಪ್ರಕೃತಿ ಚಿಕಿತ್ಸೆಯನ್ನು ಆಚರಣೆಗೆ ತಂದಿರುವ ಜರ್ಮನಿಯ ಮತ್ತು ಇತರ ದೇಶಗಳವರ ಅಭಿಪ್ರಾಯವೂ ಆಗಿದೆ. ಅವರು ನರಗಳನ್ನು ಸಮಾಧಾನ ಸ್ಥಿತಿಯಲ್ಲಿಡುವುದಕ್ಕೂ ಪಾಶವಿಕ ಕಾಮವನ್ನು ಸುಲಭವಾಗಿ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೂ ಹಾಗೆಯೇ ಏಕಕಾಲದಲ್ಲಿ ಶರೀರ ಶಕ್ತಿಯನ್ನು ವೃದ್ಧಿಮಾಡುವುದಕ್ಕೂ, ಜಲಚಿಕಿತ್ಸೆ, ಮೃತ್ತಿಕಾ ಚಿಕಿತ್ಸೆ, ಉಷ್ಣಾಧಿಕ್ಯ ಮಾಡದ ಫಲಾಹಾರ ಇವುಗಳನ್ನು ಸಲಹೆ ಮಾಡುತ್ತಾರೆ. ಹೀಗೆಯೇ ಶಾಸ್ತ್ರೀಯ ರೀತಿಯಲ್ಲಿ ಪ್ರಾಣಾಯಾಮವನ್ನು ಆಚರಿಸುವ ರಾಜಯೋಗಿಗಳು, ಸಾಧನೆಯ ಮೇಲ್ಮಟ್ಟಕ್ಕೆ ಹೋಗದಿದ್ದರೂ, ಸಾಮಾನ್ಯ ರೀತಿಯಲ್ಲಿಯೇ ಈ ಪರಿಣಾಮಗಳನ್ನು ಸಾಧಿಸಿಕೊಂಡಿರುವುದಾಗಿ ಹೇಳುತ್ತಾರೆ. ಈ ಪಾಶ್ಚಾತ್ಯ ಮತ್ತು ಭಾರತೀಯ ಚಿಕಿತ್ಸಾ ವಿಧಾನಗಳು ಸಂನ್ಯಾಸಿಗಾಗಿ ಹೇಳಲ್ಪಟ್ಟಿಲ್ಲ, ಪ್ರಧಾನವಾಗಿ ಗೃಹಸ್ಥನಿಗೆ. ಅಧಿಕ

ಜನಸಂಖ್ಯೆಯಾಗುತ್ತಿದೆ ಎಂಬ ಕಾರಣದಿಂದ ಸಂತತಿ ನಿಯಮನವು ರಾಷ್ಟ್ರಕ್ಕೆ ಆವಶ್ಯಕವೆಂದು ವಾದಿಸುವುದಾದರೆ ನಾನು ಅದನ್ನು ವಿರೋಧಿಸುತ್ತೇನೆ. ಇದು ಎಂದಿಗೂ ಪ್ರಮಾಣಿಸಲ್ಪಟ್ಟಿಲ್ಲ. ಸರಿಯಾದ ಜಮೀನು ವ್ಯವಸ್ಥೆ, ಉತ್ತಮ ವ್ಯವಸಾಯ, ಮತ್ತು ಉಪಕಸುಬು ಇವುಗಳಿಂದ ಈ ದೇಶವು ಇಂದಿನ ಜನಸಂಖ್ಯೆಯ ಎರಡರಷ್ಟನ್ನು ಸಲಹಬಲ್ಲದೆಂದು ನನ್ನ ಅಭಿಪ್ರಾಯ. ಆದರೆ, ಇಂದಿನ ರಾಜಕೀಯ ಪರಿಸ್ಥಿತಿಯ ಕಾರಣದಿಂದ ಭಾರತದ ಸಂತತಿ ನಿಯಮನವಾದಿಗಳೊಂದಿಗೆ ನಾನು ಸೇರಿದೇನೆ.

ಸಂತಾನೋತ್ಪತ್ತಿಯ ಕಾರ್ಯ ಫಲಿಸಿದ ಮೇಲೆ ಪುರುಷರು ಇಂದ್ರಿಯ ಭೋಗದಲ್ಲಿ ತೊಡಗುವುದನ್ನು ನಿಲ್ಲಿಸಬೇಕೆಂದು ನಾ ಸಲಹೆಮಾಡಿಯೇ ಮಾಡುತ್ತೇನೆ. ಆತ್ಮ ನಿಗ್ರಹದ ಪರಿಹಾರೋಪಾಯವನ್ನು ಜನಪ್ರಿಯ ವಾದುದನ್ನಾಗಿಯೂ, ಪ್ರಭಾವಶಾಲಿಯನ್ನಾಗಿಯೂ ಮಾಡಬಹುದು. ಅದು ವಿದ್ಯಾವಂತರ ವರ್ಗದಲ್ಲಿ ಪ್ರಯೋಗ ಪರೀಕ್ಷೆಯನ್ನು ಎಂದಿಗೂ ಹೊಂದಿಲ್ಲ. ಆ ವರ್ಗವು, ಅವಿಭಕ್ತ ಕುಟುಂಬದ ಕಾರಣದಿಂದ ಇದರ ಒತ್ತಡವನ್ನು ಅನುಭವಿಸಿಲ್ಲ. ಒತ್ತಡವನ್ನು ಹೊಂದಿದವರು ಈ ಪ್ರಶ್ನೆಯಿಂದ ಉದ್ಭ ವಿಸುವ ನೈತಿಕ ಪರಿಣಾಮಗಳನ್ನು ಕುರಿತು ಯೋಚಿಸಿಲ್ಲ. ಬ್ರಹ್ಮಚರ್ಯ ವನ್ನು ಕುರಿತು ಅಲ್ಲೊಂದು ಇಲ್ಲೊಂದು ಮಾಡಿದ ಉಪನ್ಯಾಸವನ್ನು ಬಿಟ್ಟರೆ, ಸಂತಾನವನ್ನು ಮಿತಗೊಳಿಸುವ ಸ್ಪಷ್ಟವಾದ ಉದ್ದೇಶದಿಂದ ಆತ್ಮ ನಿಗ್ರಹ ವನ್ನು ಆಚರಣೆಗೆ ತರಲು ವ್ಯವಸ್ಥಿತವಾದ ಪ್ರಚಾರ ನಡೆಸಿಲ್ಲ. ಇದಕ್ಕೆ ಪ್ರತಿಯಾಗಿ ದೊಡ್ಡ ಸಂಸಾರವು ಶುಭಪ್ರದವೂ ಆದುದರಿಂದ ಅಪೇಕ್ಷಣೀ ಯವೂ ಎಂಬ ಮೂಢನಂಬಿಕೆ ಇನ್ನೂ ರೂಢಬದ್ಧವಾಗಿದೆ. ಕೆಲವು ಸಂದರ್ಭ ಗಳಲ್ಲಿ ಸಂತಾನೋತ್ಪತ್ತಿಯು ಹೇಗೆ ಧಾರ್ಮಿಕ ಕರ್ತವ್ಯವೆನಿಸುತ್ತದೆಯೋ ಹಾಗೆಯೇ ಕೆಲವು ಸಂದರ್ಭಗಳಲ್ಲಿ ಸಂತತಿ ನಿಯಮನವೂ ಒಂದು ಧಾರ್ಮಿಕ ಕರ್ತವ್ಯವೆಂಬುದನ್ನು ಧಾರ್ಮಿಕ ಗುರುಗಳು ಸಾಮಾನ್ಯವಾಗಿ ಬೋಧಿಸು ವುದೇ ಇಲ್ಲ.

ಪಾಶವಿಕ ಕಾಮೇಚ್ಛೆಯಲ್ಲಿ ರತನಾಗುವುದು ಜೀವನದ ಒಂದು ಆವಶ್ಯ ಕತೆ ಎಂದೂ, ಸ್ವಾಭಾವಿಕವಾಗಿಯೇ ಅದು ಅಪೇಕ್ಷಣೀಯವೆಂದೂ ಸಂತತಿ ನಿಯಮನ ವಾದಿಗಳು ಭಾವಿಸುತ್ತಾರೆ. ಮಹಿಳೆಯರಿಗೆ ತೋರಿಸುವ ತವಕವು ಕನಿಕರಯುತವಾದುದು. ಕೃತಕ ಸಾಧನಗಳ ವಿಧಾನದಿಂದ

ಸಂತತಿ ನಿಯಮನ ಮಾಡುವುದು ಮಹಿಳೆಯರಿಗೇ ಅನುಕೂಲವೆನ್ನುವುದಂತೂ ಅವರ ಸ್ತ್ರೀತ್ವಕ್ಕೇ ಅಪಮಾನಕರವೆಂದು ನನ್ನ ಅಭಿಪ್ರಾಯ. ಈಗಿರುವಂತೆಯೇ ಪುರುಷ ತನ್ನ ಭೋಗಲಾಲಸೆಗಾಗಿ ಆಕೆಯನ್ನು ಸಾಕಷ್ಟು ಅಧೋಗತಿಗಿಳಿಸಿದಾನೆ. ಕೃತಕ ಸಾಧನಗಳನ್ನು ಉಪಯೋಗಿಸಲು ಪ್ರತಿಪಾದಿಸುವುದು, ಎಷ್ಟೇ ಒಳ್ಳೆಯ ಅಭಿಪ್ರಾಯದಿಂದ ಕೂಡಿದ್ದರೂ ಅದು ಸ್ತ್ರೀಯನ್ನು ಮತ್ತಷ್ಟು ಅಧೋಗತಿಗೆ ಒಯ್ಯುತ್ತದೆಂದು ನನ್ನ ಅಭಿಪ್ರಾಯ. ಈ ಸಾಧನಗಳ ಉಪಯೋಗವನ್ನು ಪ್ರತಿಪಾದಿಸುವ ಆಧುನಿಕ ಮಹಿಳೆಯರು ಇರುವರೆಂದು ನಾ ಬಲ್ಲೆ. ಆದರೆ, ಅಸಂಖ್ಯ ಮಹಿಳೆಯರು ಅದು ತಮ್ಮ ಘನತೆಗೆ ಸರಿಹೊಂದುವುದಿಲ್ಲವೆಂದು ನಿರಾಕರಿಸುವರೆಂಬುದರಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ. ಪುರುಷನು ನಿಜವಾಗಿಯೂ ಸ್ತ್ರೀಗೆ ಒಳ್ಳೆಯದನ್ನು ಅಪೇಕ್ಷಿಸುವುದಾದರೆ, ಅವನು ತನ್ನ ಮೇಲೆ ನಿಗ್ರಹವನ್ನು ಹಾಕಿಕೊಳ್ಳಲಿ. ಪ್ರಲೋಭನ ಹುಟ್ಟಿಸುವವಳು ಸ್ತ್ರೀಯಲ್ಲ. ವಾಸ್ತವಿಕವಾಗಿ ಪುರುಷನೇ ಮೇಲ್ಬಾಯ್ದು ಹೋಗುವವನಾದುದರಿಂದ ಅವನೇ ನಿಜವಾದ ಅಪರಾಧಿ ಮತ್ತು ಪ್ರಲೋಭನಕಾರ.

ಕೃತಕ ಸಾಧನಗಳನ್ನು ಪ್ರತಿಪಾದಿಸುವವರು ಅದರ ಪರಿಣಾಮಗಳನ್ನು ಪರಿಶೀಲಿಸಬೇಕಾಗಿ ಒತ್ತಾಯಪಡಿಸುತ್ತೇನೆ. ಈ ಸಾಧನಗಳ ಬಹು ಪ್ರಮಾಣದ ಬಳಕೆಯು ವಿವಾಹ ಸಂಬಂಧವನ್ನು ವಿನಾಶಗೊಳಿಸಿ, ಸ್ವೈರ ವೃತ್ತಿಯನ್ನು ಹೆಚ್ಚಿಸುವುದರಲ್ಲಿ ಕೊನೆಗೊಂಡೀತು. ಪುರುಷನು ಕೇವಲ ಭೋಗಕ್ಕಾಗಿಯೇ ಪಾಶವಿಕ ಲೋಲುಪತೆಯಲ್ಲಿ ಮಗ್ನನಾದರೆ, ಅವನು ಬಹಳ ಕಾಲದವರೆಗೆ ತನ್ನ ಗೃಹದಿಂದ ದೂರವಾಗಿರಬೇಕಾದ ಸಂದರ್ಭದಲ್ಲಿಯೂ, ಸೈನಿಕನಾಗಿ ದೀರ್ಘಕಾಲ ಯುದ್ಧದಲ್ಲಿ ತೊಡಗಿದ ಸಂದರ್ಭದಲ್ಲಿಯೂ, ವಿಧುರನಾದ ಸಂದರ್ಭದಲ್ಲಿಯೂ, ಅಥವಾ ಅವನ ಪತ್ನಿ ತುಂಬ ರೋಗಗ್ರಸ್ಥಳಾಗಿದ್ದು ಈ ಕೃತಕ ಸಾಧನಗಳನ್ನು ಉಪಯೋಗಿಸಿದರೂ ಸಂಭೋಗದಿಂದ ಆಕೆಯ ಆರೋಗ್ಯಕ್ಕೆ ಅಪಾಯ ತಟ್ಟುವಂತಿದ್ದರೆ, ಅವನು ಮಾಡುವುದಾದರೂ ಏನು?

ಇನ್ನೊಬ್ಬ ಪತ್ರಕಾರ-ಹೀಗೆ ಬರೆಯುತ್ತಾನೆ :

"ಸಂತತಿ ನಿಯಮನದ ಮೇಲೆ ನೀವು ಈಚೆಗೆ ಬರೆದಿರುವ ಲೇಖನ

ದಲ್ಲಿ ಕೃತಕ ಸಾಧನಗಳನ್ನು ಉಪಯೋಗಿಸುವುದು ಅಪಾಯಕರವೆಂದು ಪ್ರತಿಪಾದಿಸಿ ಪ್ರಶ್ನೆಯನ್ನೇ ಮುಂದೊಡ್ಡಿದೀರೆಂದು ಗೌರವಪೂರ್ವಕವಾಗಿ ನಾ ಸೂಚಿಸಲೆ? ಕಳೆದ ಅಂತರರಾಷ್ಟ್ರೀಯ ಸಂತತಿ ನಿಯಮನ ಸಮ್ಮೇಳನ (ಲಂಡನ್ ೧೯೨೭) ದ ಕೃತಕ ಸಾಧನಗಳ ವಿಭಾಗದಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ವೈದ್ಯರುಗಳ ಪೈಕಿ ೧೬೪ ಮಂದಿ ಪರವಾಗಿಯೂ, ೩ ಮಂದಿ ವಿರೋಧವಾಗಿದ್ದು. ಈ ಕೆಳಗಿನ ನಿರ್ಣಯವು ಅಂಗೀಕೃತವಾಯಿತು. "ಜನೇ ಅಂತರರಾಷ್ಟ್ರೀಯ ಸಂತತಿ ನಿಯಮನದ ಈ ವೈದ್ಯರ ಸಮ್ಮೇಳನವು ಆರೋಗ್ಯಕರವಾದ ಕೃತಕ ಸಾಧನಗಳ ಉಪಯೋಗಕ್ಕೂ ಗರ್ಭಪಾತಕ್ಕೂ ಶಾರೀರಕ ದೃಷ್ಟಿಯಿಂದಲೂ, ಶಾಸನ ಮತ್ತು ನೈತಿಕ ದೃಷ್ಟಿಯಿಂದಲೂ ತುಂಬ ಭಿನ್ನತೆ ಇದೆ ಎಂಬುದನ್ನು ಸೂಚಿಸಬಯಸುತ್ತದೆ. ಅಲ್ಲದೆ, ಶ್ರೇಷ್ಠ ತರದ ಕೃತಕ ಸಾಧನಗಳ ಉಪಯೋಗದಿಂದ ಆರೋಗ್ಯಕ್ಕೆ ಅಪಾಯಕರ ವೆಂಬುದಕ್ಕೂ ಅಥವಾ ಬಂಜೆತನ ಪ್ರಾಪ್ತವಾಗುವುದೆಂಬುದಕ್ಕೂ ಕಾರಣ ವಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ."

"ಅನೇಕ ಮಂದಿ ಪ್ರಖ್ಯಾತರಾದ ವೈದ್ಯರುಗಳ, ಅದರಲ್ಲಿಯೂ ತಮ್ಮ ವೃತ್ತಿಯಲ್ಲಿ ತುಂಬ ಘನತೆ ಹೊಂದಿದ ಕೆಲವರ ಈ ಅಭಿಪ್ರಾಯವನ್ನು ಕೇವಲ ಒಂದು ಮಾತಿನಿಂದ ಪರಿಗಣಿಸಲರ್ಹವಲ್ಲವೆಂಬುದು ಸರಿಯಲ್ಲವೆಂದು ನನಗನಿಸುತ್ತದೆ. ನೀವು, 'ಕೃತಕ ಸಾಧನಗಳು ಹುಚ್ಚುತನವನ್ನೂ ಮತ್ತು ನರಗಳ ಶೈಥಿಲ್ಯವನ್ನೂ ಉಂಟುಮಾಡಿಯೇ ಮಾಡುತ್ತವೆ' ಎನ್ನು ತ್ತೀರಿ. ಏತಕ್ಕೆ 'ಮಾಡಿಯೇ ಮಾಡುತ್ತವೆ'? ಒಂದುವೇಳೆ ಅಪಾಯ ಕರ ಸಾಧನಗಳನ್ನು ಅಜ್ಞಾನದಿಂದ ಉಪಯೋಗಿಸಿದರೆ ಈ ರೀತಿ ಆಗಬಹು ದಾದರೂ ಆಧುನಿಕ ವೈಜ್ಞಾನಿಕ ವಿಧಾನಗಳಿಂದ ಇಂಥ ಪರಿಣಾಮವಾಗುವು ದಿಲ್ಲವೆಂದು ನಾ ಧೈರ್ಯವಾಗಿ ಹೇಳುತ್ತೇನೆ. ಸರಿಯಾದ ವಿಧಾನಗಳನ್ನು ಅವುಗಳನ್ನು ಅಪೇಕ್ಷಿಸುವವರೆಲ್ಲರಿಗೂ, ಎಂದರೆ, ಸಂತಾನೋತ್ಪತ್ತಿ ಮಾಡ ಬಲ್ಲ ಸಾಮರ್ಥ್ಯವುಳ್ಳ ಎಲ್ಲ ಪ್ರಾಪ್ತ ವಯಸ್ಕರಿಗೂ ಕಲಿಸಬೇಕೆಂಬುದಕ್ಕೆ ಇದೇ ಒಂದು ಕಾರಣ ಸಾಕು. ಈ ಸಾಧನಗಳನ್ನು ನೀವು ಕೃತಕ ಸಾಧನ ಗಳೆಂದು ಆಕ್ಷೇಪಿಸಿದರೂ ವೈದ್ಯರು ಸಂತತಿ ನಿಯಮನದ ಉಪಾಯ ಕಂಡು ಹಿಡಿಯಬೇಕೆಂದು ಅಪೇಕ್ಷಿಸುತ್ತೀರಿ. ಹೀಗೆ ಹೇಳುವಾಗ ನಿಮ್ಮ ಅಭಿಪ್ರಾಯ ವೇನೋ ನಾನರಿಯಲಾರೆ. ನೀವು ವೈದ್ಯರೆಂದು ಸೂಚಿಸುವುದರಿಂದ,

ವೈದ್ಯರು ಕಂಡುಹಿಡಿಯುವ ಯಾವ ವಿಧಾನವಾದರೂ 'ಕೃತಕ' ಎನಿಸುವು ದಿಲ್ಲವೆ? 'ಸಂಭೋಗವು ಇಂದ್ರಿಯ ಸುಖಕ್ಕಲ್ಲ, ಸಂತಾನೋತ್ಪತ್ತಿಗೆ ಮಾತ್ರ' ಎನ್ನುತ್ತೀರಿ. ಇದು ಯಾರಿಂದ ನಿಯೋಜಿತ? ದೇವರಿಂದ ತಾನೆ? ಹಾಗಿದ್ದರೆ ಅವನು ಲೈಂಗಿಕ ಭಾವವನ್ನೇಕೆ ಸೃಷ್ಟಿಸಿದ? ನೀವು ಇನ್ನೂ ಹೀಗೆ ಹೇಳುತ್ತೀರಿ! 'ಪ್ರಕೃತಿ ಕಠೋರಳು; ತನ್ನ ನಿಯಮೋ ಲ್ಲಂಘನೆ ಮಾಡಿದವರಮೇಲೆ ಪೂರ್ಣ ಸೇಡನ್ನು ತೀರಿಸಿಕೊಳ್ಳುತ್ತಾಳೆ.' ಆದರೆ, ದೇವರನ್ನು ವ್ಯಕ್ತಿಯೆಂದು ಭಾವಿಸಿದಂತೆ ಪ್ರಕೃತಿಯನ್ನು ಎಂದಿಗೂ ಭಾವಿಸಲಾಗದು. ಅದು ಯಾರಿಗೂ ಆಜ್ಞೆ ಮಾಡದು. ಪ್ರಕೃತಿಯ ನಿಯಮಗಳನ್ನು ಉಲ್ಲಂಘಿಸಲು ಸಾಧ್ಯವೇ ಇಲ್ಲ. ಕರ್ಮಕ್ಕೆ ತಕ್ಕ ಪ್ರತಿಫಲ ಪ್ರಕೃತಿಯಲ್ಲಿ ಅನಿವಾರ್ಯ. ಇದಕ್ಕೆ ಒಳ್ಳೆಯದು, ಕೆಟ್ಟದು ಎಂಬ ಮಾತು ಗಳನ್ನು ನಾವು ಉಪಯೋಗಿಸುತ್ತೇವೆ. ಕೃತಕ ಸಾಧನಗಳನ್ನು ಉಪಯೋ ಗಿಸದವರು ಹೇಗೆ ಪರಿಣಾಮ ಹೊಂದುವುದಿಲ್ಲವೋ ಹಾಗೆಯೇ ಅವುಗಳನ್ನು ಉಪಯೋಗಿಸಿದವರು ಅದರ ಪರಿಣಾಮಗಳನ್ನು ಹೊಂದಲೇಬೇಕು. ಆದುದರಿಂದ ಕೃತಕ ಸಾಧನಗಳು ಅಪಾಯಕರವೆಂಬುದಕ್ಕೆ ತಕ್ಕ ರುಜುವಾತು ಕೊಟ್ಟ ಹೊರತು ನಿಮ್ಮ ಮಾತಿಗೆ ಯಾವ ಅರ್ಥವೂ ಇರದು. ಸರಿಯಾದ ವಿಧಾನಗಳನ್ನು ಉಪಯೋಗಿಸಿದರೆ ಅವು ಅಪಾಯಕರವಲ್ಲವೆಂದು ನನ್ನ ಪರೀಕ್ಷಣದಿಂದಲೂ ಪ್ರಯೋಗದಿಂದಲೂ ದೃಢವಾಗಿ ಹೇಳಬಲ್ಲೆ. ಕ್ರಿಯೆ ನೈತಿಕವೋ ಅನೈತಿಕವೋ ಎಂಬುದನ್ನು ಅದರ ಪರಿಣಾಮದಿಂದ ಹೇಳಬೇಕೇ ವಿನಾ ಮುಂಚೆಯೇ ಆ ರೀತಿ ಭಾವಿಸಿಕೊಂಡುಬಿಡುವುದರಿಂದಲ್ಲ.

"ನೀವು ಸಲಹೆ ಮಾಡಿದ ವಿಧಾನವನ್ನು ಮಾಲ್‌ಥೂಸನೂ ಮಾಡಿದ್ದ. ಆದರೆ, ಅದು ನಿಮ್ಮಂಥ ಕೆಲವು ವ್ಯಕ್ತಿಗಳಿಗೆ ಸಾಧ್ಯವೇ ವಿನಾ ಉಳಿದವರಿಗೆ ಅವ್ಯವಹಾರ್ಯ. ವ್ಯವಹಾರದಲ್ಲಿ ಆಚರಿಸಲು ಸಾಧ್ಯವಿಲ್ಲದಂಥ ವಿಧಾನ ಗಳನ್ನು ಸೂಚಿಸಿ ಫಲವೇನು? ಬ್ರಹ್ಮಚರ್ಯದ ಪ್ರಯೋಜನಗಳನ್ನು ಉತ್ಪ್ರೇಕ್ಷಿಸಿ ಹೇಳಲಾಗಿದೆ. ಆಧುನಿಕ ವೈದ್ಯಶಾಸ್ತ್ರ ಪ್ರವೀಣರು (ಧಾರ್ಮಿಕ ಪೂರ್ವಾಗ್ರಹದಿಂದ ಕೂಡದವರು) ಅದು ೨೨ನೇ ವಯಸ್ಸಿನಿಂದ ಮುಂದಕ್ಕೆ ಖಚಿತವಾಗಿ ಅಪಾಯಕರವೆಂದು ಭಾವಿಸುತ್ತಾರೆ. ಸಂತಾನೋತ್ಪತ್ತಿಗೆ ಹೊರತು ಸಂಭೋಗ ಮಾಡುವುದು ಪಾಪವೆಂದು ಪರಿಗಣಿಸಲು ನಿಮ್ಮ ಧಾರ್ಮಿಕ ಪೂರ್ವಾಗ್ರಹವೇ ಕಾರಣ. ಪರಿಣಾಮವನ್ನು ಯಾಕೂ

ಮುಂಚೆಯೇ ಖಚಿತವಾಗಿ ತಿಳಿಸಲು ಸಾಧ್ಯವಿಲ್ಲದಿರುವಾಗ ನೀವು ಎಲ್ಲರನ್ನೂ ಪೂರ್ಣ ತ್ಯಜಿಸುವುದಕ್ಕೋ ಅಥವಾ ಪಾಪವೆಸಗುವುದಕ್ಕೋ ಗುರಿಪಡಿಸುತ್ತೀರಿ. ಶರೀರ ಶಾಸ್ತ್ರವು ಇದನ್ನು ಬೋಧಿಸುವುದಿಲ್ಲ. ವಿಜ್ಞಾನವನ್ನು ಬದಿಗೆ ತಳ್ಳಿ ಕೇವಲ ತತ್ವ ಪಕ್ಷಪಾತಕ್ಕೆ ಜನತೆಯನ್ನು ಒಪ್ಪಿಸುವ ಕಾಲವೀಗ ಮಿಂಚಿದೆ."

ಈ ಲೇಖಕ ಅತಿ ಪಟ್ಟುಹಿಡಿದ ಭಾವದಿಂದ ಕೂಡಿದಾನೆ. ವಿವಾಹವನ್ನು ಅಂಗೀಕರಿಸಿ, ಅದರ ಪವಿತ್ರತೆಯನ್ನು ರಕ್ಷಿಸಿಕೊಳ್ಳಲು ಆತ್ಮ ನಿಗ್ರಹವೇ ಬಾಳಿನ ನಿಯಮವೆಂದೂ ಲಂಪಟತೆಯಿಲ್ಲವೆಂದೂ ತೋರಿಸುವುದಕ್ಕೆ ನಾನು ಸಾಕಷ್ಟು ನಿದರ್ಶನಗಳನ್ನು ಕೊಟ್ಟದೇನೆ. ನಾನು ಪ್ರಶ್ನೆಯನ್ನೇ ಮುಂದಿಟ್ಟಿಲ್ಲ, ಏಕೆಂದರೆ, ಎಷ್ಟೇ ಯುಕ್ತವಾದರೂ ಕೃತಕ ಸಾಧನಗಳು ಅಪಾಯಕರವೆಂಬ ಅಂಶವನ್ನು ನಾನು ವಾದಿಸುತ್ತೇನೆ. ಅವು ಬಹುಶಃ ಸ್ವಾಭಾವಿಕವಾಗಿಯೇ ಅಪಾಯಕರವಲ್ಲದಿದ್ದರೂ, ಭೋಗಿಸಿದಂತೆ ಆಶೆ ಹೆಚ್ಚುವಂತೆ ಮಾಡುವುದರಿಂದ ಅಪಾಯಕರ. ಇಂದ್ರಿಯ ಭೋಗವು ನ್ಯಾಯಬದ್ಧವಲ್ಲದೆ ಅಪೇಕ್ಷಣೀಯವೆಂದೂ ಅರಿವನ್ನು ಹೊಂದಿದ ಮನಸ್ಸು ಭೋಗದಲ್ಲಿಯೇ ಲೀನವಾಗುವುದಲ್ಲದೆ ಶಕ್ತಿಹೀನವಾಗಿ ಕೊನೆಗೆ ಎಲ್ಲ ಸಂಕಲ್ಪಶಕ್ತಿಯನ್ನೂ ಕಳೆದುಕೊಳ್ಳುತ್ತದೆ. ಪ್ರತಿಸಲ ಮಾಡಿದ ಸಂಭೋಗದಿಂದಲೂ ಪುರುಷನನ್ನೂ ಸ್ತ್ರೀಯನ್ನೂ ದೇಹ, ಮನಸ್ಸು, ಆತ್ಮ, ಇವುಗಳನ್ನು ದಾರ್ಢ್ಯದಿಂದಿಡಲು ಆವಶ್ಯಕವಾದ ಅಮೂಲ್ಯ ವೀರ್ಯ ನಾಶವಾಗುತ್ತದೆಂದು ನನ್ನ ವಾದ. ಈಗ ನಾನು ಆತ್ಮ ಎಂಬ ಶಬ್ದವನ್ನು ಉಪಯೋಗಿಸಿದ್ದರೂ ಅದರ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದ ಪತ್ರಲೇಖಕನೊಂದಿಗೆ ಕೇವಲ ಚರ್ಚೆ ನಡೆಸುವ ದೃಷ್ಟಿಯಿಂದ ಮಾತ್ರ ಅದನ್ನು ಬೇಕೆಂದೇ ಬಿಟ್ಟಿದೇನೆ. ವಿವಾಹದ ಪರಿಣಾಮವಾಗಿ ತುಂಬ ನಿರ್ವೀರ್ಯ ಹೊಂದಿದ ಭಾರತವು ಪುನಃ ವೀರ್ಯವಂತವಾಗಬೇಕಾದರೆ ಕೃತಕ ಸಾಧನಗಳ ಮೂಲಕ ಸಂಭೋಗದ ಬೋಧೆಯಲ್ಲ ಬೇಕಾದುದು, ಪೂರ್ಣ ನಿಗ್ರಹ. ನಮ್ಮ ವೃತ್ತಪತ್ರಿಕೆಗಳನ್ನು ವಿಕಾರಗೊಳಿಸುವ ಅನೀತಿಯುತ ಚಿಕಿತ್ಸೆಯ ಪ್ರಕಟನೆಗಳು ಸಂತತಿ ನಿಯಮನವನ್ನು ಪ್ರತಿಪಾದಿಸುವವರಿಗೆ ಎಚ್ಚರಿಕೆ ನೀಡಲಿ. ಲಜ್ಜೆಯಿಂದಲೋ, ಒಣ ಗಾಂಭೀರ್ಯದಿಂದಲೋ ಕೂಡಿ ಈ ವಿಷಯ ಚರ್ಚಿಸಲು ನಾ ಹಿಂದೆಮುಂದೆ ನೋಡುತ್ತಿಲ್ಲ. ಇದಕ್ಕೆ ಬದಲಾಗಿ, ನಿರ್ವೀರ್ಯ

ರಾಗಿ ಶಿಥಿಲಹೊಂದಿರುವ ಯುವಕರು ಲೋಲುಪತೆಯ ಪರವಾಗಿ ಮಾಡ ಲ್ಪಡುವ ಡಾಂಭಿಕ ವಾದಕ್ಕೆ ಎಲ್ಲಿ ಸುಲಭವಾಗಿ ತುತ್ತಾಗುವರೋ ಎಂಬುದಕ್ಕೆ ಹಿಂದುಮುಂದು ನೋಡುತ್ತೇನೆ.

ಎರಡನೆಯ ಪತ್ರಲೇಖಕ ಉದಹರಿಸಿರುವ ವೈದ್ಯಕೀಯ ಪ್ರಶಸ್ತಿ ಪತ್ರದ ವಿಷಯವಾಗಿ ವಾದಮಾಡುವುದು ನನಗೆ ಆವಶ್ಯಕವಿಲ್ಲ. ನನ್ನ ಪ್ರಸಂಗಕ್ಕೆ ಅದು ಕೇವಲ ಅಸಮಂಜಸವಾದುದು. ಸರಿಯಾದ ಕೃತಕ ಸಾಧನಗಳು ಜನನೇಂದ್ರಿಯಗಳಿಗೆ ಕೆಡುಕನ್ನೊ ಅಥವಾ ನಿರ್ವೀರ್ಯತೆ ಯನ್ನೋ ಉಂಟುಮಾಡುತ್ತವೆಂಬ ವಿಷಯವನ್ನು ನಾನು ಸಾಧಿಸುವುದೂ ಇಲ್ಲ ನಿರಾಕರಿಸುವುದೂ ಇಲ್ಲ. ಎಷ್ಟೇ ಪ್ರತಿಭಾನ್ವಿತ ವೈದ್ಯರೇ ಆಗಲಿ, ನಾ ಕಣ್ಣಾರೆ ಕಂಡಂತೆ ತಮ್ಮ ಪತ್ನಿಯರೊಂದಿಗೇ ಆದರೂ ಅತಿ ಭೋಗ ನಡೆಸಿ ವಿನಾಶ ಹೊಂದಿರುವ ನೂರಾರು ಯುವಕರ ಸಾಕ್ಷ್ಯವನ್ನು ನಿರಾಕರಿಸಲಾರರು.

ಮೊದಲನೆಯ ಪತ್ರಲೇಖಕ ಕೃತಕ ಹಲ್ಲುಗಳ ಸಾಮ್ಯತಿಯನ್ನು ಕೊಟ್ಟಿರುವುದು ಅಸಮಂಜಸವೆಂದು ನನಗೆ ಗೋಚರಿಸುತ್ತದೆ. ಕೃತಕ ಹಲ್ಲುಗಳು ನಿಜವಾಗಿಯೂ ಕೃತಕ ಮತ್ತು ಅಸ್ವಾಭಾವಿಕ. ಆದರೂ, ಅವು ಒಂದು ಆವಶ್ಯಕ ಉದ್ದೇಶವನ್ನು ಈಡೇರಿಸಬಹುದು. ಕೃತಕ ಸಾಧನಗಳು, ಹಸಿವನ್ನು ಹಿಂಗಿಸಿಕೊಳ್ಳುವುದಕ್ಕೆ ಬದಲಾಗಿ ನಾಲಗೆಯ ರುಚಿಯನ್ನು ತೀರಿಸಿಕೊಳ್ಳುವುದಕ್ಕೆ ಮಾತ್ರ ಉಪಯೋಗಿಸುವ ಮದ್ದಿನಂತೆ ಎನ್ನಬಹುದು. ಜಿಹ್ವಾ ಚಾಪಲ್ಯಕ್ಕಾಗಿಯೇ ತಿನ್ನುವುದು, ಪಾಶವಿಕ ಕಾಮೇಚ್ಛೆಗಾಗಿಯೇ ಆದರಲ್ಲಿ ಲಂಪಟನಾಗುವಂತೆ ಪಾಪಕರವಾದುದು.

ಕೊನೆಯ ಪತ್ರವು ಅದು ಕೊಡುವ ದೃಷ್ಟಿಯಿಂದ ಸ್ವಾರಸ್ಯವಾಗಿದೆ : " ಈ ಪ್ರಶ್ನೆ ಪ್ರಪಂಚದ ಸರಕಾರಗಳಿಗೆ ಕ್ಲೇಶ ನೀಡುತ್ತಿದೆ. ಸಂತತಿ ನಿಯ ಮನದಮೇಲೆ ನೀವು ಬರೆದ ಲೇಖನವನ್ನು ನಾನು ಪ್ರಸ್ತಾಪಿಸುತ್ತಿದೇನೆ. ಅಮೇರಿಕದ ಸರಕಾರವು ಸಂತತಿ ನಿಯಮನದ ಪ್ರಚಾರಕ್ಕೆ ಪೂರ್ಣವಾಗಿ ನಿರ್ಲಕ್ಷ್ಯಭಾವದಿಂದಿರುವುದು ನಿಮಗೆ ನಿಸ್ಸಂಶಯವಾಗಿ ತಿಳಿದಿದೆ. ಜರ್ಮ ಚಕ್ರಾಧಿಪತ್ಯವು ಇದಕ್ಕೆ ಕೊಟ್ಟಿರುವ ಸ್ವಾತಂತ್ರ್ಯ ಅನುಮತಿಯ ಬಗೆಗೂ

ನೀವು ನಿಸ್ಸಂಶಯವಾಗಿ ಕೇಳಿರುತ್ತೀರಿ. ಒಂದು ದೇಶವು ಸಂತತಿ ನಿಯಮನವನ್ನೇ – ಕೃತಕವೋ ಸ್ವಾಭಾವಿಕವೋ ಯಾವ ವಿಧದಲ್ಲೇ ಆಗಲಿ – ಪೂರ್ಣವಾಗಿ ವರ್ಜಿಸಿದೆ. ಇದಕ್ಕೆ ಕಾರಣ ಎಲ್ಲರಿಗೂ ಗೊತ್ತು. ಇನ್ನೊಂದು ದೇಶವು ಸಾರ್ವತ್ರಿಕವಾಗಿ ಎಲ್ಲರಿಗೂ ತಿಳಿದಿರುವ ಕಾರಣಗಳಿಂದಲೇ ಅದರ ಪ್ರಚಾರದ ಹೊಣೆ ಹೊತ್ತಿದೆ. ಮೊದಲನೆಯದರಲ್ಲಿ ಮೆಚ್ಚಬಹುದಾದ ಯಾವ ಅಂಶವೂ ಇಲ್ಲವೆನಿಸುತ್ತದೆ ಎನಗೆ. ಎರಡನೆಯದರಲ್ಲಿ ಹೇಯವೆನ್ನಬಹುದಾದುದೇನಾದರೂ ಇದೆಯೆ? ಜಪಾನಿನ ಸರಕಾರವು ಸಮಸ್ಯೆಯನ್ನು ನೇರವಾಗಿ ಎದುರಿಸುತ್ತಿರುವುದಕ್ಕಾದರೂ ಶ್ಲಾಘಿಸಲ್ಪಡಬೇಕೆಂದು ನಿಮಗೆ ಅನಿಸುವುದಿಲ್ಲವೆ? ಸಂತಾನೋತ್ಪತ್ತಿ ನಿಲ್ಲಬೇಕು. ಮಾನವ ಸ್ವಭಾವದ ಇತಿಮಿತಿ ಅರ್ಥವಾಗಬೇಕು. ಈ ದೃಷ್ಟಿಯಿಂದ ಪಾಶ್ಚಾತ್ಯ ದೇಶಗಳಲ್ಲಿ ಇಂದು ಆಚರಿಸಲ್ಪಡುತ್ತಿರುವ ಸಂತತಿ ನಿಯಮನ ವಿಧಾನವೊಂದೇ ಜನತೆಗೆ ಮಾರ್ಗವಲ್ಲವೆ? ನೀವು 'ಎಂದಿಗೂ ಅಲ್ಲ' ಎನ್ನುವಿರಿ. ಆದರೆ ನೀವು ಸಲಹೆ ಮಾಡುವ ವಿಧಾನವು ವ್ಯಾವಹಾರಿಕವೆ, ಎಂದು ನಾ ಪ್ರಶ್ನಿಸಬಹುದೆ? ಅದು ಆದರ್ಶವಿರಬಹುದು, ಆದರೆ ವ್ಯಾವಹಾರಿಕವೆ? ಮಾನವ ಕುಲ, ಇಂದ್ರಿಯ ಸುಖವನ್ನು ಬಹಳಮಟ್ಟಿಗೆ ಬಿಟ್ಟೀತೆಂದು ನಿರೀಕ್ಷಿಸಲಾದೀತೆ? ಆತ್ಮ ಸಂಯಮ ಅಥವಾ ಬ್ರಹ್ಮಚರ್ಯವನ್ನು ಆಚರಿಸುವ ಜ್ವಲಂತ ನಿದರ್ಶನಗಳು ಬಹಳ ಕಮ್ಮಿ ದೊರೆತಾವು. ಈ ವಿಧಾನವು ಸಾರ್ವತ್ರಿಕ ಚಳುವಳಿಯ ಸ್ವರೂಪ ತಾಳುವುದೆಂದು ನಿರೀಕ್ಷಿಸಬಹುದೆ? ಭಾರತದ ಇಂದಿನ ಪರಿಸ್ಥಿತಿಯಲ್ಲಿ ಸಾರ್ವತ್ರಿಕ ಚಳುವಳಿಯಲ್ಲದೆ ಬೇರೆ ಏನೂ ಪ್ರಯೋಜನವಿಲ್ಲವೆನ್ನಬಹುದು."

ಅಮೇರಿಕಾ ಮತ್ತು ಜಪಾನ್ ದೇಶಗಳ ವಿಷಯವಾಗಿ ನನ್ನ ಅವಜ್ಞತೆಯನ್ನು ಒಪ್ಪಿಕೊಳ್ಳಬೇಕು. ಜಪಾನ್ ದೇಶ ಏತಕ್ಕೋಸ್ಕರ ಸಂತತಿ ನಿಯಮನವನ್ನು ಪ್ರತಿಪಾದಿಸುತ್ತಿದೆಯೋ ನಾನರಿಯೆ. ಪತ್ರ ಲೇಖಕ ಹೇಳಿರುವ ವಿಷಯಗಳು ನಿಜವಾಗಿದ್ದು, ಕೃತಕ ಸಾಧನಗಳ ಮೂಲಕ ಸಂತತಿ ನಿಯಮನವು ಜಪಾನಿನಲ್ಲಿ ಸಾರ್ವತ್ರಿಕ ಪ್ರಚಾರದಲ್ಲಿದ್ದರೆ, ಆ ಸೊಗಸಾದ ಜನಾಂಗವು ನೈತಿಕ ವಿನಾಶದೆಡೆಗೆ ಓಡುತ್ತಿದೆ ಎಂದು ಧೈರ್ಯವಾಗಿ ಹೇಳಬಯಸುತ್ತೇನೆ.

ನಾನು ಪೂರ್ಣವಾಗಿ ತಪ್ಪಿರಬಹುದು. ನನ್ನ ತೀರ್ಮಾನಗಳು ಸುಳ್ಳು ಅಂಶಗಳಮೇಲೆ ಆಧಾರಪಟ್ಟಿರಬಹುದು. ಆದರೆ ಕೃತಕ ಸಾಧನಗಳ ಪ್ರತಿಪಾದಕರು ತಾಳ್ಮೆಯಿಂದಿರಬೇಕು. ಆಧುನಿಕ ನಿದರ್ಶನಗಳಲ್ಲದೆ ಅವರಿಗೆ ಬೇರೆ ಅಂಗೀಕೃತ ಅಂಶಗಳಿಲ್ಲ. ಪ್ರತ್ಯಕ್ಷವಾಗಿಯೇ ಮಾನವನ ನೈತಿಕ ಭಾವನೆಗೆ ವಿರೋದವಾಗಿ ಎದ್ದು ಕಾಣುವ ನಿಗ್ರಹ ವಿಧಾನವೊಂದರ ಬಗೆಗೆ ಈಗಲೇ ಖಚಿತವಾಗಿ ಭವಿಷ್ಯ ನುಡಿಯುವುದು ನಿಜವಾಗಿಯೂ ಅತಿ ಶೀಘ್ರವೆನಿಸುತ್ತದೆ. ಯೌವನಭರಿತ ಸ್ವಭಾವದೊಂದಿಗೆ ಚೆಲ್ಲಾಟವಾಡುವುದು ಸುಲಭ. ಅಂಥ ಚೆಲ್ಲಾಟದಿಂದಾಗುವ ಕೆಡುಕನ್ನು ತೊಡೆದುಹಾಕುವುದು ಬಹಳ ಕಷ್ಟವೇ ಸರಿ. (ಯಂಗ್ ಇಂಡಿಯಾ : ೨-೪-೨೫)

ಈ ಜಗತ್ತಿನ ಇರುವಿಕೆಯೇ ಜನನಕ್ರಿಯೆಯನ್ನವಲಂಬಿಸಿದೆ. ಇದು ಭಗವಂತನ ಕ್ರೀಡಾರಂಗವೂ ಅವನ ಮಹಿಮೆಯ ಪ್ರತಿಬಿಂಬವೂ ಆಗಿರುವುದರಿಂದ ಇದರ ವ್ಯವಸ್ಥಿತ ಬೆಳವಣಿಗೆಗಾಗಿ ಜನನಕ್ರಿಯೆಯು ಹಿಡಿತದಲ್ಲಿರಬೇಕು. (ಹರಿಜನ: ೭-೯-೩೫)

ಮಾನವ, ನಿಸ್ಸಂಶಯವಾಗಿ, ಒಬ್ಬ ಕಲೆಗಾರನೂ ಸೃಷ್ಟಿಕರ್ತನೂ ಆಗಿದಾನೆ. ಅವನು ನಿಸ್ಸಂಶಯವಾಗಿ ಸೌಂದರ್ಯವನ್ನೂ ಹಾಗೆಯೇ ವರ್ಣವನ್ನೂ ಹೊಂದಿರಲೇಬೇಕು. ಅವನ ಕಲಾತ್ಮಕ ಮತ್ತು ಸೃಷ್ಟ್ಯಾತ್ಮಕ ಸ್ವಭಾವವು, ತನ್ನ ಔನ್ನತ್ಯದಲ್ಲಿ, ಅವನಿಗೆ ವಿವೇಚನೆ ಮೂಡುವುದನ್ನೂ ಮತ್ತು ಹೇಗೆಹೇಗೋ ಆಗುವ ವರ್ಣ ಮಿಶ್ರಣ ಸೌಂದರ್ಯವಲ್ಲವೆಂಬುದನ್ನು ಅರಿಯುವುದನ್ನೂ, ಪ್ರತಿಯೊಂದು ಇಂದ್ರಿಯೋಪಭೋಗವೂ ತಾನಾಗಿಯೇ ಒಳ್ಳೆಯದಲ್ಲವೆಂಬುದನ್ನು ಅರಿಯುವುದನ್ನೂ ಕಲಿಸಿದೆ. ಕಲೆಯನ್ನು ಅರಿಯುವ ಅವನ ಕಣ್ಣು ಉಪಯುಕ್ತತೆಯಲ್ಲಿ ಭೋಗವನ್ನು ಕಾಣಲು ಮಾನವನಿಗೆ ಕಲಿಸಿದೆ. ಹೀಗೆ ಅವನು ತನ್ನ ವಿಕಾಸದ ಪ್ರಾರಂಭದೆಸೆಯಲ್ಲಿಯೇ, ನಮ್ಮಲ್ಲನೇಕರು ಇಂದಿಗೂ ಮಾಡುವಂತೆ ಜಿಹ್ವಾಚಾಪಲ್ಯಕ್ಕಾಗಿಯೇ ತಿನ್ನಬಾರದೆಂದೂ ಜೀವಿಸುವುದಕ್ಕೆ ಮಾತ್ರ ತಿನ್ನಬೇಕೆಂಬುದನ್ನೂ ಅರಿತನು. ಇನ್ನೂ ಮುಂದಿನ ಹಂತದಲ್ಲಿ ಕೇವಲ ತನ್ನ ಬದುಕಿನಲ್ಲಿಯೇ ಸೌಂದರ್ಯವಾಗಲೀ ಸುಖವಾಗಲೀ ಇಲ್ಲವೆಂದೂ ಆ ಬದುಕು ತನ್ನಂತೆಯೇ

ಸೃಷ್ಟಿಯಾಗಿರುವ ಇತರರ ಸೇವೆಗಾಗಿ ಆಗಬೇಕೆಂದೂ ಅದರ ಮೂಲಕ ಸೃಷ್ಟಿಕರ್ತನ ಸೇವೆಯಾಗಬೇಕೆಂದೂ ಅವನು ಅರಿತನು. ಹೀಗೆಯೇ ಇಂದ್ರಿಯ ಭೋಗದ ಸುಖವನ್ನು ಕುರಿತು ಚಿಂತಿಸಿದಾಗ, ಇತರ ಅಂಗಗಳಂತೆಯೇ ಈ ಜನನೇಂದ್ರಿಯವೂ ಉಪಯೋಗಕ್ಕೂ ದುರುಪಯೋಗಕ್ಕೂ ಗುರಿಯಾಗುವುದೆಂದು ಅರಿತನು. ಅದರ ನಿಜಕ್ರಿಯೆ, ಅದರ ಸರಿಯಾದ ಉಪಯೋಗ, ಕೇವಲ ಸಂತಾನೋತ್ಪತ್ತಿಗೆ ಮಾತ್ರ ನಿಬಂಧಿತವೆಂದೂ, ಇದನ್ನುಳಿದ ಯಾವ ಬಗೆಯ ಉಪಯೋಗವೂ ವಿಕಾರವೆಂದೂ ಅದರಿಂದ ವ್ಯಕ್ತಿಗೂ ಜನಾಂಗಕ್ಕೂ ಪ್ರಮಾದಕರ ಪರಿಣಾಮವಾಗುವುದೆಂದೂ ಅರಿತನು.

(ಯಂಗ್ ಇಂಡಿಯಾ : ೨೭-೯-೨೮)

ಜನನೇಂದ್ರಿಯದ ಕಾರ್ಯವು ಸಂತಾನೋತ್ಪತ್ತಿಯ ಘನ ಕಾರ್ಯಕ್ಕೆ ಮಾತ್ರವೆಂಬ ಭಾವನೆ ಒಮ್ಮೆ ಸ್ತ್ರೀ ಪುರುಷರ ಮನಸ್ಸಿಗೆ ಬರುವುದೇ ತಡ, ಬೇರೆ ಉದ್ದೇಶಕ್ಕಾಗಿ ಸಂಭೋಗ ಮಾಡುವುದು ವೀರ್ಯನಷ್ಟ ಮಾಡುವ ಅಪರಾಧವೆಂದೂ ಇದರ ಪರಿಣಾಮವಾಗಿ ಸ್ತ್ರೀ ಪುರುಷರಿಗೆ ಉಂಟಾಗುವ ರಾಗೋದ್ರೇಕವು ಶಕ್ತಿ ನಷ್ಟದ ಅಪರಾಧವೆಂದೂ ಪರಿಗಣಿಸಲ್ಪಡುವುದು.

(ಯಂಗ್ ಇಂಡಿಯಾ : ೧೨-೩-೨೫)

ಅಪೇಕ್ಷೆಯಿಲ್ಲದ ಮಕ್ಕಳ ಜನನ ಪಾಪಕರ. ಆದರೆ ತಮ್ಮ ಕರ್ಮದ ಪರಿಣಾಮವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ಇನ್ನೂ ಹೆಚ್ಚು ಪಾಪಕರ. ಇದರಿಂದ ಮಾನವನ ಮಾನವತ್ವವೇ ಹೋಗುತ್ತದೆ.

(ಹರಿಜನ : ೭-೯-೩೫)

ಪಾಶವಿಕ ಕಾಮೇಚ್ಛೆಯನ್ನು ತೃಪ್ತಿಪಡಿಸುವುದು ಆವಶ್ಯಕವೆಂದೂ ಅಪಾಯಕರವಲ್ಲವೆಂದೂ, ಪಾಪರಹಿತವೆಂದೂ ನಾವು ನಂಬುವುದಾದರೆ ಅದಕ್ಕೆ ಪೂರ್ಣ ಸ್ವಾತಂತ್ರ್ಯ ಕೊಟ್ಟು, ಅದನ್ನು ನಿಗ್ರಹಿಸುವ ಶಕ್ತಿಯೇ ನಮ್ಮಲ್ಲಿಲ್ಲವೆಂದಾಗುತ್ತದೆ. ಇದಕ್ಕೆ ಪ್ರತಿಯಾಗಿ ಕಾಮೋಪಭೋಗವು ಅಪಾಯಕರವೆಂದೂ, ಪಾಪಯುಕ್ತವೆಂದೂ, ಅನಾವಶ್ಯಕವೆಂದೂ, ನಿಗ್ರಹ ಸಾಧ್ಯವೆಂದೂ ನಾವು ಪರಿಗಣಿಸಿದರೆ, ಆತ್ಮನಿಗ್ರಹ ಪೂರ್ಣ ಸುಲಭವೆಂದು ನಮಗೇ ಅರಿವಾಗುತ್ತದೆ.

(ಯಂಗ್ ಇಂಡಿಯಾ : ೧೯-೭-೨೬)

ಮಾನವನು ಉನ್ನತಿ ಅವನತಿ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕು. ಆದರೆ, ಅವನಲ್ಲಿರುವ ಪಶುತ್ವದ ಪ್ರಭಾವದಿಂದ, ಅದರಲ್ಲಿಯೂ, ಅವನತಿ ರಮ್ಯವಾಗಿ ಚಿತ್ರಿಸಲ್ಪಟ್ಟಾಗ ಉನ್ನತಿಗೆ ಪ್ರತಿಯಾಗಿ ಅದನ್ನೇ ಆರಿಸಿಕೊಳ್ಳುವನು. ಪಾಪವು ಸದ್ಗುಣದ ಸೋಗಿನಲ್ಲಿ ತೋರಿದಾಗ ಮಾನವ ಅದಕ್ಕೆ ಸುಲಭವಾಗಿ ಸೋತುಹೋಗುತ್ತಾನೆ. ಇದನ್ನೇ ಮೇರಿ ಸ್ಟೋಪ್ಸ್ ಮತ್ತಿತರರು ಮಾಡುತ್ತಿದಾರೆ.

(ಹರಿಜನ : ೨೧-೧-೩೫)

ಈ ನಮ್ಮ ಪುಟ್ಟ ಭೂಮಂಡಲವು ನಿನ್ನೆಮೊನ್ನೆಯ ಆಟಿಕೆಯಲ್ಲ. ಅಸಂಖ್ಯ ಯುಗಗಳು ಕಳೆದರೂ ಅದು ಅತಿಜನಸಂಖ್ಯೆಯ ಭಾರದಿಂದ ತೊಳಲಿಲ್ಲ. ಹೀಗಿರುವಾಗ, ಕೃತಕ ಸಾಧನಗಳ ಉಪಯೋಗದಿಂದ ಜನನಸಂಖ್ಯೆಯು ತಡೆಹಿಡಿಯಲ್ಪಡದಿದ್ದರೆ ಆಹಾರ ಅಭಾವದಿಂದ ಅದು ನಾಶಹೊಂದೀತೆಂಬ ಸತ್ಯ ಕೆಲವರಿಗೆ ಮಾತ್ರ ಹಠಾತ್ತಾಗಿ ಹೇಗೆ ಗೋಚರಿಸಿದೆಯೋ ? (ಹರಿಜನ : ೧೪-೯-೩೫)

ಕೃತಕ ಸಾಧನಗಳ ಉಪಯೋಗಕ್ಕೆ ವಿಜ್ಞಾನದ ಹೆಸರಿನಲ್ಲಿಯೂ ಹಾಗೂ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೂ ಕೊಟ್ಟಿರುವ ಅನುಮತಿಯಿಂದ, ಸಮಸ್ಯೆಯು ಗಡುಸಾಗಿ ಸಮಾಜ ಜೀವನದ ಶುದ್ಧೀಕರಣಕ್ಕಾಗಿ ದುಡಿಯುವ ಸುಧಾರಕರ ಕಾರ್ಯ ಅಸಾಧ್ಯವೋ ಎನಿಸಿದೆ. (ಹರಿಜನ : ೨೧-೧೧-೩೬)

ಲೈಂಗಿಕ ಕಾಮೇಚ್ಛೆಯನ್ನು ಗೆಲ್ಲುವುದು ಮತ್ತು ಅದನ್ನು ಊರ್ಧ್ವಮುಖವಾಗುವಂತೆ ಮಾಡುವುದು, ಈ ಬಗೆಯ ಲೈಂಗಿಕ ಶಿಕ್ಷಣವನ್ನು ನಾ ಒಪ್ಪುತ್ತೇನೆ. ಇಂಥ ಶಿಕ್ಷಣವು ಮಾನವನಿಗೂ ಪಶುವಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ತಾನಾಗಿಯೇ ಮಕ್ಕಳಿಗೆ ಅರಿವು ಮಾಡಿಕೊಟ್ಟೀತು. ಇದರಿಂದ ಅವರು ಹೃದಯ ಮತ್ತು ಬುದ್ಧಿ ಈ ಎರಡೂ ಶಕ್ತಿಗಳನ್ನು ಗಳಿಸಿಕೊಳ್ಳುವುದು ಮಾನವನ ವಿಶೇಷ ಹಕ್ಕು ಮತ್ತು ಹೆಮ್ಮೆ ಎಂಬುದನ್ನು ಅರಿತಾರು. ತಾವು ವಿವೇಚನೆಯುಳ್ಳವರೆಂದೂ, ಕೇವಲ ಕಾಮಾತುರ ಪಶುವಲ್ಲವೆಂಬುದನ್ನೂ ಅರಿತಾರು. ಆದುದರಿಂದ ವಿಚಾರಶಕ್ತಿಯ ವಿವೇಕವನ್ನು

ಕಣ್ಣಿಲ್ಲದ ಕಾಮಕ್ಕೆ ಒಪ್ಪಿಸಿಬಿಡುವುದು ಮಾನವತ್ವವನ್ನೇ ತ್ಯಜಿಸಿಬಿಟ್ಟಂತೆ ಆಗುತ್ತದೆ.

(ಹರಿಜನ : ೨೧-೧೧-೩೬)

ದಕ್ಷಿಣ ಆಫ್ರಿಕಾದಲ್ಲಿದ್ದಾಗ, ಇಪ್ಪತ್ತು ವರುಷಗಳ ವರೆಗೆ, ನಾನು ಪಾಶ್ಚಾತ್ಯರ ನಿಕಟ ಸಂಬಂಧ ಪಡೆದಿದ್ದೆ. ಆದುದರಿಂದ ಲೈಂಗಿಕ ವಿಷಯದ ಮೇಲೆ ಹ್ಯಾವ್‌ಲಾಕ್ ಎಲಿಸ್, ಬರ್ಟ್‌ರೆಂಡ್ ರಸೆಲ್ ಮುಂತಾದ ವಿಖ್ಯಾತ ಲೇಖಕರು ಬರೆದಿರುವುದನ್ನೂ ಅವರ ಸಿದ್ಧಾಂತಗಳನ್ನೂ ತಿಳಿದುಕೊಂಡಿದೇನೆ. ಅವರೆಲ್ಲರೂ ಘನತೆ, ಪ್ರಾಮಾಣಿಕತೆ, ಅನುಭವ, ಇವುಗಳಿಂದ ಕೂಡಿದ ವಿಚಾರಪರರು. ತಮ್ಮ ಸಿದ್ಧಾಂತದ ಬಗೆಗೆ ಶ್ರದ್ಧೆಗೂ ಅವುಗಳ ಅಭಿವ್ಯಕ್ತತೆಗಾಗಿಯೂ ಅವರು ಕ್ಲೇಶಕ್ಕೊಳಗಾಗಿದ್ದಾರೆ. ವಿವಾಹ ಇತ್ಯಾದಿ ಪದ್ಧತಿಗಳನ್ನೂ ಪ್ರಚಲಿತ ನೀತಿ ನಿಯಮಗಳನ್ನೂ ಪೂರ್ಣವಾಗಿ ನಿರಾಕರಣೆ ಮಾಡಿ,—ಇದರಲ್ಲಿಯೇ ನಾನವರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವುದು — ಈಸಂಸ್ಥೆ ಮತ್ತು ಪದ್ಧತಿಗಳಿಲ್ಲದೆಯೇ ಜೀವನದ ಪವಿತ್ರತೆಯನ್ನು ಹೊಂದುವ ಸಾಧ್ಯತೆ ಮತ್ತು ಅಪೇಕ್ಷಣೀಯತೆಯಲ್ಲಿ ಅವರು ದೃಢನಂಬಿಕೆಯುಳ್ಳವರು. ಪಾಶ್ಚಾತ್ಯ ಸಮಾಜದಲ್ಲಿ ಪ್ರಚಲಿತವಿರುವ ಪದ್ದತಿಗಳನ್ನೂ ಮತ್ತು ಆಚಾರ ನಿಯಮಗಳನ್ನೂ ಒಪ್ಪಿಕೊಳ್ಳದೆ ಅಥವಾ ಆಚರಣೆಯಲ್ಲಿ ತರದೆ ಶುದ್ಧ ಜೀವನ ನಡೆಸುತ್ತಿರುವ ಸ್ತ್ರೀ ಪುರುಷರನ್ನು ನಾ ಬಲ್ಲೆ. ನನ್ನ ಪರಿಶೋಧನೆಗಳೂ ಸ್ವಲ್ಪಮಟ್ಟಿಗೆ ಆ ಮಾರ್ಗವನ್ನೇ ಅನುಸರಿಸಿವೆ. ಎಲ್ಲೆಲ್ಲಿ ಆವಶ್ಯಕವೋ ಅಲ್ಲಲ್ಲಿ ಹಳೆಯದನ್ನು ನಿರಾಕರಿಸಿ ಸುಧಾರಣೆ ಮಾಡಬೇಕೆಂಬ ಅಪೇಕ್ಷೆಯನ್ನೂ ಆವಶ್ಯಕತೆಯನ್ನೂ ನೀವು ಒಪ್ಪುವುದಾದರೆ, ಮತ್ತು ಆಧುನಿಕ ಕಾಲಕ್ಕೆ ಹೊಂದಿಕೊಳ್ಳುವ ಹೊಸ ನೀತಿಪದ್ಧತಿಯನ್ನು ರಚಿಸುವುದಾದರೆ, ಇತರರ ಅಪ್ಪಣೆ ಪಡೆಯಬೇಕೆಂಬ ಅಥವಾ ಇತರರನ್ನು ಒಪ್ಪಿಸಬೇಕೆಂಬ ಪ್ರಶ್ನೆಯೇ ಉದ್ಭವಿಸದು. ಇತರರೂ ಪರಿವರ್ತನೆ ಹೊಂದುವ ವರೆಗೆ ಸುಧಾರಕ ಕಾಯಲಾರ; ಅವನೇ ನೇತೃತ್ವ ವಹಿಸಿ, ಒಬ್ಬನೇ ಆದರೂ, ಸಾರ್ವತ್ರಿಕ ವಿರೋಧದ ನಡುವೆ ಮುಂದೆ ನಡೆವ ಸಾಹಸ ಮಾಡಬೇಕು.

(ಮಹಾತ್ಮಾ ಗಾಂಧೀ ಜೀವನದ ಕೊನೆಯ ಘಟ್ಟ—ಪ್ಯಾರೇಲಾಲ್‌ರಿಂದ)

ಉಪಸಂಹಾರ

★

ಭಾರತದ ಭವಿಷ್ಯ ಗುರಿಯು ಪಶ್ಚಿಮದ ರಕ್ತಮಯ ಮಾರ್ಗಾನುಸರಣೆಯಲ್ಲಿಲ್ಲ. ಪಶ್ಚಿಮದೇಶಗಳೇ ಅದರಿಂದ ಬಳಲುತ್ತಿರುವ ಚಿಹ್ನೆಗಳನ್ನು ತೋರಿಸುತ್ತಿವೆ. ಆದುದರಿಂದ ಭಾರತವು ಸರಳತೆಯ ದಿವ್ಯ ಜೀವನದಿಂದ ಲಭಿಸುವ ರಕ್ತರಹಿತ ಶಾಂತಿಪಥವನ್ನು ಅನುಸರಿಸಬೇಕು. ಭಾರತಿಯು ತನ್ನ ಆತ್ಮವನ್ನೇ ನೀಗಿಕೊಳ್ಳುವ ಅಪಾಯಸ್ಥಿತಿಯಲ್ಲಿದ್ದಾಳೆ. ಅದನ್ನು ನೀಗಿಕೊಂಡು ಆಕೆ ಜೀವಿಸಲಾರಳು. ಆದುದರಿಂದ ಆಕೆ, ಏನೋ ಜಡತ್ವದಿಂದಲೂ ನಿಸ್ಸಹಾಯಕತೆಯಿಂದಲೂ 'ಪಶ್ಚಿಮದ ದಾಳಿಯನ್ನು ನಾ ತಪ್ಪಿಸಿಕೊಳ್ಳಲಾರೆ' ಎಂದು ನುಡಿಯಬಾರದು. ತನ್ನ ಸಲುವಾಗಿಯೂ ಜಗತ್ತಿನ ಸಲುವಾಗಿಯೂ ಆಕೆ ಅದನ್ನು ತಡೆದು ನಿಲ್ಲಿಸುವ ಸಾಮರ್ಥ್ಯ ಪಡೆಯಬೇಕು. (ಯಂಗ್ ಇಂಡಿಯಾ : ೭-೧೦-೨೬)

ನನ್ನ ಧ್ಯೇಯ ಸ್ವಾತಂತ್ರ್ಯಕ್ಕಿಂತ ಎಷ್ಟೋ ಹಿರಿದು. ಭಾರತದ ವಿಮೋಚನೆಯ ಮೂಲಕ ಪಶ್ಚಿಮದ ಶೋಷಣೆಯ ತುಳಿತಕ್ಕೆ ಸಿಕ್ಕಿರುವ ಜಗತ್ತಿನ ಅಶಕ್ತ ಜನಾಂಗಗಳ ವಿಮೋಚನೆಗೂ ನಾ ಶ್ರಮಿಸುತ್ತೇನೆ.

(ಯಂಗ್ ಇಂಡಿಯಾ : ೧೨-೧-೨೮)

ಭಾರತವು ಮಾನವ ಕಲ್ಯಾಣಕ್ಕೋಸ್ಕರ ಆತ್ಮ ತ್ಯಾಗಮಾಡಲು ಆಶಿಸುವುದಕ್ಕೆ ಪ್ರಥಮವಾಗಿ ತಾನು ಬಾಳುವ ವಿಧಾನವನ್ನೇ ಅರಿಯಬೇಕು.

(ಯಂಗ್ ಇಂಡಿಯಾ : ೧೩-೧೦-೨೧)

ಭಾರತವು ಭೋಗಭೂಮಿ ಎನಿಸುವುದಕ್ಕೆ ಪ್ರತಿಯಾಗಿ ಕರ್ಮಭೂಮಿಯಾಗಿದೆ. (ಯಂಗ್ ಇಂಡಿಯಾ : ೫-೨-೨೫)

ಭಾರತದ ದೈವನಿಯಮಿತ ಕಾರ್ಯವು ಇತರರದಕ್ಕಿಂತ ಭಿನ್ನವಾದುದೆಂದು ನನ್ನ ಭಾವನೆ. ಅದು ಜಗತ್ತಿನ ಧಾರ್ಮಿಕ ನೇತೃತ್ವಕ್ಕೆ ಯೋಗ್ಯವಾದುದು. ಈ ದೇಶ ಸ್ವೇಚ್ಛೆಯಿಂದಲೇ ಮಾಡಿಕೊಂಡ ಶುದ್ಧೀಕರಣದ ರೀತಿ ಜಗತ್ತಿನಲ್ಲಿ ಇನ್ನೆಲ್ಲಿಯೂ ಕಂಡುಬರದು. ಇದಕ್ಕೆ ಉಕ್ಕಿನ ಆಯುಧಗಳ ಅವಶ್ಯಕತೆ ಅಷ್ಟಾಗಿ ಇಲ್ಲ. ಅದು ದೈವದತ್ತ ಆಯುಧಗಳಿಂದ ಹೋರಾಟ ನಡೆಸಿದೆ; ಮುಂದೆಯೂ ಹಾಗೆ ಮಾಡಬಲ್ಲದು. ಇತರ ಜನಾಂಗಗಳು ಪಶುಬಲದ ಆರಾಧನೆ ಮಾಡಿವೆ. ಯೂರೋಪಿನಲ್ಲಿ ನಡೆದ ಯುದ್ಧಗಳೇ ಈ ಸತ್ಯಕ್ಕೆ ಪ್ರಬಲ ಸಾಕ್ಷಿ. ಭಾರತವು ಎಲ್ಲವನ್ನೂ ಆತ್ಮಬಲದಿಂದ ಗೆದ್ದೀತು. ಆತ್ಮಬಲದ ಮುಂದೆ ಪಶುಬಲ ನಿರರ್ಥಕವೆಂಬುದಕ್ಕೆ ಇತಿಹಾಸ ಅಗಣಿತ ನಿದರ್ಶನ ನೀಡುತ್ತದೆ. ಕವಿಗಳು ಇದನ್ನು ಕುರಿತು ಗಾಯನಮಾಡಿದಾರೆ; ದಾರ್ಶನಿಕರು ತಮ್ಮ ಅನುಭವವನ್ನು ವರ್ಣಿಸಿದಾರೆ.

(ಗಾಂಧೀ ಬರೆಹಗಳು - ಭಾಷಣಗಳು - ನಟೇಶ೯)

ಏಕಪ್ರಕಾರವಾಗಿ ಹತ್ತಿರಹತ್ತಿರ ಮೂವತ್ತೈದು ವರುಷಗಳಿಗೆ ಮೀರಿದ ನನ್ನ ರಾಜಕೀಯ ಅನುಭವದಿಂದ, ಜಗತ್ತು ರಕ್ತಪಾತದ ಬಗೆಗೆ ಮಾರಣ ಬೇಗೆಯನ್ನು ಅನುಭವಿಸಿದೆ ಎಂದು ನನ್ನ ಹೃದಯಾಂತರಾಳಕ್ಕೆ ಅನಿಸಿದೆ. ಇದರಿಂದ ಬಿಡುಗಡೆಯ ಮಾರ್ಗಕ್ಕೆ ಲೋಕ ಶ್ರಮಿಸುತ್ತಿದೆ. ಹೀಗೆ ಬಳಲಿಕೆ ಪಡುತ್ತಿರುವ ಲೋಕಕ್ಕೆ ಆ ಮಾರ್ಗದರ್ಶನ ಮಾಡುವ ವಿಶೇಷ ಸೌಭಾಗ್ಯ ಪ್ರಾಚೀನ ದೇಶವಾದ ಈ ಭಾರತಕ್ಕೆ ಬಹುಶಃ ಬಂದೀತೆಂಬ ನಂಬಿಕೆಯಿಂದ ನಾ ಗೌರವಿಸಲ್ಪಟ್ಟಂತೆ ಭಾವಿಸುತ್ತೇನೆ.

(ಯಂಗ್ ಇಂಡಿಯಾ: ೧-೨೦-೩೧)

ಮಾನವ ಮತ್ತು ಅವನ ಕೃತಿ ಈ ಎರಡೂ ಪ್ರತ್ಯೇಕ ಅಂಶಗಳು. ಒಂದು ಪದ್ಧತಿಯನ್ನು ಪ್ರತಿಭಟಿಸಿ ಎದುರಿಸುವುದು ಯುಕ್ತವೆನಿಸಿದರೂ ಅದರ ಕರ್ತೃವನ್ನು ಎದುರಿಸಿ ಪ್ರತಿಭಟಿಸುವುದು ತನ್ನನ್ನೇ ವಿರೋಧಿಸಿಕೊಂಡಂತೆ. ಏಕೆಂದರೆ, ನಾವೆಲ್ಲ ಒಬ್ಬನೇ ಸೃಷ್ಟಿಕರ್ತನ ಮಕ್ಕಳು; ಸಮಾನ ದೋಷಯುತರು; ಎಲ್ಲರಲ್ಲಿಯೂ ಇರುವ ದೈವೀಶಕ್ತಿ ಅಪಾರವಾದುದು. ಯಾವ ಒಬ್ಬ ಮಾನವ ವ್ಯಕ್ತಿಯನ್ನೇ ಆಗಲಿ, ಅಲ್ಪನೆಂದು

ಭಾವಿಸುವುದಾದರೆ, ದೈವೀಶಕ್ತಿಯನ್ನೇ ಅಲ್ಪವೆಂದು ಪರಿಗಣಿಸಿದಂತಾಗುತ್ತದೆ. ಇದರಿಂದ ಆತನಿಗೂ ಇಡಿ ಪ್ರಪಂಚಕ್ಕೂ ಕೆಡುಕು ಗೈದಂತಾಗುತ್ತದೆ. (ಆತ್ಮಕಥೆ)

ಒಂದು ನಿಯಮಾನುಸರಣೆಯನ್ನು ಒಬ್ಬ ವ್ಯಕ್ತಿ ಮಾಡುವುದಾದರೂ ಆದರಂತೆ ಒಂದು ವ್ಯಕ್ತಿಗಳ ಸಮೂಹವೂ ಮಾಡಲು ಸಾಧ್ಯವೆಂದು ಅರ್ಥವಾಗುತ್ತದೆ. ಒಳ್ಳೆಯ ಪಥದಲ್ಲಿ ನಡೆಯಲು ಯಾರಿಗೆ ಯಾರೂ ಕಾಯಬೇಕಾಗಿಲ್ಲವೆಂಬುದನ್ನು ಸಾ ಒತ್ತಿ ಹೇಳುವ ಆವಶ್ಯಕತೆ ಇದೆ. ಒಂದು ಧ್ಯೇಯ ಪೂರ್ಣವಾಗಿ ಕರಗತವಾಗಲಾರದೆಂಬ ಭಾವನೆ ಮನಸ್ಸಿಗೆ ಬಂದರೆ ಕಾರ್ಯಾರಂಭ ಮಾಡುವುದಕ್ಕೇ ಅನೇಕರು ಸಾಮಾನ್ಯ ಹಿಂಜರಿಯುತ್ತಾರೆ. ಇಂಥ ಮನೋಪ್ರವೃತ್ತಿಯೇ ವಾಸ್ತವಿಕವಾಗಿ ಪ್ರಗತಿಗೆ ಅಡ್ಡಿ.

(ಹರಿಜನ : ೨೫-೮-೨೫)

ಪ್ರಗತಿಪಥ ತೊಂದರೆಗಳಿಂದ ತುಂಬಿದೆ. ಈ ತೊಂದರೆಗಳನ್ನು ಎದುರಿಸಿ ಜಯಗಳಿಸುವ ಚರಿತ್ರೆಯೂ ವಿಕಾಸಪಥದಲ್ಲಿ ಮಾನವನ ಏರುವಿಕೆಯ ಕಥೆಯೂ, ಎರಡೂ, ಜೊತೆಗೂಡಿ ನಡೆದಿವೆ. ಹಿಮಾಲಯಾ ಪರ್ವತಾರೋಹಣ ಪ್ರಯತ್ನದ ಕಥೆಯನ್ನು ನೋಡಿ. ಎತ್ತರ ಎತ್ತರಕ್ಕೆ ಹೋದಷ್ಟೂ ಏರುವಿಕೆ ಹೆಚ್ಚು ಕಡಿದು, ಕಷ್ಟಮಯ. ಹೀಗಾಗಿ ಅತ್ಯಂತ ಎತ್ತರದ ಶಿಖರಾಗ್ರ ಆರೋಹಣವಿನ್ನೂ ಆಗದೆ ನಿಂತಿದೆ. ಪ್ರಯತ್ನಶೀಲತೆ ಆಗಲೇ ತುಂಬ ಬಲಿ ತೆಗೆದುಕೊಂಡಿದೆ. ಆದರೂ ಪ್ರತಿ ವರುಷವೂ ಹೊಸ ಪ್ರಯತ್ನ ನಡೆದೇ ಇದೆ. ಅದಕ್ಕೂ ಹಿಂದಿನ ಪ್ರಯತ್ನಕ್ಕೆ ದೊರೆತ ಅಪಜಯವೇ. ಇವೆಲ್ಲ ಹೊಸಹೊಸ ಪ್ರಯತ್ನಶೀಲರ ಸತ್ವ ಕುಗ್ಗಿಸಿಲ್ಲ. ಹಿಮಾಚಲದ ಆರೋಹಣಕಾರ್ಯವೇ ಹೀಗಿರುವಾಗ ಆತ್ಮಸಾಧನೆಯ ಮಾತೇನು! ಇದಿನ್ನೂ ಗುರುತರ ಕಾರ್ಯ, ಸಾಧನಾ ಗುರಿ ಇನ್ನೂ ಸಂಪದ್ಯುಕ್ತ. ಹಿಮಾಲಯಾಗ್ರ ಆರೋಹಣ ಸಾಧನೆ ಕ್ಷಣಿಕ ಸುಖದ, ಕ್ಷಣಿಕ ಜಯದ ಅನುಭವ ಮಾತ್ರ ತಂದೀತು. ಆದರೆ ಆತ್ಮಸಾಧನೆಯ ಪ್ರತಿಫಲ ಎಂದಿಗೂ ಚ್ಯುತಿಯಾಗದ ಆನಂದ ತರುತ್ತದೆ. ಅದು ಎಂದೆಂದಿಗೂ ಹೆಚ್ಚುತ್ತ ಹೋಗುತ್ತದೆ. (ಹರಿಜನ : ೨೦-೩-೩೭)

ನನ್ನ ಸಮಗ್ರಜೀವನವೇ ಏನೂ ಬೆಳಕನ್ನು ಕೊಡದಿದ್ದರೆ, ಜ್ಞಾನದ ಬೆಳಕಿಗಾಗಿ ಪಶ್ಚಿಮ ದೇಶಗಳ ಕಡೆಗೆ ನೋಡುವ ಅಭ್ಯಾಸದ ಬಗೆಗೆ ಏನೂ ಮಾರ್ಗದರ್ಶನ ಮಾಡಲಾರೆ. ಜ್ಞಾನದ ಬೆಳಕು ಪೂರ್ವದೇಶಗಳಿಂದ ಪಶ್ಚಿಮದೇಶಗಳ ಕಡೆಗೆ ಹೋಗುತ್ತಿತ್ತು. ಪ್ರಾಚ್ಯದೇಶಗಳ ಭಂಡಾರವು ಬರಿದಾಗಿದ್ದರೆ ಅವು ಸ್ವಾಭಾವಿಕವಾಗಿಯೇ ಅದನ್ನು ಪಶ್ಚಿಮ ದೇಶಗಳಿಂದ ಪಡೆಯಬೇಕು. ಜ್ಞಾನದ ಬೆಳಕು, ಬೆಳಕಲ್ಲದೆ ಕೇವಲ ಭ್ರಮೆಯೇ ಅಲ್ಲದೆ ಹೋದರೆ, ಬರಿದಾದೀತೇ ಎಂಬ ಶಂಕೆ ನನ್ನದು. ಅದು ದಾನ ಮಾಡಿದಂತೆ ಅಭಿವೃದ್ಧಿ ಹೊಂದುವುದೆಂದು ನಾನು ಹುಡುಗನಾಗಿದ್ದಾಗಲೇ ಅರಿತುಕೊಂಡೆ. ಇದೇ ನಂಬಿಕೆಯಿಂದ ಕೂಡಿ, ಇದೇ ಅನೂಚಾನ ಸಂಪತ್ತಿನ ಆಧಾರದ ಮೇಲೆ ನಾ ವ್ಯವಹರಿಸಿದೇನೆ. ಇದು ಎಂದಿಗೂ ನನ್ನ ಕೈಬಿಟ್ಟಿಲ್ಲ. ಹೀಗೆಂದರೆ, ಕೂಪ ಮಂಡೂಕದಂತೆ ವರ್ತಿಸಬೇಕೆಂಬುದು ನನ್ನ ಅರ್ಥವಲ್ಲ. ಪಶ್ಚಿಮದಿಂದ ಬರುವ ಬೆಳಕಿನ ಉಪಯೋಗವನ್ನು ಪಡೆದುಕೊಳ್ಳಲು ನನ್ನನ್ನು ಯಾವುದೂ ಪ್ರತಿಬಂಧಿಸದು. ಆದರೆ, ಪಶ್ಚಿಮದ ಮಾಯಾಜಾಲಕ್ಕೆ ನಾನು ಪರವಶನಾಗದಂತೆ ಎಚ್ಚರಿಕೆಯಿಂದ ಇರಬೇಕು. ಅಷ್ಟೆ. ಮಾಯಾಜಾಲವೇ ನಿಜ ಬೆಳಕೆಂದು ನಾನು ತಪ್ಪು ತಿಳಿದುಕೊಳ್ಳಬಾರದು.

(ಹರಿಜನ: ೧೩-೧-೪೦)

ಬೆಲೆ:

ಸಾಧಾರಣ ಪ್ರತಿ: ರೂ. ೨.೨೫

ಉತ್ತಮ ಪ್ರತಿ: ರೂ. ೩